ಅಭಿರಾಮ



ಸಂಪಾದಕರು: ಎಸ್. ವಿ. ಮನ್ವಾಚಾರ್
ಕಾ. ವೆಂ. ಶ್ರೀನಿವಾಸ ಮೂರ್ತಿ

ಅಭಿರಾಮ

(ರಾಮಣ್ಣ ಕೋಡಿಹೊಸಹಳ್ಳಿ ಅವರ ಅಭಿನಂದನ ಗ್ರಂಥ)

ಸಂಪಾದಕರು

ಎಸ್.ವಿ. ಮನ್ವಾಚಾರ್

ಕಾ.ವೆಂ. ಶ್ರೀನಿವಾಸಮೂರ್ತಿ

ರಾಮಣ್ಣ ಕೋಡಿಹೊಸಹಳ್ಳಿ ಅಭಿನಂದನ ಸಮಿತಿ

ನಂ. ೧೪, 'ಕಾಂಚನಾ', ಅಶ್ವತ್ಥಕಟ್ಟೆ ರಸ್ತೆ, ಬಸವನಗುಡಿ, ಬೆಂಗಳೂರು - ೫೬೦ ೦೦೪

ABIHRAMA - A Felicitation Volume (Ramanna Kodihosahalli Abhinandana Grantha) Edited by- S.V. Manavachar & K.V. Srinivasa Murthy, Published by Abhinandana Samithi, Bangalore -560 004

Pages : 236 + XVI

Price: Rs. 75 -00; 1997

ಬೆಲೆ: ಎಪ್ಪತ್ತೈದು ರೂಪಾಯಿ

೧೯೯೭

ರಕ್ಷಾಪುಟ ವಿನ್ಯಾಸ - ಸುಧಾಕರ ದರ್ಭೆ

ಸಂಪಾದಕ ಸಮಿತಿ

ಶ್ರೀ ಬೈರಮಂಗಲ ರಾಮೇಗೌಡ
ಪ್ರೊ ll ಸಾವಿತ್ರಿ ವಿಜಯೇಂದ್ರ
ಶ್ರೀ ಸಂಪಿಗೆ ಶಿವಪ್ರಕಾಶ್
ಶ್ರೀ ಕೋ.ವೆಂ. ರಾಮಕೃಷ್ಣೇಗೌಡ

ಮುದ್ರಣ
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮
ದೂರವಾಣಿ : ೬೬೧೩೧೨೩,೬೬೧೮೭೫೨

ಸಂಪಾದಕರ ಮಾತು

ಇತ್ತೀಚಿನ ದಿನಗಳಲ್ಲಿ ಅಭಿಂದನ ಸಮಾರಂಭಗಳನ್ನು ಆಚರಿಸಿ, ಅಭಿನಂದಿತರಿಗೆ ಶಾಲು ಹೊದಿಸಿ, ಫಲ ತಾಂಬೂಲ ನೀಡಿ, ಸಾರ್ವಜನಿಕವಾಗಿ ಗೌರವಿಸಿ ಹೆಚ್ಚುಹಣ ಇದ್ದರೆ ಅವರಿಗೆ ಗ್ರಂಥಗಳನ್ನು ಅರ್ಪಿಸುವ ಸಂಪ್ರದಾಯ ಪ್ರಾರಂಭವಾಗಿದೆ; ಮತ್ತೂ ಹಣ ಹೆಚ್ಚಿದ್ದರೆ, ಅಭಿನಂದಿತರಿಗೆ 'ಹಮ್ಮಿಣಿ'ಯನ್ನೂ ಅರ್ಪಿಸಲಾಗುತ್ತಿದೆ. ಆತ್ಮೀಯರಾದವರು, ಸಾರ್ವಜನಿಕ ಜೀವನದಲ್ಲಿ ಸಮಾಜಕ್ಕೆ ಏನಾದರೂ ಮಹತ್ತಾದುದನ್ನು ಮಾಡಿ ಜೀವನದಲ್ಲಿ ೫೦-೬೦ವರ್ಷ ತುಂಬಿದವರಿಗೆ ಅವರ ಆತ್ಮೀಯರು, ಸ್ನೇಹಿತರು-ಅಭಿಮಾನಿಗಳು, ಶಿಷ್ಯರು-ಮುಂತಾದವರು ಸೇರಿ ಇಂಥ ಕಾರ್ಯಕ್ರಮಗಳನ್ನು ಮಾಡಿ ಗೌರವಿಸುತ್ತಾರೆ. ಇದರಿಂದ ಅಭಿನಂದಿರಾದವರಿಂದ ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗಳಿಗೆ ಇನ್ನೂ ಹೆಚ್ಚಿನ ಸೇವೆ ಮುಂದುವರಿಯಲೆಂಬ ಸದಾಶಯ ಸದಿಚ್ಛೆ ಇರುತ್ತದೆ. ಹೀಗೆ ಪ್ರಾರಂಭವಾಗಿ ಕನ್ನಡದಲ್ಲಿ ಮೊದಲ 'ಸಂಭಾವನ' ಗ್ರಂಥ ಬಂದದ್ದು ಹೊಸಗನ್ನಡ ಸಾಹಿತ್ಯದ ಪ್ರವರ್ತಕ ಆಚಾರ್ಯ ಬಿ.ಎಂ.ಶ್ರೀ. ಅವರಿಗೆ ಎಂದೇ ಪರಿಗಣಿತವಾಗಿದೆ.

ಪ್ರಸ್ತುತ ಅಭಿನಂದನಗೊಳ್ಳುತ್ತಿರುವ ಶ್ರೀ ರಾಮಣ್ಣ ಕೋಡಿಹೊಸಹಳ್ಳಿಯವರು ಕನ್ನಡದ ಬಗೆಗೆ ಅತ್ಯಂತ ಕಳಕಳಿಯುಳ್ಳವರು, ಹೋರಾಟಗಾರರು, ಸಂಘಟಕರು, ಹಿರಿಯ ಪತ್ರಕರ್ತರು. ವಿದ್ಯಾರ್ಥಿ ದೆಸೆಯಿಂದಲೇ ಕನ್ನಡ ಪರ ಹೋರಾಟಗಳಲ್ಲಿ ಹಂಪನಾ, ಕಲ್ಲೆ ಶಿವೋತ್ತಮರಾವ್ ಮುಂತಾದವರ ಮಾರ್ಗದರ್ಶನದಲ್ಲಿ ತೊಡಗಿಕೊಂಡವರು.

ಚಿಕ್ಕವಯಸ್ಸಿನಲ್ಲಿಯೇ 'ಕನ್ನಡ ಸಾಹಿತ್ಯ ಕಲಾ ಸಂಘ', 'ಹಿಂದ್ ವಿದ್ಯಾರ್ಥಿ ಯುವ ಸಮ್ಮೇಲ', 'ಉತ್ತರ ಬಡಾವಣೆ ರಾಜ್ಯೋತ್ಸವ ಸಮಿತಿ'; 'ರಾಜಕುಮಾರ ಕಲಾ ವಿಲಾಸೀ ಸಂಘ' 'ಜಯಕರ್ನಾಟಕ ಯುವಕ ಸಂಘ', 'ಕನ್ನಡ ಅಭಿಮಾನಿರಂಗ' ಮುಂತಾದ ಸಂಘಟನೆಗಳನ್ನು ಕಟ್ಟಿ ಕನ್ನಡ ನಾಡು-ನುಡಿ-ನಾಡಿಗರಿಗೆ ಅನ್ಯಾಯವಾದ ಸಂದರ್ಭದಲ್ಲಿ ಪ್ರತಿಭಟಿಸಿ ಹೋರಾಡುತ್ತ ಬಂದವರು. ದಲಿತ - ಹಿಂದುಳಿದವರ ಬಗೆಗೆ ತುಂಬ ಕಾಳಜಿಯನ್ನುಳ್ಳವರು. ೨೫ ವರ್ಷಗಳ ಹಿಂದೆಯೇ ಪರಿಶಿಷ್ಟ ಪಂಗಡಕ್ಕೆ ಸೇರಿದ ಗಾಯತ್ರಿಯವರನ್ನು ಮದುವೆಯಾಗಿ ಜಾತೀಯ ಕಟ್ಟುಕಟ್ಟಳೆಗಳನ್ನು ಕಿತ್ತು ಹಾಕಲು ಪ್ರಯತ್ನಿಸಿದವರು. ವೈಚಾರಿಕತೆಯ ಮನೋಭಾವವುಳ್ಳ ಶ್ರೀಯತರು ತಮ್ಮ ಕೈಲಾದಮಟ್ಟಿಗೆ ಈ ನಾಡಿಗೆ ಸೇವೆ ಸಲ್ಲಿಸುತ್ತ ಬಂದಿದ್ದಾರೆ.'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಉಪಸಂಪಾಕರಾಗಿ, ಪತ್ರಿಕಾಧರ್ಮಕ್ಕನುಗುಣವಾಗಿ ದುಡಿದವರು. ಅದು ದೀರ್ಘಕಾಲದವರೆಗೆ ನಿಂತು ಹೋದಾಗ ಅದರ ಪುನರಾರಂಭಕ್ಕಾಗಿ ಹೋರಾಟದ ಮುಂಚೂಣಿಯಲ್ಲಿ ನಿಂತು, ಅಲ್ಲಿಯ ಕಾರ್ಮಿಕರ ಪ್ರೀತಿಗೆ ಪಾತ್ರರಾದವರು. ವೃತ್ತಿಯಲ್ಲಿ ತಾವು ನಂಬಿದ ಮೌಲ್ಯಗಳೊಂದಿಗೆ ಎಂದೂ ರಾಜಿಮಾಡಿಕೊಡುವರಲ್ಲ. ಪ್ರಸ್ತುತ ಹವ್ಯಾಸಿ ಪತ್ರಕರ್ತರಾಗಿರುವ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದಾರೆ. 'ಕನ್ನಡ ಸಂಘರ್ಷ ಸಮಿತಿ'ಯನ್ನು ಪುನಃಶ್ಚೇತನಗೊಳಿಸಿದ ರಾಮಣ್ಣ

ಅವರು ಅದರ ಒಂದು ಅವಿಭಾಜ್ಯ ಅಂಗವಾಗಿದ್ದಾರೆ. ಕನ್ನಡ ನಾಡು-ನುಡಿ-ಭಾಷೆ, ಜಲಗಳಿಗೆ ಎಲ್ಲೇ ಅನ್ಯಾಯವಾಗುತ್ತಿದೆ ಅಂದರೂ ಅಲ್ಲಿ ರಾಮಣ್ಣ ಅವರು ತಮ್ಮ ಸದಸ್ಯ ಸ್ನೇಹಿತರೊಂದಿಗೆ ಹಾಜರಾಗಿ ನ್ಯಾಯಕ್ಕಾಗಿ ಹೋರಾಟ ಮಾಡುವರು. ಜಾತಿ ಮತ ಪಂಥಗಳೆನ್ನದೆ ಎಲ್ಲರನ್ನೂ ಒಂದೇ ಎಂದು ಕಾಣುವ ಪ್ರವೃತ್ತಿಯುಳ್ಳ ಈ ಹಿರಿಯರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸಂದರ್ಭೋಚಿತವಾಗಿದೆ.

'ಅಭಿರಾಮ' ಗ್ರಂಥಕ್ಕಾಗಿ ಅನೇಕ ಹಿರಿ-ಕಿರಿಯ ಲೇಖಕರಿಗೆ ಲೇಖನ ಕೋರಿ ಪತ್ರ ಬರೆದೆವು. ಕೆಲವರು ತಕ್ಷಣ ಪ್ರತಿಕ್ರಿಯಿಸಿದರು; ಕೆಲವರು ನಂತರ ಲೇಖನಗಳನ್ನು ಕೊಟ್ಟರು, ಕೆಲವರು ಕೊಡುತ್ತೇನೆ! ಕೊಡುತ್ತೇನೆ!! ಎಂದು ಹೇಳುತ್ತ ಲೇಖನ ಕೊಡದೇಹೋದರು. ಇಂಥವರ ಬಗೆಗೆ ನಮಗೆ ಬೇಸರಕ್ಕಿಂತ ಹೆಚ್ಚಾಗಿ ಕನಿಕರವಿದೆ. ಇವರೆಲ್ಲರು ಲೇಖನಗಳನ್ನು ಕೊಟ್ಟಿದ್ದರೆ ಇನ್ನೂ ಉತ್ತಮವಾದ ಆಕರ ಗ್ರಂಥವಾಗಿ ನಮ್ಮ ಆಶಯ ಸಾರ್ಥಕವಾಗುತ್ತಿತ್ತು. ಆದಾಗ್ಯೂ ಈ ಗ್ರಂಥ ಉತ್ತಮವಾದ ಲೇಖನಗಳನ್ನು ಹೊಂದಿ ಅರ್ಥಪೂರ್ಣವಾಗಿದೆ ಎಂದು ಓದುಗರೇ ಒಪ್ಪುವರೆಂಬ ಆಶಯ ನಮ್ಮದು.

ಈ ಗ್ರಂಥದಲ್ಲಿ ಪ್ರಮುಖವಾಗಿ ಮೂರು ಭಾಗಗಳನ್ನು ಮಾಡಲಾಗಿದೆ. ಮೊದಲ ಭಾಗ 'ಸಾಹಿತ್ಯ' ಭಾಗವನ್ನೊಳಗೊಂಡಿದ್ದರೆ, 'ಚಳವಳಿ' ಎಂಬ ಎರಡನೆಯ ಭಾಗದಲ್ಲಿ ಕರ್ನಾಟಕದಲ್ಲಿ ನಡೆದ ಪ್ರಮುಖ ಚಳವಳಿ ಹೋರಾಟಗಳನ್ನು ಕುರಿತ ಲೇಖನಗಳಿವೆ. ಮೂರನೆಯ ಭಾಗದಲ್ಲಿ ರಾಮಣ್ಣ ಅವರ ವಿವಿಧ ಮುಖಗಳು, ಹೋರಾಟಗಳು, ಅವರ ಜೀವನ 'ಸಾಧನೆ'ಯನ್ನು ಕುರಿತ ಲೇಖನಗಳನ್ನೇ ಅಲ್ಲದೆ, ರಾಮಣ್ಣ ಅವರ 'ನೆನಪಿನ ಬುತ್ತಿ ಬಿಚ್ಚಿದಾಗ' ಎಂಬ ವಿಶೇಷ ಲೇಖನವನ್ನು ಒಳಗೊಂಡಿದೆ. ಈ ಎಲ್ಲ ಲೇಖನಗಳನ್ನು ಸಕಾಲದಲ್ಲಿ ನೀಡಿದ ಎಲ್ಲ ಲೇಖಕರಿಗೆ ನಮ್ಮ ಅನಂತ ಕೃತಜ್ಞತೆಗಳು ಸಲ್ಲುತ್ತವೆ.

ಇನ್ನು ಈ ಗ್ರಂಥವನ್ನು ಸಂಪಾದಿಸಲು ನಮ್ಮ ಮೇಲೆ ವಿಶ್ವಾಸವಿಟ್ಟು ಸಂಪಾದಕರೆನ್ನುವ ಪಟ್ಟವನ್ನು ಕೊಟ್ಟು ಸಂಪಾದನೆಗೆ ಅನುವುಮಾಡಿಕೊಟ್ಟ ಗೌರವಾಧ್ಯಕ್ಷರೂ ಗುರುಗಳೂ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೂ ಆದ ಡಾ. ಹಂಪನಾ ಅವರಿಗೆ, ಅಧ್ಯಕ್ಷರಾದ ಶ್ರೀ ಬಿ.ಕೃಷ್ಣಪ್ಪ ಅವರಿಗೆ, ಅಭಿನಂದನ ಸಮಿತಿಯ ಇತರ ಸದಸ್ಯರಿಗೆ, ಸಂಪದನಾ ಕಾರ್ಯದಲ್ಲಿ ಸಹಕರಿಸಿದ ಶ್ರೀ ಬೈರಮಂಗಲ ರಾಮೇಗೌಡ, ಪ್ರೊ. ಸಾವಿತ್ರಿ ವಿಜಯೇಂದ್ರ, ಸಂಪಿಗೆ ಶಿವಪ್ರಕಾಶ್ ಹಾಗೂ ಕೋ.ವೆಂ.ರಾಮಕೃಷ್ಣೇಗೌಡ ಅವರಿಗೆ ನಮ್ಮ ಧನ್ಯವಾದಗಳು ಸಲ್ಲಲೇಬೇಕು.

ಈ ಕೃತಿಯನ್ನು ಇಷ್ಟು ಅಂದವಾಗಿ ಅತ್ಯಂತ ಕಡಿಮೆ ಅವಧಿಯಲ್ಲಿ ಮುದ್ರಿಸಿಕೊಟ್ಟ ಸಹಕರಿಸಿದ ಲಕ್ಷ್ಮಿ ಮುದ್ರಣಾಲಯದ ಮಾಲೀಕರಾದ ಶ್ರೀ ಅಶೋಕ್‌ಕುಮಾರ್ ಹಾಗೂ ವ್ಯವಸ್ಥಾಪಕರಾದ ಶ್ರೀ ಟಿ.ಎಲ್. ವೆಂಕಟೇಶ್ (ದಳವಾಯಿ) ಹಾಗೂ ಸಿಬ್ಬಂದಿ ಅವರಿಗೂ ಸುಂದರವಾದ ಮುಖಚಿತ್ರದ ವಿನ್ಯಾಸವನ್ನು ಒದಗಿಸಿದ ಶ್ರೀ ಸುಧಾಕರ ದರ್ಭೆ ಅವರಿಗೂ ನಮ್ಮ ಧನ್ಯವಾದಗಳು.

ಬೆಂಗಳೂರು
೨೧.೧೨.೧೯೯೭

ಎಸ್. ವಿ. ಮನ್ವಾಚಾರ್
ಕಾ.ವೆಂ. ಶ್ರೀನಿವಾಸಮೂರ್ತಿ
ಸಂಪಾದಕರು

ಅಧ್ಯಕ್ಷರ ನುಡಿ

ಕನ್ನಡಪರ ಹಾಗೂ ಜನಪರ ಹೋರಾಟಗಾರರಾಗಿ, ಶಾಂತವೇರಿ ಗೋಪಾಲಗೌಡ, ಡಾ॥ ರಾಮಮನೋಹರ ಲೋಹಿಯಾರ ಅನುಯಾಯಿಯಾಗಿ ಹಲವಾರು ಹೋರಾಟಗಳಲ್ಲಿ ಪಾಲ್ಗೊಂಡಿದ್ದ ಶ್ರೀ ರಾಮಣ್ಣ ಕೋಡಿಹೊಸಹಳ್ಳಿಯವರ ಬಗೆಗೆ ಓದಿ ಕೇಳಿ ತಿಳಿದಿದ್ದೆ. ಆದರೆ ಅವರೊಂದಿಗೆ ನೇರಸಂಪರ್ಕವಿರಲಿಲ್ಲ. ಕಾರಣ ನಾನು ರಾಜಕಾರಣಿ ಅವರು ಪತ್ರಕರ್ತ- ಹೋರಾಟಗಾರರು. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ಸ್ಪರ್ಧಿಸಿದಾಗ ಅವರ ಪರಿಚಯ ಸ್ನೇಹವಾಗಿ ಮಾರ್ಪಟ್ಟಿತು. ಅವರು ಅಧ್ಯಕ್ಷರಾಗಿ ಆಯ್ಕೆಗೊಂಡಾಗ ಪರಿಷತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ತರುವಾಯ ಅವರ ಕಾರ್ಯನಿಷ್ಠೆ, ಸಂಘಟನಾ ಚತುರತೆ, ಪ್ರಗತಿಪರ ಮನೋಭಾವ, ವೈಚಾರಿಕ ಚಿಂತನೆಗಳು ನನಗೆ ಪ್ರಿಯವಾದವು.

ರಾಮಣ್ಣ ಅವರು ೫೦ ವಸಂತಗಳನ್ನು ಕಂಡು ವೈವಾಹಿಕ ಜೀವನದ ಬೆಳ್ಳಿಹಬ್ಬ ಆಚರಿಸಿರುವ ಸಂದರ್ಭದಲ್ಲಿ ಕನ್ನಡ ನಾಡು-ನುಡಿ-ಸಂಸ್ಕೃತಿಗೆ ಸಲ್ಲಿಸಿರುವ ನಿಸ್ವಾರ್ಥ ಸೇವೆಯನ್ನು ಸ್ಮರಿಸಿ ಅಭಿಂದಿಸಲು ಗೆಳೆಯರು ತೀರ್ಮಾನಿಸಿ, ನನ್ನನ್ನು ಅಭಿನಂದನ ಸಮಿತಿಯ ಅಧ್ಯಕ್ಷನಾಗಿ ಇರುವಂತೆ ಕೋರಿದರು. ಅವರ ಕೋರಿಕೆಗೆ ಸಂತೋಷದಿಂದ ಒಪ್ಪಿದೆ. ಅದರಂತೆ ಅಭಿನಂದನ ಕಾರ್ಯಕ್ರಮವನ್ನು ಆಯೋಜಿಸಿ, 'ಅಭಿರಾಮ' ಎಂಬ ಅಭಿನಂದನ ಗ್ರಂಥವನ್ನು 'ಛಲವಾದಿ' ನೆನಪಿನ ಸಂಚಿಕೆಯನ್ನು ಹೊರತರಲು ನಿರ್ಧರಿಸಿದೆವು. ಗೆಳೆಯರ ಆಶಯದಂತೆ ಎರಡೂ ಕೃತಿಗಳು ಅಚ್ಚುಕಟ್ಟಾಗಿ ಮುದ್ರಣಗೊಂಡಿವೆ. ಇದಕ್ಕಾಗಿ ದುಡಿದ ಎಲ್ಲರಿಗೂ ಧನ್ಯವಾದಗಳು.

ಅಭಿನಂದನಾ ಸಮಿತಿಗೆ ನೆರವು ನೀಡಿ ಸಹಕರಿಸಿದ ಮಹಾನುಭಾವರು, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರನ್ನೂ ಕೃತಜ್ಞತೆಯಿಂದ ನೆನೆದು ನಮನಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು
೨೦.೧೨.೧೯೯೭

ಬಿ. ಕೃಷ್ಣಪ್ಪ
ಅಧ್ಯಕ್ಷರು

ಪ್ರಸ್ತಾವನೆ

'ಹಾಡದ ಕೋಗಿಲೆಯಿಲ್ಲ; ನಾಡು-ನುಡಿಗಳನ್ನು ಕುರಿತು ಬರೆಯದ ಕವಿಯಿಲ್ಲ' ಎಂಬ ಮಾತು ನಾಣ್ಣುಡಿ ಎನಿಸುವಷ್ಟು ಸತ್ಯವಾದ ಮಾತು. ಇದು ಜಗತ್ತಿನ ಎಲ್ಲಾ ಭಾಷಾ ಸಾಹಿತ್ಯಗಳಿಗೆ ಅನ್ವಯವಾಗುವುದು. ಇಂತಹ ಅಭಿವ್ಯಕ್ತಿ ಸ್ವಾಗತಾರ್ಹವೇ ಸರಿ.

ಆದರೆ ಈ ಬಗೆಯ ಅಭಿಮಾನ ಎಷ್ಟರಮಟ್ಟಿಗಿದ್ದರೆ ಸೂಕ್ತ ಎಂಬುದು ಮಾತ್ರ ಚರ್ಚಾಸ್ಪದ ಸಂಗತಿ. ಇಂತಹ ಅಭಿಮಾನಕ್ಕೆ ಎರಡು ಅತಿರೇಖದ ನೆಲೆಗಳಿವೆ. ಒಂದು ಜರ್ಮನ್ ಬಗೆಗೆ ಹಿಟ್ಲರ್ ಹೊಂದಿದ್ದ ಅಭಿಮಾನ ಮತ್ತೊಂದು ಕೂಡ ಕರ್ನಾಟಕದ ಬಗೆಗೆ ಇಂದು ಕನ್ನಡಿಗರು ಹೊಂದಿರುವ ಅಭಿಮಾನ. ಈ ಎರಡು ನೆಲೆಗಳಲ್ಲಿ ಮೊದಲನೆಯದು ದುರಭಿಮಾನ ಎನಿಸಿದರೆ, ಎರಡನೆಯದು ನಿರಭಿಮಾನ ಎನಿಸುತ್ತದೆ. ಈ ಎರಡರಲ್ಲಿ ಯಾವುದೂ ಸ್ವೀಕಾರಾರ್ಹವಲ್ಲ. ಇದಕ್ಕೆ ಕಾರಣ ಈ ಎರಡೂ ಧೋರಣೆಗಳು ಹಾನಿಕಾರಕ ಗುಣವನ್ನು ಹೊಂದಿರುವುದು. ಆದ್ದರಿಂದ ಅಭಿಮಾನ ಎಂಬುದು ಏಕಕಾಲಕ್ಕೆ ಒಳಿತು ಮತ್ತು ಕೆಡುಕುಗಳೆರಡನ್ನು ಒಳಗೊಂಡಿರುತ್ತದೆ. ಆದ್ದರಿಂದ ಸಾಂದರ್ಭಿಕ ಅಗತ್ಯದ ಹಿನ್ನೆಲೆಯಲ್ಲಿ ಔಚಿತ್ಯವರಿತ ಅಭಿಮಾನ ಸ್ವಾಗತಾರ್ಹ. ಇದರಿಂದ ಮಾತ್ರ ಅಭ್ಯುದಯ.

ಇಂತಹ ಅಭಿವ್ಯಕ್ತಿ ಕನ್ನಡವನ್ನು ಒಳಗೊಂಡು ಜಗತ್ತಿನ ಎಲ್ಲಾ ಭಾಷಾ ಸಾಹಿತ್ಯಗಳಲ್ಲಿ ವ್ಯಕ್ತವಾಗಿದೆ. ಆದರೆ ಕರ್ನಾಟಕದ ಸಂದರ್ಭದಲ್ಲಿ ಪ್ರಾಚೀನ ಕಾಲದಿಂದಲೂ ಇಲ್ಲಿಯವರೆಗಿನ ಸಾಹಿತ್ಯದಲ್ಲಿ ಅದು ತನ್ನ ತೀವ್ರತೆಯನ್ನು ಉಳಿಸಿಕೊಂಡು ಬಂದಿದೆ. ಇದು ಕನ್ನಡ ಸಾಹಿತ್ಯ ಮತ್ತು ಕರ್ನಾಟಕ ಚರಿತ್ರೆಯ ವೈಶಿಷ್ಟ್ಯವೂ ಹೌದು. ಇದು ತಾಯ್ನಾಡು ನುಡಿಯ ಬಗೆಗಿನ ಅಭಿಮಾನ, ಕಾಳಜಿ, ಸಮಸ್ಯೆಯನ್ನು ಕುರಿತು ಚಿಂತನೆ. ಹೀಗೆ ಹಲವು ನೆಲೆಗಳಲ್ಲಿ ಪ್ರಕಟಗೊಂಡಿದೆ. ಇದರ ಸ್ವರೂಪವನ್ನು ಅರಿಯುವ

ನಿಟ್ಟಿನಲ್ಲಿ ಪ್ರಸ್ತುತ ಚರ್ಚೆಯನ್ನು ಪ್ರಾಚೀನತೆಯ ದೃಷ್ಟಿಯಿಂದ ಕೆಲವು ಸಂಸ್ಕೃತೋಕ್ತಿಗಳ ಮೂಲಕ ಆರಂಭಿಸಬಹುದು.

ಜನನೀ ಜನ್ಮಭೂಮಿಶ್ಚ। ಸ್ವರ್ಗಾದಪೀ ಗರೀಯಸಿ — ವಾಲ್ಮೀಕೀ
(ಹೆತ್ತ ತಾಯಿ, ಹೊತ್ತ ಮಾತೃ ಭೂಮಿ ಸ್ವರ್ಗಕ್ಕಿಂತಲೂ ಶ್ರೇಷ್ಠ)
ಸ್ವದೇಶೋ ಭುವನತ್ರಯಂ
(ನನ್ನ ದೇಶ ನನಗೆ ಮೂರೂ ಲೋಕ)

ಈ ಮೇಲಿನ ಮಾತುಗಳು ನಾಡಿನ ಪರವಾದ ಅಭಿಮಾನಕ್ಕೆ ದ್ಯೋತಕವಾದರೆ; ಚಿಂತನೆ, ಕಾಳಜಿಗಳ ವಿಷಯಕ್ಕೆ ಕೆಲವು ನಿದರ್ಶನಗಳನ್ನು ಪಾಶ್ಚಾತ್ಯ ಸಾಹಿತ್ಯ ಇಲ್ಲಿ ಒದಗಿಸುತ್ತದೆ.

ನಾನೊಮ್ಮೆ ಸತ್ತರೆ ನನ್ನ ವಿಷಯವಾಗಿ ಇಷ್ಟನ್ನು ಮಾತ್ರ
ನೆನೆಯಿರಿ. ನಾನು ಸಾಯುವ ಆ ವಿದೇಶದ ನೆಲದ
ತುಣುಕೂ ಎಂದೆಂದೂ ಇಂಗ್ಲೆಂಡಾಗುತ್ತದೆ.

ಇದು ಆಂಗ್ಲ ಕವಿ ರೂಪರ್ಟ್ ಬ್ರೂಕ್‌ನ ಕವಿತೆಯಲ್ಲಿ ಸಾಯಲಿರುವ ಯೋಧ ಹೇಳುವ ಮಾತು.

ಮತ್ತೊಂದು ನಿದರ್ಶನ. ಸಿದ್ದಯ್ಯ ಪುರಾಣಿಕರ ಒಂದು ಕವಿತಾಚರಣ

ಹಸನ ಮಾಡಿದ ಹೊಲದಿ ಕಸವ ಬೆಳೆಸುವರಿಲ್ಲಿ
ಹೆರರ ದನಗಳಿಗೆಂದು ಹುಲ್ಲು ಬೆಳೆಸುವರಲ್ಲಿ
ಕನ್ನಡದ ಜನಪದಕೆ ಅನ್ನ ಸಿಗದಿರುವಾಗ
ಅನ್ಯ ನಾಡಿನ ಜನಕೆ ಹಣ್ಣು ಕಳಿಸುವರಿಲ್ಲಿ

ಇವು ತಾಯ್ನಾಡಿನ ಬಗೆಗಿನ ಅಭಿವ್ಯಕ್ತಿಯ ಕೆಲವು ತುಣುಕುಗಳು

ಇನ್ನು ತಾಯ್ನುಡಿಯ ಅಥವ ತನ್ನ ಮಣ್ಣಿನ ಭಾಷೆಯ ಬಗೆಗಿನ ಅಭಿವ್ಯಕ್ತಿಗೆ ಕೆಲವು ನಿದರ್ಶನಗಳನ್ನು ಇಲ್ಲಿ ಉದಹರಿಸಬಹುದು. ಮುದ್ದಣನ 'ರಾಮಾಶ್ವಮೇಧ'ದ ಸಾಲುಗಳು:

ಮುದ್ದಣಂ: ಇದು ಸಕ್ಕದದೊಂದು ಚೆಲ್ವು
ಮನೋರಮೆ: ಲೇಸು, ಲೇಸು! ನೀರಿಳಿಯದ ಗಂಟಲೊಳ್
ಕಡುಬಂ ತುರುಕಿದಂತಾಯ್ತು; ಕನ್ನಡದ ಸೊಗಸ
ನಱಿಯಲಾರ್ತೆನಿಲ್ಲೆನಗೆ ಸಕ್ಕದದ ಸೊಗಸಂ
ಪೇೞ್ದುದು ಗಡ!
ಮುದ್ದಣಂ: ಅಪ್ಪೊಡಿನ್ನೆಂತೊ ಒರೆವೆಂ?
ಮನೋರಮೆ: ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದು ಪೇೞ್ದುದು.
ಕನ್ನಡಂ ಕತ್ತುರಿಯಲ್ತೆ!

ಇದು ಹೊಸಗನ್ನಡದ ಅರಣೋದಯ ಸಂದರ್ಭದಲ್ಲಿನ ಒಂದು ಕನ್ನಡಪರ ಅಭಿವ್ಯಕ್ತಿ ವಿಧಾನಕ್ಕೆ ನಿದರ್ಶನವಾದರೆ, ಇನ್ನು ಹೊಸಗನ್ನಡ ಕಾವ್ಯ ಸಂದರ್ಭದಲ್ಲಿ ಈ ಕೆಲವು ಪದ್ಯ ಭಾಗಗಳನ್ನು ಗಮನಿಸಬಹುದು.

೧. ಪಿಕದ ಕುಕಿಲಿನ ಗೀತೆ ಕನ್ನಡ
ಶುಕದ ಮಂಜುಳ ಮಾತೆ ಕನ್ನಡ
ಝುರಿಯ ಸೀರಿನ ಇಂಪು ಕನ್ನಡ
ಬಿರಿದ ಮಲ್ಲಿಗೆ ಕಂಪು ಕನ್ನಡ -ಎ.ಜಿ. ಕುಲಕರ್ಣಿ

೨. ಕನ್ನಡ ಎಂದರೆ ಬರಿನುಡಿ ಅಲ್ಲ
ಮುತ್ತಿನ ಮಣಿಸಾಲು
ಕನ್ನಡ ಎನ್ನಲು ನಿನ ಕೊರಳಲ್ಲಿ
ಸಂಗೀತ ಹೊನಲು - ಕಾ.ವೆಂ.ಶ್ರೀ.

೩. ಓ ಮಗನೆ, ನಮ್ಮ ನುಡಿ ಬಹಳ ಪ್ರಾಚೀನ
ಹೀಗಾಗಿ ಅದಕಿಲ್ಲ ಮನೆಯೊಳಗೆ ಸ್ಥಾನ
ಮನೆಯೊಳಗೆ ಮಾಯವಾಗಿದೆ 'ಅಮ್ಮ' 'ಅಪ್ಪಾ'
ಬದಲಾಗಿ ಬಂದುಬಿಟ್ಟಿದೆ 'ಮಮ್ಮಿ' 'ಡ್ಯಾಡಿ' -ದಿನಕರ ದೇಸಾಯಿ

೪. ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ
ಮೂಗ್ನಲ್ ಕನ್ನಡ ಪದವಾಡ್ತೀನಿ
ನನ್ ಮನಸನ್ ನೀ ಕಾಣೆ -'ರತ್ನ'

ಮೇಲಿನ ಪದ್ಯ ಭಾಗಗಳನ್ನು ಗಮನಿಸಿದಾಗ ಕನ್ನಡ ಭಾಷಾ ವಿಚಾರ ಬೇರೆಬೇರೆ ನೆಲೆಗಳಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದಾಗಿದೆ.

೨

ಆಡು ಮುಟ್ಟದ ಸೊಪ್ಪಿಲ್ಲ; ಸಮಷ್ಟಿ ರೂಪದ ಕನ್ನಡ ನಾಡು, ನುಡಿಯನ್ನು ಕುರಿತು ಬರೆಯದ ಕವಿಯಿಲ್ಲ. ಬಹುಶಃ ಈ ಮಾತನ್ನು ಕನ್ನಡಕ್ಕಷ್ಟೇ ಅಲ್ಲದೆ ಇತರೆ ಭಾಷಾ ಸಾಹಿತ್ಯಗಳಿಗೂ ಅನ್ವಯಿಸಬಹುದು. ಏಕೆಂದರೆ ತಾಯ್ನಾಡನ್ನು, ತಾಯ್ನುಡಿಯನ್ನು ಪ್ರೀತಿಸುವುದು ಮನುಷ್ಯನಾದವನಿಗೆ ನೈಸರ್ಗಿಕವಾಗಿ ಬಂದ ಗುಣ. ಆದ್ದರಿಂದಲೇ ಪ್ರತಿಯೋರ್ವ ಕಲಾವಿದನೂ ತನ್ನದೇ ಆದ ಅಭಿವ್ಯಕ್ತಿ ವಿಧಾನದಲ್ಲಿ ಈ ಗುಣವನ್ನು ಪ್ರಕಟಪಡಿಸುವುದು.

ಈ ಹಿನ್ನೆಲೆಯಲ್ಲಿ ಕೃತಿಕಾರರು ಸಹ ತಮ್ಮ ಕೃತಿಗಳಲ್ಲಿ ನಾಡು, ನುಡಿಯ ಬಗೆಗಿನ ಅಭಿಮಾನವನ್ನಾಗಲೀ, ಕಾಳಜಿಯನ್ನಾಗಲೀ, ಚಿಂತನೆಯನ್ನಾಗಲೀ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಪ್ರಕಟಪಡಿಸದೆ ಇರಲಾರರು. ಈ ಒಂದು ಅಂಶವನ್ನು ಕೆಳಗಿನ ನಿದರ್ಶನದಿಂದ ಸ್ಪಷ್ಟಪಡಿಸಬಹುದು. ಪ್ರಸಿದ್ಧ ಪಾಶ್ಚಾತ್ಯ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ನ 'ದಿ ಕಕೇಷಿಯನ್ ಚಾಕ್ ಸರ್ಕಲ್'ನ ನಾಟಕದಲ್ಲಿ ಒಂದು ಪಾತ್ರ ಈ ಮಾತುಗಳನ್ನಾಡುತ್ತದೆ:

ಒಬ್ಬ ಮನುಷ್ಯ ತನ್ನ ದೇಶವನ್ನು ಏಕೆ ಪ್ರೀತಿಸುತ್ತಾನೆ?
ಏಕೆಂದರೆ ಅಲ್ಲಿ ರೊಟ್ಟಿ ಹೆಚ್ಚು ರುಚಿಯಾಗಿರುತ್ತದೆ,
ಗಾಳಿ ಇನ್ನೂ ಸುಗಂಧವಾಗಿರುತ್ತದೆ, ದನಿಗಳು
ಹೆಚ್ಚು ಶಕ್ತವಾಗಿ ಕೇಳುತ್ತವೆ, ಆಕಾಶ ಬೇರೆಡೆಗಿಂತ

ಎತ್ತರವಾಗಿರುತ್ತದೆ, ನೆಲದ ಮೇಲೆ ನಡೆಯುವುದು
ಇನ್ನೂ ಸುಲಭವಾಗಿರುತ್ತದೆ.

ಇವನ ಈ ಮಾತುಗಳು ಸಂಪೂರ್ಣ ತರ್ಕಬದ್ಧವಾಗಿಲ್ಲ, ನಿಜ. ಆದರೆ ಮನೋವೈಜ್ಞಾನಿಕ ನೆಲೆಯಲ್ಲಿ ಇದು ಪೂರ್ಣಸತ್ಯ. ಈ ಮಾತುಗಳನ್ನು ಆಡುತ್ತಿರುವವನು ಮೂಲತಃ ನಾಟಕಕಾರ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಸಾವಿರ ವರ್ಷಗಳ ಪರಂಪರೆಯನ್ನು ಪಡೆದಿರುವ ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಕನ್ನಡ ನಾಡು, ನುಡಿಯನ್ನು ಕುರಿತು ಬಣ್ಣಿಸಿದ, ಚಿಂತಿಸಿದ, ಅದರ ಸಮಸ್ಯೆಗಳತ್ತ ಕ್ಷ-ಕಿರಣಗಳನ್ನು ಬೀರಿದ ಪೂರ್ಣ ಪ್ರಮಾಣದ ಸಾಹಿತ್ಯ ಕೃತಿಗಳು ಪ್ರತ್ಯೇಕವಾಗಿ ಸಿಗುವುದು ಹೊಸಗನ್ನಡದ ಸಂದರ್ಭದಲ್ಲಿ ಮಾತ್ರ. ಅದು ಕವಿತೆ, ನಾಟಕ, ಕಾದಂಬರಿ, ವೈಚಾರಿಕ ಲೇಖನಗಳು, ಭಾಷಣಗಳು, ಉಪನ್ಯಾಸಗಳು ಮೊದಲಾದ ವಿವಿಧ ಸಾಹಿತ್ಯಕ ರೂಪಗಳಲ್ಲಿ. ಉದಾಹರಣೆಗೆ ಕಾವ್ಯಕ್ಷೇತ್ರದ ಮಟ್ಟಿಗೆ ಕನ್ನಡ ನಾಡು, ನುಡಿಯನ್ನೇ ಕುರಿತಾದ ಕವಿತೆಗಳು ಪಂಜೆ, ಬಿ.ಎಂ.ಶ್ರೀ., ಬೇಂದ್ರೆ, ಕುವೆಂಪು, ಕರ್ಕಿ, ಜಿಎಸ್‌ಎಸ್, ನಿಸಾರ್ ಮೊದಲಾದ ಸಾವಿರಕ್ಕೂ ಕಡಿಮೆ ಇರದ ಕವಿಗಳಲ್ಲಿ ಸಿಗುತ್ತದೆ; ಸಿಕ್ಕದೆ ಕಾದಂಬರಿ ಕ್ಷೇತ್ರದಲ್ಲಿ ಗಳಗನಾಥ, ಅನಕೃ, ಕೊರಟಿ ಶ್ರೀನಿವಾಸರಾವ್ ಮೊದಲಾದ ಕನ್ನಡಿಗರ ಕರ್ಮಕಥೆ, ವಿಜಯವಿದ್ಯಾರಣ್ಯ, ನೃಪತುಂಗ ಮೊದಲಾದ ಕಾದಂಬರಿಗಳನ್ನು ಈ ಸಾಲಿನಲ್ಲಿ ಹೆಸರಿಸಬಹುದು. ಅಂತೆಯೇ ನಾಟಕ ಕ್ಷೇತ್ರದಲ್ಲಿ ಕರ್ನಾಟಕ ಏಕೀಕರಣ, ಕರ್ನಾಟಕ ಸಾಮ್ರಾಜ್ಯ, ಕರ್ನಾಟಕ ಗತವೈಭವ, ಎಚ್ಚಮನಾಯಕ ಮೊದಲಾದ ಕಂಪೆನಿ ನಾಟಕಗಳು ಕೆಲವಾದರೆ, ಎ.ಎಸ್. ಮೂರ್ತಿ, ಕೆ.ವಿ. ಕೃಷ್ಣಯ್ಯ ಮೊದಲಾದವರ ಇತ್ತೀಚಿನ ಕೆಲವು ನಾಟಕಗಳು ಕರ್ನಾಟಕ ರಾಜ್ಯೋತ್ಸವದ ವಿಡಂಬನೆ ಮೊದಲಾದ ಕನ್ನಡಪರ ಅಭಿವ್ಯಕ್ತಿಯ ಬೇರೆಬೇರೆ ಸಾಧ್ಯತೆಗಳನ್ನು ತೆರೆದದ್ದೇ ಆಗಿದೆ. ಅಲ್ಲದೇ ಕರ್ನಾಟಕ ಗತವೈಭವ, ಕರ್ನಾಟಕತ್ವದ ವಿಕಾಸ, ನನ್ನದು ಈ ಕನ್ನಡ ನಾಡು, ಕನ್ನಡತನ ಮತ್ತು ಭಾರತೀಯತೆ ಮೊದಲಾದ ವೈಚಾರಿಕ ಕೃತಿಗಳು ಸಹ ಮುಖ್ಯವಾಗಿ ಕನ್ನಡ ನಾಡು, ನುಡಿಯ ಸಮಸ್ಯೆಗಳನ್ನೇ ಕುರಿತ ಚರ್ಚಿತ ಫಲಿತಗಳಾಗಿವೆ.

ಹೀಗೆ ಕರ್ನಾಟಕದ ಸಂದರ್ಭದಲ್ಲಿ ಕನ್ನಡ ಭಾಷೆ ಮತ್ತು ಪ್ರದೇಶದ ಸಮಸ್ಯೆಗಳನ್ನು ಕುರಿತು ವಿಶೇಷವಾಗಿ ಚಿಂತಿಸಿದ ಪೂರ್ಣ ಪ್ರಮಾಣದ ಕೃತಿಗಳು ಅಧಿಕ ಸಂಖ್ಯೆಯಲ್ಲಿ ಈ ಇಪ್ಪತ್ತನೆಯ ಶತಮಾನದಲ್ಲಿ ಸಿಗುತ್ತವೆ. ಆದರೆ ಇಂತಹ ಕನ್ನಡ ನಾಡು, ನುಡಿ ಪರವಾದ ಪ್ರತ್ಯೇಕ ಕೃತಿಗಳು ಆಧುನಿಕ ಪೂರ್ವ ಸಂದರ್ಭದಲ್ಲಿ ಸಿಗುವುದಿಲ್ಲ. ಅದಕ್ಕೆ ಕಾರಣಗಳು ಹಲವು. ಅವನ್ನು ವಿವೇಚಿಸಬೇಕಾಗಿದೆ.

ಆದರೆ ಯಾವುದೇ ಕವಿಗೆ ಸಹಜವಾಗಿ ಇರುವ ತಾಯ್ನಾಡು ತಾಯ್ನುಡಿಯ ಬಗೆಗಿನ ವಿಶೇಷವಾದ ಅಭಿಮಾನವಾಗಲಿ, ಕಾಳಜಿಯಾಗಲಿ ಚಿಂತನೆಯಾಗಲಿ ಆಧುನಿಕಪೂರ್ವ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಎಲ್ಲೂ ಅಭಿವ್ಯಕ್ತಿ ಪಡೆದೇ ಇಲ್ಲ ಎಂದು ಹೇಳಲಿಕ್ಕಾಗದು. ಅದು ಪೂರ್ಣ ಪ್ರಮಾಣದಲ್ಲಿ ಪ್ರತ್ಯೇಕ ಕೃತಿಗಳಲ್ಲಿ ಪ್ರಕಟವಾಗದೇ ಇದ್ದರೂ ಕವಿಗಳು ತಮ್ಮ ಕೃತಿಗಳಲ್ಲಿ ಮೂಲ ವಸ್ತುವಿಗೆ ಧಕ್ಕೆ ಬರದಂತೆ, ಕತೆಯ ಓಟಕ್ಕೆ ಪೋಷಕವಾಗುವಂತೆ ಆನುಷಂಗಿಕವಾಗಿ ಅಂತಹ ಮನೋಧರ್ಮವನ್ನು ಅಲ್ಲಲ್ಲಿ ಪ್ರಕಟಪಡಿಸಿದ್ದಾರೆ. ಅದಕ್ಕೆ ಮೊದಲ ನಿದರ್ಶನಗಳು ಕ್ರಿ.ಶ. ೭-ಆನೇ ಶತಮಾನದ ಕನ್ನಡ ಶಾಸನಗಳಲ್ಲಿ ಸಿಗುತ್ತವೆ.

ಉದಾಹರಣೆಗೆ ಸೊರಬ ತಾಲ್ಲೂಕಿನ ಶಾಸನ, ದಾವಣಗೆರೆ ತಾಲ್ಲೂಕಿನ ಶಾಸನ ಇತ್ಯಾದಿ. ಅನಂತರ ಕ್ರಿ.ಶ. ೯ನೆಯ ಶತಮಾನದಲ್ಲಿ ರಚಿತವಾದ ಶಾಸ್ತ್ರ ಕೃತಿ ಕವಿರಾಜಮಾರ್ಗದಲ್ಲೂ ಕನ್ನಡ ನಾಡಿನ ವಿಸ್ತಾರ, ಜನರ ಕಾವ್ಯ ಸಹೃದಯತೆ, ಕನ್ನಡ ಸಂಸ್ಕೃತ ಸೆಲೆ-ಬೆಲೆ ಮೊದಲಾದ ವಿಚಾರಗಳನ್ನು ಅಭಿಮಾನಪೂರ್ಣವಾಗಿ, ಸ್ವಲ್ಪಮಟ್ಟಿಗೆ ಭಾವುಕ ನೆಲೆಯಲ್ಲಿಯೇ ಕವಿರಾಜ-ಮಾರ್ಗಕಾರ ಮಾತನಾಡುತ್ತಾನೆ.

ಉದಾಹರಣೆಗೆ : ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡ ದೊಳ್
ಭಾವಿಸಿದ ಜನಪದಂ
ಕುರಿತೋದ್ಯುಖಯುಂ ಕಾವ್ಯ ಪ್ರಯೋಗ ಪರಿಣತಮತಿಗ್ಳ
ಪಟಿಗನ್ನಡದೆ ಪುದುಂಗೊಳೆ
ಕೊಳೆ ಸಕ್ಕದಮಂ ತಗುಳ್ಚಿ ಜಾಣ್ ಕಿಡೆ ಮುತ್ತುಂ
ಮೆ ವಿಸುಂ ಕೋದಂತಿರೆ ಪೇ
ಣ್ಬುಟುಗವಿಗಳ ಕವಿತೆ ಬುಧರನೆದರಗೊಳಿಸುಗುಮೆ
(ಕಾವ್ಯಾವಲೋಕನದ ಪದ್ಯ, ಕವಿರಾಜಮಾರ್ಗದ ಉಲ್ಲೇಖ)

ಕನ್ನಡದ ಆದಿಕವಿ ಎನಿಸಿಕೊಂಡ ಪಂಪ ಕೂಡ ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ ಅಂದಿನ ಕನ್ನಡ ಪ್ರದೇಶವಾದ ಬನವಾಸಿ ದೇಶವನ್ನು ಹೀಗೆ ಕಂಡರಿಸಿದ್ದಾನೆ.

ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ ಗೇ
ಯಂ ಕಿವಿವೊಕ್ಕಡಂ ಬಿರಿದ ಮಲ್ಲಿಗೆ ಗಂಡೊಡಮಾದ ಕೆಂದಲಂ
ಪಂಗಡೆಗೊಂಡೊಡಂ ಮಧುಮಹೋತ್ಸವ ಮಾದೊಡಮೇನ ನೆಂದೆನಾ
ರಂ ಕುಸಮಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ.

ಇವೇ ಮೊದಲಾದ ಆರೇಳು ಪದ್ಯಗಳಲ್ಲಿ ತನ್ನ ಅಕ್ಕರೆಯ ನಾಡಿನ ಅಭಿಮಾನ ಚೆಲ್ಲುವರಿದಿದೆ. ಈ ಬಗೆಯ ಬಣ್ಣನೆ ವಿಕ್ರಮಾದಿತ್ಯನ ವಿಜಯದಲ್ಲಿ ಆನುಷಂಗಿಕವಾಗಿ ಮಾತ್ರ ಬಂದಿರುವಂತದ್ದು. ಈ ಮಾತನ್ನು ಪಂಪ ಅರ್ಜುನನ ಮೂಲಕ ಆಡುತ್ತಾನೆ. ಹೀಗೆ ಒಂದು ಪ್ರದೇಶವನ್ನು ಬಣ್ಣಿಸುವ ನೆಪದಲ್ಲಿ ಕವಿ ತನ್ನಲ್ಲಿ ಸಹಜವಾಗಿ ಅಂತರ್ಗತವಾಗಿದ್ದ ತಾಯ್ನಾಡಿನ ಪ್ರೀತಿಯನ್ನು ಅದುಮಿಡಲಾರದೆ ಇಲ್ಲಿ ಕಾವ್ಯವಾಗಿಸಿದ್ದಾನೆ.

ಹೀಗೆ ಪಂಪನಲ್ಲಿ ಕನ್ನಡಪರವಾದಂತಹ ಅಭಿವ್ಯಕ್ತಿ ಬನವಾಸಿ ದೇಶದ ವರ್ಣನೆಯಾಗಿ ಪ್ರಾದೇಶಿಕ ನೆಲೆಯಲ್ಲಿ ಕಾಣಿಸಿಕೊಂಡರೆ ಕೇಶಿರಾಜ, ನಯಸೇನ, ಆಂಡಯ್ಯ, ಮಹಾಲಿಂಗರಂಗ, ಮುದ್ದಣ ಮೊದಲಾದವರಲ್ಲಿ ಭಾಷಿಕ ನೆಲೆಯಲ್ಲಿ ಕಾಣಿಸಿಕೊಳ್ಳುತ್ತದೆ. ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ ಗಾಢವಾಗಿದ್ದ ಅಂದಿನ ಸಂದರ್ಭದಲ್ಲಿ, ಸಂಸ್ಕೃತದ ನೆರವಿಲ್ಲದೆಯೆ ಕಾವ್ಯನಿರ್ಮಾಣ ಅಸಾಧ್ಯ ಎಂದು ಭಾವಿಸಿದ್ದ ಕಾಲದ ಪರಿಸರದಲ್ಲಿ ತಾಯ್ನುಡಿಯನ್ನು ತನ್ನ ಅಭಿವ್ಯಕ್ತಿಯ ಮಾಧ್ಯಮವಾಗಿ ಮಾಡಿಕೊಂಡು ಕೆಲವು ಭಾಷಾಭಿವ್ಯಕ್ತಿಯ ಸಮಸ್ಯೆಗಳನ್ನು ಎದುರಿಸಿಯೂ ಕೂಡ ಕಾವ್ಯ ರಚನೆಗೆ ತೊಡಗಿ ಕನ್ನಡ ಭಾಷಾಪ್ರೇಮವನ್ನು ಮೆರೆದಿರುವುದನ್ನು ಆಂಡಯ್ಯನಂತಹ ಕವಿಗಳಲ್ಲಿ ಕಾಣಬಹುದಾಗಿದೆ. ಕ್ರಿ.ಶ. ೧೩ನೆಯ ಶತಮಾನದ ಪೂರ್ವಾರ್ಧದಲ್ಲಿ ಕಾಣಿಸಿಕೊಳ್ಳುವ ಆಂಡಯ್ಯ ತನ್ನ 'ಕಬ್ಬಿಗರಕಾವ' ಎಂಬ ಕಾವ್ಯದಲ್ಲಿ ಕನ್ನಡಪರವಾದ ವೀರ ದೀಕ್ಷೆಯನ್ನೇ ತೊಟ್ಟು ಕಾವ್ಯ ರಚನೆಗೆ ತೊಡಗುತ್ತಾನೆ. ಸಂಸ್ಕೃತದ ಮಿಶ್ರಣವಿಲ್ಲದೇ ಶುದ್ಧ

ಕನ್ನಡದಲ್ಲೇ ಕಾವ್ಯ ಬರೆಯುತ್ತೇನೆಂದು ಹೊರಟು ಸಂಸ್ಕೃತ ಶಬ್ದಗಳನ್ನು ತದ್ಭವಗಳನ್ನಾಗಿ ಮಾಡಿಕೊಂಡು ಕಾವ್ಯ ರಚಿಸುತ್ತಾನೆ. ಇದು ತಮಿಳರು ತಮ್ಮ ನಾಡು, ನುಡಿಯ ಬಗೆಗೆ ಇಟ್ಟುಕೊಂಡಿರುವ ಅಭಿಮಾನಕ್ಕೆ ಕನ್ನಡದಲ್ಲೇ ದೊರೆಯುವ ಒಂದು ಉತ್ತಮ ನಿದರ್ಶನ. ಇಂತಹ ದೀಕ್ಷೆ ಕನ್ನಡಾಭಿಮಾನದಿಂದ ಅಂಧಾಭಿಮಾನವಾಗಿ ಹೊರಳಿ ಅವನ ಕಾವ್ಯದಲ್ಲಿ ಹಲವು ದೋಷಗಳು ಕಾಣಿಸಿಕೊಳ್ಳಲು ಆಸ್ಪದವಾಯಿತು. ಹೀಗೆ "ಸೊಗಯಿಪ ಸಕ್ಕದಂ ಬೆರೆಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ ಬಗೆಗೊಳೆ ಪೇಟಲಾಜಿರ್" ಎಂದು ಪಂಡಿತ ಮಂಡಲಿ ಭಾವಿಸಿದ್ದ ಆ ಸಂದರ್ಭದಲ್ಲಿ "......ನಾನವರ ಬಯಕೆಯಂ ಸಲಿಸುವೆನಿನ್ನೆಂದಚ್ಚ ಕನ್ನಡಂ ಬಿಗಿವೊಂದಿರೆ ಕಬ್ಬಿಗರ ಕಾವನೊಲವಿಂದೊರೆವೆಂ" ಎಂದು ಕನ್ನಡದ ಕವಿಗಳಿಗೆ ಒಂದು ಮೇಲ್ಪಂಕ್ತಿಯನ್ನೇ ಹಾಕುತ್ತಾನೆ.

ಕ್ರಿ.ಶ. ೧೧೧೨ರಲ್ಲಿ 'ಧರ್ಮಾಮೃತ'ವನ್ನು ಬರೆದ ನಯಸೇನನಲ್ಲಿ ಕಾಣುವ ಕನ್ನಡಪರ ನಿಲುವನ್ನು ಅವನ ಕವಿತಾ ಮಾತುಗಳಿಂದಲೇ ಗ್ರಹಿಸಬಹುದಾಗಿದೆ.

ಸಕ್ಕದಮಂ ಪೇೞ್ವೊಡೆ ನೇೞು
ಸಕ್ಕದಮಂ ಪೇೞ್ಗೆ ಶುದ್ಧ ಕನ್ನಡದೊಳ್ ತಂ
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ

ತುಪ್ಪ ಮತ್ತು ತೈಲ-ಈ ಎರಡನ್ನೂ ಮಿಶ್ರಣ ಮಾಡಿದರೆ ಹೇಗೆ ರುಚಿಗೆಡುತ್ತದೊ ಹಾಗೆಯೇ ಕನ್ನಡ ಮತ್ತು ಸಂಸ್ಕೃತವನ್ನು ಕಾವ್ಯದಲ್ಲಿ ಒಟ್ಟೊಟ್ಟಿಗೆ ತಂದರೆ ಅದರ ಸೊಗಸು ಕೆಡುತ್ತದೆ ಎಂಬುದು ಈತನ ಅಭಿಪ್ರಾಯ, ನಿಲುವು. ಕನ್ನಡದ ಬಗೆಗೆ ಅವನಿಗಿದ್ದ ವಿಶೇಷವಾದ ಅಭಿಮಾನವೇ ಈ ಮಾತಾಗಿ ಹೊಮ್ಮಿದೆ ಎಂಬುದನ್ನು ಯಾರು ಬೇಕಾದರೂ ಮನಗಾಣಬಹುದಾದ ಸಂಗತಿಯಾದರೂ ಇದರಲ್ಲಿ ತುಪ್ಪ ಮತ್ತು ಎಣ್ಣೆಗಳು ಯಾವ ಯಾವ ಭಾಷೆಗಳಿಗೆ ರೂಪಕವಾಗಿ ಬಂದಿದೆ ಎಂಬುದಕ್ಕೆ ಅವನಿಂದ ಉತ್ತರವಿಲ್ಲ; ಅವನ ಆಶಯವೂ ಅದಲ್ಲ.

ಇಂತಹ ಕನ್ನಡಪರ ಅಭಿವ್ಯಕ್ತಿ ಬೇರೊಂದು ನೆಲೆಯಲ್ಲಿ ಕಾಣಿಸಿಕೊಂಡಿರುವುದನ್ನು ಮಹಾಲಿಂಗರಂಗನ 'ಅನುಭವಾಮೃತ'ದಲ್ಲಿ ಕಾಣಬಹುದು.

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನು?

ಎಂದು ಪ್ರಶ್ನಿಸುವ ಮೂಲಕವೇ ಕನ್ನಡವೂ ಸಂಸ್ಕೃತಕ್ಕೆ ಹೆಗಲೆಣೆಯಾಗಿ ನಿಲ್ಲಬಲ್ಲದು ಎಂಬುದನ್ನು ಸಾರಿದ್ದಾನೆ. ಇಲ್ಲಿ ಕವಿಗೆ ಕನ್ನಡ ಭಾಷೆ ಸರ್ವವಿಧದಲ್ಲೂ ಲಲಿತವಾಗಿದೆ. ಅಷ್ಟೇ ಅಲ್ಲದೆ ಯಾವುದೇ ಉನ್ನತ ವಿಚಾರವನ್ನು ಅಭಿವ್ಯಕ್ತಿಸಲು ಸಹ ಸಮರ್ಥ ಸಂವಹನ ಮಾಧ್ಯಮವಾಗಿದೆ ಎಂಬುದು ಅವನ ಖಚಿತ ನಿಲುವು. ಇನ್ನು ಮುದ್ದಣನಿಗೆ? 'ಕನ್ನಡಂ ಕತ್ತುರಿಯಲ್ತೆ' ಎಂದು ಕನ್ನಡಭಾಷೆಯ ಬಗೆಗಿನ ವಿಶೇಷವಾದ ಅಕ್ಕರೆಯನ್ನು ಮನೋರಮೆಯ ಮಾತಿನಲ್ಲಿ ಹೊರಸೂಸುತ್ತಾನೆ.

ಹೀಗೆ ಆಧುನಿಕಪೂರ್ವ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನಮ್ಮ ಕವಿಗಳು ಕನ್ನಡ ಭಾಷೆ, ಪ್ರದೇಶ, ಜನಪದ ಮೊದಲಾದ ವಿಚಾರಗಳ ಬಗ್ಗೆ ವಿಶೇಷವಾದ ಅಕ್ಕರೆಯಿಂದ ಮಾತಾಡಿದ್ದಾರೆ. ಇಂತಹ ಅಕ್ಕರೆ ಇಡೀ ಸಾಹಿತ್ಯ ಕೃತಿಯ ಉದ್ದಕ್ಕೂ ಪೂರ್ಣ ಪ್ರಮಾಣದಲ್ಲಿ ಕಾಣಸಿಗದಿದ್ದರೂ ಸಂದರ್ಭಕ್ಕನುಸಾರವಾಗಿ ಅಲ್ಲಲ್ಲಿ ಕಾಣಿಸಿಕೊಂಡಿದೆ. ಮುಂದೆ ವಸಾಹತುಶಾಹಿ ಸಂಸ್ಕೃತಿ ಪ್ರೇರಣೆಯ ಹಿನ್ನೆಲೆಯಲ್ಲಿ ವಿವಿಧ ಸಾಹಿತ್ಯ ರೂಪಗಳು, ವಿವಿಧ ಆಲೋಚನ ಕ್ರಮಗಳು ಕನ್ನಡದಲ್ಲಿ ಕಾಣಿಸಿಕೊಂಡದ್ದರ ಫಲವಾಗಿ ಕನ್ನಡಪರ ಅಭಿವ್ಯಕ್ತಿಯ ವ್ಯಾಪ್ತಿ ಹಿಗ್ಗುತ್ತದೆ. ಇಲ್ಲಿ ಅನೇಕ ಹೊಸ ಹೊಸ ಕನ್ನಡಪರ ಸಮಸ್ಯೆಗಳು ಕಾಣಿಸಿಕೊಳ್ಳತೊಡಗಿದವು. ಇಂತಹ ಸಮಸ್ಯೆಗಳು ಸಂಕೀರ್ಣಗೊಳ್ಳುತ್ತಾ ಸಾಹಿತ್ಯವನ್ನು ತನ್ನೆಡೆಗೆ ಆಕರ್ಷಿಸಿತು. ಪರಿಣಾಮವಾಗಿ ಇದೊಂದು ಮುಖ್ಯ ಕಾಳಜಿಯಾಗಿ ಸಾಹಿತ್ಯ ಕೃತಿಗಳಿಗೆ ವಸ್ತುವಾಯಿತು. ಇಲ್ಲಿಂದ ಮುಂದೆ ಕನ್ನಡಪರ ಅಭಿವ್ಯಕ್ತಿಗೇ ಪೂರ್ಣವಾಗಿ ಮೀಸಲಾದ ಅನೇಕಾನೇಕ ಕೃತಿಗಳು ಕನ್ನಡ ಸಾಹಿತ್ಯ ಚರಿತ್ರೆಯ ಮುಖ್ಯ ಪ್ರವಾಹಕ್ಕೆ ಉಪನದಿಗಳಾಗಿ ಕೂಡಿಕೊಂಡವು.

ಹೊಸಗನ್ನಡ ಸಾಹಿತ್ಯದ ಈ ಸಂದರ್ಭದಲ್ಲಿ ಕನ್ನಡಪರವಾದ ಅಭಿವ್ಯಕ್ತಿಯು ವಿಭಿನ್ನ ನೆಲೆಗಳಲ್ಲಿ, ವಿಭಿನ್ನ ದೃಷ್ಟಿಕೋನಗಳಲ್ಲಿ ಸಂಕೀರ್ಣ ಸ್ಥಿತಿಯಲ್ಲಿ ಕಾಣಿಸಿಕೊಳ್ಳು ತ್ತಿರುವುದನ್ನು ನೂರಾರು ಕನ್ನಡಪರ ಕೃತಿಗಳ ಮೂಲಕ ಅರಿಯಬಹುದಾಗಿದೆ. ವಸಾಹತುಶಾಹಿ ಸಂಸ್ಕೃತಿಯ ಪ್ರಭಾವ ಗಾಢವಾಗುತ್ತಾ ಬಂದ ಕ್ರಿ.ಶ. ೧೯-೨೦ನೆಯ ಶತಮಾನದಲ್ಲಿ ಹೊಸ ಹೊಸ ಆಲೋಚನೆಗಳು, ಚಿಂತನ ಕ್ರಮಗಳು ಭಾರತೀಯರಲ್ಲಿ ಕಾಣಿಸಿಕೊಂಡವು. ಪರಿಣಾಮವಾಗಿ ಹೊಸ ಹೊಸ ಸಾಹಿತ್ಯ ರೂಪಗಳು ಪಾಶ್ಚಾತ್ಯ ಸಾಹಿತ್ಯ ಸಂಪರ್ಕದಿಂದ ಭಾರತೀಯ ಭಾಷೆಗಳಲ್ಲಿ ರೂಪು ತಳೆದವೆಂಬುದನ್ನು ಈ ಹಿಂದೆ ಹೇಳಲಾಗಿದೆ. ಈ ಸಂದರ್ಭದಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಭಾರತೀಯರಲ್ಲಿ ಕಾಣಿಸಿಕೊಂಡಿತಲ್ಲದೆ ಉಪ-ರಾಷ್ಟ್ರೀಯತೆಯ ಪ್ರಜ್ಞೆಯೂ ಮೊಳಕೆ ಯೊಡೆಯಿತು. ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾ ಪ್ರದೇಶಗಳಲ್ಲಿ ರಾಷ್ಟ್ರೀಯತೆಯ ಮತ್ತು ಉಪರಾಷ್ಟ್ರೀಯತೆಯ ಚಳವಳಿಗಳು ಒಟ್ಟೊಟ್ಟಿಗೆ ಜರುಗಿದುವು. ಕನ್ನಡ ಸಾಹಿತ್ಯ ಈ ಎರಡೂ ಚಳವಳಿಗಳಿಗೆ ಏಕಕಾಲದಲ್ಲಿ ಪ್ರತಿಕ್ರಿಯೆ ತೋರಿತು. ಉಪರಾಷ್ಟ್ರೀಯತೆಗೆ ಕನ್ನಡ ಸಾಹಿತ್ಯವು ಪ್ರತಿಕ್ರಿಯೆ ತೋರಿದ ಸಂದರ್ಭದಲ್ಲಿ ಅನೇಕ ದ್ವಂದ್ವಗಳು, ಭಿನ್ನ ಆಲೋಚನೆಗಳು ಅದರಲ್ಲಿ ಸ್ಥಾನ ಪಡೆದವು. ಉದಾಹರಣೆಗೆ ಡಿ.ವಿ.ಜಿ. ಮೊದಲಾದವರು ಕರ್ನಾಟಕ ಏಕೀಕರಣ ಚಳವಳಿಯನ್ನು ನಿರಾಕರಿಸಿದರೆ ಬಿ.ಎಂ.ಶ್ರೀ., ಬೇಂದ್ರೆ, ಕುವೆಂಪು ಮೊದಲಾದವರು ಪುರಸ್ಕರಿಸಿರುವುದನ್ನು ಅವರ ಕೃತಿಗಳಿಂದ ಅರಿಯಬಹುದು. ಅಷ್ಟೇ ಅಲ್ಲದೆ ಮಾಸ್ತಿಯವರು ತಮ್ಮ ಕೃತಿಗಳಲ್ಲಿ ಕರ್ನಾಟಕ ಏಕೀಕರಣ ಚಳವಳಿಗೆ ನೇರವಾಗಿ ಬೆಂಬಲ ತೋರದಿರುವುದನ್ನು ಮುಖ್ಯವಾಗಿ ಇಲ್ಲಿ ಗಮನಿಸಬೇಕಾಗಿದೆ. ಬಹುಶಃ ಇವರು ಸರ್ಕಾರದ ಅಧಿಕಾರಿಗಳಾಗಿದ್ದುದು ಕಾರಣವೇನೊ! ಇನ್ನು ಬೇಂದ್ರೆ, ಕುವೆಂಪು ಅವರ ಕನ್ನಡಪರ ಕವಿತೆಗಳಲ್ಲಿ ಪ್ರಜಾಸತ್ತಾತ್ಮಕ ಕನ್ನಡಪರ ಅಭಿವ್ಯಕ್ತಿ ಕಾಣಿಸಿಕೊಂಡರೆ ಬಿ.ಎಂ.ಶ್ರೀ. ಮೊದಲಾದವರ ಕವಿತೆಗಳಲ್ಲಿ ಪ್ರಜಾಸತ್ತಾತ್ಮಕವಲ್ಲದ ರಾಜಭಕ್ತಿಯ ನೆಲೆಯಲ್ಲಿ ಕನ್ನಡಪರ ಚಿಂತನೆಯನ್ನು ಕಾಣಬಹುದಾಗಿದೆ.

ಹೀಗೆ ಕನ್ನಡಪರ ಕವಿತೆಗಳು ಇಲ್ಲಿಂದೀಚೆಗೆ ಸಂಕೀರ್ಣ ಸ್ಥಿತಿಯಲ್ಲಿ ಕಾಣಿಸಿಕೊಳ್ಳ ತೊಡಗುತ್ತವೆ. ಅಂತೆಯೇ ಕನ್ನಡಪರ ನಾಟಕ, ಕಾದಂಬರಿ, ವೈಚಾರಿಕ ಬರಹಗಳು, ಭಾಷಣಗಳು,

ಉಪನ್ಯಾಸಗಳು ಮೊದಲಾಗಿ ವಿವಿಧ ಸಾಹಿತ್ಯ ರೂಪಗಳಲ್ಲಿ ಕನ್ನಡಪರ ಅಭಿವ್ಯಕ್ತಿಯ ಪರಿಕಲ್ಪನೆ ಅನೇಕ ಕನ್ನಡಪರ ಸಮಸ್ಯೆಗಳನ್ನು ಪರಿಚಯಿಸುತ್ತಾ, ಸಂಕೀರ್ಣವಾಗುತ್ತಾ ವಸ್ತು ವೈವಿಧ್ಯ ಸಾಧಿಸುತ್ತದೆ. ವಿವಿಧ ನೆಲೆಗಳಲ್ಲಿ ವಿವಿಧ ದೃಷ್ಟಿಕೋನಗಳಲ್ಲಿ ಕನ್ನಡಪರವಾದ ಅಭಿವ್ಯಕ್ತಿ ವ್ಯಾಪಿಸುತ್ತದೆ; ಅದರ ವಿವಿಧ ಮುಖಗಳನ್ನು ತೋರ್ಪಡಿಸುತ್ತದೆ.

ಹೀಗೆ ಆಧುನಿಕ ಕಾಲ ಘಟ್ಟದಲ್ಲಿ ಅದರಲ್ಲೂ ಕರ್ನಾಟಕ ಏಕೀಕರಣ ಪೂರ್ವ ಸಂದರ್ಭದಲ್ಲಿ ಕನ್ನಡ ನಾಡು, ನುಡಿಯ ವಿಚಾರಗಳು ಕನ್ನಡ ಸಾಹಿತ್ಯದಲ್ಲಿ ಯಥೇಚ್ಛವಾಗಿ ಕಾಣಿಸಿಕೊಳ್ಳುತ್ತವೆ. ಆದರೆ ಕರ್ನಾಟಕ ಏಕೀಕರಣಗೊಂಡ ಅನಂತರದಲ್ಲಿ ಈ ಬಗೆಯ ಸಾಹಿತ್ಯ ಕೃಷಿ ಕನ್ನಡದಲ್ಲಿ ಕಡಿಮೆಯಾಗತೊಡಗಿತು. ಈ ನಾಡಿಗೆ 'ಕರ್ನಾಟಕ' ಎಂದು ನಾಮಕರಣ ಮಾಡಿದ ೧೯೭೩ರ ಸಂದರ್ಭ, ಗೋಕಾಕ ಚಳವಳಿಯ ಸಂದರ್ಭ, ಕಾವೇರಿ ಗಲಭೆ ಮತ್ತು ಉರ್ದು ವಾರ್ತೆಯ ವಿವಾದದ ದಿನಗಳಲ್ಲಿ ಮಾತ್ರ ಕವಿತೆ ಮತ್ತು ಸೃಜನೇತರ ಪ್ರಕಾರಗಳಲ್ಲಿ ಸ್ವಲ್ಪಮಟ್ಟಿಗೆ ಕನ್ನಡಪರ ಕೃಷಿ ಕಾಣಿಸಿಕೊಂಡಿತು. ಈ ಎರಡು ಸಾಹಿತ್ಯ ಪ್ರಕಾರಗಳನ್ನು ಹೊರತುಪಡಿಸಿದರೆ ನಾಟಕ ಪ್ರಕಾರದಲ್ಲಿ ಕೆಲವೊಂದು ನಾಟಕಗಳು ಸಾಮಾನ್ಯ ಸಂದರ್ಭಗಳಲ್ಲೂ ಬೆರಳೆಣಿಕೆಯಷ್ಟು ಕಾಣಿಸಿಕೊಂಡವು. ಆದರೆ ಇಂತಹ ಕನ್ನಡಪರ ಅಭಿವ್ಯಕ್ತಿಯು ಸಾಹಿತ್ಯದ ಇತರೆ ಪ್ರಕಾರಗಳಾದ ಸಣ್ಣಕತೆ, ಕಾದಂಬರಿ ಮೊದಲಾದವುಗಳಲ್ಲಿ ಕಾಣಿಸಿಕೊಳ್ಳದಿರುವುದು ಕುತೂಹಲಕರ ಸಂಗತಿ.

ಅಂತಿಮವಾಗಿ ಈ ಬಗೆಯ ಕನ್ನಡನಾಡು, ನುಡಿಯ ವಿಚಾರ ಅಥವ ಕನ್ನಡಪರ ಅಭಿವ್ಯಕ್ತಿ ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಪರಂಪರೆಯ ಉದ್ದಕ್ಕೂ ಕಾಣಿಸಿಕೊಂಡಿರುವುದು ಗಮನಾರ್ಹ. ಇಂತಹ ಅಭಿವ್ಯಕ್ತಿ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮುಖ್ಯವಾಗಿ ಮೂರು ಕಾಲಘಟ್ಟಗಳಲ್ಲಿ ಹಾದು ಬಂದಿದೆ ಎಂದು ಭಾವಿಸುತ್ತೇನೆ. ಅದು

೧. ಆಧುನಿಕ ಪೂರ್ವ ಕನ್ನಡ ಸಾಹಿತ್ಯ ಸಂದರ್ಭ.

೨. ವಸಾಹತುಶಾಹಿ ಸಂದರ್ಭದಿಂದ ಕರ್ನಾಟಕದ ಏಕೀಕರಣದವರೆಗಿನ ಕಾಲ. ಮತ್ತು

೩. ಇತ್ತೀಚಿನ ಕಾಲ. ಅಂದರೆ ಕರ್ನಾಟಕ ಏಕೀಕರಣ ಅನಂತರದ ಕಾಲಘಟ್ಟ.

ಹೀಗೆ ಕನ್ನಡ ಪರವಾದ ಅಭಿವ್ಯಕ್ತಿ ಆರಂಭದ ಕಾಲಘಟ್ಟದಲ್ಲಿ ಸರಳ ಪ್ರಶ್ನೆಯಾಗಿ ಕಾಣಿಸಿಕೊಂಡದ್ದು, ಕಾಲಕ್ರಮೇಣ ತನ್ನ ವ್ಯಾಪ್ತಿಯಲ್ಲಿ ಹಿಗ್ಗುತ್ತ, ಆಧುನಿಕ ಸಂದರ್ಭದಲ್ಲಿ ಸಂಕೀರ್ಣಾವಸ್ಥೆ ತಲುಪಿರುವುದನ್ನು ಮನಗಾಣಬಹುದು.

ಇಂತಹ ಚರ್ಚೆ ವಿಸ್ತೃತರೂಪದಲ್ಲಿ, ಆಗಬೇಕೆಂಬುದು ಈ ಗ್ರಂಥದ ಆಶಯ. ಇದಕ್ಕೆ ಪೂರಕವಾಗಿ ಈ ಶತಮಾನದಲ್ಲಿ ಜರುಗಿದ ಕನ್ನಡಪರ ಹೋರಾಟಗಳ ಚಿತ್ರಣ ಇಲ್ಲಿ ದಾಖಲಾಗಬೇಕು. ಕರ್ನಾಟಕದ ವೈವಿಧ್ಯಮಯ ಕನ್ನಡಪರ ಸಮಸ್ಯೆಗಳು ಇಲ್ಲಿ ಅಕ್ಷರಾಭಿವ್ಯಕ್ತಿ ಪಡೆಯಬೇಕು. ಇದರೊಂದಿಗೆ ಕನ್ನಡಕ್ಕಾಗಿ ಜೀವನವನ್ನೆ ಮುಡುಪಾಗಿಟ್ಟ ಶ್ರೀ ರಾಮಣ್ಣ ಕೋಡಿಹೊಸಹಳ್ಳಿ ಅವರ ಬದುಕಿನ ವಿವರಗಳು ಇಲ್ಲಿ ನಮೂದಾಗಬೇಕು. ಈ ಹಿನ್ನೆಲೆಯಲ್ಲಿ ಇದನ್ನೊಂದು ಕನ್ನಡಪರವಾದ ಆಕರ ಗ್ರಂಥವನ್ನಾಗಿ ಮಾಡಬೇಕೆಂಬುದು ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಪಡೆದಿರುವ ಯಶಸ್ಸನ್ನು ಕೃತಿಯೇ ಹೇಳುತ್ತದೆ.

—ಕಾ.ವೆಂ. ಶ್ರೀನಿವಾಸಮೂರ್ತಿ

ಪರಿವಿಡಿ

ಭಾಗ ೨-ಚಳವಳಿ

ಭಾಗ ೩ - ಜೀವನ ಸಾಧನೆ

ಭಾಗ - ೧

ಸಾಹಿತ್ಯ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಾಡು-ನುಡಿಯ ಚಿಂತನೆ

ಡಾ. ಶಾಂತಿನಾಥ ದಿಬ್ಬದ

ವಾಸ್ತವವಾಗಿ ಸಾಹಿತ್ಯವೆಂಬುದು ಒಂದು ನಾಡಿನ, ಒಂದು ಕಾಲದ ಸಾಮಾಜಿಕ ಜೀವನ ಪ್ರಕ್ರಿಯೆಯ ಪ್ರತಿಫಲವಾಗಿರುತ್ತದೆ. ಯಾವುದೇ ಕವಿ ಯಾವುದೇ ವಸ್ತುವನ್ನು ಆಯ್ದುಕೊಂಡರೂ ಪ್ರಾಸಂಗಿಕವಾಗಿಯಾದರೂ ಆತನ ಕೃತಿಯಲ್ಲಿ ಹಿಂದಿನ ಅಥವಾ ಸಮಕಾಲೀನ ಜೀವನವಿವರಗಳು ಬಂದೇ ಬರುತ್ತವೆ. ಇದು ಕೆಲವು ಸಂದರ್ಭಗಳಲ್ಲಿ ಅನಿವಾರ್ಯ, ಇನ್ನು ಕೆಲವು ಸಂದರ್ಭಗಳಲ್ಲಿ ಅಪೇಕ್ಷಣೀಯ ಮತ್ತೆ ಕೆಲವು ಸಂದರ್ಭಗಳಲ್ಲಿ ಕೃತಿಯ ಮೌಲ್ಯವೃದ್ಧಿಗೆ ಪೂರಕ ಒಂದು ಸಮಾಜದ ಸಾಮಾಜಿಕ ಜೀವನಪ್ರಕ್ರಿಯೆಯು ಆರ್ಥಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜನೈತಿಕ ಈ ಎಲ್ಲ ಕ್ಷೇತ್ರಗಳನ್ನು ಒಳಗೊಂಡಿರುತ್ತದೆ. ಕವಿಯು ತನ್ನ ವಸ್ತುವಿನ ಜೊತೆಗೆ ಈ ಎಲ್ಲ ಕ್ಷೇತ್ರಗಳ ಸಮಕಾಲೀನ ಅನುಭವಗಳನ್ನು ಸಂಗತಗೊಳಿಸಿದಷ್ಟೂ ಅವನ ಕಾವ್ಯ ಸರ್ವಜನ ಪ್ರಿಯವಾಗುತ್ತದೆ, ಸರ್ವಕಾಲಮಾನ್ಯವಾಗುತ್ತದೆ. ಅಂತೆಯೇ ಮಹಾಕವಿಗಳಾದವರು ತಮ್ಮ ವಸ್ತುವಿನ ನಿರ್ವಹಣೆಯ ಜೊತೆಗೆ ಈ ಬಗೆಯ ಸಾರ್ವತ್ರಿಕ-ಸಾರ್ವಕಾಲಿಕ ಮಾನ್ಯತೆಯನ್ನೂ ಬಯಸಿ ಕೃತಿರಚನೆ ಮಾಡುತ್ತಾರೆ.

ಕವಿಯಾದವನಿಗೆ ಐತಿಹಾಸಿಕ-ಸಾಂಸ್ಕೃತಿಕ ಪ್ರಜ್ಞೆ ತುಂಬ ಅಗತ್ಯ. ಇಂಗ್ಲಿಷಿನ ಪ್ರಸಿದ್ಧ ವಿಮರ್ಶಕ ಟಿ.ಎಸ್. ಎಲಿಯಟ್ ಈ ವಿಚಾರವಾಗಿ "Tradition and Individual Talent" ಎಂಬ ಪ್ರಬಂಧವೊಂದನ್ನು ಬರೆದಿದ್ದಾನೆ. ಅವನ ದೃಷ್ಟಿಯಲ್ಲಿ ಕಾವ್ಯಸೃಷ್ಟಿಗೆ ನೆರವಾಗುವ ಅಂಶಗಳು ಎರಡು: ಒಂದು Tradition, ಇನ್ನೊಂದು Individual Talent. ಇವೆರಡರಲ್ಲಿ Tradition ದೊಡ್ಡದೆಂಬುದು ಅವನ ವಾದ. ಏಕೆಂದರೆ ಈ Tradition ಎಂಬುದು ಮಾನವ ಸಮಾಜವನ್ನು ನಿಯಂತ್ರಿಸುವ ಜೀವಂತ ಹಾಗೂ ಪರಿಪೂರ್ಣ ಶಕ್ತಿಯಾಗಿರುತ್ತದೆ. ವೈಯಕ್ತಿಕ ವೈಶಿಷ್ಟ್ಯದ ಮೇಲೆ

ಕವಿಯ ಯೋಗ್ಯತೆಯನ್ನು ಅಳೆಯಬಾರದು. ಅದರ ಬದಲು ಆತ ಹೊಂದಿದ ಪರಂಪರೆಯ ಪ್ರಜ್ಞೆಯ ಪ್ರಮಾಣ ಮತ್ತು ತೀವ್ರತೆಗಳ ಆಧಾರದಿಂದ ಅವನ ಯೋಗ್ಯತೆಯನ್ನು ಅಳೆಯಬೇಕೆಂದು ಎಲಿಯಟ್ ಹೇಳುತ್ತಾನೆ. ಕವಿಗಳಾದವರಿಗೆ Historical Sense ಬೇಕು. ಅದೊಂದು ಬಗೆಯ ಅಂತರ್ದೃಷ್ಟಿ (Perception) ಎಂದೂ ಆ ಅಂತರ್ದೃಷ್ಟಿಯು ಹಿಂದಿನದನ್ನು ಇಂದಿನದರ ಜೊತೆಗೆ ಸಂಗತಗೊಳಿಸುವ ಶಕ್ತಿಯಾಗಿರುತ್ತದೆಯೆಂದೂ ಎಲಿಯಟ್ ತಿಳಿಸುತ್ತಾನೆ. ಅದನ್ನು ಆತ "The past should be altered by the present as much as the present is directed by the past" ಎಂದು ಮಾರ್ಮಿಕವಾಗಿ ತಿಳಿಸಿದ್ದಾನೆ. ಕವಿಗಳಾದವರು ಹೊಂದಿರಬೇಕಾದ ಪ್ರಜ್ಞಾವಿಶೇಷವನ್ನು ಎಲಿಯಟ್‌ನ ಈ ಪ್ರಬಂಧ ಸಮರ್ಪಕವಾಗಿ ತಿಳಿಸಿಕೊಡುತ್ತದೆ.

''ಇತಿಹಾಸವನ್ನು ಪ್ರೀತಿಸಲಾರದವರು ಇತಿಹಾಸವನ್ನು ನಿರ್ಮಿಸಲಾರರು'' ಎಂಬುದು ಸುಪ್ರಸಿದ್ಧವಾದ ಹೇಳಿಕೆ. ಈ ಹೇಳಿಕೆ ಕವಿಕುಲಕ್ಕೂ ಅನ್ವಯಿಸುತ್ತದೆ. ಕವಿಗಳು ಸಾಮಾನ್ಯವಾಗಿ ತಮ್ಮ ಕೃತಿಗಳ ಮೂಲಕ ತಮ್ಮ ಐತಿಹಾಸಿಕ ಪ್ರಜ್ಞೆ ಹಾಗೂ ನಾಡು-ನುಡಿಗಳ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸಿಯೇ ಇರುತ್ತಾರೆ. 'ದಿ ಕಕೇಷಿಯನ್ ಚಾಕ್ ಸರ್ಕಲ್' ನಾಟಕದ ಒಂದು ಪಾತ್ರದ ಮೂಲಕ ಬರ್ಟೋಲ್ಟ್ ಬ್ರೆಕ್ಟ್ ಹೇಳಿಸುವ ''ಒಬ್ಬ ಮನುಷ್ಯ ತನ್ನ ದೇಶವನ್ನು ಏಕೆ ಪ್ರೀತಿಸುತ್ತಾನೆ? ಏಕೆಂದರೆ ಅಲ್ಲಿ ರೊಟ್ಟಿ ಹೆಚ್ಚು ರುಚಿಯಾಗಿರುತ್ತದೆ, ಗಾಳಿ ಇನ್ನೂ ಸುಗಂಧವಾಗಿರುತ್ತದೆ, ದನಿಗಳು ಹೆಚ್ಚು ಶಕ್ತವಾಗಿ ಕೇಳಿಸುತ್ತವೆ, ಆಕಾಶವು ಬೇರೆಡೆಗಿಂತ ಎತ್ತರವಾಗಿರುತ್ತದೆ, ನೆಲದ ಮೇಲೆ ನಡೆಯುವುದು ಇನ್ನೂ ಸುಲಭವಾಗಿರುತ್ತದೆ'' ಎಂಬ ಮಾತು ಕವಿಗಳಿಗೂ ಅನ್ವಯಿಸುತ್ತದೆ. ಈ ದೃಷ್ಟಿಯಿಂದ ನೋಡಿದಾಗ "Every piece of art is historical" ಎಂಬ ವಿಮರ್ಶಕರ ಮಾತು ಇನ್ನಷ್ಟು ಗಟ್ಟಿಗೊಳ್ಳುತ್ತದೆ.

ಇಷ್ಟು ಹಿನ್ನೆಲೆಯೊಂದಿಗೆ ಪ್ರಾಚೀನ ಕನ್ನಡ ಕವಿಗಳು ವ್ಯಕ್ತಪಡಿಸಿದ ನಾಡು-ನುಡಿಗಳ ಕುರಿತಾದ ಅಭಿಪ್ರಾಯಗಳನ್ನಿಲ್ಲಿ ಸಂಗ್ರಹರೂಪದಲ್ಲಿ ತಿಳಿಸಲಾಗಿದೆ.

ಕನ್ನಡ ಸಾಹಿತ್ಯದ ಆರಂಭಕಾಲದ ಸಂಸ್ಕೃತ ಪ್ರಾಬಲ್ಯವನ್ನು ಮುರಿದು ಕನ್ನಡ ಕವಿಗಳು ಜನಭಾಷೆಯಾದ ಕನ್ನಡದಲ್ಲಿ ಕೃತಿರಚನೆಗೆ ತೊಡಗಿದುದನ್ನು ಈ ಸಂದರ್ಭದಲ್ಲಿ ನಾವು ಮೊದಲು ಗಮನಿಸಬೇಕು. ಕನ್ನಡಕ್ಕೆ ಆತಂಕಕಾರಿಯಾಗಿದ್ದ ಸಂಸ್ಕೃತದ ಹಿಡಿತದಿಂದ ಪಾರಾದ ಕನ್ನಡ ಕವಿಗಳು ಕನ್ನಡಕ್ಕೆ ಕನ್ನಡತನವನ್ನು ದೊರಕಿಸಿಕೊಟ್ಟರೆನ್ನಬೇಕು. ಮಾರ್ಗ-ದೇಸಿ, ಗದ್ಯ-ಪದ್ಯ, ದಕ್ಷಿಣಮಾರ್ಗ-ಉತ್ತರಮಾರ್ಗ, ವೈದರ್ಭಿ-ಗೌಡಿ-ಪಾಂಚಾಲಿ, ಹಳಗನ್ನಡ, ತಿರುಳ್ಗನ್ನಡ ಎಂಬೆಲ್ಲವು ಕನ್ನಡ ಕಾವ್ಯದ ಭಾಷೆ ಹೇಗಿರಬೇಕೆಂಬ ಬಗ್ಗೆ ನಡೆದ ಚರ್ಚೆ ಮತ್ತು ಪ್ರಯೋಗಗಳ ಫಲಗಳೇ ಆಗಿವೆ.

ಪ್ರಾಚೀನ ಕಾವ್ಯಗಳು-ಶಾಸನಗಳು ಹೆಚ್ಚಾಗಿ ರಾಜಪರ, ಪುರಾಣಪರ ಹಾಗೂ ಧರ್ಮಪರವಾದ ವಸ್ತುಗಳನ್ನು ಒಳಗೊಂಡಿವೆ. ಅದೆಲ್ಲದರ ನಡುವೆಯೂ ನಮ್ಮ ಕವಿಗಳು ನಾಡು-ನುಡಿಗಳ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಈ ಅಭಿಮಾನದ ಹಿಂದೆ ಭಾವುಕತೆಯಿದ್ದಂತೆ ಭಾಸವಾದರೂ ಆ ಭಾವುಕತೆ ಮನುಷ್ಯಪ್ರವೃತ್ತಿಗಳಲ್ಲಿ ಒಂದೆಂಬುದನ್ನು ನಾವು ನೆನಪಿಡಬೇಕು.

ಕನ್ನಡದ ಸುಪ್ರಸಿದ್ಧ ಅಲಂಕಾರ ಗ್ರಂಥವಾಗಿರುವ ಕವಿರಾಜಮಾರ್ಗವು ನಾಡು-ನುಡಿಗಳ ಅಭಿಮಾನದ ಗಣಿಯಂತಿದೆ. ಅಂದಿನ ಕರ್ನಾಟಕವು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತೆಂದೂ ಅದರಲ್ಲಿ ಕಿಸುವೊಳಲು, ಕೊಪಣನಗರ, ಪುಲಿಗೆರೆ ಹಾಗೂ ಒಕ್ಕುಂದಗಳ ನಡುವಿನ ಪ್ರದೇಶವು 'ತಿರುಳ್ಗನ್ನಡ' ಎಂಬ ಪ್ರಸಿದ್ಧಿಗೆ ಪಾತ್ರವಾಗಿತ್ತೆಂದು ಕವಿರಾಜಮಾರ್ಗಕಾರ ತಿಳಿಸಿದ್ದಾನೆ. ಅಂದಿನ ಕರ್ನಾಟಕದ ವಿಸ್ತಾರವನ್ನು ಈ ಮಾತುಗಳು ತಿಳಿಸಿಕೊಡುತ್ತವೆ. (ಕ.ರಾ.ಮಾ. I, ೩೬-೩೭)

ಕರ್ನಾಟಕದ ಜನರು ಎಂಥವರೆಂಬುದನ್ನು ಕವಿರಾಜಮಾರ್ಗಕಾರನಿಂದಲೇ ಕೇಳಿ:

> ಪದನರಿದು ನುಡಿಯಲುಂ ನುಡಿದುದನರಿದಾರಯಲುಮಾರ್ಪರಾನಾಡವರ್ಗಳ್
> ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ ||

ಅರಿತು ನುಡಿಯುವುದರಲ್ಲಿ, ನುಡಿದುದನ್ನು ಅರಿಯುವುದರಲ್ಲಿ ಕನ್ನಡಿಗರು ಸಿದ್ಧಹಸ್ತರು. ಅಂತೆಯೇ ಅವರು ಚದುರರು ಕುರಿತೋದದೆಯೂ ಕಾವ್ಯ ರಚಿಸಬಲ್ಲ ಆಶುಕವಿ ಹೃದಯ ಹೊಂದಿದವರು! ಸಹೃದಯರು, ಸಹಜಕವಿಗಳು!

> ''ಕುರಿತವರಲ್ಲದೆ ಮತ್ತಂ ಪೆರರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
> ಕಿರುವಕ್ಕಳ್ ಮಾಮೂಗರುಮರಿಪಲ್ಕರಿವರ್ ವಿವೇಕಮಂ ಮಾಂತುಗಳಂ''

ಓದರಿಯದ ಜನರೂ ಕೂಡ ಮಾತಿನಲ್ಲಿ ಚದುರರು. ಅಲ್ಲಿಯ ಚಿಕ್ಕ ಮಕ್ಕಳು ಅಥವಾ ಮೂಗರೂ ಕೂಡ ವಿವೇಕಿಗಳೆಂದು ಕೃತಿಕಾರ ಅಭಿಮಾನದಿಂದ ನುಡಿದಿದ್ದಾನೆ.

ಕರ್ನಾಟಕದ ಜನರು

> ಸುಭಟರ್ಕಳ್ ಕವಿಗಳ್ ಸು
> ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
> ಅಭಿಮಾನಿಗಳತ್ಯುಗ್ರರ್
> ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್-

ಎಂಬ ಕವಿವಾಣಿ ಅದೆಷ್ಟು ಭಾವಪೂರ್ಣವಾಗಿದೆಯಲ್ಲವೆ?

ಅಂದು ಸಂಸ್ಕೃತ-ಪ್ರಾಕೃತಗಳ ನೆರವಿಲ್ಲದೆ ಶುದ್ಧ ಕನ್ನಡದಲ್ಲಿ ಕಾವ್ಯ ರಚಿಸುವುದು ಕಷ್ಟಸಾಧ್ಯವಾಗಿತ್ತೆಂಬ ಅಂಶವನ್ನು ಕವಿರಾಜಮಾರ್ಗಕಾರ ಮತ್ತೊಂದು ಪದ್ಯದಲ್ಲಿ ತಿಳಿಸಿದ್ದಾನೆ. ಹರುಕು-ಮುರುಕು ಕನ್ನಡದಲ್ಲಿ ಕೃತಿರಚನೆಗೆ ತೊಡಗಿದ ಕನ್ನಡ ಕವಿಗಳೇ ಕನ್ನಡಕ್ಕೆ ನಾಡೋಜರೆಂಬುದು ಅವನ ನಂಬಿಕೆ. ಅಂದಿನ ಹಳಗನ್ನಡವು ದೇಸಿ ಅಲ್ಲವೆಂಬುದನ್ನು ತಿಳಿದೂ ತಿಳಿದೂ ಕೆಲವರು ಹಳಗನ್ನಡವನ್ನು ಪೊಲಗೆಡಿಸುತ್ತಿದ್ದ ಬಗ್ಗೆ ಕವಿರಾಜಮಾರ್ಗಕಾರನಿಗೆ ತುಂಬ ನೋವಾಗಿದೆ. ಹಾಗೆಯೇ ಕನ್ನಡ-ಸಂಸ್ಕೃತಗಳ ಬೆರಕೆಯನ್ನೂ ಕವಿರಾಜಮಾರ್ಗಕಾರ ತಿರಸ್ಕರಿಸಿದ್ದಾನೆ. ಇಲ್ಲೆಲ್ಲ ಸಂಸ್ಕೃತ-ಪ್ರಾಕೃತಗಳ ಬಗೆಗೆ ಗೌರವವನ್ನು ಉಳಿಸಿಕೊಂಡೂ ಕನ್ನಡಕ್ಕೆ ತನ್ನದೇ ಆದ ಕನ್ನಡತನವನ್ನು ತಂದು ಕೊಡಲು ಕೃತಿಕಾರ ಪ್ರಯತ್ನಿಸಿದ್ದಾನೆ.

ಕನ್ನಡಕ್ಕೆ ಕನ್ನಡತನವನ್ನು ರೂಪಿಸಿಕೊಡುವಲ್ಲಿ ಪಂಪ ಕವಿ ವಹಿಸಿದ ಪಾತ್ರವೂ ಬಲು

ಹಿರಿದು. ತನ್ನ ಕಾವ್ಯಗಳದು 'ಪೊಸಬಗೆ' ಎಂದು ಪಂಪ ಹೇಳಿಕೊಂಡಿರುವಲ್ಲಿ ಆತ ಸಂಸ್ಕೃತದ ಪ್ರಾಬಲ್ಯವನ್ನು ಮುರಿದುದರ ಸೂಚನೆಯೇ ಇದೆ. ಮಾರ್ಗ-ದೇಸಿ ಎಂಬ ಕನ್ನಡ ಭಾಷೆಯ ಎರಡೂ ಸ್ತರಗಳನ್ನೂ ಪಂಪ ತನ್ನ ಕಾವ್ಯಗಳಲ್ಲಿ ದುಡಿಸಿಕೊಂಡಿದ್ದಾನೆ.

'ಪಂಪಭಾರತ'ದಲ್ಲಿ ಬಂದಿರುವ ಕುರುಜಾಂಗಣ ಪ್ರದೇಶದ ವರ್ಣನೆ (೧-೫೨ರಿಂದ ೫೭) ಅಂದಿನ ಕರ್ನಾಟಕದ ಪ್ರಾಕೃತಿಕ ಸೊಬಗನ್ನು ಪ್ರತಿನಿಧಿಸುತ್ತದೆ. ತಾನು ಬಾಲ್ಯದಲ್ಲಿ ಕಂಡ ಕಾಲುವೆ, ಸರೋವರ, ಹೂಗೊಳ, ಭತ್ತದ ಗದ್ದೆಗಳು, ನಂದನವನಗಳು, ದಟ್ಟ ಅಡವಿಗಳು, ಕಾಡಾನೆಗಳು ಇವೆಲ್ಲ ಅವನಿಗೆ ಕುರುಜಾಂಗಣ ಪ್ರದೇಶದಲ್ಲೂ ಇರುವಂತೆ ಭಾಸವಾಗುತ್ತದೆ. ತನ್ನ ಹುಟ್ಟು ಪ್ರಾಂತದ ಕುರಿತಾದ ಅವ್ಯಕ್ತ ಭಾವನೆಗಳೆಲ್ಲ ಇಂಥ ಪ್ರಸಂಗಗಳಲ್ಲಿ ತಾನೇ ತಾನಾಗಿ ವ್ಯಕ್ತವಾಗಿ ಬಿಡುತ್ತವೆ.

ಅಲ್ಲಿಯ ಒಂದು ಹಣ್ಣಾಗಲಿ, ಹೂವಾಗಲಿ, ಮಾಗಿ ವ್ಯರ್ಥವಾಗಿ ಹೋಗುವುದಿಲ್ಲವಂತೆ. ತುಂಬಿ ನಿಂತ ಅಲ್ಲಿಯ ಮಾವು-ಮಲ್ಲಿಗೆಗಳಿಗಿಂತ ಮಿಗಿಲಾದ ಸಂಸಾರ ಸಾರ ಸರ್ವಸ್ವ ಫಲವಾದರೂ ಏನು? ಎಂದು ಕೇಳುವಷ್ಟು ಭಾವುಕವಾಗಿದೆ ಕವಿಹೃದಯ! ಇದಲ್ಲವೆ ತನ್ನ ನಾಡಿನ ಬಗ್ಗೆ ಪಂಪ ಇರಿಸಿಕೊಂಡಿದ್ದ ನಿರ್ಮಲಪ್ರೇಮ!

ಬೆರಳಿನಿಂದ ಮೀಟಿದರೆ ಸಾಕು, ಅಲ್ಲಿಯ ಕಬ್ಬುಗಳಿಂದ ರಸ ಚಿಮ್ಮುತ್ತದೆ. ಬಿರಿದ ಒಂದೇ ಒಂದು ಮುಗುಳ ಕಂಪನ್ನು ಸವಿದು ದುಂಬಿಗಳು ಮತ್ತೇರುತ್ತವೆ! ಒಂದೇ ಒಂದು ಹಣ್ಣಿನ ರಸ ಸವಿದು ಗಿಳಿಗಳು ಆಯಾಸಪಡುತ್ತವೆ-ಎಂದು ಪಂಪ ಬಣ್ಣಿಸಿದ್ದಾನೆ. (ಆನಂದ ಹೆಚ್ಚಾದಾಗ ಉಂಟಾಗುವ ಆಯಾಸ ಇದು!)-ಕೇವಲ ಕಾವ್ಯಕ್ಕಾಗಿ ಅಥವಾ ವರ್ಣನೆಗಾಗಿ ಮಾತ್ರ ಹೇಳಿದ ಮಾತುಗಳು ಇವಲ್ಲ. ಇವೆಲ್ಲ ಕವಿ ಹೃದಯದ ಒತ್ತಾಸೆಗಳು-ಒಳಮಿಡಿತಗಳು.

ಇದಕ್ಕೆ ಅಂಟಿಕೊಂಡು ಬರುವ ಹಸ್ತಿನಾಪುರದ ವರ್ಣನೆಯೂ (ಪಂ. ಭಾ ೧-೫೮) ಅಷ್ಟೇ ಸೊಗಸಾಗಿದೆ. ಹಾಗೆಯೇ ಏಕಚಕ್ರ ನಗರದ ವರ್ಣನೆ (೩-೨೨) ಮತ್ತು ಇಂದ್ರಪ್ರಸ್ಥ ನಗರಗಳ ವರ್ಣನೆ(೪-೧೦)ಗಳು ಪರಿಭಾವನೆಗೆ ಯೋಗ್ಯವಾಗಿವೆ.

ಪಂಪನ ಬನವಾಸಿಯ ವರ್ಣನೆಯ ಪದ್ಯಗಳು ಇಡೀ ಕನ್ನಡ ಕಾವ್ಯ ಪ್ರಪಂಚದಲ್ಲಿಯೇ ಅತ್ಯಂತ ಆರ್ದ್ರಭಾವನೆಯಿಂದ ಮೂಡಿನಿಂತ ಪದ್ಯಗಳಾಗಿವೆ.

ಸೊಗಯಿಸಿ ಬಂದ ಮಾಮರನೆ ತಳ್ತಲೆವಳ್ಳಿಯೆ ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ॥
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಳ್ಪೊಡಾವ ಬೆ
ಟ್ಟುಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್ ॥ ೪-೨೮ ॥

ತುಂಬಿ ನಿಂತ ಅಲ್ಲಿಯ ಮಾಮರಗಳು, ಎಲೆಬಳ್ಳಿ, ಬಗೆ ಬಗೆಯ ಹೂಗಳು, ಕೂಜನಗೈಯುವ ಕೋಗಿಲೆಗಳು ಪಂಪನ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿವೆ. ಇದೆಲ್ಲದರ ಸೊಬಗನ್ನು ಸವಿಯುವ ರಸಿಕರನ್ನೂ ಪಂಪ ಮೆಚ್ಚಿಕೊಂಡಿದ್ದಾನೆ.

''ಚೌಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್
॥ ೪-೨೮ ॥

ಎಂಬ ಪದ್ಯದಲ್ಲಿ ಪಂಪ ಕರ್ನಾಟಕದ ಜನತೆಯ ಗುಣವಿಶೇಷಗಳನ್ನು ಮನದುಂಬಿ ಕೊಂಡಾಡಿದ್ದಾನೆ.

ಅರಿಕೇಸರಿಯ ಆಸ್ಥಾನದಲ್ಲಿ ಅಂದರೆ ಬಿರುಬಿಸಿಲಿನಿಂದ ಕೂಡಿದ ದೂರದ ಆಂಧ್ರಪ್ರದೇಶದಲ್ಲಿ ನೆಲೆನಿಂತು ಕಾವ್ಯರಚಿಸುವಾಗ ಕರ್ನಾಟಕವು ಪಂಪನಿಗೆ ಕ್ಷಣ ಕ್ಷಣಕ್ಕೂ ನೆನಪಾಗಿರಬೇಕು. ಅಂತೆಯೇ ಆತ ಬನವಾಸಿಯ ಪ್ರಾಂತದಲ್ಲಿ ಮನುಷ್ಯನಾಗಿ ಮರುಹುಟ್ಟು ಪಡೆಯಬಯಸಿದ್ದ. ಒಂದು ವೇಳೆ ತಾನು ಅಷ್ಟು ಪುಣ್ಯ ಮಾಡಿಲ್ಲವೆನ್ನುವುದಾದರೆ ಕನಿಷ್ಠಪಕ್ಷ ಮರಿದುಂಬಿಯಾಗಿ ಅಥವಾ ಕೋಗಿಲೆಯಾಗಿ ಹುಟ್ಟಬೇಕೆಂದು ಬಯಸಿದ್ದಾನೆ. ಈ ಮಾತಿನ ಮೂಲಕ ಪ್ರಕಟವಾದ ಪಂಪನ ಒಳಮನಸ್ಸಿನ ತೀವ್ರತೆಯನ್ನರಿಯಲು ನಮಗೂ ಒಂದು ಬಗೆಯ ಭಾವುಕತೆ ಬೇಕೆನ್ನಿಸುತ್ತದೆ.

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಗಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ ॥ ೪-೩೦ ॥

ಆಂಧ್ರದಲ್ಲಿದ್ದ ಪಂಪನಿಗೆ ಕರ್ನಾಟಕದ ಕಡೆಯಿಂದ ಬೀಸುವ ಗಾಳಿ ಸೋಂಕಿದರೂ ಸಾಕು (ತೆಂಕಣಗಾಳಿ ಸೋಂಕಿದೊಡಂ) ತಕ್ಷಣ ಅವನಿಗೆ ತನ್ನ ತಾಯ್ನಾಡು ನೆನಪಾಗುತ್ತಿತ್ತು! ಯಾರಾದರೂ ಕನ್ನಡ ಮಾತನಾಡುವವರು ಸಿಕ್ಕರೆ ಅವನಿಗೆ ಸ್ವರ್ಗವೇ ಸಿಕ್ಕಂತೆ! (ಒಳ್ನುಡಿ ಗೇಳ್ದೊಡಂ), ಇಂಪಾದ ಕರ್ನಾಟಕ ಸಂಗೀತದ ಅಲೆ ಎಲ್ಲಿಯಾದರೂ ತೇಲಿ ಬಂದರೆ ಪಂಪ ಅದರಲ್ಲಿ ಮೈಮರೆತುಬಿಡುತ್ತಾನೆ (ಇಂಪನಾಳ್ದ ಗೇಯಂ ಕಿವಿವೊಕ್ಕೊಡಂ), ಹೀಗೆ ಒಂದೇ ಎರಡೇ ಕರ್ನಾಟಕದ ಹುಲ್ಲೂ ಅವನ ದೃಷ್ಟಿಯಲ್ಲಿ ಪಾವನವಾದ ಶ್ರೀಗಂಧವಾಗಿತ್ತೆಂದು ತೋರುತ್ತದೆ. ಬಿರಿದ ಮಲ್ಲಿಗೆಯನ್ನು ಕಂಡರೆ, ಚಿಗಿತ ಮರಗಳನ್ನು ಕಂಡರೆ, ವಸಂತಮಾಸ ಬಂದರೆ ಪಂಪನ ಕಣ್ಣ ಮುಂದೆ ಅವನ ಬನವಾಸಿ ಪ್ರಾಂತವೇ ಮೂಡಿಬಿಡುತ್ತದೆ! ಆಗ ತನಗಾಗುವ ಸಂತೋಷವು ವರ್ಣಿಸಲಸದಳವಾದುದೆಂಬುದನ್ನು ಪಂಪ 'ಏನನೆಂಬೆನ್' ಎಂಬ ಮಾತಿನಲ್ಲಿ ತಿಳಿಸಿದ್ದಾನೆ. ಈ ಪದ್ಯದಲ್ಲಿ ಬರುವ ''ಆರಂಕುಸವಿಟ್ಟೊಡಂ ನೆನೆವುದೆನ್ನಮನಂ ಬನವಾಸಿ ದೇಶಮಂ'' ಎಂಬ ಸಾಲಿಗೆ ಇದುವರೆಗೆ ಎರಡು ಅರ್ಥಗಳನ್ನು ಕಲ್ಪಿಸಿಕೊಂಡು ಬರಲಾಗಿದೆ: ಯಾರೇ ಅಂಕುಶದಿಂದ ಇರಿದರೂ (ತಡೆಗಟ್ಟಿದ್ದರೂ) ತಾನು ಕರ್ನಾಟಕವನ್ನೇ ಬಯಸುವವ ಎಂಬುದು ಒಂದು ಅರ್ಥ, ಮರ-ಬಳ್ಳಿಗಳಿಗೆ ಚಿಗುರು ಮೂಡಿದ ತಕ್ಷಣ ತನಗೆ ಕರ್ನಾಟಕದ ನೆನಪಾಗುತ್ತದೆ ಎಂಬುದು ಇನ್ನೊಂದು ಅರ್ಥ (ಆರು ಅಂಕುಶಗಳಿಂದ ಇರಿದರೂ.... ಎಂದು ಅರ್ಥ ಮಾಡುವವರೂ ಉಂಟು!). ಈ ಸಂದರ್ಭದಲ್ಲಿ ನಾನು ಹೇಳಬೇಕೆಂದಿರುವ

ಅಂಶ ಒಂದಿದೆ. ಕೊಂಕಣಿಯಲ್ಲಿ ''ಆರ್'' ಎಂದರೆ ''ಹಲಸಿನ ಮರ'' ಎಂಬ ಅರ್ಥವಿದೆಯೆಂದು ನಾನು ಕೇಳಿದ್ದೇನೆ (ಕೊಂಕಣಿ ಬಲ್ಲವರು ಇದರ ಬಗ್ಗೆ ದಯವಿಟ್ಟು ತಿಳಿಸಬೇಕು). ಅದು ನಿಜವೆನ್ನುವುದಾದರೆ ಪಂಪ ಹಲಸಿನ ಮರದ ಪ್ರೇಮಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಚಿಗಿತು ನಿಂತಾಗ ತುಂಬ ಆಕರ್ಷಕವಾಗಿ ಕಾಣುವ ಹಲಸಿನ ಮರವು ಪಂಪನ ಮನಸ್ಸನ್ನು ಸೂರೆಗೊಂಡಿರಲೂ ಸಾಕು. ಅಂತೆಯೇ ಮಾವು, ಮಲ್ಲಿಗೆ, ಹಲಸಿನ ಮರಗಳನ್ನು ಕಂಡಾಗ ಆತನ ಮನಸ್ಸು ಆಂಧ್ರದಿಂದ ಕರ್ನಾಟಕಕ್ಕೆ ನೆಗೆದು ಬರುತ್ತಿತ್ತೆಂದು ತೋರುತ್ತದೆ.

ಒಟ್ಟಾರೆ ಕರ್ನಾಟಕದ ಮೇಲಿನ ಪಂಪನ ಪ್ರೀತಿಯನ್ನು ಹಾಗೂ ಉಕ್ಕಿ ಬರುವ ಭಾವನೆಗಳ ಮೂಲಕ ಆತ ಅದನ್ನು ಪ್ರಕಟಿಸಿರುವ ರೀತಿಯನ್ನು ನೋಡಿದರೆ ಆಂಧ್ರದಲ್ಲಿ ನೆಲೆನಿಂತ ಪಂಪನಿಗೆ ತನ್ನ ತಾಯ್ನಾಡಿನ ಬಗೆಗೆ ಒಂದು ರೀತಿಯ Home sick (ಹೋಂ ಸಿಕ್) ಇತ್ತೋ ಏನೋ! ಎಂದು ಹೇಳಿಬಿಡಬೇಕೆನ್ನಿಸುತ್ತದೆ (ಇದು ಅನ್ಯಥಾ ಭಾವನೆಯಿಂದ ಹೇಳಿದ ಮಾತಲ್ಲ; ಕರ್ನಾಟಕದ ಮೇಲಿನ ಪಂಪನ ನಿರ್ವ್ಯಾಜ ಪ್ರೇಮವನ್ನು ಸ್ಪಷ್ಟಪಡಿಸಲು ಹೇಳಿದ್ದು). ಅಂತೆಯೇ ಆತ ಅರಿಕೇಸರಿಯ ಆಸ್ಥಾನಕವಿಯಾಗಿ, ಆತ್ಮೀಯ ಮಿತ್ರನಾಗಿ, ಎಲ್ಲ ಗರಿಷ್ಠ ಘನತೆ-ಗೌರವ-ಸುಖಗಳನ್ನು ಹೊಂದಿದ್ದರೂ ಸಹಿತ ಕಳೆದುಕೊಂಡ ಯಾವುದನ್ನೋ ಪದೇ ಪದೇ ನೆನಪಿಸಿಕೊಳ್ಳುವವನಂತೆ ತನಗರಿಯದಂತೆ ತನ್ನ ಕರ್ನಾಟಕವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾನೆ. ಏನಿದ್ದರೇನು? ''ತೆಂಕನಾಡಮರೆಯಲ್ಕಿನ್ನೇಂ ಮನಂ ಬರ್ಕುಮೆ''? ಎಂದು ಕನವರಿಸುತ್ತಾನೆ.

'ವಿಕ್ರಮಾರ್ಜುನ ವಿಜಯ'ದ ಬೇರೆ ಬೇರೆ ಪ್ರಸಂಗಗಳಲ್ಲಿ ಕರ್ನಾಟಕ ಸಂಸ್ಕೃತಿಯ ಅಂದಿನ ವೈಶಿಷ್ಟ್ಯಗಳಾದ ತುರುಗೋಳ್, ವೇಳೆವಾಳಿ, ಜೋಳವಾಳಿ, ಯುದ್ಧನೀತಿ, ಆಯುಧ ಪ್ರಪಂಚ, ಬೇಟೆಯ ನೈಪುಣ್ಯ, ವೇಶ್ಯಾವಾಟಿಯ ಜೀವನವಿಧಾನ ಇವೇ ಮೊದಲಾದ ಅಂಶಗಳನ್ನು ಸಾರ್ಥಕವಾಗಿ ಬಿಂಬಿಸುವುದರ ಮೂಲಕ ಪಂಪನು ತನ್ನ ಕರ್ನಾಟಕ ಪ್ರೇಮವನ್ನು ಮೆರೆದಿದ್ದಾನೆ. ೯-೫೨ ರಲ್ಲಿ ಅರಿಕೇಸರಿಯ ರಾಜಕೀಯ ಸಾಧನೆಗಳನ್ನು ತಿಳಿಸಿ ಅವುಗಳನ್ನು ಪುರಾಣ ಪುರುಷನಾದ ಅರ್ಜುನನಿಗೆ ಆರೋಪಿಸಿದ್ದಾನೆ.

ಹರಿಹರನ 'ಪಂಪಾಕ್ಷೇತ್ರದ ರಗಳೆ'ಯಂತೂ ಪಂಪಾಕ್ಷೇತ್ರದ(ಹಂಪೆ)ಅದ್ಭುತರಮ್ಯ ವರ್ಣನೆಯಿಂದ ಕೂಡಿದೆ.

ಎಂತೆನೆ ಸಮುದ್ರಮುದ್ರಿತ ಧರಾಮಧ್ಯದೊಳು
ಸಂತತಂ ಮೇರುವಿನ ದಕ್ಷಿಣ ವಿಭಾಗದೊಳು
ಮೆರೆವುದದು ಹೇಮಕೂಟವ್ರಾತ ಶಿವಪುರಂ
ಹೆರಸೂಡಿದಂ ನೆಲಸಿ ನಿಂದ ಪಂಪಾಪುರಂ
ಹರಿಯಜರು ಸೊಗಸಿನಿಂ ಪೊಗಳ್ವ ಪಂಪಾಪುರಂ
ಶರಣರೊಲವಿಂದ ನಲಿದಿರ್ಪ ಪಂಪಾಪುರಂ....''

ಎಂದು ಮುಂದುವರೆಯುವ ರಗಳೆಯ ಮೂಲಕ ಹರಿಹರನು ಹಂಪೆಯ ಚರಿತ್ರೆಯನ್ನು ಸೊಗಸಾಗಿ ನಿರೂಪಿಸಿದ್ದಾನೆ.

ಕನ್ನಡದ ಕಟ್ಟಾಳು ಎನ್ನಿಸಿಕೊಂಡಿದ್ದ ೧೩ನೆಯ ಶತಮಾನದ ಕವಿ ಆಂಡಯ್ಯನ 'ಕಬ್ಬಿಗರ ಕಾವ'ವಂತೂ ಕರ್ನಾಟಕತ್ವಕ್ಕೆ ಬರೆದ ವ್ಯಾಖ್ಯಾನದಂತಿದೆ.

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾರನಾ
ನೆಲನಂ ಮುತ್ತಿನ ಮಾನಿಸರ್ ಪೊಗಳಲೇನಂ ಬಲ್ಲರೆಂಬೊಂದು ಬ
ಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು ಮೆ
ಲ್ಲೆಲರಿಂ ಪೂತ ಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕಯ್ಗಳಿಂ ॥ ''

ಎಂಬಲ್ಲಿಯ ''ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು'' ಎಂಬ ಮಾತು ಆಂಡಯ್ಯನ ಹೃದಯಾಂತರಾಳದಿಂದ ತೂರಿ ಬಂದುದಾಗಿದೆ.

ಕರ್ನಾಟಕದ ಮಲ್ಲಿಗೆ, ಸಂಪಿಗೆ, ದಾಳಿಂಬೆ, ತೆಂಗು, ಮಾವುಗಳು ಆಂಡಯ್ಯನನ್ನು ಮಂತ್ರಮುಗ್ಧಗೊಳಿಸಿವೆ. ಕೋತಿಗಳು ಬೀಳಿಸಿದ ಎಳಗಾಯಿಗಳಿಂದ ಒಸರಿದ ನೀರು ಅಲ್ಲಿಯ ಬನಗಳಲ್ಲಿ ಮಡುಗಟ್ಟಿ ನಿಲ್ಲುತ್ತಿತ್ತು ಎಂಬ ಆಂಡಯ್ಯನ ಮಾತು ಈ ಮೊದಲು ನೋಡಿದ ಪಂಪನ ಮಾತಿನಷ್ಟೇ ಅಭಿಮಾನಪೂರ್ಣವೂ ಶಕ್ತಿಶಾಲಿಯೂ ಆಗಿದೆ. ಉರಿಬಿಸಿಲಿನಲ್ಲಿ ನಡೆದು ದಣಿವಾದಾಗ ಅಲ್ಲಿಯ ಬತ್ತದ ತೆನೆಗಳು ಕಾಲಿಗೆರಗಿ ಒಂದು ಬಗೆಯ ಹಿತವನ್ನುಂಟು ಮಾಡುತ್ತಿದ್ದವೆಂಬ ಆಂಡಯ್ಯನ ಮಾತು ಕಲ್ಪಿಸಿಕೊಂಡಷ್ಟೂ ಖುಷಿ ಕೊಡಬಲ್ಲುದಾಗಿದೆ. ಹಾಗೆಯೇ ಅಚ್ಚಗನ್ನಡ ನುಡಿಯ ಬಳಕೆಯ ವಿಷಯದಲ್ಲಿ ಆಂಡಯ್ಯ ತೊಟ್ಟ ವ್ರತವು ಇಂದಿಗೂ ಕನ್ನಡಕ್ಕೆ ಪ್ರೇರಕಶಕ್ತಿಯಾಗಿ-ಶ್ರೀರಕ್ಷೆಯಾಗಿ ನಿಂತಿದೆಯೆನ್ನಬಹುದು.

೧೬ನೆಯ ಶತಮಾನದ ನಂಜುಂಡಕವಿಯು ತನ್ನ 'ರಾಮನಾಥ ಚರಿತೆ'ಯಲ್ಲಿ ಹತ್ತಾರು ಪದ್ಯಗಳಲ್ಲಿ ಕರ್ನಾಟಕವನ್ನು ಬಣ್ಣಿಸಿದ್ದಾನೆ.

ವೀರರಲ್ಲದೆ ಹಂದೆಗಳು ವಿತರಣಗುಣ
ಶೂರರಲ್ಲದೆ ಲೋಭಿಗಳು
ಸಾರಗುಣಗ್ರಾಹಿ ರಸಿಕರಲ್ಲದೆ ದುರ್ವಿ
ಕಾರಿಗಳಿಲ್ಲಾ ನೆಲದೊಳು,
ಆಡುವರಿಲ್ಲನೃತವನಾಜಿರಂಗದೊ
ಳೋಡುವರಿಲ್ಲೆರೆದುದನು
ಕಡೆ ಕೊಡದರಿಲ್ಲಾ ನಾಡ ಮನುಜರ
ಗಾಡಿಯನೇನ ಬಣ್ಣಿಪೆನು

ಎಂಬ ಪದ್ಯಗಳಲ್ಲಿ ಕನ್ನಡ ಜನತೆಯ ಗುಣವಿಶೇಷಗಳನ್ನು ನಂಜುಂಡ ಕವಿ ಕೊಂಡಾಡಿದ್ದಾನೆ.

೧೭ನೆಯ ಶತಮಾನದ ಮಹಲಿಂಗರಂಗ ಎಂಬ ಕವಿ ತನ್ನ 'ಅನುಭವಾಮೃತ' ಎಂಬ ಕೃತಿಯಲ್ಲಿ, ಕನ್ನಡಕ್ಕಿಂತ ಹೆಚ್ಚಿನ ಯಾವ ಗುಣ ಸಂಸ್ಕೃತದಲ್ಲಿದೆಯೆಂದು ಅಭಿಮಾನದಿಂದ ಪ್ರಶ್ನಿಸಿದ್ದಾನೆ.

ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು?

ಎಂದು ಪ್ರಶ್ನಿಸಿದ ಕವಿ ''ನಮ್ಮ ಮಾತೃಭಾಷೆಯ ಮೂಲಕವೆ ನಮಗೆ ಮೋಕ್ಷ ಸಾಧ್ಯ'' ಎಂಬ ವಾಸ್ತವಾಂಶವನ್ನು ಕನ್ನಡ ಜನತೆಗೆ ತಿಳಿಸಿದ್ದಾನೆ.

ಕನ್ನಡ ನಾಡೊಳು ಕಲಿಯುಗ ಪುಗದಿರ್ಕೆ
ಕನ್ನಡಿಗರು ಘನರಕ್ಕೆ

ಎಂಬ ಹಾರೈಕೆ 'ಹದಿಬದೆಯ ಧರ್ಮ'ದ ಹೊನ್ನಮ್ಮನದು (೧೬೮೦).

ಕನ್ನಡದ ನೂರಾರು ಶಾಸನಗಳು ಕನ್ನಡ ನಾಡು-ನುಡಿ-ಸಂಸ್ಕೃತಿಯ ಮೇಲಿನ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದ್ದು ಪ್ರಾತಿನಿಧಿಕವಾಗಿ ೨-೩ ಶಾಸನಪಾಠಗಳನ್ನಿಲ್ಲಿ ಉದಾಹರಿಸಲಾಗಿದೆ.

೧೧೦೦ರ ದಾವಣಗೆರೆ ಶಾಸನವು ಬನವಾಸಿಯನ್ನು ''ಸುಖದಾಗರ ಸತ್ಯದ ತವರ್ಮನೆ.... ಎಂದು ಮೊದಲಾಗಿ ಗುರುತಿಸಿ ಬಣ್ಣಿಸಿದೆ:

ಇದು ಸುಖದಾಗರಂ ಸಿರಿಯ ಪುಟ್ಟಿದ ಸಾಗರಮಾರಯಲ್ ಸಮು
ಭ್ಯುದಯದ ಗೊತ್ತು ಸತ್ಯದ ತವರ್ಮನೆ ಚಿತ್ತಜನಿರ್ಕೆದಾಣಮು
ನ್ಮದಯುವತೀ ಜನಂಗಳೆರವಟ್ಟು ಬುಧಾಳಿಯ ಜನ್ಮಭೂಮಿಯೆಂ
ಬುದನೆನೆ ಶೋಭೆಯಂ ತಳೆದುದಿಂತನಿಶಂ ಬನವಾಸಿ ಮಂಡಲಂ

ಅದಂತೆಯೇ ಸೊರಬದ (೧೧೪೫)ಒಂದು ಶಾಸನವು ಕರ್ನಾಟಕ ಮತ್ತು ಬನವಾಸಿಗಳ ಸೊಗಸನ್ನು ಈ ರೀತಿ ಸೆರೆಹಿಡಿದಿದೆ:

ವರ ರತ್ನಾಕರದಿಂದಳಂಕರಿಸಿ ಮೆಯ್ವೆರ್ಚಿರ್ದ ಭೂದೇವಿನಾ
ದರದಿಂ ಕುಂತಳದಂತೆ ಕುಂತಳ ಸುದೇಶಂ ತೋರ್ಕುಮಾ ದೇಶಕಾ
ದರಣೀಯಂ ಬನವಾಸಿದೇಶಮದು ಭೋಗಕ್ಕಾಗರಂ ಸೌಖ್ಯಸಾ
ಗರಮಾಹ್ಲಾದಕರಂ ನಿರಂತರವಿಳಾಸಾವಾಸಲಕ್ಷ್ಮೀಕರಂ ॥

ಸೊರಬದ ಇನ್ನೊಂದು ಶಾಸನವು (೧೪೦೮)ಕರ್ನಾಟಕವನ್ನು ಹೀಗೆ ಪರಿಚಯಿಸಿ ಕೊಟ್ಟಿದೆ:

''ಜಿನಧರ್ಮಾವಾಸಮಾದತ್ತಮಳವಿನಯದಾಗಾರಮಾದತ್ತು ಪದ್ಮಾ
ಸನನಿರ್ಪಾ ಸದ್ಮಮಾದತ್ತತಿವಿಶದ ಯಶೋಧಾಮಮಾದತ್ತು ವಿದ್ಯಾ
ಧನಜನ್ಮಸ್ಥಾನಮಾದತ್ತಸಮತರಳಗಂಭೀರ ಸದ್ಗೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾ ಮಹಿಮೆಯೊಳೆಸೆಗುಂಚಾರು ಕರ್ಣಾಟದೇಶಂ ॥

ಹೀಗೆ ''ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ'' ಎಂಬ ನಿಲುವು ಕನ್ನಡದ ಬಹುತೇಕ ಕವಿಗಳಲ್ಲಿ-ಶಾಸನಕಾರರಲ್ಲಿ ಮೂಡಿರುವುದನ್ನು ನಾವು ಗುರುತಿಸಬಹುದು. ಒಟ್ಟಾರೆ ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ದೇಶ-ಭಾಷಾಭಿಮಾನಗಳ ಕುರಿತಾದ ಅಧ್ಯಯನ ಸಾಕಷ್ಟು ರೋಚಕವಾಗಬಲ್ಲುದು. ಇಂಥ ಎಲ್ಲ ವಿವರಗಳಿಂದ ನಮಗೆ ಒಂದೆಡೆ ಕವಿಗಳು ಹೊಂದಿದ್ದ ಅಭಿಮಾನದ ಅರಿವಾದರೆ ಇನ್ನೊಂದೆಡೆ ನಮ್ಮ ದೇಶ-ಭಾಷೆಗಳ ಚರಿತ್ರೆಯ ಪರಿಚಯವಾಗುತ್ತದೆ.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕನ್ನಡಾಭಿಮಾನದ ಸ್ವರೂಪ

ಬಿ.ಎಸ್. ಗೀತಾ

ಸಾಹಿತ್ಯ ಚರಿತ್ರೆ ಕೇವಲ ಘಟನೆಗಳ ಪಟ್ಟಿಯಲ್ಲ. ಅದು ಒಬ್ಬ ಕವಿಯ ಅಥವಾ ಒಂದು ಅವಧಿಯ ಜೀವನಾನುಭವದ ಸಾರ. ಈ ಅನುಭವ ಅವರ ಕ್ರಿಯಾಶೀಲತೆಯ ಲಕ್ಷಣಗಳನ್ನು ರೂಪಿಸುತ್ತದೆ; ಸ್ವರೂಪವನ್ನು ನಿರ್ಧರಿಸುತ್ತದೆ. ವಿಚಾರಗಳು, ಸಂಸ್ಕೃತಿ, ಸಂಪ್ರದಾಯ, ಪುರಾಣ, ನಂಬಿಕೆ, ಕಥೆ, ಒಟ್ಟಾರೆ ಕವಿಯ ಗ್ರಹಿಕೆಗೆ ಬರುವ ಅಂಶಗಳೆಲ್ಲಾ ಒಂದಾಗಿ ಸಾಹಿತ್ಯದ ಆಧಾರವಾಗುತ್ತದೆ. ಈ ಎಲ್ಲ ಆಧಾರಗಳನ್ನು ಬಳಸಿಕೊಂಡು ಸಿದ್ಧವಾದ ಸಾಹಿತ್ಯದ ಸ್ವರೂಪವು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಈ ಬದಲಾವಣೆಗಳ ಕಾರಣಗಳನ್ನು ಆಧಾರ ಗಳಲ್ಲಿಯೇ ಹುಡುಕಬಹುದಾದರೂ ಸಾಹಿತ್ಯ ಚರಿತ್ರಕಾರನು ಬದಲಾವಣೆಯ ಅಂಶಗಳ ನಿರೂಪಣೆಗೆ ಹೆಚ್ಚು ಗಮನ ಕೊಡ ಬೇಕಾಗುತ್ತದೆ.

ಸಾಹಿತ್ಯದ ಮಾಧ್ಯಮ ಭಾಷೆ, ಭಾಷೆಯೊಂದಿಗೆ ಬೆರೆತುಕೊಂಡ ಇನ್ನೊಂದು ಅಂಶ ಪ್ರಕಾರಗಳದು. ಇದು ಒಂದೇ ಬಗೆಯಾಗಿರುವುದಿಲ್ಲ. ಈ ಬದಲಾವಣೆಯ ಹಿನ್ನೆಲೆಯಲ್ಲಿ ಒಂದು ಜನತೆಯ ಜೀವನದ ಚರಿತ್ರೆಯ ನಾನಾ ಘಟ್ಟಗಳು ಕಾಣಿಸಿಕೊಳ್ಳುತ್ತವೆ; ಅಭಿರುಚಿಯ ಮಾರ್ಪಾಡು ವ್ಯಕ್ತವಾಗುತ್ತದೆ. ಸಾಹಿತ್ಯಿಕ ಚಳವಳಿಗಳೂ ಸಾಹಿತ್ಯ ಸ್ವರೂಪದ ಬದಲಾವಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ವಿಚಾರ ಪ್ರತಿಪಾದನೆ, ರೂಪಪರಿವರ್ತನೆ ಇವುಗಳಿಗೆ ಆಯಾ ಕಾಲದ ನಂಬಿಕೆ ಶ್ರದ್ಧೆಗಳು ಕಾರಣವಾಗುತ್ತವೆ. ಈ ಚಳವಳಿಗಳ ಪರಿಮಿತಗಳು ಸಾಹಿತ್ಯದ ಪರಿಮಿತಗಳನ್ನು ಪ್ರತಿನಿಧಿಸುತ್ತವೆ. ಭಾಷೆ, ಪ್ರಕಾರ, ಚಳವಳಿಗಳು ಸಾಹಿತ್ಯ ಚರಿತ್ರಕಾರನಿಗೆ ವಿಶೇಷ ಸಾಮಗ್ರಿಗಳನ್ನೊದಗಿಸುತ್ತವೆ. ಇಂತಹ ಸಾಮಗ್ರಿಗಳನ್ನು ಬಳಸಿ ಕೊಂಡು ಸೂಕ್ಷ್ಮವಾದ ಅಧ್ಯಯನ ನಡೆಸುವುದು ಅಗತ್ಯವಾಗುತ್ತದೆ.

ಮಧ್ಯಕಾಲೀನ ಸಾಹಿತ್ಯ ಸ್ವರೂಪದಲ್ಲಿ ಭಾಷೆಗೆ ವಿಶಿಷ್ಟಸ್ಥಾನವಿದೆ. ವಚನ, ರಗಳೆ, ಷಟ್ಪದಿ, ಸಾಂಗತ್ಯಗಳಲ್ಲಿ ಬಳಕೆಯಾಗುವ ಭಾಷೆಗಳಲ್ಲಿಯೇ ಸಾಕಷ್ಟು ವ್ಯತ್ಯಾಸವಿದೆ. ಭಾಷೆಯನ್ನು ಬಳಸುವ ರೀತಿ ಸಾಹಿತ್ಯದ ಈ ವಿವಿಧ ಪ್ರಕಾರಗಳನ್ನು ಗುರುತಿಸಲು ಸಾಧ್ಯವಾಗುವುದಲ್ಲದೆ, ಆಯಾ ಪ್ರಕಾರಗಳಲ್ಲಿ ಬಳಕೆಯಾಗುವ ಭಾಷೆಯು ವ್ಯಕ್ತಿ, ಕಾಲ, ಪರಿಸರಗಳಿಗೆ ಅನುಗುಣವಾಗಿ ಭಿನ್ನವಾಗಿ ಕಂಡುಬರುತ್ತದೆ. ಸಾಹಿತ್ಯದ ಈ ವಿವಿಧ ಪ್ರಕಾರಗಳಲ್ಲಿ ಭಾಷೆ ಯಾವ ಬಗೆಯಲ್ಲಿ ಬಳಕೆಯಾಗಿದೆ ಎಂಬುದನ್ನು ಸೂಕ್ಷ್ಮಾತಿ ಸೂಕ್ಷ್ಮವಾಗಿ ಪರಿಶೀಲಿಸಿದರೆ ಆಗ ಅವುಗಳಲ್ಲಿ ಬಳಕೆಯಾಗಿರುವ ಭಾಷೆಯ ಪ್ರಕಾರ ಕಂಡುಬರುತ್ತದೆ.

ಮಧ್ಯಕಾಲೀನ ಸಾಹಿತ್ಯದಲ್ಲಿ ಕನ್ನಡದ ಅಭಿಮಾನ ಯಾವ ರೀತಿ ವ್ಯಕ್ತಗೊಂಡಿದೆ? ಕನ್ನಡಕ್ಕಾಗಿ, ಕನ್ನಡತನದ ಉಳಿವಿಗಾಗಿ, ಉದ್ಧಾರಕ್ಕಾಗಿ ತಳೆದಂತಹ ಧೋರಣೆ, ಪ್ರತಿಕ್ರಿಯೆ, ಪ್ರತಿಭಟನೆಗಳೆಂತಹವು? ಭಾಷೆ, ಶೈಲಿ, ವಸ್ತು, ಪ್ರಕಾರಗಳಲ್ಲಿ ಕನ್ನಡತನವನ್ನು ಕವಿಗಳು ಯಾವ ರೀತಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ನೇರವಾಗಿ ಅಂದರೆ ವಾಚ್ಯವಾಗಿ ಸೂಚ್ಯವಾಗಿ ಕನ್ನಡತನದ ಸೊಲ್ಲು ಅನುರಣಿತವಾಗಿ ಬಂದಂತಹ ಮಾರ್ಗ ಯಾವುದು? ಇದೆಲ್ಲವನ್ನು - ನಯಸೇನ, ವಚನಕಾರರು, ಆಂಡಯ್ಯ ದಾಸರು, ಹರಿಹರ, ಕುಮಾರವ್ಯಾಸ, ನಂಜುಂಡ, ಮಹಾಂಲಿಗರಂಗರ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದೇ ಈ ಪ್ರಬಂಧದ ಉದ್ದೇಶ.

ಕನ್ನಡ ಬೆಳೆದು ಬಂದ ಇತಿಹಾಸ

'ಕನ್ನಡ' ನಾಡಿನ ಮಾತೃಭಾಷೆಯಾಗಿದ್ದರೂ ತನ್ನ ಅಸ್ತಿತ್ವವನ್ನು ಕಂಡು ಕೊಳ್ಳಲು, ಶಕ್ತಿಯುತವಾಗಿ ಬೆಳೆಯಲು ಇದ್ದಂತಹ ತೊಡಕುಗಳೇನು? ಅದರ ನಿವಾರಣೆಗಾಗಿ ಯಾವ ರೀತಿಯಲ್ಲಿ ಹೋರಾಡಿತು, ಆ ಪ್ರಯತ್ನದಲ್ಲಿ ತನ್ನ ಸಫಲತೆಯನ್ನು ಹೇಗೆ ಕಂಡುಕೊಂಡಿತು ಎನ್ನುವ ವಿಷಯವನ್ನು ತಿಳಿಯಲು ಮೊದಲು ವಿದ್ವಾಂಸರ ಹೇಳಿಕೆಗಳತ್ತ ಗಮನ ಹರಿಸೋಣ.

''ಕನ್ನಡ ಸಾಹಿತ್ಯದ ಆರಂಭಕಾಲಸಂಸ್ಕೃತಮಯವಾಗಿರುವುದನ್ನು ನೋಡಿದರೆ, ಮುಂದಿನ ಕವಿಗಳು ಕನ್ನಡದಲ್ಲಿ ತಮ್ಮ ಕಾವ್ಯ ಭಾಷೆಯನ್ನು ರೂಪಿಸಿಕೊಳ್ಳುವುದರಲ್ಲಿ ಇದ್ದ ದೊಡ್ಡ ಆತಂಕ ಸಂಸ್ಕೃತದ್ದು. ನಮ್ಮ ಕನ್ನಡ ಕವಿಗಳ ಮುಖ್ಯವಾದ ಸಮಸ್ಯೆ ಎಂದರೆ, ಕನ್ನಡ ಕಾವ್ಯ ಭಾಷೆಯಲ್ಲಿ ಸಂಸ್ಕೃತವನ್ನು ಎಷ್ಟರಮಟ್ಟಿಗೆ ಉಳಿಸಿಕೊಳ್ಳುವುದು. ಹೀಗಾಗಿ ಸಂಸ್ಕೃತದ ಬಗ್ಗೆ ಕನ್ನಡ ಕಾವ್ಯ ಪರಂಪರೆಯಲ್ಲಿ ಕನ್ನಡ ಕವಿಗಳು ತೋರಿದ ಪ್ರತಿಕ್ರಿಯೆಗಳೇ ನಮ್ಮ ಕವಿಗಳ ಭಾಷಾಪ್ರಜ್ಞೆಯನ್ನು ಗುರುತಿಸುವ ಮೂಲಮಾನವಾಗಿದೆ''[೧]

''ಸಂಸ್ಕೃತವನ್ನು, ಕನ್ನಡ ಕಾವ್ಯರಚನೆಗೆ ಒಂದು ಆತಂಕವೆಂದು ಭಾವಿಸದೆ, ಅನುಕೂಲವೆಂದೇ ತಿಳಿದ ಪಂಡಿತ ಕವಿಗಳ ಧೋರಣೆಗೆ ಮುಖ್ಯ ಕಾರಣ. ಸಂಸ್ಕೃತವೇ ವಿದ್ವತ್ತಿನ ಹಾಗೂ ಕಾವ್ಯದ ಭಾಷೆ ಎಂಬ ಬಲವಾದ ಒಂದು ನಂಬಿಕೆಯೆ ಎಂದರೆ ತಪ್ಪಾಗಲಾರದು. ಕನ್ನಡದಲ್ಲಿ ಕಾವ್ಯರಚನೆ

---

೧ ಕನ್ನಡ ಕವಿಗಳ ಭಾಷಾಪ್ರಜ್ಞೆ: ಸಮಗ್ರ ಗದ್ಯ-೨; ಜಿ.ಎಸ್. ಶಿವರುದ್ರಪ್ಪ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೪, ಪು. ೧೩೮

ಮಾಡತಕ್ಕವರಿಗೆ, ಹಿನ್ನೆಲೆಯಾಗಿ ಇದ್ದ ಮಾದರಿಗಳೆಲ್ಲಾ ಸಂಸ್ಕೃತ ಕಾವ್ಯಗಳೆ. ತಮ್ಮ ಶ್ರೇಷ್ಠತೆ ತಾವು ಕೇವಲ ಕನ್ನಡದಲ್ಲಿ ಕಾವ್ಯರಚನೆ ಮಾಡಿದ್ದರಿಂದ ಮಾತ್ರ ಬರಲಾರದೆಂಬ ಶಂಕೆ ಅನೇಕರಿಗೆ. ಹೀಗಾಗಿ ಕನ್ನಡದಲ್ಲಿ ಬರೆದರೇನು, ಸಂಸ್ಕೃತದಲ್ಲಿ ಬರೆದೇನು-ಎಂದುಕೊಂಡು, ಕಾವ್ಯ ಭಾಷೆಯ ಬಗ್ಗೆ ನಿರ್ದಿಷ್ಟವಾದ ಯಾವ ವಿಚಾರವನ್ನು ಅಷ್ಟಾಗಿ ಮಾಡದೆ, ಬಹುಮಟ್ಟಿಗೆ ಸಂಸ್ಕೃತದಲ್ಲೇ ಬರೆದು, ವೃತ್ತದ ತುದಿಗೆ ಒಂದು ಕನ್ನಡ ಪ್ರತ್ಯಯವನ್ನು ಹಾಕಿ ತೃಪ್ತರಾದ ಪಂಡಿತ ಕವಿಗಳ ಧೋರಣೆ ಆಶ್ಚರ್ಯಕರವಾಗಿದೆ.''[೨]

''ಮೂಲತಃ ಆರ್ಯರಾದ ಬ್ರಾಹ್ಮಣರಿಗೆ ದ್ರಾವಿಡರ ಬದುಕಿನ ಸರ್ವಚಟುವಟಿಕೆಗಳೆಲ್ಲ ಶೂದ್ರಸಮಾನ. ದ್ರಾವಿಡರ ಭಾಷೆಗಳಲ್ಲೊಂದಾದ ಕನ್ನಡದ ವಿಷಯವಾಗಿಯೂ ಅವರು ಕೀಳುಭಾವನೆ ತಾಳಿದುದು ಸ್ವಾಭಾವಿಕವೇ ಆಗಿದೆ. ಇದರಿಂದಾಗಿ ಅನಿವಾರ್ಯ ಪ್ರಸಂಗದ ಶೂದ್ರರ ಉಪಯೋಗದಂತೆ ಕನ್ನಡವನ್ನು ಅವರು ಸೀಮಿತವಾಗಿ ಬಳಸತೊಡಗಿದರು. ಯಾವುದೇ ಭಾಷೆ 'ಮಾತೃಭಾಷೆ'ಯಾಗುವುದು ಭಾವನಾಪ್ರಧಾನ ಜನಾಂಗದಲ್ಲಿ. ಇದಕ್ಕೆ ವಿರುದ್ಧವೆನ್ನುವಂತೆ ಬುದ್ಧಿ ಪ್ರಧಾನವಾಗಿರುವ ಬ್ರಾಹ್ಮಣ ಜನಾಂಗಕ್ಕೆ ಯಾವುದೇ ಭಾಷೆ ಮಾತೃಭಾಷೆಯಾಗದುದು ತೀರ ಸ್ವಾಭಾವಿಕವಾಗಿದೆ. ಹೀಗಾಗಿ ಬ್ರಾಹ್ಮಣಮನದಲ್ಲಿ ಕನ್ನಡದ ಬಗ್ಗೆ ಮಾತೃಭಾಷಾ ವ್ಯಾಮೋಹವಾಗಲೀ, ಮಾಧ್ಯಮಕ್ಕೆ ಹದಗೊಳಿಸಬೇಕೆಂಬ ಆಸಕ್ತಿಯಾಗಲೀ ಸುಳಿಯಲಿಲ್ಲ''[೩]

''ದಾಸಕೂಟದ ಉಗಮಕಾಲವಾಗಿರಬಹುದಾದ ಕ್ರಿ.ಶ. ೧೫ನೇ ಶತಮಾನದವರೆಗೆ ಬ್ರಾಹ್ಮಣ ಕವಿಗಳು ಕೇವಲ ರಾಜಶಾಸನಗಳಿಗೆ, ಕಾದಂಬರಿಯಂತಹ ಮನರಂಜನೆಯ ಕಥೆಗಳಿಗೆ ಮತ್ತು ಛಂದಸ್ಸು, ಕಾಮಶಾಸ್ತ್ರ, ಅಶ್ವಶಾಸ್ತ್ರ ಮುಂತಾದ ಲೌಕಿಕ ವಿಚಾರಗಳಿಗೆ ಮಾತ್ರ ಕನ್ನಡವನ್ನು ಬಳಸುತ್ತಿದ್ದರೆನ್ನಲು ಬಹುಶಃ ಒಂದೇ ಒಂದು ಅಪವಾದವೆಂದರೆ ಕ್ರಿ.ಶ.ಸು. ೧೧೮೫ರ ರುದ್ರಭಟ್ಟನ ಜಗನ್ನಾಥವಿಜಯ.'' ''ರಾಮಾನುಜಮತವು ಹನ್ನೆರಡನೆಯ ಶತಮಾನದ ಆದಿಯಲ್ಲಿಯೇ ಆರಂಭವಾದರೂ, ಆ ಮತಬೋಧಕಗಳಾದ ಅಥವಾ ಆ ಮತದ ಕವಿಗಳಿಂದ ರಚಿತವಾದ ವಿಷ್ಣುಮಹಿಮೆಯನ್ನು ಬೋಧಿಸುವ ಗ್ರಂಥಗಳಾವುವೂ (ಕನ್ನಡದಲ್ಲಿ) ಹದಿನೇಳನೇ ಶತಮಾನದವರೆಗೂ ಹುಟ್ಟಿದಂತೆ ಕಂಡುಬರುವುದಿಲ್ಲ'' ಇವರೆಲ್ಲ ಗತಾನುಗತಿಕ ಮನೋಭಾವದಿಂದ ತತ್ತ್ವದ ಮಾಧ್ಯಮವನ್ನು ಸಂಸ್ಕೃತದಿಂದ ಕನ್ನಡದತ್ತ ತಿರುಗಿಸುವ ಸಂಕಲ್ಪವನ್ನು ಸಕಾಲದಲ್ಲಿ ಮಾಡಲಾಗದುದಕ್ಕೆ ಕಾರಣ: ಕನ್ನಡ ಮುಂತಾದ ಪ್ರಾಂತೀಯ ಭಾಷೆಗಳ ಮೇಲೂ ಅವರ ತಿರಸ್ಕಾರವಲ್ಲ, ಸಂಸ್ಕೃತಕ್ಕೆ ಒದಗಿಬಂದಿದ್ದ ಪುರಸ್ಕಾರ ಮತ್ತು ವ್ಯಾಪಕತೆ. ಅದರ ಹಿಡಿತದಿಂದ ತಪ್ಪಿಸಿಕೊಳ್ಳುವ ದಿಟ್ಟತನದ ಪ್ರವೃತ್ತಿಯಾಗಲಿ, ಮುಂಗಾಣ್ಕೆಯಾಗಲಿ ಅವರಲ್ಲಿ ಮೂಡಲು ಬಹುಕಾಲ ಬೇಕಾಯಿತು''[೪]

''ಬ್ರಾಹ್ಮಣರಂತೆ ಜೈನರೂ ಕನ್ನಡಕ್ಕೆ ಪರಕೀಯರು, ಜೈನರು ಯಾವುದೇ ಪ್ರಾಂತಕ್ಕೆ

---

೨. ಅಲ್ಲೇ ಅದೇ, ಪು. ೧೩೯

೩. ಕನ್ನಡಿಗರ ಮಾತೃಭಾಷಾ ಪ್ರಜ್ಞೆಯ ಇತಿಹಾಸ: ಮಾರ್ಗ ೧, ಡಾ|| ಎಂ.ಎಂ. ಕಲಬುರ್ಗಿ, ನರೇಶ್ ಅಂಡ್ ಕಂಪನಿ, ಬೆಂಗಳೂರು, ೧೯೮೮, ಪು. ೬೨೧

೪. ಶಿವದಾಸ ಗೀತಾಂಜಲಿ: ಪೀಠಿಕೆ, ಎಲ್. ಬಸವರಾಜು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೦ (ದ್ವಿ.ಮು.), ಪು. ೧೨

ಹೋಗಲಿ, ಅಲ್ಲಿ ಅವರು ಮಾಡಿದ ಮೊದಲ ಕೆಲಸವೆಂದರೆ-ಆಯಾ ಪ್ರಾಂತ್ಯಗಳ ಸ್ಥಾನಿಕ ಭಾಷೆಯನ್ನು ಕಲಿತರು. ಆ ಭಾಷೆಯನ್ನು ಕಲಿತ ಅವರು ಆ ಪ್ರದೇಶದ ಜನರೊಂದಿಗೆ ತಾವು ಬೇರೆಯವರಲ್ಲ ಎಂಬಂತೆ ಬಾಳಲು ಸಾಧ್ಯವಾಯಿತು. ಅಲ್ಲದೆ ಪ್ರಾದೇಶಿಕ ಭಾಷೆಯನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಂಡು, ಆ ಭಾಷೆಯಲ್ಲಿ ಪ್ರಭುತ್ವವನ್ನು ಸಂಪಾದಿಸಿ, ಅದರ ಅಂತಸ್ತನ್ನು ಸಂಸ್ಕೃತ, ಪ್ರಾಕೃತ ಭಾಷೆಗಳ ಅಂತಸ್ತಿಗೆ ಏರಿಸಲು ಪ್ರಯತ್ನಿಸಿದರು. ಸಂಸ್ಕೃತ, ಪ್ರಾಕೃತ ಭಾಷೆಯಲ್ಲಿದ್ದ ಜೈನಸಾಹಿತ್ಯವನ್ನು ಜೈನಕವಿಗಳು ಚೆನ್ನಾಗಿ ಓದಿ ಕೊಂಡವರಿರುತ್ತಿದ್ದರೆಂಬುದನ್ನು ಬೇರೆ ಹೇಳುವ ಅಗತ್ಯವಿಲ್ಲ. ಮಾತೃಭಾಷೆಯಲ್ಲಿ ಬರೆದ ಗ್ರಂಥಗಳು ಕೇವಲ ರಾಜಸಭಾಲಂಕೃತರಾದ ಕವಿಗಳಿಗಷ್ಟೇ ಮೀಸಲಾಗಿ ಉಳಿಯದೆ ಸಾರ್ವಜನಿಕರಿಗೂ ಓದಲು ಸಾಧ್ಯವಾಗುವಂತಾದವು.''[೫]

''ಮಾತೃಭಾಷಾ ಮಾಧ್ಯಮ ಸೂತ್ರದಲ್ಲೇನಾದರೂ ಗುಣಾಂಶವಿದ್ದರೆ, ಕನ್ನಡ ನಾಡಿನಲ್ಲಿ ಅದನ್ನು ಕಂಡುಕೊಂಡವರಲ್ಲಿ ಬಸವಾದಿ ಪ್ರಮಥರು ಮೊದಲಿಗರಲ್ಲದಿದ್ದರೂ, ಆ ಸೂತ್ರವನ್ನು ಹೃದಯಪೂರ್ವಕವಾಗಿ ಮತ್ತು ಸರ್ವವ್ಯಾಪಕವಾಗಿ ಸಮನ್ವಯಿಸಿಕೊಂಡವರಲ್ಲಿ ಅವರೇ ಪ್ರಥಮರು. ಅಂದರೆ, ಜೈನರು ಕನ್ನಡ ಮಾಧ್ಯಮವನ್ನು ಒಪ್ಪಿಕೊಂಡರೂ, ಮೊದಮೊದಲಿಗೆ, ಅದಕ್ಕೊಂದು ಮಿತಿಯನ್ನು ಕಲ್ಪಿಸಿದ್ದರು. ಹೀಗೆ ಕನ್ನಡ ಪ್ರೇಮವು ಶರಣರ ಮನೋನಾಳಗಳಲ್ಲಿ ಇಷ್ಟು ಅಚ್ಚಹಸಿರಾಗಿ ಹರಿದು, ಕಂಠನಾಳದಲ್ಲಿ ನಿಚ್ಚ ಹೊಸದಾಗಿ ಹೊಮ್ಮಿದುದಕ್ಕೆ ಕಾರಣ, ಅವರಿಗೆ ಸಂಸ್ಕೃತ ಸಾರಸ್ವತ ಪ್ರಪಂಚದಲ್ಲಿ ಅಧಿಕಾರಯುತ ಪ್ರವೇಶವಿದ್ದುದರಿಂದಲೇ ಹೊರತು ತದಭಾವದಿಂದಲ್ಲ.''[೬]

''ಬಸವಾದಿ ಪ್ರಮಥರಿಗಾದರೋ ಸಂಸ್ಕೃತದ ಬಗ್ಗೆ ದ್ವೇಷವಾಗಲಿ, ವ್ಯಾಮೋಹವಾಗಲಿ ಇಲ್ಲದೆ, ಕನ್ನಡದ ಬಗ್ಗೆ ಅಭಿಮಾನವೂ ಭರವಸೆಯೂ ಇದ್ದುದು ಅವರ ಸಮಚಿತ್ತವನ್ನೂ ಸಾಮಾನ್ಯರಲ್ಲಿ ಹುದುಗಿರುವ ಸಾಧ್ಯತೆಗಳನ್ನು ಗುರುತಿಸುವ ಕಾಣ್ಕೆಯನ್ನು ತೋರಿಸುತ್ತದೆ. ಈ ಗುಣಗಳು ಮಿಕ್ಕವರಲ್ಲಿ ಇಲ್ಲದುದರಿಂದ, ಅವರು ಕನ್ನಡವನ್ನು ಕಾವ್ಯಕ್ಕೆ, ಅದಕ್ಕಿಂತ ಹೆಚ್ಚಾಗಿ ಧಾರ್ಮಿಕ ಕಾವ್ಯಕ್ಕೆ ಮತ್ತು ಅದಕ್ಕಿಂತ ಹೆಚ್ಚಾಗಿ ಆಧ್ಯಾತ್ಮಿಕ ಶಾಸ್ತ್ರಸಿದ್ಧಾಂತಗಳಿಗೆ ಬಳಸಿಕೊಳ್ಳಲು ಶತಮಾನಗಳ ಕಾಲ ಹಿಂತೆಗೆದರು. ಈ ಕಾರಣದಿಂದಲೇ ಬ್ರಾಹ್ಮಣ ಸಾಹಿತ್ಯವು-ಕನ್ನಡ ಮಾಧ್ಯಮದಿಂದ-ಧಾರ್ಮಿಕ ಕ್ಷೇತ್ರದಲ್ಲಿ ಮೊಳೆತು ರೂಢಮೂಲವಾಗಲು ಬಹಳ ತಡವಾಯಿತು. ವಿಜಯನಗರ ಸಾಮ್ರಾಜ್ಯ ಕಿರೀಟದ ಕೆಲವು ಕಟ್ಟಾಣಿಗಳಾದ ಶ್ರೀಪಾದರಾಯ ಮತ್ತು ವ್ಯಾಸರಾಯರಂತಹ ದಿಟ್ಟತನ, ಔದಾರ್ಯ, ವಿವೇಕಗಳಿಂದ ಕೂಡಿದ ಮಠಾಧೀಶರೂ, ಭಾವಜ್ಞನೂ, ಭಾಷಾವಿದನೂ, ಭಾಗವತ ಶಿರೋಮಣಿಯೂ ಆದ ಪುರಂದರದಾಸನಂತಹ ಅಪೂರ್ವ ಚೇತನಗಳೂ ಬಾರದೇ ಹೋಗಿದ್ದರೆ-ಅದು ಇನ್ನೂ ತಡವಾಗುತ್ತಿತ್ತು.''[೭]

---

೫. ಕನ್ನಡ ಜೈನ ಧಾರ್ಮಿಕ ಸಾಹಿತ್ಯ: ಕರ್ನಾಟಕ ಮತ್ತು ಜೈನ ಸಂಸ್ಕೃತಿ, ಬಿ.ಎಸ್. ಕುಲಕರ್ಣಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫, ಪು. ೫೧

೬. ಶಿವದಾಸ ಗೀತಾಂಜಲಿ, ಎಲ್. ಬಸವರಾಜು, ಪು. ೧೩

೭. ಅಲ್ಲೇ, ಅದೇ, ಪು. ೧೧,೧೨

ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿದ ಮೇಲೆ ಕನ್ನಡ ಬೆಳವಣಿಗೆಗೆ ಇದ್ದ ತೊಂದರೆ ಸಂಸ್ಕೃತವೆಂದೂ ಅದನ್ನು ಬದಿಗಿರಿಸಿ ಕನ್ನಡ ತನ್ನ ಸ್ಥಾನವನ್ನು ಕಂಡುಕೊಳ್ಳಲು ಸಮರ್ಥವಾದ ಕಾಲದ ಜೊತೆಗೆ ಕನ್ನಡವನ್ನು ಮುನ್ನೆಡೆಸಬಲ್ಲಂತಹ ಮಾರ್ಗದರ್ಶಕರಿಗಾಗಿ ಕಾಯುತ್ತಿದ್ದಿತೊ ಎನ್ನುವಂತೆ. ಅಂದರೆ ಸಾಮಾಜಿಕ ಸ್ತರದಲ್ಲಿ ನಿಂತು ಮಾತನಾಡುವ ನಾಯಕನಿಗಾಗಿ, ಕನ್ನಡವನ್ನು ಸಮರ್ಥವಾಗಿ ಬಳಸಿ ಅದರ ಇರುವಿಕೆಯ ಬಗ್ಗೆ ಗಮನ ಸೆಳೆಯುವ, ಕನ್ನಡದ ಉಪಯುಕ್ತತೆಯ ಬಗ್ಗೆ ಇತರರಿಗೆ ಅರಿವು ಮೂಡಿಸಬೇಕಾಗಿತ್ತು. ಇಂತಹ ಒಂದು ಸಂದರ್ಭ ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿ ವಚನಕಾರರಿಂದ ನಡೆಯಿತು. ಸಂಸ್ಕೃತದಲ್ಲಿದ್ದ ಪೂಜ್ಯಗ್ರಂಥಗಳಿಗೆ ಮಾರುಹೋಗದೆ ಕನ್ನಡವನ್ನು ಕಡೆಗಣಿಸದೆ ಮೇಲೆತ್ತಿದರು. ಮಹಲಿಂಗರಂಗನಂತೂ- ''ಲಲಿತವಹ ಕನ್ನಡದ ನುಡಿಯಲಿ ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೆ, ಸಂಸ್ಕೃತ ದೊಳಿನ್ನೇನು?'' ಎಂದು ಕೇಳುವ ಮೂಲಕ ಕನ್ನಡದ ಮಹತ್ತ್ವವನ್ನು ಒತ್ತಿಹೇಳಿದ್ದಾನೆ.

ಸಂಸ್ಕೃತ - ಕನ್ನಡ

ಸಂಸ್ಕತದ ಅಳತೆ ಮೀರಿದ ಬಳಕೆಯಿಂದ ಕನ್ನಡದ ಸ್ಥಿತಿ ಹದಗೆಡುತ್ತ ಹೋಗುವುದನ್ನು ಕಂಡ ಕೆಲವು ಕನ್ನಡಾಭಿಮಾನಿಗಳಾದ ಕವಿಗಳು ಆಗಾಗ್ಗೆ ಎಚ್ಚರಿಕೆ ಕೊಡುತ್ತಲೆ ಬಂದುದನ್ನು ಕಾಣುತ್ತೇವೆ. ಕನ್ನಡಕ್ಕೆ ಸಂಸ್ಕೃತವನ್ನು ಬೆರೆಸುವುದು 'ನೆಲ್ಲುಂ ಮೊಸರುಂ ಗುಡಿದಂತೆ' 'ಜಾಣ್ ಕಿಡೆ ಮುತ್ತುಂ ಮೆಟಿಸುಂ ಗೋದಂತೆ' ಕೋಟಿಸಕ್ಕದಮಂ ತಗಳ್ಚಿ ಕನ್ನಡದೊಳ್ ಹದಗೆಡಿಸಬಾರದು, ಎಂದು ಮುಂತಾಗಿ ಸಾಮಾನ್ಯವಾದ ಮಾತಿನಿಂದ ಹೇಳಿದ್ದಕ್ಕೆ ಸತ್ಯದ ಮೋಹ ಕರಗಲಿಲ್ಲ. 'ಪೇಟ್ಟನೆಸೆಯ ಪೊಸಗನ್ನಡಂ' ಎಂದು ಹೇಳಿಕೊಂಡ ಕವಿಯೆ ಸಂಸ್ಕೃತಮಯವಾಗಿ ಬರೆಯತೊಡಗಿರುವುದನ್ನು ಕಂಡು, ನಯಸೇನ ಕವಿ ಅವನ ಮಾತನ್ನೇ ಎತ್ತಿಟ್ಟು ಚುಚ್ಚಿ

> ಪೊಸಗನ್ನಡದಿಂ ವ್ಯಾವ
> ರ್ಣಿಸುವೆ ಸತ್ಕೃತಿಯನೆಂದು ಕನ್ನಡಮಂ ಚಿಂ
> ತಿಸಿ ಕೊಡಲಾರದಕ್ಕಟ
> ಮಿಸುಕದ ಸಕ್ಕದಮನಿಕ್ಕುಮಂ ಕವಿಯೇ- ಧರ್ಮಾಮೃತ (೧-೪೧)

ಎಂದು ಹಂಗಿಸಬೇಕಾಯಿತು. ಸಂಸ್ಕೃತವನ್ನು ಬಲ್ಲೆವೆಂಬ ಅಹಂಕಾರದಿಂದ, ಆಡಂಬರಕ್ಕಾಗಿ ಸಕ್ಕದವನ್ನು ಕನ್ನಡದಲ್ಲಿ ತುಂಬುತ್ತಿದ್ದೀರೊ? ನಿಮಗೆ ಸಂಸ್ಕೃತದಲ್ಲಿ ಬಲವಿದ್ದರೆ ಶುದ್ಧ ಸಂಸ್ಕೃತ ಕಾವ್ಯವನ್ನು ಬರೆಯಿರಿ. ಕನ್ನಡ ಸಂಸ್ಕೃತಗಳ ಬೆರಕೆಯನ್ನು ಕುರಿತು ನಯಸೇನನ ಟೀಕೆ ಹೀಗಿದೆ: ಕನ್ನಡ ತುಪ್ಪದಂತೆ ಶ್ರೇಷ್ಠವೆಂಬ ಪ್ರಶಂಸೆಯನ್ನು, ಸಂಸ್ಕೃತ ಎಣ್ಣೆಯಂತೆ ಎಂದು ಹೀಗಳೆದಿದ್ದಾನೆ. ನಯಸೇನನ ಪ್ರತಿಭಟನೆ ಅವನ ಕಾಲದಲ್ಲಿ ಉಂಟಾದ ಜಾಗೃತಿಯ ಪ್ರತೀಕವಾಗಿದೆ. ಅಪಂಡಿತರಾದ ಜನಸಾಮಾನ್ಯರಿಗೂ ತಮ್ಮ ಮತತತ್ತ್ವಗಳನ್ನು ಮುಟ್ಟಿಸಬೇಕೆಂದು ಹೊರಟ ಜೈನ ಕವಿಗಳು, ಸಂಸ್ಕೃತದಲ್ಲಿದ್ದ ಘನವಾದ ಪುರಾಣಗಳು ಅವರಿಗೆ ತಿಳಿಯಬೇಕಾದರೆ ಅದು ಅವರಾಡುವ ಶುದ್ಧಗನ್ನಡದಲ್ಲಿದ್ದರೆ ಮಾತ್ರ ಎಂಬ ಪ್ರಜ್ಞೆಯಿಂದ, ಸಂಸ್ಕೃತದ ಬಾಹುಳ್ಯಕ್ಕೆ ಎದುರಾಗಿ ಜರಿದು ನಡೆದುದು ಸಹಜವೆನಿಸುತ್ತದೆ.

''ಕನ್ನಡತನದ ಅರಿವಾದಾಗಲೂ ಕನ್ನಡ ಕಬ್ಬಿಗರು ಸಕ್ಕದವನ್ನು ಏಕೆ ಬಿಡಲಾರರೆಂಬುದು

ಆಂಡಯ್ಯನಿಗೆ ಸಮಸ್ಯೆಯೇ ಆಗಿರಬೇಕು. ಬಹುಶಃ ಅವನ ಸಮಕಾಲೀನನಾದ ಜನ್ನಕವಿ ಮನಬಂದಾಗ ತಿರುಳ್‌ಗನ್ನಡದಲ್ಲಿ ಬರೆಯಬಲ್ಲನಾದರೂ ಸಂಸ್ಕೃತದ ಆವೇಶ ತುಂಬಿದಾಗ ಉಸಿರು ಸಾಲದಂತೆ ಸಾಲು ಸಾಲು ಸಕ್ಕದಮನಿಕ್ಕುವುದಕ್ಕೆ ಎಷ್ಟೂ ಅನುಮಾನಿಸುವುದಿಲ್ಲ. ಸಂಸ್ಕೃತವನ್ನು ಬಿಟ್ಟರೋ ಕಾವ್ಯ ಅಸಾಧ್ಯವೇ? ಕನ್ನಡ ಅಷ್ಟು ನಿಃಸತ್ತ್ವವೆ? ಕನ್ನಡದ ಬಲವನ್ನು ತೋರುವುದಕ್ಕಾಗಿ ''ಸಕ್ಕದಮಂ ಮಱೆಗೊಳ್ಳದೆ ಚೊಕ್ಕಳಿಕೆಯಿನಚ್ಚಗನ್ನಡದಿಂ'' ತಾನೇ ಒಂದು ಇಡಿಯ ಕಾವ್ಯವನ್ನು ಬರೆದು ಕನ್ನಡ ಕಬ್ಬಿಗರ ಮೇಲಿನ ಆರೋಪವನ್ನು ಇಲ್ಲದಂತೆ ಮಾಡಿದುದು ಸ್ವಾಭಾವಿಕವೆ.''[೮]

ಆಂಡಯ್ಯನು ಪ್ರತಿಭಟಿಸುವುದು ಕಾವ್ಯೋನ್ನತಿಯಿರದ ಸಾಮಾನ್ಯ ಕವಿಗಳ ಸಂಸ್ಕೃತಾತೀರೇಕವನ್ನು ಮಾತ್ರ. ಸಂಸ್ಕೃತದ ಮೇಲೆ ಅವನಿಗೆ ದ್ವೇಷವಿದೆಯೆಂದಲ್ಲ. ಸಂಸ್ಕೃತ ಅವನಿಗೆ 'ಸೊಗಯಿಪ ಸಕ್ಕದಂ' ಆಗಿದೆ. 'ಅಚ್ಚಗನ್ನಡಂ ಬಿಗಿವೊಂದಿರೆ ಬರೆವೆಂ'' ಎನ್ನುವುದರಲ್ಲಿ 'ಕನ್ನಡವಿದ್ದರೆ ಸಾಕು, ಸಂಸ್ಕೃತದಲ್ಲಿನ್ನೇನು' ಎನ್ನುವ ಬಿಂಕಕ್ಕಿಂತ ಕನ್ನಡವೇ ಸಮರ್ಥವಾಗಿದೆ, ಸ್ವತಂತ್ರವಾಗಿದೆ ಎಂಬ ಆತ್ಮವಿಶ್ವಾಸವೆ ಹೆಚ್ಚಾಗಿದೆ. 'ಕಬ್ಬಿಗರ ಕಾವ' ಎಂಬ ಕೃತಿಯನ್ನು ಅಚ್ಚಗನ್ನಡದಲ್ಲಿ ಬರೆದು ತನಗಿರುವ ಕನ್ನಡ ಪ್ರೇಮವನ್ನು ಹೇಳಿಕೊಂಡುದರ ಜೊತೆಗೆ ಕನ್ನಡಿಗರ ನೆನಪಿನಲ್ಲಿ ಉಳಿಯುವಂತೆ ಮಾಡಿ ಸಂಸ್ಕೃತವಿಲ್ಲದೆ ಕನ್ನಡದಲ್ಲಿಯೇ ಕಾವ್ಯ ರಚಿಸಬಹುದೆನ್ನುವುದನ್ನು ತೋರಿಸಿ ಕೊಟ್ಟಿದ್ದಾನೆ. ಆಂಡಯ್ಯನ ಈ ಪ್ರಯತ್ನವನ್ನು ಮುಂದಿನವರಾರು ಅನುಸರಿಸದೆಯಿರಲು ಕಾರಣವೇನು? ಎನ್ನುವ ಪ್ರಶ್ನೆ ಏಳುವುದು ಸಹಜ. ಇದಕ್ಕೂ ಮೊದಲು ನಾವು ಅಚ್ಚಗನ್ನಡವೆಂದರೇನು ಎಂದು ತಿಳಿಯುವುದು ಅವಶ್ಯಕವಾಗಿದೆ.

'ಅಚ್ಚಗನ್ನಡ' ಎಂದರೆ ದೇಶ್ಯ, ತದ್ಭವ, ತತ್ಸಮ ಇವು ಮೂರೂ ಸೇರುತ್ತವೆಂಬುದನ್ನು ಗಮನದಲ್ಲಿಡಬೇಕು. ದೇಶ್ಯ ಶಬ್ದಗಳೆಂದರೆ ಒಂದು ಭಾಷೆಯ ಸ್ವಂತ ಶಬ್ದಗಳು. ಅಂದರೆ ಭಾಷೆಯನ್ನಾಡುವ ಜನರಿಂದಲೇ ಕಲ್ಪಿತವಾದವು. ''ಕನ್ನಡಿಗರಿಗೆ ಸಂಸ್ಕೃತವನ್ನು ಬಿಟ್ಟರೆ ಒಂದು ವೇಳೆ ನಡೆದೀತು; ತದ್ಭವಗಳನ್ನು ಬಿಟ್ಟರೆ ನಡೆಯುವುದಿಲ್ಲ. ದೇಸ್ಯ ನುಡಿಯಲ್ಲಿ ಎಂದಿನಿಂದಲೂ ಬೆರೆತುಹೋದ ತದ್ಭವಗಳನ್ನು ಹೊಡೆದುಹಾಕಿದರೆ ಆ ಕೊರತೆಯನ್ನು ತುಂಬಿಕೊಳ್ಳುವುದು ಹೇಗೆ? ಮಾತುಮಾತಿಗೂ ದೇಸಿಯನ್ನು ಹುಡುಕುತ್ತಾ ಹೋದರೆ ಮಾತನಾಡುವುದೆ ಕಷ್ಟವಾದೀತು. ಭಾಷಾ ಶುದ್ಧಿಯ ಹಾಗೂ ಮಾರ್ದವದ ದೃಷ್ಟಿಯಿಂದ ಕರ್ಣಕಠೋರವಾದ ಹಾಗೂ ಕನ್ನಡದ ನಾಲಗೆಗೆ ಒಗ್ಗದ ಉಚ್ಚಾರವನ್ನು ಕನ್ನಡದ ಸೊಲ್ಲಿಗೆ ಸಲ್ಲುವಂತೆ ಮಾರ್ಪಡಿಸಿಕೊಳ್ಳುವುದು ವಿಹಿತ. ಇದು ತದ್ಭವದ ಹಾದಿ. ಈ ಬಗೆಯ ತದ್ಭವಗಳು ತಾವಾಗಿ ಜನರ ಮಾತಿನಲ್ಲಿ ತೇಲಿ ಬಂದಂಥವು.''[೯]

ಆಂಡಯ್ಯ 'ಅಚ್ಚಗನ್ನಡ'ದಲ್ಲಿ ಬರೆಯುವ ಪ್ರತಿಜ್ಞೆ ಮಾಡಿ, ದೇಸಿಯ ನಿಷ್ಠೆಗೆ ಹೊಸ

---

೮. ರಾ. ಕುಲಕರ್ಣಿ, ಆಂಡಯ್ಯನ ಅಚ್ಚಗನ್ನಡ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೫೨, ಸಂ. ೨: ೧೯೬೭, ಪು. ೩೨

೯. ಅಲ್ಲೇ, ಅದೇ, ಪು. ೩೪

ಅರ್ಥವನ್ನು ಕೊಟ್ಟ. ಆದರೆ ತನ್ನ ಕಾವ್ಯ ಸಾಮಾನ್ಯಜನಕ್ಕೂ ಅರ್ಥವಾಗಬೇಕು ಎನ್ನುವ ಸಾಮಾಜಿಕ ಪ್ರಜ್ಞೆಯನ್ನು ಮರೆತ. ಏನೇ ಆದರೂ ಇವನಿಂದಾಗಿ ಕನ್ನಡ ಭಾಷೆಯ ಶಬ್ದಸಂಪತ್ತು ಬೆಳೆಯಲು ಕಾರಣವಾಯಿತು.

ಈ ಕಾಲದ ಭಾಷೆಯ ಸ್ವರೂಪ

'ಭಾಷೆ ಮಾನವ ಜನಾಂಗದೊಳಗೆ, ಅವನ ದೈನಂದಿನ ಚಟುವಟಿಕೆಗಳಲ್ಲಿ ಪರಸ್ಪರ ಸಂಪರ್ಕವೊದಗಿಸುವ ಸಾಧನ'- ಎಂದು ಭಾಷಾವಿಜ್ಞಾನಿಗಳು ಭಾಷೆಯ ಮೂಲಭೂತ ಗುಣಗಳನ್ನು ಹೇಳಿದ್ದಾರೆ. ಅನೇಕ ಬಾಹ್ಯಾಂತರ ಕಾರಣಗಳ ಮೂಲಕ ಒಂದು ಕಾಲದ ಭಾಷೆಯ ರಚನಾತ್ಮಕ ಅಂಶಗಳು ಮಾಯವಾಗಿ, ನಂತರದ ಕಾಲದಲ್ಲಿ ಹೊಸ ಅಂಶಗಳ ಸೇರ್ಪಡೆಯಾಗ ಬಹುದು; ಮತ್ತೆ ಕೆಲವು ಅಂಶಗಳು ಮಾರ್ಪಾಡಾಗ ಬಹುದು. ಭಾಷೆಯಲ್ಲಿ ನಡೆಯುವ ಬದಲಾವಣೆ ಇದೇ ಕಾಲಾಂತದರದಲ್ಲಿ ಇಂಥ ಅಂಶಗಳು ಬಹಳಷ್ಟಾದರೆ ಹಿಂದಿದ್ದ ಭಾಷೆಯ ಸ್ವರೂಪ ಹಾಗೂ ನಂತರದ ಭಾಷೆಯ ಸ್ವರೂಪದ ನಡುವಿನ ವ್ಯತ್ಯಾಸ ಹೆಚ್ಚಿ, ಹಿಂದಿನ ಕಾಲದ ಭಾಷೆ ಅರ್ಥವಾಗಲು ಕಷ್ಟವಾಗುತ್ತದೆ. ಭಾಷೆಯ ಸ್ವರೂಪ ಈ ಸ್ಥಿತಿಯನ್ನು ಮುಟ್ಟಿದಾಗ ಅದು ಒಂದು ಘಟ್ಟವನ್ನು ತಲುಪಿದಂತಾಗುತ್ತದೆ. ಇಂಥ ಘಟ್ಟಗಳನ್ನೇ ಭಾಷೆಯ ಅವಸ್ಥೆಗಳೆಂದು ಕರೆಯುವುದು. ೧೨ನೆಯ ಶತಮಾನದಲ್ಲಿ ವಚನಕಾರರಿಂದಾಗಿ ಭಾಷೆ ಕ್ಷಿಪ್ರಗತಿಯಲ್ಲಿ ಬದಲಾವಣೆ ಯಾಯಿತು. ನಡುಗನ್ನಡ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡವರು ವಚನಕಾರರು, ಹರಿಹರ, ಕುಮಾರವ್ಯಾಸರು. ವಚನಗಳಂತೂ ಕನ್ನಡದ, ಎಂತಹ ಗಹನ ವಿಷಯವನ್ನೂ ಸಾಮಾನ್ಯನಿಗೂ ತಿಳಿಯುವ ರೀತಿಯಲ್ಲಿ ಅಭಿವ್ಯಕ್ತಗೊಳಿಸಿ, ಜಾಗತಿಕ ಸಾಹಿತ್ಯಕ್ಕೆ ಕನ್ನಡದ ಶ್ರೇಷ್ಠ ಕಾಣಿಕೆಗಳಾಗಿವೆ.

ವಚನಕಾರರು ಜನರ ಆಡುನುಡಿಗೆ ಹತ್ತಿರವಾದ ಭಾಷೆಯನ್ನು ಬಳಸುವುದರ ಮೂಲಕ ಜನಮನವನ್ನು ಸಮೀಪಿಸಿದುದರ ಜೊತೆಗೆ ಕನ್ನಡ ಭಾಷೆಗೆ ಅವರು ವಿಶಿಷ್ಟವಾದ ಎತ್ತರವನ್ನೊದಗಿಸಿದರು. 'ವಚನಕಾರರು ಅಚ್ಚಗನ್ನಡದ ಬೇಸಾಯಕಾರರು' ಎಂಬ ಪ್ರಶಸ್ತಿಗೆ ಪಾತ್ರರಾದುದಲ್ಲದೆ ಗದ್ಯಕ್ಕೆ ಪದ್ಯದ ಸತ್ತ್ವವನ್ನು ತುಂಬಿದರು. ಸಂಸ್ಕೃತ ಪದಗಳನ್ನು ಕನ್ನಡಕ್ಕೆ ಬಗ್ಗಿಸಿದರು. ಕನ್ನಡ ಸಂಸ್ಕೃತ ಎಂಬ ಭೇದ ಉಳಿಯದಂತೆ, ಆದರೆ ಕನ್ನಡ ಕನ್ನಡವಾಗಿ ಬದುಕುವಂತೆ ಸಂಸ್ಕೃತವನ್ನು ವಚನಕಾರರು ಕನ್ನಡಕ್ಕಾಗಿ ಬಗ್ಗಿಸಿದ್ದಾರೆ. ಕಾಯಕ, ಜಂಗಮ, ಸ್ಥಾವರ, ಬಯಲು, ಕುರುಹು, ಮುಂತಾದ ಪದಗಳನ್ನು ನೋಡಿದರೆ ಹೇಗೆ ಸಂಸ್ಕೃತದ ಸತ್ವವನ್ನು ಕನ್ನಡಕ್ಕೆ ಕಸಿಮಾಡಿಕೊಂಡಿದ್ದಾರೆ ಎಂಬುದು ವೇದ್ಯವಾಗುತ್ತದೆ. ಇನ್ನೊಂದು ಉದಾಹರಣೆ ನೋಡಬಹುದು.

ಕಬ್ಬಿಣದ ಕೋಡಗವ ಪರುಷಮುಟ್ಟಲು
ಹೊನ್ನಾದರೇನು, ಮತ್ತೇನಾದರೇನು
ತನ್ನ ಮುನ್ನಿನ ರೂಪ ಬಿಡದನ್ನಕ್ಕ?

ಕನ್ನಡ ಭಾಷೆಯನ್ನು ಬೆಳಸಬೇಕೆನ್ನುವ ಧೋರಣೆಗಿಂತ, ಹೇಳಬಯಸುವ ಜೀವನಾನುಭವವು ಆದಷ್ಟು ಕನ್ನಡದಲ್ಲಿಯೇ ಇರಬೇಕು, ಅದು ಅಂದಿನ ಕಾಲದ ಜನರ ಆಡುನುಡಿಯಾದ್ದರಿಂದ ತಮ್ಮ ಸಂದೇಶಗಳು ಬೇಗ ಜನರಿಗೆ ತಲುಪುತ್ತವೆ ಎನ್ನುವ ಹೆಬ್ಬಯಕೆಯ ಜೊತೆಗೆ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಮೇಲೆಕ್ಕೆತ್ತುವ ಪ್ರಯತ್ನದಲ್ಲಿ ಕನ್ನಡ ಭಾಷೆ, ವಚನಕಾರರ ಅರಿವಿಗೆ ಬಾರದಂತೆಯೇ ಎತ್ತರಕ್ಕೆ ಏರಿ ತನ್ನ ಸತ್ವವನ್ನು ಕಂಡುಕೊಂಡಿತು.

'ಹರಿಹರನ ರಗಳೆ'ಗಳಲ್ಲಿಯೂ 'ಗಿರಿಜಾಕಲ್ಯಾಣ'ದಲ್ಲಿಯೂ ಇಷ್ಟೇ ಹದವಾದ ಭಾಷೆ ಬಳಕೆಯಾದುದು ಕಂಡುಬರುತ್ತದೆ. ಹರಿಹರ ಬೇರಾವ ಕನ್ನಡ ಕವಿಯೂ ಬಳಸದಷ್ಟು ಸಹಜವಾಗಿ ಕನ್ನಡ ಭಾಷೆಯ ಶಬ್ದಗಳ ಅಂಟುಗುಣವನ್ನು ಬಳಸಿಕೊಂಡಿದ್ದಾನೆ. ಬಹುಪಾಲು ವೃತ್ತಗಳಲ್ಲಿ ಕನ್ನಡಭಾಷೆಗೆ ಸಹಜವಾದ ಮುರಿಮುರಿಯಾದ ಶಬ್ದವಾಕ್ಯ ರಚನೆಗಳನ್ನು ಗಮನಿಸಬಹುದು. ಏಕೆಂದರೆ ಭಾಷೆಯ ಬಗೆಗೆ ಈತನ ಕಿವಿ ಯಾವಾಗಲೂ ಸೂಕ್ಷ್ಮವಾದುದು.

ಉದಾಹರಣೆಗೆ 'ಗಿರಿಜಾಕಲ್ಯಾಣ'ದ ಈ ಪದ್ಯ ನೋಡಿ:

ನೋಡುವೊಡೊಂದಕ್ಕರಮದು
ಮಾಡುವೊಡುಚ್ಚರಗೆಗರಿದು ಮೂಱುಂ ತೆಱನಂ
ಕೂಡೆ ಕವಿತತಿ ವಿಚಾರಿಸ
ಬೇಡದಱಿಂ ಱಟಕುಳಕ್ಷಳಂಗಳನಿದರೊಳ್

ಈ ಪದ್ಯದಲ್ಲಿ ವ್ಯಕ್ತವಾಗಿರುವ ಆತನ ಭಾಷಾಜ್ಞಾನವನ್ನು ಯಾರಾದರೂ ಮೆಚ್ಚಿ ಬೇರಗಾಗಬೇಕು. ಹರಿಹರನಾದ ಮೇಲೆ ಹದಿಮೂರನೆಯ ಶತಮಾನದಲ್ಲಿ ಬಂದ ಕೇಶಿರಾಜ ತನ್ನ ಕಾಲದಲ್ಲಿ ಆಗಲೆ 'ಱಟಕುಳಕ್ಷಳ'ಗಳ ವಿಷಯಕ್ಕೆ ಉಂಟಾಗಿದ್ದ ಗೊಂದಲವನ್ನು ಸರಿಪಡಿಸಲೆಂದೇ ಸೂತ್ರಗಳ ಮೇಲೆ ಸೂತ್ರ ಬರೆದ. ಆದರೂ ಅವು ವ್ಯವಸ್ಥಿತವಾಗಲಿಲ್ಲ. ಕಾರಣವಿಷ್ಟೆ-ಅವುಗಳ ಮೂಲ ಉಚ್ಚಾರಣೆ ಅಸ್ಪಷ್ಟವಾಗಿತ್ತು. ಪ್ರಾಸಸ್ಥಾನದಲ್ಲಿ ಮತ್ತೆ ಮಿಕ್ಕೆಡೆಗಳಲ್ಲಿ ಈ ಅಕ್ಷರಗಳು ಒಂದಕ್ಕೊಂದು ಬಳಕೆಯಾಗುತ್ತಿದ್ದುವು. ಇಪ್ಪತ್ತನೆಯ ಶತಮಾನದ ಭಾಷಾಶಾಸ್ತ್ರಜ್ಞರು ಕೂಡ ಱಟ ಇವುಗಳ ಉಚ್ಚಾರಣೆ ಕಳೆದುಹೋಗಿದೆ ಎಂದು ಹೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದರೆ ಱಟಕುಳ ಕ್ಷಳಗಳ ಉಚ್ಚಾರಣೆ ಹಾಗೂ ಬಳಕೆಯ ಬಗೆಗೆ ಹರಿಹರ ಮಾಡಿದ ಘೋಷಣೆಯಲ್ಲಿ ಗೊಂದಲವಿಲ್ಲ; ಅಜ್ಞಾನವಿಲ್ಲ. ಅದರ ಬದಲಿಗೆ ಪ್ರಬುದ್ಧವಾದ ಅರಿವಿದೆ. ಅದಕ್ಕಾಗಿಯೇ ಕೃತಕವಾಗಿ ಱಟವನ್ನು ಬಳಸುವುದರ ವಿರುದ್ಧ ಆತ ಲೇವಡಿ ಮಾಡಿದ್ದು''. ವಚನಕಾರರಾದ ಮೇಲೆ ಮೊದಲಿಗೆ ಈತ ತಿರಸ್ಕಾರಾರ್ಥದಲ್ಲಿ ಬಳಕೆಯಾಗುವ ಯಮಳ ಶಬ್ದ ರೂಪವನ್ನು ಧಾರಾಳವಾಗಿ ತನ್ನ ಕಾವ್ಯದಲ್ಲಿ ಬಳಸಿಕೊಂಡ.

ಅದಕ್ಕೆ ಹೊನ್ನುಂಗಿನ್ನು ಸರಿಯೆಂಬರೇ ಮಾತು
ಅದಕೆ ಪರುಸಂ ಗಿರುಸ ಓಹೊ ಬೇಡಮಾತು - ತಿರುನೀಲಕಂಠರಗಳೆ

ಮೇಲಿನ ಉದಾಹರಣೆಯಲ್ಲಿ ಹೊನ್ನುಂಗಿನ್ನು ಪರುಸಂ-ಗಿರುಸ ಈ ತಿರಸ್ಕಾರಾರ್ಥದ ಯಮಳಶಬ್ದ ರೂಪಗಳ ಸೊಗಸನ್ನು ಅರಿಯಬೇಕು. ಕನ್ನಡ ಭಾಷೆಯ ಅಭಿವ್ಯಕ್ತ ಪ್ರಕಾರದ ಈ

ಗುಣವನ್ನು ವಚನಕಾರರಂತೆಯೇ ಹರಿಹರನೂ ನಿಸ್ಸಂಕೋಚವಾಗಿ ಆದರೆ ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾನೆ. ಕನ್ನಡ ಭಾಷೆಯ ವ್ಯಂಗ್ಯ ರೀತಿಗೆ ಮೊನೆಯಿತ್ತಿದ್ದಾನೆ.''[೧೦] ಈತನ ಈ ಪ್ರಯೋಗಶೀಲತೆ ಭಾಷೆಯ ಬಳಕೆಯಲ್ಲಿ ಅನ್ಯಾದೃಶವಾದ ಸಿದ್ಧಿಯನ್ನು ಪಡೆದಿರುವುದನ್ನು ಗುರುತಿಸಬಹುದು.

ನಾರಣಪ್ಪನ ಷಟ್ಪದಿಯ ಭಾಷೆ-ಚಿಕ್ಕ ಸರಳ ಶಬ್ದಗಳಿಂದಾದ ಗಾದೆಯಂಥ ಪುಟ್ಟ ಹೇಳಿಕೆಗಳು, ಪ್ರಾಸಬದ್ಧವಾಗಿಯೊ ಇಲ್ಲದೆಯೊ ಉಚ್ಚಾರಣೆಗೆ ಲಲಿತವಾಗಿ ಕಿವಿಗಿಂಪಾಗಿ ಮನಸೆಳೆಯುತ್ತವೆ. ''ಕಡ್ಡಿ ತಡೆವುದೆ ಕಡಲ, ಪರನಿಂದಕನೆ ನಿಂದ್ಯನು ಪರಹಿತನೆ ವಂದ್ಯನು, ಸತ್ಯವೊಂದೇ ಸೋಪನವು ಸಗ್ಗಕ್ಕೆ''. ಸಣ್ಣ ನಾಣ್ನುಡಿಯಾದರೂ ಇವುಗಳಲ್ಲಿ ದೊಡ್ಡ ಭಾವಾರ್ಥವುಂಟು. ಕುಮಾರವ್ಯಾಸನನ್ನು ಶುದ್ಧ ಕನ್ನಡ ಕವಿಯೆಂಬುದಕ್ಕೆ ಇವು ಪ್ರಮಾಣವಾಗಿವೆ. ನಾರಣಪ್ಪನಲ್ಲಿ ಬಳಕೆಯಾಗದ ಪದಗಳ ಸಮೂಹವೇ ಇಲ್ಲ - ಸಾಧಾರಣ, ಗಂಭೀರ ಪದಗಳು, ಅಚ್ಚಗನ್ನಡ ಗಹನ ಸಂಸ್ಕೃತ, ಒರಟುನುಡಿ, ನಾಜೂಕು ನುಡಿ, ಮುಚ್ಚುಮರೆ ಕಾಣದ ಸ್ಪಷ್ಟ ಗ್ರಾಮ್ಯ, ವ್ಯಂಜನಾ ನುಡಿಗಳು ಯಾವುದಿಲ್ಲ ಯಾವುದುಂಟು. ಕುಮಾರವ್ಯಾಸನಿಗೆ ಕುಮಾರವ್ಯಾಸನೇ ಸರಿ ದೊರೆಯಾಗಿದ್ದಾನೆ. ಹೀಗೆ ನಾರಣಪ್ಪ ಕನ್ನಡದ ಸತ್ವವನ್ನು ಹೆಚ್ಚಿಸಿ ಭಾಷೆಯಲ್ಲಿ ವಿಶಿಷ್ಟತೆಯನ್ನು ಮೆರೆದಿದ್ದಾನೆ.

ಇನ್ನು ಸಾಂಗತ್ಯದ ಭಾಷೆ ಸರಳ, ದೇಸಿ ಪದಗಳ ಬಳಕೆ ಹೇರಳ. ಅನೇಕ ಕವಿಗಳು ಅಚ್ಚಗನ್ನಡದ ಬಿಚ್ಚುನುಡಿಯಲ್ಲಿಯೇ ತಮ್ಮ ಕೃತಿಗಳನ್ನು ರಚಿಸುತ್ತೇವೆಂದು ಹೇಳಿ ಕನ್ನಡಾಭಿಮಾನವನ್ನು ತೋರಿಸಿಕೊಂಡಿದ್ದಾರೆ. ಬಿಜ್ಜಳರಾಯನ ಚರಿತ್ರೆಯನ್ನು ಸಾಂಗತ್ಯದಲ್ಲಿ ಬರೆದ ಧರಣಿಪಂಡಿತನು ಹೀಗೆ ಹೇಳುತ್ತಾನೆ - ''ಅಚ್ಚಗನ್ನಡದೆ ಸಿಸುಗಳರಿವಂದದಿ। ಪೊಚ್ಚ ಮುತ್ತಿನೊಳು ಮೆಚ್ಚುವಂದದಿ ಸರಗೊಳಿಸಿದೆ.'' ಶಿವಯೋಗಿ ಸೋಮೇಶನು - ''ಗೂಢಾರ್ಥ ಚಿತ್ರ ಶಬ್ದಾಡಂಬರಗಳೇ। ಹಾಡುಗಬ್ಬದೊಳೇತಕೆಂದು ಕನ್ನಡ ದೇಶಿಯ ಭಾಷೆಗಳಿಂದ। ಪಾಡದೇನೀ ಶಿವಕೃತಿಯ'' ಎಂದು ತನ್ನ ೬೩ ಪುರಾತನರ ಚರಿತ್ರೆಯಲ್ಲಿ ಹೇಳಿಕೊಂಡಿದ್ದಾನೆ. ಹರಿಹರನಿಂದ ಉಲ್ಲಂಘಿಸಲ್ಪಟ್ಟ ರಳ ಕುಳಕ್ಷಳ ಪ್ರಾಸನಿಯಮವನ್ನು ಸಾಂಗತ್ಯ ಕವಿಗಳೂ ಅನುಸರಿಸದೆ ಹೆಚ್ಚಾಗಿ ಸ್ವಚ್ಛಂದವಾಗಿ ಕೃತಿರಚಿಸಿದ್ದಾರೆ. ಅಲ್ಲದೆ ಅದನ್ನು ಹೇಳಿಯೂ ಇದ್ದಾರೆ ಉದಾ : ''ರಳ ಕುಳ ಶಿಥಿಲ ಸಮಾಸ ಮುಂತಾದವ। ರೊಳಗಿಲ್ಲ ಕೆಲವುಳ್ಳರುಂಟು ಕೆಲವಿಲ್ಲಾದರುವಿಲ್ಲ ವೇಕೆಂದವರ ಕೋಟಲೆಯೇಕೆ ಹಾಡುಗಬ್ಬದೊಳು'' ಎಂದು ರತ್ನಾಕರವಾರ್ಣಿಯು ಭರತೇಶ ವೈಭವ ಕೃತಿಯಲ್ಲಿ ಕೇಳಿದ್ದಾನೆ.

ವಚನ, ರಗಳೆ, ಷಟ್ಪದಿ, ಸಾಂಗತ್ಯಗಳ ಭಾಷೆಯ ಹರಹು ಇಷ್ಟೊಂದು ವಿಶಾಲವಾದುದರಿಂದ ಹಿಂದೆ ಇದ್ದ ಕನ್ನಡ ಪದಗಳೇ ಹೊಸಪ್ರಯೋಗದಿಂದ, ಹೊಸಹುಟ್ಟನ್ನು ಪಡೆಯುವುದರತ್ತ ದಾಪುಗಾಲು ಹಾಕುವುದರ ಮೂಲಕ, ಸಂಸ್ಕೃತವನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುವ

---

೧೦. ಜಿ.ಎಸ್ ಸಿದ್ಧಲಿಂಗಯ್ಯ, ಹರಿಹರ ಮತ್ತು ಪ್ರಯೋಗಶೀಲತೆ: ಹರಿಹರ ವಿಚಾರ ಸಂಕಿರಣ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦, ಪು. ೧೯೭

ಹಾಗೂ ಕನ್ನಡ ಭಾಷೆಯಲ್ಲಿಯೇ ಹೊಸ ಪ್ರಯೋಗಮಾಡುವುದರ ಮೂಲಕ ಕನ್ನಡ ಭಾಷೆಗೆ ತನ್ನದೇ ಆದ ಅಸ್ತಿತ್ವವಿದೆ. ಅದನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳುವ ಧ್ಯೇಯವಿರಬೇಕು ಎಂದು ತೋರಿಸಿಕೊಟ್ಟರು. ಸಾಹಿತ್ಯದ ಭಾಷೆ ಜನರಾಡುವ ನುಡಿಗೆ ಹತ್ತಿರವಾಗಿದ್ದರೆ ಕನ್ನಡದ ಉನ್ನತಿ ತನ್ನಿಂದ ತಾನೆ ಆಗುತ್ತದೆ ಎಂಬ ಧೋರಣೆ ಎದ್ದು ಕಾಣುತ್ತದೆ. ಇದಕ್ಕಾಗಿ ದೊಡ್ಡ ದೊಡ್ಡ ಘೋಷಣೆ ಮಾಡಬೇಕಾಗಿಲ್ಲ.

ಶೈಲಿ

ಕವಿ ತನ್ನ ಆಲೋಚನೆ ಅಥವಾ ಅಭಿಪ್ರಾಯಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಪಡಿಸುವ ವಿಧಾನ ಶೈಲಿ ಎನಿಸಿಕೊಳ್ಳುತ್ತದೆ. ಕವಿಯಾದವನು ಬಳಸುವ ಭಾಷೆ ಹೇಗಿರಬೇಕು ಮತ್ತು ಆತನ ಆಲೋಚನೆಗಳು, ಅನುಭವಗಳು ಭಾಷೆಯ ಮೂಲಕ ಅಭಿವ್ಯಕ್ತವಾಗುವಾಗ ಭಾಷೆ ಯಾವ ರೀತಿ ಬಳಕೆಯಾಗುತ್ತದೆ. ಕವಿ ಮತ್ತು ಭಾಷೆ, ಅನುಭವ ಮತ್ತು ಭಾಷೆ ಇವು ಪರಸ್ಪರ ಹೊಂದಿಕೊಂಡು ಒಂದು ವಿಶಿಷ್ಟವಾದ ಪದಗಳ ಜೋಡಣೆಯಿಂದ ಹೇಗೆ ಸಾಹಿತ್ಯವು ಸೃಷ್ಟಿಯಾಗುತ್ತದೆ, ವ್ಯಕ್ತಿ ಹಾಗೂ ಸಂಸ್ಕೃತಿಗಳು ಶೈಲಿಯಲ್ಲಿ ಹೇಗೆ ಪ್ರತಿಬಿಂಬಿತವಾಗುತ್ತವೆ ಮುಂತಾದ ಅಂಶಗಳನ್ನು ತಿಳಿಸಿಕೊಡುತ್ತವೆ.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ನಯಸೇನನ ಸ್ಥಾನವು ಹಲವು ದೃಷ್ಟಿಗಳಿಂದ ವಿಶಿಷ್ಟವಾದುದು. ''ನಯಸೇನ ಒಬ್ಬ ಜಾನಪದ ಕವಿ. ಅವನ ಭಾಷೆಯ ಸೊಗಸಿಗೂ ಅವನ ದೇಸಿಯ ಚೆಲ್ವಿಗೂ ಬಹುಮಟ್ಟಿಗೆ ಕಾರಣ ಅವನು ತನ್ನ ಸುತ್ತಮುತ್ತಣ ಆಡುಮಾತನ್ನು ಅದರ ಉಕ್ತಿಗಳನ್ನು ಬಳಸಿರುವುದು. ಈ ಉಕ್ತಿಗಳೂ ಸಾಮಾಜಿಕ ಜೀವನದ ವಿವರಗಳೂ ಮುಖ್ಯವಾಗಿ ಕಾಣಿಸಿಕೊಂಡಿರುವುದು ಈ ಮಾಲೋಪಮೆಗಳಲ್ಲಿಯೇ''[೧೧] ದೇಸಿ ಮತ್ತು ಹೊಸತನಗಳು ಅವನ ಶೈಲಿಯ ಮತ್ತೊಂದು ಆಕರ್ಷಣೆ. ಇದಕ್ಕೆ ಮೊದಲು ದೇಸಿಯ ಬಗ್ಗೆ ತಿಳಿದುಕೊಳ್ಳುವುದು ಉಚಿತವಾಗಿದೆ. ಶಂಬಾ ಜೋಶಿಯವರು ದೇಸಿಯ ಬಗ್ಗೆ ಹೀಗೆ ವಿವರಿಸುತ್ತಾರೆ- ''ದೇಸಿಯಲ್ಲಿ ನುಡಿನುಡಿಗೂ ಹೊಸತನವು ತುಂಬಿಕೊಂಡಿದೆ; ದೇಸಿ-ಯೆಂದರೆ ಸಜೀವ ಭಾಷೆ; ಸಜೀವರ ಭಾಷೆ. ದೇಸಿಯ ಒಂದೊಂದು ನುಡಿಯಲ್ಲಿಯೂ ಕಣ್ಣುಮುಂದೆ ಸುಸ್ಪಷ್ಟವಾದ ಚಿತ್ರಗಳನ್ನು ತಂದು ನಿಲ್ಲಿಸುವ ಸಾಮರ್ಥ್ಯವಿದೆ. ದೇಸಿಯಲ್ಲಿರುವ ಜೋರು ಬಚ್ಚಬರಿ ಮಾತಿನಲ್ಲಿಲ್ಲ. ಭಾವನಾಯುಕ್ತರಾಗಿ ಒಳ್ಳೆ ಹಾವಭಾವ ಸಹಿತವಾಗಿ ಸುಖ ಸಲ್ಲಾಪ-ವಾಗ್ವಾದಗಳನ್ನು ನಡೆಯಿಸುವ ನಾಡವರಿಂದಲೆ (ಜನಸಾಮಾನ್ಯರಿಂದಲೆ) ದೇಸಿನುಡಿಯು ಬೆಳೆದುದು. ಆದುದರಿಂದ ದೇಸಿಗೆ 'ನಾಡನುಡಿ' ಎಂದು ಹೇಳುವುದು ಉಚಿತವಾಗಿದೆ. ನಾಣ್ಣುಡಿಯು ನಾಡನುಡಿಯು ಎಂದರೆ ದೇಸಿಯ ಒಂದು ಪ್ರಕಾರವೇ ಸರಿ.''[೧೨] ಉಪಮೆಗಳನ್ನು ಆರಿಸಿ ತರಲು ಜನಜೀವನದ ತವನಿಧಿಯ ರತ್ನ ಸಂಪುಟಕ್ಕೆ ದಾಳಿಯಿಟ್ಟ ಪ್ರಥಮ ಶ್ರೇಯಸ್ಸು ನಯಸೇನನದು. 'ಬೆಲೆವೆಣ್ ಪೆಣ್ಣಂ ಪೆತ್ತಂತಿರೆ' 'ಇದ್ದಿತು ಎಂಬ ಉಕ್ತಿಯಲ್ಲಿ; 'ಎಡೆಯನರಸಾದೊಡೆ ಕೊಡೆಯ ಕಾವು

---

೧೧. ಎಂ. ಚಿದಾನಂದಮೂರ್ತಿ, ನಯಸೇನ ಕನ್ನಡದ ಒಬ್ಬ ಜಾನಪದ-ಚಂಪೂಕವಿ: ಸಂಶೋಧನ ತರಂಗ-೨, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೦; ಪು. ೧೦೦

೧೨. ಕಂನುಡಿಯ ಹುಟ್ಟು, ಶಂಬಾ ಜೋಶಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೫, ಪು. ೬೩

ಮೇಗಾದುದೆಂಬಂತೆ', 'ಪವಿವಾವಿಯ ನೀರಂತೆ ಕಣ್ಣೆಳಗಡಂಗಲುಂ' ಮುಂತಾದ ಉಕ್ತಿಗಳಲ್ಲಿ ನಾವು ಹೊಸತನವನ್ನು ನವ್ಯದೃಷ್ಟಿಯನ್ನು ಕಾಣಬಹುದು.

"ಕನ್ನಡ ಭಾಷೆಯ ಚೆಲುವಿನಲ್ಲಿ ಅವನು ಮನಸ್ಸು ಮಿಂದಿದ್ದಿತು. ಅದರ ಸತ್ವದ ಹೃದಯ ಅವನ ಕೈವಶವಾಗಿದ್ದಿತು. ನಯಸೇನನಲ್ಲಿ ನಮ್ಮನ್ನು ಹೆಚ್ಚು ಆಕರ್ಷಿಸುವುದು ಭಾಷೆಯೇ ಹೊರತು ಭಾವಾವೇಶವಲ್ಲ. ಅವನಲ್ಲಿ ತೀವ್ರವಾದ ಭಾವಗಳಾಗಲಿ, ಉತ್ಕಟ ಸನ್ನಿವೇಶಗಳಾಗಲಿ ಕಡಿಮೆಯೇ. ಅವನ ಕಾವ್ಯ ಭಾಷೆಯು ಚಂಪೂ ಪ್ರಪಂಚದಲ್ಲಿ ಜಾನಪದ ಭಾಷೆಯು ಪಡೆದ ವಿಜಯದ ಸಂಕೇತವಾಗಿದೆ"[೧೩] ಜನರ ಆಡುಮಾತಿನ ಶೈಲಿಯಲ್ಲಿ ನಾವು ಕಾಣುವ ಹಾಗೆ ಒಂದು ಪದಕ್ಕೆ ಸೇರಿಕೊಂಡಂತೆ ಪ್ರಾಸಕ್ಕೆ ಹೊಂದಿಕೊಳ್ಳುವಂತೆ ಅರ್ಥವಿಲ್ಲದ ಪದಗಳನ್ನು ತರುವುದರಲ್ಲಿ ನಯಸೇನನಿಗೆ ಯಾವ ಸಂಕೋಚವೂ ಇಲ್ಲ. ಅಚ್ಚಂ ಪಜ್ಜಂ; ಸುಖಿಮುಂಗಿಖಿಮಂ, ಇತ್ಯಾದಿ ಉಕ್ತಿಗಳಿಂದ ಕಾವ್ಯದ ಜಾನಪದ ಗುಣವು ದ್ವಿಗುಣವಾಗುವುದಲ್ಲದೆ ಕಾವ್ಯಭಾಷೆಗೆ ಅಥವಾ ಆಡುನುಡಿಗೆ ಸಮೀಪವಾಗುತ್ತದೆ. ಸಾಮಾನ್ಯ ಓದುಗರಿಗೆ ಕಾವ್ಯದ ವಿಷಯದಲ್ಲಿ ಹೆಚ್ಚು ಆಪ್ತತೆಯೂ ಆಸಕ್ತಿಯೂ ಬೆಳೆಯುತ್ತದೆ. ಚಂಪೂ ಕವಿಗಳಲ್ಲೆಲ್ಲಾ ಈ ಕೆಲಸವನ್ನು ಮಾಡಿದವನು ನಯಸೇನನೊಬ್ಬನೇ ಎಂದು ಕಾಣುತ್ತದೆ. ಅವನ ಗದ್ಯದಲ್ಲಿ ಕೆಲವೆಡೆ ಪದ್ಯದಲ್ಲಿಯೂ ಸಹ, ಆಡುಮಾತಿನ ಲಯ ಗೋಚರವಾಗುತ್ತದೆ."[೧೪]

ಕುಮಾರವ್ಯಾಸನ ಶೈಲಿಯನ್ನು ಕುರಿತು ಎಸ್. ವಿ. ರಂಗಣ್ಣನವರು ಹೀಗೆ ಹೇಳಿದ್ದಾರೆ- "ಸುಲಭ ಪ್ರೌಢ ಸಾಮಾನ್ಯ ಅಸಾಧಾರಣ ಕನ್ನಡ ಸಂಸ್ಕೃತಗಳ ಮಧ್ಯೆ ಲೀಲಾಜಾಲವಾಗಿ ಅಡ್ಡಾಡಬಲ್ಲ. ಅಷ್ಟೇಕೆ, ಕನ್ನಡನುಡಿಗೆ ಕಲಶವಿಟ್ಟ ಕವಿಗಳಲ್ಲಿ ಅವನೊಬ್ಬ ಹಿರಿಯ. ಕನ್ನಡದಲ್ಲೇ ಕಾವ್ಯ ಕಟ್ಟುವ ಅಪೇಕ್ಷೆ ಅವನ ಮಹಾಪೇಕ್ಷೆಯಾಗಿತ್ತೊ ಏನೊ ಅವನ ಕೃತಿಗೆ 'ಗದುಗಿನ ಭಾರತ', ಅದಕ್ಕೂ ಹೆಚ್ಚಾಗಿ 'ಕನ್ನಡ ಭಾರತ'ವೆಂಬ ಅಂಕಿತ ಸಂದು ಬಂದಿರುವುದು ನ್ಯಾಯವೇ; ಪೂರ್ಣಸತ್ಯದ ಅರ್ಥದಲ್ಲಿ ಅವನು ವ್ಯಾಸಭಾರತವನ್ನು 'ಕನ್ನಡಿಸಿ'ದ್ದಾನೆ; ಅದಕ್ಕೆ 'ಕನ್ನಡತನ ಹೊದ್ದಿಸಿದ್ದಾನೆ'; 'ಕನ್ನಡಿಗರಿಗೆ' ಅದೊಂದು ಬಲುಬೆಲೆಯ ಕಾಣಿಕೆ. ಎಂಥ ಸಂದರ್ಭದಲ್ಲಾದರೂ ಯಾವ ಪಾತ್ರದ ಬಾಯಿನಲ್ಲಾದರೂ ಕನ್ನಡ ಪದವನ್ನಿಡಲು ಕೊಂಚವೂ ಹಿಂದೆಗೆಯದ ದೃಢ ಮನಸ್ಸಿನ ವೀರ ಅಭಿಮಾನಿ ಅವನು. ಮೊದಲಿನಿಂದ ಕೊನೆಯವರೆಗೂ ಕನ್ನಡ ಸಂಸ್ಕಾರದಿಂದ ಪರಿಪುಷ್ಟವಾದ, ಕನ್ನಡ ಸ್ವಾರಸ್ಯರಸದಲ್ಲಿ ಅದ್ದಿತೆಗೆದ, ಕನ್ನಡ ಕಸ್ತೂರಿಯ ಸುಗಂಧವನ್ನು ಪಸರಿಸುವ ತಿರುಳ್ಗನ್ನಡ ನಮ್ಮ ಕಿವಿಗೆ ತಾಕುವುದರಿಂದ ಹರ್ಷ, ಸಮಾಧಾನ ನಮಗೆ. 'ಧರ್ಮರಾಯ ದ್ಯೂತಕ್ಕೆ ಒಪ್ಪಿದನೇ?', 'ದೈವವಿಕ್ಕಿದ ಕೊರಳಕಣ್ಣಿಯ ಕುಣಿಕೆ ಯಾರಲಿ ಹರಿವುದೈ' ಎಂದು ಮಂದಿಯ ಅನುತಾಪ. ಏಕಲವ್ಯನನ್ನು ದ್ರೋಣಾಚಾರ್ಯ 'ಹಿಂದು ಶಿಷ್ಯರೊಳಧಿಕ ನೀನೆ ಗಂಡುಗಲಿ'ಯೆಂದು ಪ್ರಶಂಸೆಗೈಯುತ್ತಾನೆ ಮುಕ್ತಕಂಠದಿಂದ-ಇಂಥ ಪದಪುಂಜಕ್ಕೆ ಸ್ವಲ್ಪವೂ ಹುಡುಕಬೇಕಾಗಿಲ್ಲ-ತುಂಬಿ ತುಳುಕುತ್ತಿವೆ ಅವು."[೧೫]

---

೧೩. ಎಂ. ಚಿದಾನಂದ ಮೂರ್ತಿ: ನಯಸೇನ ಕನ್ನಡದ ಒಬ್ಬ ಜಾನಪದ-ಚಂಪೂ ಕವಿ, ಸಂಶೋಧನ ತರಂಗ-೨, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೧೧೪

೧೪. ಅಲ್ಲೇ, ಅದೇ, ಪು. ೧೦೦

೧೫. ಎಸ್. ವಿ. ರಂಗಣ್ಣ, ಕುಮಾರವ್ಯಾಸನ ಶೈಲಿ: ಕುಮಾರವ್ಯಾಸ: ಕವಿ ಕಾವ್ಯ ಪರಂಪರೆ-೫: ಐ.ಬಿ. ಎಚ್. ಪ್ರಕಾಶನ, ಬೆಂಗಳೂರು, ೧೯೭೩, ಪು. ೧೨೯-೧೩೦

ಕುಮಾರವ್ಯಾಸ ತನ್ನ ತಲೆಮಾರಿನಲ್ಲಿ ಬೆಳಕನ್ನು ಕಂಡಿರದ, ಬೆಳಕನ್ನು ಕಾಣಲಾರದಿದ್ದ, ಪ್ರಗತಿಶೈಲಿಯ ಕುರುಹನ್ನು ಪ್ರದರ್ಶಿಸಿದ್ದಾನೆ ಅಚ್ಚರಿಕರವಾಗಿ. ಕವಿಭಾಷೆಯ ವಿಚಾರದಲ್ಲಿ ಧಾರಾಳ ಮನೋಭಾವ, ತಡೆಯಿಲ್ಲದೆ ಬಳಕೆಗೊಳ್ಳುವ ಆಡುನುಡಿಯನ್ನು ತನ್ನ ಕಾವ್ಯದಲ್ಲಿ ಸಮಯೋಚಿತವಾಗಿ ತಂದಿಡುವ ನಿರಾಂತಕ ನಾರಣಪ್ಪನದು. 'ಸಾವಿರ ಕುರಿಯ ಹೊಯ್ದರು, ಪಾಂಡವರಾಗುಹೋಗೆನಾಯ್ತು', 'ಬಾಗಿಸಿದ ಬಿಲ್ಲೊಳು ರಾಯರ ಮೂಗಕೊಯ್ದನು ಮದುವೆಯೊಳು' ಹೀಗೆಯೇ ಭಾಷೆಯ ಕುಕ್ಷಿಯೊಳಗಣ ಶಬ್ದವೆಲ್ಲವೂ ಕಾವ್ಯಕ್ಕೆ ಯೋಗ್ಯವಾದ ಶಬ್ದ ಸಾಮಗ್ರಿಯೆ ನಾರಣಪ್ಪನಿಗೆ. 'ರಾಶಿರೂಪಕ'ಗಳನ್ನು ಒಟ್ಟುಗೂಡಿಸಿ ಅಂದವಾಗಿ ಗುಪ್ಪೆ ಹಾಕುವ ಇವು ಸತ್ಯ ಸಹಜವೂ ಆದವಾಗಿವೆ. ಇಂಥ ಗುಣ ಸಮುದಾಯದಿಂದಾಗಿ ಇತರ ಕವಿಶ್ರೇಷ್ಠರಿಂದ ಪ್ರತ್ಯೇಕವಾಗಿ ನಿಲ್ಲುತ್ತಾನೆ ಕುಮಾರವ್ಯಾಸ.

ಭಾಷೆ ಆಡುಮಾತಿಗೆ ಹತ್ತಿರವಿದ್ದರೆ ಸಾಲದು. ಕಾವ್ಯದ ಶೈಲಿಯು ಜನರನ್ನು ಆಕರ್ಷಿಸಬೇಕು. ಅದು ಕೂಡ ಕನ್ನಡತನದಿಂದ ವಿಜೃಂಭಿಸಬೇಕು. ಹಾಗಾಗಬೇಕಾದರೆ ಕಾವ್ಯದ ವಿಧಾನದಲ್ಲಿ ಹೊಚ್ಚಹೊಸತನ, ಜನರ ಜೀವನದಿಂದಲೆ ಅದ್ದಿ ತೆಗೆದಂತಹ ಸುಸ್ಪಷ್ಟ ಚಿತ್ರಗಳು, ಅನುಭವದಿಂದ ಪಡಿಮೂಡಿದಂತಹ ರೂಪಕಗಳು-ಇವು ಈ ಕಾಲದ ಶೈಲಿಗೆ ಹೊಸತನವನ್ನು ತಂದುಕೊಡುವುದರ ಜೊತೆಗೆ ಕನ್ನಡಕ್ಕೆ ಅಚ್ಚಗನ್ನಡ ಶೈಲಿಯನ್ನು ರೂಪಿಸಿ ಕನ್ನಡದ ಪ್ರಾಶಸ್ತ್ಯವನ್ನು ಹೆಚ್ಚಿಸಿವೆ.

ವಸ್ತು ಮತ್ತು ರೂಪ

ವಸ್ತು ಮತ್ತು ರೂಪಗಳಲ್ಲಿ ಸಹ ಕನ್ನಡವು ತನ್ನದೇ ಆದೊಂದು ರಮಣೀಯವಾದ ದೇಶೀಯತ್ವವನ್ನು ಬಳಸುವುದರ ಮೂಲಕ ಅಭಿಮಾನವನ್ನು ವ್ಯಕ್ತಪಡಿಸಿದೆ. ಎಂಬುದನ್ನು ಅತಿ ಸಂಕ್ಷೇಪವಾಗಿ ತೋರಿಸುವುದಕ್ಕೆ ಇಲ್ಲಿ ಯತ್ನಿಸಿದೆ.

"ಕನ್ನಡದ ಸರ್ವಜ್ಞ ವಚನಗಳು ಯಾವ ಪರಕೀಯ ಧರ್ಮ ಶಾಸ್ತ್ರಗ್ರಂಥಗಳ ಅನುವಾದಗಳಾಗಿರದೆ, ಕನ್ನಡ ನಾಡ ಜೀವನದಿಂದ ಆಯ್ದುಕೊಂಡ ಅನುಭವಗಳನ್ನು ಕ್ರೋಢೀಕರಿಸಿ ಜನರ ನಡೆನುಡಿಗಳಿಗೆ ಸಂಬಂಧಿಸಿದ ಉದಾತ್ತ ನೀತಿಯನ್ನು ಅಪೂರ್ವವಾದ ಮಾರ್ಮಿಕ ಶಕ್ತಿಯಿಂದ ಸಾರುತ್ತಿವೆ. ಹೀಗೆಯೆ ವೀರಶೈವರ ವಚನಗಳು ಮತ್ತು ವೈಷ್ಣವ ದಾಸರ ಕೀರ್ತನೆಗಳು ಕನ್ನಡ ಬಾವುಟದ ಮಾಸಿಹೋಗದ ಹೊಂಬಣ್ಣಗಳು."[೧೬]

ತಮ್ಮ ಆಧ್ಯಾತ್ಮಿಕ ವಿಚಾರ ಚರ್ಚೆ, ಧಾರ್ಮಿಕ ಭೋದನೆ, ಅನುಭಾವಿಕ ಅನುಭವಗಳ ಅಭಿವ್ಯಕ್ತಿ-ಇವೆಲ್ಲವನ್ನು ಕನ್ನಡದಲ್ಲಿಯೇ ನಡೆಸಿದರು. ನಿಸ್ಸಂಕೋಚವಾದ ಆತ್ಮವಿಮರ್ಶೆ ಸಂಪ್ರದಾಯದ ಸಂಕೋಲೆಗಳಿಲ್ಲದ ನೇರವಾದ ಅಭಿವ್ಯಕ್ತಿ ಇವು ಪ್ರಮುಖವಾಗಿ ವಚನಸಾಹಿತ್ಯದ ಮೂಲ ಪ್ರೇರಣೆಗಳೆಂದು ಹೇಳಬಹುದು. "ಈ ವಚನ ಸಾಹಿತ್ಯವು ಕೆಳಗಿರುವ ಜನ ಕೇಳಲೆಂದು ಮೋಡದ ಮೇಲಿಂದ ಹೇಳಿದುದಲ್ಲ. ಸಮಾಜದ ಎಲ್ಲಸ್ತರಗಳನ್ನೂ ಪ್ರತಿನಿಧಿಸುವ ಕಣ್ಣೆಲೆಯಂತಹ ಪ್ರಾತಿನಿಧಿಕ ಪ್ರಜಾವರ್ಗದಿಂದ ತನ್ನಿಂದ ತಾನಾಗಿಯೇ, ತನಗಾಗಿಯೇ ಉಸುರಿದ ಬಾಳಿನ

---

೧೬. ಮರಿಯಪ್ಪ ಭಟ್ಟ: ಕನ್ನಡದೊಳಗಣ ದೇಶ್ಯ ಅಂಶಗಳು-ಅವುಗಳ ಮಹತ್ವ: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೨೭, ಸಂ. ೨, ಬೆಂಗಳೂರು, ಪು. ೧೫೨

ಪರಮಾಗಮವಿದು.''[೧೭] ಜನದ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಂಮುಖತೆ ಇದು ದಾಸ ಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿ ಕೆಳಗಿನ ಎಲ್ಲ ಜನದವರೆಗೆ ಹಬ್ಬಿಕೊಂಡಿತು.

ಓದದ ಕನ್ನಡ ಜನಕ್ಕೆ ಪಂಪಾದಿ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ಶರಣರ ಮತ್ತು ದಾಸರ ಸೊಳ್ನುಡಿ, ಸವಿಹಾಡುಗಳು ಗೊತ್ತಿಲ್ಲದವರು ಅಪರೂಪ. ''ಶರಣರು ವಿವಿಧ ರಾಗಗಳಲ್ಲಿ ಚೇತೋಹಾರಿಯಾಗಿ ಹಾಡಿದ ಅವರ ಹಾಡುಗಳನ್ನು ಆಲಿಸಿ, ಜನರು ಆಕರ್ಷಿತರಾಗಿ ದೂರ ದೂರ ದೇಶಗಳಿಂದ ಶರಣರನ್ನು ನೋಡಲು ಬಂದುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಶರಣರ ಈ ವಿಧವಾದ ಗೀತೆ(ಹಾಡು)ಗಳು ಗೇಯವಾಗಿದ್ದವೆಂಬುದು ಸ್ವತಸ್ಸಿದ್ಧ 'ವಚನ'ವೆಂದು ನಾವಿಂದು ಯಾವುದನ್ನು ಕರೆಯುತ್ತಿರುವೆವೋ ಅವೂ ಗೇಯ ಕೃತಿಗಳಾಗಿದ್ದವೆಂಬುದು ಗಮನಾರ್ಹ. ಅರ್ಥಾತ್ ವಚನ-ಗೀತೆ(ಹಾಡು)ಗಳೆರಡೂ ಗೇಯ. ವಚನಗಳಲ್ಲಿ 'ಗೇಯ'ವೆಂಬುದಕ್ಕೆ-ಹರಿಹರಾದಿಗಳು ಶರಣರ ಮೇಲೆ ಬರೆದಿರುವ ಕಾವ್ಯಗಳಲ್ಲಿ ಆ ಶರಣರ ಆ ವಚನಗಳನ್ನು ಗೀತೆಗಳೆಂದು ಕರೆದಿರುವುದೇ ಸಾಕ್ಷಿ.'' ಹೀಗೆ ವಚನಗಳನ್ನು ಗೀತವೆಂದು ಗಣಿಸಿರುವುದಕ್ಕೆ ಇರುವಷ್ಟು ನಿದರ್ಶನಗಳು, 'ಗೀತ'(ಹಾಡು)ಗಳನ್ನು ವಚನ ಎಂದು ಕರೆದಿರುವುದಕ್ಕೂ ಇವೆ. ವಚನ-ವಾಚನ-ಕಾವ್ಯವಾಚನ-ಬಾಜನೆ-ಭಾಜನಗಬ್ಬ-ಬಾಜಾಬಜಂತರಿ-ಇವೆಲ್ಲ ಹಾಡು ಮತ್ತು ವಾದ್ಯಕ್ಕೆ ಸಂಬಂಧಿಸಿದ ಶಬ್ದ ಪ್ರಪಂಚ. ವಾಚನೀಯವಾದುದು ವಚನ-ಅಂದರೆ 'ಗೀತ' ಹೀಗೆ ವಚನಗಳನ್ನು ಹಾಡುತ್ತಿದ್ದರೆಂಬ ಸಂದರ್ಭದಲ್ಲಿ ಹರಿದಾಸರ ಉಗಾಭೋಗಗಳನ್ನು ನೆನಯಬೇಕು''[೧೮]

ದಾಸ ಸಾಹಿತ್ಯ ಕೀರ್ತನೆ, ಸುಳಾದಿ, ಉಗಾಭೋಗ ಈ ಮುಖ್ಯ ರೂಪಗಳಲ್ಲಿದೆ. ಒಂದು ತಾಳ ಸಹಿತವಾದ ರಾಗದಲ್ಲಿ ಹಾಡಬೇಕಾದ ಕೃತಿಯೇ ಕೀರ್ತನೆ. ಸುಳಾದಿಗಳ ರಚನೆ ವಿಶಿಷ್ಟವಾದುದು. ಬೇರೆಬೇರೆ ಸಪ್ತತಾಳಗಳಲ್ಲಿ ರಚಿತವಾದ ಕೃತಿಗಳು ಸುಳಾದಿಗಳು. ಉಗಾಭೋಗಗಳು ಭಾವಗೀತಾತ್ಮಕಗಳಾದ ಕೃತಿಗಳು; ಶುದ್ಧ ಸಾಹಿತ್ಯದ ದೃಷ್ಟಿಯಿಂದ ಹೆಚ್ಚು ಗಮನಾರ್ಹವಾದುವು. ''ಹರಿದಾಸ ಪರಂಪರೆಯಲ್ಲಿ ಮೊದಲ ದೊಡ್ಡ ಹೆಸರೆಂದರೆ ಶ್ರೀ ಪಾದರಾಯರದು (ಸು.೧೪೫೧). ಅವರ ಕಾಲದವರೆಗೆ, ಶ್ರೀ ಬೇಲೂರು ಕೇಶವದಾಸರು ಹೇಳುವಂತೆ, ''ಯಾವ ಮಠದಲ್ಲೂ ಪ್ರಾಕೃತಪದಗಳನ್ನು ಪೂಜಾಕಾಲದಲ್ಲಿ ಹಾಡಿಸುವ ಸಂಪ್ರದಾಯವಿರಲಿಲ್ಲ. ಕನ್ನಡ ಮಾತಾಡಿದರೇ ಮೈಲಿಗೆಯೆಂದು ತಿಳಿಯುವವರ ಕಾಲದಲ್ಲಿ ಕನ್ನಡದ ಹಾಡೆಲ್ಲಿ ಬರಬೇಕು?... ಇಂತಹ ಬಿಕ್ಕಟ್ಟಿನ ಪ್ರಸಂಗದಲ್ಲಿ ಸ್ವಯಂ ಮಹಾಪಂಡಿತರೂ ಸಂಸ್ಥಾನಾಧಿಪತಿಗಳೂ ಆದ ಶ್ರೀಪಾದರಾಯರಂಥವರು ಕನ್ನಡ ದೇವರ ನಾಮಗಳನ್ನು ಮಾಡಿ ಪೂಜಾಕಾಲದಲ್ಲಿ ಭಾಗವತರ ಮುಖದಿಂದ ಹಾಡಿಸಿದ ಸಾಹಸವು ಸಾಮಾನ್ಯವಾದುದಲ್ಲ.''[೧೯]

---

೧೭. ಎಲ್. ಬಸವರಾಜು: ಶಿವದಾಸ ಗೀತಾಂಜಲಿ: ಪು-೩೩

೧೮. ಅಲ್ಲೇ, ಅದೇ, ಪು.|೪೯೭

೧೯. ಎಂ. ಚಿದಾನಂದಮೂರ್ತಿ: ಉಗಾಭೋಗಗಳು ಮತ್ತು ವಚನಗಳು: ಸಂಶೋಧನ ತರಂಗ-೧; ಸರಸಸಾಹಿತ್ಯ ಪ್ರಕಾಶನ, ಮೈಸೂರು, ೧೯೬೭, ಪು. ೩೭

ನಮಗೆ ತಿಳಿದಿರುವಮಟ್ಟಿಗೆ ಉಗಾಭೋಗಗಳನ್ನು ರಚಿಸಿರುವ ಹರಿದಾಸರಲ್ಲಿ ಇವರೇ ಅತ್ಯಂತ ಪ್ರಾಚೀನರು. ಇವರ ಬಳಿಕ ವ್ಯಾಸರಾಯರು, ಪುರಂದರದಾಸರು, ವಿಜಯದಾಸರು ಇತ್ಯಾದಿ ದಾಸವರೇಣ್ಯರು ಅನೇಕ ಉಗಾಭೋಗಗಳನ್ನು ರಚಿಸಿದರು. ಉಗಾಭೋಗಗಳ ರಚನೆಯ ಒಂದು ಪದ್ಧತಿಯೇ ಆರಂಭವಾಯಿತು. ರಗಳೆ, ಷಟ್ಪದಿ, ಸಾಂಗತ್ಯಗಳನ್ನು ಸಹ ಹಾಡುತ್ತಿದ್ದರೆಂದು, ಇವುಗಳು ಸಹ ಹಾಡುಗಬ್ಬಗಳಾಗಿಯೇ ರೂಪುಗೊಂಡಿರುವುದನ್ನು ಕಾಣಬಹುದು.

ಸಾಹಿತ್ಯ ಪ್ರಕಾರಗಳು

ಕನ್ನಡದಲ್ಲಿ ೧೨ನೆಯ ಶತಮಾನದ ಮಧ್ಯಭಾಗದವರೆಗೂ ಸಂಸ್ಕೃತ ವರ್ಣವೃತ್ತಗಳೇ ಬಹಳ ರೂಢಿಯಲ್ಲಿದ್ದುವು. ಪೂರ್ವಕಾಲದಿಂದಲೂ ಶುದ್ಧ 'ಕನ್ನಡ ಛಂದಸ್ಸು' ಇದ್ದಿತೆಂಬುದು ನಿರ್ವಿವಾದ. ಕನ್ನಡ ಛಂದಸ್ಸು ತನ್ನ ಸ್ಥಾನಮಾನಗಳನ್ನು ಪಡೆದು, ಮನೋಹರವಾಗಿ ಬಗೆಬಗೆಯ ಗತ್ತನ್ನು ಹಿಡಿಯಬೇಕಾದರೆ ಸಮರ್ಪಕವಾದ ವಾತಾವರಣವು ಬೇಕಾಗಿದ್ದಿತು. ೧೨ನೆಯ ಶತಮಾನದಲ್ಲಿ ಅಂತಹ ಅನುಕೂಲ ವಾತಾವರಣವು ಪ್ರಾಪ್ತವಾಯಿತು. ಶಿವಶರಣರ ಕ್ರಾಂತಿಯ ಮೂಲಕ ತ್ವರಿತ ಬದಲಾವಣೆಯತ್ತ ಸಾಗಿತ್ತು. ಈ ಪ್ರಭಾವ ಭಾಷೆಯ ಸ್ವರೂಪಕ್ಕಷ್ಟೇ ಸೀಮಿತವಾಗದೆ ಸಾಹಿತ್ಯಪ್ರಕಾರಗಳಿಗೂ ಹಬ್ಬಿತು. ಪದ್ಯ ಹಾಗೂ ಚಂಪೂಮಯವಾಗಿದ್ದ ಕನ್ನಡ ಸಾಹಿತ್ಯ ಈಗ ಗದ್ಯ ಮಾಧ್ಯಮವನ್ನಪ್ಪಿತು. ಸಂಸ್ಕೃತಭೂಯಿಷ್ಠವಾಗಿದ್ದ ಕನ್ನಡ ಈಗ ಕನ್ನಡದಲ್ಲಿಯೇ ಉದ್ಧಾರ ಕಂಡುಕೊಂಡಿತು. ಚಂಪೂಕಾವ್ಯಗಳ ಸ್ಥಾನದಲ್ಲಿ ನಡುಗನ್ನಡದ ವಿಶಿಷ್ಟ ಸಾಹಿತ್ಯ ಪ್ರಕಾರಗಳಾಗಿ ರಗಳೆ, ಷಟ್ಪದಿ ಹಾಗೂ ಸಾಂಗತ್ಯಗಳು ಸ್ಥಾನವನ್ನಪ್ಪಿದವು.

ಕನ್ನಡ ಛಂದಸ್ಸು ಈ ಕಾಲದಲ್ಲಿ ಮಾರ್ಗದಿಂದ ದೇಸಿಯತ್ತ ಹೊರಳಿತು. ಅದನ್ನು ಹಾಗೆ ದೇಸಿಯ ಕಡೆಗೆ ನಿರ್ದಿಷ್ಟವಾಗಿ ತಿರುಗಿಸಿದ ಶ್ರೇಯಸ್ಸು ಹರಿಹರನದು. ಚಂಪೂ ಕಾವ್ಯಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದ ರಗಳೆಯನ್ನು ಪೂರ್ಣಕಾವ್ಯರೂಪವಾಗಿ ಹರಿಹರನು ತನ್ನ ರಗಳೆಯ ಕೃತಿಗಳಲ್ಲಿ ಬಳಸಿಕೊಂಡಿದ್ದಾನೆ. ಅವನು ಛಂದೋರೂಪವಾಗಿದ್ದ ರಗಳೆಯನ್ನು ಸಾಹಿತ್ಯರೂಪಗೊಳಿಸಿ ಮಾಡಿಕೊಂಡು ಹೊಸ ಭಾವ, ಭಾಷೆ, ವಸ್ತುಗಳನ್ನು ಅದರಲ್ಲಿ ಸಂಯೋಗವಾಗಿ ಒಂದು ನೂತನ ಕಾವ್ಯಮಾರ್ಗದ ಸ್ಥಾಪಕನಾಗಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೆರೆದಿದ್ದಾನೆ; ಹಿರಹರನ ರಗಳೆಗಳಲ್ಲಿ ಇದರ ನಿರರ್ಗಳ ಓಟ, ನಯವಾದ ನಡಿಗೆಗಳನ್ನು ಕಾಣಬಹುದು. ಅವನು ಅದರಲ್ಲಿ ಒಂದು ಸ್ಥಲ ಗದ್ಯ ಒಂದು ಸ್ಥಲ ಪದ್ಯಗಳನ್ನು ತಂದು ವೈವಿಧ್ಯವನ್ನು ಸಾಧಿಸಿದ್ದಾನೆ.

ಷಟ್ಪದಿ ಛಂದೋರೂಪದಿಂದ ಸಾಹಿತ್ಯ ರೂಪಕ್ಕಿಳಿದ ಅತಿ ಜನಪ್ರಿಯ ಕನ್ನಡ ಸಾಹಿತ್ಯಪ್ರಕಾರ. ಹರಿಹರನ ರಗಳೆಯನ್ನು ಬಳಸದೆ ಹಿಂದೆ ಇದ್ದ ಷಟ್ಪದಿಯನ್ನು ರಾಘವಾಂಕ ಇಡಿಯಾಗಿ ಕಾವ್ಯಕ್ಕೆ ಬಳಸಿ ಯಶಸ್ಸನ್ನು ಗಳಿಸಿದ. ಏನ್ನಾದರೂ ಇದು ಸ್ವತಂತ್ರಯುಗವಲ್ಲವೆ. ರಾಘವಾಂಕ ಗಳಿಸಿದ ಈ ಯಶಸ್ಸು ಪ್ರಭಾವ ಮುಂದಿನ ಕವಿಗಳ ಮೇಲೆ ಪ್ರಭಾವ ಬೀರಿತು. ಕುಮಾರವ್ಯಾಸನ ಬಗ್ಗೆ ಕೀರ್ತಿನಾಥ ಕುರ್ತಕೋಟಿಯವರು ಹೀಗೆ ಹೇಳುತ್ತಾರೆ: ''ಇಡಿಯ ಕಾವ್ಯದಲ್ಲಿ ಅವನು ಉಪಯೋಗಿಸಿದ್ದು ಒಂದೇ ಛಂದೋಪ್ರಕಾರ; ಕುಮಾರವ್ಯಾಸನ ವಿಚಾರಸರಣಿಯಲ್ಲಿ

ಭಾಮಿನಿಷಟ್ಪದಿಯ ಲಯ ವಿನ್ಯಾಸದಲ್ಲಿಯೇ ನಡೆಯುತ್ತಿದೆಯೆನ್ನುವಷ್ಟು ಅದು ಸಹಜವಾಗಿದೆ. ಅವನು ಉಪಯೋಗಿಸಿರುವ ಭಾಷೆ ಒಂದು ಜನಪದದ ಒಂದು ಕಾಲದ ಭಾಷೆ; ಈ ಭಾಷೆ ಮತ್ತು ಈ ಛಂದಸ್ಸುಗಳಿಂದ ಪ್ರಾಚೀನವಾದ ಮಹಾಭಾರತದ ಕತೆಗೆ ಕುಮಾರವ್ಯಾಸ ಒಂದು ಕಾಲ-ದೇಶವನ್ನು ನಿರ್ಮಿಸಿದ್ದಲ್ಲದೆ ಅದರಲ್ಲಿ ಹೊಸ ಜೀವಕಳೆಯನ್ನು ತುಂಬಿದ. ಇದೆಲ್ಲ ಸಾಧ್ಯವಾಗುವುದಕ್ಕೆ ಕಾರಣವೆಂದರೆ ಕುಮಾರವ್ಯಾಸನ ಪ್ರಜ್ಞೆಯ ಅಖಂಡತೆ ಮತ್ತು ವಿಸ್ತಾರ. ಕವಿಯ ಅನುಭವ, ತಿಳುವಳಿಕೆ ಮತ್ತು ಪ್ರಜ್ಞೆಗಳು ಒಂದು ಸಂವೇದನೆಯಲ್ಲಿ ಪರಿವರ್ತಿತವಾಗಬೇಕಿದ್ದರೆ ಅವೆಲ್ಲ ಅವನ ಕಾಲ, ದೇಶ, ಸಂಸ್ಕೃತಿಗಳ ಕೊಡುಗೆಗಳಾಗಿರಬೇಕು.''[೨೦]

ಸಾಂಗತ್ಯವು ಕನ್ನಡದ ವಿಶಿಷ್ಟ ಛಂದೋರೂಪ. ಕನ್ನಡದ ಮಟ್ಟುಗಳೆಲ್ಲ ತಮ್ಮ ಜೀವನಾಡಿಯೆನಿಸಿದ್ದ ಅಂಶಲಯವನ್ನು ತ್ಯಜಿಸಿ ಮಾತ್ರಬಂಧಕ್ಕೆ ಹೊಂದಿಕೊಂಡರೆ, ಸಾಂಗತ್ಯ ಮಾತ್ರ ತನ್ನ ಮೂಲ ಲಯವನ್ನು ಬಿಟ್ಟು ಕದಲದೆ ಕೊನೆಯವರೆಗೆ ಶುದ್ಧ ದೇಸಿಬಂಧವಾಗಿ ಬಾಳಿ ಬದುಕಿ ಕನ್ನಡದ ಕೀರ್ತಿಕಳಶವೆನಿಸಿತು; ದೇಸಿ ದಿಗ್ವಿಜಯವನ್ನು ಸಾಧಿಸಿದ ಏಕಮೇವ ಅಚ್ಚಗನ್ನಡ ಅಭಿಮಾನಿ ಛಂದಃ ಪ್ರಕಾರವೆನಿಸಿತು. ಕನ್ನಡಮ್ಮನ ಅಚ್ಚಗನ್ನಡದ ಮಗಳಾಗಿ, ರಾಗರಮ್ಯತೆ, ಮೃದುಮಧುರತೆಯನ್ನು ತೋರಿ, ಕನ್ನಡ ಕವಿಗಳ ಪ್ರೀತ್ಯಾದರಗಳಿಗೆ ಪಾತ್ರವಾಗಿದೆ. ಹಗುರಾದ ಭಾವ ಭಾಷೆಗಳನ್ನು ಒಳಗೊಂಡು, ದೇಸಿಯತೆ ಇದರ ತಾಯ್ಬೇರು, ಗೂಢಾರ್ಥ ಸಂಸ್ಕೃತ ಭೂಯಿಷ್ಠತೆಗಳಿಗೆ ಸ್ಥಾನಕೊಡದೆ ಸರಳ, ಸುಂದರವಾಗಿ ಕಂಗೊಳಿಸುತ್ತದೆ.

ಕನ್ನಡದಲ್ಲಿ ಹಿಂದೆ ತೆರೆಮರೆಯಲ್ಲಿದ್ದ ಈ ಸಾಹಿತ್ಯ ಪ್ರಕಾರಗಳನ್ನು ತಮ್ಮ ಕಾವ್ಯಗಳಿಗೆ ಬಳಸಬೇಕು ಆ ಮೂಲಕ ಕನ್ನಡದಲ್ಲಿರುವ ಸಾಮರ್ಥ್ಯವನ್ನು ಎತ್ತಿ ಹಿಡಿಯಬೇಕು ಎನ್ನುವ ಪ್ರಜ್ಞೆ ಈ ಕವಿಗಳಿಗೆ ಬಂದುದು ಕನ್ನಡದ ಅಭಿಮಾನಕ್ಕೆ ಕಾರಣವಾಗಿದೆ.

ದೇಸಿ ಕಾವ್ಯಗಳ ಸ್ವರೂಪ

ದೇಸಿ ಕಾವ್ಯವೆಂದರೆ ರಗಳೆ, ಷಟ್ಪದಿ, ಸಾಂಗತ್ಯ, ಈ ಛಂದಸ್ಸುಗಳಲ್ಲಿ ರಚಿತವಾದ ಕಾವ್ಯ. ಇವುಗಳ ಭಾಷೆ ನಡುಗನ್ನಡ. ಆಡುಮಾತಿಗೆ ಹತ್ತಿರ, ಶೈಲಿ ಬಹು ಸರಳ. ವಿದ್ವಾಂಸರಿಗೆ ಮಾತ್ರವಲ್ಲದೆ ಸಾಮಾನ್ಯ ಜನತೆಗೂ ಅರ್ಥವಾಗಬೇಕು, ಪ್ರಿಯವಾಗಬೇಕು ಎಂಬ ಪ್ರಧಾನ ಉದ್ದೇಶದಿಂದ ರಚಿತವಾದ ಕಾವ್ಯಗಳಿವು.

ಕನ್ನಡಕೊಬ್ಬ ಕ್ರಾಂತಿಕವಿಯಾದ ಹರಿಹರ, ರಾಜರ ಸ್ವತ್ತಾಗಿದ್ದ ಸಾಹಿತ್ಯವನ್ನು ಜನರ ಬಳಿಗೆ ಕೊಂಡೊಯ್ಯುವ ಪ್ರಯತ್ನಮಾಡಿದ. ''ಹರಿಹರನ ರಗಳೆಗಳ ನಿರೂಪಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಕವಿ ತನ್ನ ಮುಂದೆ ಕುಳಿತು ಕೇಳುವ ಸಾಮಾನ್ಯಭಕ್ತ ವೃಂದಕ್ಕೆ ಶಿವಶರಣರ ಕಥೆಗಳನ್ನು ಹೇಳುತ್ತಿದ್ದಾನೆಂದೇ ಅನಿಸುತ್ತದೆ. ಜನಸಾಮಾನ್ಯರೇ ಅವನ ಕೇಳುಗ ಬಳಗ. ಅದಕ್ಕಾಗಿಯೇ, ಅವರಿಗೆ ಅರ್ಥವಾಗುವ ದೇಸಿ ನುಡಿಗಳ ಬಳಕೆ, ಅವರೆಲ್ಲ ಮೆಚ್ಚಬೇಕು-ಕೇವಲ

---

೨೦. ಕೀರ್ತಿನಾಥ ಕುರ್ತಕೋಟಿ : ಜೀವನದರ್ಶನ ಮತ್ತು ಕಾವ್ಯ ಸ್ವರೂಪ: ಕುಮಾರವ್ಯಾಸ, ಐ.ಬಿ.ಎಚ್, ಪ್ರಕಾಶನ, ಬೆಂಗಳೂರು, ೧೯೭೩, ಪು. ೮೨

ಮೆಚ್ಚಿದರೆ ಸಾಲದು ಅವರ ಬಾಳು ಬೆಳಗುವಂತಾಗಬೇಕೆಂಬುದೇ ಹರಿಹರನ ಹೃದಯದಾಸೆ''[೨೧] ಬೇಡರ ಕಣ್ಣಪ್ಪ, ಕುಂಬಾರ ಗುಂಡಯ್ಯ, ರೈತನಾದ ಗುಡಿಮಾರ ಇಂಥವರನ್ನು ಕುರಿತು ಕೃತಿ ರಚಿಸಿ ಕನ್ನಡ ಕಾವ್ಯಲೋಕಕ್ಕೆ ಜನಸಾಮಾನ್ಯರು ಪ್ರವೇಶಿಸುವಂತೆ ಮಾಡಿದ. ರಗಳೆಗಳ ಕಥಾನಾಯಕರಲ್ಲಿ ಕೆಲವರು ಕೈಲಾಸದಲ್ಲಿ ಮಾಡಿದ ತಪ್ಪಿಗೆ ಶಿಕ್ಷೆಯೆಂದು ಭೂಲೋಕಕ್ಕೆ ಇಳಿದವರು. ಮಾನವರಾಗಿ ಹುಟ್ಟಿ ದೈವತ್ವವನ್ನು ಪಡೆಯುವಲ್ಲಿ ಬಂದ ಕಷ್ಟಗಳನ್ನೆಲ್ಲಾ ಸಹನೆಯಿಂದ ಸಹಿಸಿದರು. ಸಾಧನೆಯ ಮೆಟ್ಟಲೇರಿದರು.

ಭಕ್ತಿಯುಗದ ಪ್ರಭಾವ ಮತದ ಮೇರೆಯನ್ನು ಮೀರಿ, ತತ್ಕಾಲೀನ ಕವಿಗಳನ್ನೆಲ್ಲ ಒಳಗೊಂಡಿರುವುದು ಈ ಕಾಲದ ಸಾಹಿತ್ಯದ ವೈಶಿಷ್ಟ್ಯ. ಕುಮಾರವ್ಯಾಸ ಕೇವಲ ಕವಿಯಲ್ಲ; ಭಕ್ತಕವಿ. ಕಾವ್ಯವಸ್ತು ಮಹಾಭಾರತದ ಕಥೆ; ಕವಿ ಹೇಳುವುದು ಕೃಷ್ಣಕಥೆ. ಇಹಲೋಕದ ಮಾನವನ ಎಲ್ಲಾ ಆಗುಹೋಗುಗಳಿಗೂ ಕೃಷ್ಣನೇ ಸೂತ್ರಧಾರ; ಅವನು ಆಡಿಸಿದಂತೆ ಆಡುವ ಮಾನವ ಒಂದು ಬೊಂಬೆ. ನಮ್ಮ ಸಾಧನೆ ನೆಪ; ದೇವತ್ವದ ಅಗಾಧತೆಯ ಅರಿವುನ್ನುಂಟುಮಾಡಿ ಜನಮನದ ಕಳೆಕಿತ್ತು, ಜನರನ್ನು ಮೇಲಕ್ಕೆತ್ತಬೇಕೆನ್ನುವುದೇ ಕಮಾರವ್ಯಾಸನ ಉದ್ದೇಶ.

ಇನ್ನು ಪ್ರಮುಖ ಸಾಂಗತ್ಯ ಕವಿಗಳಾದ ನಂಜುಂಡ, ರತ್ನಾಕರವರ್ಣಿಯರನ್ನು ಗಮನಿಸುವುದಾದರೆ– ''ನಂಜುಂಡ ಕವಿಯ ಕುಮಾರರಾಮನ ಸಾಂಗತ್ಯವು ಪರನಾರಿ ಸೋದರನೆಂದು ಹೆಸರು ಪಡೆದ ಕುಮಾರರಾಮನ ಚರತ್ರೆ. ಮಲತಾಯಿಯಾದ ರತ್ನಾಜಿ ತನ್ನ ತಾಯಿತನವನ್ನು ಮರೆತು ಮಲಮಗನನ್ನೆ ಕಾಮಿಸಲು ಯತ್ನಿಸಿದ, ಹೀನ ಕಾರ್ಯದಿಂದಾಗುವ ಕೌಟುಂಬಿಕ ಮತ್ತು ಸಾಮಾಜಿಕ ಪ್ರಕ್ರಿಯೆಗಳನ್ನು ಕವಿ ಚಿತ್ರಿಸಿರುವನು. ರಾಜಮನೆತನಕ್ಕೆ ಸೇರಿದ ಘಟನೆಯಾಗಿದ್ದರೂ, ರಾಮನಾಥ ಚರಿತ್ರೆಯಲ್ಲಿ ಸಾಮಾಜಿಕ ಜೀವನದ ಸ್ವರೂಪ ನಿರೂಪಿತವಾಗಿದೆ. ''ಅಯ್ಯಾಯ್ಯ ಚೆನ್ನಾದುದೆನೆ ಕನ್ನಡಿಗರು.... ಮೈಯುಬ್ಬಿ ಕೇಳಬೇಕಣ್ಣ'' ಎಂದು ಕನ್ನಡಿಗರ ಮೇಲಿನ ಅಭಿಮಾನದಿಂದಾಗಿ ರತ್ನಾಕರವರ್ಣಿಯು, ಯೋಗ–ಭೋಗ ಸಮನ್ವಯತೆಯನ್ನು, ಜೈನಧರ್ಮವನ್ನು ಭರತ ಚಕ್ರವರ್ತಿಯ ಹಿನ್ನೆಲೆಯಲ್ಲಿ 'ಭತೇಶ ವೈಭವ'ದಲ್ಲಿ ಹೇಳ ಹೊರಟಿದ್ದಾನೆ. ಇದರಲ್ಲಿ ಜನರಿಗಾಗಿಯೇ ಸೃಷ್ಟಿಗೊಂಡಂತಿರುವ ಅರಸನ ವಿನೋದ, ಮನೋರಂಜನೆಗಳಿಗಾಗಿ, ಸಂಗೀತ ಗೋಷ್ಠಿ, ಗಾನ ಗೋಷ್ಠಿ, ಸಾಹಿತ್ಯ ಗೋಷ್ಠಿ, ನಾಟಕಶಾಲೆ, ಕಾವ್ಯ ವಾಚನಗಳಿವೆ. ಸಾಮಾನ್ಯರಿಗಾಗಿ ಉರಿಬಾಳಾ, ಚೆಳು, ಬಾರಾದಿಗಳನ್ನು ಪ್ರದರ್ಶಿಸುವ ಇಂದ್ರಜಾಲವಿದೆ; ಚೆಂದಾಟ, ಪಗಡೆಯಾಟ, ಬೊಂಬೆಯಾಟ, ದೊಂಬರಾಟಗಳಿವೆ.

ತದ್ಭವವನ್ನು ತಡೆದದ್ದೇ ಆದರೆ ಕಾವ್ಯ ರಚನೆ ಸಾಧ್ಯವೆ? ಸಾಧುವೆ? ಈ ಸಾಹಸ ಸತ್ವಯುತವಾಗಿರುವುದೆ? ಅದರಲ್ಲಿ ನವರಸಗಳ ಪ್ರಕಾಶಕ್ಕೂ ಎಡೆಬಿದ್ದಿರೆ ಎಂಬ ವಿಚಾರ ತಲೆತೋರುತ್ತದೆ. ಇಂತಹ ವಿಷಯಗಳನ್ನೆಲ್ಲಾ ಪರಿಶೀಲಿಸಿರುವ ಮುದ್ದಣ ಸಂಸ್ಕೃತವನ್ನು ಹಿತ ಮಿತವಾಗಿ ಬಳಸುವ ತನ್ನ 'ತಿರುಳ್ಗನ್ನಡ'ಕ್ಕೆ ಬಂದಿದ್ದಾನೆ. ಆಂಡಯ್ಯನ 'ಅಚ್ಚಗನ್ನಡ' ಮುದ್ದಣನ 'ತಿರುಳ್ಗನ್ನಡ' – ಇವುಗಳ ಅಂತರವನ್ನು ನಾವು ಅರಿಯಬೇಕು. ಕನ್ನಡ, ತದ್ಭವ ಮತ್ತು ಸಂಸ್ಕೃತ ಈ ಮೂರೂ ಒಗ್ಗೂಡಿದ ಹಳಗನ್ನಡ ಗದ್ಯ ಮುದ್ದಣನದು.

---

೨೧. ಎಸ್.ಎಸ್. ಬ್ಯಾತನಾಳ : ಸಾಮಾಜಿಕ ಪ್ರಜ್ಞೆ; ದೇಸೀ ಕಾವ್ಯಗಳಲ್ಲಿ : ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ, (ಸಂ) ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೭, ಪು. ೨೬

ಮುದ್ದಣ – ಮನೋರಮೆಯರ ಪಾತ್ರ ಸೃಷ್ಟಿ ಮಾಡಿ ರಾಮೇಶ್ವಮೇಧದ ಕಥಾನಕಕ್ಕೆ ಜೋಡಿಸಿದ್ದಾನೆ ಮುದ್ದಣ. ಮುದ್ದಣ ಗದ್ಯದ ಧಾಟಿಯಲ್ಲಿ ಕಥೆಗೆ ತೊಡಗಿರುತ್ತಾನೆ.... ಇದು ಸಿಕ್ಕದದೊಂದು ಚೆಲ್ವು. ವಾಚಕರ ಪ್ರತಿನಿಧಿಯಾದ ಮನೋರಮೆ ಮಧ್ಯದಲ್ಲಿಯೆ ತಡೆಯುತ್ತಾಳೆ. 'ಲೇಸು ಲೇಸು! ನೀರಿಟಿಯದ ಗಂಟಲೊಳ್ ಕಡುಬಂ ತುಱುಕಿತಂದಾಯ್ತು; ಕನ್ನಡದ ಸೊಗಸನಱಿಯಲಾರ್ತೆ ನಿಲ್ಲೆನಗೆ ಸಕ್ಕದದ ಸೊಗಸಂ ಪೇೞ್ವುದು ಗಡ', ಹಿಂದೆ ಸಂಸ್ಕೃತ ಭೂಯಿಷ್ಠವಾದ ಶೈಲಿಯಲ್ಲಿ ಕವಿಗಳು ಬರೆಯುತ್ತಿದ್ದರು; ಅದು ಅಂದಿಗೆ ಅಗತ್ಯವೂ ಆಗಿತ್ತು. ಈಗ ಕನ್ನಡವೇ ಅರ್ಥವಾಗುವುದು ಕಷ್ಟವಾಗಿರುವಾಗ ಸಂಸ್ಕೃತ ಎಷ್ಟು ಜನಕ್ಕೆ ತಿಳಿದೀತು? 'ಅಷ್ಟೊಡಿನ್ನೆಂತೊ ಬರೆವೆಂ? ಎನ್ನುವ ಮುದ್ದಣ್ಣನ ಸಮಸ್ಯೆಯನ್ನು ಜಾಣ್ಮೆಯಿಂದ ಪರಿಹರಿಸುತ್ತಾಳೆ, "ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇಳ್ವುದು. ಕನ್ನಡಂ ಕತ್ತುರಿಯಲ್ತೆ!" ಎಂದು ಕನ್ನಡ ಪ್ರೇಮವನ್ನು ಮೆರೆಯುತ್ತಾಳೆ. "ಕನ್ನಡಂ ಕತ್ತುರಿಯಲ್ತೆ" ಎಂಬ ಮಾತು ಮತ್ತೂ ಅರ್ಥಪೂರ್ಣವಾಗಿ ತೋರುತ್ತದೆ.

ಸಂಸ್ಕೃತವನ್ನು ಸಂಪೂರ್ಣವಾಗಿ ತ್ಯಜಿಸುವುದು ಸಾಧ್ಯವೆ, ಸಾಧುವೆ? ಈ ಪ್ರಶ್ನೆಗೆ ಮುದ್ದಣ ಉತ್ತರ ಕೊಡುತ್ತಾನೆ. 'ಅಪ್ಪುದಪ್ಪುದು, ಆದೊಡಂ ಸಕ್ಕದಮೊಂದೆ ರನ್ನಮಣಿಯಂ ಪೊನ್ನಿಂ ಬಿಗಿದಂತೆಸೆಗುಂ; ಅದಱಿಂ ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ, ತಿರುಳ್ಗನ್ನಡದೊಳೆ ಕತೆಯನು ಸಿರ್ವೆಂ.' ಈ ಮಾತುಗಳಲ್ಲಿ ಮುದ್ದಣ ಸಂಸ್ಕೃತಕ್ಕೂ ಕನ್ನಡಕ್ಕೂ ಒಂದು ಮಧುರ ಬಾಂಧವ್ಯವನ್ನು ಏರ್ಪಡಿಸಿಕೊಂಡಿದ್ದಾನೆ. ಕನ್ನಡದ ನುಡಿಗಳು ಕರಿಮಣಿಗಳ ಹಾಗೆ ಇದ್ದು ನಡನಡುವೆ ಕೆಂಪು ಹವಳಗಳ ಹಾಗೆ ಸಂಸ್ಕೃತದ ನುಡಿಗಳು ಕರಿಮಣಿಗಳ ಹಾಗೆ ಸಂಸ್ಕೃತದ ನುಡಿಗಳು ಸೇರಿಕೊಂಡಿರಬೇಕು. ಚಿನ್ನದ ಸರದ ರತ್ನದ ಪದಕದ ಹಾಗೆ ಕನ್ನಡದ ನುಡಿಯ ಮಾಲೆಯಲ್ಲಿ ನಡುವೆ ಸಂಸ್ಕೃತದ ರತ್ನ ಪದಕ ಹರಳಾಗಿ ಮೆರೆಯಬೇಕು. ಇದು ಮುದ್ದಣನ ಆಶಯ. ಅನಗತ್ಯವಾದ, ಕ್ಲಿಷ್ಟವಾದ ಸಂಸ್ಕೃತ ಬೇಡ; ಅಗತ್ಯವಾದ, ಸುಲಲಿತವಾದ ಸಂಸ್ಕೃತ ಬೇಕು. ಸಂಸ್ಕೃತವನ್ನು ದೂರಿಕರಿಸದೆ ಅದಕ್ಕೆ ಯಥಾ ಯೋಗ್ಯವಾದ ಸ್ಥಾನವನ್ನು ಕಲ್ಪಿಸಿ ಪುರುಳು ಕನ್ನಡಕ್ಕೆ ಒದಗಿ ಅದು ತಿರುಳುಗನ್ನಡವಾಗಿ ಬೆಳಗಬೇಕಾದರೆ ರಸ ಅದರಲ್ಲಿ ಒಸರಬೇಕಾದರೆ ಲಕ್ಷಣ ಮಿಕ್ಕಿರಬೇಕಾದರೆ ಸಂಸ್ಕೃತವನ್ನು ಸ್ಥಾನಾಸ್ಥಾನ ವಿವೇಚನಾ ದೃಷ್ಟಿಯಿಂದ ಬಳಸಿಕೊಳ್ಳಬೇಕೆನ್ನುವ ಮುದ್ದಣನ ಮಾರ್ಗದರ್ಶಕವಾದ ಸೂಚಕವು ಯಾಗ್ಯವಾದುದೇ ಆಗಿದೆ.

ಎಸ್.ವಿ. ಪರಮೇಶ್ವರ ಭಟ್ಟರು ಹೇಳುವಂತೆ– "ಒಂದು ನೂರು ವರ್ಷಗಳ ಹಿಂದೆ ನಮ್ಮ ಉಡುಪಿಯ, ಮಂಗಳೂರಿನ ಸುತ್ತಮುತ್ತಣ ಎಲ್ಲ ಜನರು–ಗಂಡಸರು, ಮಕ್ಕಳು–ಬಳಕೆಯ ಆಡುನುಡಿಯನ್ನಾಗಿ ಹಳಗನ್ನಡವನ್ನು ಚಾಲ್ತಿಯಲ್ಲಿರಿಸಿಕೊಂಡಿದ್ದರು ಎನ್ನಿ. ಆಗ ಅವರು ಹೇಗೆ ಮಾತನಾಡುತ್ತಿದ್ದಿರಬೇಕು? ಹೇಗೆ ಆಡಿದ್ದರೆ ಅದು ಹಳಗನ್ನಡದ ನುಡಿಕಟ್ಟಾಗುತ್ತಿತ್ತು ಎಂದು ಪ್ರಶ್ನಿಸಿದರೆ ಮುದ್ದಣ ಮನೋರಮೆಯರ ಸಂವಾದದ ಹಳಗನ್ನಡದಂತಹ ಆಡುವ ಭಾಷೆಯನ್ನು ಅವರು ಬಳಸುತ್ತಿದ್ದರು ಎಂದೇ ಹೇಳಬೇಕಾದೀತು." ಇಲ್ಲಿಯ ಶಬ್ದ ಹಾಗೂ ಪ್ರತ್ಯಯಗಳು ಹಳಗನ್ನಡದವು. ಆದರೆ ವಾಕ್ಯ ರಚನೆಯ ಕ್ರಮ, ಪದಗಳ ಹೊಂದಾಣಿಕೆ ಮಾತಿನ ಧಾಟಿ, ಲಯ, ರಸೌಚಿತ್ಯಗಳನ್ನು ಗಮನಿಸಿ ಆಡುವ ನುಡಿಕಟ್ಟು, ಅಪ್ರತಿಮವಾದ ವಾಕ್ಕೌಶಲ ಹಾಗೂ ಸಂವೇದನೆಗಳು ಆಧುನಿಕವಾಗಿವೆ, ಆಡುಮಾತಿಗೆ ಸಮೀಪದವಾಗಿವೆ.

ಶೈಲಿ

ಮುದ್ದಣನಿಗೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನ ದೊರಕಿರುವುದಕ್ಕೆ ಆತನು ರೂಢಿಸಿಕೊಂಡಿರುವ ಗದ್ಯ ಶೈಲಿಯು ಒಂದು - 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂಬುದೇ. ಅದು ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪದ್ಯದಿಂದ ಗದ್ಯಕ್ಕೆ ಇವರ ಮನಸ್ಸನ್ನು ತಿರುಗಿಸುವ ಬೇಸಾಯವನ್ನು ಮಾಡಿ ಸಮೃದ್ಧಿಯಾದ ಕನ್ನಡದ ಬೆಳೆಯನ್ನು ಮುದ್ದಣ ಬೆಳೆದಿದ್ದಾನೆ. ಮುದ್ದಣನ ಗದ್ಯ ಶೈಲಿಯ ಮತ್ತೊಂದು ಲಕ್ಷಣ ಅದರ ಲಯ ಮತ್ತು ಆ ಲಯದ ಮಾಧುರ್ಯಗುಣ. ಭಾಷೆ ಆಡುಮಾತಿನ ಹತ್ತಿರಕ್ಕೆ ಬರಬೇಕಾದರೆ ಬರಿ ಶಬ್ದಗಳ ಆಡಂಬರದಿಂದ ಮಾತ್ರವಲ್ಲ-ನುಡಿಕಟ್ಟಿನಲ್ಲಿ, ಲಯದಲ್ಲಿ ಹಾಗೂ ಸಂವೇದನೆಯಲ್ಲಿಯು ಕೂಡ ಅದು ಜನರ ಸಮೀಪವಾಗಬೇಕು ಎನ್ನುವ ತನ್ನ ನಿಲುವನ್ನು ಎತ್ತಿ ಓಡಿದಿದ್ದಾನೆ. ಮುದ್ದಣ ಪ್ರಾಸಪ್ರಿಯ. ಈ ಪ್ರಾಸ ಪ್ರೀತಿ, ಈ ಶಬ್ದಾಲಂಕಾರದ ಬೆಡಗು ಮುದ್ದಣನಲ್ಲಿ ಒಂದು ಅತಿಶಯ. ಜನಪದ ಸಾಹಿತ್ಯದಲ್ಲಿ ಈ ಪ್ರಾಸವೈಭವ ತಾನೇ ತಾನಾಗಿ ವಿಜೃಂಭಿಸುತ್ತದೆ, ಪ್ರಾಸ ಕನ್ನಡಕ್ಕೆ ಸಹಜವಾದದ್ದು ಅತಿಶಯವಾದದ್ದೇ ಯತಿ. ಯತಿಯನ್ನು ಬಿಟ್ಟು ಪ್ರಾಸಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿದ್ದಾನೆ.

ಒಟ್ಟಾರೆಯಾಗಿ ಈ ಕಾಲದ ಕನ್ನಡ ಸಾಹಿತ್ಯವು ಕನ್ನಡ ಭಾಷೆಯನ್ನು ಬಳಸುವುದಲ್ಲದೆ ತಮ್ಮ ಕಾವ್ಯಗಳು ಜನಸಾಮಾನ್ಯರಿಗೆ ತಲುಪಬೇಕೆಂಬ ಉದ್ದೇಶದಿಂದ ಕನ್ನಡ ಛಂದಸ್ಸು, ದೇಸಿಯ ವಸ್ತುಗಳನ್ನು ತಮ್ಮ ಕಾವ್ಯಕ್ಕೆ ತಂದು ಕನ್ನಡದ ಶಕ್ತಿಯನ್ನು ಹೆಚ್ಚಿಸಿದರು.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕನ್ನಡ ಅಭಿಮಾನವು ಈ ರೀತಿಯಾಗಿದೆ. ದೇಸಿಯ ನುಡಿಯನ್ನು ಬಳುಸುವುದರ ಮೂಲಕ ಕನ್ನಡವನ್ನು ಎತ್ತರಕ್ಕೆ ಕೊಂಡೊಯ್ಯಲು ಪ್ರಯತ್ನಿಸಿ ಸಫಲರಾದದ್ದು. ಸಂಸ್ಕೃತದ ವರ್ಣವೃತ್ತಗಳನ್ನು ಬಿಟ್ಟು ಕನ್ನಡ ಛಂದಸ್ಸಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟದ್ದು. ಯತಿಯನ್ನು ಬದಿಗಿರಿಸಿ ಪ್ರಾಸವನ್ನು ಹೆಚ್ಚು ಉಪಯೋಗಿಸಿದ್ದು. ಪದ್ಯಭಾಷೆ ಆಡುಮಾತಿಗೆ ಸಮೀಪವಾಗಿರಬೇಕೆನ್ನುವ ಕವಿಗಳ ಪ್ರಜ್ಞಾಪೂರ್ವಕ ನಡವಳಿಕೆ. ಸಂಸ್ಕೃತದಿಂದ ಎರವಲು ಪಡೆಯುತ್ತಿದ್ದ ಕಥೆಗಳನ್ನು ದೂರವಿಟ್ಟು ದೇಸಿಯ ಕಥೆಗಳಿಗೆ, ಕನ್ನಡ ಸಾಹಿತ್ಯದೊಳಗೆ ಜನಸಾಮಾನ್ಯರೂ ಪ್ರವೇಶಮಾಡಿ ಕನ್ನಡತನವನ್ನು ಮೆರೆಸಿದ್ದು. ಮಹಲಿಂಗರಂಗ ಹೇಳುವ ಹಾಗೆ- ''ಸುಲಿದ ಬಾಳೆಯ ಹಣ್ಣಿನಂದದಿ, ಕಳಿದ ಸಿಗುರಿನ ಕಬ್ಬಿನಂದದಿ'' ಕನ್ನಡತನವು ಸಿಹಿಯಾಗಿ ಎಲ್ಲೆಲ್ಲೂ ಹಬ್ಬಿ ಪಸರಿಸಿತು.

ಗ್ರಂಥ ಋಣ:

೧. ಜಿ.ಎಸ್. ಶಿವರುದ್ರಪ್ಪ (ಸಂ): ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ-೩, ಬೆಂಗಳೂರು ವಿಶ್ವವಿದ್ಯಾಲಯ, ೧೯೭೬

೨. ಹಾ.ಮಾ. ನಾಯಕ (ಸಂ): ಕನ್ನಡ ಸಾಹಿತ್ಯ ಚರಿತ್ರೆ, ಸಂ. ೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೪

೩. ಜಿ.ಎಸ್. ಶಿವರುದ್ರಪ್ಪ (ಸಂ): ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೭

ನಡುಗನ್ನಡ ಕಾವ್ಯಗಳಲ್ಲಿ ನಾಡು-ನುಡಿ ನಾಡವರ ಬಗೆಗಿನ ವರ್ಣನೆಗಳು

ಟಿ.ಆರ್. ಮಹಾದೇವಯ್ಯ

ತಾನು ಜನ್ಮ ತಳೆದ ತಾಯ್ನಾಡಿನ ಬಗ್ಗೆ ಅಭಿಮಾನ ತಳೆಯದವರಾರು? ಎದೆಹಾಲಿನೊಡಗೂಡಿ ಬಂದ ನುಡಿ-ತಾಯ್ನುಡಿಯ ಬಗ್ಗೆ ಪ್ರೀತಿ ಹೊಂದದವರಾರು? ಜನ್ಮಭೂಮಿ ಸಗ್ಗಕ್ಕಿಂತ ಮಿಗಿಲು, ತಾಯ್ನುಡಿ ಜೀವಸರ್ವಸ್ವ. ನಾಡು ಸಂಪದ್ಭರಿತವಾಗಿದ್ದರೆ, ಸಂಸ್ಕೃತಿ ಶ್ರೀಮಂತವಾಗಿದ್ದರೆ ಹೊಗಳುವ ನಾಲಗೆ ಮತ್ತಷ್ಟು ಚುರುಕಾಗುತ್ತದೆ. ಕನ್ನಡನಾಡು ಪ್ರಾಚೀನತೆಯಲ್ಲಿ, ನಾನಾ ಕ್ಷೇತ್ರಗಳಲ್ಲಿನ ಸಿರಿವಂತಿಕೆಯಲ್ಲಿ ಇತಿಹಾಸ ಪ್ರಸಿದ್ಧವಾಗಿದೆ. ಕನ್ನಡ ನಾಡುನುಡಿಗೆ ಎರಡು ಸಹಸ್ರ ವರ್ಷಗಳ ಹಿರಿತನವಿದೆ. ಯಾವುದೇ ಸುಪ್ರೌಢ ವಿಚಾರಗಳಿರಲಿ. ವಿಜ್ಞಾನ-ಸುಜ್ಞಾನವಿರಲಿ ಅದನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸುವ ಸಾಮರ್ಥ್ಯವಿದೆ. ಅದು ಶಾಸನಗಳಲ್ಲಿ, ಕೃತಿಗಳಲ್ಲಿ, ಜಾನಪದ ಸಾಹಿತ್ಯದಲ್ಲಿ. ಆಡುಮಾತಿನಲ್ಲಿ ಜೀವಂತವಾಗಿದೆ. ಈ ನೆಲದಲ್ಲಿ ಹುಟ್ಟಿದ್ದ ಜನ ವೀರರೂ ತ್ಯಾಗಿಗಳೂ ಜ್ಞಾನಿಗಳೂ ಮಾನವೀಯ ಗುಣ ಸಂಪನ್ನರೂ ಆಗಿದ್ದಾರೆ. ತಮ್ಮ ಉದಾರ ನಿಲುವಿನಿಂದಾಗಿ ಅನೇಕ ಧರ್ಮಗಳಿಗೆ, ಸಂಸ್ಕೃತಿಗಳಿಗೆ ನಾಡಲ್ಲಿ ಆಶ್ರಯವಿತ್ತಿದ್ದಾರೆ. ಇಷ್ಟಾದರೂ ನಾಡವರು ತಮ್ಮತನವನ್ನುಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ. ಇಂಥದೆಲ್ಲವನ್ನು ಗಮನಿಸಿದ ನಮ್ಮ ಕವಿಗಳು ತಮ್ಮ ಕಾವ್ಯಗಳಲ್ಲಿ ಮನದುಂಬಿ ಬಣ್ಣಿಸಿದ್ದಾರೆ.

ಕನ್ನಡನಾಡನ್ನು ಕಾವ್ಯದ ಆರಂಭದಲ್ಲಿ ನೇರವಾಗಿ ಅಥವಾ ಕಾವ್ಯದೊಳಗೆ ಅವಕಾಶ ದೊರೆತಾಗ ವರ್ಣನೆ ಮಾಡಿದ್ದಾರೆ. ನಮ್ಮ ದೇಶವನ್ನು ಸಮಗ್ರವಾಗಿ ಕಂಡು ಇಡಿಯಾಗಿ ವರ್ಣಿಸಿರುವ ನಿದರ್ಶನಗಳು ಇದ್ದಂತೆ, ಕಾವ್ಯದ ಸಂದರ್ಭಕ್ಕೆ ಉಚಿತವೆನಿಸುವ ನಾಡಿನ ಯಾವುದೋ ಪ್ರದೇಶವನ್ನು ಅಥವಾ ಕವಿಗೆ ಪ್ರಿಯವೆನಿಸುವ ಪ್ರದೇಶವನ್ನು ಪರಿಚಯಿಸುತ್ತಾ ವರ್ಣಿಸಿರುವುದೂ ಉಂಟು.

ಹೀಗೆ ನಮ್ಮ ಕವಿಗಳು ತಮ್ಮ ಕಾವ್ಯಗಳಲ್ಲಿ ಕಂಡರಿಸಿರುವ ನಾಡು-ನುಡಿ, ನಾಡವರ ಬಗ್ಗೆ ಮಾಡಿದ ಬಣ್ಣನೆಗಳನ್ನು ಸಂಕಲಿಸಿದರೆ ಒಂದು ಅದ್ಭುತವಾದ ದೇಶಪ್ರೇಮದ ಸಂಪುಟವಾಗುತ್ತದೆ.

ಮಧ್ಯಕಾಲೀನ ಯುಗದ ನಮ್ಮ ಕವಿಗಳು ನಮ್ಮ ನಾಡು-ನುಡಿ-ಸಂಸ್ಕೃತಿಗಳ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ನೋಡುವ ಪ್ರಯತ್ನ ಇಲ್ಲಿದೆ. ಈ ಕಾಲಮಾನದ ಕೃತಿಗಳ ಸಂಖ್ಯೆ ವಿಪುಲ. ಮಾರ್ಗಕಾವ್ಯಗಳ ಚಂಪೂ ಸಂಪ್ರದಾಯ ಹಿಂದೆ ಸರಿದು ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮೊದಲಾದ ದೇಶೀಯ ಛಂದಸ್ಸುಗಳು ಕಾವ್ಯವಾಹಕಗಳಾಗಿ ವಿಜೃಂಭಿಸಿದ ಕಾಲ, ಕೇವಲ ಪಂಡಿತರ ತುತ್ತಾಗಿದ್ದ ಸಾಹಿತ್ಯವನ್ನು ಜನಸಾಮಾನ್ಯರಿಗೂ ಮುಟ್ಟಿಸುವ ಜನಪರ ಕಾಳಜಿ ಹೊತ್ತ ನಮ್ಮ ಕವಿಗಳು ದೇಶೀಯ ಛಂದದಲ್ಲಿ ಕಾವ್ಯ ರಚನೆ ಮಾಡಿದ್ದಾರೆ. ಅಂಥ ಕಾವ್ಯಗಳಿಂದ ಕೇವಲ ಪ್ರಾತಿನಿಧಿಕವಾದ ಕೆಲವು ವರ್ಣನೆಗಳನ್ನು ಇಲ್ಲಿ ಪರಿಶೀಲಿಸೋಣ.

ರಾಘವಾಂಕ ತನ್ನ 'ಹರಿಶ್ಚಂದ್ರಕಾವ್ಯ'ದಲ್ಲಿ ಕನ್ನಡನಾಡಿನ ಪ್ರಸಿದ್ಧವಾದ ಪಂಪಾಕ್ಷೇತ್ರವನ್ನು ಬಣ್ಣಿಸಿದ್ದಾನೆ. ಹಂಪೆಯು ಕವಿಗೆ ಬಹಳ ಪ್ರಿಯವಾದ ಸ್ಥಳ. ಅದು ವಿರೂಪಾಕ್ಷನ ಪವಿತ್ರ ಸನ್ನಿಧಿ ಜೊತೆಗೆ ರಮಣೀಯವಾದ ಪ್ರಾಕೃತಿಕ ಹಿನ್ನೆಲೆಯುಳ್ಳ ಇತಿಹಾಸ ಪ್ರಸಿದ್ಧ ಸ್ಥಳ. ಇದರ ಪರಿಚಯವನ್ನು ಹರಿಶ್ಚಂದ್ರನಿಗೆ ವಶಿಷ್ಠ ಮಹಾಮುನಿ ಮಾಡಿಕೊಡುವಂತೆ ಕವಿ ರಚಿಸಿದ್ದಾನೆ.

ಅದು ಹೇಮಕೂಟ ಮತ್ತದು ಮತಂಗಾದ್ರಿ ಹೋ
ಗದು ಮಾಲ್ಯವಂತ ನಿಂತವರ ಮಹಿಮೆಗಳನು
ಮದನಹರನೇ ಬಲ್ಲನೆಂದು ತೋರಿದನು ಭೂನಾಥಂಗೆ ಮುನಿನಾಥನು ॥

ರಾಜ ಹರಿಶ್ಚಂದ್ರ ವಶಿಷ್ಠರನ್ನು "ಅಂಗ ವಂಗ ಕಳಿಂಗ ದೇಶಂಗಳೊಳು ನಿಮ್ಮ ಕಂಗೆ ಸೊಗಸುವ ನಾಡಬೇಡಿ ನಾನೀವೆನು" ಎಂದಾಗ ಅವರು ಹೇಳುವುದು ಹೀಗೆ: "ತುಂಗಭದ್ರಾ ತೀರಮಂ ಬಿಟ್ಟು ಭೂಪನಾವೆಲ್ಲಿಗಂ ಬಾರೆವು." ಇಲ್ಲಿ ಕವಿ ತನ್ನ ಪ್ರದೇಶಾಭಿಮಾನವನ್ನು ಕಾವ್ಯದ ಪಾತ್ರದ ಮೂಲಕ ವ್ಯಕ್ತಗೊಳಿಸಿರುವುದನ್ನು ಕಾಣುತ್ತೇವೆ.

ಆಂಡಯ್ಯನ ದೇಶಾಭಿಮಾನ ಅನ್ಯಾದೃಶವಾದುದು. ಆ ನಾಡಿನ ಅಗ್ಗಳಿಕೆಯನ್ನು ವರ್ಣಿಸಲು ಸಹಸ್ರ ನಾಲಿಗೆಯುಳ್ಳ ಆದಿಶೇಷನಿಗೇ ಸಾಧ್ಯವಾಗದು. ಅಂದಮೇಲೆ ಒಂದೇ ನಾಲಗೆಯುಳ್ಳ ನಾನು ಹೇಗೆ ವರ್ಣಿಸಲಾದೀತು! ಎಂಬ ಉದ್ಗಾರದೊಡನೆ ಕನ್ನಡವೆನಿಸುವ ನಾಡು ಹೇಗೆ ಚೆಲುವಾಗಿದೆ ಎಂಬುದನ್ನು ಸಕಾರಣವಾಗಿ ವಿವರಿಸುತ್ತಾ ಹೋಗಿದ್ದಾನೆ.

ಪಲವುಂ ನಾಲಗೆಯುಳ್ಳವಂ ಬಗವೊಡೆಂದುಂ ಬಣ್ಣಿಸಲ್ಕಾರನಾ
ನೆಲನುಂ ಮತ್ತಿನ ಮಾನಿಸರ್ ಪೊಗಳಲೇನಂ ಬಲ್ಲರೆಂಬೊಂದು ಬ
ಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು ಮೆ
ಲ್ಲಲರಿಂ ಪೂತಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ.

ಆ ನಾಡಿನ ತುಂಬ ಇರುವಂಥವು ಮಲ್ಲಿಗೆ, ಸಂಪಗೆ ಮೊದಲಾದ ಹೂಗಳು ಮತ್ತು ದಾಳಿಂಬೆ, ಮಾವು, ಕೆಂದೆಂಗು ಮೊದಲಾದ ಫಲಮರಗಳು ಮಾತ್ರ.

ಚಾಮರಸ ಕವಿ ತನ್ನ 'ಪ್ರಭುಲಿಂಗಲೀಲೆ'ಯಲ್ಲಿ ಕನ್ನಡ ನಾಡಿನ ಪ್ರಸಿದ್ಧವಾದ ಬೆಳುವಲನಾಡನ್ನು ವರ್ಣಿಸಿದ್ದಾನೆ:

ಸತ್ಯದಲಿ ಸದ್ಭಕ್ತಿಯಲಿ ಸ
ದ್ವೃತ್ತಿಯಲಿ ಸಚ್ಚರಿತದಲಿ ಸಂ
ಪತ್ತಿನಲಿ ಸಲೆ ಸೊಗಸಿ ಬೆಳುವಲದೇಶ ಮೆರೆದಿಹುದು.

ಇಂಥ ನಾಡಿನಲ್ಲಿ ಶೃಂಗಾರ ಸಾರದ ಸದನವಾಗಿ, ಸೊಬಗಿನ ಸುಮಾನದ ಸುಖದ ನೆಲೆವೀಡಾಗಿ ಸಕಲ ಸೌರಂಭದಲಿ ಬನವಸೆಯೆಂಬ ಪಟ್ಟಣವು ಸೊಗಸಿದುದು. ಇವೊತ್ತಿನ ಬನವಾಸಿಯನ್ನು ನೋಡಿರುವವರಿಗೆ ಕವಿಯ ಈ ವರ್ಣನೆ ಉತ್ಪ್ರೇಕ್ಷೆಯಲ್ಲ ಎನಿಸದಿರದು:

ಆವ ಕಾಲದಲಾದಡೆಯು ಫಲ
ತೀವುತಿಹ ಹಲಸುಗಳು ನೇರಿಲು
ಮಾವು ದಾಡಿಮ ತೆಂಗುನಾರಂಗಾದಿ ತರುಲತೆಯ
ತೀವಿ ಚರಿಸುವ ಶುಕಪಿಕ ಭ್ರಮ
ರಾವಳಿಯ ನಾನಾವಿಧದ ಶೋ
ಭಾವಹವೆ ತಾನಾದುದು ಬನವಸೆಯುದ್ಯಾನ.

ಅಲ್ಲಿನ ಜನರು ಎಂಥವರಿದ್ದರು? 'ನುಡಿದು ಜಾಣರು ಸಕಲ ಶಬ್ದವ, ನುಡಿದು ಜಾಣರು ನಿಖಿಳ ರೀತಿಯ, ಕುಡಲು ಜಾಣರು ಕುಂದದಂತಿರರ್ಥಿಗರ್ಥವನು ಪೊಡವಿಗಿದು ಪೊಸತು'.

ಕವಿ ನಂಜುಂಡ ತನ್ನ 'ರಾಮನಾಥ ಚರಿತೆ'ಯಲ್ಲಿ ಕರ್ನಾಟಕವು 'ಸಿರಿಯಿಂದ ಸಿಂಗರದಿಂದ ಸೊಬಗಿನಿಂದ ಕರಮೆಸೆವುದು' ಎಂದು ವರ್ಣಿಸಿ ಕರ್ನಾಟಕ ದೇಶದ ಹಬ್ಬುಗೆಯನ್ನು ಸೂಚಿಸಿದ್ದಾನೆ.

ಕಾವೇರಿಯಿಂದ ಗೋದಾವರಿವರೆಗಮಿ
ರ್ದ್ದಾ ವಸುಧಾತಳವಳಯ
ಭಾವಿಸೆ ಕರ್ನಾಟಕ ಜನಪದವದ
ನಾವನೊಲಿದು ಬಣ್ಣಿಸುವೆನು..........

ವಿರೂಪಾಕ್ಷ ಪಂಡಿತನು ತನ್ನ 'ಚೆನ್ನಬಸಪುರಾಣ'ದಲ್ಲಿ ಕಲ್ಯಾಣ ಪಟ್ಟಣವನ್ನು ವರ್ಣಿಸುವ ನೆಪದಲ್ಲಿ ನಾಡಸಿರಿ ಹೇಗೆ ಮೆರೆದಿದೆ ನೋಡಿ ಎಂದು ವರ್ಣಿಸಲು ಆರಂಭಿಸಿದ್ದಾನೆ. ಅದು ಆರ ವಾರ್ಧಕ ಷಟ್ಪದಿಗಳಲ್ಲಿ ಮನೋಜ್ಞವಾಗಿ ಹರಿದಿದೆ.

ಶಬ್ದಾಲಂಕಾರದಲ್ಲಿ ರಾಜಿಸುವ ಪದ್ಯ ಇದು:

ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ ಮಳೆಗಳಿಂ
ದಲ್ಲಿಗಲ್ಲಿಗೆ ವನಸ್ಥಳಂಗಳಿಂ ಕೊಳಗಳಿಂ
ದಲ್ಲಿಗಲ್ಲಿಗೆ ರನ್ನದರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ
ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಂ ಕರಿಗಳಿಂ
ದಲ್ಲಿಗಲ್ಲಿಗೆ ದೆರೆದ ಶುಕಗಳಿಂ ಪಿಕಗಳಿಂ
ದಲ್ಲಿಗಲ್ಲಿಗೆ ಗವಾಸ್ಪದಗಳಿಂ ನದಗಳಿಂದಾ ದೇಶಮೊಪ್ಪಿರ್ದುದು ||

ಕನ್ನಡ ನಾಡಿನ ಕಲ್ಯಾಣ ಸೊಬಗಿನ ಬೀಡು. ಅಲ್ಲಿನ ಉದ್ಯಾನದ ವರ್ಣನೆ ಸಾರಾಲಂಕಾರದಲ್ಲಿ ಸೊಗಸಾಗಿ ಮೂಡಿದೆ:

ಕಂಜ ಕುಮುದಂಗಳಿಲ್ಲದ ಸರಂ ಸರದಿಂದೆ
ರಂಜಿಸದ ಶುಕಪಿಕಂ ಶುಕಪಿಕಂಗಳ್ಗೆ ಫಲ
ಮಂಜರಿಯನೀಯದ ಮಾವು ಮಾವುಗಳಪ್ಪದ ಬಳ್ಳಿ ಬಳ್ಳಿಗಳೊಳಂ
ಮಂಜುಳ ಧ್ವನಿಗುಡದ ಪರಮೆ ಪರಮೆಗೆ ಸಂತ
ಸಂ ಜನಿಸಿದರಲ ಸರಲ ನವಪರಿಮಳಂಗಳಿಂ
ದಂ ಜಡಿಯದೆಳಗಾಳಿಯೆಳಗಾಳಿಯಿಲ್ಲದಿಹ ಬನಮಿಲ್ಲವಾ ನಾಡೊಳು ॥

ನಾಡಿನ ಪ್ರಾಕೃತಿಕ ಸಂಪತ್ತು ಎಷ್ಟು ಸಂಮೃದ್ಧ ಎಂಬುದನ್ನು ಕವಿ ಮನದುಂಬಿ ಪಟ್ಟಿಮಾಡಿದ್ದಾನೆ.

ಗೋವಿಂದವೈದ್ಯ 'ಕಂಠೀರವ ನರಸರಾಜ ವಿಜಯ'ದಲ್ಲಿ ಚಪ್ಪನ್ನ ದೇಶಗಳಲ್ಲಿ ಕರ್ನಾಟಕ ದೇಶ ಹೇಗೆ ಚೆಲುವಾಗಿದೆ, ಅಲ್ಲಿನ ಲೋಕಪಾವನಿಯೆನಿಸುವ ಕಾವೇರಿ ನದಿ ಹೇಗೆ ಶೋಭಿಸುತ್ತಿದೆ ಎಂಬುದನ್ನು ಉಚಿತವಾಗಿ ಬಣ್ಣಿಸಿದ್ದಾನೆ.

ಚಪ್ಪನ್ನದೇಶ ರಾಜಿತಮಾ ಸ್ತ್ರೀಮುಖ
ದರ್ಪಣದಂತೆ ಮೋಹನನೆ
ಇರ್ಪುದು ಕರ್ನಾಟಕ ರಾಜ್ಯ ಚೆಲುವಾಂತು
ವೊಪ್ಪುವ ಸಕಲ ಸಂಭ್ರಮದೆ ॥

ಆ ಕರ್ನಾಟ ದೇಶದಲಿ ಪ್ರವಹಿಸಿ
ಲೋಕ ಪಾವನೆಯೆಂದೆನಿಸಿ
ಸೋಂಕಿದವರ ದುರಿತವ ಪರಿಹರಿಸುತ
ಶ್ರೀಕಾವೇರಿಯೊಪ್ಪಿಹಳು ॥

ತಿಮ್ಮಕವಿಯ 'ಯಾದವಗಿರಿ ಮಹಾತ್ಮೆ'ಯಲ್ಲಿ ಬರುವ ನಾಡವರ್ಣನೆ ಮತ್ತಷ್ಟು ರೋಚಕವಾಗಿದೆ. ಮೇರುಪರ್ವತದ ದಕ್ಷಿಣದಿಕ್ಕಿಗಿರುವ ದೇಶಗಳಲ್ಲಿ ಕರ್ಣಾಟಕ ದೇಶವು ತನ್ನದೇ ಆದ ಸೊಬಗಿನಿಂದ, ವೈಶಿಷ್ಟ್ಯಗಳಿಂದ ಸೊಗಸನ್ನು ಹೊಂದಿದೆ; ಅಷ್ಟೈಶ್ವರ್ಯದಿಂದ ಶೋಭಿಸಿದೆ.

ಬಗೆವೊಡಾ ಕನಕಾದ್ರಿ ದಕ್ಷಿಣದಿಶಾಭಾಗದೊಳ್ ದೇಶರಾ
ಜಿಗಳೊಳ್ ರನ್ನಮಿದೆಂಬಿನಂ ಸ್ಫುರಿಕುಮೀ ಕರ್ನಾಟದೇಶಂ ಮಹಾ
ನಗರ ಗ್ರಾಮ ಮಡಂಬ ಖೇಟಕ ಸಮುದ್ಭೂತಾಂ. ಸೌಖ್ಯಂಗಳಿಂ
ಸೊಗಸಾಂತಿರ್ಪ ಜನಂಗಳಿಂ ವಿಲಸಿತಾಷ್ಟೈಶ್ವರ್ಯದಿಂದಾವಗಂ ॥

ಲಿಂಗಣ್ಣ ಕವಿಯು 'ಕೆಳದಿನೃಪವಿಜಯ'ದಲ್ಲಿ ಕರ್ನಾಟಕವು ಹೇಗೆ ಉಳಿದ ದೇಶಗಳಲ್ಲಿ ಅಧಿಕ, ಅದು ಹೇಗೆ ಸಾಕ್ಷಾತ್ ಲಕ್ಷ್ಮಿಯ ಆವಾಸ ಎಂಬುದನ್ನು ಹೀಗೆ ವಿವರಿಸಿದ್ದಾನೆ:

ಆ ಸಹ್ಯಾದ್ರಿಯೊಳೊಪ್ಪುವ
ದೇಶಂಗಳೊಳಧಿಕಮೆನಿಸಿ ನಿರುಪಮಲಕ್ಷ್ಮೀ
ಕೋಶಂ ವಿಲಸತ್ಪುಣ್ಯನಿ
ವೇಶಂ ಕರ್ನಾಟಕದೇಶಮುರೆ ರಂಜಿಸುಗುಂ

ಅನಂತಕವಿಯ ನಾಡವರ್ಣನೆ ನಿರಾಭರಣ ಸುಂದರಿಯಂತೆ ಸಹಜ ಅಭಿವ್ಯಕ್ತಿಯಾಗಿದೆ. ಆತ ಅತ್ಯಂತ ಸರಳವಾಗಿ, ಆದರೆ ಸಾರವತ್ತಾಗಿ ನಾಡ ಸಂಮೃದ್ಧಿಯನ್ನು ಹೀಗೆ ಮನಗಾಣಿಸಿದ್ದಾನೆ:

ತೊರೆಕರೆ ವನಮುದ್ಯಾನ ಸರಸಿಗಳಿಂ
ತುರುಕರುಗಳ ಸಂದಣಿಯಿಂ
ವರ ಶಾಲ್ಯಾದಿ ಪೈರುಗಳಾ ಸಮೃದ್ಧಿಯಿಂ
ದೊರೆವೆತ್ತುದು ಕರ್ನಾಟ ॥

ಚಿಕ್ಕುಪಾಧ್ಯಾಯನ 'ಹಸ್ತಿಗಿರಿ ಮಹಾತ್ಮೆ'ಯಲ್ಲಿ ಬರುವ ಕನ್ನಡ ನಾಡಿನ ವರ್ಣನೆ ಕವಿಯ ಪ್ರತಿಭೆಗೆ, ಪಾಂಡಿತ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ನಾಡಿನ ಪೆಂಪನ್ನು, ಅದರ ಉಜ್ವಲತೆಯನ್ನು, ಪಾವಿತ್ರತೆಯನ್ನು ದೈವಿಕತೆಯನ್ನು ಕವಿ ಶಬ್ದದಲ್ಲಿ ಕಟ್ಟಿಕೊಟ್ಟಿದ್ದಾನೆ.

ಗಾಡಿಯ ಸೀಮೆ ಚೆಲ್ವೊಗೆದ ತಾಣಮಲಂಪಿನ ಸಂತೆ ಪೆಂಪು ಸಾ
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ ಗೊತ್ತು ವಿನೋದದಾಗರಂ
ಮೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ಮನೆ ಮುಕ್ತಿಕಾಂತೆ ಕೈ
ಗೂಡುವ ಬಿಡು ಕನ್ನಡನಾಡು ವಿರಾಜಿಪುದೆಂತು ಬಣ್ಣಿಪೆಂ

ಹೀಗೆ ನಮ್ಮ ನಾಡು ಚಂದ, ನಾಡಿನ ಪ್ರಕೃತಿ ಅಂದ, ನಾಡವರು ಗುಣಿಗಳು, ನಾಡ ಸಂಸ್ಕೃತಿಯ ಇಂಪು ಸೊಂಪು ಕಂಪು ಎಲ್ಲೆಲ್ಲೂ ಪಸರಿಸಿವೆ. ಇಂಥ ನಾಡಿಗೆ ಕೆಟ್ಟದ್ದು ಪ್ರವೇಶಿಸಿ ಆ ಸುಂದರ ನಿಸ್ತರಂಗ ಸಲಿಲದೋಪಾದಿಯಲ್ಲಿ ನಿರ್ಮಲವಾಗಿರುವ, ನಿಶ್ಯಬ್ದವಾಗಿರುವ ನಾಡಿನ ಪರಿಸರವನ್ನು ಯಾರೂ ಕಲಕಬಾರದು, ಬಗ್ಗಡವೇಳಿಸಬಾರದು. ಹೊನ್ನಮ್ಮನಂಥ ಕವಯಿತ್ರಿ ಆಶಿಸುವುದಾದರೂ ಏನನ್ನು? ಕನ್ನಡ ನಾಡು ಪುಣ್ಯದ ಬೀಡು ಕನ್ನಡಿಗರು ಘನವಂತರು. ನಾಡು ಹಾಗೇ ಇರಬೇಕು; ನಾಡಿಗರು ಅದೇ ಆದರ್ಶವನ್ನು ಮುಂದುವರಿಸಬೇಕು. ಇದು ಕಲಿಕಾಲ, ಅನಿಷ್ಟ ಆತುಕೊಳ್ಳುವ ಕಾಲ. ಆದ್ದರಿಂದ ಕನ್ನಡ ನಾಡಿಗೆ ಕಲಿ ಪ್ರವೇಶಮಾಡದಿರಲಿ. ಎಂಥ ಆಸೆ ಆ ಪುಣ್ಯಾತ್ಗಿತ್ತಿಯದು!

ಕನ್ನಡ ನಾಡೊಳು ಕಲಿಯುಗ ಪುಗದಿರ್ಕೆ
ಕನ್ನಡಗಿರು ಘನರಕ್ಕೆ
ಉನ್ನತದಡೆಗೆಯದರ ದೇಗುಲಗಳು
ಸನ್ನುತಿವಡೆಗೆ ಸತ್ರಗಳು ॥

✪

ಕನ್ನಡ ನವೋದಯ ಸಾಹಿತ್ಯದಲ್ಲಿ ನಾಡು-ನುಡಿ ಚಿಂತನೆ

ಡಾ. ಕೆ.ಆರ್. ಗಣೇಶ

ಕ್ರಿಸ್ತ ಶಕ ೨೦ನೆಯ ಶತಮಾನದಲ್ಲಿ ಹೊಸಗನ್ನಡ ಸಾಹಿತ್ಯ ಹೊಸ ಹೊಸ ದಾರಿಗಳನ್ನು ತುಳಿಯಿತು, ಹೊರಳು ದಾರಿಯಲ್ಲಿ ನಡೆಯಿತು. ೧೯೫೦ರ ವರೆಗಿನ ಹೊಸಗನ್ನಡ ಸಾಹಿತ್ಯ ಹಂತ ಹಂತದಲ್ಲೂ ಪಾಶ್ಚಾತ್ಯ ಕಾವ್ಯದ ಅದರಲ್ಲೂ ಇಂಗ್ಲಿಷ್ ಕಾವ್ಯದ ಪ್ರೇರಣೆಯಿಂದಲೇ ಹೆಚ್ಚು ರಚನೆಯಾಯಿತು ಎಂದು ಮೇಲುನೋಟಕ್ಕೆ ತೋರಬಹುದು. ಆದರೆ ಅಂದಿನವರು ಮಾಡಿದ ಎಲ್ಲ ಪ್ರಯೋಗಗಳ ಹಿಂದೆ ಇಡೀ ಕನ್ನಡ ಸಾಹಿತ್ಯದ ಭವ್ಯ ಪರಂಪರೆಯೇ ಬಹುಮುಖವನ್ನು ಪಡೆದು ಅಭಿವ್ಯಕ್ತಿ ಯನ್ನು ಪಡೆದಿದೆ ಎಂಬ ಮಾತೂ ಸತ್ಯ.

ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರಿಂದ ಇಂಗ್ಲಿಷ್ ಗೀತಗಳ ಮೂಲಕ ಹೊಸ ಛಂದೋರೂಪಗಳನ್ನು ಪಡೆದ ಹೊಸಗನ್ನಡ ಕಾವ್ಯಕ್ಕೆ ಗೋವಿಂದ ಪೈಗಳು ಪ್ರಾಸತ್ಯಾಗ ಮಾಡಿ ಪದ್ಯ ಬರೆಯುವ ನಿರ್ಧಾರದಿಂದ ಆಗಲೇ ಹೊಸ ಚೈತನ್ಯ ಬಂದಿತ್ತು. ಹಳೆಯ ಛಂದೋ ಬಂಧಗಳಿಂದ ಕನ್ನಡ ಕಾವ್ಯಕ್ಕೆ ಬಿಡುಗಡೆಯನ್ನು ನೀಡಿ, ನಮ್ಮಲ್ಲಿ ಬಳಕೆಯಾಗದೇ ಉಳಿದಿದ್ದ ಪದ್ಯ ಲಯಗಳನ್ನು ಬಳಕೆಗೆ ತರುವ ಕೆಲಸವನ್ನು ಬಿ.ಎಂ.ಶ್ರೀ.ಯವರ ನಂತರದ ಕವಿಗಳು ಕೈಗೊಂಡರು. ಬಿ.ಎಂ.ಶ್ರೀ.ಯವರ ಚೋಳಕನ್ನೆಯರು, ಕಾರಿಹೆಗ್ಗಡೆಯ ಮಗಳು, ಕನಕಾಂಗಿ ಮೊದಲಾದ ಕವನಗಳು ಇಂಗ್ಲಿಷ್ ಗೀತಗಳ ಅನುವಾದಗಳಾದರೂ ಪ್ರಾದೇಶಿಕ ಸತ್ತ್ವವನ್ನು ರೂಢಿಸಿಕೊಂಡ ಕವನಗಳಾಗಿವೆ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಪ್ರೇರಣೆಯಿಂದ ರೂಪುಗೊಂಡ 'ನವೋದಯ ಕಾವ್ಯ'ದ ವಿಶೇಷವೇ ಈ ಪ್ರಾದೇಶಿಕ ಸತ್ತ್ವ. ನಿಸರ್ಗವನ್ನು ಪ್ರೀತಿಸುವ, ಆರಾಧಿಸುವ, ಆದರ್ಶ ಗಳನ್ನು ಗೌರವಿಸುವ ಅತೀಂದ್ರಿಯ ಶಕ್ತಿಗಳಲ್ಲಿ ನಂಬಿಕೆ ದೇವ-ದಾನವರಲ್ಲಿ ಪ್ರೀತಿ ಇವು ರೋಮ್ಯಾಂಟಿಕ್ ಕಾವ್ಯದ ಪ್ರಧಾನ ಮನೋಧರ್ಮಗಳು.

ನಮ್ಮ ಕವಿಗಳಲ್ಲಿ ಈ ಮನೋಧರ್ಮ ಇದ್ದೇ ಇತ್ತು. ಆದರೆ ಅವುಗಳು ಪ್ರಾಚೀನ ಪುರಾಣ ಇತಿಹಾಸಗಳ ವಸ್ತುಗಳ ಗಾತ್ರದಲ್ಲಿ ಎದ್ದು ಕಾಣುತ್ತಿರಲಿಲ್ಲ. ನವೋದಯ ಕಾವ್ಯ ವಸ್ತುವನ್ನು ನಿಸರ್ಗ ಕೇಂದ್ರವನ್ನಾಗಿ ಮಾಡಿಕೊಂಡಿತು. ಜಾತಿ ಮತ ಧರ್ಮಗಳ ಕಗ್ಗಾಡಿನಲ್ಲಿ ಒದ್ದಾಡುತ್ತಿದ್ದ ಕವಿಗಳ ನಿಸರ್ಗ ಪ್ರೀತಿಯನ್ನು, ಆ ಕಾಡಿನಿಂದ ಹೊರಬರುವಂತೆ ಮಾಡಿ ಸೌಂದರ್ಯ ಧರ್ಮವನ್ನು ಪ್ರತಿಪಾದಿಸಿತು. ನಿಸರ್ಗದ ಮಡಿಲಲ್ಲಿರುವ ಬದುಕೇ ನವೋದಯ ಕಾವ್ಯದ ಪ್ರಮುಖ ವಸ್ತುವಾಯಿತು. ಕಾವ್ಯಕ್ಕೆ ಇಂತಹುದೇ ವಿಷಯ ವಸ್ತುವಾಗಬೇಕೆಂಬ ಮಡಿವಂತಿಕೆಯನ್ನು ಬಿಟ್ಟು ಸ್ವತಂತ್ರ ಮನೋಧರ್ಮವನ್ನು ಮೊದಲು ಪ್ರಕಟ ಮಾಡಿದವರು ನವೋದಯ ಕವಿಗಳು.

ನವೋದಯ ಸಾಹಿತ್ಯ ರಚನೆಯಾದ ಕಾಲವನ್ನು ಗಮನಿಸಿದರೆ, ಅದು ತನ್ನ ಕಾಲದ ಸಾಮಾಜಿಕ ಪರಿಸರದ ಜೊತೆಗೆ ಅರ್ಥಪೂರ್ಣ ಸಂಬಂಧವನ್ನು ಕಂಡುಕೊಂಡಿತೇ ಎಂಬ ಪ್ರಶ್ನೆ ಏಳುತ್ತದೆ. ಭಾರತದಿಂದ ಬ್ರಿಟಿಷರನ್ನು ಓಡಿಸುವ ಮನೋಭಾವವೇ ಎಲ್ಲರ ಮನಸ್ಸಿನಲ್ಲಿ ಮೂಡಿದ್ದ ಕಾಲ ಅದು. ಆದ್ದರಿಂದ ಕವಿಗಳಲ್ಲೂ ಭಾರತದ ಸ್ವಾತಂತ್ರ್ಯದ ಬಗೆಗೆ ಕೆಚ್ಚು ಆವೇಶಗಳು ಮೂಡಿತ್ತು. ಭಾರತೀಯತೆ, ಕರ್ನಾಟಕ, ಕನ್ನಡ ಭಾಷಾ ಸಾಹಿತ್ಯಗಳು ಮೊದಲಾದ ವಿಷಯಗಳನ್ನು ಕುರಿತು ಕವಿಗಳಲ್ಲಿ ವೈಭವೀಕೃತ ಅಭಿಪ್ರಾಯಗಳು ಉಂಟಾಗಿದ್ದವು. ಪ್ರೊ॥ ಗಿರಡ್ಡಿ ಗೋವಿಂದರಾಜರು ಹೇಳುವಂತೆ "ಸಾಮಾಜಿಕ ಸಂಧಿಕಾಲದ ಕಾರಣದಿಂದಾಗಿ ಆ ಕಾಲದ ಇಡಿಯ ಆಶೋತ್ತರಗಳೆಲ್ಲ ಒಮ್ಮುಖವಾಗಿದ್ದವು". ತಮ್ಮ ಭಾವನೆಗಳಿಗೆ ಕವಿ ಶಬ್ದ ರೂಪಗಳನ್ನು ಕೊಡುತ್ತಿರುವನೆಂಬ ಸಂತೋಷದಿಂದ, ತಮ್ಮ ಮೂಕ ಆಸೆಗಳಿಗೆ ಧ್ವನಿಯನ್ನು ನೀಡುತ್ತಿದ್ದಾನೆಂಬ ಸಂಭ್ರಮದಿಂದ ಜನತೆಯೂ ಸಹ ನವೋದಯ ಕವಿಗಳ ರಚನೆಗಳನ್ನು ಸ್ವಾಗತಿಸಿತು.

ಆ ಕಾಲದ ರಚನೆಗಳನ್ನು ನೋಡಿದರೆ ಇಂದು ಅವು ಸತ್ವಹೀನ ಹೇಳಿಕೆಗಳಂತೆ ಕಾಣಿಸಬಹುದು. ನವೋದಯ ಕವಿಗಳ ಕನಸುಗಾರಿಕೆ, ನಾಡು-ನುಡಿಗಳ ಮೇಲಿನ ಪೂಜ್ಯ ಭಾವ, ನಮ್ಮ ಸಂಸ್ಕೃತಿಯ ಗತವೈಭವ ಸ್ಮರಣೆ-ಇಂದು ಅಪಕ್ವ ಚಿಂತನೆಗಳಾಗಿ ವಸ್ತುಸ್ಥಿತಿಗೆ ದೂರವಾಗಿ ಕಾಣುವಂತಹ ಪರಿಸರ ಇದೆ.

ನವೋದಯ ಭಾವದಲ್ಲಿ ಅಡಿಗರು ರಚಿಸಿದ,

> ನಾವೆಲ್ಲರು ಒಂದೆ ಜಾತಿ ಒಂದೆ ಮತ ಒಂದೆ ಕುಲ
> ನಾವು ಮನುಜರು
> ನರರ ನಡುವಿನಡ್ಡ ಗೋಡೆಗಳನು
> ಕುಟ್ಟಿ ಕೆಡಹುವೆವು
> ನಾವು ವಿಲಯ ರುದ್ರರು

-ಎಂಬ ಕವಿತೆಗೆ ಅಡಿಗರೇ 'ವಿಫಲ' ಕವನದಲ್ಲಿ ಉತ್ತರ ಕೊಟ್ಟಂತೆ ಇದೆ.

> ಇಲ್ಲ ಇಲ್ಲ ಏನೊಂದನೂ ಮಾಡಲಿಲ್ಲ ಇವನು
> ಹುಟ್ಟಿದುದಕ್ಕೆ ಹುಟ್ಟಿಸಿದನು.
> ಹೊಟ್ಟೆಗಷ್ಟು ಗಟ್ಟಿಸಿದನು

ನವೋದಯ ಕವಿಗಳಲ್ಲಿ ಕನ್ನಡ ನಾಡು ನುಡಿಯ ಬಗೆಗೆ ಹೆಚ್ಚು ಆವೇಶದಿಂದ ಬರೆದವರು ಕುವೆಂಪು.

ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು
ಕನ್ನಡ ಗೋವಿನ ಓ, ಮುದ್ದಿನ ಕರು
ಕನ್ನತನವೊಂದಿದ್ದರೆ ನೀನಮ್ಮಗೆ ಕಲ್ಪತರು

ಎಂದು 'ಕನ್ನಡತನ'ವನ್ನು ಉಳಿಸಿಕೊಳ್ಳಬೇಕೆಂದು ಬಯಸುವ ಕುವೆಂಪು ಅವರು

'ಕನ್ನಡ' ಎನೆ ಕುಣಿದಾಡುವುದೆನ್ನದೆ
ಕನ್ನಡವೆನೆ ಕಿವಿ ನಿಮಿರುವುದು'

ಎಂದು ಹಾಡಿದ್ದಾರೆ.

'ಕನ್ನಡದಲಿ ಹರಿ ಬರೆಯುವನು. ಕನ್ನಡದಲ್ಲಿಯೆ ಬಿನ್ನಪಗೈದೊಡೆ ಹರಿಹರರು ವರ ಕೊಡುವರು' ಎಂಬ ಉಕ್ತಿಗಳು ಅವರು ಸಂಸ್ಕೃತ ಮಂತ್ರಗಳ ಬಗೆಗೆ ತಳೆದಿದ್ದ ಅಭಿಪ್ರಾಯವನ್ನು ಸೂಚಿಸುತ್ತವೆ.

ಕನ್ನಡವೇ ಸತ್ಯ
ಕನ್ನಡವೇ ನಿತ್ಯ
ಅನ್ಯವೆನಲದೇ ಮಿಥ್ಯ'-

ಇದು ನವೋದಯ ಕವಿಗಳು ಕನ್ನಡ ಭಾಷೆಯ ಬಗೆಗೆ ತಳೆದಿದ್ದ ಭಾವನೆಯ ಪ್ರತೀಕ.

ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ
ಮೂಗ್ನಲ್ ಕನ್ನಡ್ ಪದವಾಡ್ತೀನಿ

ಎನ್ನುವ ರತ್ನಪ್ರಪಂಚ ಇರುವ ತನಕ 'ಮುಂದೆ ಕನ್ನಡ್ ಪದಗೋಳ್ ನುಗ್ಲಿ' ಎನ್ನುತ್ತಾನೆ. ಇಂಗ್ಲಿಷ್ ಭಾಷೆ ಸಾಹಿತ್ಯಗಳ ಮುಂದೆ ಕನ್ನಡಕ್ಕೆ ಏನು ಬೆಲೆ ಎಂಬ ಭಾವವೇ ನಾಗರಿಕ ಶಿಕ್ಷಣವೇತ್ತರಲ್ಲಿ ರೂಢಮೂಲವಾಗಿ ಬೆಳೆದಿದ್ದ ಕಾಲದಲ್ಲಿ ನವೋದಯ ಕವಿಗಳು ತೋರಿಸಿದ ಈ ಕನ್ನಡದ ಕೆಚ್ಚು ಅತಿಶಯವಾಗಿಯೇ ಇತ್ತು.

ಗೋವಿಂದ ಪೈಗಳ 'ತಾಯೆಬಾರ ಮೊಗವ ತೋರ ಕನ್ನಡಿಗರ ಮಾತೆಯೇ' ರಚನೆಯಲ್ಲಿನ 'ನೀನೆ ಕಣಾ ನಮ್ಮ ಬಾಳ್ವೆ. ನಿನ್ನ ಮರೆಯಲಮ್ಮವು, ತನು ಕನ್ನಡ ಮನ ಕನ್ನಡ ನುಡಿಕನ್ನಡವೆಮ್ಮವು' ಎಂಬ ಮಾತುಗಳೂ ಅಂದಿನ ಪರಿಸರಕ್ಕೆ ತಕ್ಕಂತಿದೆ.

ಪಂಜೆ ಮಂಗೇಶರಾಯರ 'ಹುತ್ತರಿಹಾಡು' ಕವನ ಕೊಡವರ ಪ್ರಾಚೀನ ಪರಂಪರೆ ಹಾಗೂ ಪರಾಕ್ರಮಗಳ ವರ್ಣನೆಗೆ ಹೆಚ್ಚು ಮಹತ್ವ ನೀಡಿದೆ.

ಮೈವೆಂಸೀ ರಾಘವರ 'ಕನ್ನಡ ತಾಯಿಗೆ ಮಣಿವ-ನಾವ್ ಕನ್ನಡಿಗರೆಂದು ಕುಣಿವ' ಕವನದ ಉದ್ದೇಶವೂ ಡಿ. ಎಸ್. ಕರ್ಕಿಯವರ 'ಹಚ್ಚೇವು ಕನ್ನಡದ ದೀಪ' ಕವನದ ಉದ್ದೇಶವೂ ಆರಾಧನೆಯೇ ಆಗಿದೆ.

ಕನ್ನಡ ನಾಡನ್ನು ನುಡಿಯನ್ನು ಪ್ರೀತಿಸುವ ನವೋದಯ ಕವಿಗಳು ಸಮಷ್ಟಿಯನ್ನು ಮರೆಯಲಿಲ್ಲ, ಭಾರತವನ್ನು ಪ್ರೀತಿಸಿದರು. ಕುವೆಂಪು ಅವರು 'ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂದೇ ಜಯಗೀತೆ ಹಾಡಿದರು.

ಭರತ ಭೂಮಿ ನನ್ನತಾಯಿ
ನನ್ನ ಪೊರೆವ ತೊಟ್ಟಿಲು
ಜೀವನವನೆ ದೇವಿಗೆರವ
ಬಿಡುತೆ ಗುಡಿಯ ಕಟ್ಟಲು'

ಎಂದೇ ಪ್ರಾರ್ಥಿಸಿದರು.

ಜಿ.ಎಸ್. ಶಿವರುದ್ರಪ್ಪನವರು 'ನಮ್ಮ ಬಾವುಟ'ವನ್ನು ಕುರಿತು ಭಾವುಕತೆಯಿಂದ ಹಾಡಿದ ಕವಿತೆಯ ಭಾಗ ಹೀಗಿದೆ:

ಬಾನ್ ಬಯಲಿನೇರಿತಲ್ಲಿ
ನೋಡು ನಮ್ಮ ಬಾವುಟ
ಮುಗಿಲನಲೆವ ಗರುಡನಂತೆ
ಯಜ್ಞ-ಕುಂಡದುಂಡೆಯಂತೆ
ದಿವಕೆ ದಾಳಿಯಿಕ್ಕುತ

ವೇದ ಋಷಿಯ ಮಂತ್ರ ಪವನ
ತೀಡುತ್ತಿತ್ತು ಮೆಲ್ಲಗಡೆ
ದಿವ್ಯಯಜ್ಞ ದೀಪ್ತಿಯಂತೆ
ಜಗದಿಚ್ಛಾ ಚಕ್ರದಂತೆ
ಮೆರೆವಶೋಕ ಚಕ್ರವಾಯ್ತು
ದೇವತೆಗಳ ನಿಲುಗಡೆ.

ಭಾರತದ ಬಾವುಟದ ಬಗೆಗೆ ಕವಿಯ ನಿರೂಪಣೆ ಇಂದಿಗೆ ಅನವಶ್ಯಕವಾದ ಜಾಹೀರಾತಿನಂತೆ ನಮಗೆ ತೋರಬಹುದು. ಆದರೆ ನವೋದಯದ 'ನಮ್ಮ ವಸ್ತುಗಳನ್ನು ವೈಭವೀಕರಿಸುವ' ಮನೋಧರ್ಮದ ವಾತಾವರಣದಲ್ಲಿ ರಚಿತವಾದ ಕವನ ಇದು ಎಂಬುದನ್ನು ಮರೆಯಬಾರದು. ಉತ್ಸಾಹ ಲಯದಲ್ಲಿ ನಡೆಯುವ ಈ ಕವನ ತನ್ನ ಧಾಟಿಯಿಂದಲೇ ಮನಸೆಳೆಯುತ್ತದೆ. ಸ್ವಾತಂತ್ರ್ಯ ದಿನಾಚರಣೆಯಂದು ಮಾತ್ರ ಬೆಲೆ ಪಡೆಯುವ ಇಂದಿನ ಧ್ವಜಾರೋಹಣ ನವೋದಯ ಕವಿಗಳಿಗೆ ಎಷ್ಟು ಪವಿತ್ರ ಆಚರಣೆಯ ವಿಷಯವಾಗಿತ್ತು ಎನ್ನುವುದು ಇಂದಿನ ಸಾಹಿತಿಗಳಿಗೆ ನಂಬಲು ಅಸಾಧ್ಯವಾದ ವಿಚಾರವಾಗಿದೆ.

ಬಹಳಷ್ಟು ಜನ ನವೋದಯ ಕವಿಗಳಿಗೆ ಭಾರತದ ಬಗ್ಗೆ ಅಪಾರ ನಂಬಿಕೆ. ಆದ್ದರಿಂದಲೇ ಅವರು 'ಕಿವಿ ಸೆಳೆಯುವ ಘೋಷಣೆ'ಗಳನ್ನು ಮಾಡುತ್ತಾರೆ.

ಭಾರತೀಯ ಭಾಗ್ಯ ತಾರೆ ನಡೆಯುತ್ತಿದೆ ಮುಂದೆ —ವಿ.ಸೀ.

ಕಟ್ಟುವೆವು ನಾವು ಹೊಸ ನಾಡೊಂದನು-ರಸದ
ಬೀಡೊಂದನು'

- ಗೋಪಾಲಕೃಷ್ಣ ಅಡಿಗ

ನಾವು ಭಾರತೀಯರು, ಸತ್ಯ ಶಾಂತಿ ಸಂಧರು
ಸಮರಗ್ಯೆವ ಸಮಯದಲ್ಲಿ ನಾವು ಪರಶುರಾಮರು

- ಅರ್ಚಿಕ ವೆಂಕಟೇಶ

ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು
ಇಂದು ರಕ್ತದ ಬಿಂದು ಮುಂದೆ ಸೌಖ್ಯದ ಸಿಂಧು' -ಕುವೆಂಪು

ಅಪರೂಪದ ಕೆಲವು ಕವಿತೆಗಳನ್ನು ಹೊರತುಪಡಿಸಿ ನವೋದಯ ಸಾಹಿತ್ಯದಲ್ಲಿ ರಾಷ್ಟ್ರೀಯ ಗೀತೆಗಳು ಎಂಬ ಗುಂಪಿನ ಕವಿತೆಗಳನ್ನು ಅಧ್ಯಯನಕ್ಕೆ ವಿಂಗಡಿಸಿಕೊಳ್ಳಬಹುದು.

ಕುವೆಂಪು ಅವರ 'ಸಾಯುತಿದೆ ನಿಮ್ಮ ನುಡಿ ಓ-ಕನ್ನಡದ ಕಂದರಿರ' ಹಾಗೂ ಬೇಂದ್ರೆಯವರ 'ಕನಸಿನೊಳಗೊಂದು ಕಣಸು' ಕವಿತೆಗಳು ಅಪರೂಪದ ರಚನೆಗಳಾಗಿವೆ.

ಬೇಂದ್ರೆಯವರ ಕವಿತೆ ಈಗಿನ ಕನ್ನಡ ನಾಡಿನ ಮತ್ತು ಕನ್ನಡಿಗರ ಸ್ಥಿತಿಯ ಚಿತ್ರವನ್ನು ನೀಡುತ್ತದೆ. ಕನ್ನಡನಾಡಿನ ಗತವೈಭವವನ್ನು ಕವಿ ನೆನೆಸಿಕೊಳ್ಳುತ್ತಾ. ಇಂದಿನ ಹೀನಾವಸ್ಥೆಯಿಂದ ಪರದೇಶಿಯಾಗಿರುವ ನಾಡದೇವಿಯ ಚಿತ್ರದಿಂದ ನಾಟಕೀಯವಾಗಿ ಕವಿತೆ ಪರಿಣಾಮಕಾರಿ ಯಾಗುತ್ತದೆ. ಕವನದಲ್ಲಿ ಕವಿಯೂ ಒಂದು ಪಾತ್ರ. ನಾಡದೇವಿಯು ಕವಿಯ ಮನಸ್ಸನ್ನು ಕೀಟಲೆ ಮಾಡುತ್ತಾ ಅವನಿಂದ ಬಲಿದಾನವನ್ನು ಬಯಸುತ್ತಾಳೆ. ಆದರೆ ಆಸೆಯಿದ್ದರೂ ಅದನ್ನು ತೀರಿಸಿಕೊಳ್ಳಲು ಮಾನಸಿಕವಾಗಿ ಸಿದ್ಧವಿಲ್ಲದ ಕನ್ನಡ ಜನರ ದುರಂತ ಚಿತ್ರವನ್ನು ಬೇಂದ್ರೆಯವರು ಕೊಟ್ಟಿರುವ ರೀತಿ ಅಭೂತಪೂರ್ವ.

'ಸಾಯುತಿದೆ ನಿಮ್ಮ ನುಡಿ' ಕವಿತೆಯಲ್ಲಿ ಕುವೆಂಪು ಪರಭಾಷಾ ಮೋಹದ ವಿಚಾರವನ್ನು ಹೇಳಿರುವ ರೀತಿ ಪ್ರಸ್ತುತ ನಮ್ಮ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ:

ಇರುವಲ್ಪ ಶಕ್ತಿಯನು ಇರುವಲ್ಪ ದ್ರವ್ಯವನು
ಪರಭಾಷೆ ಮೋಹಕ್ಕೆ ಚೆಲ್ಲಬೇಡಿ
ಹೂಮಾಲೆ ಸೂಡುವೆವು ಕೊರಳಿಂಗೆ ಎಂದೆನುತೆ
ನೇಣುರುಳನಳೆದಯ್ಯೊ ಕೊಲ್ಲಬೇಡಿ
ಪರಕೀಯರೆಲ್ಲರಾಶೀರ್ವಾದ ಕರವೆತ್ತಿ
ಹರಸುತ್ತ ಬರುವರ್ಕೆ ಮೊದಲು ಮೊದಲು
ಕಡೆಗದುವೆ ಕುತ್ತಿಗೆಗೆ ಕರವಾಳವಾಗುವುದು
ನಮ್ಮ ನಾಲಗೆ ನಮಗೆ ಕೀಳು ತೊದಲು

ಸ್ವಾತಂತ್ರ್ಯಕ್ಕೆ ಮೊದಲು ಇದ್ದ ಆದರ್ಶಗಳ ನಿಷ್ಠೆಯ ಕಟ್ಟುಗಳು ಕಳಚಿ ಬಿದ್ದಾಗ, ಕುವೆಂಪು, ಬೇಂದ್ರೆ, ಪುತಿನ ಮೊದಲಾದ ಮೇರು ನವೋದಯ ಕವಿಗಳು ವಸ್ತುನಿಷ್ಠ ಪ್ರತಿಕ್ರಿಯೆಯನ್ನು ತೋರಿಸದೆ ಹೆಚ್ಚುಕಾಲ ಮೌನವಾಗಿಯೇ ಇದ್ದದ್ದು ಅಚ್ಚರಿಯ ವಿಷಯ.

ನವೋದಯ ಸಾಹಿತ್ಯದಲ್ಲಿ ಬಂದ ರಚನೆಗಳು, ಛಂದೋ ವೈವಿಧ್ಯದಿಂದ ಕೂಡಿದ್ದವು

ಎಂಬ ಮಾತು ನಿಜವಾದರೂ ಆ ಛಂದೋಲಯಗಳು ಭಾವಾವೇಶ, ಆಧ್ಯಾತ್ಮಿಕ ವಿಚಾರಗಳಿಗೆ ಹೊಂದಿಕೆಯಾಗುವಂತೆ ವಿಡಂಬನೆಗಳಿಗೆ ಹೊಂದಿಕೊಳ್ಳಲಿಲ್ಲ. ಸ್ವಾತಂತ್ರ್ಯಾನಂತರದಲ್ಲೂ ಕೆಲವು ಕಾಲ ರಚನೆಯಾದ ನವೋದಯ ಸಾಹಿತ್ಯ ರಚನೆಗಳು ಬದಲಾದ ನಾಡಿನ ಪರಿಸರದ ಬಗ್ಗೆ ಎಚ್ಚರವನ್ನು ತೋರಿಸಲಿಲ್ಲ ಎಂಬ ಮಾತೂ ನಿಜ.

ನಿಜವಾದ ಕವಿಗಳು ಕಾಲದಿಂದ ಕಾಲಕ್ಕೆ ಭಾಷೆಯನ್ನು ಪುನರ್ ನಿರ್ಮಾಣ ಮಾಡುತ್ತಾ ಹೊಸ ಹೊಸ ಅರ್ಥಗಳನ್ನು ಹುಡುಕುತ್ತಾ ಇರುತ್ತಾರೆ. ಇಂತಹ ಪುನರ್ ನಿರ್ಮಾಣ ಶಕ್ತಿಯೇ 'ಭಾಷೆಯ ಪ್ರಜ್ಞಾಪೂರ್ವಕವಾದ ಉಪಯೋಗ'. ನವೋದಯ ಕವಿಗಳು ನಿಸರ್ಗ ಚಿತ್ರವನ್ನು ಕೊಡುವಾಗ ಹೊಸಹೊಸ ಅರ್ಥಗಳನ್ನು ಶಬ್ದಗಳನ್ನು ದುಡಿಸಿಕೊಳ್ಳುವುದರ ಮೂಲಕ ನೀಡಲು ಪ್ರಯತ್ನಿಸಿದರು. ಆದರೆ ನಾಡು-ನುಡಿಯ ವಿಚಾರಗಳು ಬಂದಾಗ 'ಭಾಷೆಯ ಪ್ರಜ್ಞಾಪೂರ್ವಕವಾದ ಉಪಯೋಗ' ತೀರಾ ತಾಂತ್ರಿಕವಾದುದನ್ನು ನಾವು ಕಾಣುತ್ತೇವೆ.

ನವೋದಯ ಕವಿಗಳು ನಾಡು-ನುಡಿಯ ಬಗೆಗೆ ನಿರೂಪಿಸುವಾಗ, ನಮ್ಮ ದೇಶದ ಮಹಾವ್ಯಕ್ತಿಗಳನ್ನು ಕುರಿತು ತೋರಿಸಿದ ಆದರ ಗೌರವಗಳನ್ನು ಮರೆಯುವ ಹಾಗಿಲ್ಲ.

ಪು.ತಿ. ನರಸಿಂಹಾಚಾರ್ ಅವರ 'ನೆರಳು' ಕವನದ ಗಾಂಧೀಜಿಯ ವ್ಯಕ್ತಿತ್ವದ ಪ್ರತಿಮಾ ನೋಟ ಅಪೂರ್ವವಾಗಿದೆ.

ಗಾಂಧೀಜಿಯ ಬದುಕಿನ ರೀತಿಯನ್ನು:

ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕೊ ಅದರಿಚ್ಛೆ ಹಾದಿ
ಇದಕು ಹರಿದತ್ತ ಬೀದಿ

ನೆಲನೆಲದಿ ಮನೆಯ ಮನೆಯ ಮೇಲೆ
ಕೊಳ ಬಾವಿ ಕಂಡು ಕಾಣದೊಲೆ
ಗಿಡಗುಲ್ಮ ತೆವರು ತಿಟ್ಟು
ಎನ್ನದಿದಕೊಂದ ನಿಟ್ಟು.

ಗಾಳಿ ಬೆರಗಿದರ ನೆಲದೊಳೋಟ
ವೇಗ ಕದ್ದಬಹುದಾವ ಹೂಟ?
ಸಿಕ್ಕು ದಣಿವಿಲ್ಲದಂತೆ
ನಡೆಯಿದಕೆ ನಿಲ್ಲದಂತೆ

ಇದ ನೋಡಿ ನಾನು ನೆನೆವೆನಿಂದು
ಇಂಥ ನೆಳಲೇನು ಗಾಂಧಿಯೆಂದು
ಹರಿದತ್ತ ಹರಿಯ ಚಿತ್ತ
ಈ ಧೀರ ನಡೆವನತ್ತ

ಬೇಂದ್ರೆಯವರ 'ಬುದ್ಧ' ಕವನದಲ್ಲಿ ಬರುವ 'ಜ್ಞಾನ'ವನ್ನು ಪಡೆದ ಬುದ್ಧನ ಚಿತ್ರ, ನಮ್ಮ ಅವತಾರ ಪುರುಷರಲ್ಲಿ ಕಾಣದ ಅಪೂರ್ವ ಸ್ಥಿತಿಯ ನಿರೂಪಣೆಯಾಗಿದೆ.

ಅಲ್ಲಿಂದ ಇಲ್ಲಿವರೆ ಹೊರಳಿ ನೋಡಿ
ಇದ್ದುದಿದ್ದಂತಿತ್ತು ಜನನ-ಮರಣದ ಜೋಡಿ
ಗೆದ್ದುದೇನೆಂದೆನುತ ಮರಳಿ ಜಗಿದ
ಭೂತ ಜಾತದ ಎದೆಯ ಸೀಳಿ ಸಿಗಿದ
ಅದೆ ತನ್ನ ಮನೆಯೆಂದು ಸಿದ್ಧ ಬಗೆದ.

ಮತ್ತೆ ಜನಸಾಮಾನ್ಯರ ಜೊತೆಯಲ್ಲಿ ಬಾಳುವುದೇ ಸರಿ ಎಂದು ಯೋಚಿಸಿದ ಬುದ್ಧನನ್ನು ಕವಿಯು ಮಾತುಗಳಲ್ಲಿ ಸೆರೆಹಿಡಿದಿದ್ದಾರೆ.

ಒಟ್ಟಿನ ಮೇಲೆ, ನವೋದಯ ಕವಿಗಳು ಭಾರತ, ಕರ್ನಾಟಕ, ಕನ್ನಡಗಳ ಮೇಲೆ ೧೯೫೦ರ ದಶಕದ ಹಿಂದಿನ ಕಾಲದಲ್ಲಿ ವ್ಯಕ್ತಪಡಿಸಿದ ಅಭಿಮಾನ ಪ್ರೀತಿಗಳು. 'ಸೌಂದರ್ಯದ ಜಾಹೀರಾತು'ಗಳಂತೆ ಕಂಡರೂ ಇಂದಿಗೂ ಅವರು ವ್ಯಕ್ತಪಡಿಸಿದ ಕೆಲವು ಮಾತುಗಳಿಗೆ ಹೆಚ್ಚು ಅರ್ಥ ಬಂದಿರುವುದು ಅಚ್ಚರಿಯಾಗಿದೆ.

ಕನ್ನಡಕೆ ಹೋರಾಡು
          ಕನ್ನಡದ ಕಂದಾ
ಕನ್ನಡವ ಕಾಪಾಡು
          ನನ್ನ ಆನಂದಾ!
ಕನ್ನಡವ ಕೊಲುವ ಮುನ್
          ಓ ನನ್ನ ಕೊಲ್ಲು

ಎಂದು ಕನ್ನಡಮ್ಮ ಕೇಳಿಕೊಳ್ಳುವುದು ಇಂದಿಗೆ ಇನ್ನು ಅರ್ಥಪೂರ್ಣವಾಗಿಲ್ಲವೇ.

ಸೌಮ್ಯರಾದ ಕನ್ನಡಿಗರನ್ನು ಕುರಿತು ಕುವೆಂಪು

ಕಣ್ದೆರೆಯಿರೇಳಿ, ಓ ಕನ್ನಡದ ಮಕ್ಕಳಿರ
ಗರ್ಜಿಸುವುದನು ಕಲಿತು ಸಿಂಹವಾಗಿ
ನಖದಂಷ್ಟ್ರ ಕೇಸರಂಗಳ ಬೆಳೆಸಿ ಹುರಿಗೊಂಡು
ಶಿರವೆತ್ತಿ ನಿಂತು ಕುರಿತನವ ನೀಗಿ

ಎಂದು ಎಚ್ಚರಿಸಿರುವ ಮಾತುಗಳು, ಇಂದು ಹೆಚ್ಚು ವಾಸ್ತವಿಕವಾಗಿವೆ.

ನವ್ಯ ಸಾಹಿತ್ಯ ಚಿಂತಕರಲ್ಲಿ ನಾಡು-ನುಡಿಯ ಪ್ರಜ್ಞೆ

ಎಲ್. ಜಿ. ಮೀರಾ

ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಕನ್ನಡ ನಾಡಿನ ವಾಸ್ತವವನ್ನು ಪ್ರತಿಬಿಂಬಿಸಿದ, ಪರಿಭಾವಿಸಿದ ಮುಖ್ಯ ಕಲಾರೂಪಗಳಲ್ಲಿ ನವ್ಯ ಸಾಹಿತ್ಯ ಚಳವಳಿಯೂ ಒಂದು. ''ಭಾರತಕ್ಕೆ ಸ್ವಾತಂತ್ರ್ಯ ಬಂದ ಕೂಡಲೇ ಎಲ್ಲ ಸರಿಯಾಗುತ್ತದೆ'' ಎಂಬ ಭ್ರಮೆಯ ಗೋಳಗಾಜು ಝುಗ್ಗನೊಡೆದದ್ದು, ಸಂಪರ್ಕ ಸಂವಹನ ಸುಲಭವಾದದ್ದರಿಂದಾಗಿ ಇಡೀ ಜಗತ್ತಿನ ಮುಖ್ಯವಾಗಿ ಪಾಶ್ಚಾತ್ಯ ಜಗತ್ತಿನ ಸಾಹಿತ್ಯ, ಚಿಂತನೆಗಳ ವಿಸ್ತೃತ ಪರಿಚಯ, ಎರಡನೆಯ ಮಹಾಯುದ್ಧಾನಂತರದ ವಾಸ್ತವ ಇಡೀ ಜಗತ್ತಿನಲ್ಲಿ ಕಂಪನಗಳನ್ನೆಬ್ಬಿಸಿದ್ದು... ಇವು ನವ್ಯ ಸಾಹಿತ್ಯ ಚಳವಳಿಯನ್ನು ರೂಪಿಸಿದ ನೆಲೆಗಳು. ''ಪಿತೃಹತ್ಯೆಯೇ ಪ್ರಗತಿಯ ಹೆದ್ದಾರಿ'' ಎಂಬುದನ್ನು ಹಟತೊಟ್ಟಂತೆ ಸಾಧಿಸಹೊರಟ ಇದರ ಪ್ರವರ್ತಕರು ತಮ್ಮ ಹಿಂದಿನ ಕಾವ್ಯ ಸಂಪ್ರದಾಯಗಳಿಂದ ಸಂಪೂರ್ಣ ಭಿನ್ನವಾಗಬಯಸಿದರು. ಹೀಗಾಗಿ ಆದರ್ಶವಾದ, ದೇಶಪ್ರೇಮ, ನಿಸರ್ಗಪ್ರೇಮ, ವಿಶ್ವಬಂಧುತ್ವ, ಆಧ್ಯಾತ್ಮಿಕತೆ, ವಿಶ್ವಶಕ್ತಿಯೊಂದಿಗಿನ ತಾದಾತ್ಮ್ಯ ಮುಂತಾದ ನವೋದಯದ ಪ್ರಾಣಮೌಲ್ಯಗಳು ನವ್ಯದ ಮಟ್ಟಿಗೆ ಅನುಮಾನಾಸ್ಪದವಾದವು.. ಇವುಗಳ ಜಾಗದಲ್ಲಿ ಭ್ರಮನಿರಸನದ ವಿಹ್ವಲತೆ, ಪರಕೀಯತೆ, ತೀವ್ರ ವೈಯಕ್ತಿಕತೆ, ಸಂಪ್ರದಾಯಗಳಿಗೆ ಎದುರುಬಿದ್ದು, ತನ್ನ ಅನುಭವಕ್ಕೆ ಸಿಕ್ಕಷ್ಟನ್ನು ಮಾತ್ರ ನಂಬುವಂಥದು.. ಮುಂತಾದ ಮೇಲ್ನೋಟಕ್ಕೆ ಅಸಾಂಪ್ರದಾಯಿಕ ಅನ್ನಿಸುವ ಮೌಲ್ಯಗಳು ತಲೆಯೆತ್ತಿದವು. ಇಷ್ಟೆ ಅಲ್ಲದೆ ಸಾಹಿತ್ಯ ಅನ್ನುವುದು ಕೇವಲ ಕಲೆಯಾಗಿ ಉಳಿಯದೆ, ತನ್ನನ್ನು ತಾನು ಹೊರಗೆಳೆಯುವ, ನಿಜಗೊಳಿಸಿಕೊಳ್ಳುವ ಸಾಧನವಾಯಿತು. ನವ್ಯ ಚಳವಳಿಯ ಮುಖ್ಯ ಪ್ರವರ್ತಕರಾದ ಅಡಿಗರು ಸಾಹಿತ್ಯವನ್ನು ಜೀವನ್ಮರಣದ ಪ್ರಶ್ನೆ ಅಂದದ್ದು ಆ ಚಳವಳಿಯ ಮಟ್ಟಿಗೆ ಉತ್ಪ್ರೇಕ್ಷೆಯಾಗಿರಲಿಲ್ಲ.

ಈ ಚಳವಳಿಯ ಇನ್ನೊಂದು ಮುಖ್ಯ ವಿಷಯವೆಂದರೆ ಸಾಹಿತ್ಯ ವಿಮರ್ಶೆ ಅತ್ಯಂತ ಗಂಭೀರ ರೂಪವನ್ನು ಪಡೆಯಿತು. ವಾಸ್ತವವನ್ನು ಗಂಭೀರವಾಗಿ ಪರಿಭಾವಿಸಿ, ಗ್ರಹಿಸುವ ಜವಾಬ್ದಾರಿಯನ್ನು ತನ್ನ ಮೇಲೆಳೆದುಕೊಂಡಿತು. ಸಾಹಿತ್ಯ ವಿಮರ್ಶೆ ಅನ್ನುವುದು ಎರಡನೆಯ ದರ್ಜೆ ಚಟುವಟಿಕೆಯಾಗದೆ ನಾಡಿನ ಬೌದ್ಧಿಕ ಅಭಿವ್ಯಕ್ತಿಯಲ್ಲಿ ಸಂಹಪಾಲು ಪಡೆಯಿತು. ಅಡಿಗ, ಶರ್ಮ ಮುಂತಾದ ನವ್ಯದ ಮೊದಲ ಪೀಳಿಗೆಯ ಬರಹಗಾರರಾಗಲಿ, ಲಂಕೇಶ್, ಚಂದ್ರಶೇಖರ ಪಾಟೀಲ ಮುಂತಾದ ಎರಡನೆಯ ಪೀಳಿಗೆಯ ಬರಹಗಾರರಾಗಲಿ ನಾಡಿನ ವಾಸ್ತವದ ಬಗೆಗೂ ಗಮನಾರ್ಹ ಒಳನೋಟಗಳನ್ನು ಕೊಟ್ಟರು. ಹೀಗಾಗಿಯೇ ನವ್ಯದ ಮಟ್ಟಿಗೆ ಸಾಹಿತ್ಯ ಚಿಂತನೆ ಅನ್ನುವುದು ಅಂತಿಮವಾಗಿ ಲೋಕ ಚಿಂತನೆಯೇ.

ಈ ಹಿನ್ನೆಲೆಯಲ್ಲಿ ಕನ್ನಡದ ನವ್ಯ ಸಾಹಿತ್ಯ ಚಿಂತಕರಲ್ಲಿನ ನಾಡು-ನುಡಿಯ ಪ್ರಜ್ಞೆಯನ್ನು ಗಮನಿಸುವುದು ಈ ಬರಹದ ಉದ್ದೇಶ.

ನಾವು ಮೊದಲು ಗಮನಿಸಬೇಕಾಗಿರುವ ಸಂಗತಿ ಅಂದರೆ, ನವೋದಯ, ಪ್ರಗತಿಶೀಲ, ನವ್ಯ... ಯಾವುದೇ ಚಳವಳಿಯಾಗಲಿ "ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಾಮುಖ್ಯ ದೊರೆಯಬೇಕು, ಕನ್ನಡ ನಾಡಿನ ಸಂಸ್ಕೃತಿ ಉಳಿದು ಬೆಳೆಯಬೇಕು" ಎಂಬ ವಿಷಯದಲ್ಲಿ ಪೂರ್ಣ ಸಹಮತಿ ಹೊಂದಿವೆ. ಇವುಗಳಲ್ಲಿ ವ್ಯತ್ಯಾಸ ಎಲ್ಲಿ ಬರುತ್ತದೆಂದರೆ ಅವು ಮಾತಾಡುವ ದನಿ (tone) ನಲ್ಲಿ. ನವೋದಯ ರಸಋಷಿಯ ಆದರ್ಶಗಳ ಅರೆನಿಮಿಲಿತ ನಯನಗಳೊಂದಿಗೆ ಮಾತಾಡಿದರೆ, ಪ್ರಗತಿಶೀಲ ಸಾಮಾಜಿಕ ಕ್ರಾಂತಿಯ ವೀರಾವೇಶದ ಪರಿಭಾಷೆಯಲ್ಲಿ ಮಾತಾಡುತ್ತದೆ. ಈ ಎರಡೂ ರೀತಿಗಳನ್ನು ನವ್ಯದ ಸ್ವಪ್ರಜ್ಞೆ (self-consciousness) ಒಪ್ಪುವುದಿಲ್ಲ. ರಾಷ್ಟ್ರೀಯತೆ ಬಗ್ಗೆ ಕೂಗಿ, ಕಿರುಚಿ ಮಾತಾಡಲು ನವ್ಯಕ್ಕೆ ಸಂಕೋಚ. ಇದಕ್ಕೆ ಕಾರಣವೇನೆಂದರೆ ವಾಸ್ತವದ ಅತಿ ಪರಿಚಯ. ಇಂದು ನಡೆಯುತ್ತಿರುವ ನವವಸಾಹತುಶಾಹಿ ಆಕ್ರಮಣ, ಪ್ರಪಂಚೀಕರಣ, ಪ್ರಗತಿಯ ಹೆಸರಿನಲ್ಲಿ ಸಾಂಸ್ಕೃತಿಕ ಬಹುಮುಖತೆಯನ್ನು ಒರೆಸಿಹಾಕುವಂಥದು ಮುಂತಾದ 'ಆಧುನಿಕ' ಸಾಂಸ್ಕೃತಿಕ ಸಮಸ್ಯೆಗಳು ನವ್ಯದ ಕಣ್ಣೆದಿರಿನಿಂದ ಮರೆಯಾಗುವುದೇ ಇಲ್ಲ. ಈ ಎಲ್ಲ ಸಂಗತಿಗಳಿಂದ ನಾಡು-ನುಡಿಗೆ ಉಂಟಾಗಬಹುದಾದ ಆತಂಕ ನವ್ಯಕ್ಕೆ ಚೆನ್ನಾಗಿಯೇ ಗೊತ್ತು. ಹೀಗಾಗಿಯೇ ನವ್ಯದ ಪರಿಭಾಷೆ. ಅತ್ಯಂತ ನಿಷ್ಠುರ ಹಾಗೂ ವಾಸ್ತವಿಕ. ಸುತ್ತಲಿನ ಎಲ್ಲ ಸಮಸ್ಯೆಗಳ ಅರಿವಿಟ್ಟುಕೊಂಡೂ ನಾಡು-ನುಡಿಯ ಬಗ್ಗೆ ತೀವ್ರವಾಗಿ ಚಿಂತಿಸುವ ನವ್ಯದ ರೀತಿ ನಿಜಕ್ಕೂ ಗಮನಯೋಗ್ಯವಾದದ್ದು.

ಅಧ್ಯಯನದ ಅನುಕೂಲಕ್ಕಾಗಿ ನವ್ಯ ಸಾಹಿತ್ಯ ಚಿಂತನೆಯಲ್ಲಿನ ನಾಡು-ನುಡಿಯ ಪ್ರಜ್ಞೆಯನ್ನು ನಾವು ಈ ಕೆಳಗಿನ ಎರಡು ವಿಷಯಗಳ ಮೂಲಕ ಗ್ರಹಿಸಬಹುದು.

೧. ರಾಷ್ಟ್ರೀಯತೆ ೨. ಕನ್ನಡ ಭಾಷಾ ಬಳಕೆ

ರಾಷ್ಟ್ರೀಯತೆ : ವಿದ್ವಾಂಸರು ಗುರುತಿಸಿರುವಂತೆ ರಾಷ್ಟ್ರೀಯತೆಯ ಪ್ರಜ್ಞೆ ಬರುವುದೇ ಅನ್ಯಾಕ್ರಮಣದ ಸಂದರ್ಭದಲ್ಲಿ. ನವೋದಯದ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಒಂದಾಗಲೆಂದು 'ಭಾರತ ರಾಷ್ಟ್ರ' ಎಂಬ ಪರಿಕಲ್ಪನೆಯನ್ನು ರೂಪಿಸಿಕೊಳ್ಳಲಾಯಿತು. ಆದರೆ ನವ್ಯದ ಸಂದರ್ಭದಲ್ಲಿ

ಆದದ್ದೇ ಬೇರೆ. ಸ್ವತಂತ್ರ ಭಾರತದಲ್ಲಿ ರಾಷ್ಟ್ರೀಯತೆ, ಅಂತರ್‌ರಾಷ್ಟ್ರೀಯತೆಗಳ ಮುಖಾಮುಖಿ ನವ್ಯದ ಒಂದು ಮುಖ್ಯ ಕಾಳಜಿಯಾಯಿತು. ಗಾಂಧಿಯವರ ಅಹಿಂಸಾತ್ಮಕ ಗ್ರಾಮಸ್ವರಾಜ್ಯ ಕಲ್ಪನೆಯೊಡನೆ ನೆಹರೂ ಅವರ 'ಕಾಸ್ಮೋಪಾಲಿಟನ್ ಅಂತರ್ ರಾಷ್ಟ್ರೀಯತೆ'ಯೊಂದಿಗೆ ಘರ್ಷಿಸಿದ್ದು ಕನ್ನಡ ಸಾಹಿತ್ಯದಿಂದ ಹೊರಗುಳಿಯಲಿಲ್ಲ. ಅಡಿಗರ ರಾಜಕೀಯ ಕವನಗಳು ಇದಕ್ಕೆ ಸಾಕ್ಷಿ. ನೆಹರೂ ಯುಗದ ಟೊಳ್ಳು ಅಂತರ್‌ರಾಷ್ಟ್ರೀಯತೆ ಅಡಿಗರ ೧೯೫೪ರ 'ಪಾಠ' ಕವನದಲ್ಲಿ ಪ್ರಭಾವಶಾಲಿಯಾಗಿ ದಾಖಲಾಗಿರುವುದನ್ನು ಯು.ಆರ್. ಅನಂತಮೂರ್ತಿಯವರು ತಮ್ಮ 'ಪೂರ್ವಾಪರ'ದಲ್ಲಿ ಗುರುತಿಸಿದ್ದಾರೆ. ನಮ್ಮ ಬೇರುಗಳ ಅರಿವಿಲ್ಲದೆ ಪರಂಗಿ ರಾಗಕ್ಕೆ ಕುಣಿಯುವ ಆಧುನಿಕ ಪ್ರಗತಿಯ ಕಲ್ಪನೆಯನ್ನು ಅಡಿಗರು ತಮ್ಮ ಕವನಗಳಲ್ಲಿ ಕಟುವಾಗಿ ಟೀಕಿಸಿದ್ದಾರೆ.

ಇಂದಿನ ಬಂಡವಾಳಶಾಹಿ ನಾಗರಿಕತೆಯಲ್ಲಿ ಬಲಹೀನ ರಾಷ್ಟ್ರಗಳ ರಾಷ್ಟ್ರೀಯತೆ ಅನ್ನುವುದು ಎಷ್ಟೋ ಬಾರಿ ಅರ್ಥಹೀನವಾಗುತ್ತದೆ ಎಂಬ ಸಂಕಟ ನವ್ಯ ಸಾಹಿತ್ಯ ಚಿಂತಕರದು. ಬಹುರಾಷ್ಟ್ರೀಯ ಕಂಪೆನಿಗಳು ಸಮಾನತೆಯ ಹೆಸರಿನಲ್ಲಿ ಸ್ಥಳೀಯ ಸಂಸ್ಕೃತಿಗಳನ್ನು ಒರೆಸಿ ಹಾಕುವ ಭಯ ಇಲ್ಲಿದೆ. ಮುಕ್ತ ಮಾರುಕಟ್ಟೆಗಳು, ಪ್ರಪಂಚೀಕರಣ ಮುಂತಾದ ಮಾದಕ ವ್ಯವಸ್ಥೆಗಳು ಒಂದು ರೀತಿಯ ಜಾಗತಿಕ ಅರಿವನ್ನು ನಮ್ಮ ಮೇಲೆ ಹೇರುತ್ತವೆ. ನಮ್ಮ ಹಳ್ಳಿಗಳಲ್ಲಿ ಪೌರಾಣಿಕ ನೆಲೆಯ ಭೌಗೋಳಿಕ ಅರಿವು ಇತ್ತು. ಈಗಲೂ ಇದೆ. ಆದರೆ ''ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ರಷ್ಯನ್ನರಂಥ ಆಧುನಿಕ ಸಾಮ್ರಾಜ್ಯಶಾಹಿಗಳು ನಮ್ಮ ಮೇಲೆ ಹೇರುತ್ತಿರುವ ಜಾಗತಿಕ ಅರಿವನ್ನು ನಮ್ಮ ಪುರಾತನ ಪೌರಾಣಿಕ ಅರಿವಿನಿಂದ ಎದುರಿಸುವುದು ಸಾಧ್ಯವಿಲ್ಲ. ವರ್ತಮಾನದಲ್ಲಿ ಅವಮಾನಿತರಾಗಿ, ಭೂತಕಾಲದಲ್ಲಿ ಸಾಮ್ರಾಜ್ಯ ಕಟ್ಟಿದ್ದ ಜಂಬವುಳ್ಳವರಾಗಿ ಬದುಕುತ್ತಿರುವ ನಮ್ಮಂಥವರು ಅರಿಯಬೇಕಾದ್ದು ಇದು. ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಮಾತ್ರ ರಾಷ್ಟ್ರಪ್ರಜ್ಞೆ ನೈಜವಾಗಬಲ್ಲುದು. ರಾಷ್ಟ್ರಗಳು ಸಮಾನವಾದಾಗ ಮಾತ್ರ ರಾಷ್ಟ್ರ ಪ್ರಜ್ಞೆ ನೈಜವಾಗಬಲ್ಲುದು'' ಎಂದು ಅನಂತಮೂರ್ತಿ ವಿಶ್ಲೇಷಿಸುತ್ತಾರೆ. ('ಪೂರ್ವಾಪುರ').

ಪ್ರಾದೇಶಿಕ ರಾಷ್ಟ್ರೀಯತೆಯ ಕಲ್ಪನೆಯನ್ನು ಯಾವ ರೀತಿಯಲ್ಲಿ ಅಂತರ್‌ರಾಷ್ಟ್ರೀಯ ಶಕ್ತಿಗಳು ತಿರುಚುತ್ತವೆ ಎಂಬುದು ನವ್ಯ ಚಿಂತಕರ ಕಳವಳ. ಇಲ್ಲಿನ ಒಂದು ಸ್ವಾರಸ್ಯಕರ ವಿಷಯ ಅಂದರೆ ಅಂತರ್ ರಾಷ್ಟ್ರೀಯ ದೈತ್ಯಶಕ್ತಿಗಳ ವಿರುದ್ಧ ಹೋರಾಡಬಲ್ಲ ಸಿದ್ಧಾಂತಗಳೂ ನಮ್ಮಲ್ಲೇ ಇವೆ. ಇದು ಗಾಂಧಿಯ ಜಾಗತಿಕ ಪ್ರಜ್ಞೆ. ವೀರಾವೇಶದ, ಹಿಂಸೆಯ ದನಿಯಲ್ಲಿ ಮಾತಾಡದ, ಪ್ರಾದೇಶಿಕತೆಯನ್ನುಳಿಸಿಕೊಂಡೇ ಜಾಗತಿಕವಾಗುವ 'ಯೂನಿವರ್ಸಲಿಸ್ಟ್' ಮಾರ್ಗ ಇದು. ಇದರ ಕಡೆ ನವ್ಯ ಚಿಂತಕರ ಒಲವಿದೆ.

ನಮ್ಮ ಇನ್ನೊಬ್ಬ ಪ್ರಮುಖ ಸಾಹಿತ್ಯ ಚಿಂತಕ ಡಿ.ಆರ್.ನಾಗರಾಜ್ ಅವರು ತಮ್ಮ 'ಸಾಹಿತ್ಯ ಕಥನ' ಗ್ರಂಥದಲ್ಲಿ ರಾಷ್ಟ್ರೀಯತೆ ಅನ್ನುವ ಪಾಶ್ಚಿಮಾತ್ಯ ಪರಿಕಲ್ಪನೆಯನ್ನು ಕನ್ನಡ ಚಿಂತಕರು ನಿರ್ವಹಿಸುವ ಕ್ರಮವನ್ನು ಪರಿಶೀಲಿಸುತ್ತಾರೆ. ಈ ಸಂದರ್ಭದಲ್ಲಿ, ಚಿದಾನಂದಮೂರ್ತಿ ಮುಂತಾದ ಲೇಖಕರಲ್ಲಿ ಎಡೆಮಾಡಿದ ವೀರಾವೇಶದ ಕನ್ನಡ ರಾಷ್ಟ್ರೀಯತೆ ಮತ್ತು

ಗಾಂಧೀಮಾರ್ಗದ ಅಹಿಂಸಾತ್ಮಕ ರಾಷ್ಟ್ರೀಯತೆ ಇವುಗಳ ನಡುವಿನ ವೈದೃಶ್ಯವನ್ನು ಗುರುತಿಸುತ್ತಾರೆ. ''ಕರ್ನಾಟಕ ತನ್ನೆಲ್ಲ ಭಾಷಾ ಸಮೂಹ, ಸಂಸ್ಕೃತಿಗಳು, ಆರ್ಥಿಕ, ರಾಜಕೀಯ ವಲಯಗಳಲ್ಲಿ ದೊಡ್ಡ ಬಿಕ್ಕಟ್ಟನ್ನು ಎದುರಿಸುತ್ತಿದೆ. ಆದರೆ ಅದಕ್ಕೆ ಪರಿಹಾರ ಅನ್ಯ ದ್ವೇಷದಲ್ಲಿಲ್ಲ'' ಎಂದು ಹೇಳುವ ಡಿ.ಆರ್. ನಾಗರಾಜ್ 'ರಾಷ್ಟ್ರೀಯತೆಯ ಚರ್ಚೆಯಲ್ಲಿ ವೀರಾವೇಶದ, ಕ್ಷಾತ್ರದ ಪರಿಭಾಷೆ ತಪ್ಪು ಎಂದೇ ಹೇಳುತ್ತಾರೆ.' ಏಕೆಂದರೆ ಅಂತಿಮವಾಗಿ ವೀರಾವೇಶದ ಪರಿಭಾಷೆ ಅನ್ಯದ್ವೇಷವನ್ನು ಹುಟ್ಟುಹಾಕುತ್ತದೆ. ವಿಶಿಷ್ಟವಾಗುವ ಮೂಲಕವೇ ಕನ್ನಡ ರಾಷ್ಟ್ರೀಯತೆ ವಿಶ್ವಾತ್ಮಕವಾಗಬೇಕು ಎಂಬ ನಿಲುವು ಇವರದು. ಕರ್ನಾಟಕ ತನ್ನ ಬಹುಮುಖ ವೈಶಿಷ್ಟ್ಯಗಳನ್ನು (ಹಿಂದೂ, ಮುಸ್ಲಿಂ, ಕ್ರೈಸ್ತ ಸಂವೇದನಗಳೂ ಇಲ್ಲಿ ಸೇರುತ್ತವೆ) ಬಿಟ್ಟುಕೊಡದೆ ಅಂತರ್‌ರಾಷ್ಟ್ರೀಯತೆಗೆ ಏರಬೇಕು ಎಂಬುದು ಇಲ್ಲಿನ ಅಭಿಪ್ರಾಯ.

ಲಂಕೇಶ್ ಅವರಲ್ಲಿ ಈ ಅರಿವು ''ಆಧುನಿಕ ಜಗತ್ತಿನ ಸಾಮಾಜಿಕ ರಾಜಕಾರಣದ'' ಚೌಕಟ್ಟಿನಲ್ಲಿ ಬರುತ್ತದೆ. ಡಿ.ಆರ್. ನಾಗರಾಜ್ ಅವರು ಗುರುತಿಸಿರುವಂತೆ ''ಕರ್ನಾಟಕವೆಂದರೆ ಬೇರೆಬೇರೆ ಭಾಷೆಗಳನ್ನು ಮಾತಾಡುವ ಅಲ್ಪಸಂಖ್ಯಾತರಿದ್ದಾರೆ. ಅವರ ಹಿತರಕ್ಷಣೆಯಲ್ಲೆ ಸದ್ಯದ ಹಿತವಿದೆ'' ಎಂಬ ತತ್‌ಕ್ಷಣಿಕ ಸತ್ಯದ ಗ್ರಹಿಕೆಯಿಂದ ಅವರ ಚಿಂತನೆ ಹೊರಡುತ್ತದೆ.

ಹೀಗೆ ನವ್ಯ ಚಿಂತಕರಲ್ಲಿ ರಾಷ್ಟ್ರೀಯತೆಯ ಅರಿವು ಸರಳ ದೇಶಭಕ್ತಿಯ ಹಾಡಾಗದೆ ಸಂಕೀರ್ಣ ರೀತಿಯಲ್ಲಿ ಮೂಡಿದೆ. ಪ್ರಾದೇಶಿಕ ವೈಶಿಷ್ಟ್ಯಗಳನ್ನು ಬಿಡದೆ, ಅದರ ತೀವ್ರತೆಯಲ್ಲೆ ಜಾಗತಿಕವಾಗುವ ಆಶಯ ಇಲ್ಲಿದೆ. ''ಅನ್ಯದ್ವೇಷಕ್ಕೆ, ಅಸಹನೆಗೆ ಎಡೆಮಾಡದ ರಾಷ್ಟ್ರೀಯತೆ ನಮ್ಮದಾಗಬೇಕು. ನಮ್ಮ ಬಹುಮುಖ ಸಂಸ್ಕೃತಿಯ ಅರಿವು ಎಂದೂ ಮರೆಯಾಗಬಾರದು'' ಎಂಬ ಆಶಯ ನವ್ಯ ಚಿಂತಕರಿಗಿದೆ.

ಕನ್ನಡ ಭಾಷಾ ಬಳಕೆ: ರಾಷ್ಟ್ರೀಯತೆಯ ಪರಿಕಲ್ಪನೆ ಹೇಗೆ ಅನ್ಯಾಕ್ರಮಣದ ಸಂದರ್ಭದಲ್ಲಿ ಮೂಡುತ್ತದೋ ಹಾಗೆ ಸ್ವಭಾಷಾ ಪ್ರೇಮವೂ ಅನ್ಯ ಭಾಷೆಗಳ ದುರಾಕ್ರಮಣದ ಭಯವಿದ್ದಾಗಲೇ ಮೂಡುವಂಥದು. ಈ ವಿಷಯದಲ್ಲಿನ ನವ್ಯ ಚಿಂತಕರ ಚಿಂತನೆಯನ್ನು ಈಗ ನಾವು ಗಮನಿಸಬಹುದು:

ಕೆ.ಎಸ್. ನರಸಿಂಹಸ್ವಾಮಿ ಅವರ ಒಂದು ಕವನ ಹೀಗೆ ಹೇಳುತ್ತದೆ. :

> ಕನ್ನಡದಲೇನೆಂದು ಇಂಗ್ಲೀಷ್ ನೋಡಿದೆವು
> ಹಡಗನೇನೂ ನಾವು ಹತ್ತಲಿಲ್ಲ.
> ಸಂಸ್ಕೃತವೆ ನಮದೆಂದು ಭಕ್ತಿಯಲಿ ಭಜಿಸಿದೆವು
> ವೇದ ಪುರುಷನು ಕಣ್ಣು ಹರಸಲಿಲ್ಲ.
> ಕಟ್ಟಕಡೆಗುಕ್ಕಿಹುದು ಕನ್ನಡದ ಅಭಿಮಾನ
> ಕನ್ನಡವೆ ಪ್ರಾಣ ಪದಕ

ಇದು ಕನ್ನಡ ಮತ್ತು ಇತರ ಭಾಷೆಗಳ ನಡುವಿನ ಅನುಸಂಧಾನಕ್ಕೊಂದು ಸೂಚನೆ. ಹಳೆಗನ್ನಡದಲ್ಲಿದ್ದ ಮಾರ್ಗ-ದೇಸಿಯ ಜಟಾಪಟಿ ಅರ್ಥಾತ್ ಸಂಸ್ಕೃತ-ಕನ್ನಡ ಸಂಘರ್ಷ, ಇಂದಿನ ಇಂಗ್ಲಿಷ್-ಕನ್ನಡ-ಹಿಂದಿ ಸಂಘರ್ಷಕ್ಕಿಂತ ಗುಣಾತ್ಮಕವಾಗಿ ಬೇರೆ ಏನೂ ಅಲ್ಲ. ಕನ್ನಡ

ಬೇರೆ ಭಾಷೆಗಳಿಂದ ಏನನ್ನು ಸ್ವೀಕರಿಸಬಹುದು, ಎಷ್ಟನ್ನು ಸ್ವೀಕರಿಸಬಹುದು, ಸ್ವೀಕರಿಸಿಯೂ ಹೇಗೆ ತನ್ನತನವನ್ನು ಉಳಿಸಿಕೊಳ್ಳಬಹುದು ಎಂಬುದನ್ನು ಕಾಲಾನುಕಾಲದಿಂದ ಚಿಂತಕರು ಚರ್ಚಿಸಿದ್ದಾರೆ. ನವ್ಯ ಚಿಂತಕರೂ ಇದಕ್ಕೆ ಹೊರತಲ್ಲ.

'ನುಡಿ'ಯ ಕುರಿತ ಚಿಂತನೆಯನ್ನು ಗಮನಿಸುವುದಾದರೆ ನವ್ಯ ಸಾಹಿತ್ಯ ಚಿಂತಕರು ಎರಡು ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಒಂದು ಸಾಹಿತ್ಯ ಭಾಷೆಯನ್ನು ಬದಲಾಯಿಸುವ ಮೂಲಕ, ಇನ್ನೊಂದು ಭಾಷೆಯ ಕುರಿತ ಚಿಂತನೆಯ ಮೂಲಕ.

ಸುಮತೀಂದ್ರ ನಾಡಿಗ್ ಅವರು ಗುರುತಿಸುವಂತೆ ''ಕಾವ್ಯದ ಭಾಷೆ ಹೀಗಿರಬೇಕು ಎಂದು ನವೋದಯರು ಹಾಕಿಕೊಂಡಿದ್ದ ಮಡಿವಂತಿಕೆಯನ್ನು ಕಿತ್ತು ಹಾಕಿ 'ಬೇದಿಂಗ್ ಬ್ಯೂಟಿ', 'ದಿಲ್‌ದಾರತನ' 'ರೆಫ್ರಿಜೀರೇಟರು', 'ರಾಕೆಟ್', 'ಕಂಪ್ಯೂಟರ್' ಕೂಡಾ ಕಾವ್ಯದಲ್ಲಿ ಬರಬಹುದು ಎನ್ನುವುದನ್ನು ನವ್ಯಕಾವ್ಯ ತೋರಿಸಿಕೊಟ್ಟಿತು''. ವೇಣುಗೋಪಾಲ ಸೊರಬ ಹೇಳುವಂತೆ ''(ಇವರು) ಭಾಷೆಗೆ ತಂದುಕೊಟ್ಟ ಕಸುವು, ತಪ್ಪಿಸಿದ ಶಬ್ದದ ದುಂದುಗಾರಿಕೆ, ಸಂಕೇತ, ಶಬ್ದಶಕ್ತಿಗಳು - ಈ ಮೂಲಕ ನವ್ಯರು ತೋರಿಸಿಕೊಟ್ಟ ಸಾಧ್ಯತೆಗಳನ್ನು ಗೌರವದಿಂದ ನೆನೆಯಲೇಬೇಕು.'' (ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ).

ಅಂದರೆ ನವ್ಯರು ಕಾವ್ಯಭಾಷೆಗೆ ಹೊಸದೇ ಆದ ಒಂದು ಲಯವನ್ನು ತಂದುಕೊಟ್ಟರು ಎನ್ನುವುದನ್ನು ಗಮನಿಸಬೇಕು. ಈ ಚಳವಳಿಯ ಮುಂಚೂಣಿಯಲ್ಲಿದ್ದ ಅಡಿಗರು ''ಕಾವ್ಯ ಭಾಷೆಗೆ ಮತ್ತೆ ಮತ್ತೆ ವಾಸ್ತವದ ರಕ್ತದಾನವಾಗಬೇಕು'' ಎಂದು ಹೇಳಿದ್ದು ಇದಕ್ಕಿಂತ ಬೇರೆ ಏನಲ್ಲ.

ನವ್ಯ ಸಾಹಿತ್ಯ ಚಿಂತಕರ ಭಾಷಾ ಚಿಂತನೆಯನ್ನು ಗಮನಿಸುವಲ್ಲಿ ನಾವು ಅನಂತಮೂರ್ತಿ ಅವರನ್ನು ಪ್ರಾತಿನಿಧಿಕವಾಗಿ ತೆಗೆದುಕೊಳ್ಳಬಹುದು. ''ಕನ್ನಡ ನಾಡಿನಲ್ಲಿ ಕನ್ನಡವೇ ಬಳಕೆಯ ಭಾಷೆಯಾಗಬೇಕು'' ಎಂಬ ಉದ್ದೇಶದಿಂದ ಹೊರಟ ಚಳವಳಿಗಳನ್ನು ಕುರಿತು ಅವರು ಹೀಗೆ ಹೇಳುತ್ತಾರೆ ''ಜನರು ಆಡುವ ಭಾಷೆಗೆ ಪ್ರಾಮುಖ್ಯ ಇರಬೇಕೆಂಬ ಚಳುವಳಿ ಜನರ ಭಾಷೆಗಳೇ ಆದ ಉರ್ದು, ಮರಾಠಿ, ತಮಿಳುಗಳನ್ನು ಮಾತಾಡುವವರನ್ನು ಕಂಡು ಕೆಂಡ ಕಾರುವುದು ಅಷ್ಟೇನೂ ಸಂತೋಷದಾಯಕ ವಿಷಯವಲ್ಲ... ಸಮೂಹ ಸನ್ನಿಗೆ ಕಾರಣವಾಗದಂತೆ ಭಾಷಾ ಚಳುವಳಿಯನ್ನು ನಡೆಸಿಕೊಂಡು ಹೋದಲ್ಲಿ ಮಾತ್ರ ಅದು ಸಾಂಸ್ಕೃತಿಕವಾಗಿ ಮಹತ್ವ ಪೂರ್ಣವಾದೀತು... ಸದ್ಯದ ಲಾಭಕ್ಕಾಗಿ ಭಾಷಾ ಚಳುವಳಿಯ ಜನಭಾಷಾ ಪಾರಮ್ಯದ ಮೂಲತತ್ವದ ನೈತಿಕತೆಯನ್ನು ಕಳೆದು ಕೊಳ್ಳಬಾರದು... ಬೇರೆ ರಾಜ್ಯಗಳಲ್ಲಿ ಅಲ್ಪ ಸಂಖ್ಯಾತರಾದ ಕನ್ನಡಗರು ಇಂಥದೇ ಅತಿರೇಕದ ಚಳುವಳಿಗಳ ನಡುವೆ ಭಯಗ್ರಸ್ತರಾಗಿ ಬದುಕುತ್ತಿದ್ದಾರೆಂಬುದನ್ನು ಮರೆಯಬಾರದು.'' (ಪೂರ್ವಾಸರ)

ಹೀಗೆ ಕನ್ನಡ ಸಂಸ್ಕೃತಿಯ ಲಕ್ಷಣವೇ ಆದ ಪರಭಾಷಾ ಸಹಿಷ್ಣುತೆಯನ್ನು ನವ್ಯ ಚಿಂತಕರು ಸಾಮಾಜಿಕ, ರಾಜಕೀಯ ಪರಿಭಾಷೆಯಲ್ಲಿ ವಿಶಿಷ್ಟವಾಗಿ ಮುಂದುವರಿಸಿದ್ದಾರೆ. ಯಾವುದೇ ಕಾರಣಕ್ಕೂ ಭಾಷಾ ಚಳವಳಿಗಳು 'ಭಾರತೀಯ ಭಾಷೆಗಳ ನಡುವೆ ಇರುವ ಅಲ್ಪ ವೈಷಮ್ಯವನ್ನು' ದೊಡ್ಡದು ಮಾಡಬಾರದು-ಇವು ಹೃದಯಹೀನತೆಯಿಂದ ವರ್ತಿಸಬಾರದು ಎಂದು

ಅನಂತಮೂರ್ತಿ ಮೊದಲಾದ ಚಿಂತಕರು ಅಭಿಪ್ರಾಯ ಪಡುತ್ತಾರೆ. ಅಧಿಕಾರದ ವಿಕೇಂದ್ರೀಕರಣ ಆಡುಭಾಷೆಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ತರುತ್ತವೆ ಎಂಬ ಅಭಿಪ್ರಾಯ ಇಲ್ಲಿ ಮೂಡಿದೆ.

ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಾಗುವ ವಿಚಾರ ಒಂದಾದರೆ, ಕನ್ನಡ-ಇಂಗ್ಲಿಷಿನ ಸಂಬಂಧ ಇನ್ನೊಂದು ಮುಖ್ಯ ವಿಚಾರ. ತಮ್ಮ 'ಪ್ರಜ್ಞೆ ಮತ್ತು ಪರಿಸರ' ಪುಸ್ತಕದ 'ಇಂಗ್ಲೀಷ್ ಬ್ರಾಹ್ಮಣ, ಕನ್ನಡ ಶೂದ್ರ' ಲೇಖನದಲ್ಲಿ ಈ ವಿಚಾರದ ಬಗ್ಗೆ ಅನಂತಮೂರ್ತಿ ಚರ್ಚಿಸಿದ್ದಾರೆ.

''ನಮ್ಮ ಬೌದ್ಧಿಕ ವ್ಯಾಪಾರಗಳೆಲ್ಲ ನಿಘಂಟಿನಿಂದ ಕಲಿತ ಕೃತಕ ಇಂಗ್ಲೀಷಿನ ಮುಖಾಂತರ ಗೃಹಕೃತ್ಯದ ನಿತ್ಯವಿಧಿ, ಚಾಡಿ, ತರಳೆ, ಆಪ್ತ ಮಾತುಕತೆ, ಹರಟೆ ಸೊರಗಿದ ಕನ್ನಡದ ಮೂಲಕ ಇದರ ಪರಿಣಾಮ ದ್ವಿಭಾಷಾ ಸಂಪತ್ತಲ್ಲ. ಭಾಷಾ ದಾರಿದ್ರ್ಯ'' ಇಂಗ್ಲಿಷ್ ವಿದ್ಯಾಭ್ಯಾಸ, ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ, ಅನಕ್ಷರಸ್ಥ ವಲಯಗಳಲ್ಲಿನ ಕನ್ನಡ ಬಳಕೆ ಇದರಿಂದಾಗಿ ಉಂಟಾಗುವ ಕಂದಕದ ಬಗ್ಗೆ ಅನಂತಮೂರ್ತಿಯವರು ಇಲ್ಲಿ ಪ್ರಸ್ತಾಪಿಸಿದ್ದಾರೆ. ''ಸಾಹಿತ್ಯದ ದೃಷ್ಟಿಯಿಂದ ನೋಡಿದಲ್ಲಿ ಭಾರತೀಯನಿಗೆ ಗೊತ್ತಿರುವ ಮಾತೃಭಾಷೆಯಾಗಲಿ ಅಥವಾ ಇಂಗ್ಲೀಷಾಗಲಿ ಇಡೀ ಜನಾಂಗದ ಒಟ್ಟು ಅನುಭವವನ್ನು- ಹಳ್ಳಿ, ಪಟ್ಟಣ ಕೂಡಿಸಿ- ಅಭಿವ್ಯಕ್ತಗೊಳಿಸಲು ಅಸಮರ್ಥ ವಾಹಕಗಳಾಗಿವೆ... ಹಳ್ಳಿ ಪಟ್ಟಣ ದೂರವಾಗಿ ಇಂಗ್ಲಿಷ್ ಬ್ರಾಹ್ಮಣ, ಕನ್ನಡ ಶೂದ್ರ ಎನ್ನುವ ಎರಡು ಅಮಾನುಷ ಜಾತಿಗಳು ಹುಟ್ಟಿ ಯಂತ್ರನಾಗರಿಕತೆ ಇನ್ನೆಲ್ಲೂ ಮಾಡದಂತಹ ಘೋರ ಪರಿಣಾಮವನ್ನು ನಮ್ಮ ನಾಡಿನಲ್ಲಿ ಮಾಡುತ್ತದೆ....'' ಇಂತಹ ಸಂದರ್ಭದಲ್ಲಿ ಅನಂತಮೂರ್ತಿ ಅವರ ಪ್ರಕಾರ ''ಅನಿವಾರ್ಯವಾದ ಯಂತ್ರನಾಗರಿಕತೆ ಮತ್ತುಹೊಸ ವಿಚಾರ ನಮ್ಮ ಭಾಷೆಯ ಮೂಲಕವೇ ನಮಗೆ ಬರಬೇಕು... ಗ್ರಹಿಸಲು ನಾವು ಮೂಲದ ಕೃತಿಗೆ ಅಂದರೆ ಇಂಗ್ಲಿಷಿನಲ್ಲಿರುವ ಕೃತಿಗೆ ಹೋಗಬೇಕು-ಆದರೆ ಅಭಿವ್ಯಕ್ತಿಗೆ ನಮ್ಮ ಭಾಷೆಯನ್ನೆ ಉಪಯೋಗಿಸಬೇಕು...''

ಹೀಗೆ ಇಂಗ್ಲಿಷಿನ ಶಕ್ತಿಗಳನ್ನು ಅಂತರಂಗೀಕರಿಸಿಕೊಂಡು ಕನ್ನಡ ಇನ್ನೂ ಹೆಚ್ಚು ಶಕ್ತಿಯುತವಾಗಬೇಕು ಎಂಬುದು ನವ್ಯ ಚಿಂತಕರ ಅಭಿಪ್ರಾಯವಾಗಿದೆ. ಬೇರೆ ಭಾಷೆಯ ಬಗೆಗಿನ ಅಸಹನೆಗೆ ಎಡೆಮಾಡದ ಕನ್ನಡ ಭಾಷಾ ಪ್ರೇಮ ಹಾಗೂ ಇಂಗ್ಲಿಷಿನ ಶಕ್ತಿಗಳ ಅರಿವಿರುವ ಕನ್ನಡ ಅಭಿವ್ಯಕ್ತಿ. ಇವು ಕನ್ನಡಗರ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಮುಖ್ಯ ಎಂಬುದು ಇಲ್ಲಿನ ಅಭಿಪ್ರಾಯವಾಗಿದೆ.

ಒಟ್ಟಿನಲ್ಲಿ ನವ್ಯ ಸಾಹಿತ್ಯ ಚಿಂತಕರ ನಾಡು ನುಡಿ ಚಿಂತನೆ ವಾಸ್ತವದ ಅರಿವನ್ನು ಹೊಂದಿದ್ದು, ಯಾವ ಅತಿಗೂ ಹೋಗದೆ ಪರಸಹಿಷ್ಣುತೆಯನ್ನು ಬೆಂಬಲಿಸುತ್ತದೆ ಮತ್ತು ತನ್ನ ಮಿತಿಗಳನ್ನು ಒಪ್ಪಿಕೊಂಡ ಸ್ವಭಾಷಾ ಬೆಳವಣಿಗೆಯನ್ನು ಆಶಿಸುತ್ತದೆ. ರಾಷ್ಟ್ರೀಯ, ಅಂತರ್ ರಾಷ್ಟ್ರೀಯ, ಸಾಮಾಜಿಕ, ರಾಜಕೀಯ, ಆರ್ಥಿಕ ಸತ್ಯಗಳನ್ನು ಒಳಗೊಂಡ ಈ ಸಮತೂಕದ ಚಿಂತನೆ ನಾಡು-ನುಡಿಯ ಅಭಿವೃದ್ಧಿಯ ದೃಷ್ಟಿಯಿಂದ ನಿಜಕ್ಕೂ ಮುಖ್ಯವೆನಿಸುತ್ತದೆ.

(ಯು.ಆರ್. ಅನಂತಮೂರ್ತಿ ಅವರ ಪೂರ್ವಾಪರ, ಪ್ರಜ್ಞೆ, ಮತ್ತು ಪರಸರ, ಡಿ.ಆರ್. ನಾಗರಾಜ ಅವರ ಸಾಹಿತ್ಯ ಕಥನ, ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ಇನ್ನೂ ಕೆಲವು ಗ್ರಂಥಗಳ ಆಧಾರ)

ನವ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ನಾಡು, ನುಡಿ ಚಿಂತನೆ

ಎಂ.ಜಿ. ನಾಗರಾಜ್

ಪ್ರಾಗೈತಿಹಾಸಿಕ ಕಾಲದಿಂದ ವರ್ತಮಾನದವರೆಗೆ ನಮ್ಮ ನಾಡಿನ ವಿಸ್ತಾರ, ಜನ, ವಾಸ್ತವ್ಯ ಹಾಗು ಭಾಷೆಯ (ನುಡಿ) ಅನೇಕ ಸ್ಥಿತ್ಯಂತರಗಳನ್ನು ಕಂಡುದುದಾಗಿದೆ. ನಾಡು ವಿಸ್ತಾರವಿದ್ದಾಗ, ಬದುಕಿನ ಚಲನ, ನುಡಿಯ ನೆಲೆಯೂ ಒಂದು ರೀತಿ ನೆಮ್ಮದಿಯ ಚೌಕಟ್ಟು ಪಡೆದಿರುತ್ತದೆ. ಜನಸಂಖ್ಯೆ ಹೆಚ್ಚಿದಂತೆ ಜೀವನ ಸ್ಪರ್ಧೆ ಕೂಡ ಹಣಿಕುತ್ತದೆ. ವಿವಿಧ ಅಲೆಮಾರಿತನ ರೂಢಿಗೊಂಡಾಗ ಪ್ರಭಾವಗಳು ಮಿತಿಗೊಳ್ಳುವುದಿಲ್ಲ.

ಮೊದಲಿನ ಭೌಗೋಳಿಕ ಚೌಕಟ್ಟು ಒಂದು ರೀತಿ ನಾಡುನುಡಿಗಳ ನೆಲೆಯನ್ನು ನಿರ್ದೇಶಿಸುತ್ತದೆ. ಅದು ವಿಸ್ತಾರಗೊಂಡಾಗ ಪ್ರಭಾವಗಳ ಪರಿಸರದಲ್ಲಿ ನಾಡು-ನುಡಿಗಳ ನೆಲೆ ಬೇರೆಯೆ ಆಯಾಮವನ್ನು ಪಡೆಯುತ್ತದೆ. ನೆಮ್ಮದಿ ನಿಷ್ಕ್ರಿಯತೆಯ ಹಾದಿಯಾಗುವ ಅಗತ್ಯವೇನೂ ಇಲ್ಲ; ಅಸಂತೃಪ್ತಿ ಕ್ರಿಯಾಶೀಲತೆಗೆ ಎಡೆ ಆಗಿರುತ್ತದೆ ಎಂಬ ಭರವಸೆಯೂ ಇಲ್ಲ. ಇಂತಹ ಜಾಯಮಾನಗಳು ನಾಡು-ನುಡಿ ಬೆಳೆದು ಬಂದ ಹಾದಿಯಲ್ಲಿ ವಿವಿಧ ರೂಪಗಳಲ್ಲಿ ಕಂಡರಣೆಗೊಂಡ ಉತ್ಪನ್ನಗಳೇ ಆಗಿವೆ.

ಒಂದು ಕಾಲಕ್ಕೆ ಸಮುದಾಯ ಚಿಂತನೆ, ಸಮುದಾಯ ಸುಖವನ್ನೆ ತನ್ನದೆಂದು ನಂಬಿದ ಬದುಕು; ಇನ್ನೊಂದು ಕಾಲದಲ್ಲಿ ವ್ಯಕ್ತಿ ಸೌಖ್ಯ ಮುಖ್ಯ ಎಂದು ಆರೋಪಿಸಿಕೊಂಡು ನಡೆದ ಬದುಕು; ಮಗದೊಂದು ಕಾಲದಲ್ಲಿ ಅವಕಾಶ ವಂಚಿತ ವರ್ಗ ಮೈ ಕೊಡವಿ ನಿಂತು ಬಾಳಲೆಸಗಿದ ಬದುಕು - ಇವೆಲ್ಲವೂ ಸಮುದಾಯ ನಿಷ್ಠೆಯಿಂದ ಅಥವಾ ಪ್ರಾಕೃತಿಕ ನಿಷ್ಠೆಯಿಂದ ಅಥವಾ ಕಚ್ಚಾ ಮಾಲುಗಳನ್ನು ಬಳಸಿದ ಪರಿಧಿಯಿಂದ ಗ್ಲೋಬಲ್ ನಿಷ್ಠೆಗೆ, ಅಪ್ರಾಕೃತಿಕ ಸೃಷ್ಟಿ ನಿಷ್ಠೆಗೆ ಸಾಗಿ ವೇಗದ ಬದುಕು

ಸಾಗುವ ವಲಯದಲ್ಲಿ ನಮ್ಮ ಬಾಳಿನ ಇತಿಹಾಸ ಬಂದಿದೆ. ಇವೆಲ್ಲದರ ಪರಿಣಾಮ ನಾಡು - ನುಡಿಗಳ ಪ್ರಕಟನಾ ಮಾಧ್ಯಮಗಳಲ್ಲಿ ಅಭಿವ್ಯಕ್ತಿಗೊಂಡಿದೆ.

ಜಂಬೂದ್ವೀಪವೋ, ಭಾರತ ವರ್ಷವೋ, ಇಂಡಿಯವೋ ಯಾವೆಲ್ಲ ಭೌಗೋಳಿಕ ಚೌಕಟ್ಟಿನಲ್ಲಿ ನಿಂತ ಕರುನಾಡು; ಪುರಾಣ ಇತಿಹಾಸ, ಕಾವ್ಯ ಸಾಹಿತ್ಯಗಳಲ್ಲಿ ಕರ್ಣಾಟ, ಕರ್ನಾಟ, ಕನ್ನಡ ದೇಶವಾಗಿ ವಿಕಸಿಸುತ್ತ ಕರ್ನಾಟಾಂತರ್ಗತ ಭಾರತ ಮಾತೆಯನ್ನಾಗಲಿ, ಭಾರತ ಜನನಿಯ ತನುಜಾತೆ ಕರ್ನಾಟಕ ಮಾತೆ, ನಾಡ ಹಾಗು ನುಡಿಗೀತೆಯಲ್ಲಿ ಸಾಕ್ಷಾತ್ಕಾರಗೊಂಡದ್ದು ಸತ್ಯ; ಬಯಲುಗೊಂಡದೂ ದಿಟ; ಅವುಗಳ ಉಳಿವಿಗಾಗಿ ಇಂದು ನಾಡವರು ನುಡಿಯಲ್ಲಿ, ನಡೆಯಲ್ಲಿ ಹೋರಾಡಬೇಕಿರುವುದೂ ಕಟುವಾಸ್ತವ.

ಕ್ರಿ.ಶ. ೪೫೦ ಹಲ್ಮಿಡಿ ಶಾಸನದ ಪೂರ್ವದಲ್ಲಿಯೆ ಅವತಾರವಿದ್ದ 'ಇಸಿಲ' ಕನ್ನಡ ಶಬ್ದ 'ಕೊಂಚ ಮಧುಪಾತ್ರೆಗೆ ಹಾಕು' ಸಾಲು ಗ್ರೀಕ್ ಸಂವಾದದಲ್ಲಿ ಇರುವುದೆನ್ನುವ ಹಂಬಲದ ನಂಬುಗೆ ಅಂದಿನಿಂದ ಹಿಡಿದು ೭ನೆಯ ಶತಮಾನದ ಕಪ್ಪೆ ಅರಭಟ್ಟನ ಶಾಸನದ ಕನ್ನಡ ಛಂದಸ್ಸು ತ್ರಿಪದಿಯ ಅಸ್ತಿತ್ವ, ಕವಿರಾಜ ಮಾರ್ಗದ 'ದೋಸಮಿನಿತೆಂದುದ್ಭಾಸಿಸಿಜಿನೆಂದು ಕನ್ನಡಂಗಳೊಳ್' ಎನ್ನುವ 'ಕನ್ನಡಗಳು', ಬೀಡಿವರೆ ಬೀಡನ ಡುಂಡುಜಯ ಜಾನಪದ ಸೊಗಡು; ಪಂಪನ ವೀರ-ಕಂಪಿನಿಂದ ಹಿಡಿದು ನವ್ಯೋತ್ತರ ಬೀರಬಂಡಾಯ, ದಲಿತ ಸೊಗಡಿನ ಸಿಕ್ಕುಗಳವರೆಗೆ ನಮ್ಮ ನುಡಿಸಂಪದ ಕೃತಿ ಸಾರಸ್ವತದಲ್ಲಿ ಮೊಗಗೊಂಡಿವೆ, ಭಾವಗೊಂಡಿವೆ, ಚಲಿಸುತ್ತಲೇ ಇವೆ - ಭೃಗುವಿನೊದತವಾಗಿ, ಶೋಷಿತನೆದಿರೇಟಾಗಿ.

ಗದ್ಯಕಥಾ, ಸೂಳೆವಾಡು - ಸಾಗಂತ್ಯ, ನೆಗಳ್ತೆಯ ಕಬ್ಬ, ಇಡುಕುಂಗಬ್ಬಗಳ ಕಾಲವು ಕನ್ನಡದ ಮೇಲಾಗುತ್ತಿದ್ದ ಸಂಸ್ಕೃತ ಶೈಲಿಯ ಸವಾರಿಗೆ ದೇಸಿಶೈಲಿಯ ಮೂಲಕ ಬಂಡಾಯದನಿಯೆ ಆಗಿರಬಹುದು; ಮೇಲ್ಮೆಯ ಕುಳ್‌ಗಳಿಗೆ ಸೆಡ್ಡು ಹೊಡೆದು ನಿಂತ ವಂಚಿತ ವರ್ಗದ ಅಥವ ವಂಚಿತ ವರ್ಗದ ಪರ ನಿಂತವರ 'ಹೊರಮುದ್ದು'ವಿನ ಗುದ್ದೂ ಆಗಿರಬಹುದು. 'ಸಾಹಿತ್ಯ ಚರಿತ್ರೆ'ಯಲ್ಲಿ ಧ್ವನಿಬದ್ಧ ಜನಪದ ಸಾಹಿತ್ಯಕ್ಕಿಂತ ಲಿಪಿಬದ್ಧ ಶಿಷ್ಟಸಾಹಿತ್ಯ' ಮೇಲುಗೈ ಆಗಿ ಅನಿವಾರ್ಯವೆಂದರೂ ಆ ಧ್ವನಿಬದ್ಧ ಮಾಧ್ಯಮವೂ ಗ್ರಾಮೀಣ ನಡೆಮುಡಿಯಾಗಿಯೇ ಹರಿದು ಬಂದಿರುವುದನ್ನು ಗುರುತಿಸದೆ ಇರುವಂತಿಲ್ಲ; ಚಾಲನೆಯನ್ನು ತಡೆಯುವಂತಿಲ್ಲ. ಇಂದಿಗೂ ಅದರ ಅಸ್ತಿತ್ವವನ್ನು ಕಾಪಾಡುವ ಚಲನಶೀಲ ವರ್ಗವನ್ನು ಕಡೆಗಣಿಸುವಂತಿಲ್ಲ. ಆದರೆ ಗ್ರಾಮ ಬದುಕಿನ ಮುನ್ನಿನ ಆದಿವಾಸಿ ಯಾ ಬುಡಕಟ್ಟು ಜನಾಂಗಗಳ ಹಾಡು-ಹಸೆಗಳ ಪ್ರಾಕೃತಿಕ ಸೆಣಸಾಟಗಳ ಧ್ವನಿಯು ಜಾನಪದ ಹಾಗು ಶಿಷ್ಟ ಸಾಹಿತ್ಯದ 'ಜೇನು' ಆಗಿರಲೂಬಹುದಲ್ಲವೆ! ಅಥವಾ ಆ 'ಜೇನು'ಗಳು ನವ್ಯೋತ್ತರ ನುಡಿಗಟ್ಟುಗಳಲ್ಲಿ ಗರ್ಭೀಕರಣ ಸಂಯುಕ್ತ ಸಹಯೋಗ ಮಿಶ್ರಣ ಅಲ್ಲ, Compound ಎನ್ನುವ ಸಂಯುಕ್ತವಸ್ತುವಿನ ಚರ್ಯೆಯಾಗಿಗೊಂಡಿರಬಹುದು. ಅಂದಿನದೆಲ್ಲ ಪ್ರಕೃತಿಗೆ, ವಿಧೇಯತೆ, ಆರಾಧನೆ ಎನ್ನುವ ಭಾವ ಎಷ್ಟು ಸರಿ! ಪ್ರಕೃತಿ ಎದುರು ಬದುಕುವ ಇಚ್ಛೆಯಲ್ಲ, ಬದುಕುವಲ್ಲಿ ಹೋರಾಟ ಅನಿವಾರ್ಯವೇ ಎನ್ನುವಲ್ಲಿ ಆ ಪ್ರವೃತ್ತಿ ಉದ್ಗಾರಗಳಲ್ಲಿ ಇರಲಿಲ್ಲವೆನ್ನಲಾದೀತೆ! ಪ್ರಾಗೈತಿಹಾಸಿಕದಿಂದ ಬರೆಹದ ಕಾಲಕ್ಕೆ ಬಂದಾಗ, ಅಂದಿನ ಪ್ರತಿಭಟನೆಯ ಜೇನುಗಳ ವಿಕಸಿತ ರೂಪ ಇರಲಿಲ್ಲವೆನ್ನಲಾದೀತೆ! ಇಲ್ಲೆಲ್ಲ ನಾಡು-

ನುಡಿ ಎಂಬ ಗಡಿರೇಖೆ ಗುರುತಿಸಲು ಕಷ್ಟ. ಆದರೆ ಅವು ತೀರ ಅಮೂರ್ತವೇನೂ ಆಗಿರಲಿಲ್ಲ ಎನ್ನಲು ವಿವಿಧ ಸಂಸ್ಕೃತಿಗಳು ಬೆಳೆದು ಬಂದುದೇ ಸಾಕ್ಷಿ ಆಗಿದೆ.

ಭಾರತ ಸ್ವಾತಂತ್ರ್ಯಪೂರ್ವ ಹೋರಾಟಗಳು ಕನ್ನಡ ಸಾಹಿತ್ಯದಲ್ಲಿ ರಮ್ಯ, ನವೋದಯದ ಆವೇಶ ಮೂಲದ್ದು ಎಂದು ಪರಿಭಾವಿಸಿದರೂ ಪ್ರತಿಭಟನೆಯ ರೂಪಗಳು ಅಭಿವ್ಯಕ್ತಿಸುವ ಒಂದು ರೂಪವೂ ಅಲ್ಲಿತ್ತು. ಸ್ವಾತಂತ್ರ್ಯೋತ್ತರದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ, ಬಂಡಾಯ ದಲಿತ ಎಂಬೆಲ್ಲ ಯಾವುದೇ ಮಜಲುಗಳನ್ನು ಗ್ರಹಿಸಿದರೂ ನಾಡಿನ, ನುಡಿಯ ಬಗ್ಗೆ ಚಿಂತನೆಗಳು ವಿವಿಧ ಶಬ್ದ ಸ್ವರೂಪಗಳಲ್ಲಿ ಉತ್ಪನ್ನಗೊಂಡೋ ಸೃಜನಗೊಂಡೋ ಮಿಡಿದಿವೆ.

'ಶ್ರೀ' ಯವರು ಇಂಗ್ಲೀಷಿನ 'ರಮ್ಯ'ವನ್ನು ಇಂಗ್ಲಿಷ್ ಗೀತಗಳ ಮೂಲಕ ಕನ್ನಡಕ್ಕೆ ತಂದು ಪ್ರಭಾವಿಸಿದರು. ಕುವೆಂಪು ಈ ಸಾಹಿತ್ಯರೂಪವನ್ನು 'ನವೋದಯ' ಎಂದರು. ಮಾಧ್ಯಮದ ಸಾಹಿತಿಗಳು ತಮ್ಮ ಸಂಸ್ಕೃತಿಯ ಬಗ್ಗೆ, ಹಿಂದಿನ ಸಾಹಿತ್ಯದ ಬಗ್ಗೆ ಒಂದು ರೀತಿ ಸ್ತೋತ್ರ ಭಾವ ಅಥವಾ ಆರಾಧನಾ ಭಾವವನ್ನು ಪಾಶ್ಚಾತ್ಯ ಪ್ರಭಾವದ ನಡುವೆಯೂ ಹೊಂದಿದ್ದರು; ಜೀವನದ ಬಗ್ಗೆ ಆಸಕ್ತಿ ವಿನಾ ವ್ಯವಸ್ಥೆಯ ವಿರುದ್ಧ ತೀವ್ರವಾಗಿ ಹೋರಾಡುವುದು ಅಷ್ಟಾಗಿ ಇವರಲ್ಲಿ ಕಾಣಬರುದು. ಹೀಗೆಯೇ ಉತ್ತರ ಕರ್ನಾಟಕದ 'ಗೆಳೆಯರ ಗುಂಪು' ಕಾವ್ಯ ವಲಯದಲ್ಲಿ ನೂತನ ಆಯಾಮಗಳಿಗೆ ಕಾರಣವಾಯಿತು. ಜಾನಪದ ಸೊಗಡೂ ಅವರಲ್ಲಿ ಕೂಡಿಕೊಂಡಿತ್ತು. ಈ ವರ್ಗದಲ್ಲಿ, ಪರ್ವತ, ಅರಣ್ಯ, ನದಿಗಳು, ಧಾರ್ಮಿಕ ಅವಸರಗಳ ಪರಿಧಿಯಲ್ಲಿ ಗಮನಿಸುವುದನ್ನು ಹೊಸದಕ್ಕೆ ತೆರೆದುಕೊಂಡವರು, ಪ್ರಕೃತಿವರ್ಣನೆ, ನಾಡಿನ ವರ್ಣನೆಯಲ್ಲಿ ಅಭಿಮಾನ ವೈವಿಧ್ಯ ತೋರಿದವರು, ನಿಸರ್ಗದ ರುದ್ರಮಂಗಳ ಸ್ವರೂಪವನ್ನು ಕಾಣೆಯೊಳಗಿಟ್ಟವರು, ಅದರ ವರ್ಣನೆಯಲ್ಲಿ ತನ್ಮಯರಾದರು, ಜನಜೀವನದ ಸಂಗತಿಗಳನ್ನು ಗಮನಿಸಿದವರು, ಚಿಂತನಶೀಲತೆಯಲ್ಲೂ ಭವದ ಸೌಂದರ್ಯ ಭಗವಂತನ ಕೃಪೆ ಎಂಬ ನಂಬಿಕೆಯವರೂ ಪ್ರಕೃತಿಯನ್ನು ಮಾನವೀಕರಿಸಿ ವ್ಯಕ್ತಿತ್ವ ಆರೋಪಿಸಿದವರು ಪ್ರತಿಮೀಕರಿಸಿದವರೂ ಇದ್ದಾರೆ. ಈ ಶತಮಾನದ ೪೦ರ ದಶಕದಲ್ಲಿ ಪ್ರಗತಿಶೀಲ ಚಳವಳಿಯ ಮೂಲಕ ಶೋಷಣೆಯ ಎದುರು ಲೇಖಕರು ದನಿಯಾಡಿದರು. ಅದರಲ್ಲಿ ಬಡವರ, ಕೂಲಿಗಳ, ರೈತರ ಕುರಿತ ಕಾಳಜಿ ಸಹಜವಾಗಿ ವ್ಯಕ್ತವಾಗಿತ್ತು. ಆದರೆ ಈ ಪ್ರಗತಿಶೀಲ ಸಾಹಿತ್ಯ ಹೆಚ್ಚುಕಾಲ ಉಳಿಯಲಿಲ್ಲ. ಜೀವನಾನುಭವದ ಅನುಭವ ಈ ವರ್ಗದ ಬಹಳಷ್ಟು ಲೇಖಕರಿಗಿರಲಿಲ್ಲ ಎನ್ನುವ ಮಾತೂ ಇದೆ.

೧೯೫೦ರ ಸಮಯದಲ್ಲಿ ನವ್ಯದ ಅವತಾರ ಒದಗಿತೆನ್ನಬೇಕು. ಇದಕ್ಕೆ ಗೋಕಾಕ ಹಾಗು ಅಡಿಗರು ಮುಂಚೂಣಿಯಾದರು. ನವೋದಯದಲ್ಲಿ ಹಳತರ ಬಗೆಗಿನ ಸಹನೆ ಇದ್ದು ಹೊಸ ರೂಪ ಕಂಡುಕೊಂಡರೆ ನವ್ಯರು ನವೋದಯ ಸಾಹಿತ್ಯದಿಂದಲೆ ದೂರವಾದರು. ಜೊತೆಗೆ ಸ್ವಾತಂತ್ರ್ಯಾನಂತರದ ಸಾಹಿತ್ಯಾಭಿವ್ಯಕ್ತಿಯು ಪಶ್ಚಿಮೀಕರಣಗೊಳ್ಳುತ್ತಿತ್ತು. ಅಂದರೆ ಪಾಶ್ಚಾತ್ಯರಲ್ಲಿ ಮೂಡಿದ ಹೊಸ ಸಂವೇದನೆಗಳತ್ತ ಒಲವುಗೊಂಡು ಪ್ರಭಾವಿತರಾಗಿಬಿಟ್ಟರು. ನವ್ಯದ ವೇಳೆಗೆ, 'ನವೋದಯದ ದೈತ್ಯ ಲೇಖಕರ ಸಂವೇದನೆಯ ಸಾಮಿಪ್ಯದಿಂದಾಗಿ ಬಂಡಾಯ ಒಂದು ಐತಿಹಾಸಿಕ ಅನಿವಾರ್ಯವಾಯಿತು' ಎಂಬ ಅಭಿಪ್ರಾಯವೂ ಇದೆ. ನವ್ಯ ಸಾಹಿತ್ಯ ವ್ಯಕ್ತಿನಿಷ್ಠ

ನೆಲೆಯಲ್ಲಿ, ಮನುಷ್ಯನ ಬದುಕಿಗೆ ಸಂಬಂಧಿಸಿದಂತೆ ಹುಡುಕಾಟವಾಯಿತು. ಒಂದು ರೀತಿ ಚೌಕಟ್ಟಿನ ಅಭಿವ್ಯಕ್ತಿಯಾಯಿತು. ಜನಪರವಾಗಿ ಅದು ಸ್ಪಂದಿಸದೆ ವೈಯಕ್ತಿಕ ಆಸೆ-ಆಕಾಂಕ್ಷೆಗಳತ್ತಲೇ ಮುಖ ಮಾಡಿತು. ಆಡು ಮಾತುಗಳನ್ನು ಬಳಸಿದರೂ, ಸಂಕೇತಗಳಿಂದಾಗಿ ಜನಕ್ಕೆ ಅರ್ಥವಾಗಲು ಕಷ್ಟವಾಯಿತು. ಜೊತೆಗೆ ಈ ಲೇಖಕರ ಗುಂಪು ರೂಪುಗೊಂಡು, ಗುಂಪಿಗೆ ಸೇರಿದವರ ಬರಹದ ಮಟ್ಟ ಹೇಗೇ ಇರಲಿ ಹೆಚ್ಚು ಚರ್ಚೆಗೆ ಅನುವು ಮಾಡಿಕೊಂಡದ್ದು, ಸಮಗ್ರತೆಗೆ ಎರವಾಯಿತು. ಹೀಗಾಗಿ ನಾಡಿನ ಬಗೆಗಿನ ಕಲ್ಪನೆಯೂ ವೈಯಕ್ತಿಕ ಅನಿಸಿಕೆಗಳ ವಿಜೃಂಭಣೆಯಲ್ಲಿಯೆ ತೆಳುವಾಯಿತು. ಆದರೂ ಭಾಷೆಯ ಪ್ರತಿಮಾನಿಷ್ಠತೆ, ಪ್ರಭಾವದ ಕೇಂದ್ರೀಕರಣ ಕನ್ನಡ ಸಂವೇದನೆಯನ್ನು ಚೂಪುಗೊಳಿಸಿದುದು ನವ್ಯದಲ್ಲಿ ಗಮನಾರ್ಹ ವಾದುದೇ. ಎಪ್ಪತ್ತರ ದಶಕದ ಆರಂಭದವರೆಗೂ ಇದು ತನ್ನ ಬೆಳಸನ್ನೂ ಕಂಡಿತು. ಮುಂದಿನ ಮಜಲೇ ನವ್ಯೋತ್ತರ ದಲಿತ – ಬಂಡಾಯ ಸಾಹಿತ್ಯ.

ತಂತ್ರ ಮತ್ತು ಸಾಂಕೇತಿಕತೆಗಳ ನವ್ಯದ ಪದರುಗಳಿಗಿಂತ ಬೇರೆಯಾಗಿ ಯಾಂತ್ರಿಕ ನೆಲೆಯಿಂದ ವಿಭಿನ್ನವಾಗಿ ಹೊಸ ಶೈಲಿ, ವಸ್ತುಗಳನ್ನು ಕಂಡುಕೊಂಡವರು ದಲಿತ, ಬಂಡಾಯ ಸಾಹಿತಿಗಳು. ದೇವನೂರರು 'ಒಡಲಾಳ', 'ಕುಸುಮಬಾಲೆ'ಯಲ್ಲಿ ನುಡಿಯ ದೃಷ್ಟಿಯಿಂದ, ದಲಿತರ ಭಾಷೆಯ ಅಂತಃಸತ್ವ, ಒಳನೋಟಗಳನ್ನ, ನೋವಿನ ನೆಲೆಯನ್ನ ಬಹಳ ಸಮರ್ಥವಾಗಿ ಮೂಡಿಸಿದರು. ಭಾಷೆಗೊಂದು ಹೊಸ ಆಯಾಮ ತೋರಿದರು. ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ' ಹಾಡು ದಲಿತರ ನೋವಿನಾಳಗಳನ್ನು ಪದರ ಪದರವಾಗಿ ಬಿಡಿಸಿ ಹೇಳುವುದರ ಜೊತೆಗೆ ಬಂಡಾಯದ ಪ್ರೇರಣೆಗಳೂ ಅದರಲ್ಲಿ ಅಡಕವಾಗಿಯೇ ಹೊಂದಿ ಇದೆ. ಸಮಾನತೆಗೆ ಹೋರಾಡುವ ಅಂತರ್‌ದನಿ ಸ್ಫೋಟಗೊಂಡಿದೆ. ಹೀಗಾಗಿ ನಾಡಿನ ಗಮನಕ್ಕೆ ನಾಡವರ ಗಮನಕ್ಕೆ ಅವರ ಹಾಡಿನ ಸಾಲುಗಳು ಘಟ್ಟಿಯಾಗಿ ಕೇಳಿಸುವಂತಾಗಿದೆ. ಸಮಾಜದ ಕ್ರೌರ್ಯಕ್ಕೆ ಕನ್ನಡಿ ಹಿಡಿದಂತಾಗಿದೆ.

ದಲಿತ ಚಳವಳಿಯ ಸಮನೆಲೆಯಲ್ಲಿಯೆ ಬಂಡಾಯ ಸಾಹಿತ್ಯ ಮೂಡಿಬಂದದ್ದು; ಜನನಾಯಕರ ವರ್ತನೆ, ಅನಾಯಕತ್ವಗಳಿಗೆ ಸಿಡಿದೆದ್ದು ಹೋರಾಟ ನಡೆಸಿದ ತರುಣ ಶಕ್ತಿಯ ಪ್ರಕಟನ ಮಾಧ್ಯಮವಾಗಿ ಮೂಡಿದ್ದು ಇದು. ಮಹಿಳಾ ಸಂವೇದನೆಗಳಿಗೆ ಎಡೆಗೊಟ್ಟ ಮಾಧ್ಯಮವಿದು. ಈ ಸಾಹಿತ್ಯದಲ್ಲಿ ಹಿಂದಿನಂತೆ ಗ್ರಾಮೀಣ ಸಂಸ್ಕೃತಿಯನ್ನು ಸಡಗರಿಸಿಸುವ ಬದಲು, ಆ ಸಂಸ್ಕೃತಿಯ ಆಂತರ್ಯದ ವೇದನೆಯ ಅಭಿವ್ಯಕ್ತಿಗೆ ಅವಕಾಶವಾಯಿತು. ಅಂತಾಗಿ ಇತಿಹಾಸದ ವಲಯದಲ್ಲಿ ಅದರ ಬೆಳಸಿನ ಬಗೆಯಲ್ಲಿ ಪರಿಶೀಲಿಸಲು ಅನುಕೂಲವಾಗಿದೆ. ಇದಲ್ಲದೆ ಆಧುನಿಕರ ದ್ವಿಮುಖ ವ್ಯಕ್ತಿತ್ವಗಳನ್ನು ಸಮಾಜದ ಕುರೂಪಗಳನ್ನು ಎತ್ತಿ ತೋರಿಸುವ ಎದೆಗಾರಿಕೆ ಈ ಮಾಧ್ಯಮದ್ದಾಯಿತು. ಈ ದೃಷ್ಟಿಯಿಂದ 'ಬಂಡಾಯ ಸಾಹಿತ್ಯ ಚಳವಳಿಯ ಫಲವಾಗಿ ಅನೇಕರ ಸಾಂಸ್ಕೃತಿಕ ಒಂಟಿತನ ನೀಗಿದೆ' ಎನ್ನುವ ಬರಗೂರರ ಮಾತು ಸೂಕ್ತ ಎನ್ನುವುದರ ಜೊತೆಗೆ 'ಮೀರುವ ಮನೋಧರ್ಮ'ವನ್ನು ಒಳಗೊಂಡ ಬಂಡಾಯ ಸಾಹಿತ್ಯದ ಸೃಜನಶೀಲತೆಯಲ್ಲಿ ಆಕ್ರೋಶ ಅಬ್ಬರವಾದರೆ ಸೃಜನಶೀಲತೆಗೆ ಮಾರಕ ವಾಗುವ ಅಪಾಯವಿದೆ, ಎಂಬ ಅವರ ಎಚ್ಚರವನ್ನು ಗಮನಿಸಬೇಕು. ಇದಲ್ಲದೆ ಅಸ್ತಿತ್ವವಾದದ ಪ್ರಭಾವದ ಸಾಕ್ಷಿಯಾಗಿ

‘ಸಂಸ್ಕಾರ’ ಹಾಗು ‘ಮುಕ್ತಿ’ ಕಾಂದಬರಿಗಳನ್ನು ಉಲ್ಲೇಖಿ ಸುವುದುಂಟು. ಅಂಬೇಡ್ಕರ್ ಹಾಗು ಲೋಹಿಯಾ ವಿಚಾರಗಳು ಕನ್ನಡ ಸಾಹಿತ್ಯದ ನೆಲೆಗಳನ್ನ ಪ್ರಭಾವಿಸಿರುವುದೂ ಅಷ್ಟೇ ಗಣನೀಯ ಸಂಗತಿ. ಈ ಹಿನ್ನೆಲೆಯಲ್ಲಿ ನುಡಿಯ ಜಾಯಮಾನ ಹೇಗೋ ನಾಡಿನ ಬಗ್ಗೆಯ ಚಿಂತನೆಗಳಲ್ಲೂ, ಮೇಲಿನ ಸೈದ್ಧಾಂತಿಕ ನಿಲುವುಗಳು ಅಭಿವ್ಯಕ್ತಿಯಾಗಿರುವುದನ್ನು ಕಾಣಬಹುದು. ಹೀಗಾಗಿ ನಮ್ಮ ಮುಂದೆ ಕೆಲವಷ್ಟು ಉದಾಹರಣೆಗಳು ನಿಲ್ಲುತ್ತವೆ; ಅದಕ್ಕೆ ನವ್ಯೋತ್ತರ ಕಾಲಕ್ಕೆ, ನವ್ಯದ ಮಜಲುಗಳೂ ಹೇಗೆ ಕೊಂಡಿಯಾದುವು ಎಂಬುದರ ಉದಾರಹಣೆಗಳನ್ನು ನಮ್ಮ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕಾವ್ಯದಲ್ಲಿ ಹೆಚ್ಚು ಪ್ರಮಾಣದಲ್ಲಿ ಅಭಿವ್ಯಕ್ತಗೊಂಡಿರುವ ಕಾರಣ ಆ ಬಗ್ಗೆ ಹೆಚ್ಚು ಗಮನಹರಿಸಿದೆ.

ವಸಾಹತುಶಾಹಿ, ಸರಕು ಸಂಸ್ಕೃತಿಗಳ ಪ್ರಭಾವ ಭಾರತದ ಸಂಸ್ಕೃತಿಯ ಜನದ ಮೇಲೆ ಆಯಿತು, ನಂತರವಾಯಿತು ಎಂದು ಯೋಚಿಸುವುದೇ ಪೂರ್ವಾಗ್ರಹ ಎಂಬ ತೀರ್ಮಾನಕ್ಕೆ ಬಂದವರು ಇದ್ದಾರೆ. ಆಂಗ್ಲರ ಆಕ್ರಮಣಶೀಲತೆಯು, ಇಸ್ಲಾಮಿನ ಸಂಸ್ಕೃತಿಯು ತರದಿದ್ದ ಚಡಪಡಿಕೆಯ ಕ್ರಿಯೆಯನ್ನು ಆಧುನಿಕತೆಯ ಹೆಸರಿನಲ್ಲಿ ಪಶ್ಚಿಮದ ಪ್ರಭಾವ, ನಾಡು, ನುಡಿಗಳ ಮೇಲೆ ಮಾಡಿದ ಆಘಾತಗಳನ್ನು ಮರೆತುದನ್ನು ಪ್ರಸ್ತಾಪಿಸುವುದೇ ಪೂರ್ವಾಗ್ರಹಚಾಲಿತ ಎಂದು ಆರೋಪಿಸಿ ಪಶ್ಚಿಮವನ್ನೇ ಹೊಗಳುವ ಕ್ರಿಯೆಗೇ ತೆರೆದುಕೊಂಡು ಬರೆದುಕೊಂಡವರುಂಟು. ಆದರೆ ಇಂಡೋನೇಸಿಯ, ಮಲಯದಲ್ಲಿಯ ಇಸ್ಲಾಮೀಕರಣದ ಜನ ಧಾರ್ಮಿಕ ಆವರಣದ ನೈಷ್ಠುರ್ಯವನ್ನು ಮೀರಿ ಭಾರತೀಯ ಪ್ರಾಚೀನ ಸೊಗಡುಗಳನ್ನು ಸಾಂಸ್ಕೃತಿಕ ಚೈತನ್ಯವಾಗಿ ಉಳಿಸಿಕೊಂಡು ಬಂದದ್ದೂ ಭಾರತದಲ್ಲೂ ಇಸ್ಲಾಮಿನ ಹೊಂದಾಣಿಕೆಗಳ ಸಂಕಲನವನ್ನು ಕಂಡಾಗ, ಪಾಶ್ಚಮಾತ್ಯಶೀಲತೆಯ ಗುಂಗಿನಲ್ಲಿ ಸಾಹಿತ್ಯಕ್ಕೆ ತೆರೆದುಕೊಂಡ ಮನಸ್ಸುಗಳಗೆ ತಮ್ಮ ಬೌದ್ಧಿಕ ದಾಸ್ಯದ ಪರಿವೆಯೇ ಒದಗಲಿಲ್ಲ. ಈ ಬಗ್ಗೆ ಫ್ರಾಯ್ಡನ ಕಾಮ ಸಿದ್ಧಾಂತಗಳಲ್ಲಿ ತೊಡಗಿ ಕೇವಲ ಹೆಣ್ಣಿನ ಮೈಯ ವರ್ಣನೆಯ ಬಾಹ್ಯ ಚಾಪಲ್ಯಗಳಿಗೆ ಒಳಗಾದ ಸಂಘಟನೆಯನ್ನು ಬಿಟ್ಟು, ಹೆಣ್ಣಿಗೆ ಅರ್ಥಾತ್ ಶೋಷಿತ ವ್ಯಕ್ತಿಗೆ ಮನಸ್ಸು ಒಂದಿದೆ ಎಂಬ ಅರಿವಿನ ನೆಲೆಗೆ ತೊಡಗಿಸಿಕೊಂಡವರು ನವ್ಯೋತ್ತರದವರೆ. ಅಂತಾಗಿ ತಮ್ಮ ಸಾಂಸ್ಕೃತಿಕ ಹಿನ್ನೆಲೆಯನ್ನು ಕೇವಲ ಜರಿಯುತ್ತ ಹೋಗಲಿಲ್ಲ. ಹಾಗು ವಿದೇಶಿ ವ್ಯಾಮೋಹದಲ್ಲಿ ಆತ್ಮಘಾತ ಮಾಡಿಕೊಂಡೇ ಹೋಗಬೇಕೆನ್ನುವ ವಿಸ್ಮೃತಿ ಪಡೆಯಲಿಲ್ಲ. ಇಂತಹ ಎಚ್ಚರ ನವ್ಯೋತ್ತರದ ತುಸು ಹಿಂದಿನ ಕೆಲವರಲ್ಲೂ ಇತ್ತು. ನುಡಿಯ ಬಗ್ಗೆ ಕಾಳಜಿ ಭಾಷಾ ವೈಖರಿಗಳ ಮೂಲಕ ಪ್ರಜ್ಞೆ ಗಳಿಸಿಯೋ, ಇಳಿಸಿಯೋ ಕೊಡುಗೆಯನ್ನು ನೀಡಿದರು. ಆದರೂ ನಾಡಿನ ಬಗ್ಗೆ ಒಂದು ಬಗೆಯ ನೇತ್ಯಾತ್ಮಕ ನಿಲುವಿನಲ್ಲಿ ತಾತ್ಕಾಲಿಕ ವೈಷಮ್ಯಗಳನ್ನು ಬೆಳೆಸಿಕೊಂಡರೆನ್ನಿಸುತ್ತದೆ. ಅಂತಾಗಿ ‘ಬೇರು ಸತ್ತಿಹ ನಾಡಾಗಿ’ ಈ ನಾಡು ಅವರಿಗೆ ಕಂಡು ಬಂದರೂ ಅದರ ಹಿಂದಿನ ನೋವನ್ನು ಜನಪ್ರಜ್ಞೆಗೆ ತಾಗಿಸುವ ಹವಣೂ ಇತ್ತೆನಿಸುತ್ತದೆ.

ಆಲನಹಳ್ಳಿಯವರ ಕಾದಂಬರಿ ನವ್ಯ ಪಥಿಕವೆಂದು ಗುರುತಿಸಿದರೂ ಅದನ್ನು ಮೀರಿದ ಕೊಡುಗೆ ಅವರಿಂದ ಬಂದಿದೆ. ಅವರ ಕಾವ್ಯವೂ ಹಾಗೆಯೆ ‘ಬಯಕೆಯದೆ ತಿದಿಯೊತ್ತಿ। ಹತ್ತಿ ಹೊರಟಾಗ ಬೆಂಕಿ ಹೂವಿನ ಹುಡುಗ’, ‘ತುಂಬು ಮಾಂಸದ ಕಪ್ಪನೆಯ ಹೆಣ್ಣು ನೆಲ।

ಹೊತ್ತಾರೆಯೆದ್ದು ಮೈನೆರೆದು ಹಾಕಿದ ಹಾಡು-ಇದು ಕಾಡು', 'ನಕ್ಕಳು -ಉರಿವ ಅಮಲುಗಣ್ಣಲ್ಲಿ ನಕ್ಕು' ಎನ್ನುವಲ್ಲಿ ನುಡಿಯ ರತಿ ಸಾಂದ್ರವಾಗುವುದರ ಜೊತೆಗೆ ನಾಡಿನ ಅಂಗಗಳನ್ನೂ ರತಿಸುವ ಭಾವಗಳು ಉಕ್ಕಿ ಬಂದಿವೆ. ಕೇವಲ ಲೋಲುಪತೆ ಇಲ್ಲಿದೆ ಎನ್ನುವುದು ಸೂಕ್ತವೆನಿಸದು. ನವ್ಯೋತ್ತರ ದಿಸೆಗೆಸೆದ ರತಿಬಾಣವೆನ್ನಬಹುದು. ನಾಡಿನ ಚಿಂತಸೆಯನ್ನು ಕಾಡು ಹಾಗು ವ್ಯಕ್ತಿಗಳ ಮೂಲ ದ್ರವ್ಯಗಳ ಹಿನ್ನೆಲೆಯಲ್ಲಿ ತುಮುಲಗಳನ್ನು ಕೆದಕಿದ್ದಾರೆನ್ನಬೇಕು. ಅದಕ್ಕೊಂದು ಸಾಮಾಜಿಕ ಹಾಗು ಸಾಂಸ್ಕೃತಿಕ ಆಯಾಮವನ್ನು 'ಆಳು ಕೂಗಿನಹಕ್ಕಿ'ಯಲ್ಲಿ ಜನಸಮುದಾಯದ ಹಂದರದಲ್ಲಿ ತೋರುವ ವಿಶಿಷ್ಟಗುಣ ಅವರಲ್ಲಿ ಕಾಣುತ್ತದೆ.

ಕೆ.ವಿ. ತಿರುಮಲೇಶರ 'ವಠಾರ' ಸಕಲನದ (೧೯೭೦) 'ಕೀರ್ತನೆ' ಕವಿತೆಯ ಭಾಷೆ ದಾಸರ ವಿನೀತಭಾವವನ್ನು ಸ್ಮರಿಸುವ ಜೊತೆಗೆ, ಅಸ್ತಿತ್ವ ಕಳೆದುಕೊಂಡು ನಿರ್ಜೀವ ಬೊಂಬೆಯಾಗುವ ಗೋವಿನಂತೆ ಗೋಣುಹಾಕುವ ದುರಂತದ ಬಗ್ಗೆ ಎಚ್ಚರಿಸುತ್ತದೆ. ನುಡಿಯ ವ್ಯಂಗ ದುರಂತವನ್ನು ಹೆಪ್ಪುಗಟ್ಟಿಸುವಂತಿದೆ: 'ಯನ್ನ ತಲೆಯನ್ನು ಸೋರೆ ಮಾಡಿ... ಖಂಡವಿದೆಕೋ, ಮಾಂಸವಿದೆಕೊ... ನಿನ್ನ ತ್ರಾಣಕ್ಕೆ ಒಳ್ಳೇದು, ಸೂಪು ಮಾಡಿ ಕುಡಿ' ಇದು ಒಂದು ರೀತಿ ಪರಂಪರೆಯ ನೆಲದಲ್ಲಿ ಬಿತ್ತಿದ ಸೆಡ್ಡು ಹೊಡೆವ ಅಣಕ; ಸೋಗಲಾಡಿತನಕ್ಕೆ ಪ್ರಶ್ನೆ ಸೂಚಕ ದಿಟ್ಟ ಸವಾನಿನ ಧ್ವನಿ!

'ದುಂಡುಚಿ' ಎಂಬ ಕವನದಲ್ಲಿ 'ಪಂಡಿತರೇ.. ಇದು ಬೀದಿವರೆ ಬೀರನ ಕತೆ... ನುಚ್ಚು ನೂರಾದ ಅಪಸ್ವರ-ಸಾವಿರ ಸ್ವರ, ನಿಮ್ಮ ನಾಜೂಕು ಕಿವಿಗೆ ತಾಗೀತೇ ಈ ಧ್ವನಿ!' ಎನ್ನುವಲ್ಲಿ ಪರಂಪರೆಯಲ್ಲಿ ತೂರಿಕೊಂಡ ಹಳನಲುಗಳು, ಜಾನಪದ ಸೊಗಡನ್ನು ಆಡಿಕೊಂಡದ್ದಕ್ಕೆ, ಸಾವಿರ ವರ್ಷಗಳಿಗೂ ಮೀರಿ ವರ್ತಮಾನದವರೆಗೂ ಕಾಯ್ದು ಬೀಸಿದ ಛಡಿಯ ನುಡಿ ಎನಿಸುತ್ತದೆ. 'ಇರುಳು' ಕವಿತೆಯ ಡಾಮರು, ಖವ್ವಾಲಿ, ಸ್ಕರ್ಟು, ಇತ್ಯಾದಿ ಶಬ್ದಗಳು, 'ಶ್ರೀ ಕೂ ಮಂ ಭಟ್ಟರ ಕಾವ್ಯ ವಿಳಾಸ'ದ ಅಕಾದಮಿಸದೆ ಸದಸ್ಯತ್ವದ, ಪಾರಿತೋಷಕಗಳ ಪಡೆವ ಬಗೆಗಿನ ದುಂಬಾಲುಗಳು, ಬಸುರಾದ ನಾಸಿಯಾ 'ಸಹವಾಸ', ಪ್ರೊ। ಬುದ್ಧಿಜೀವಿಯ ಅನಾಸ್ತೇಸಿಯದಂತಹ ಅಸ್ತಿತ್ವ, ನನ್ನೂರಿನವರು'ವಿನಲ್ಲಿಯ 'ಬಲವಂತದ ಹೇರಿನ ಕೆಳಗೆ ಬದುಕುವವರು. ಬದಕುತ್ತೇವೆಂದು ಭ್ರಮಿಸುವವರು ಈ ಅನಾಥ ಜನರು' ಎನ್ನುವಾಗಿನ ನಾಡವರ ಕುರಿತ ನೋವುಬೆರೆತ ಸಿಟ್ಟು, ಇತ್ಯಾದಿಗಳು ಎದ್ದು ಕಾಣುತ್ತವೆ'. 'ಮುಖವಾಡಗಳಕವಿಗೆ' ಎನ್ನುವ ಕವನದಲ್ಲಿ ವರ್ತಮಾನದ ಕವಿಯ ಸೋಗಿನ ಭಿತ್ತಿಗೆ ಅವನ ಗುಂಪುಗಾರಿಕೆಗೆ, ಅನಗತ್ಯ ಚೇಷ್ಟೆಯ ನವ್ಯದ ತಕಾರಾರಿನ ಮರಿಪುಢಾರಿಗೆ ಬಳಿದ ಲ್ಯಾಂಪ್ ಬ್ಲಾಕ್‌ನಂತಿದೆ ಕವನದ ಸಾಲುಗಳು. ಭಾಷೆಯನ್ನು ದುಡಿಸಿಕೊಂಡಿರುವ ರೀತಿ, ನವ್ಯೋತ್ತರ ಹಾದಿಗೆ ಸಾಗುತ್ತಿರುವ ಚಹರೆಗಳನ್ನು ಸ್ಪಷ್ಟವಾಗಿ ದಾಖಲಿಸುವಂತಿದೆ. ನುಡಿಯ ಸರಳತೆ ನೇರ ತಟ್ಟುತ್ತದೆ. ಒಟ್ಟಾರೆ ವ್ಯಕ್ತಿ ಹಾಗು ಜಾನಪದ ಸಾಮಾಜಿಕ ಸಂಬಂಧಗಳನ್ನು ವಿಶ್ಲೇಷಿಸಲು ಅನುವಾದ ನುಡಿಗಳ ಬಳಕೆ, ಭಾಷೆಯ ಗತ್ತು, ಇಲ್ಲಿದೆ. ಜೊತೆಗೆ ನಾಡು, ನುಡಿಗಳಲ್ಲಿ ಒದಗುವ ಶೈಥಿಲ್ಯಕ್ಕೆ ಎಚ್ಚರ ಹೇಳಿದಂತಿದೆ.

ಅಡಿಗರು 'ವಾಳುವುದೆಂದೀ ಜನಪದ' ಕ್ರಾಂತಿ ರೌದ್ರಕೆ ಬಹುದೆಂದಿಗೆ ಹದ?....ಶತಮಾನದ ನಿದ್ರಾನೀರದ ತೊಲಗಿ ತನ್ನತನದರಿವಿನಿಂದರಳಿದ ಭಾವಭಾವಗಳ ಕೃತಿ ಸಂಸ್ಕೃತಿಗಳ ಸುಂದರ

ಸೂಜ್ವಲ ತಾರಾಸಂಪದ ಪಡೆವುದೆಂದೀ ಹರಿಪದ ಓ ಏಳುವುದೆಂದೀ ಜನಪದ?' ಎನ್ನುವ ಸಾಲುಗಳಲ್ಲಿ ನವೋದಯದಿಂದ ಎಚ್ಚರದೊಡನೆ ಸಮುದಾಯದ ನೆಲೆಯನ್ನು ನಾಡಿಗಡರಿಸುವ ಬಗೆ ಇದೆ. ಸರಳವಾದ ನುಡಿಗಳುರುಳಿದ್ದರೂ, ಭಾವ ಮಾತ್ರ ನವ್ಯೋತ್ತರದ ಬೀಜವನ್ನೇ ತೋರಿದೆ. 'ನಾವೆಲ್ಲರು ಒಂದೇ ಜಾತಿ, ಕಟ್ಟುವೆವು ನಾವು ಹೊಸನಾಡೊಂದನು' ಎಂಬಲ್ಲಿ ನಾಡಿನ ನನಸಿನ ರೂಪವನ್ನು ವರ್ಣಿಸುವಲ್ಲಿ ನುಡಿಯ ಖಾರ ಉದ್ರೇಕದ್ದೇ. ಅಲ್ಲದೆ 'ನಿನ್ನಾಗದ್ದೆಗೆ ನೀರು' ಎಂಬ ಕವನದಲ್ಲಿ ಉಸಿರು ನಿಧಾನ ಮಾತ್ರಧ್ಯಾನ। ಜೀವನ್ಮೃತನ ವಿಧಾನ' ಎನ್ನುವಾಗ ವೇದನೆ, ಯಾತನೆ ಮಟ್ಟದಲ್ಲಿ ನಿಲ್ಲುವ ಕವಿಯೊಳಗಿನಾಚೆ ಬಂದು ವಾಸ್ತವ ಪ್ರತಿಭಟನೆಯ ಊರುನುಡಿಗಳನ್ನು ದಟ್ಟಿಸಿದ್ದಾರೆ. ಬಂಡಾಯದ ಸೆರುಗನ್ನು ಬೀಸಿ ಬೀಸಿ ಕೆದಕಿ ತೆಗೆದು ನಾಡಿನವರ ಕೂರುಗಗಳನ್ನು ಸಂಯಮ ತೋರಿದ್ದಾರೆ

ಗಂಗಾಧರ ಚಿತ್ತಾಲರ 'ನೆಲದ ಮಗ' ಎಂಬ ಕವಿತೆಯಲ್ಲಿ ನಾಡಿಗನ ದುಡಿತದ ಧ್ವನಿ ಹೇಳುವ 'ನೆಲದೊಡೆಯರ ಕೇಳಲಿಹುದು। ತನ್ನ ತುಳಿದ ಸುಳಿದ ಕತೆಗೆ ಬಂದುತ್ತರ ಕೇಳುಲಿಹುದು' ಎಂಬ ಮಾತು ನಾಡಿನವರ ಸಮುದಾಯದ ಮುಂದೆ ಸಂಯಮ ಚೌಕಟ್ಟಿನ ಬಂಡಾಯದ ಭಾಷೆಯೇ ಆಗಿದೆ.

ಎಂ. ಆಕಟರ ಅಲಿ ಅವರು 'ಇನ್ನಿಲ್ಲ, ಇನ್ನಿಲ್ಲ.. ಕಾಲಕಸವಾಗಿ ಬಿದ್ದಿರುವ ದುರವಸ್ಥೆ ದುರ್ವ್ಯವಸ್ಥೆ ! ಇನ್ನು ನಾನೇ ನಾನು ! ನನ್ನೆದುರು ತೆರೆದಿಹುದು ಮುಗಿದಿರದ ಭುವಿ-ಬಾನು ! ಎಂಬ 'ಬಂತಣ್ಣ ಬಂತು ಹೊಸ ಹಗಲು' ಎಂಬ ಕವನದ ಸಾಲುಗಳಲ್ಲಿ ವ್ಯಕ್ತಿನಿಷ್ಠತೆ ಇದ್ದರೂ ನಾಡಿನಲ್ಲಿ ಹೊಸತಿಗಾಗಿ ಚೈತನ್ಯಶೀಲವಾಗುವ ಸಾಮಯಿಕ ಪಕ್ವಭಾವವಿದೆ. ಬಂಡಾಯದ ಕರುಳಿನದನಿ ಇದೆ. ವೈ.ಎಸ್. ಲೂಯಿಸ್ ಅವರ 'ನಾಡಯುವಕನಿಗೆ' ಕವನವು ಕ್ರಾಂತಿಗಿದೊ ಕಂಕಣವ ತೊಟ್ಟು। ನೂರಾರು ವರುಷದಿ ನಾಡಿನಲಿ ಬೀಡು ಬಿಟ್ಟಿರುವ ಈ ಭ್ರಾಂತಿಯನು ಬಿಟ್ಟು' ಪೌರುಷದಿಂದ ಸಮತೆಯನ್ನ ಸಾಧಿಸುವ ಕರೆ ನೀಡಿರುವಲ್ಲಿ ನಾಡಿನ ಅಜ್ಞಾನವನ್ನ ವಿಜ್ಞಾನವಾಗಿಸುವ ಕಾಳಜಿ ಕಾಣುತ್ತದೆ. ಬಿ.ಸಿ. ರಾಮಚಂದ್ರ ಶರ್ಮ ಅವರು 'ನನ್ನ ನಾಡಮಂದಿಗೆ... ನಾಡ ನೂರುಕೋಟಿಗಂಡು ಹೆಣ್ಣು ಕೂಸು ಕುನ್ನಿಗೆ ಹುಟ್ಟಿಗಂಟಿ ಬಂದ ಚಿತ್ತದಾಸ್ಯ ಕಳೆವುದೆಂದಿಗೆ?' ಎನ್ನುವಲ್ಲಿನ ನೋವು ಬಂಡಾಯದ ಮನಸ್ಸಿನ ಪ್ರೇರಣೆಯಾಗಿ ಬಂದಿದೆ. 'ಗುಲಾಮರು' ಕವನದ 'ನಾವು ಸೆಂಟ್‌ಪರ್ಸೆಂಟ್ ಗುಲಾಮರು, ಪೂರ್ವದಿಂದ ಪಶ್ಚಿಮಕೆ ಅಗ್ಗದ ಬಟ್ಟೆಯ ಮಗ್ಗದಲ್ಲಿ ಸದಾ ಲಾಳಯಾಡುವ ಮಂದಿ. ಇದ್ದ ಆತ್ಮವನು ಕುತ್ತಿಗೆ ಹಿಸುಕಿ ವಿಲಾಯಿತಿ ಹುಲ್ಲನು ತುರುಕಿನಿಲ್ಲಿಸಿದ ಬೆದರು ಬೊಂಬೆಗಳು ನಾವು' ಎಂಬುವಲ್ಲಿ 'ಸಾಕುನಿಲ್ಲಸು ನಿನ್ನಾಸಾಮಗಾನ' ಕವನದ 'ದೇಶದಾದ್ಯಂತ ಅಣೆಕಟ್ಟುಗಳ ಕಟ್ಟಿ ನಾವು। ಬೆಳದದ್ದೇನು ಬರಿ ಹಸಿವೆ?' ಎನ್ನುವ ಜಿ.ಎಸ್. ಶಿವರುದ್ರಪ್ಪನವರ ಕಾವ್ಯಭಾವ ನಮ್ಮ ನಾಡ ಜನರ ಕುರೂಪವನ್ನು, ಆತ್ಮ ವಂಚನೆಯನ್ನು ಧ್ವನಿಸುವ ಶಕ್ತಿಯುತ ಬಂಡಾಯ ಭಾಷೆ ಎನಿಸುತ್ತದೆ.

ಲಂಕೇಶರ 'ಅವ್ವ' ಕವನ ನಮ್ಮ ನಾಡಿನ ಒಂದು ದುಡಿವ ಗ್ರಾಮೀಣ ಹೆಣ್ಣಿನ ತಾಯ್ತನವನ್ನು ಅತ್ಯಂತ ಮಾರ್ದವ, ಮಾರ್ಮಿಕ ಕೆಚ್ಚನು ಬೆರಸಿದ ನುಡಿಗಳಲ್ಲಿ ಹೂರಣವಾದ ಭಾಷೆಯ

ಸಾಂದ್ರತೆಯ ಪ್ರತೀಕವಾಗಿದೆ. 'ಸತಿ ಸಾವಿತ್ರಿ, ಜಾನಕಿ ಊರ್ಮಿಳೆಯಲ್ಲ, ಗಾಂಧೀಜಿ ರಾಮಕೃಷ್ಣರ ಸತಿಯರಂತಲ್ಲ;.... ಮುತ್ತೈದೆಯಾಗಿ ಕುಂಕುಮ ಕೂಡ ಇರಲಿಲ್ಲ; ಈಕೆ ಉರಿದೆದ್ದಾಳು; ಮಗ ಕೆಟ್ಟರೆ, ಗಂಡ ಬೇರೆ ಕಡೆ ಹೋದಾಗ ಮಾತ್ರ;... ನನ್ನವ ಬದುಕಿದ್ದು, ಕಾಳು ಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ; ಮೇಲೊಂದು ಸೂರು, ಅನ್ನರೊಟ್ಟಿ ಹಚ್ಚಡಕ್ಕೆ; ಸರೀಕರ ಎದುರು ತಲೆ ಎತ್ತಿ ನಡೆಯಲಿಕ್ಕೆ' ಎಂದಾಗಿ ಬಂದಂತೆ ಸಾಲುಗಳು ನುಡಿ, ನಾಡವನಿತೆಗಿಟ್ಟ ಆಭಾರ ಮನ್ನಾಣೆಯೆ. ಎಚ್.ಜಿ. ಸಣ್ಣಗುಡ್ಡಯ್ಯ, ಅವರ 'ಹಂದಿ' ಕವನದಲ್ಲಿ ಸಿಕ್ಕಿದ್ದನ್ನು ತಿಂದು ಬೆಳೆದು. ಮೈ ಕೊಬ್ಬಿಸಿಕೊಂಡು, ಕಂಡವರ ಬಾಯ ತಿನಿಸನ್ನು ಕಬಳಿಸುವ ಈ ನಾಡಿನ ಮಂದಿಯನ್ನು ಕುರಿತು 'ಪ್ರಜಾಪ್ರಭುತ್ವದ ಯಶಸ್ವಿನ ಸೂತ್ರದ ಘನ ಆದರ್ಶಕೆ। ಎಂಥ ಸಾಕಾರ ರೂಪ ಅಂತೀ ಹಂದಿ !' ಎನ್ನವಲ್ಲಿನ ವ್ಯಂಗದ ನುಡಿಗಳ ಸೂಚ್ಯತನವು ನಮ್ಮ ಕ್ರೌರ್ಯ ಹಾಗು ಕುರೂಪವನ್ನು ಢಾಳವಾಗಿ ಬಿಂಬಿಸುವಂತಿದೆ. ದೊಡ್ಡರಂಗೇಗೌಡರ 'ಪ್ರಕೃತ'ದಲ್ಲಿ ಬೆಂಕಿಬಿದ್ದಿದೆ ಗುಡಿಸಲ ತುತ್ತಿನ ಚೀಲಗಳಿಗೆ ! ಮೇಲೆತ್ತುವವರೇ ಇಲ್ಲ.. ಬರಿ ಜೊಲ್ಲ ತಿಂದು ಬದುಕುವ ಹಾಗಿಲ್ಲ, ವಾಸ್ತವ ಕ್ರೂರ ಕಾಲನ್ನ ದವಡೆಯೊಳಗೆ ಮೂಳೆದೇಹಗಳ ಸಾಮೂಹಿಕ ಕೊಲೆ' ಎಂಬ ಸಾಲುಗಳು ಶೋಷಿತರ ಮೇಲಿನ ದಾಳಿ, ದಬ್ಬಾಳಿಕೆ, ಅನಾಸ್ಥೆ, ಅನಾದರ, ಉದಾಸೀನ, ಕ್ರೌರ್ಯಗಳನ್ನು ಸಮರ್ಥವಾಗಿ ನುಡಿಗಳಲ್ಲಿ ಹೇಳಿ ಈ ನಾಡಿನ ಅವಸ್ಥೆಯನ್ನು ಹೇಳುವಂತಿವೆ. ಸಿ. ವೀರಣ್ಣ ಅವರ ಸಂಪಾದಿತ ಕನ್ನಡ 'ಪ್ರತಿಭಟನೆ ಕಾವ್ಯ'ದಲ್ಲಿ ಸಂಕಲಿತವಾದ 'ಮುಂಗಾರು' ಕವನದಲ್ಲಿ ಮರಗಿಡಗಳೆಲ್ಲ ಒಣಗಿ ಪ್ರೇತಗಳಾಗಿ ನಿಂತಿವೆ. ಉಸಿರಾಡಿದರೂ ಬೆಂಕಿ ಕಾಸಿದಂತೆ ಮೈಗೆ, ಬಣಗಟ್ಟುವ ಒಣನೆಲಕೆ ಬರಬಾರದೆ ಮುಂಗಾರು?... ಒಣಗಿದಂತೆ ಕೊರಳಿನಲ್ಲಿ ದನಿಯು ಮೂಡಿ ಬಂದಿತು', ಎಂಬಲ್ಲಿ ನಾಡ ಶೋಷಿತರ ಪ್ರತಿಮೆ ದಟ್ಟವಾಗಿ ಗೋಚರವಾಗುವಂತೆ ಅದು ಎಚ್ಚರಗೊಂಡಾಗ। ನಾಡೆಲ್ಲ ಹೇಗೆ ನಳನಳಿಸಲು ಅನುವಾಯಿತು ಎಂಬುದು ಕಾವಿನ ಭಾಷೆಯು ಅರಳಿರುವ ಕಾಲನಮನಿಸಿದಾಗ ಬಗೆಯಾಗಿ ಮೈದುಂಬಿ ಬರುವ ರೀತಿಯನ್ನು ತೋರುತ್ತದೆ. ರಮಜಾನ ದರ್ಗಾ ಅವರ 'ಪ್ರಣಾಳಿಕೆ'ಯಲ್ಲಿ 'ನಾವು ದುಡಿವ ಜನ.. ಒಂದೇ ಒಂದು ಸಲ ಅವಕಾಶ ಸಿಗಲಿ. ಭೂಗೋಳದ ತುಂಬೆಲ್ಲ ಶಾಂತಿಯ ಬೀಜ ಬಿತ್ತುತ್ತೇವೆ' ಎನ್ನುವಲ್ಲಿ ಶ್ರಮಸಂಸ್ಕೃತಿಯ ಫಲ ನಾಡಿನ ತುಂಬ ಶಾಂತಿಯ ಉತ್ಪನ್ನದ ಪ್ರತೀಕವಾಗುತ್ತದೆ. ಆಗ ಮುಂದಿನ ಜನ ಇಂತಹ ವೀರರ ವೀರಗಲ್ಲನ್ನೇ ಸ್ಮರಿಸುತ್ತಾರೆ. ಎಂಬ ಭವಿಷ್ಯತ್ತಿನ ನನಸಿನ ಮೂಲಚೂಲಗಳನ್ನ ಬಿಂಬಿಸಲಾಗಿದೆ. ಕುಂ. ವೀರಭದ್ರಪ್ಪ 'ಸ್ವತಂತ್ರ ಭಾರತದ ಜನರ'ನ್ನ ಕುರಿತು 'ತಿಪ್ಪೆಯೊಳಗಡೆ ಕೊಳೆಯುತ್ತಿರುವ ಮೆದುಳುಗಳೇ ಇತಿಹಾಸದ ಜಿಡ್ಡಿನಲ್ಲಿ ನೆನೆ ಇಟ್ಟಿರುವ ನಾಲಿಗೆಗಳೇ... ಸ್ವತಂತ್ರ ಭಾರತದ ಜನರೇ ಬಡ್ಡೆಗೆ ಬೆಂಕಿ ಹಚ್ಚಲು ಉರಿವ ಒಡಲಿಂದ ಹುಟ್ಟಿ ಬನ್ನಿ' ಹೇಳಿರುವಲ್ಲಿ ಕೊಳಕನ್ನ ರಾಶಿ ಹಾಕಿ ಸುಡುವ ಕಿಚ್ಚಿಲ್ಲದಿದ್ದರೆ ನಾಡು ಶುದ್ಧಿಯಾಗದು ಎಂಬ ಕಾಳಜಿ ಇಲ್ಲಿ ಕೇವಲ ಆಕ್ರೋಶವಾಗಿಲ್ಲ; ವಾಸ್ತವ ಭಾವ. ಅಶೋಕ ಶೆಟ್ಟರ್ 'ನನ್ನಾ ನೆಲದ ಕಾವ್ಯಗಳು' ಕವನದಲ್ಲಿ 'ನನ್ನಾ ನೆಲದಲ್ಲಿ, ಅಂದರೆ ಇಂಡಿಯಾದಲ್ಲಿ ಸಾಯುತ್ತಾರೆ... ಈ ಸಾವುಗಳು ಪತ್ರಿಕೆಯ ಕಾಲಂನಲ್ಲಿ ಅಚ್ಚು ಮೊಳೆಗಳಾಗುವುದಿಲ್ಲ. ಸದ್ದಿಲ್ಲದೇ ಸುದ್ದಿಯಾಗದೇ ನೆಗೆದುಬೀಳುವ ಸಾವುಗಳಿವು.....' 'ಈ ಇಂಡಿಯದ ಹಸಿವಿನ ಸಾವು', ಎನ್ನುವಾಗ ಈ ನಾಡಿನ ಶ್ರಮಜೀವಿಗಳ ಶ್ರೀಸಾಮಾನ್ಯನ ಕುರಿತು ಅನ್ನದ ತಟ್ಟೆಗಳ ಅಟ್ಟಹಾಸಗಳು

ಎಂದೂ ಕಾಳಜಿಯಾಡುವುದಿಲ್ಲ, ಈ ನಾಡಿನ ಬದುಕು ಇಂತಿದೆ ಎನ್ನುವ ರೋಷದ ಕೊರಗು ಸಮರ್ಥ ಸರಳ ಭಾಷೆಯಲ್ಲಿ ಪುಟಗೊಂಡಿದೆ.

ಬರಗೂರರ 'ಬಂಡಾಯ ಕಾವ್ಯ' ಸಂಕಲನದಲ್ಲಿನ ಅರವಿಂದ ಮಾಲಗತ್ತಿಯವರ 'ದಲಿತಮಕ್ಕಳ ಹಾಡು', ಈ ನಾಡಿನ ಕೊನೆಯಂಚಿನ ಮಕ್ಕಳ ದುಃಖಕ್ಕೆ ಬಾಯಿಲ್ಲದ ಚಿತ್ತ ನೀಡಿದೆ. ಹಾಗೆಯೆ ಶಾರದೆಯನ್ನು ದೀನದಲಿತರ ಕೂಗಿಗೆ.. ನಿಟ್ಟುಸಿರ ಖಡ್ಗವನು ಕಣ್ಣಧಾರೆಯಲಿ ಮಸೆವ ಶಬ್ದಕ್ಕೆ ನರ್ತಿಸಲು ಕೇಳುವ ಎದೆಗಾರಿಕೆಯಲ್ಲಿ ಆ ಕುರಿತ ಸಾಹಿತ್ಯ ನುಡಿ ಎಷ್ಟೊಂದು ತೀರ ಅಗತ್ಯ ಎಂಬ ತೀವ್ರತೆಯನ್ನು ತುಡಿಯುತ್ತದೆ. ಆರ್.ಜಿ. ಹಳ್ಳಿ ನಾಗರಾಜ್‌ರ 'ಈ ಇಂಡಿಯಾದಲ್ಲಿ' ಕವನ ನಾಡವರಲ್ಲಿ ನಿರಾಶ್ರಿತರಾಗೇ ಈ ಇಂಡಿಯಾದಲ್ಲಿ ಬದುಕಿದ್ದೇವೆ, ಅದಕ್ಕಾಗಿಯೂ ಉಸಿರಾಡುತ್ತಿದ್ದೇವೆ', ಎನ್ನುವಾಗ ಹೊಟ್ಟೆ, ಬಟ್ಟೆ, ಗಾಳಿ, ನೀರು, ಎಲ್ಲ ಕೊರತೆಗಳ ಅಮಾನವೀಯ ನೆಲೆಯಲ್ಲಿ ಅನಾಥರಾಗಿಯೂ ಒಡಲಾಗಿರುವುದು ಎಷ್ಟೊಂದು ಬಿಗಡಾಯಿಕೆಯಲ್ಲಿ ಎಂಬ ಚಿತ್ರಕಾಣುತ್ತದೆ. ಎಚ್. ಎನ್. ಆರತಿಯವರ ಹೋರಾಟದಲ್ಲೂ ನಾಡವರು ಬಂದು-ಹೋದ ಹಡಗುಗಳ ಲಂಗರಿನ ಗುರುತಿಲ್ಲದಂತಹ ಬದುಕನ್ನ ಹೊಂದಿರುವ ಬಗ್ಗೆ ಕಾಳಜಿ ಇಟ್ಟಿದ್ದಾರೆ.

ಇಂದೂಧರ ಹೊನ್ನಾಪುರ ಅವರ 'ಕಪ್ಪುಮನಜರು' ಕ್ರಾಂತಿ ಪಥಕೆಬರುವಲ್ಲಿ 'ಇಂಡಿಯವ್ವ ಮತ್ತು ದಲಿತ'ರಿಗೆ 'ಹಗಲಹಾದರ ಮುಚ್ಚಿಡುವ ಇರುಳ ಪತಿವ್ರತೆ'ಯಾಗಿ ಕಂಡು ಸತ್ಯ ಮರೆಮಾಚಿ ನೀ ಇದುವರೆಗೆ ಕಲಿಸಿದ ಶಿಕ್ಷಣಕ್ಕೆ ಧಿಕ್ಕಾರ ಹಾಕಿ ನೋವುಗಳ ನೆಲೆಗಳನ್ನ ಗಾಂಧೀಕರಿಸಿ ದಲಿತರ ದನಿ ಎತ್ತಿ ತೋರಿದ್ದಾರೆ. ಗೋವಿಂದಯ್ಯ ಅವರು ಈ ನಾಡಿನ 'ಕಣ್ಣೀರ ಮಣ್ಣಲ್ಲಿ' ತಲೆಮಾರಿನಿಂದ ವಂಶದ ಹಿರಿಯರ ಮಾತಿಗೆ ತಲೆಬಾಗಿದ್ದಕ್ಕೆ ಉಂಟಾದ ಹೊಲೆಮಾದಿಗ ಅವಸ್ಥೆಯಿಂದ ರಕ್ತಕಾರುವ ಸೂರ್ಯನ ಜೊತೆ ಜೊತೆಗೆ ಕೆಂಪಗೆ, ನಾ ನಾಳೆ ಖಂಡಿತಾ ಚಿಗುರುತ್ತೇನೆ. ಎಂಬ ಆಹ್ವಾನದ ನುಡಿ ತುಂಬ ಶಕ್ತಿಯುತವಾಗಿ ಬಂದಿದೆ. ಚಂದ್ರಶೇಖರ ಪಾಟೀಲರು 'ಗಾಂಧೀಸ್ಮರಣೆ' ಮಾಡುತ್ತ 'ಖಾಲೀಗದ್ದಲದ ಈ ನಾಡಿನ ಉದ್ದಗಲಕ್ಕೂ ಈಗ ಶಾಂತಿ ನೆಲಸಿದೆ.. ಬಾಯಿ ಮುಚ್ಚಿ ನೆನೆನೆ ಗಾಂಧಿಯನು' ಎಂದು ನಾಡಿಗರ ಅವ್ಯಾಹತ ಸೋಗಿನ 'ಗಾಂಧಿ'ಯಾರಾಧನೆಗೆ ದಟ್ಟ ವ್ಯಂಗದ ಒದೆತ ನೀಡಿದ್ದಾರೆ

ಚಂದ್ರಶೇಖರ ತಾಳ್ಯರ 'ಸಿಂಧೂ ನದಿಯ ದಂಡೆಯ ಮೇಲೆ' ಕವನದ ಸಾಲುಗಳು ಋಗ್ವೇದದಿಂ ಹಿಡಿದು ಇಂದಿನವರೆಗಿನ ಸಾಂಸ್ಕೃತಿಕ ವೈಭವಗಳ ಜೊತೆಗೆ ಸಾಂಸ್ಕೃತಿಕ ಮೋಸಗಳು ನಮ್ಮನಾಡಿನಲ್ಲಿ ಮೊಳೆತು ಬಂದ ಬಗೆಯನ್ನು ವ್ಯಂಗ್ಯದ ಮೊನಚುಗಳಲ್ಲಿ ಬಂಡಾಯದ ನುಡಿಗಳಲ್ಲಿ ಹೆಪ್ಪುಗಟ್ಟಿಸಿ ಹೇಳಿದ್ದಾರೆ. ಅಲ್ಲದೇ, ಕವನದ ಕೊನೆಯ ಸಾಲುಗಳು ನಾಡಿನ ಪ್ರೇಮದ ಹಕ್ಕಿ ಪಂಜರಗೊಂಡಿರುವ ಬಗೆಯನ್ನು ವಿವರಿಸಿರುವ ಬಗ್ಗೆ ಬಹು ಸಾಮಯಿಕ-ಸೂಕ್ತ ಎನಿಸುತ್ತದೆ. ಸಾಂಸ್ಕೃತಿಕ ಪರಂಪರೆಯ ಜಾಳು ಹೇಳುಗಳ ನಿದರ್ಶನವಾಗಿದೆ.

> ಸಿಂಧೂ ನದಿಯ ದಂಡೆಯ ಮೇಲೆ ಕುಂತವನ ಕಣ್ಣೊಳಗೆ। ಹೂವರಳದ ಕೋಟೆಗಳು।
> ಸ್ವಚ್ಛ ಸ್ನಾನಗೃಹಗಳು। ಹಸಿರು ತುಂಬಿದ ವನಗಳು। ಶಿವನ ಪ್ರೇಮದ ಕಣ್ಣುಗಳು
> ಎಲ್ಲಿ ಹೋದುವು ಕನಸಿನ ಹಕ್ಕಿಗಳು। ಜೀವರೆಕ್ಕೆಯ ಬಡಿದು! ಹುಡುಕಿರೋ
> ಡಿಲ್ಲಿಯೊಳಗೆ। ಬೆಂಗಳೂರಿನ ಕಾಂಕ್ರೀಟು ಸಂದಿಯೊಳಗೆ। ನಮ್ಮ ಎದಿಯೊಳಗೆ.

ಮಲ್ಲಿಕಾ ಘಂಟಿಯವರ 'ನಮ್ಮದಲ್ಲ ಧ್ವಜವಿಂದು' ಕವನ, ಈ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪಡೆದರೂ 'ನಾವುಟ್ಟ ಬಟ್ಟೆ ಬಿಚ್ಚಿ ಹಾರಿಸಿದ ಧ್ವಜ ನಮ್ಮದಲ್ಲ ಎಂದು', ತಮ್ಮತನ ಕಳೆದುಕೊಂಡಿರುವ ಈ ನಾಡವರ ಬಗ್ಗೆ ಹೇಳಿದ್ದಾರೆ. ಶಿವರಾಮು ಕಾಡನಕುಪ್ಪೆ ಅವರು 'ನೆಲದ ಮಕ್ಕಳ ಹಾಡಿನಲ್ಲಿ', ಗ್ರಾಮೀಣರ ಶೋಷಣೆ ಮಾಡಿ ನಗರ ಬೆಳೆದು ರಾಮ ರಾಜ್ಯಕ್ಕೆಂದು ಹರಿದ ರಕ್ತ ಬೆವರುಗಳನ್ನ ನೆನಸಿ, 'ಇನ್ನು ಹಕ್ಕಿಗಾಗಿ ಹೋರಾಡುತ್ತಾ, ಹಸಿರು ರಾಜ್ಯ ಕಟ್ಟುತ್ತಾ' ಇರುವ ಸ್ಥಿತಿಯನ್ನ ಕಂಡು ವ್ಯಂಗ್ಯ ಹರಿಸಿದ್ದಾರೆ.

ಸಿದ್ಧಲಿಂಗಯ್ಯ ಅವರು 'ಕಪ್ಪು ಕಾಡಿನ ಹಾಡು'ವಿನಲ್ಲಿ ಈ ನಾಡಿನಾಪತ್ತು ನಮ್ಮ ಜನಗಳ ಸಾವು ಎಂದು ದಲಿತರ ಮೇಲಾದ ದಾಂಧಲೆಯ ಶೋಷಣೆಯ ಚಿತ್ರ ನೀಡುತ್ತಲೆ ಮುಂದಿನ ನನಸುಗಳನ್ನು 'ಕೆಂಪು ಸೂರ್ಯನು ಹುಟ್ಟಿ ಮೆರವಣಿಗೆ ಬರುವಾಗ। ಕಪ್ಪು ಕಾಡಿನ ಹಾಡು ಮೊಳಗುತ್ತಿತ್ತು।' ಎಂಬ ಸಾಲುಗಳ ಮೂಲಕ ದಲಿತ ಶಕ್ತಿಯನ್ನು ತುಂಬಿ ತಂದಿದ್ದಾರೆ. ನಾಡಿನ ಕಾವ್ಯಕ್ಕೆ ಚುರುಕು ಮುಟ್ಟಿಸಿದ್ದಾರೆ.

ಇನ್ನು ಮಾಲಿನಿ ಇಂದುಕುಮಾರ್ ಅವರ 'ನಾ ಹೇಳಲೇಬೇಕೆ ಗೆಳತಿ' ಕವನ ಸಂಕಲದಲ್ಲಿ 'ಪತಿವ್ರತೆಯರು ಎಂದರೇಕೆ। ನಿಮ್ಮ ಗಮನವೆಲ್ಲ ಪುರಾಣಕಾಲದ ಸೀತೆಸಾವಿತ್ರಿಯರ ಮೇಲೆ ! ಹಾಗಾದರೆ ನಿಮ್ಮ ಹೆತ್ತ ತಾಯಿ, ಮುದ್ದಿನ ಸೋದರಿ, ಪ್ರೇಮದ ಮಡದಿ, ಮೆಚ್ಚಿನ ಸೊಸೆ ಇವರೆಲ್ಲ ಯಾರು?' ಎನ್ನುವ ಸಾಲುಗಳಲ್ಲಿ ಪೌರಾಣಿಕ ಆದರ್ಶಗಳನ್ನು ಈ ನಮ್ಮ ನಾಡಿನ ಅನೇಕ ಜನ, ಇಂದು ತಮ್ಮ ಒಡಹುಟ್ಟಿದ, ಜನ್ಮವಿತ್ತವರ, ಬಾಳಲು ಬಂದವರ ಬಗ್ಗೆ ತೋರುವ ಅನಾದರ ಅಗೌರವ, ಹಿಂಸೆ ಕುರಿತು ವ್ಯಂಗದ ಮೊನಚನ್ನು ಬಂಡಾಯದ ಧ್ವನಿಯ ಮೂಲಕ ಸಾಧಿಸಿರುವುದು ಕಾಣಬರುತ್ತದೆ. ಹೀಗೆಯೆ 'ರಾಜ್ಯೋತ್ಸವ' ಹಾಗು 'ಗಾವಿಲರು' ಎಂಬ ಕವನಗಳು ನಮ್ಮನಾಡಿನ ಕುರಿತ ಕಾಳಜಿಯ ಕವನಗಳಾಗಿವೆ. ಕಾವ್ಯದಲ್ಲಿ ಒಂದು ರೀತಿಯಲ್ಲಿ ವಿಸ್ತೃತವಾಗಿ ನವ್ಯೋತ್ತರ ನಾಡು-ನುಡಿ ಚಿಂತನೆಯ ಬಗೆ ಹೀಗಾದರೆ ಕತೆ, ನಾಟಕ, ಕಾದಂಬರಿಗಳು ಈ ಆಶಯವನ್ನು ತಮ್ಮ ಮಾಧ್ಯಮಗಳಲ್ಲಿ ಮೂಡಿಸಿಕೊಂಡು ಬಂದಿವೆ.

ಚಂದ್ರಶೇಖರ ಕಂಬಾರರು 'ಕರಿಮಾಯಿ'ಯಲ್ಲಿ ಊಳಿಗಮಾನ್ಯ ಪದ್ಧತಿಯೊಳಗಿನ ಒಡೆಯತನದ ಪ್ರತಿಷ್ಠೆ, 'ಜೋಕುಮಾರಸ್ವಾಮಿ'ಯಲ್ಲಿ ಅದಕ್ಕೆ ಹಾಕಿರುವ ಎದಿರೇಟು ಇವೆಲ್ಲ ನಾಡಿನ ವ್ಯವಸ್ಥೆಯಲ್ಲಿ ನಿರಂತರಗೊಂಡಿದ್ದವುಗಳ ಬಗ್ಗೆ ವ್ಯಂಗದ ಮೂಲಕ ಪ್ರತಿಭಟನೆಯ ಹೋರಾಟದ ಮೂಲವೇ ಆಗಿರುವಂತಹುದು. ಹಳ್ಳಿಯ ರಾಜಕಾರಣದ ಸಂಬಂಧಗಳು ಇಲ್ಲಿ ಹೆಸರಾಗಿ ಉಸಿರಾಡುತ್ತವೆ. ಕೊಳೆತ ಕ್ರೂರ ವ್ಯವಸ್ಥೆಯ ಗರ್ಭದಿಂದಲೇ ಉದಯವಾಗುವ ಕ್ರಾಂತಿಯ ಕಿಡಿ 'ಕಾಡುಕುದುರೆ'ಯಲ್ಲಿ ಸ್ಪಷ್ಟವಾಗಿ ನಮ್ಮ ಮನಸ್ಸಿಗೆ ಎದ್ದುಕಾಣತ್ತದೆ. ಜಾನಪದ ಸತ್ವದ ಬಳಕೆ ಅವರ ನಾಟಕಗಳಿಗೆ ತಗ್ಗಿದ್ದ ದನಿಗಳ ಎಚ್ಚರದ ಭಾವಗಳ ಪ್ರಕಟನೆಗೆ ಅನುವಾಗುತ್ತವೆ. ಲಂಕೇಶರ ನಾಟಕಗಳಲ್ಲಿ ನಾಡಿನ ರೂಢಿಯಲ್ಲಿರುವ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿ ಹೋರಾಡುವ ಸಮಾಜದ ದೇಶಾವರಿಗಳ ಕಂದಾಚಾರಗಳ ಎದುರು ನಿಲ್ಲುವ ಮೂಲಕ, ಪಾತ್ರಗಳ ಮೂಲಕ ನಾಡ ಪರಿಸ್ಥಿತಿ ಕುರಿತು ಕಾಳಜಿ ಸೂಚ್ಯವಾಗುತ್ತದೆ. ಚಂದ್ರಶೇಖರ ಪಾಟೀಲರು ಸಮುದಾಯಪರ ಹೋರಾಟಗಳಲ್ಲಿ ತೊಡಗುವ ನೆಲೆಯಲ್ಲಿ ನಾಡಿನ ಅವಸ್ಥೆಯ

ಬಗ್ಗೆ ಅವರಿಗೆ ಕಾಳಜಿಯಾಗುತ್ತದೆ. ಬಿ. ಸಿದ್ಧಗಂಗಯ್ಯ ಕಂಬಾಳು (ನಿಸರ್ಗಪ್ರಿಯ) ಅವರ ಶುನುಶ್ಯೇಫ, ಅಗ್ನಿ ಇತ್ಯಾದಿ ನಾಟಕಗಳು ಪೌರಾಣಿಕ ಪ್ರತಿಮೆ, ಪಾತ್ರಗಳನ್ನು ಆಧುನಿಕ ಜಾಯಮಾನಕ್ಕೆ ಹೊಂದಿಸಿ, ಅಲ್ಲಿನ ನಿಲುವುಗಳನ್ನು ಪ್ರಶ್ನಿಸುತ್ತ ಹೋಗುವಂತಹವು. ಪರಂಪರಾಗತ ನಂಬಿಕೆಗಳಿಗೆದುರು ಸಮಸ್ಯೆಗಳೆದುರು ನಿಂತಾಗ ಭಾಷೆ, ವಸ್ತು, ಭಾವಗಳನ್ನು ಚಿಂತನೆಯ ಸೆಳವಿನಲ್ಲಿ ಪ್ರತಿಭಟನೆಯ ಕಾಳಜಿಗಳನ್ನು ಮೈದುಂಬಿಸುವುದು ಇವರಲ್ಲಿ ಕಾಣಬರುತ್ತದೆ. ಆರ್ಯಧರ್ಮದ ಋಷಿ ಸತಿ ರೇಣುಕೆಯ ಹೊಟ್ಟೆಯಲ್ಲಿ (ಮಾತಂಗಿಯ ತಲೆ, ರೇಣುಕೆಯ ದೇಹದ ಹೆಣ್ಣಾಗಿರುವ ವ್ಯಕ್ತಿ) ಚಂಡಾಲದ ಬೀಜ ಬೆಳೆಸುವ ನಾಟಕಾಂಶ ನಮ್ಮ ನಾಡವರ ಚಿಂತನೆಗಳ ಮೌಢ್ಯಕ್ಕೆ ಮರು ಸವಾಲಾಗಿ ನಿಲ್ಲುತ್ತದೆ. ಇದಕ್ಕೆ ಅನುವಾದ ನುಡಿ, ಕೂಡ ಬೆಳೆಯುತ್ತದೆ. ಅವರ 'ಜುಂಜಪ್ಪ' ಎಂಬ ನಾಟಕದಲ್ಲೂ ಜನಪದ ಬದುಕನ್ನು ಅಪಹಾಸ್ಯ ಮಾಡಿದರೆ ತಪ್ಪು ನೋಡುವ ನಾಗರಿಕನ ಹೊಣೆಯಾಗುತ್ತದೆ. ಹೀಗೆ ನಾಡವರ ನಡುವಣ ಭಾವತೋಲನವನ್ನು ನಿರ್ಮಿಸಿ ಜನಪದವನ್ನು ಅನಾದರಿಸಬಾರದೆನ್ನುವ ಕಾಳಜಿ ಇಲ್ಲಿನದು.

ಬೆಸಗರಹಳ್ಳಿ ರಾಮಣ್ಣನವರ ಕತೆಗಳು ಭಾರತದ ಹಳ್ಳಿಗಳ, ನಮ್ಮ ನಾಡಿನ ಕತೆಗಳಾಗಿ ಬದುಕು, ಭಾವ, ಕ್ರಾಂತಿಯ ಮೊನಚುಗಳನ್ನು ಕಂಡರಿಸಿಕೊಳ್ಳುತ್ತದೆ. ನಮ್ಮ ನಾಡಿಗೆ ಸ್ವಾತಂತ್ರ್ಯ ಬಂದು ಈಸು ವರ್ಷಗಳಾದರೂ ದೇಶದ ಬಡವನ ಪ್ರಗತಿ ಕುರಿತ ಕಾಳಜಿ, ಆಳರಸರಿಗೂ ಇಲ್ಲ, ಉಳ್ಳವರಿಗೂ ಇಲ್ಲ. ಅಂತಾಗಿ ಅವರ ಮನಸ್ಸಿನ ದಂಗೆ ಬರೆಹದಲ್ಲಿ ಸ್ಪಷ್ಟಗೊಳ್ಳುತ್ತದೆ. ಹಾಗೆಯೇ ದಲಿತರ ಬದುಕಿನ ನೋವನ್ನು ಸಮರ್ಥವಾಗಿ ಚಿತ್ರಿಸುವ ಇವರ ಕತೆಗಳು, ಭಾಷೆಯ ಸಂವಹನದಲ್ಲಿ, ವಸ್ತುವಿನ ಸಂವಹನದದಲ್ಲಿ ತಾಗುತ್ತ ಪ್ರಭಾವಿಸಿವೆ. ಚನ್ನಣ್ಣ ವಾಲೀಕಾರರ ಕತೆಗಳು ದಲಿತರ ಬದುಕಿನ ಚಿತ್ರಣವನ್ನು, ವ್ಯಂಗಗಳನ್ನು ಸಮರ್ಥ ಭಾಷೆಯಲ್ಲಿ ಪಡೆದುಬಂದಿವೆ.

ವಿಮರ್ಶೆಯ ಒಲವುಗಳಲ್ಲಿಯೂ ಈಗ ವಿಶಾಲವಾಗಿ, ದಟ್ಟಗೊಳಿಸುವ ಪ್ರವೃತ್ತಿ, ತೌಲನಿಕವಾಗಿ ಅಧ್ಯಯನಪೂರ್ಣವಾಗಿ ವಿಶ್ಲೇಷಿಸುವ ಕಾಳಜಿಗಳು ಕುರ್ತಕೋಟಿ, ಅಮೂರ, ನಾಯಕ್ ಮುಂತಾದವರಲ್ಲಿ ಕಂಡುಬರುತ್ತದೆ. ನಾಡಿನ ವಿಮರ್ಶೆಯ ಭಾಷೆಯನ್ನು ಅನುಗುಣ ಪರಿಸರದ ಜೀವಂತಿಕೆಯನ್ನು ಸಂಯುಕ್ತಗೊಳಿಸಿ ಹೇಳುವ ಪರಿಬೆಳೆದಿದೆ

ನವ್ಯೋತ್ತರದ ಕಾಳಜಿಗಳನ್ನ ಕಾಣುವಾಗ ಮೂಲಭೂತವಾಗಿ ವ್ಯವಸ್ಥೆಯಲ್ಲಿನ ಕ್ರೌರ್ಯ, ಕುರೂಪಗಳನ್ನು ಬಯಲಿಗೆಳೆಯುವಲ್ಲಿ ಕೇವಲ ಅಸಮಾಧಾನಕ್ಕೆ ಸೀಮಿತಗೊಳ್ಳುವುದಿಲ್ಲ; ಪ್ರತಿಭಟನೆಯ ಪ್ರೇರಣೆಗಳನ್ನು ಅನ್ಯಾಯಗಳ ಶೋಷಣೆಗಳ ವಿರುದ್ಧ ಮೂಡಿಸುತ್ತ ಸವಾಲುಗಳನ್ನೊಡ್ಡುವ ಪ್ರವೃತ್ತಿಯಲ್ಲಿ ಈ ನಾಡು ಹಸನಾಗಬೇಕು, ನಾಡಿನ ಯಾವೆಲ್ಲಜನ ನ್ಯಾಯವಾಗಿ ನಡೆದು ಸುಖಪಡಲಿ ಎಂಬ ಸದಿಚ್ಛೆ ಕಾಣಬರುತ್ತದೆ ವಿನಾ ಕೇವಲ ತೋರುಗಾಣಿಕೆಯು, ನಿಜವಾದ ಕಾವ್ಯಕತೆ, ಕಾದಂಬರಿ, ನಾಟಕ ವಿಮರ್ಶೆಗಳಲ್ಲಿ ಕಾಣದೆ ನಿಷ್ಠೆ ಕಾಣುತ್ತದೆ. ಹೊಸತುಗಳ ಹುಡುಕಾಟಗಳ ಪಕ್ವತೆ ವಿಕಸಿಸುತ್ತ ಬರುವುದು. ಕಾಣುತ್ತದೆ; ನಾಡು-ನುಡಿಗಳನ್ನು ಸಂಭ್ರಮಿಸುವ ಆವೇಶ ಭ್ರಮೆಗೊಳಗಾಗದೆ ವಾಸ್ತವ ಹಣಿಕುಗಳತ್ತ ಸಾಗುತ್ತಿರುವದು ಕಂಡರೂ ಕೆಲವು ಮಿತಿಗಳು ಪರಿಶ್ರಮದಲ್ಲಿ ಕಾಣಬರುವುದಿಲ್ಲ. ವ್ಯಷ್ಟಿ-ಸಮಷ್ಟಿಗಳಲ್ಲಿ ಬದುಕಿಗೆ ನಕಾರಾತ್ಮಕವಾಗಿ ಸ್ಪಂದಿಸುತ್ತ ಕಲಾತ್ಮಕ ಪಾತಳಿಗಳನ್ನೇ ವಿಸ್ತರಿಸುವ,

ಬದ್ಧತೆ ಈ ಅವಧಿಯಲ್ಲಿ ಕಾಣಬರುತ್ತದೆ. ವಂಚಿತನ ದನಿ ತಮಟೆಯಲ್ಲಿ ಭೋರ್ಗರೆಯುತ್ತ ಬಂದರೂ ಇಂದು ಸಂಯಮ, ಆತ್ಮವಿಶ್ವಾಸ, ಪಕ್ವತೆಯತ್ತ ಸಾಗುತ್ತಿದೆ ಎಂಬುದೂ ಗಮನಾರ್ಹ. ಆದರೆ ಅದು ಕಲಾತ್ಮಕವಾಗಿ ಮತ್ತಷ್ಟು ನಿಷ್ಠಗೊಂಡರೆ ಸರಿಸಮ, ಚಾಲನೆ ಆಗುತ್ತದೆ. ಈ ಹಿನ್ನೆಲೆಯಲ್ಲಿ ನವ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಸಾಂಸ್ಕೃತಿಕ ಕುತೂಹಲ ಬೆಳೆದು ನಾಡು ನುಡಿಗಳ ಕುರಿತು ಹೊಸ ಪರಿಯಲ್ಲಿ ವಿಶ್ಲೇಷಿಸುವ ಪರಿಶ್ರಮವೂ ಕಾಣಬರುತ್ತದೆ; ಸಾಂಸ್ಕೃತಿಕ ಸವಾಲುಗಳನ್ನು ಅರಗಿಸಿಕೊಂಡದ್ದೂ ಕಾಣಬರುತ್ತದೆ.

ಶಾಸನಗಳಲ್ಲಿ ಕರ್ನಾಟಕ-ಕನ್ನಡ ಪರಿಕಲ್ಪನೆ

ತಮಿಳ್ ಸೆಲ್ವಿ

ಅಶೋಕನ ಹಲವು ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. ಅಲ್ಲದೆ, ಕ್ರಿ.ಪೂ. ೩ನೆಯ ಶತಮಾನದ ಶ್ರವಣಬೆಳಗೊಳದ ಶಾಸನವು ಅಲ್ಲಿಗೆ ಭದ್ರಬಾಹು ಮುನಿಗಳು ಬಂದುದನ್ನು ತಿಳಿಸುವುದರಿಂದ ಆ ವೇಳೆಗಾಗಲೇ ಕರ್ನಾಟಕ ಪ್ರಸಿದ್ಧಿಯಾಗಿರಬೇಕು. ಇತಿಹಾಸಪೂರ್ವ ಕಾಲದಿಂದಲೂ ಈ ಪ್ರದೇಶ ಅಸ್ತಿತ್ವದಲ್ಲಿದ್ದರೂ ಸ್ವತಂತ್ರವಾಗಿ ರೂಪು ಗೊಂಡ ನಂತರದ ಇತಿಹಾಸ ಕಾಲದ ಪ್ರಥಮ ದಾಖಲೆಗಳವು. ಈ ಪ್ರದೇಶದ ಭೌಗೋಳಿಕ ವ್ಯಾಪ್ತಿ ರಾಜಕೀಯದಲ್ಲಿನ ಏರುಪೇರುಗಳಿಗೆ ಅನುಗುಣವಾಗಿ ಕಾಲಕ್ರಮೇಣ ವಿಸ್ತರಿಸುತ್ತಾ ಕೆಲವೊಮ್ಮೆ ಸಂಕುಚಿತಗೊಳ್ಳುತ್ತಾ ಸಾಗಿದೆ. ತತ್ಕಾರಣವಾಗಿ ಈಗಿನಂತೆ ಪ್ರಾಚೀನ ಕರ್ನಾಟಕದ ಕಟ್ಟುನಿಟ್ಟಾದ ಗಡಿಯನ್ನು ಗುರುತಿಸುವುದು ಅಸಾಧ್ಯ. ಕನ್ನಡದ ಮೊದಲ ಅರಸು ಮನೆತನ ಕದಂಬರಿಂದ ಹಿಡಿದು ಮೈಸೂರು ಅರಸರವರೆಗಿನ ಆಳ್ವಿಕೆಯ ಪ್ರದೇಶವೆಲ್ಲವೂ ಕರ್ನಾಟಕವೇ ಎನ್ನ ಬಹುದಾದರೂ; ಕರ್ನಾಟಕ ಮತ್ತು ಕರ್ನಾಟಕದ ಕೆಲವು ಸ್ಥಳಗಳನ್ನು ಹೆಸರಿಸುವ ಹಲವು ಶಾಸನಗಳು ದೊರಕಿದರೂ ಖಚಿತವಾಗಿ ಈ ಪ್ರದೇಶದ ವ್ಯಾಪ್ತಿಯನ್ನು ತಿಳಿಸುವ ಆಧಾರಗಳು ಯಾವ ಕಾಲದಲ್ಲೂ ರೂಪು ಗೊಂಡಿಲ್ಲ.

'ಕವಿರಾಜಮಾರ್ಗ'ಕ್ಕಿಂತ ಮೊದಲಿನ ನಾಡು-ನುಡಿಯ ಇತಿಹಾಸ ವನ್ನರಿಯಲು ಶಾಸನಗಳೇ ಪ್ರಮುಖ ಆಕರವೆಂಬುದು ಸರ್ವವಿಧಿತ. ಶಾಸನಗಳಲ್ಲಿ ಬಳಕೆಯಾಗಿರುವ 'ಕರ್ನಾಟಕ' ಮತ್ತು 'ಕನ್ನಡ'- ಈ ಎರಡೂ ಪದಗಳೂ ದೇಶ, ಭಾಷೆ, ಕುಲ ಸೂಚಕಗಳಾಗಿ ಬಳಕೆಯಾಗಿವೆ. ಕ್ರಿ.ಶ. ೬ನೆಯ ಶತಮಾನದವರೆಗಿನ ಶಾಸನಗಳನ್ನು ಗಣನೆಗೆ ತೆಗೆದು ಕೊಂಡರೆ ಪ್ರಾಕೃತ-ಸಂಸ್ಕೃತ ಶಾಸನಗಳೇ ಅಧಿಕ ಪ್ರಮಾಣದಲ್ಲಿ

ರುವುದರಿಂದ ಅವುಗಳಲ್ಲಿ ಉಕ್ತವಾಗಿರುವ 'ಕರ್ನಾಟಕ', 'ಕನ್ನಡ' ಪದ ಪ್ರಯೋಗಗಳು ಗಮನಾರ್ಹ.

ಕನ್ನಡ ನಾಡಿನಲ್ಲಿ ಮತ್ತು ಹೊರನಾಡಿನಲ್ಲಿ ದೊರೆತಿರುವ ಸಂಸ್ಕೃತ, ಪ್ರಾಕೃತ, ಕನ್ನಡ, ತಮಿಳು... ಭಾಷೆಯ ಶಾಸನಗಳನ್ನು ಗಮನಿಸಿದರೆ 'ಕರ್ನಾಟಕ' ಎಂಬ ಶಬ್ದವು ವಿವಿಧ ರೂಪಗಳಲ್ಲಿ ಕಾಣಿಸುತ್ತದೆ. ಈ ವಿಭಿನ್ನತೆಗೆ ಬಹುಶಃ ಉಚ್ಚಾರ ಭೇದವೇ ಪ್ರಮುಖ ಕಾರಣವಾಗಿರಬೇಕು. ಉಪಲಬ್ಧ ಶಾಸನಗಳಲ್ಲಿ ಕರ್ನಾಟ, ಕರ್ನಾಟಕ, ಕರ್ಣಾಟ, ಕರ್ಣಾಟಕ, ಕನ್ನಾಟ, ಕರ್ಣ್ಣಾಟ, ಕರ್ನ್ನಾಟ.... ಇತ್ಯಾದಿ ಹಲವು ಪ್ರಯೋಗಗಳು ಕಂಡುಬರುತ್ತವೆ.

ಕರ್ನಾಟಕದ ಉಲ್ಲೇಖವಿರುವ ಪ್ರಾಚೀನ ಶಾಸನವಾದ ಕ್ರಿ.ಶ. ೪೫೦ರ ಕದಂಬ ಶಾಂತಿವರ್ಮನ ಕಡೂರು ತಾಲೂಕಿನ ಬೀರೂರಿನ ಶಾಸನವು "(ವೈ)ಜಯನ್ತೀತಿಲಕ ಸಮಗ್ರ ಕರ್ಣ್ಣಾಟದೇಶ ಭೂವರ್ಗ್ಗಭರ್ತ್ತಾರಂ"- ಎನ್ನುತ್ತದೆ. (ವೈ)ಜಯನ್ತೀ ಪುರವು ಎಂದರೆ ಬನವಾಸಿಯು 'ಸಮಗ್ರ ಕರ್ಣ್ಣಾಟ ದೇಶ'ದ ತಿಲಕವೆಂದು ಇದು ತಿಳಿಸುತ್ತದೆ. ಈ ಶಾಸನವು ಕೂಟ ಶಾಸನವೆಂದೂ ಅದರ ಲಿಪಿ ೮ನೆಯ ಶತಮಾನದ್ದೆಂದೂ ಕೆಲವು ವಿದ್ವಾಂಸರು (ಬಿ.ಎಲ್. ರೈಸ್) ಹೇಳುತ್ತಾರೆ. ಒಂದು ವೇಳೆ ಇದೇ ಕಾಲದ್ದಾದರೂ ಆ ಶಾಸನಕಾರನಿಗೆ ಆ ಕಾಲಕ್ಕಾಗಲೇ. ಸಮಗ್ರ ಕರ್ಣ್ಣಾಟಕದ ಕಲ್ಪನೆಯಿತ್ತೆನ್ನಬಹುದು. ಆ ವೇಳೆಗಾಗಲೇ 'ಸಮಗ್ರ ಕರ್ಣ್ಣಾಟಕ' ರೂಪುಗೊಂಡು ಪ್ರಸಿದ್ಧಿಯನ್ನು ಪಡೆದಿತ್ತೆನ್ನಲು ಯಾವ ಅಡ್ಡಿಯೂ ಇಲ್ಲ. 'ಕರ್ಣ್ಣಾಟ' ಎನ್ನುವ ಶಬ್ದವನ್ನು ದೇಶವಾಚಿಯಾಗಿ ಬಳಸಿರುವ ಪ್ರಥಮ ಶಾಸನವಿದು. ಈ ಶಾಸನವು ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಮತ್ತು ಅದರ ಸುತ್ತಲಿನ ಪ್ರದೇಶಕ್ಕೆ (ಅಂದಿನ ಕರ್ನಾಟಕದ) ಕೇಂದ್ರ ಸ್ಥಾನವಾಗಿತ್ತೆಂಬುದನ್ನು ತಿಳಿಸುತ್ತದೆ.

'ಕರ್ಣಾಟ' ಶಬ್ದವು ಭಾಷಾವಾಚಿಯಾಗಿ ಗಂಗರ ಭೂವಿಕ್ರಮನ ಕ್ರಿ.ಶ. ೬೩೪ರ ಶಾಸನದಲ್ಲಿ ಬಳಕೆಯಾಗಿದೆ'[೧]. ಈ ಶಾಸನವು ಜನರ ಮಾತನ್ನು 'ಕರ್ನಾಟಕ' ಎಂದು ಸ್ಪಷ್ಟವಾಗಿ ತಿಳಿಸುತ್ತದೆ. ಈ ವೇಳೆಗಾಗಲೇ ಕರ್ಣ್ಣಾಟ ಶಬ್ದವು ದೇಶ-ಭಾಷಾ ಸೂಚಿಯಾಗಿ ಪ್ರಸಿದ್ಧಿಯಾಗಿತ್ತು. ಈ ಅಭಿಪ್ರಾಯವನ್ನು ಮತ್ತೊಂದು ಶಾಸನವೂ ಪುಷ್ಟೀಕರಿಸುತ್ತದೆ: "ಕರ್ನ್ನಾಟ ಲಾಟ ದ್ರಾವಿಳ ನಾನಾ ದೇಶಭಾಷಾ ವಿಶೇಷ ಲಿಪಿ ನಿಪುಣ ವಿದ್ಯಾಧರರುಂ...."[೨] ಎನ್ನುವ ಸು.ಕ್ರಿ.ಶ. ೧೨೦೦ರ ಕಾಲಾವಧಿಯ ಈ ಶಾಸನವು 'ಕರ್ನ್ನಾಟ' ಶಬ್ದವನ್ನು ಪ್ರದೇಶಸೂಚಿಯಾಗಿಯೂ ಮತ್ತು ಅದಕ್ಕೊಂದು ಲಿಪಿ ಇದೆಯೆಂಬುದನ್ನೂ ಸೂಚಿಸುತ್ತಿದೆ. 'ಶ್ರೀಮತ್ಕರ್ಣ್ಣಾಟ ಸುಕವಿ ಮುಖ್ಯ ಪಂಡಿತರ ಕವಿತೆ"ಎನ್ನುವಾಗಲೂ 'ಕರ್ಣ್ಣಾಟ'ವು ಪ್ರದೇಶ ಸೂಚಿಯೂ ಭಾಷಾ ಸೂಚಿಯೂ ಆಗಿದೆ. ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಶಿಕ್ಷಣವನ್ನು ಕುರಿತು ಹೇಳುವಾಗ 'ಕರ್ನಾಟ ಬಾಲ ಶಿಕ್ಷೆಯಂ ಮಾಡುವಂತಾಗಿ..." ಎಂಬ ಮಾತು ಒಂದು ಶಾಸನದಲ್ಲಿ ಬಂದಿದೆ. ಇವುಗಳನ್ನು

---

೧. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ಸ್, ೧೯೨೫, ಸಂಖ್ಯೆ ೧೫, ಸಾಲು ೩೭, ೩೮

೨. ಎಪಿಗ್ರಾಫಿಯ ಕರ್ನಾಟಕ v, ಪ್ರಥಮ ಮುದ್ರಣ, (ಸಂ.) ಬಿ. ಎಲ್. ರೈಸ್, ಅರಸೀಕರೆ - ೧೩೦ ಪು. ೫೨೧

ಗಮನಿಸಿದಾಗ 'ಕರ್ಣಾಟ'ವು ದೇಶ-ಭಾಷಾವಾಚಿಯಾಗಿ ಏಕತ್ರವಾಗಿ ಬಳಕೆಯಾಗುತ್ತಿತ್ತು ಎಂದು ತಿಳಿದು ಬರುತ್ತದೆ.

ಕೆಲವು ಶಾಸನಗಳಲ್ಲಿ 'ಕರ್ಣಾಟ' ಪದವು ಕುಲ/ವಂಶ ಸೂಚಿಯಾಗಿಯೂ ಬಳಕೆಯಾಗಿದೆ. ಉದಾ: ''ಕರ್ಣಾಟ ಕುಳ ತಿಳಕರ್ಮಾಚಿ ರಾಜಂಗೆ...''[೩]; ಕರ್ನಾಟ ಕುಳಕಮಳ ಮಾರ್ತ್ತಂಡನಾ ಮಾದಿ ಪ್ರಶಸ್ತಿ ಸಹಿತನುಂ''[೪] - ಇತ್ಯಾದಿ ಪ್ರಯೋಗಗಳನ್ನು ಗಮನಿಸಿದಾಗ ಇದು ಕುಲ-ವಂಶವಾಚಿಯಾಗಿಯೂ ಬಳಕೆಯಾಗುತ್ತಿತ್ತೆನ್ನುವುದು ನಿಸ್ಸಂಶಯ.

'ಕರ್ಣ್ನಾಟ' ಶಬ್ದದಂತೆಯೇ 'ಕಂನಡ' ಎಂಬ ಶಬ್ದವೂ ನಾನಾ ಅರ್ಥಗಳಲ್ಲಿ ಪ್ರಯೋಗವಾಗಿದೆ. ೧೧೯೩ರ ಶಿಕಾರಿಪುರದ ಶಾಸನವು ಕಂನಡ ಶಾಖೆಯ 'ವಿಶ್ವಾಮಿತ್ರ ಗೋತ್ರದ ವಿಷ್ಣು ದೀಕ್ಷಿತರು..' ಎಂದು ಹೇಳುತ್ತಿರುವುದು. ಬ್ರಾಹ್ಮಣರ ಒಂದು ಶಾಖೆಯನ್ನು. ಇಲ್ಲಿ ಇದು ಕುಲ ಸೂಚಕವಾಗಿ ಪ್ರಯೋಗವಾಗಿದೆ.[೫] ಮಧುರ ಕವಿಯು ಹಂಪೆಯ ಶಾಸನವೊಂದರಲ್ಲಿ ಲಕ್ಷ್ಮೀಧರಾಮಾತ್ಯನನ್ನು ''ಕನ್ನಡಿಗ ಕುಲಕೆ ರನ್ನದ ಕನ್ನಡಿಯೆನೆ ವಿಶ್ವವಿದಿತ ವೃತ್ತಶ್ರೀ ಸಂಪನ್ನಂ ಲಕ್ಷ್ಮೀಧರ ದೇವಂ..''[೬] ಎಂದು ಹೊಗಳುತ್ತಾನೆ

''ಕಂನಡ ನಾಲ್ಕು ಸಾಸಿರದ ಮುಂಮುಟಿ ದಂಡಂಗಳಿಗೆ ಮುಖ್ಯರಪ್ಪರೈವರ ದೇವಿ ಸೆಟ್ಟಿಯರು''[೭] ಎನ್ನುವಾಗ ಕಂನಡವು ನಾಡನ್ನು ಪ್ರತಿಬಿಂಬಿಸಿದರೆ, ಶ್ರವಣಬೆಳಗೊಳದ ಬೊಪ್ಪಣ ಕವಿಯ ಗೊಮ್ಮಟ ಸ್ತುತಿಯಲ್ಲಿನ ''... ಕನ್ನಡಗವಿ ಬಪ್ಪನೆಂದೆನಿಪ ಬೊಪ್ಪಣ ಪಂಡಿತನೊಲ್ದು ಪೇಟುಿವಂ ಕಡೆಯಿಸಿದಂ'' ಎನ್ನುವಾಗಿನ ಕನ್ನಡ ಪದವು ಭಾಷಾ ವಾಚಿಯಾಗಿದೆ. ಕಾಲಕ್ರಮೇಣ ಈ ಪದ ತನ್ನ ಅರ್ಥವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿದೆ. 'ಕನ್ನಡ' ಎಂಬುದರೊಂದಿಗೆ 'ನಾಡು' ಎಂಬುದು ಉತ್ತರವಾಚಿಯಾಗಿ ಸೇರಿ ದೇಶಸೂಚಿಯಾಗಿ ನಂತರದ ಕಾಲದಲ್ಲಿ ಪ್ರಯೋಗವಾಗಿದೆ. ಹೀಗೆ ವಿವಿಧ ಅರ್ಥ ಪ್ರಯೋಗಗಳು ಶಾಸನಗಳಲ್ಲಿ ಕಾಣಿಸಿದರೂ ಈಗ 'ಕನ್ನಡ'ವು ಭಾಷಾವಾಚಿಯಾಗಿಯೂ 'ಕರ್ನಾಟಕ' ಎಂಬುದು ಪ್ರದೇಶವಾಚಿಯಾಗಿಯೂ ಸಾಮಾನ್ಯವಾಗಿ ಚಾಲ್ತಿಯಲ್ಲಿದೆ.

ನಾಡನ್ನು ಕುರಿತು ಹೇಳುವ ಕರ್ಣಾಟ-ಕರ್ನಾಟ ಈ ಎರಡು ರೂಪಗಳಲ್ಲಿ 'ಕರ್ಣಾಟ'ವೇ ಪ್ರಾಚೀನ ರೂಪವಾಗಿದ್ದಾಗ್ಯೂ ವಿಜಯನಗರ ಹಾಗೂ ನಂತರದ ಶಾಸನಗಳಲ್ಲಿ 'ಕರ್ನಾಟ' ಎಂಬ ರೂಪವೇ ಹೆಚ್ಚು ಪ್ರಯೋಗವಾಗಿದೆ. 'ಣ'ಕಾರ ಪ್ರಯೋಗವು ಪ್ರಾಚೀನವಾದರೂ ರೇಫೆಯೊಡಗೂಡಿದ 'ನ'ಕಾರವೇ ಕನ್ನಡದ ಜಾಯಮಾನಕ್ಕೆ ಚೆನ್ನಾಗಿ ಒಪ್ಪುತ್ತದೆಯಾದ್ದರಿಂದ ೧೨-೧೩ನೆಯ ಶತಮಾನದ ನಂತರದ ಶಾಸನಗಳಲ್ಲಿ 'ಕರ್ನಾಟ' ಎಂಬ ರೂಪ ಪ್ರಚಾರವಾಗಿದೆ. ಕಾಲಕ್ರಮೇಣ ಇದಕ್ಕೆ 'ಕ'ಕಾರವೂ ಸೇರಿಕೊಂಡು 'ಕರ್ನಾಟಕ' ಎಂಬುದು ರೂಢಿಗೆ ಬಂದಿತು.

---

೩. ಎಪಿಗ್ರಾಫಿಯ ಕರ್ನಾಟಿಕ II (ಪ್ರ. ಮುದ್ರಣ,) ಶ್ರವಣಬೆಳಗೊಳ, ೩೨೨, ಪು. ೧೭೯

೪. ಎಪಿಗ್ರಾಫಿಯ ಕರ್ನಾಟಿಕ V (ಪ್ರ, ಮುದ್ರಣ.), ಹಾಸನ ೭೨, ಪು. ೬೩

೫. 'ಕರ್ಣಾಟಕ ಬ್ರಾಹ್ಮಣರು' ಎಂಬ ಪ್ರಯೋಗ ಈಗಲೂ ಬಳಕೆಯಲ್ಲಿರುವದನ್ನು ಗಮನಿಸಬಹುದು.

೬. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, IV, ೨೬೭, ೧೩೮೦, ಪು. ೪೧

೭. ಎ.ಕ., XI, ದಾವಣಗೆರೆ ೩, ಪು. ೫೯

ಬ(ವ)ನವಾಸಿ, ಮಹಿಷಮಂಡಲ(ಮಾಹಿಷಿಕ), (ವೈ)ಜಯನ್ತೀಪುರ, ಕುಂತಲ, ಕರ್ಣಾಟ-ಇವು ಕನ್ನಡ ನಾಡನ್ನು ಹೆಸರಿಸುವ ಶಾಸನಿಕ ಶಬ್ದಗಳು. ಇವು ಮೂಲತಃ ಬೇರೆಬೇರೆ ಪ್ರದೇಶಗಳ ಸೂಚಿಯಾಗಿದ್ದು ಒಂದು ಮತ್ತೊಂದರ ಪಕ್ಕದಲ್ಲಿದ್ದಿರಬೇಕು ಅಥವಾ ಒಂದು ಮತ್ತೊಂದು ಪ್ರದೇಶದ ಭಾಗವಾಗಿದ್ದಿರಲೂಬಹುದು. ಕನ್ನಡ ನಾಡು ಭೌಗೋಳಿಕವಾಗಿ ಒಂದಾಗಿದ್ದುದು ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ. ಇವರ ನಂತರ ಹರಿದು ಹಂಚಿಹೋಗಿದ್ದ ನಾಡು ಮತ್ತೆ ವಿಜಯನಗರದ ಅರಸರ ಆಳ್ವಿಕೆಯ ಅವಧಿಯಲ್ಲಿ ಬಹುಪಾಲು ಒಂದುಗೂಡಿತು.

ಕನ್ನಡ ನಾಡಿನ ಹಲವು ಪ್ರದೇಶಗಳನ್ನು ಗುರುತಿಸುವ ಶಾಸನಿಕ ಪದಗಳು ಬಹಳಷ್ಟಿವೆ. ತರ್ದವಾಡಿ ನಾಡು, ತೆಂಕನಾಡು- ೭೦, ನಾಗರಖಂಡ, ಆಳ್ವ ಖೇಡ - ೬೦೦೦, ಎಡೆನಾಡು, ಬೆಳ್ವೊಲ, ನೊಳಂಬವಾಡಿ, ಗಂಗವಾಡಿ, ಪುನ್ನಾಟ, ಪುಲಿಗೆರೆ, ಬೆಳ್ವೊಲ, ಹಾನುಗಲ್ಲು, ಕೂಂಡಿ, ಕೆಳವಾಡಿ, ಬಾಗಡಗೆ, ಕಾರತ್ತುಮೂರ್ನಾಡು, ಹೂನಾಡು-೬೦೦೦, ನೂರೊಕ್ಕಲು ನಾಡು, ಬೆಟ್ಟಿಯತ್ತುನಾಡು..... ಇತ್ಯಾದಿಗಳು ಕನ್ನಡನಾಡಿನ ವ್ಯಾಪ್ತಿಗೊಳಪಡುತ್ತಿದ್ದ ಪ್ರದೇಶವಾಚಿಗಳು.

ಕರ್ನಾಟಕದ ಭೌಗೋಳಿಕ ವ್ಯಾಪ್ತಿ ಮೊದಲು ಕೆಲವು ಸ್ಥಳಗಳಿಗಷ್ಟೇ ಅನ್ವಯವಾಗುತ್ತಿದ್ದು ಕ್ರಮೇಣ ಅಲ್ಲಿನ ಜನ ಇತರ ಕಡೆ ಹರಡುತ್ತಿದ್ದಂತೆ ಆ ಪ್ರದೇಶಕ್ಕೂ ಆ ಹೆಸರೇ ರೂಢಿಗೆ ಬಂದಿರಬೇಕು. ಕ್ರಿ.ಶ. ೫ ರಿಂದ ೯ರ ವರೆಗಿನ ಶಾಸನಗಳಿಂದ ಅಂದಿನ ಕರ್ನಾಟಕವು ಉತ್ತರ ಕನ್ನಡ, ಧಾರವಾಡ, ಬಿಜಾಪುರ, ರಾಯಚೂರು, ಕಲಬುರ್ಗಿ, ಬೆಳಗಾಂ...ಗಳನ್ನಂತೂ ಖಚಿತವಾಗಿ ಒಳಗೊಂಡಿತ್ತು ಎನ್ನಬಹುದು.

ಸುಮಾರು ೧೧-೧೨ನೆಯ ಶತಮಾನದ ಕರ್ಣಾಟ-ಕುಂತಲ-ಮಹಿಷ ಮಂಡಲಗಳು ಸಮಾನಾರ್ಥಕವಾಗಿ ಬಳಕೆಗೊಳ್ಳತೊಡಗಿದವು. ಕುಂತಲ-ಕರ್ಣಾಟಗಳಂತೂ ಪರ್ಯಾಯ ಪದಗಳಾಗಿಯೂ ಸಾಮ್ರಾಜ್ಯ ಸೂಚಿಗಳಾಗಿಯೂ ಕಾಣಸುತ್ತವೆ. ಬ್ಯೂಲರ್, ಬಿ.ಸಿ.ಲಾ, ಡಿ.ಸಿ. ಸರ್ಕಾರ್ ಅವರುಗಳೂ ಇದೇ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ೧೧ನೆಯ ಶತಮಾನದಿಂದ ೧೨ನೆಯ ಶತಮಾನದ ಅಂತ್ಯದವರೆಗೆ ಕರ್ನಾಟಕವನ್ನಾಳಿದ ಕಲ್ಯಾಣದ ಪಶ್ಚಿಮ ಚಾಲುಕ್ಯರು ಕುಂತಲೇಂದ್ರರೆಂದೇ ಶಾಸನಗಳಲ್ಲಿ ಕೀರ್ತಿತರಾಗಿದ್ದಾರೆ.

ಕುಂತಲದ ಹೆಸರು ರಾಜರ ಜಯಾಪಜಯಗಳಿಗನುಗುಣವಾಗಿ ಇತರೆಡೆಯೂ ಪ್ರಸಿದ್ಧಿಯಾಗಿದೆ. ಕುಂತಲ-ಕರ್ಣಾಟಗಳೆರಡೂ ಆರಂಭದಲ್ಲಿ ಒಂದು ಸಣ್ಣ ಪ್ರದೇಶದ ಸೂಚಿಯಾಗಿದ್ದು ಕ್ರಮೇಣ ಆ ಪ್ರದೇಶದ ಅಧಿಪತ್ಯ-ಅಧಿಕಾರ ಹೆಚ್ಚಿದಂತೆ ಸಾಮ್ರಾಜ್ಯದ ವ್ಯಾಪ್ತಿಯನ್ನು ಹೊಂದಿದ್ದುವು.

‘‘ಉತ್ತರಕನ್ನಡ ಜಿಲ್ಲೆಯ ಬನವಾಸಿ, ಬಳ್ಳಿಗಾವೆ; ಶಿವಮೊಗ್ಗ ಜಿಲ್ಲೆಯ ಹರಿಹರ; ಬಳ್ಳಾರಿ ಜಿಲ್ಲೆಯ ಹಂಪಿ (ವಿಜಯನಗರ) ; ಈ ಪ್ರದೇಶಗಳಿಗೆ ೧-ಉತ್ತರದಲ್ಲಿ ಧಾರವಾಡ ಜಿಲ್ಲೆಯ ಹಾನಗಲ್ಲು ಲಕ್ಷ್ಮೇಶ್ವರ, ಲಕ್ಕುಂಡಿ ಮತ್ತು ಗದಗು; ಇನ್ನು ಉತ್ತರದಲ್ಲಿ ಬೆಳಗಾಂ,

ಸೌಂದತ್ತಿ, ಮನೋಳಿ ಮತ್ತು ಕೊಣ್ಣೂರು; ಬಿಜಾಪುರ ಜಿಲ್ಲೆಯ ಪಟ್ಟದಕಲ್ಲು, ಐಹೊಳೆ ಮತ್ತು ಸಾಂಗ್ಲಿ ಸಂಸ್ಥಾನದ ತೆರದಾಳ ಮತ್ತು ನಿಶ್ಚಯವಾಗಿ ಕಲ್ಯಾಣಿ'[೮]- ಇವು ಫ್ಲೀಟರ ಪ್ರಕಾರ ಕುಂತಲಕ್ಕೆ ಸೇರಿದ ಪ್ರದೇಶಗಳಾದರೆ, ಡಾ|| ಜಿ.ಎಸ್. ಗಾಯಿ ಅವರು ಶಾಸನಾಧಾರಗಳಿಂದ "ಬನವಾಸಿ-೧೨,೦೦೦, ಪಾನುಂಗಲ್-೫೦೦, ಪುರಿಗೆಱೆ - ೩೦೦, ಬೆಳ್ವೊಲ - ೩೦೦, ಕೂಂಡಿ - ೩೦೦೦, ತೊಱಗಲೆ - ೬೦೦, ತರ್ದವಾಡಿ - ೧೦೦೦, ಕೆಳವಾಡಿ - ೩೦೦ ಇತ್ಯಾದಿ... ಎಂದರೆ ಹಳೆಮೈಸೂರು ಸಂಸ್ಥಾನದ ಕೆಲವು ಭಾಗಗಳು, ಬಹುಮಟ್ಟಿಗೆ ಉತ್ತರಕರ್ನಾಟಕದ ಪೂರ್ತಿ ಪ್ರದೇಶ ಮತ್ತು ದಕ್ಷಿಣಮಹಾರಾಷ್ಟ್ರದ ಕೆಲವು ಭಾಗಗಳು ಮತ್ತು ಮಹಾರಾಷ್ಟ್ರ ನಾಂದೇಡ್ ಜಿಲ್ಲೆಯ ದೇಗಲೂರು ತಾಲೂಕಿನ ಸುತ್ತಮುತ್ತಣ ಭಾಗ ಕುಂತಲ ದೇಶದೊಳಗೆ ಸೇರಿದ್ದವು"[೯] ಎಂದು ನಿರೂಪಿಸುತ್ತಾರೆ.

೬ನೆಯ ವಿಕ್ರಮಾದಿತ್ಯ (೧೦೮೬-೧೧೨೩) ನೀಲ್ಗುಂದ ಶಾಸನದಲ್ಲಿ ಆತನ ಅಜ್ಜ ಇಮ್ಮಡಿ ಜಯಸಿಂಹನನ್ನು "ಕುಂತಲ ವಿಷಯೇ ನಿತರಾಂ ವಿರಾಜತೇ ಮಲ್ಲಿಕಾಮೋದ-ಃ"[೧೦] ಎಂದು ಹೊಗಳಲಾಗಿದೆ. ಈ ಶಾಸನದ ಪ್ರಕಾರ ಕುಂತಲ ವಿಷಯಕ್ಕೆ ಕರ್ನಾಟಕದ ಉತ್ತರ ಮತ್ತು ಮಹಾರಾಷ್ಟ್ರದ ದಕ್ಷಿಣಕ್ಕಿರುವ ನರ್ಮದಾ ನದಿ ತೀರದ ಕೆಲವು ಸ್ಥಳಗಳು ಸೇರಿದ್ದುವೆಂದು ಊಹಿಸಬಹುದಾಗಿದೆ.

೪-೫ನೆಯ ಶತಮಾನದ ವಾಕಾಟಕರ ಶಾಸನದಲ್ಲೂ ಕುಂತಲದ ಪ್ರಸ್ತಾಪವಿದೆ. ಹರಿಷೇಣನ ಅಂಜತಾ ಗುಹಾ ಶಾಸನವು ಆತ ಕುಂತಲ, ಆವಂತಿ, ಕಳಿಂಗ, ಕೋಸಲ, ತ್ರಿಕೂಟ, ಲಾಟ ಹಾಗೂ ಆಂಧ್ರಪ್ರದೇಶಗಳನ್ನು ಗೆದ್ದನೆಂದು ತಿಳಿಸಿದರೆ, ಇಮ್ಮಡಿ ಪೃಥ್ವೀಶೇಣನ ಬಾಲಾಘಾಟಿ ಶಾಸನದಲ್ಲಿ ಅವನು ಕುಂತಲಾಧಿಪತಿಯ ಪುತ್ರಿ ಅಜ್ಜಿತ ಭಟ್ಟಾರಿಕೆಯ ಮಗನೆಂದು ತಿಳಿದುಬರುತ್ತದೆ.

ಹಲವಾರು ಶಾಸನಗಳು ಕುಂತಲ-ಕರ್ನಾಟಕವನ್ನು ಅಭಿನ್ನಗೊಳಿಸಿಯೇ ಹೇಳುತ್ತವಾದರೂ ಕ್ರಿ.ಶ. ೧೧೮೨ರ ಶಿಕಾರಿಪುರದ ೧೯೭ರ ಶಾಸನವು ಕರ್ನಾಟಕ ಮತ್ತು ಕುಂತಳಗಳನ್ನು ಪ್ರತ್ಯೇಕಿಸಿ ಹೇಳುತ್ತದೆ. "ಲಾಟ, ಕರಹಾಡ, ಕಳಿಂಗ.. ದೇಶದವರು ತ್ರೈಲೋಕ್ಯಮಲ್ಲ ಆಹವಮಲ್ಲದೇವನಿಗೆ ಎದುರು ನಿಲ್ಲಲಾರದೆ ಕಪ್ಪವನ್ನಿತ್ತ"ರೆಂದೂ ಹೇಳುವಾಗ ಇವೆರಡೂ ಪ್ರತ್ಯೇಕ ಘಟಕಗಳಾಗಿ ಕಾಣಿಸುತ್ತವೆ. ಕಲಚುರ್ಯ ಸೋಯಿದೇವನ ಗುಣವನ್ನು "ಕ್ರಮದಿಂ ಕರ್ಣಾಟಮಂ ಕುಂತಳಮನೊವಿನಿಂ ತೀಳ್ಪಿ ತಳ್ಕಯ್ಸಿ....."[೧೧] ಎಂದು ಕೀರ್ತಿಸಲಾಗಿದೆ. ಕರ್ನಾಟ ಕುಂತಲಗಳು ಪ್ರತ್ಯೇಕವೆಂದು ಇದು ಸೂಚಿಸುತ್ತದೆ.

---

೮. Karnataka through the Ages, 1968, P. 104

೯. Studies in Ancient Geography of Karnataka - II, Studies in Indian Place Names II, Mysore, 1981, P. 9-12

೧೦. ೬ನೆಯ ವಿಕ್ರಮಾದಿತ್ಯನ ಆಸ್ಥಾನಕವಿ ಬಿಲ್ಹಣನು ತನ್ನ ವಿಕ್ರಮಾಂಕದೇವ ಚರಿತದಲ್ಲಿ (೧೦೮೫) ವಿಕ್ರಮಾದಿತ್ಯನನ್ನು ಒಮ್ಮೆ 'ಕುಂತಲೇಂದು'ವೆಂದೂ ಮತ್ತೊಮ್ಮೆ 'ಕರ್ಣಾಟೇಂದು'ವೆಂದೂ ಕರೆದು ಇವೆರಡನ್ನೂ ಅಭಿನ್ನಗೊಳಿಸಿದ್ದಾನೆ.

೧೧. ಎಪಿಗ್ರಾಫಿಯ ಕರ್ನಾಟಿಕ VII ಶಿಕಾರಿಪುರ ೧೯೭ (ಪ್ರ.ಮುದ್ರಣ,) ಪು. ೨೮೬

ಬಾದಾಮಿ ಚಾಲುಕ್ಯರ ಕಾಲದಲ್ಲಿ ಕರ್ನಾಟಕ ಸೀಮೆ ಕರ್ನಾಟ, ಕುಂತಲ, ಲಾಟ, ಕರಹಾಟ, ವನವಾಸ, ತುಳುವ, ಆಳ್ವಖೇಡ, ಕೊಂಕಣ, ಪುನ್ನಾಟ ಮತ್ತು ವೆಂಗಿಮಂಡಲ ಎಂದು ಬೇರೆಬೇರೆ ವಿಷಯಗಳಾಗಿ ವಿಭಜನೆಗೊಂಡಿದ್ದ ಪ್ರದೇಶವೇ 'ಕರ್ನಾಟ' ಎಂಬ ಹೆಸರಿನ ಕೆಳಗೆ ಒಂದಾದುವೆಂದೂ ಇದಕ್ಕೆ ೨ನೆಯ ಪುಲಿಕೇಶಿಯ ಜಯವೇ ಬಹುಮಟ್ಟಿಗೆ ಕಾರಣವೆಂದೂ ಪಿ.ಬಿ. ದೇಸಾಯಿ ಹೇಳುತ್ತಾರೆ.[೧೨] ಪುಲಿಕೇಶಿಯು ಕನೋಜ್‌ನ ಹರ್ಷನನ್ನು ಸೋಲಿಸಿ ದಕ್ಷಿಣಾಪಥೇಶ್ವರನೆನಿಸಿಕೊಂಡ. ಆಗ (೭ನೆಯ ಶ.) ಇಡೀ ದಕ್ಷಿಣ ಭಾರತವೇ ಕನ್ನಡ ಅರಸನ ಆಳಿಕೆಯಿಂದಾಗಿ ಕರ್ನಾಟಕವಾಗಿತ್ತು. 'ಕರ್ನಾಟಕ' ಸೈನ್ಯವೂ ಆಗಲೇ ಪ್ರಸಿದ್ಧಿ ಹೊಂದಿದ್ದಿತು. ಬಾದಾಮಿ ಚಾಲುಕ್ಯರ ದೊರೆ ೨ನೆಯ ಕೀರ್ತಿವರ್ಮನ ಸೈನ್ಯವನ್ನು ರಾಷ್ಟ್ರಕೂಟರ ದಂತಿದುರ್ಗನು 'ಕರ್ನಾಟಕಂ ಬಲಮಚಿಂತ್ಯಮಜೇಯ ಮನ್ಯೈಃ ಭೃತ್ಯೈಃ ಕಿಯತ್ಯಸಿಯಃ ಸಹಸಾ ಜಿಗಾಯ'- ಎಂದು ಹೇಳುತ್ತಾನೆ. ಇಲ್ಲಿ 'ಕರ್ನಾಟಕ'ವು ದೇಶ ಸೂಚಿಯಾಗಿದೆ. 'ಕರ್ನಾಟಕ ಬಲಂ' ಎಂಬುದರಿಂದ ಬಾದಾಮಿ ಚಾಲುಕ್ಯರ ಆಳಿಕೆಗೊಳಪಟ್ಟಿದ್ದ ಬಾದಾಮಿ ಹಾಗೂ ಸುತ್ತಮುತ್ತಲಿನ ಪ್ರದೇಶವೂ 'ಕರ್ನಾಟ'ವೆನಿಸಿರಬೇಕು.

ಇವರ ಅಧೀನ ಪ್ರದೇಶಗಳು ನಂತರ ಪುನಃ ಕಲ್ಯಾಣಿ ಚಾಲುಕ್ಯರ ಕೈ ಸೇರಿ ಇವರೂ ಕುಂತಲಾಧಿಪತಿಗಳೆನಿಸಿದ್ದಾರೆ. ಇವರ ಕುಂತಲದೊಳಗೆ ಬನವಾಸಿ, ಪಾನುಂಗಲ್, ಪುಲಿಗೇಱೆ ಬೆಳ್ವೊಲ, ಕೂಂಡಿ, ವೇಣುಗ್ರಾಮ, ತೊಱಗಲೆ, ಕೆಳವಾಡಿ, ಕಿಸುಕಾಡು, ಬಾಗಡಗೆ, ತರ್ದವಾಡಿಗಳೂ ಸೇರಿದ್ದುವು. ನಂತರ ಬಂದ ಕಲಚುರಿಗಳು ಮಂಗಳವಾಡ (ಕೊಲ್ಲಾಪುರ ಜಿಲ್ಲೆಯ ಪಂಡರಾಪುರ ಗ್ರಾಮದ ಬಳಿಯ ಮಂಗಳವೇಢ)ದಿಂದ ಬಿಜಾಪುರ ಮತ್ತು ಸೊಲ್ಲಾಪುರವನ್ನೊಳಗೊಂಡ ತರ್ದವಾಡಿಯನ್ನು ಆಳಿದರು. ಕುಂತಲದ ಒಂದು ಭಾಗವಾದ ಕೂಂಡಿ-೩೦೦೦ವನ್ನು ಸೌಂದತ್ತಿಯ ರಟ್ಟರು ಆಳುತ್ತಿದ್ದರು. ಈ ಪ್ರದೇಶಕ್ಕೆ ಪಶ್ಚಿಮದಲ್ಲಿ ಶಿಲಾಹಾರರ ಕೊಲ್ಲಾಪುರ, ಉತ್ತರದಲ್ಲಿ ಕಳಚುರಿಗಳ ಮಂಗಳವೇಢೆ, ದಕ್ಷಿಣದಲ್ಲಿ ಕದಂಬರ ಗೋವೆ ಮತ್ತು ಪೂರ್ವದಲ್ಲಿ ಇಂದಿನ ಬೆಳಗಾಂ ಗಡಿಗಳಾಗಿದ್ದುವು.

ಕರ್ನಾಟಕಕ್ಕೆ ಅನ್ವಯಿಸುವ ಮತ್ತೊಂದು ಪ್ರಾಚೀನ ಶಬ್ದ ಮಹಿಷಮಂಡಲ. ಶಾಸನಗಳು ಇದನ್ನು ಮ(ಮಾ)ಹಿಷಿಕ, ಮಾಹಿಷ್ಮತಿ, ಮಹಿಷರಾಷ್ಟ್ರ, ಮಹಿಷ ವಿಷಯ, ಮೈಸುನಾಡು, ಮೈಸೆನಾಡು, ಮೈಸನಾಡು. ಮಯಿಸೂರು, ಮಹಿಸೂರು,... ಇತ್ಯಾದಿ ಹೆಸರುಗಳಿಂದ ಸೂಚಿಸುತ್ತವೆ. ಈ ಹೆಸರುಗಳೆಲ್ಲವು ಇಂದಿನ ಮೈಸೂರಿಗೆ ಅನ್ವಯಿಸುವುದರ ಬಗ್ಗೆ ರೈಸ್, ಫ್ಲೀಟ್ ಮತ್ತು ಆರ್. ನರಸಿಂಹಾಚಾರ್... ಚರ್ಚಿಸಿದ್ದಾರೆ. ಆಧುನಿಕ ಮೈಸೂರು ಮತ್ತು ಅದರ ಸುತ್ತಲಿನ ಸ್ಥಳವೇ ಈ ಮಹಿಷಮಂಡಲ. ಈ "ಮಹಿಷಿಕ ಇಲ್ಲವೆ ಮಹಿಷಮಂಡಲ ಎಂಬುದರ ಮೂಲಕ ಮಹಿಷ(ಮಹಿಷ್ಯ) ಎಂಬ ರಾಜಮನೆತನದ ಹೆಸರು ಬಂದಿರಬೇಕು. ಆ ಮನೆತನ ಹೈದರಾಬಾದ್ ಸಂಸ್ಥಾನದ ದಕ್ಷಿಣಭಾಗದಲ್ಲಿ ಆಳುತ್ತಿತ್ತು" ಎಂಬುದು ಡಾ॥ ಮೀರಾಷಿಯವರ ಅಭಿಪ್ರಾಯ, ಇದನ್ನು ಒಪ್ಪಿಕೊಂಡು ಡಿ.ಸಿ.ಸರ್ಕಾರ್ "ಅವರ ವಿವರಣೆ ಶಾಸನಾಧಾರಗಳು

---

೧೨. A History of Karnataka, Dharwar, P. 107

ಲಭ್ಯವಿರುವ ಮೈಸೂರು ಸಂಸ್ಥಾನಕ್ಕೆ ಹೊಂದಿಕೊಳ್ಳುವುದು'' ಎನ್ನುತ್ತಾರೆ. ಮತ್ತು 'ಮಹಿಷ' ಎಂಬ ಪ್ರಾಣಿಯನ್ನು ಲಾಂಛನವಾಗಿ ಹೊಂದಿದ್ದುದರಿಂದ ಆ ಜನ ಮತ್ತು ನಾಡಿಗೆ ಮಹಿಷ ಎಂಬ ಹೆಸರು ರೂಢಿಗೆ ಬಂದಿರಬೇಕು. ಆ ಜನರು ವಾಸಿಸುತ್ತಿದ್ದ ಹಲವು ನೆಲೆಗಳಿಗೂ ಆ ಹೆಸರೇ ಆಗಿರಬೇಕು. ನರ್ಮದೆಯ ದಂಡೆಯ ಮಾಹಿಷ್ಮತಿ ಎಂಬುದು ಸಹ ಆ ಹೆಸರು ಬರಲು ಕಾರಣವಾಗಿರಬೇಕೆನ್ನುತ್ತಾರೆ.

ಫ್ಲೀಟ್‌ರವರು ಈಗನ ಮೈಸೂರು ರಾಜ್ಯ ಹಾಗೂ ಜಿಲ್ಲೆ ಒಂದು ಕಾಲದಲ್ಲಿ ಮೈಸೂರು ಎಂಬ ಗ್ರಾಮವು ರಾಜಧಾನಿಯಾಗಿ ಬೆಳೆದುದರ ಫಲ ಎನ್ನುತ್ತಾರೆ. ರೈಸ್‌ರು ೧೧-೧೨ನೆಯ ಶತಮಾನದ ಶಾಸನಗಳ ಆಧಾರದಿಂದ ಮೈಸು ನಾಡು, ಮೈಸೂರ್ ನಾಡುಗಳನ್ನು ಗುರುತಿಸಿದ್ದಾರೆ.

ಗಂಗರ ಮಾರಸಿಂಹನ ಕ್ರಿ.ಶ. ೯೬೨ರ ದಾನಶಾಸನದಲ್ಲಿ 'ಮಯ್ಸೂರು' ಎಂದಿದೆ. ಈ ಶಾಸನದಲ್ಲಿ ಉಲ್ಲೇಖಗೊಂಡಿರುವ ದತ್ತಿಗ್ರಾಮವಾದ 'ಕಾದಲೂರು' ಮಂಡ್ಯ ತಾಲೂಕಿನ ಒಂದು ಗ್ರಾಮ. ಇದರ ಗಡಿಗಳನ್ನು ಗುರುತಿಸುವಾಗ ದಕ್ಷಿಣಕ್ಕೆ ಮಯ್ಸೂರು ಇದೆ ಎನ್ನಲಾಗಿದೆ. ಅದು ಈಗಿನ ಮೈಸೂರಿಗೇ ಅನ್ವಯಿಸುವುದರಲ್ಲಿ ಯಾವ ಸಂದೇಹಕ್ಕೂ ಆಸ್ಪದವಿಲ್ಲ. 'ನಂದಿಬೆಟ್ಟವು ಕರ್ಣಾಟದೇಶದ ಪೂರ್ವ ದಿಕ್ಕಿಗಿದೆ ಎಂದು ಒಂದು ಶಾಸನವು ತಿಳಿಸುತ್ತದೆ. ಇದನ್ನು ಗಮನಿಸಿದರೆ ಮೈಯ್ಸೂರು ನಾಡನ್ನೇ ಅದು ಕರ್ಣಾಟ ದೇಶವೆಂದು ಹೇಳುತ್ತಿದೆಯೆಂದು ಗ್ರಹಿಸಬೇಕಾಗಿದೆ. ಕ್ರಿ.ಶ. ೫ನೆಯ ಶತಮಾನಕ್ಕೆ ಸೇರಿದ ಹೆಬ್ಬೂಟ ಗ್ರಾಮದಲ್ಲಿ ದೊರೆತ ಶಾಸನವು 'ಮಹಿಷ ವಿಷಯದೊಳಗಿನ ಹೆಬ್ಬೂಟ ಗ್ರಾಮ...'ವೆನ್ನುತ್ತದೆ. ಹೆಬ್ಬಟವನ್ನೊಳಗೊಂಡ ತುಮಕೂರು ಮಹಿಷಮಂಡಲದ ವ್ಯಾಪ್ತಿಗೊಳಪಡುತ್ತಿತ್ತೆಂಬುದು ಇದರಿಂದ ದೃಢವಾಗುತ್ತದೆ. ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ೯೪೫ರ ಒಂದು ಶಾಸನದಲ್ಲಿಯೂ 'ಮಾಹಿಷ ವಿಷಯ'ವೆಂದಿದೆ. ಇದನ್ನು ಹುಲ್ಷ್ ಮತ್ತು ಕೆಲವು ವಿದ್ವಾಂಸರು ಇಂದಿನ ಮೈಸೂರು ಎಂದು ಗುರುತಿಸಿದರೆ, ಫ್ಲೀಟ್ ಬಿಜಾಪುರ ಜಿಲ್ಲೆಯೊಳಗಿನ ಒಂದು ಪ್ರಾಂತ್ಯವೆನ್ನುತ್ತಾರೆ.[೧೩]

ವಿದ್ವಾಂಸರು ಮೈಸುನಾಡು ಮತ್ತು ಮೈಸೂರನ್ನು ಏಕತ್ರಗೊಳಿಸಿದ್ದರೂ ಕೆಲವು ಶಾಸನಗಳು ಇವೆರಡೂ ಪ್ರತ್ಯೇಕ ಎಂಬ ಅಭಿಪ್ರಾಯ ಹುಟ್ಟಿಸುತ್ತವೆ. ಕುಮಾರಬೀಡಿನ ೧೨ನೆಯ ಶತಮಾನದ ಶಾಸನವು ಮೈಸುನಾಡಿನ ಒಂದು ಊರು ಮೈಸೂರು ಎಂದರೆ, ಮೈಸೂರು ನಗರದ ೧೪೯೯ರ ಶಾಸನವು 'ಮೈಸೂರು ಸ್ಥಳ'ದ 'ಮೈಸೂರು ಪುರ' ಎಂದು ಎರಡನ್ನೂ ಪ್ರತ್ಯೇಕವಾಗಿ ಹೇಳುತ್ತದೆ.[೧೪]

ವಿಷ್ಣುವರ್ಧನನ ಕಾಲದ ೧೧೨೮ರ ಶಾಸನವು[೧೫] ''ಮೈಸು ನಾಡು ಸ್ವಸ್ತಿಶ್ರೀ ಮಾರ್ಬಲದ

---

೧೩. G.S. Gai, Antiquity of Mysore, Cultural Profiles of Mysore City, Antropological Survey of India, Culculta, P. 9

೧೪. ಎಪಿಗ್ರಾಫಿಯ ಕರ್ನಾಟಿಕ, (ದ್ವಿತೀಯ ಮುದ್ರಣ,) ಮೈಸೂರು ೨೭, ಪು. ೧೭೭. 'ಮಈಸೂರು ಸ್ಥಳೇ ಗ್ರಾಮವರಂ ದಾಳಿಗಾಖ್ಯಂ ಸಸೀಮುಖಂ ಮಯಿಸೂರುಪಿರಾಧಿವಸಾಯ...'

೧೫. ಎ.ಕ. III ೧, ಮೈಸೂರು ಸಂ. ೧೬, ಕಾ: ೧೧೨೮ ಪು. ೧೦

ತೀರ್ಥಕ್ಕೆ'' ಎಂದು ಹೇಳುತ್ತದೆ. ಇಲ್ಲಿನ ಮಹಾಬಲತೀರ್ಥ ಎಂದರೆ ಮಹಾಬಲಾಚಲವೇ ಇಂದಿನ ಚಾಮುಂಡಿ ಬೆಟ್ಟ ಎನ್ನುತ್ತಾರೆ ಟಿ.ವಿ. ವೆಂಕಟಾಚಲ ಶಾಸ್ತ್ರೀ.[೧೬] ಇಮ್ಮಡಿ ವೀರಬಲ್ಲಾಳನ ಕಾಲದ ೧೧೭೫ರ ಶಾಸನವು ''ಮಯಿಸೂರ ಹೊಯ್ಸಳ ಗವುಂಡ...'' ಎನ್ನುವುದನ್ನು ಗಮನಿಸಿದಾಗ ಇದು ಹೇಳುತ್ತಿರುವುದು ಕರ್ನಾಟಕವನ್ನು ಕುರಿತೇ ಎನ್ನುವುದರಲ್ಲಿ ಸಂಶಯವಿಲ್ಲ. ''ಮೈಸೂರು ರಾಜ್ಯವೂ ಅದೇ ಹೆಸರಿನ ನಗರವೂ ೧೦ನೆಯ ಶತಕದ ಆರಂಭದಿಂದಲೇ ಇತಿಹಾಸದಲ್ಲಿ ಕಂಡುಬರುವದಂತೂ ನಿಜ. ಒಡೆಯರ ಕಾಲದಲ್ಲಿ ರಾಜ್ಯವಾಗಿ ರಾಜಧಾನಿಯಾಗಿ, ಮೈಸೂರು ಪ್ರಶಸ್ತಿಗೆ ಪಾತ್ರವಾದುದು ಅನಂತರದಲ್ಲಿ ಎದ್ದುತೋರುತ್ತದೆ. ಆಗ 'ಮಹೀಶೂರ ಪುರ'ವೂ ಮೈಸೂರು, ಮಹಿಷಪುರಗಳ ಜೊತೆಜೊತೆಗೆ ಕಾಣಿಸಿಕೊಂಡದ್ದು ಗಮನಕ್ಕೆ ಬರುತ್ತದೆ.'[೧೭]

ಇವುಗಳ ಆಧಾರದ ಮೇಲೆ ಮೈಸೂರು, ಮಹಿಷ ಮಂಡಲ...ಗಳೂ ಕರ್ನಾಟಕಕ್ಕೆ ಸಮಾನಾರ್ಥಕವಾಗಿ ಅನ್ವಯಿಸುತ್ತಿತ್ತೆಂದು ತಿಳಿದುಬರುತ್ತದೆ.

''೧೪-೧೫ ಶತಮಾನದಲ್ಲಿ ತೆಲುಗು ಮಾತನಾಡುವ ಜನರಿಂದ ತುಂಬಿದ್ದ ನೆಲದಲ್ಲಿ ೧/೩ ಭಾಗ ಕರ್ಣಾಟವೆನಿಸಿತ್ತು. ಕರ್ನೂಲ್ ಜಿಲ್ಲೆಯ ನಂದಿಕೋಟಕೂರ್ ತಾಲೂಕಿನ ೧೩೧೮ರ ಒಂದು ಶಾಸನದಲ್ಲಿ 'ಕನ್ನಾಡು' ಜಿಲ್ಲೆಯನ್ನು ಓರುಗಲ್ಲಿನ ಪ್ರತಾಪರುದ್ರನ ಪರವಾಗಿ ಮಹಾಸಾಮಂತ ಚಟುಕು ಮಹೇಶ್ವರ ರೆಡ್ಡಿ ನೋಡಿಕೊಳ್ಳುತ್ತಿದ್ದನೆಂದು ಹೇಳಿದೆ. ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಶಾಸನದಲ್ಲಿಯೂ 'ಕನ್ನಾಡು' ಜಿಲ್ಲೆಯ ಹೆಸರಿದೆ. ಈ ಶಾಸನ ಎರಡು ಶೈವ ಮಠಗಳ ಭೂಸ್ವಾಮ್ಯ ಕುರಿತಾಗಿ ಹೇಳುವಾಗ ಬಂದಿರುವ ಉಲ್ಲೇಖ. ಇದರಲ್ಲಿ 'ಕನ್ನಾಡು' ಜಿಲ್ಲೆಗೆ ಸೇರಿದ್ದೆಂದು ಹಲವು ಹಳ್ಳಿಗಳ ಹೆಸರನ್ನು ಹೇಳಿದೆ. ಇವುಗಳಲ್ಲಿ ಹೆಚ್ಚಿನವು ಕರ್ನೂಲ್ ಜಿಲ್ಲೆಯ ನಂದಿಕೋಟಕೂರ್ ಮತ್ತು ನಂದ್ಯಾಲ ತಾಲೂಕಿನವು. ಮೊದಲನೆಯ ವಿಕ್ರಮಾದಿತ್ಯನ ಹೈದರಾಬಾದ್ ತಾಮ್ರ ಪಟಗಳ ಕಣ್ಣ ವಿಷಯವೂ ಈ ಕನ್ನಾಡೂ ಒಂದೇ ಎಂದು ತಿಳಿಯುವುದಕ್ಕೆ ಸಾಧ್ಯವಿದೆ. ನಂದಿಕೋಟಕೂರಿನ ಪೂರ್ವ ದಿಕ್ಕಿನ ಮಗ್ಗುಲಲ್ಲಿ ಮಾರ್ಕಾಪೂರ್ ತಾಲೂಕಿಗೆ ಸೇರಿದ ಚಿಂತಕುಂಟವೇ ಪೂರ್ವೋಕ್ತ ತಾಮ್ರಶಾಸನದ ಕಣ್ಣ ವಿಷಯದ ಚಿಂತಕುಂಟವಾಗಿರಬೇಕು. ಹಾಗಾದರೆ ಕರ್ನೂಲ್ ಜಿಲ್ಲೆಯ ನಂದಿಕೋಟಕೂರ್, ನಂದ್ಯಾಲ, ಮಾರ್ಕಾಪೂರ್ ತಾಲೂಕಿನ ಭಾಗಗಳನ್ನು ಒಳಗೊಂಡಿದ್ದು ಕಣ್ಣ ವಿಷಯ. ವಿಜಯನಗರದ ರಾಯರ ಕಾಲದಲ್ಲಿ ಈ ಪ್ರಾಂತವು ಕರ್ನಾಟಕ ಸೀಮೆಯೆನಿಸಿತ್ತು ಎನ್ನುವುದನ್ನು ಸದಾಶಿವರಾಯನ ಕಾಲದ ೧೫೬೩ರ ಶಾಸನದಿಂದ ತಿಳಿಯಬಹುದು. ಇದನ್ನು ನೋಡಿದಾಗ ಶ್ರೀಶೈಲದ ಸಾನುಪ್ರದೇಶದ ಒಂದು ಚಿಕ್ಕ ಜಿಲ್ಲೆ, ಪ್ರಾಚೀನ ಕಾಲದಲ್ಲಿ ಕಣ್ಣ ವಿಷಯ, ಕನ್ನಾಡು, ಕರ್ನಾಟ ಸೀಮೆ ಎನಿಸಿತ್ತು ಎಂದು ತೋರುತ್ತದೆ'[೧೮]

---

೧೬. ನಮ್ಮ ಕರ್ನಾಟಕ, ಟಿ.ವಿ. ವೆಂಕಟಾಚಲ ಶಾಸ್ತ್ರೀ,(ಪ್ರಥಮ ಮುದ್ರಣ),ಕ.ಸಾ.ಪ. ಬೆಂಗಳೂರು, ೧೯೮೩, ಪು. ೫೬

೧೭. Histroy of Mysore, C. Hayavadana Rao, Vol . I, B'lore, 1943, P. 20-21

೧೮. ಕರ್ನಾಟಕ, JAHRS, X, P. 89

ಇಷ್ಟೆಲ್ಲ ಶಾಸನಾಧಾರಗಳು ಸಿಕ್ಕರೂ ಶಾತವಾಹನರಿಂದ ರಾಷ್ಟ್ರಕೂಟರವರೆಗೆ ಯಾರೂ ತಾವು ಕರ್ನಾಟಕದವರೆಂದು ಹೇಳಿಕೊಳ್ಳುವುದಿಲ್ಲ.

ರಾಷ್ಟ್ರಕೂಟರು ತೀವ್ರ ಕನ್ನಡಾಭಿಮಾನಿಗಳಾಗಿದ್ದರೆಂಬುದಕ್ಕೆ ಗುಜರಾತ್, ನವಸರಿ, ಬಡೋದೆಗಳಲ್ಲಿ ದೊರಕಿರುವ ಅವರ ತಾಮ್ರಪಟಗಳು ಸಾಕ್ಷಿಯಾಗಿವೆ. ಅವುಗಳು ಸಂಸ್ಕೃತ ಭಾಷೆ, ನಾಗರಿ ಲಿಪಿಯನ್ನೊಳಗೊಂಡಿದ್ದರೂ ಕೊನೆಯಲ್ಲಿ ಹಾಕಿರುವ ರಾಜರ ಒಪ್ಪ (ಸಹಿ) ಕನ್ನಡದಲ್ಲಿವೆ. ಇಷ್ಟಾದರೂ ಅವರು ಸ್ವತಃ ತಾವು ಕರ್ನಾಟಕದವರೆಂದೋ ಅಥವಾ ಕನ್ನಡಿಗರೆಂದೋ ಹೇಳಿಕೊಂಡಿಲ್ಲ.

ಹೊಯ್ಸಳರಲ್ಲಿ ಕನ್ನಡ-ಕರ್ನಾಟಕಾಭಿಮಾನಗಳು ಉತ್ಕಟವಾಗಿ ತಲೆದೋರುತ್ತದೆ. ರಾಜ, ಮಂತ್ರಿ, ಅಧಿಕಾರಿ, ಸೇನಾನಿ, ಪಂಡಿತರಿಂದ ಹಿಡಿದು ಸಾಮಾನ್ಯ ಜನರವರೆಗೆ ಎಲ್ಲರಿಗೂ ತಾವು ಕರ್ನಾಟಕದವರೆಂದುಕೊಳ್ಳುವ ಬಯಕೆ. 'ಕರ್ಣಾಟ ಕುಳಮಳ ಮಾರ್ತಾಂಡ ಹೆಗ್ಗಡೆ ಗೋವಿಂದಮಯ್ಯ ಕರ್ಣಾಟ ವಂಶೋದ್ಭವಂ..', 'ಕರ್ಣಾಟ ಕುಳಕಮಳ ಕ್ಷಂಡ ಮಂಡನ ಪ್ರಚಂಡ ಮಾರ್ತ್ತಾಂಡ ಗೋವಿಂದರಾಜಾನುಜಂ...' ಇತ್ಯಾದಿಯಾಗಿ ಹೇಳಕೊಳ್ಳುತ್ತಾರೆ. ಸಾಮಾನ್ಯ ಸೈನಿಕರೂ ಕೂಡ ತಮ್ಮನ್ನು 'ಕನ್ನಡಿಗ ಮೊನೆಯಾಳುಗಳು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈ ಕಾಲಾವಧಿಯಲ್ಲಿ ಕನ್ನಡ-ಕರ್ನಾಟಕವೆಂಬ ಅಭಿಮಾನ ಹೋರಾಡಲು ಸ್ಫೂರ್ತಿಯಾಯಿತು. ಪರಕೀಯರ ಆಕ್ರಮಣಗಳು ಕನ್ನಡಿಗರಿಗೆ ತಮ್ಮ ಅಭಿಮಾನವನ್ನು ಪ್ರಕಟಿಸುವ ಅವಕಾಶ ಮಾಡಿಕೊಟ್ಟವು.

ಕರ್ನಾಟಕದ ಮೊದಲಿನ ದೊರೆಗಳಾದ ಕದಂಬರು ತಮ್ಮನ್ನು ವೈಜಯನ್ತೀ ಪುರವರಾಧೀಶ್ವರರೆಂದು ಕರೆದುಕೊಂಡಿದ್ದಾರೆ. ವೈಜಯನ್ತೀಪುರಕ್ಕೆ ಇಂದಿನ ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ ಹಾಗೂ ಹಲಸಿ, ಬನವಾಸಿ ಮತ್ತು ಉಚ್ಚಂಗಿದುರ್ಗಗಳು ಸೇರಿದ್ದುವು. ಕನ್ನಡಿಗರಾದ ಕದಂಬರು ಆಳಲಾರಂಭಿಸಿದ ಮೇಲೆ ಕನ್ನಡದ ಅಭಿಮಾನವೂ ತಲೆದೋರಿತು ಎನ್ನುತ್ತಾರೆ ಎಂ. ಚಿದಾನಂದಮೂರ್ತಿ ಅವರು. ಉತ್ತರ ಕಾಲೀನ ಕದಂಬರು ಕೊಂಕಣ-೯೦೦೦, ಪಲಸಿಗೆ-೧೨,೦೦೦ವನ್ನು ವಂಶಪಾರಂಪರ್ಯವಾಗಿ ಆಳಿದರು. ಗೋವೆಯ ಚಂದೋರ್ ಇವರ ರಾಜಧಾನಿ ಯಾದ್ದರಿಂದ ಇವರನ್ನು ಗೋವೆಯ ಕದಂಬರೆನ್ನುತ್ತಾರೆ. ಮತ್ತೊಂದು ಶಾಖೆ ಧಾರವಾಡದ ಹಾನಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬನವಾಸಿ ಪ್ರಾಂತ್ಯವನ್ನಾಳಿದರು. ಇವರು ಹಾನಗಲ್ಲಿನ ಕದಂಬರು. ಕದಂಬರ ನಂತರ ಬೊಂಬಾಯಿಯ ದಕ್ಷಿಣ ಭಾಗ ಮತ್ತು ಹಳೇಮೈಸೂರು ರಾಜ್ಯದ ಜಿಲ್ಲೆಗಳ ನಡುವೆ ಕರ್ನಾಟಕ ತನ್ನ ವ್ಯಾಪ್ತಿಯನ್ನು ಪಡೆದಿತ್ತು. ಒಟ್ಟಾರೆಯಾಗಿ ಕದಂಬರ ಆಳಿಕೆ ಈಗಿನ ಕರ್ನಾಟಕದ ಪ್ರದೇಶ ಮತ್ತು ನೆರೆಯ ಮಹಾರಾಷ್ಟ್ರದ ಕೆಲವು ಭಾಗಗಳನ್ನೂ ಒಳಗೊಂಡಿದ್ದರೆ ಇವರಿಗಿಂತ ಮೊದಲಿದ್ದ ಶಾತವಾಹನರ ಅಧಿಪತ್ಯದಲ್ಲಿ ಬನವಾಸಿ, ಕೊಲ್ಹಾಪುರ ಮತ್ತು ಚಿತ್ರದುರ್ಗದವರೆಗೂ ಹಬ್ಬಿದ್ದಿತು.

ಕದಂಬರ ಸಮಕಾಲೀನರಾಗಿದ್ದ ಗಂಗರ ಗಂಗವಾಡಿ-೯೬,೦೦೦ದೊಳಗೆ ಮೊದಲಿಗೆ ಪಶ್ಚಿಮದಲ್ಲಿ ಕದಂಬರ ಮತ್ತು ಪೂರ್ವದಲ್ಲಿ ಪಲ್ಲವರ ರಾಜ್ಯಗಳೂ ನಡುವೆ ಅನಂತಪುರ ಮತ್ತು ಕಡಪ ಜಿಲ್ಲೆಗಳನ್ನು ಒಳಗೊಂಡಿದ್ದು ಕುವಲಾಲಪುರ ರಾಜಧಾನಿಯಾಗಿತ್ತು. ಅನಂತರ

ಬೆಂಗಳೂರು, ತುಮಕೂರು, ಕೊಡಗು, ಮೈಸೂರು, ಕೊಯಮತ್ತೂರು, ಸೇಲಂ ಜಿಲ್ಲೆಗಳನ್ನು ವಶಪಡಿಸಿಕೊಂಡ ಮೇಲೆ ತಲಕಾಡು ರಾಜಧಾನಿಯಾಯಿತು. ೭ನೆಯ ಶತಮಾನದಲ್ಲಿ ಚನ್ನಪಟ್ಟಣದ ಬಳಿಯ ಮಾನ್ಯಕೊಂಡ ಬಳಿಕ ನೆಲಮಂಗಲ ತಾಲೂಕಿನ ಮಾನಪುರ (ಇಂದಿನ ಮಣ್ಣೆ) ರಾಜಧಾನಿಯಾಯಿತು.

ನೊಳಂಬರ ಕಾಲದಲ್ಲಿ ಕನ್ನಡ ನಾಡು ನೊಳಂಬಳಿಗೆ/ನೊಳಂಬಳಿಗೆ-೩೨,೦೦೦ ಎಂದೇ ಖ್ಯಾತವಾಗಿತ್ತು. ಆಗ ಕರ್ನಾಟಕದ ವ್ಯಾಪ್ತಿಗೆ ತುಮಕೂರು, ಚಿತ್ರದುರ್ಗ, ಬಳ್ಳಾರಿ, ಅನಂತಪುರ, ಕೋಲಾರ, ಬೆಂಗಳೂರು ಜಿಲ್ಲೆಗಳು ಸೇರಿದ್ದು ಸಿರಾ ತಾಲೂಕಿನ ಉತ್ತರದಲ್ಲಿದ್ದ ಹೆಂಜೇರು ಅಥವಾ ಹೇಮಾವತಿ ಮೊದಲ ರಾಜಧಾನಿಯಾಗಿತ್ತು.

ಕದಂಬರು, ಗಂಗರು, ಆಳುಪರು, ಹೈಹಯರು.... ಇತ್ಯಾದಿ ರಾಜಮನೆತನಗಳು ಆಳಿಕೆಯಲ್ಲಿ ಭಾಗಭಾಗವಾಗಿದ್ದ ಕನ್ನಡನಾಡು ಬಾದಾಮಿ ಚಾಲುಕ್ಯರ ಕಾಲದಲ್ಲಿ ಏಕತ್ರವಾಯಿತು. ಇವರ ಕಾಲದಲ್ಲಿ ಕನ್ನಡನಾಡಿನ ಗಡಿಗಳು ಉತ್ತರದಲ್ಲಿ ನರ್ಮದೆಯವರೆಗೂ ಪೂರ್ವದಲ್ಲಿ ಕರ್ನೂಲು, ಗುಂಟೂರು ಮತ್ತು ನೆಲ್ಲೂರು, ದಕ್ಷಿಣದಲ್ಲಿ ಕಾವೇರಿ ಮತ್ತು ಪಶ್ಚಿಮದಲ್ಲಿ ಅರಬ್ಬೀ ಸಮುದ್ರವರೆಗೂ ವ್ಯಾಪಿಸಿತ್ತು. ಇವರು ಬೊಂಬಾಯಿ, ಹೈದರಾಬಾದು ಮತ್ತು ಮೈಸೂರಿನ ವಾಯುವ್ಯ ಪ್ರಾಂತ್ಯವನ್ನಾಳಿದರು.

೮-೧೧ನೆಯ ಶತಮಾನದಲ್ಲಿ ಆಳಿದ ರಾಷ್ಟ್ರಕೂಟರು ಕ್ರಮವಾಗಿ ಉಸ್ಮಾನಾಬಾದ್ ಜಿಲ್ಲೆಯ ಲಟ್ಟಲೂರು (ಲಾಟೂರು), ನಾಸಿಕ್ ಜಿಲ್ಲೆಯ ಮಯೂರಖಂಡಿ, ಗುಲ್ಬರ್ಗದ ಬಳಿಯ ಮಾನ್ಯಖೇಟಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡು ನರ್ಮದೆಯಿಂದ ಕಾವೇರಿಯವರೆಗಿನ ಭೂಭಾಗವನ್ನು ತಮ್ಮ ನೇರ ಆಳಿಕೆಗೊಳಪಡಿಸಿಕೊಂಡರು. ಗುಜರಾತ್, ಮಾಳವ, ಆಂಧ್ರ, ತಂಜಾವೂರ್, ಮೇಲೂ ಅಧಿಕಾರ ಸ್ಥಾಪಿಸಿದರು. ರಾಷ್ಟ್ರಕೂಟರ ೩ನೆಯ ಕೃಷ್ಣ ಸಿಂಹಳ ದ್ವೀಪದ ಮೇಲೆ ಹೋಗಿ ಕಪ್ಪ ಪಡೆದು ಹಿಂದಿರುಗಿದ್ದನು. ನಂತರ ವಿಜಯನಗರದ ಅರಸರ ಆಳಿಕೆಯಲ್ಲಿ ಸಿಂಹಳದ ಅರಸರು ಕಪ್ಪಕಾಣಿಕೆ ನೀಡಿ ಮಾಂಡಲಿಕರಾಗಿದ್ದರು. ೯ನೆಯ ಶತಮಾನದಲ್ಲಿ ಉತ್ತರದಲ್ಲಿ ನಾಸಿಕದವರೆಗೆ ಕರ್ನಾಟಕದ ಭಾಗವಿದ್ದು ಪಿಟರ್ನಿಕ (ಪೈಠಾಣ) ಇವೆಲ್ಲವೂ ಕನ್ನಡ ನಾಡಿನ ಭಾಗವೇ ಆಗಿದ್ದವು.

ಹೊಯ್ಸಳರು ಸಾಮ್ರಾಟರಾಗುವ ಮುನ್ನ ಪ್ರಾಮುಖ್ಯ ಹೊಂದಿದ್ದ ದೇವಗಿರಿಯ ಯಾದವರ ಆಳಿಕೆಗೆ ಇಂದಿನ ಶಿವಮೊಗ್ಗ, ಹಾಸನ, ಚಿತ್ರದುರ್ಗ, ಧಾರವಾಡ, ಬಿಜಾಪುರ, ರಾಯಚೂರು, ಬೀದರ್, ಬಳ್ಳಾರಿ, ಕಲ್ಯಾಣ, ಕಿಸುಕಾಡುನಾಡು (ಇಂದಿನ ಎಲ್ಬುರ್ಗಿ, ಲಿಂಗಸುಗೂರು, ರಾಯಚೂರು ಜಿಲ್ಲೆ), ತರ್ದವಾಡಿ ನಾಡು (ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕು), ಬೆಳ್ವೊಲ (ಗದಗ ಮತ್ತು ಸುತ್ತಮುತ್ತಲಿನ ಪ್ರದೇಶ)ಗಳು ಒಳಪಟ್ಟಿದ್ದುವು

ಹೊಯ್ಸಳರ ಆಳಿಕೆಗೆ ಕೊಂಗು(ಸೇಲಂ), ನಂಗಲಿ (ಕೋಲಾರ ಜಿಲ್ಲೆಯ ಪೂರ್ವ ಭಾಗ), ಕಿಸುಕಾಡು, ಗಂಗವಾಡಿ, ನೊಳಂಬವಾಡಿ, ಬನವಾಸಿ, ಹಾನುಗಲ್ಲು, ಪುಲಿಗೆಱೆ, ಹಲಸಿ, ಬೆಳ್ವೊಲಗಳು ಸೇರಿದ್ದವು. ಸೇವುಣ ಸಿಂಘಣನ ಶಾಸನದಲ್ಲಿ ಹೊಯ್ಸಳ ದೊರೆಯನ್ನು

'ಕರ್ಣಾಟ ಕ್ಷಿತಿಪಾಳ'[೧೯] ನೆನ್ನಲಾಗಿದೆ. ಅಂದರೆ ಮೇಲಿನ ಎಲ್ಲ ಪ್ರದೇಶಗಳೂ ಕರ್ಣಾಟಕದ ವ್ಯಾಪ್ತಿಗೊಳಪಡುತ್ತಿದ್ದವು ಎನ್ನಬಹುದು.

ವಿಜಯನಗರದ ಅರಸರಿಗೆ 'ಕರ್ಣಾಟ ವಿದ್ಯಾವಿಳಾಸ', 'ಕರ್ಣಾಟ ರಾಜ್ಯ ರಮಾರಮಣ' 'ಕರ್ನಾಟ ಕುಳ ಕಮಳ ಮಾರ್ತಾಂಡ', 'ಕರ್ಣಾಟ' 'ಚಕ್ರವರ್ತಿ'- ಇತ್ಯಾದ ಬಿರುದುಗಳಿವೆ. ಇವರು ತೀವ್ರ ಕನ್ನಡಾಭಿಮಾನಿಗಳು. ಚಿಕ್ಕದೇವರಾಯನ ೧೬೭೫ರ ಶಾಸನವು ಕರ್ಣಾಟ ಸಾಮ್ರಾಜ್ಯ ಸಿಂಹಾಸನವನ್ನಾಳುತ್ತಿದ್ದನೆನ್ನುತ್ತದೆ. ಶ್ರೀ ಕೃಷ್ಣದೇವರಾಯ, ಒಡೆಯರ ಶಾಸನಗಳಲ್ಲಿ 'ಶ್ರೀ ಮತ್ಸಮಸ್ತ ಭೂಮಂಡಲ ಮಂಡನಾಯಮಾನನಿಖಿಳ ದೇಶಾವತಂಸ ಕರ್ನಾಟಕ ಜನಪದ ಸಂಪದಭಿಷ್ಠಾನ ಭೂತ ಶ್ರೀಮನ್ಮಹೀಶೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನ ವಿಕಲಕಳಾನಿಧಿ' ಎಂಬ ಮಾತು ಸಾಮಾನ್ಯವಾಗಿ ಎಲ್ಲ ಶಾಸನಗಳಲ್ಲೂ ಕಾಣಸಿಕೊಳ್ಳುತ್ತದೆ. ತಿರುಮಲರಾಯನು 'ಕರ್ಣಾಟ ಕನಕ ಸಿಂಹಾಸನ'ವನ್ನಲಂಕರಿಸಿ ಆಳಿದನೆಂಬ ಮಾತು ಆ ಶಾಸನಗಳಲ್ಲಿ ಸಿಗುತ್ತದೆ. 'ಸಂಗಮ' ದೊರೆಯಿಂದ 'ಕರ್ಣಾಟ ದೇಶ ಶ್ರೀ' 'ಸ್ಥಿರ ತಾಟಂಕವತೀ, 'ಆದಳೆಂದೂ; ವಿರೂಪಾಕ್ಷನೆಂಬ ಅರಸನು' 'ಕರ್ನಾಟೇಶ್ವರ ರಾಯ ಕುಂಜರ'ನೆಂದು ಖ್ಯಾತನಾಗಿದ್ದನೆಂದೂ (ಎ.ಕ. xii, ಪು, ೬೯; ಎ.ಕ. iii, ಎಂ.ಎಲ್. ೧೨೧) ವಿಜಯನಗರದ ಅರಸರ ಶಾಸನಗಳು ಪ್ರಶಸ್ತಿಸುತ್ತವೆ. ತಾಳೀಕೋಟೆ ಯುದ್ಧದ ಬಳಿಕ ಅವರ ಸೀಮೆ ಕುಗ್ಗಿದರೂ ಅವರು ತಮ್ಮನ್ನು ಕರ್ಣಾಟಕ ರಾಯರೆಂದೇ ಕರೆದುಕೊಳ್ಳುತ್ತಿದ್ದರು.

ವಿಜಯನಗರದ ಅರಸರ ಕಾಲದಲ್ಲಿ ಸಾಮ್ರಾಜ್ಯ ವಿಸ್ತರಿಸಿದಂತೆ ದಖನ್ನಿನ ಬಹುಭಾಗಕ್ಕೆ 'ಕರ್ಣಾಟ' ಎಂಬ ಹೆಸರೂ ಹಬ್ಬಿತು. 'ಕರ್ನಾಟ ವಿದ್ಯಾವಿಳಾಸನೂ 'ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಸಮುದ್ರಾಧಿಪತಿಯೂ ಆದ ಶ್ರೀ ಹರಿಹರರಾಯನು ಆರಗ, ಗುತ್ತಿ, ಬಾರಕೂರ, ಮಂಗಳೂರು ಪ. ಸಮುದ್ರಾಂತವಾಗಿ ಕರ್ಣಾಟ ರಾಜ್ಯವನ್ನು ಅದೇ ಪಾಲಿಸಿಯಿಹ ಸಮಯದಲ್ಲಿ'- ಎಂದಿರುವುದರಿಂದ ಆಗಿನ ಕರ್ನಾಟಕದ ವ್ಯಾಪ್ತಿ, ಇಂದಿನ ಕರ್ನಾಟಕದ ಉತ್ತರ, ದಕ್ಷಿಣ, ದಿಸೆಗಳನ್ನು ಸಮಗ್ರವಾಗಿ ವ್ಯಾಪಿಸಿದ್ದುದು ವಿಶದವಾಗುತ್ತದೆ.

ತುಂಗಭದ್ರಾ ತೀರದ ವಿಜಯನಗರವನ್ನು ರಾಜಧಾನಿ ಮಾಡಿಕೊಂಡ ವಿ.ನ.ದ ಅರಸರ ಅಧೀನದಲ್ಲಿ ಬಂಕಾಪುರ. ರಾಯಚೂರು, ಆದವಾನಿ, ಭಟ್ಕಳ, ಹೊನ್ನಾವರ, ಅಂಕೋಲ, ಮಂಗಳೂರು, ಪೆನುಗೊಂಡೆ, ಇಕ್ಕೇರಿ, ದೋರಸಮುದ್ರ ಶ್ರೀರಂಗ ಪಟ್ಟಣಗಳಿದ್ದುವು. ಕೃಷ್ಣದೇವರಾಯನ ಕಾಲದಲ್ಲಿ ಒರಿಸ್ಸದಿಂದ ಸಿಂಹಳದವರೆಗೂ ವ್ಯಾಪಿಸಿತು. ಪೆನುಗೊಂಡ, ಚಂದ್ರಗಿರಿ, ವೆಲ್ಲೂರು, ಇವರ ನಂತರದ ರಾಜಧಾನಿಗಳಾದರೂ ಇವರು ಕರ್ನಾಟಕದ ರಾಜರೆಂದೇ ಕೀರ್ತಿತರಾಗಿದ್ದಾರೆ/ಪ್ರಶಂಸಿಸಿ ಕೊಂಡಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಪತನಾನಂತರ ಈ ನಾಡಿನ ವ್ಯಾಪ್ತಿ ಬಹುಮಟ್ಟಿಗೆ ಕ್ರಮೇಣ ಕಡಿಮೆಯಾಗುತ್ತಾ ಸಾಗಿದೆ. ಶಾತವಾಹನರ ಕಾಲದಲ್ಲಿ ಉತ್ತರದ ಮೇರೆ ರಾಜಧಾನಿ ಗೋದಾವರಿ

---

೧೯. ಎ.ಕ. VII, ಶಿಕಾರಿಪುರ ೯೫, ಪು. ೧೭೭ (ಪ್ರಥಮ ಮುದ್ರಣ)

ತೀರದ ಪೈಠಣದಲ್ಲಿದ್ದುದು ಹೊಯ್ಸಳರ ವೇಳೆಗೆ ತುಂಗಾ-ಕೃಷ್ಣಾ ತೀರಕ್ಕಿಳಿಯಿತು. ವಿಜಯನಗರದ ಕಾಲದಲ್ಲೂ ತುಂಗಾತೀರವೇ ಗಡಿಯಾಗಿತ್ತು. ರಕ್ಕಸತಂಗಡಿ ಕದನಾನಂತರ ಉತ್ತರ ಕರ್ನಾಟಕದ ಪೇಶ್ವೆಯವರ ಸ್ವಾಧೀನವಾಯಿತು. ೯ನೆಯ ಶತಮಾನದಲ್ಲಿ ನಾಸಿಕದವರೆಗೆ ಕರ್ನಾಟಕದ ಭಾಗವಿದ್ದು ಪೂರ್ವ ದಿಕ್ಕಿನಲ್ಲಿ ಅರಬ್ಬೀ ಸಮುದ್ರ ಕೊನೆಯ ಸೀಮೆಯಾದರೆ, ಉತ್ತರದಲ್ಲಿ ಇಂದಿನ ಮಹಾರಾಷ್ಟ್ರದ ಗೋದಾವರಿಯಾಗಿತ್ತು.

ಕರ್ನಾಟಕದ ಅರಸರು ಕೆಲವೊಮ್ಮೆ ಹೊರರಾಜ್ಯಗಳಿಗೆ ಹೋದಾಗಲೂ ತಮ್ಮನ್ನು ಕರ್ನಾಟಕದವರೆಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಮಿಥಿಲೆ ನೇಪಾಲಗಳನ್ನಾಳಿದ (೧೦೯೭-೧೧೦೪) ಕನ್ನಡ ಅರಸರು 'ಕರ್ನಾಟಕ ಕುಲ ಭೂಷಣ'ರೆನಿಸಿಕೊಂಡಿದ್ದಾರೆ. ಬಂಗಾಲ ಪ್ರಾಂತ್ಯವನ್ನಾಳಿದವರು (೧೦೯೪-೧೧೫೮) 'ಕರ್ನಾಟಕ ಕ್ಷತ್ರಿಯ ಕುಲ ಶಿರೋಮಣಿ' ಗಳೆಂದು ಕೊಂಡಿದ್ದಾರೆ.

ಇದುವರೆಗೂ ನಾವು ನೋಡಿದ ವಿವಿಧ ರಾಜಮನೆತನಗಳ ಆಳಿಕೆಗೊಳಪಟ್ಟ ಪ್ರದೇಶಗಳೆಲ್ಲವೂ ಕನ್ನಡ ನಾಡು ಎನಿಸಿಕೊಂಡರೂ ಕರ್ನಾಟಕವನ್ನಾಳಿದ ನವಾಬರ ಕಾಲದಲ್ಲಿ 'ಕರ್ನಾಟಕ' ಎಂಬ ಶಬ್ದ ತಪ್ಪುಕಲ್ಪನೆಯೊಂದಿಗೆ ಪ್ರಯೋಗವಾಗಿದೆ. ರಾಬರ್ಟ್ ಕಾಲ್ಡ್‌ವೆಲ್ ತಮ್ಮ ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ ಗ್ರಂಥದಲ್ಲಿ ಈ ತಪ್ಪು ಕಲ್ಪನೆಯನ್ನು ವಿವರಿಸಿರುವುದನ್ನು ರಾ. ನರಸಿಂಹಾಚಾರ್ಯರು ತಮ್ಮ ಕರ್ನಾಟಕ ಕವಿ ಚರಿತೆಯಲ್ಲಿ ಕನ್ನಡೀಕರಿಸಿದ್ದಾರೆ. 'ಪೂರ್ವದಲ್ಲಿ ಕರ್ನಾಟಕ ಎಂಬುದು ದಕ್ಷಿಣ ಹಿಂದೂ ದೇಶದ ಎತ್ತರವಾದ ಪ್ರಾಂತಕ್ಕೆ ಹೆಸರಾಗಿದ್ದಿತು. ಈಚೆಗೆ ವಿದೇಶಿಗಳ ಕೈಗೆ ಸಿಕ್ಕಿ ವಿಪರೀತಾರ್ಥವನ್ನು ಹೊಂದಿತು. ಮಹಮ್ಮದೀಯರು ಮೊದಲು ಮೊದಲು ದಕ್ಷಿಣ ಹಿಂದೂ ದೇಶಕ್ಕೆ ಬಂದಾಗ ಮೈಸೂರು, ತೆಲುಗು ದೇಶಗಳಲ್ಲಿ ಸ್ವಲ್ಪ ಭಾಗ-ಇವುಗಳನ್ನು ಒಳಗೊಂಡ ಘಟ್ಟದ ಮೇಗಣ ದೇಶಕ್ಕೆ 'ಕರ್ನಾಟಕ' ಎಂಬ ಹೆಸರು ಇದ್ದಿತು. ಕಾಲಕ್ರಮದಲ್ಲಿ ಅವರು ಈ ಹೆಸರನ್ನು ಘಟ್ಟದ ಕೆಳಗಣ ದೇಶಕ್ಕೂ ಕೊಟ್ಟರು. ತರುವಾಯ ಇಂಗ್ಲಿಷರು 'ಕರ್ನಾಟಿಕ್' ಎಂಬ ಹೆಸರನ್ನು ಆ ಹೆಸರಿಗೆ ಸಂಬಂಧವೇ ಇಲ್ಲದ ಘಟ್ಟದ ಕೆಳಗಣ ದೇಶಕ್ಕೆ ಮಾತ್ರ ಇಟ್ಟರು. ಆಗ 'ಕರ್ನಾಟಿಕ್' ಎಂಬುದು ಪೂರ್ವದ ಅರ್ಥವನ್ನು ಕಳೆದುಕೊಂಡು ತಮಿಳುದೇಶ, ತೆಲುಗುದೇಶದ ನೆಲ್ಲೂರು ಜಿಲ್ಲೆಗಳನ್ನು ಒಳಗೊಂಡ ಪೂರ್ವ ತೀರದ ಸಮುದ್ರದ ಬಳಿಯ ಘಟ್ಟದ ಕೆಳಗಣ ಪ್ರಾಂತ್ಯಕ್ಕೆ ಮಾತ್ರ ಅನ್ವಯಿಸುತ್ತಿತ್ತು. ಅದರೊಂದಿಗೆ ೧೯ನೆಯ ಶತಮಾನದಲ್ಲಿ ಕರ್ನಾಟಕದ ಬಹುಪಾಲು ಪ್ರದೇಶಗಳು ಮದರಾಸು, ಬಾಂಬೆ, ಹೈದರಾಬಾದು ಪ್ರೆಸಿಡೆನ್ಸಿಯಲ್ಲಿ ಸೇರಿಹೋಗಿತ್ತು. ಕೊಡಗು ಮತ್ತು ಮೈಸೂರು ಮಾತ್ರ ಕನ್ನಡನಾಡಿಗೆ ಸೇರಿತ್ತು.

೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ವಿಭಜನೆಯಾದ ಮೇಲೆ (ಅನಂತಪುರ,

ನೀಲಗಿರಿ, ಗೋವಾ, ಸೊಲ್ಲಾಪುರ, ಕೊಲ್ಲಾಪುರ, ನಾಂದೇಡ್... ಗಳಲ್ಲಿ ಅನ್ಯಭಾಷೀಯರು ನೆಲೆಸಿ ಕರ್ನಾಟಕ ಕೈ ತಪ್ಪಿ ಹೋದರೂ), ಮೇಲೆ ಹೇಳಿದಂಥ ತಪ್ಪು ಕಲ್ಪನೆಗೆ ಅವಕಾಶವಿಲ್ಲವಾಗಿದೆ.

ಇದುವರೆಗೆ ಶಾಸನಗಳ ಆಧಾರದ ಮೇಲೆ ಕನ್ನಡನಾಡಿನ ಪರಿಕಲ್ಪನೆ, ಅಂದಿನ ನಾಡಿನ ಬಗ್ಗೆ ಜನರ ಅಭಿಪ್ರಾಯ ಹಾಗೂ ಅವರು ಗುರುತಿಸುತ್ತಿದ್ದ ನಾಡಿನ ಹೆಸರು ಮತ್ತು ಕನ್ನಡ ನಾಡಿನ ಅರಸರ ಆಳಿಕೆಗೊಳಪಟ್ಟ ಪ್ರದೇಶಗಳನ್ನು ಗಮನಿಸಿ ಅವೆಲ್ಲವೂ ಒಂದು ಕಾಲದಲ್ಲಿ ಕರ್ನಾಟಕವಾಗಿತ್ತು ಎಂದು ಸೂಚಿಸಲಾಗಿದೆ.

ನಾಡು-ನುಡಿಯ ಬಗೆಗಿದ್ದ ಅಭಿಮಾನವನ್ನು ಗುರುತಿಸುವುದರೊಂದಿಗೆ ಇಂದಿನ ನಮ್ಮ ಅಭಿಮಾನವನ್ನೂ ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಇದೊಂದು ಕಿರು ಪ್ರಯತ್ನವಾಗಿದೆ.

ಕನ್ನಡ ನಾಡು-ನುಡಿ ಒಂದು ಚಿಂತನೆ

ಬೈರಮಂಗಲ ರಾಮೇಗೌಡ

ಭರತಖಂಡದ ವಿಶಾಲವಾದ ಆಗಸದಲ್ಲಿ ಬೆಳ್ಳಿ ನಕ್ಷತ್ರದಂತೆ ಮಿನುಗುತ್ತಿರುವ ಕರ್ನಾಟಕಕ್ಕೆ ಅತ್ಯಂತ ಉಜ್ವಲವಾದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಿದೆ. 'ಕರ್ನಾಟಕ' ಎಂಬ ಹೆಸರು ವ್ಯಾಸ ಮಹಾಭಾರತದಲ್ಲೇ ಉಲ್ಲೇಖವಾಗಿದೆ. ಕಪ್ಪು ಮಣ್ಣಿನ ನಾಡು ಎಂಬ ಪದಗಳಿಂದ 'ಕರ್ನಾಟಕ'ವಾಗಿದೆಯೆಂದೂ 'ಕರುನಾಡು' ಅಂದರೆ ಎತ್ತರವಾದ ಭೂಮಿಯನ್ನು ಹೊಂದಿರುವ ನಾಡು ಎಂಬುದೇ ಕರ್ನಾಟಕವಾಗಿದೆಯೆಂದೂ 'ಕಮ್ಮಿತ್ತು ನಾಡು' ಅಂದರೆ ಶ್ರೀಗಂಧದ ಕಂಪಿನಿಂದ ಕೂಡಿದ ನಾಡು ಎಂಬುದರಿಂದ ಕರ್ನಾಟಕವಾಗಿದೆಯೆಂದೂ ವಿದ್ವಾಂಸರು-ಸಂಶೋಧಕರು ಅಭಿಪ್ರಾಯಪಡುತ್ತಾರೆ. ಕ್ರಿ.ಪೂ. ೩ನೆಯ ಶತಮಾನದ ಅಶೋಕನ ಆಳ್ವಿಕೆಗೆ ಕರ್ನಾಟಕದ ಬಹುಭಾಗಗಳು ಒಳಪಟ್ಟಿದ್ದು ಅವನ ಎಂಟು ಶಾಸನಗಳು ರಾಯಚೂರು, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಸಿಕ್ಕಿವೆ. ಮೌರ್ಯರು, ಶಾತವಾಹನರು, ಕಂಚಿಯ ಪಲ್ಲವರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ದೇವಗಿರಿ ಯಾದವರು, ವಿಜಯನಗರದ ಅರಸರು, ಮುಸ್ಲಿಮ್ ದೊರೆಗಳು, ಕೆಳದಿ ಅರಸರು, ಮೈಸೂರು ಅರಸರು, ಹೈದರ್, ಟಿಪ್ಪು ಕರ್ನಾಟಕದ ವಿವಿಧ ಭಾಗಗಳಲ್ಲಿ ಆಳ್ವಿಕೆ ನಡೆಸಿದ್ದಾರೆ. ಕನ್ನಡ ಭಾಷೆಯೂ ಬಹು ಪ್ರಾಚೀನವಾದುದಾಗಿದ್ದು ಕೆಲವು ಕನ್ನಡ ಪದಗಳು ವೇದಗಳಲ್ಲೂ, ಕ್ರಿ.ಶ. ಎರಡನೆಯ ಶತಮಾನದ ಗ್ರೀಕ್ ಪ್ರಹಸನದಲ್ಲೂ ದೊರೆಯುತ್ತವೆ. ಆದರೆ ಶಾಸನ ರೂಪದಲ್ಲಿ ದೊರೆಯುವ ಮೊದಲ ಕನ್ನಡ ಬರಹವೆಂದರೆ ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಹಲ್ಮಿಡಿ ಗ್ರಾಮದ ಕ್ರಿ.ಶ. ೪೫೦ರ ಕದಂಬರ ಶಾಸನ. ಈ ಶಾಸನದ್ದು ಸಂಸ್ಕೃತ ಭೂಯಿಷ್ಠವಾದ ಸುಂದರ ಗದ್ಯ ಶೈಲಿ.

ಭೌಗೋಳಿಕವಾಗಿ ಮತ್ತು ಭೂವೈಜ್ಞಾನಿಕವಾಗಿ ಭಾರತದಲ್ಲಿಯೇ ಅತ್ಯಂತ ಪ್ರಾಚೀನ ಭೂಭಾಗವೆಂದು ಹೇಳಲಾಗಿರುವ ದಖಿನ್ ಪ್ರಸ್ಥಭೂಮಿಯಲ್ಲಿ ಕರ್ನಾಟಕದ ಬಹುಭಾಗ ನೆಲೆಗೊಂಡಿದೆ. ಕರ್ನಾಟಕದ ಮೇಲ್ಮೈಯ ಒಂದು ವೈಶಿಷ್ಟ್ಯವೆಂದರೆ ಕರಾವಳಿ, ಮಲೆನಾಡು ಮತ್ತು ಬಯಲುಸೀಮೆಗಳನ್ನೆಲ್ಲ ಒಳಗೊಂಡಿರುವುದು. ಕರ್ನಾಟಕದ ಬಹುಭಾಗ ಸಮುದ್ರಮಟ್ಟಕ್ಕಿಂತ ಎತ್ತರದಲ್ಲಿರುವುದರಿಂದ ವಾಯುಗುಣದ ವೈಪರೀತ್ಯಗಳು ಅಷ್ಟಾಗಿ ಕಂಡುಬರುವುದಿಲ್ಲ. ಸಮೃದ್ಧವಾದ ಸಸ್ಯಸಂಪತ್ತನ್ನೂ, ವೈವಿಧ್ಯಮಯವಾದ ಪ್ರಾಣಿಸಂಪತ್ತನ್ನೂ ಕರ್ನಾಟಕ ಹೊಂದಿದೆ. ಚಿನ್ನ, ಕಬ್ಬಿಣ, ಅಲ್ಯುಮಿನಿಯಂ, ತಾಮ್ರ-ಇವು ಕರ್ನಾಟಕದಲ್ಲಿ ದೊರೆಯುವ ಪ್ರಮುಖ ಖನಿಜಗಳಾಗಿವೆ. ದೇವಾಲಯ ಮತ್ತು ಕಟ್ಟಡ ನಿರ್ಮಾಣಗಳಲ್ಲಿ ಚಾಲುಕ್ಯ ವಾಸ್ತುಶಿಲ್ಪ, ಹೊಯ್ಸಳ ವಾಸ್ತುಶಿಲ್ಪ, ವಿಜಯನಗರ ವಾಸ್ತುಶಿಲ್ಪ, ಮುಸ್ಲಿಂ ವಾಸ್ತುಶಿಲ್ಪ, ಐರೋಪ್ಯ ವಾಸ್ತುಶಿಲ್ಪಗಳು ಅಚ್ಚಳಿಯದ ಮುದ್ರೆಯನ್ನು ಒತ್ತಿವೆ. ಬೇಲೂರು, ಹಳೇಬೀಡು, ಸೋಮನಾಥಪುರ, ಶ್ರವಣಬೆಳ್ಗೊಳ, ಐಹೊಳೆ, ಬಾದಾಮಿ, ಪಟ್ಟದಕಲ್ಲು, ಹಂಪೆ ಮುಂತಾದ ಕಡೆಗಳಲ್ಲಿ ಸಾವಿರಾರು ವರ್ಷಗಳ ನಂತರವೂ ಮೆರೆಯುತ್ತಿರುವ ಕರ್ನಾಟಕದ ಮೂರ್ತಿಶಿಲ್ಪ ಕಲೆಯಂತೂ ಜಗದ್ವಿಖ್ಯಾತವಾದುದಾಗಿದೆ. ಪ್ರಾಕೃತ ಯುಗ, ಸಂಸ್ಕೃತ ಯುಗ, ಕನ್ನಡ ಯುಗವೆಂದು ವಿಭಜಿಸಿಕೊಳ್ಳುವಷ್ಟು ವೈವಿಧ್ಯಮಯವಾಗಿ ರಚನೆಯಾಗಿರುವ ಶಾಸನಗಳು ಕರ್ನಾಟಕದ ಗತ ಇತಿಹಾಸವನ್ನು ಪುನರ್ರಚನೆ ಮಾಡುವಲ್ಲಿ ಸಹಾಯಕವಾಗಿವೆ. ಕರ್ನಾಟಕದಲ್ಲಿ ಬೇರೂರಿ ಬೆಳೆದು ಹೊರಕ್ಕೂ ಚಾಚಿಕೊಂಡ ಧರ್ಮಗಳೇ ಸಾಕಷ್ಟು ಸಂಖ್ಯೆಯಲ್ಲಿವೆ. ಬೌದ್ಧ, ಜೈನ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ವೀರಶೈವ, ಇಸ್ಲಾಂ, ಕ್ರೈಸ್ತ-ಇವು ಇಲ್ಲಿ ಬಾಳಿ ಬೆಳಗಿದ ಪ್ರಮುಖ ಧರ್ಮಗಳಲ್ಲಿ ಕೆಲವು ಮಾತ್ರ. ಕರ್ನಾಟಕವು ಕಾಲಮಾನ ಪರಿಸ್ಥಿತಿಗೆ ತಕ್ಕಂತೆ ಎಲ್ಲ ವಿಚಾರ ಪ್ರಣಾಲಿಗಳಿಗೂ ಮತಸಿದ್ಧಾಂತಗಳಿಗೂ ಅವಕಾಶ ಆಶ್ರಯಗಳನ್ನು ನೀಡಿದೆ. ಅವುಗಳಿಗೆ ತನ್ನ ನೆಲ-ನೀರುಗಳ ಶಕ್ತಿಯನ್ನು ಒದಗಿಸಿದೆ. ಅವುಗಳಿಂದ ತನ್ನ ಜನಜೀವನವನ್ನು ಸಮೃದ್ಧಗೊಳಿಸಿ ಕೊಂಡಿದೆ.

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಇಲ್ಲಿನ ರಾಜರುಗಳ ದೌರ್ಬಲ್ಯ-ಒಳಜಗಳಗಳ ಲಾಭ ಪಡೆದು ಒಂದೊಂದೇ ಸಂಸ್ಥಾನ ಕಬಳಿಸುತ್ತ ಕೊನೆಗೆ ಕರ್ನಾಟಕದ ರಾಜಮನೆತನಗಳನ್ನು ತಮ್ಮ ಕಪಿಮುಷ್ಟಿಯಲ್ಲಿ ಹಿಡಿಯಲು ಹವಣಿಸಿದ್ದು ಈಗ ಗತ ಇತಿಹಾಸ. ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟವೆಂದು ಕರೆಯಲಾಗುವ ೧೮೫೭ರ ಸಿಪಾಯಿದಂಗೆಯಲ್ಲಿ ಕರ್ನಾಟಕವೂ ತನ್ನ ಪಾಲಿನ ಕರ್ತವ್ಯವನ್ನು ಸಲ್ಲಿಸಿತು. ಸುರಪುರ, ನರಗುಂದದ ರಾಜರು, ಹಲಗಲಿಯ ಬೇಡರು, ಧಾರವಾಡದ ದೇಸಾಯಿಗಳು - ಇವರೆಲ್ಲ ಮುಂಡರಗಿ ಭೀಮರಾಯನ ನೇತೃತ್ವದಲ್ಲಿ ಬ್ರಿಟಿಷರನ್ನು ಎದುರಿಸಿದರು. ಬ್ರಿಟಿಷರು ಭೀಮರಾಯನ ಕೋಟೆಗೆ ಮುತ್ತಿಗೆ ಹಾಕಿ, ಫಿರಂಗಿ ಹಾರಿಸಿ ಅವರೊಂದಿಗೆ ೭೭ ಜನರನ್ನು ಕೊಂದುಹಾಕಿದರು. ಭೀಮರಾಯನ ವೀರಾವೇಶದ ಹೋರಾಟ ಕುರಿತು ಲಾವಣಿಗಳೇ ಹುಟ್ಟಿಕೊಂಡವು.

ಕಿತ್ತ ಕತ್ತಿ ಕೈ ಎತ್ತಿ ಸುತ್ತಮುತ್ತ
ಕೇಳುತಾನೆ ಭಂಟರನು
ಭೀಮರಾಯ ಕೂಡಿ ಹೊಡೆದ ರಣಶೂರ
ತಡೆಯದೆ ಹಾರುತ್ತಿದ್ದವು ಶಿರಾ
ಹರಿಯುತಲ್ಯತೋ ಕೆಂಪು ನೆತ್ತರ
ಒಮ್ಮೆ ಗುಂಡು ಹಾರಿತೋ ಸಾವಿರ
ಹಮ್ಮಿಗೆ ದೇಸಾಯಿ, ಭೀಮರಾಯ
ಅದೇ ಕ್ಷಣಕೆ ಸಂಹಾರ

ಬ್ರಿಟಿಷರ ಸಾಮ್ರಾಜ್ಯನಿರ್ಮಾಣ ದಾಹವನ್ನು ಕರ್ನಾಟಕ ಪ್ರಬಲವಾದ ಸಶಸ್ತ್ರ ಯುದ್ಧದಲ್ಲಿ ಹೇಗೆ ವಿರೋಧಿಸಿತೆನ್ನುವ ಚಿತ್ರ ಇಂಥ ಅಸಂಖ್ಯ ಲಾವಣಿಗಳಲ್ಲಿ ಮೂಡಿಬಂದಿದೆ. ಗಾಂಧೀಜಿ ಕರೆಕೊಟ್ಟಂತೆ ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ ಚಳವಳಿಗಳೂ ಕರ್ನಾಟಕದಲ್ಲಿ ಯಶಸ್ವಿಯಾಗಿ ನಡೆದವು. ಮುಂದೆ ನಾಡಿಗೆ ಸ್ವಾತಂತ್ರ್ಯ ದೊರೆತರೂ ಕನ್ನಡನಾಡಿನ ಏಕೀಕರಣ ಸಿದ್ಧಿಸಿರಲಿಲ್ಲ. ಕನ್ನಡ ನಾಡು ಒಂದು ಪ್ರಾಂತವಾಗಿ ಒಂದು ಆಳ್ವಿಕೆಯಲ್ಲಿ ಏಕತಂತ್ರವಾಗಿ ಬರಬೇಕೆಂಬುದೇ ಎಂದೆಂದಿನಿಂದಲೂ ಕನ್ನಡಿಗರ ಬಯಕೆಯಾಗಿತ್ತು. ಸಾಹಿತಿಗಳಿಗೆಲ್ಲ ಏಕೀಕರಣವೇ ಕನಸಾಗಿತ್ತು, ನಿತ್ಯ ಜಪವಾಗಿತ್ತು. ಇಪ್ಪತ್ತೆರಡು ಆಳ್ವಿಕೆಗಳಲ್ಲಿ ಹಂಚಿಹೋಗಿದ್ದ ಪ್ರಾಂತ್ಯದಲ್ಲಿ ಕೊನೆಗೂ ೧೯೫೬ರ ನವೆಂಬರ್ ೧ ರಂದು ಕರ್ನಾಟಕದ ರಚನೆಯಾಯಿತು. ಈ ಸಾಧನೆಯ ಕೀರ್ತಿ ನಿಜವಾಗಿ ಸೇರಬೇಕಾದ್ದು ಎಸ್. ನಿಜಲಿಂಗಪ್ಪ, ಕೆ. ಹನುಮಂತಯ್ಯ ಮತ್ತು ಡಿ. ದೇವರಾಜ ಅರಸ್ ಅವರಿಗೆ.

ಏಕೀಕರಣ ಚಳವಳಿಯ ಪೂರ್ವದಲ್ಲೇ ಆಧುನಿಕ ಮೈಸೂರು ರಾಜ್ಯವನ್ನು ನಿರ್ಮಿಸುವಲ್ಲಿ ಹಲವರ ಶ್ರಮ, ದೂರದೃಷ್ಟಿ, ನಿಸ್ವಾರ್ಥ ಸೇವೆ, ತ್ಯಾಗಗಳು ಮುಖ್ಯ ಪಾತ್ರ ವಹಿಸಿವೆ. ಅದರಲ್ಲಿಯೂ ಮೈಸೂರು ಅರಸರು ಕರ್ನಾಟಕದ ಸಾಹಿತ್ಯ, ಕಲೆ, ಸಂಸ್ಕೃತಿ, ಅರ್ಥ ವ್ಯವಸ್ಥೆಗಳ ಪ್ರಗತಿಗೆ ಹಲವು ರೀತಿಯ ಕೊಡುಗೆಗಳನ್ನು ನೀಡಿದ್ದಾರೆ. ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಸ್ಮರಣೀಯ ಸಾಧನೆಗಳಿಂದ ಪ್ರಸಿದ್ಧರಾಗಿದ್ದಾರೆ. ದಿವಾನರಾಗಿದ್ದ ರಂಗಾಚಾರ್ಲು, ಶೇಷಾದ್ರಿ ಅಯ್ಯರ್, ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ದೂರಗಾಮಿಯಾದ ತಮ್ಮ ಆಡಳಿತ ವೈಖರಿಯಿಂದ ಪ್ರಸಿದ್ಧರಾದರು. ವಾಣಿವಿಲಾಸ ಸಾಗರ, ಕನ್ನಂಬಾಡಿ ಅಣೆಕಟ್ಟು, ಸರ್ಕಾರೀ ಕ್ಷೇತ್ರದ ಉದ್ದಿಮೆಗಳಾದ-ಭದ್ರಾವತಿ ಕಬ್ಬಿಣ ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ, ಸಾಬೂನು ಕಾರ್ಖಾನೆ, ವಿದ್ಯುತ್ ಕಾರ್ಖಾನೆ, ಮಂಡ್ಯದ ಸಕ್ಕರೆ ಕಾರ್ಖಾನೆ ಮುಂತಾದವು ಈ ಕಾಲದಲ್ಲಿಯೇ ರೂಪುಗೊಂಡವು. ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಗೊಂಡವು. ಆಕಾಲದ ಕನ್ನಡಪರ ಚಟುವಟಿಕೆಗಳ ಮುಂಚೂಣಿಯಲ್ಲಿ ಮೈಸೂರು ಸಂಸ್ಥಾನದ ಬಿ.ಎಂ.ಶ್ರೀ, ಡಿ.ವಿ.ಜಿ, ಎಚ್.ವಿ. ನಂಜುಂಡಯ್ಯ, ಕರ್ಪೂರ ಶ್ರೀನಿವಾಸರಾವ್ ಹಾಗೂ ಸಂಸ್ಥಾನದ ಹೊರಗಿನ ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಬೆನಗಲ್ ರಾಮರಾವ್, ಪಂಜೆ ಮಂಗೇಶರಾವ್ ಮುಂತಾದವರು ನಾಡಿನ ಏಕೀಕರಣಕ್ಕೆ ಅಗತ್ಯವಾಗಿದ್ದ ಭದ್ರ ತಳಪಾಯವನ್ನು ಹಾಕಿಕೊಟ್ಟರು.

'ಕರ್ನಾಟಕ' ಎಂದೊಡನೆ ಒಂದು ಉಜ್ವಲವಾದ, ಪುರಾತನವಾದ, ಸಾಂಸ್ಕೃತಿಕ ಪರಂಪರೆಯ ಭವ್ಯ ರೂಪದ ಸೌಂದರ್ಯದ ದರ್ಶನವಾಗುತ್ತದೆ. ನಿಜವಾದ ಕನ್ನಡಿಗರಿಗೆ ಒಂದು ಹೊಸಲೋಕವನ್ನೇ ಪ್ರವೇಶ ಮಾಡಿದ ಅನುಭವವಾಗುತ್ತದೆ. ಅಭಿಮಾನಿ ಕನ್ನಡಗನಿಗೆ ಕರ್ನಾಟಕವೊಂದು ಪವಿತ್ರಭೂಮಿ, ಕ್ಷಾತ್ರಭೂಮಿ ಮತ್ತು ಕರ್ಮಭೂಮಿ. ಕರ್ನಾಟಕವೆಂಬ ತನುಜಾತೆಯ ಜನನಿಯಾದ ಭಾರತ ಬಹುದೊಡ್ಡ ರಾಷ್ಟ್ರ. ಇಲ್ಲಿ ಅನೇಕ ಭಾಷೆಗಳೊಂದಿಗೆ ನಡೆ ನುಡಿ ಸಂಸ್ಕೃತಿಗಳಲ್ಲೂ ಏಕತೆಯೊಂದಿಗೆ ವೈವಿಧ್ಯತೆ ಎದ್ದು ತೋರುತ್ತದೆ. ಈ ಬೃಹದ್ರಾಷ್ಟ್ರದ ಮೇಲೆ ವಿದೇಶೀಯರನೇಕರು ಸಂಪತ್ತಿಗಾಗಿಯೋ ಪ್ರಭುತ್ವಕ್ಕಾಗಿಯೋ ದಾಳಿ ನಡೆಸಿದರು. ಇವರಲ್ಲಿ ಬ್ರಿಟಿಷರು ತಮ್ಮ ಭೇದೋಪಾಯ, ಕುತಂತ್ರಗಳಿಂದಾಗಿ ಇಡೀ ಭಾರತವನ್ನು ತಮ್ಮ ಕೈವಶ ಮಾಡಿಕೊಂಡರು. ಈ ವಿಚಾರದಲ್ಲಿ ಭಾರತೀಯ ಜನಮನದಲ್ಲಿ ಹರಡಿಕೊಂಡ ಅಸಮಾಧಾನದ ಹೊಗೆ ೧೮೫೭ರಲ್ಲಿ ಬೆಂಕಿಯುಂಡೆಯಾಗಿ ಸ್ಫೋಟಗೊಂಡಾಗ ಅದು ಸಮಗ್ರ ಭಾರತದ ಕ್ಷಾತ್ರತೇಜದ ಸ್ವಾಭಿಮಾನದ ಹೋರಾಟವಾಗಿ ಗುರುತಿಸಲ್ಪಟ್ಟಿತು. ಭಾರತೀಯ ಜನಮನದಲ್ಲಿ ರಾಷ್ಟ್ರಾಭಿಮಾನ ಜಾಗೃತವಾಗಲು, ನಾಡು-ನುಡಿ ಹಾಗೂ ಪ್ರಾಂತೀಯ ಭಾಷೆಗಳಿಗೆ ಮಹತ್ವ ಬರಲು ಇದು ಕಾರಣವಾಯಿತು. ಇದರ ಪರಿಣಾಮಗಳು ಕರ್ನಾಟಕದಲ್ಲೂ ಆಗತೊಡಗಿತು. ಪೇಶ್ವೆಯರ ಆಳ್ವಿಕೆ ಕೊನೆಗೊಂಡಿದ್ದರೂ ಮರಾಠೀ ಭಾಷೆಗೆ ವಿಶೇಷ ಪುರಸ್ಕಾರ ವೀಯುವ ಪದ್ಧತಿಯನ್ನು ವಿರೋಧಿಸುವ ಸಲುವಾಗಿ ಧಾರವಾಡದಲ್ಲಿ ೨೦-೭-೧೮೯೦ ರಂದು ವಿದ್ಯಾವರ್ಧಕ ಸಂಘ ಜನ್ಮ ತಳೆಯಿತು. ಆಗ ಮುಂಬೈ ಹೈಕೋರ್ಟಿನಲ್ಲಿ ವಕೀಲರಾಗಿದ್ದ ಕಾಯ್ಕಿಣಿ ಶಾಮರಾಯರು ಅಧ್ಯಕ್ಷರಾಗಿಯೂ ವೆಂಕಟರಂಗೋ ಕಟ್ಟಿಯವರು ಉಪಾಧ್ಯಕ್ಷ ರಾಗಿಯೂ ಆಯ್ಕೆಯಾದರು. ಅಂದಿನಿಂದಲೇ ಕನ್ನಡದ ನೆಲದಲ್ಲಿ ಭಾಷೆ, ಸಂಸ್ಕೃತಿ, ಇತಿಹಾಸ ಕುರಿತಂತೆ ಪ್ರಚೋದನಾತ್ಮಕವಾದ ಚಟುವಟಿಕೆಗಳು ಉದ್ಘಾಟನೆಗೊಂಡವು. ೧೮೯೬ರಲ್ಲಿ ಈ ಸಂಘವೇ 'ವಾಗ್ಭೂಷಣ' ಹೆಸರಿನ ಮಾಸಪತ್ರಿಕೆಯನ್ನು ಪ್ರಾರಂಭಿಸಿ, ಕುಲಪುರೋಹಿತ ಆಲೂರು ವೆಂಕಟರಾಯರು ೧೯೦೭ರಲ್ಲಿ 'ಕರ್ನಾಟಕವು ಒಂದಾಗದೆ ಕರ್ನಾಟಕಸ್ಥರ ಏಳಿಗೆಯು ಎಂದಿಗೂ ಸಾಧ್ಯವಾಗದು' ಎಂಬ ತಮ್ಮ ಧೀರೋದಾತ್ತವಾದ ವಿಚಾರಗಳನ್ನು ಲೇಖನರೂಪದಲ್ಲಿ ಪ್ರಕಟಿಸಿದರು. ಅವರ ಈ ಲೇಖನವೇ ಮುಂದೆ ಕರ್ನಾಟಕ ಏಕೀಕರಣದ ಬೀಜಮಂತ್ರವಾಗಿ ಪರಿಣಮಿಸಿತು.

೧೯೦೫ರಲ್ಲಿ ಸ್ವದೇಶೀ ಚಳವಳಿ ಪ್ರಾರಂಭವಾದಾಗ ಅಖಿಲಭಾರತ ಕಾಂಗ್ರೆಸ್‌ನಲ್ಲಿ ಕರ್ನಾಟಕಕ್ಕೆ ವಿಶೇಷ ಪ್ರಾತಿನಿಧ್ಯ ದೊರೆಯಬೇಕೆಂಬ ಹೋರಾಟ ಪ್ರಾರಂಭವಾಯಿತು. ಮಹಾತ್ಮ ಗಾಂಧೀಜಿಯವರು ತಾವು ಕರ್ನಾಟಕ ಪ್ರಾಂತ್ಯ ರಚನೆಯ ವಿಚಾರವನ್ನು ಮನಸಾ ಒಪ್ಪಿರುವುದಾಗಿ ಘೋಷಿಸಿ, ಪ್ರಾಂತೀಯ ಭಾಷೆಗಳು ಬೆಳೆದು ಪರಿಪೂರ್ಣ ಅವಸ್ಥೆಯನ್ನು ಹೊಂದಬೇಕಾದಲ್ಲಿ ಭಾಷಾ ತಳಹದಿಯ ಮೇಲೆಯೇ ಆ ಪ್ರಾಂತ್ಯಗಳನ್ನು ಪುನರ್ವಿಂಗಡಿಸುವುದು ಅತ್ಯಾವಶ್ಯಕ ಎಂಬ ಮಾತನ್ನು ಸ್ಪಷ್ಟಪಡಿಸಿದರು. ಕರ್ನಾಟಕದ ಸಂಸ್ಥಾನಿಕರಲ್ಲಿ ಸೊಂಡೂರಿನ ಅರಸು ಮನೆತನದವರು ೧೯೪೬ರಲ್ಲಿ ಕರ್ನಾಟಕದ ಏಕೀಕರಣಕ್ಕೆ ತಮ್ಮ ಬೆಂಬಲ ಸೂಚಿಸಿದರು. ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿದ ಸಮಿತಿ ಕರ್ನಾಟಕದ ಘಟನೆಗಳನ್ನು ಅವರಿಗೆ ಸಂಪೂರ್ಣವಾಗಿ ವಿವರಿಸಿತು. ಆಗ ನೆಹರೂ 'ನಾನು ಕರ್ನಾಟಕದ ಈ ಬೇಡಿಕೆಯನ್ನು

ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇನೆ. ಇದಕ್ಕೆ ಮೂರ್ತಸ್ವರೂಪವನ್ನು ಕೊಡುವಾಗ ಮೈಸೂರು ಸಂಸ್ಥಾನದಿಂದ ಈ ವಿಷಯದಲ್ಲಿ ಹೆಚ್ಚಿನ ತೊಂದರೆಯಾಗದಂತೆ ನೋಡಿಕೊಳ್ಳುವ ಅಗತ್ಯವಿದೆ' ಎಂದು ಸೂಚಿಸಿದರು. ಏಕೀಕರಣಕ್ಕೆ ಪೂರ್ವಭಾವಿಯಾಗಿ ಕಾಣಿಸಿಕೊಂಡ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವಲ್ಲಿ ನಮ್ಮ ಧುರೀಣರು ಸಾಕಷ್ಟು ಶ್ರಮವನ್ನು ತೆಗೆದುಕೊಳ್ಳಬೇಕಾಯಿತು. ಅಂದಿನ ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಕನ್ನಡಿಗರಲ್ಲಿ ಅಚ್ಚಳಿಯದೆ ಉಳಿದುಬರುವ ಕೆಲವು ವಿಚಾರಗಳನ್ನು ವ್ಯಕ್ತಪಡಿಸಿದರು. ''ಐತಿಹಾಸಿಕ ಕಾರಣಗಳು ಮೈಸೂರು ಸಂಸ್ಥಾನವನ್ನು ವಿಶಾಲಗೊಳಿಸುತ್ತಿವೆ. ಮಗ್ಗುಲು ಪ್ರದೇಶದಲ್ಲಿಯ ಜನರು ಸ್ವಯಂಪ್ರೇರಣೆಯಿಂದ ಮೈಸೂರು ಸಂಸ್ಥಾನದಲ್ಲಿ ಸೇರ್ಪಡೆ ಹೊಂದಲು ಆತುರರಾಗಿದ್ದಾರೆ. ಅವರೆಲ್ಲರನ್ನು ನಾವು ಅವರಾಡುವ ಭಾಷೆಯನ್ನು ಗಮನಿಸದೆಯೇ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಹೇಗಿದ್ದರೂ ನಾವೆಲ್ಲ ಭಾರತವೆಂಬ ಒಂದೇ ಮಾತೃಭೂಮಿಯ ನಾಗರಿಕರಾಗಿದ್ದೇವೆ. ಅವರನ್ನು ಸ್ವಾಗತಿಸದಿರುವುದು ಸಾಧುವಲ್ಲ. ನಮ್ಮ ದೇಶಬಾಂಧವರು ಒಳಕ್ಕೆ ಬಾರದಂತೆ ನಾವು ಬಾಗಿಲನ್ನು ಮುಚ್ಚಿಕೊಳ್ಳುವುದೆಂದರೆ ದೇಶಪ್ರೇಮ ಮತ್ತು ಭ್ರಾತೃಪ್ರೇಮಗಳಿಗೆ ಮಿತಿಯನ್ನು ಹಾಕಿಕೊಂಡಂತೆ'' ಎಂದು ಕೆಂಗಲ್ಲರು ಹೇಳಿದ ಮಾತುಗಳು ಅವರು ಮಾಡಿದ ಒಂದು ಮಹಾನ್ ಪ್ರಯತ್ನಕ್ಕೆ ಸಾಕ್ಷಿಯಾಗಿ ಉಳಿದುಕೊಂಡು ಬರುವಂತಾಯಿತು. ಹೀಗೆ ಅನೇಕ ರೀತಿಯ ಹೋರಾಟ ಮತ್ತು ಪ್ರಯತ್ನದ ಫಲವಾಗಿ ಭಾರತ ಸರಕಾರ ಹಲವು ವರದಿಗಳನ್ನು ಸಂಪೂರ್ಣವಾಗಿ ಅವಲೋಕಿಸಿದ ನಂತರ ೧.೧೧.೧೯೫೬ರಂದು ಮೈಸೂರು ರಾಜ್ಯ ಎಂದು ಹೆಸರು ಪಡೆದ ಕರ್ನಾಟಕವು ರೂಪುಗೊಳ್ಳುವಂತಾಯಿತು. ಹೊಸದಾಗಿ ರೂಪಿತವಾದ ನವಮೈಸೂರು ರಾಜ್ಯದಲ್ಲಿ ಅಚ್ಚಕನ್ನಡ ಪ್ರದೇಶಗಳಾದ ಕಾಸರಗೋಡು, ಆಲೂರು, ಆದವಾನಿ, ರಾಯದುರ್ಗ, ಮಡಕಶಿರಾ, ಸೋಲಾಪುರದ ಕೆಲವು ಭಾಗಗಳು, ಜತ್ ಸಂಸ್ಥಾನದ ಕೆಲವು ಭಾಗಗಳು ನಮಗೆ ಬಾರದೆ ಶಾಶ್ವತವಾಗಿ ಪ್ರತ್ಯೇಕಗೊಂಡವು.

ಹರಿದು ಹಂಚಿಹೋಗಿದ್ದ ನಾಡು ಒಂದುಗೂಡಿದಾಗ ಆಲೂರು ವೆಂಕಟರಾಯರು ತಮ್ಮ ಸಂದೇಶದಲ್ಲಿ ಈ ರೀತಿಯಾಗಿ ಹೇಳಿದರು: ''ಹೊಸದಾಗಿ ಕಟ್ಟಲ್ಪಟ್ಟ ಈ ಕರ್ನಾಟಕ ರಾಜ್ಯವು ಕೇವಲ ಜನತೆಯು ಜನತೆಗಾಗಿ ಕಟ್ಟಿದ ರಾಜ್ಯ. ಇದು ಅಹಿಂಸಾತ್ಮಕವಾಗಿ ಕಟ್ಟಲ್ಪಟ್ಟಿದ್ದು. ಜನತೆ ತನ್ನ ಕಲ್ಪನಾ ವಿಲಾಸದಿಂದ ಕಟ್ಟಿದ ರಾಜ್ಯ. ಗತ ವೈಭವದ ಯುಗ ಮುಗಿಯಿತು. ಭಾವೀ ವೈಭವವು ಬರಬೇಕಾಗಿದೆ. ಅದನ್ನು ಈಗಿನ ಪೀಳಿಗೆಯವರು ತಮ್ಮ ಸ್ವಂತ ಪರಿಶ್ರಮದಿಂದ ತರಬೇಕಾಗಿದೆ. ಈಗ ಮೈಸೂರು ರಾಜ್ಯ ಎಂದು ತಪ್ಪಾಗಿ ಹೆಸರಿಡಲ್ಪಟ್ಟ ಕರ್ನಾಟಕ ರಾಜ್ಯವು ಆಯುಷ್ಯವಂತವಾಗಲಿ, ಆರೋಗ್ಯವಂತವಾಗಲಿ, ಭಾಗ್ಯವಂತವಾಗಲಿ ಎಂದು ಹಿರಿಯನಾದ ನಾನು ಹಾರೈಸುತ್ತೇನೆ. ಕರ್ನಾಟಕ ಎಂಬ ಶಬ್ದದಲ್ಲಿ ಎಂಥ ಮಾಂತ್ರಿಕಶಕ್ತಿ ಅಡಗಿರುತ್ತದೆಂದು ಹೇಳಲು ಸಾಧ್ಯವಿಲ್ಲ. ಕನ್ನಡನಾಡಿನ ಸರ್ವತೋಮುಖವಾದ ಅಭ್ಯುದಯಕ್ಕೆ ನಾವು ಕನ್ನಡಿಗರೆಲ್ಲರೂ ಒಂದಾಗಿ ದುಡಿಯೋಣ. ಕನ್ನಡಮ್ಮನ ಪವಿತ್ರ ಸೇವೆಯಿಂದ 'ಕರ್ನಾಟಕ' ಪದವನ್ನು ಕಿತ್ತುಹಾಕಲು ಸಾಧ್ಯವಿಲ್ಲ'' ಎಂದು ಸಾರಿದ ಕುಲಪುರೋಹಿತರ ಕನಸು ೧೯೭೩ರ ನವೆಂಬರ್ ೧ ರಂದು ಸಾಕಾರ ರೂಪ ತಾಳಿತು. ದೇವರಾಜ ಅರಸರ ಹಿರಿತನದಲ್ಲಿ ಈ ರಾಜ್ಯಕ್ಕೆ 'ಕರ್ನಾಟಕ'ವೆಂದು ನಾಮಕರಣವಾಯಿತು.

ನೈಸರ್ಗಿಕವಾಗಿ ಪರಮರಮಣೀಯವಾಗಿರುವ ಕರ್ನಾಟಕದ ಸೌಂದರ್ಯಕ್ಕಿಂತಲೂ ಮಿಗಿಲಾದದ್ದು ಅದರ ಆತ್ಮಶ್ರೀ. ಈ ನಾಡಿನ ಸಾಮಾಜಿಕವಾದ, ರಾಜಕೀಯವಾದ, ಧಾರ್ಮಿಕವಾದ, ಕಲಾಸಂಬಂಧಿಯಾದ ಪರಂಪರೆ ಅದ್ವಿತೀಯವಾದದ್ದು. ಎಷ್ಟೊಂದು ಮಹಾವ್ಯಕ್ತಿಗಳು ಎಂತೆಂಥ ಲೋಕೋತ್ತರ ಮೌಲ್ಯಗಳನ್ನು ಇಲ್ಲಿ ಬೆಳಗಿದ್ದಾರೆಂದು ನೆನೆಸಿಕೊಂಡರೆ ಸಾಕು ಮೈ ರೋಮಾಂಚನಗೊಳ್ಳುತ್ತದೆ. ಅವರ ಶ್ರೇಷ್ಠವಾದ ಆಸ್ತಿಗೆ ನಾವು ಉತ್ತರಾಧಿಕಾರಿಗಳಾಗಿದ್ದೇವೆಂಬ ಹೆಮ್ಮೆ ಮನಸ್ಸನ್ನು ತುಂಬಿಕೊಳ್ಳುತ್ತದೆ. ಇಂತಹ ಅಭಿಮಾನದ ಗೂಡಾಗಿರುವ ಕರ್ನಾಟಕ ಸಾಹಿತ್ಯಾರಂಭದ ಕಾಲದಿಂದಲೂ ನಮ್ಮ ಕವಿಗಳ ಹೃದಯವನ್ನು ಸೆಳೆದುಕೊಂಡಿದೆ. ಪ್ರಾಚೀನ-ಆಧುನಿಕ ಕಾವ್ಯಗಳೆರಡರಲ್ಲೂ ಕವಿಗಳು ಕನ್ನಡನಾಡು, ನುಡಿಗಳನ್ನು ಕುರಿತ ಪ್ರೀತಿಯ ಮಹಾಪೂರವನ್ನೇ ಹರಿಸಿದ್ದಾರೆ. ಕನ್ನಡದ ಮೊದಲ ಗ್ರಂಥವಾದ 'ಕವಿರಾಜಮಾರ್ಗ'ದಲ್ಲೇ ಕರ್ಣಾಟಕದ ಮತ್ತು ಕನ್ನಡಿಗರ ಚಿತ್ರವಿದೆ. 'ಕಾವೇರಿಯಿಂ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂದು ಕವಿರಾಜಮಾರ್ಗಕಾರ ಕನ್ನಡನಾಡಿನ ಮೇರೆಯನ್ನು ನಿರ್ದೇಶಿಸಿರುವುದು ಒಂದು ಅಮೂಲ್ಯ ಚಾರಿತ್ರಿಕ ದಾಖಲೆಯಾಗಿ ಪ್ರಸಿದ್ಧವಾಗಿದೆ. ಕೃತಿಕಾರನು ಕನ್ನಡ ಜನ, ಅವರ ವ್ಯಕ್ತಿತ್ವ, ಸಾಧನೆಗಳನ್ನು ಹೀಗೆ ಹಿಡಿದಿಟ್ಟಿದ್ದಾನೆ :

ಪದನರಿದು ನುಡಿಯಲುಂ ನುಡಿದುದನರಿದಾರಯಲುಮ್
ಆರ್ಪರಾ ನಾಡವರ್ಗಳ್ । ಚದುರರ್ ನಿಜದಿಂ ಕುರಿತೋದದೆಯುಂ
ಕಾವ್ಯ ಪ್ರಯೋಗ ಪರಿಣತಮತಿಗಳ್ ॥
ಸುಭಟರ್ಕಳ್, ಕವಿಗಳ್, ಸುಪ್ರಭುಗಳ್
ಚೆಲ್ವರ್ಕಳ್, ಅಭಿಜನರ್ಕಳ್, ಗುಣಿಗಳ್,
ಅಭಿಮಾನಿಗಳ್, ಅತ್ಯುಗ್ರರ್, ಗಭೀರಚಿತ್ತರ್,
ವಿವೇಕಿಗಳ್ ಆ ನಾಡವರ್ಗಳ್

ಕನ್ನಡ ಸಂಸ್ಕೃತಿಯ ಈ ಚಿತ್ರ ಅಂದಿನ ಅಸ್ತಿತ್ವದಂತೆ ಇಂದಿನ ಅಭಾವವೂ ಆಗಿದೆ. ಹೊಸಗನ್ನಡ ಸಾಹಿತ್ಯದಲ್ಲಿ ಕವಿಗಳು ಬಹುಮಟ್ಟಿಗೆ ಬರೆದದ್ದು ವ್ಯಕ್ತಿನಿಷ್ಠ ಕವಿತೆಗಳು. ಅವರಲ್ಲಿ ಅನೇಕರು ಕನ್ನಡನಾಡನ್ನು ವ್ಯಕ್ತಿಯಾಗಿ, ತಾಯಿಯಾಗಿ ಕಂಡರಿಸಿದ್ದಾರೆ. ಈ ರಚನೆಗಳನ್ನು ಏಕೀಕರಣ ಪೂರ್ವ ಮತ್ತು ಏಕೀಕರಣೋತ್ತರ ಎಂದೂ ವಿಭಜಿಸಿಕೊಳ್ಳ ಬಹುದು. ಬಿ.ಎಂ.ಶ್ರೀ.ಯವರ ಕನ್ನಡ ಪ್ರೇಮ 'ಏನು ಚೆಲುವಿನ ನಾಡು ಚೆಲುವು ಚೆಲ್ಲುವ ನಾಡು ಕನ್ನಡದ ನಾಡು , ಏನು ಚಿನ್ನದ ನಾಡು ನಮ್ಮೊಲುಮೆಯಾ ನಾಡು । ನಮ್ಮಿನಿಯ ನಾಡು'ಎಂದು ಧಾರೆ ಹರಿದರೆ, ಏಕೀಕರಣಪೂರ್ವದಲ್ಲಿ ಹುಯಿಲಗೋಳ ನಾರಾಯಣರಾಯರು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು । ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು' ಎಂದು ಹಾರೈಸುತ್ತಾರೆ. ಕನ್ನಡನಾಡು ಉದಯವಾದ ಮೇಲೆ 'ಉದಯವಾಗಲಿ' ಎಂಬುದನ್ನು 'ಉದಯವಾಯಿತು' ಎಂದು ಬದಲಾಯಿಸಲಾಯಿತಾದರೂ ಇನ್ನೂ ಉದಯವಾಗಬೇಕಾದ್ದು ಸಾಕಷ್ಟಿದೆ ಎಂಬುದನ್ನು ಮರೆಯುವಂತಿಲ್ಲ ಗೋವಿಂದ ಪೈಗಳ 'ಕನ್ನಡಿಗರ ತಾಯಿ' ಬಹಳ ಜನಪ್ರಿಯವಾದ ಗೀತೆ.' 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ' ಎನ್ನುವಲ್ಲಿ ತಾಯಿಯ ಬಗೆಗೆ ಮಕ್ಕಳ ಪ್ರೀತಿ, ಸರ್ವಾರ್ಪಣ

ಮನೋಭಾವ ಹಾಗೂ ಮಕ್ಕಳ ವಿಚಾರದಲ್ಲಿ ತಾಯಿಯ ವಾತ್ಸಲ್ಯ ಹೆಪ್ಪಾಗಿರುವುದನ್ನು ಕಾಣಬಹುದಾಗಿದೆ. 'ನನ್ನದು ಈ ಕನ್ನಡನಾಡು' ಎಂದು ತೀವ್ರ ಮಮತೆಯಿಂದ ಉದ್ಗಾರವೆತ್ತುವ ಬೇಂದ್ರೆಯವರು 'ಇದು ನನ್ನದೆಂತೋ ಹಾಗೆ ನಿನ್ನದೋ' ಎಂದು ಅನ್ಯರನ್ನೂ ತಿವಿದು ಎಚ್ಚರಿಸುತ್ತಾರೆ. ಈಗ ನಾಡಗೀತೆಯಾಗಿರುವ ಪ್ರಖ್ಯಾತ ಹಾಡು 'ಜಯಭಾರತ ಜನನಿಯ ತನುಜಾತೆ'ಯನ್ನು ಬರೆದ ಕುವೆಂಪು ಕರ್ಣಾಟಕ ಮಾತೆಯನ್ನು ಭಾರತ ಮಾತೆಯ ಮಗಳಾಗಿ ಕಲ್ಪಿಸಿಕೊಂಡಿದ್ದಾರೆ. ಕನ್ನಡ ಪ್ರೇಮ ಭಾರತ ಪ್ರೇಮಕ್ಕೆ ವಿರೋಧವಲ್ಲ. ಒಂದರ ಹಿತ ಮತ್ತೊಂದರ ಹಿತದಲ್ಲಿದೆ ಎಂದು ಪ್ರತಿಪಾದಿಸುತ್ತಾರೆ. ಆದರೆ ಅವರ 'ಅಖಂಡ ಕರ್ಣಾಟಕ' ಪದ್ಯ ಮಾತ್ರ ಏಕೀಕರಣವನ್ನು ವಿರೋಧಿಸಿದವರಿಗೆ ಸಿಡಿಲುತ್ತರವನ್ನು ನೀಡುತ್ತದೆ.

ಅಖಂಡ ಕರ್ಣಾಟಕ
ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ

ಎಂದು ಸಾರುವ ಕವಿ, ಕರ್ಣಾಟಕವೆಂಬುದು ಕೇವಲ ಒಂದು ಹೆಸರಲ್ಲ ''ಮಂತ್ರ ಕಣಾ, ಶಕ್ತಿ ಕಣಾ, ದೇವಿ ಕಣಾ'' ಎನ್ನುತ್ತಾರೆ. ಹಾಗೆಯೇ

ನೀ ಮೆಟ್ಟುವ ನೆಲ ಅದೆ ಕರ್ಣಾಟಕ
ನೀನೇರುವ ಮಲೆ ಸಹ್ಯಾದ್ರಿ
ನೀ ಮುಟ್ಟುವ ಮರ ಶ್ರೀಗಂಧದ ಮರ
ನೀ ಕುಡಿಯುವ ನೀರ್ ಕಾವೇರಿ

ಎನ್ನುವ ಮೂಲಕ ಕರ್ಣಾಟಕವನ್ನು ಭೌಗೋಳಿಕ ಗಡಿಗಳಿಂದಾಚೆಗೆ ಒಯ್ಯುತ್ತಾರೆ. ಕನ್ನಡತನವುಳ್ಳವರಿರುವ ಜಾಗವೆಲ್ಲ ಕರ್ಣಾಟಕವೇ ಎಂದು ಪ್ರತಿಪಾದಿಸುತ್ತಾರೆ. ಕುವೆಂಪು ಅವರ ಪ್ರಕಾರ ಕರ್ಣಾಟಕತ್ವವೆಂಬುದು ವಿಶ್ವವ್ಯಾಪಿಯಾದದ್ದು.

ರಾಜ್ಯೋತ್ಸವ ಒಂದು ಸಾಂಪ್ರದಾಯಿಕ ಆಚರಣೆಯ ಮಟ್ಟಕ್ಕಿಳಿದು ಮೂಲಾರ್ಥವನ್ನು ಕಳೆದುಕೊಂಡಿರುವ ಕೊರಗನ್ನು ನಿಸಾರ್ ಅಹಮದ್ ಅವರ 'ರಾಜ್ಯೋತ್ಸವ' ಕವಿತೆ ಹೀಗೆ ವ್ಯಕ್ತಪಡಿಸುತ್ತದೆ :

ನಮ್ಮರಾಜ್ಯೋತ್ಸವವೂ ಬರಿಯ ರಜಾ
ಸೋಂಭೇರಿಗಳ ಮಜ
ಬಾಜಾ ಭಜಂತ್ರಿ ಜೊತೆ ನೂಕುನುಗ್ಗಲು ಝೋಕು

ಇಂಥ ಮನೋಭಾವ ಬದಲಾಗಬೇಕೆನ್ನುವ ಕವಿಯ ಆಶಯ ಸ್ವಾಗತಾರ್ಹವಾದದ್ದು.

ಹಾಗೆಯೇ ತೀನಂಶ್ರೀಯವರ-

ನಾವೆಲ್ಲರೊಡಗೂಡಿ ಒಡನಾಡಿ ಕಲೆತು
ಕನ್ನಡದ ಸೇವೆಯಲಿ ನಮ್ಮ ಮೈಮರೆತು
ಕುಂದು ಕೊರತೆಗಳೊಂದಕಿಂಬಿಲ್ಲದಂತೆ
ನಮ್ಮ ಸೌಖ್ಯದ ಮೊಗ್ಗು ಬಿರಿದರಳುವಂತೆ
ದೇವಿ ಕರುಣಿಸಲಿ ವರವ

ಸಾಲಿ ರಾಮಚಂದ್ರರಾಯರ -


ಕನ್ನಡದ ನೆಲದ ಪುಲ್ಲೆನಗೆ ಪಾವನ ತುಲಸಿ
ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ
ಕನ್ನಡದ ನೆಲದ ಕಲ್ಲೆನಗೆ ಶಾಲಗ್ರಾಮ ಶಿಲೆ
ಕನ್ನಡ ದೈವಮ್ಮೆ

ಬೆನಗಲ್ ರಾಮರಾಯರ -

ಕನ್ನಡವನುಳಿದೆನಗೆ ಅನ್ಯಜೀವನವಿಲ್ಲ
ಕನ್ನಡವೆ ಎನ್ನುಸಿರು ಪೆತ್ತೆನ್ನ ತಾಯಿ
ಕನ್ನಡವೆ ಧನಧಾನ್ಯ ಕನ್ನಡವೆ ಮನೆ ಮಾನ್ಯ
ಕನ್ನಡವೆ ಎನಗಾಯ್ತು ಕಣ್ಣುಕಿವಿ ಬಾಯಿ

ಕಯ್ಯಾರ ಕಿಞ್ಞಣ್ಣ ರೈ ಅವರ -

ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ
ಎಲ್ಲರೂ ಎದ್ದೆದ್ದು ಓಡಿಬನ್ನಿ
ಕನ್ನಡದ ಗಡಿ ಕಾಯೆ
ಗುಡಿ ಕಾಯೆ, ನುಡಿ ಕಾಯೆ
ಕಾಯಲಾರನೆ ಸಾಯೆ
ಓ ಬನ್ನಿ ಬನ್ನಿ



ತಾಯಿ-ನಿಂಗಮ್ಮ, ತಂದೆ-ಹುಚ್ಚೇಗೌಡ



ಪೋಷಕರಾಗಿದ್ದ ಅಕ್ಕ ಸಾವಿತ್ರಮ್ಮ



ಭಾವ ಯು.ಎಂ. ಕಾಡಯ್ಯ



ಐವತ್ತು ತುಂಬಿದಾಗ ಶ್ರೀಮತಿ ಗಾಯತ್ರಿ, ಶ್ರೀ ರಾಮಣ್ಣ



ಮಕ್ಕಳು ಚಿಕ್ಕವರಾಗಿದ್ದಾಗ ಮಡದಿಯೊಂದಿಗೆ



ಕಾರ್ಯಕ್ರಮವೊಂದರಲ್ಲಿ ಶ್ರೀಮತಿ ಗಾಯತ್ರಿ ರಾಮಣ್ಣ ಅವರೊಂದಿಗೆ



ಡಾ॥ ಕುವೆಂಪು ಅವರು ಪದ್ಮವಿಭೂಷಣ ಪ್ರಶಸ್ತಿ ಪಡೆದ ಸಂದರ್ಭದಲ್ಲಿ
ಅಭಿನಂದಿಸುತ್ತಿರುವುದು



ದಾದಾ ಸಾಹೇಬ್‌ಫಾಲ್ಕೆ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ಪರಿಷತ್ತಿನಲ್ಲಿ
ಅಭಿನಂದಿಸಿದಾಗ ಡಾ॥ ರಾಜ್ ಅವರೊಂದಿಗೆ



೧೯೬೯ರಲ್ಲಿ ರಾಜಕುಮಾರ್, ನರಸಿಂಹರಾಜು, ಬಾಲಕೃಷ್ಣ ಅವರನ್ನು
ಸನ್ಮಾನಿಸಿದಾಗ ಸನ್ಮಾನ ಪತ್ರ ಓದುತ್ತಿರುವುದು



ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜಿನ ಲಲಿತಕಲಾ
ಕಾರ್ಯದರ್ಶಿಯಾಗಿ ಕಾರ್ಯಕ್ರಮವೊಂದರ ನಿರೂಪಣೆ



ಜಿ. ನಾರಾಯಣ, ಡಾ. ಹಂಪನಾ, ಎಚ್.ಎಸ್. ಪಾರ್ವತಿ ಹಾಗೂ
ಪ್ರೊ॥ ಇಕ್ಬಾಲ್ ಅಹಮದ್ ಅವರೊಂದಿಗೆ




ಪ್ರೊ॥ ಡಿ. ಲಿಂಗಯ್ಯ, ವೀರಪ್ಪ ಮೊಯಿಲಿ, ಡಾ॥ ಕಮಲಾ ಹಂಪನಾ
ದೊಡ್ಡರಂಗೇಗೌಡರೊಂದಿಗೆ



ಡಾ|| ಜಿ.ಎಸ್. ಶಿವರುದ್ರಪ್ಪ. ಡಾ|| ಎಸ್. ರಾಮೇಗೌಡ ಅವರೊಂದಿಗ



ಡಾ|| ಹಂಪನಾ, ಎಸ್. ಜಿ. ಮೈಸೂರುಮಠ, ನಿಟ್ಟೂರು ಶ್ರೀನಿವಾಸರಾವ್
ಹಾಗೂ ಕವಿ ಸಿದ್ದಲಿಂಗಯ್ಯ ಅವರೊಂದಿಗೆ



೧೯೮೦ ಡಿಸೆಂಬರ್‌ನಲ್ಲಿ 'ಸಂಯುಕ್ತ ಕರ್ನಾಟಕ'
ಪುನರಾರಂಭದ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿ ಗುಂಡೂರಾವ್
ಸಂಪಾದಕ ಕೆ.ಎಸ್. ಗೋಪಾಲಕೃಷ್ಣ ಅವರೊಂದಿಗೆ



ಡಾ. ಎಚ್. ನರಸಿಂಹಯ್ಯ, ಕೆ.ಎಸ್. ನರಸಿಂಹಸ್ವಾಮಿ, ಹಾ.ಮಾ.ನಾ.
ಅವರೊಂದಿಗೆ



೨೮–೨–೯೪ರಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ
ವಜ್ರಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಕೇಂದ್ರ ರೈಲ್ವೆ ಸಚಿವ
ಸಿ. ಕೆ. ಜಾಫರ್ ಷರೀಫ್ ಅವರೊಂದಿಗೆ



ಪ್ರತಿಭಟನಾ ಸಭೆಯೊಂದರಲ್ಲಿ ಸಾಮೂಹಿಕ ಕನ್ನಡೀಕರಣ
ಕಾರ್ಯಕ್ರಮದಲ್ಲಿ ಕಾರ್ಯಕರ್ತರೊಡನೆ



ಕೆ.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಕನ್ನಡ ಕಡ್ಡಾಯ ಮಾಡುವಂತೆ
ಆಗ್ರಹಿಸಿ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ



೫೦ ತುಂಬಿದ ಬಳಿಕ ಪತ್ನಿ ಶ್ರೀಮತಿ ಗಾಯತ್ರಿ
ಮಗಳು ಸುಷ್ಮಾ, ಮಗ ಸುಜಯ್ ಅವರೊಂದಿಗೆ

ಭಾಗ - ೨

ಚಳವಳಿ

ಕರ್ನಾಟಕ ಏಕೀಕರಣ ಮತ್ತು ಬೆಂಗಳೂರು

ಡಾ. ಎಚ್.ಎಸ್. ಗೋಪಾಲರಾವ್

ಬೆಂಗಳೂರು ಈಗ ಕರ್ನಾಟಕ ರಾಜ್ಯದ ರಾಜಧಾನಿ; ಹಿಂದೆ ಮೈಸೂರು ಸಂಸ್ಥಾನದ ರಾಜಧಾನಿ. ಕೆಂಪೇಗೌಡ ಕಟ್ಟಿಸಿದ ಬೆಂಗಳೂರು ವಿಜಾಪುರದ ಸೇನಾಧಿಪತಿ ರಣದುಲ್ಲಾಖಾನ್‌ಗೆ ವಶವಾಗಿ, ಅದನ್ನವನು ಷಹಜಿಗೆ ಜಹಗೀರು ನೀಡಿ, ಚಿಕ್ಕದೇವರಾಜ ಒಡೆಯರು ಮೂರು ಲಕ್ಷ ರೂಪಾಯಿಗಳಿಗೆ ಕೊಂಡು.... ಇವೆಲ್ಲವೂ ಇತಿಹಾಸದ ಸಂಗತಿಗಳು. ಏಕೀಕರಣಕ್ಕೆ ಮೊದಲು ಮೈಸೂರಿನ ಮತ್ತು ನಂತರ ಇಡೀ ಕರ್ನಾಟಕದ ರಾಜಧಾನಿಯಾಗಿರುವ ಬೆಂಗಳೂರು ಏಕೀಕರಣ ಹೋರಾಟದ ಸ್ಥಳ ವಾಗಿದ್ದಿರಬೇಕಲ್ಲವೆ? ಎಂಬ ಪ್ರಶ್ನೆಯೂ ಅಸಾಧುವಲ್ಲ. ಈಗಂತೂ ಬೆಂಗಳೂರನ್ನು ಕರ್ನಾಟಕದ ರಾಜಧಾನಿ ಎಂದು ಬಲವಂತವಾಗಿ ಒಪ್ಪಿಕೊಳ್ಳುವಂತಹ ಪರಿಸ್ಥಿತಿ ಬರುತ್ತಿದೆ. ಇಲ್ಲಿ ಕನ್ನಡ ಭಾಷೆ ಅಪರೂಪ, ಕನ್ನಡ ಜನ ಅಪರೂಪ, ಕನ್ನಡ ಸಂಸ್ಕೃತಿಯನ್ನು ಹುಡುಕಬೇಕು. ಬೆಂಗಳೂರಿನ ಎಷ್ಟೋ ಬಡಾವಣೆಗಳಿಗೆ ಕನ್ನಡ ಅಪರಿಚಿತ ಭಾಷೆ. ಹಿಂದೆಯೂ ಬೆಂಗಳೂರು ದಂಡು ಪ್ರದೇಶವು ಮೈಸೂರು ಸಂಸ್ಥಾನದ ಒಡೆಯರ ಆಳ್ವಿಕೆಗೆ ಸೇರಿರಲಿಲ್ಲ. ನಗರದವರಿಗೆ ದಂಡು ಪ್ರದೇಶ ಬೇರೊಂದು ಆಡಳಿತಕ್ಕೆ ಸೇರಿದ್ದ ಭಾಗ. ಮೊದಲಿಗೆ ಮೈಸೂರು ಸಂಸ್ಥಾನದ ರಾಜಧಾನಿ ಮೈಸೂರು ನಗರವೇ ಆಗಿದ್ದಾಗ, ಇಡೀ ರಾಜ್ಯದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅದೇ ಕೇಂದ್ರ ವಾಗಿತ್ತು. ಕ್ರಮೇಣ ಬೆಂಗಳೂರು ಆ ಸ್ಥಾನವನ್ನು ಪಡೆಯಿತು. ಬೆಂಗಳೂರಿನಲ್ಲಿ ಈಗಿನಂತೆ ಹಿಂದೆಯೂ ಸಾಹಿತಿಗಳಿಗಾಗಲೀ, ಸಂಗೀತಗಾರರಿಗಾಲೀ, ಕಲಾವಿದರಿ ಗಾಗಲೀ ಕೊರತೆ ಇರಲಿಲ್ಲ. ಈಗ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಇಡೀ ರಾಜ್ಯವು ಬೆಂಗಳೂರಿನತ್ತಲೇ ಹೆಚ್ಚು ದೃಷ್ಟಿ ಇಡುವುದಾದರೂ ಹಿಂದೆ ಮೈಸೂರು, ಧಾರವಾಡ, ದಾವಣಗೆರೆ ಇತ್ಯಾದಿ

ಸ್ಥಳಗಳೂ ಹೆಚ್ಚು ಗಮನ ಸೆಳೆಯುತ್ತಿದ್ದವು. ೧೯ ವಿವಿಧ ಆಡಳಿತ ಭಾಗಗಳಲ್ಲಿ ಹಂಚಿಹೋಗಿದ್ದ ಕರ್ನಾಟಕವು ಏಕೀಕರಣಗೊಳ್ಳುವುದು ಖಚಿತವೆನಿಸಿದಾಗ, ಅದರ ರಾಜಧಾನಿ ಯಾವುದಾಗ ಬೇಕೆಂದು ಅನೇಕರ ಪ್ರಶ್ನೆಯಾಗಿತ್ತು. ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ದಾವಣಗೆರೆ-ಹೀಗೆ ಹಲವು ಹೆಸರುಗಳ ಪ್ರಸ್ತಾಪವಿದ್ದರೂ, ಕೊನೆಗೆ ಬೆಂಗಳೂರೇ ಏಕೀಕರಣಗೊಂಡ ವಿಶಾಲ ಮೈಸೂರಿನ ರಾಜಧಾನಿಯಾಯಿತು. ಅಂತಹ ಬೆಂಗಳೂರು ಕರ್ನಾಟಕ ಏಕೀಕರಣಕ್ಕೆ ನಡೆದ ಹೋರಾಟದ ಸಂದರ್ಭದಲ್ಲಿ ಎಂತಹ ಪಾತ್ರವಹಿಸಿತ್ತು ಎಂದು ತಿಳಿಯುವುದು ಔಚಿತ್ಯ ಪೂರ್ಣವಾದುದಾಗಿದೆ.

೧೯ನೆಯ ಶತಮಾನದ ಕೊನೆಯ ದಶಕದಲ್ಲಿ ಕರ್ನಾಟಕ ಏಕೀಕರಣದ ಬಗೆಗೆ ವಿಶೇಷ ಆಸಕ್ತಿ ವ್ಯಕ್ತವಾದುದು ಉತ್ತರ ಕರ್ನಾಟಕದ ಭಾಗಗಳಲ್ಲಿ; ೨೦-೭-೧೮೯೦ ರಂದು ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಾದಾಗ ಕನ್ನಡಿಗರೆಲ್ಲರೂ ಒಂದಾಗುವ ಪ್ರಯತ್ನಗಳಿಗೆ ವಿಶೇಷ ಚಾಲನೆ ದೊರೆಯಿತು. ಪ್ರಾಚೀನ ಕನ್ನಡ ಕಾವ್ಯಗಳ ಪ್ರಕಟಣೆ, ಒಂದೇ ರೀತಿಯ ಗ್ರಾಂಥಿಕ ಭಾಷೆಯನ್ನು ರೂಢಿಗೆ ತರುವುದು, ನಾಡು-ನುಡಿಗಳಿಗೆ ಸಂಬಂಧಿಸಿದಂತೆ ಸ್ಪರ್ಧೆಗಳು, ಪ್ರೋತ್ಸಾಹ ಇತ್ಯಾದಿ ಹಲವಾರು ಯೋಜನೆಗಳನ್ನು ಕರ್ನಾಟಕ ವಿದ್ಯಾವರ್ಧಕ ಸಂಘ ಹಮ್ಮಿಕೊಂಡಿತ್ತು. ೧೯೦೮ರ ಜುಲೈ ೧೧ರಂದು ಧಾರವಾಡದಲ್ಲಿ ಗ್ರಂಥಕರ್ತರ ಎರಡನೆಯ ಸಮ್ಮೇಳನ ನಡೆಯಿತು. ಮೊದಲಿಗೆ ಆ ಸಮ್ಮೇಳನವನ್ನು ಬೆಂಗಳೂರಿನಲ್ಲೇ ನಡೆಸಲು ಉದ್ದೇಶಿಸಲಾಗಿತ್ತು. ಕಾರಣಾಂತರಗಳಿಂದ ಬೆಂಗಳೂರಿನಲ್ಲಿ ಸಮ್ಮೇಳನವನ್ನು ನಡೆಸಲಾಗಲಿಲ್ಲ. ಅದರ ಫಲವಾಗಿ ಕರ್ನಾಟಕ ಸಾಹಿತ್ಯ ಪರಿಷತ್ತು ರೂಪುಗೊಂಡಿತು. ಬೆಂಗಳೂರಿನಲ್ಲಿ ಕನ್ನಡ (ಕರ್ನಾಟಕ) ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬರಲು ಸರ್ ಎಂ. ವಿಶ್ವೇಶ್ವರಯ್ಯನವರನ್ನೊಳಗೊಂಡು ಅನೇಕ ಹಿರಿಯರ ದೂರದರ್ಶಿತ್ವ ಮತ್ತು ಪ್ರಯತ್ನಗಳು ಕಾರಣವಾದವು. ಒಂದಲ್ಲ ಒಂದು ದಿನ ಕರ್ನಾಟಕ ಏಕೀಕರಣ ಸಾಧಿತವಾಗಿಯೇ ಆಗುತ್ತದೆ ಎಂಬ ನಿರೀಕ್ಷೆಯಿಂದ, ಉತ್ತಮ ಭವಿಷ್ಯವನ್ನು ಎದುರುಗೊಳ್ಳುವ ನಿರೀಕ್ಷೆಯೊಂದಿಗೆ ಕರ್ನಾಟಕ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಸ್ಥಾಪಿತವಾಯಿತು. ಕನ್ನಡ(ಕರ್ನಾಟಕ) ಸಾಹಿತ್ಯ ಪರಿಷತ್ತಿನ ಸ್ಥಾಪನೆಯಿಂದಾಗಿ ಬೆಂಗಳೂರು ಕನ್ನಡ ಸಾಹಿತಿಗಳ, ಕಲಾವಿದರ ಮತ್ತು ಕನ್ನಡಾಭಿಮಾನಿಗಳ ವಿಶೇಷ ಸಂಪರ್ಕವನ್ನು ಪಡೆಯಿತು. ಕನ್ನಡಾಭಿಮಾನಿಗಳೆಲ್ಲರ ಅಭಿಪ್ರಾಯ ವಿನಿಮಯ ಕೇಂದ್ರವಾಯಿತು. ಸಾಹಿತ್ಯ ಪರಿಷತ್ತು ತನ್ನ ಸಾಹಿತ್ಯ ಸಮ್ಮೇಳನಗಳ ಸಂದರ್ಭದಲ್ಲಿ ಏಕೀಕರಣದ ಪರವಾಗಿ ಗೊತ್ತುವಳಿಗಳನ್ನು ತಪ್ಪದೆ ಸ್ವೀಕರಿಸುತ್ತಿತ್ತು.

೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಸಮ್ಮೇಳನದ ಸಂದರ್ಭ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪರವಾಗಿ ಮುದ್ರಿಸಿ ಪ್ರಕಟಿಸಲಾದ 'ಕರ್ನಾಟಕದ ಕೈಪಿಡಿ' ಎಂಬ ವಿಶೇಷ ಗ್ರಂಥವು ಬೆಂಗಳೂರಿನಲ್ಲೇ ಸಿದ್ಧವಾಗಿ, ಅಲ್ಲೇ ಮುದ್ರಿತವಾಯಿತು.

೧೯೨೮ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಏಕೀಕರಣ ಸಂಘ ಸ್ಥಾಪನೆಯಾದದ್ದು ಒಂದು ಮಹತ್ವದ ವಿಷಯ. ಆ ವೇಳೆಗೆ ಕರ್ನಾಟಕ ಬೇರೆ ಬೇರೆಡೆಯಲ್ಲಿ ಏಕೀಕರಣ ಸಂಘ/ಸಭೆ ಇತ್ಯಾದಿಗಳಿದ್ದರೂ, ಹಲವಾರು ಮಹತ್ವದ ಸಭೆಗಳು ನಡೆದಿದ್ದರೂ, ಮೈಸೂರು ಸಂಸ್ಥಾನದ

ರಾಜಧಾನಿಯಾದ ಬೆಂಗಳೂರಿನಲ್ಲಿ ಏಕೀಕರಣದ ಪರವಾಗಿ ಮಾತನಾಡುವ ಸಾಹಿತಿಗಳಿದ್ದರೂ ಏಕೀಕರಣ ಸಂಘವೊಂದರ ಅವಶ್ಯಕತೆ ಇದ್ದಂತಿರಲಿಲ್ಲ. ಬಹುತೇಕ ಏಕೀಕರಣ ಪರವಾದ ಕೆಲಸಗಳನ್ನು (ಕರ್ನಾಟಕ) ಕನ್ನಡ ಸಾಹಿತ್ಯ ಪರಿಷತ್ತೇ ಮಾಡುತ್ತಿತ್ತು. ಆದರೆ ಏಕೀಕರಣದ ಸಲುವಾಗಿಯೇ ಪ್ರತ್ಯೇಕವಾಗಿ ಧ್ವನಿ ಎತ್ತುವ ಒಂದು ಸಂಘಟನೆಯ ಅವಶ್ಯಕತೆ ಇದ್ದು, ೧೯೨೮ರಲ್ಲಿ ಅದು ಈಡೇರಿತು. ಬೆನಗಲ್ ರಾಮರಾಯರು ಅಧ್ಯಕ್ಷರಾಗಿಯೂ ಬಿ. ಶಿವಮೂರ್ತಿಶಾಸ್ತ್ರಿಗಳು ಕಾರ್ಯದರ್ಶಿಗಳಾಗಿಯೂ ಸಂಸ್ಥೆಯನ್ನು ಮುನ್ನಡೆಸಿದರು. ಆ ಸಂದರ್ಭದಲ್ಲಿ ಬೆಂಗಳೂರಿನ ಹಲವಾರು ಪ್ರಗತಿಶೀಲ ಲೇಖಕರು ಸಂಘಟನೆಯ ಜೊತೆಗೆ ಸಹಕರಿಸಿದರು. ಶಿವಮೂರ್ತಿಶಾಸ್ತ್ರಿಗಳು ಸಂಸ್ಥಾನದಲ್ಲಿ ಮಾತ್ರವಲ್ಲದೆ, ಸಂಸ್ಥಾನದ ಆಚೆಯ ಕನ್ನಡ ಪ್ರದೇಶಗಳಲ್ಲೂ ಕನ್ನಡಪರವಾದ ಅಭಿಮಾನವನ್ನು ಮೂಡಿಸುವಲ್ಲಿ ಯಶಸ್ವಿಯಾದರು. ಮಾಸ್ತಿ, ಅ.ನ.ಕೃ., ತ.ರಾ.ಸು, ತಿ.ತಾ.ಶರ್ಮ ಮತ್ತಿನ್ನೂ ಅನೇಕ ಲೇಖಕರು ಬೆಂಗಳೂರಿನಲ್ಲಿ ಏಕೀಕರಣದ ಸಲುವಾಗಿ ವಾತಾವರಣ ಸದಾ ಚಟುವಟಿಕೆಯಿಂದಿರುವಂತೆ ನೋಡಿಕೊಂಡರು. ಸಾಹಿತಿಗಳು ಮತ್ತು ಕಲಾವಿದರಿಗೆ ಏಕೀಕರಣದ ಪರವಾದ ಒಲವು ಮೂಡಿತ್ತಾದರೂ ಮೈಸೂರು ಸಂಸ್ಥಾನದ ರಾಜಕಾರಣಿಗಳಿಗೆ ಆ ಬಗ್ಗೆ ಇನ್ನೂ ಆಸಕ್ತಿ ಹುಟ್ಟಿರಲಿಲ್ಲ. ೧೯೪೬ರ ನವೆಂಬರ್‌ನಲ್ಲಿ ಬೆಂಗಳೂರು ನಗರದ ಸುಭಾಷ್ ನಗರದಲ್ಲಿ ಮೈಸೂರು ಕಾಂಗ್ರೆಸ್ ಸಭೆ ನಡೆದಾಗ ಏಕೀಕರಣಕ್ಕೆ ಅವಶ್ಯಕವಾದ ಗೊತ್ತುವಳಿಯನ್ನು ಸ್ವೀಕರಿಸಲಾಯಿತು.

ಕರ್ನಾಟಕ ಏಕೀಕರಣ ಇತಿಹಾಸದಲ್ಲಿ ೧೯೪೬ ಬಹಳ ಮುಖ್ಯವಾದ ವರ್ಷ. ಅನೇಕ ಸಭೆಗಳು, ಸಭೆಗಳ ಮೂಲಕ ನಿರ್ಣಯಗಳು, ಏಕೀಕರಣ ಪರವಾದ ಪರಿಚಯಾತ್ಮಕ ಪುಸ್ತಿಕೆಗಳು, ಲೇಖನಗಳು ಆ ವರ್ಷ ಇಡಿಯಾಗಿ ವಾತಾವರಣವನ್ನು ಏಕೀಕರಣ ಪರವಾಗಿ ಮಾಡಿದ್ದುವು. ಇನ್ನೇನು ಸ್ವಾತಂತ್ರ್ಯ ಲಭಿಸುತ್ತದೆ ಎನ್ನುವುದು ಖಚಿತವಾಗಿ ತಿಳಿದಿದ್ದುದರಿಂದ. ಸ್ವಾತಂತ್ರ್ಯದ ಜೊತೆಗೇ ಏಕೀಕರಣವನ್ನೂ ಸಾಧಿಸುವುದು ರಾಜಕಾರಣಿಗಳ ಮತ್ತು ಸಾಹಿತಿಗಳ ಅಪೇಕ್ಷೆಯಾಗಿತ್ತು.

೧೯೪೭ರ ಜೂನ್ ೯ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಪ್ರದೇಶ ಸಮಿತಿಯು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರುಗಳಾದ ಬಿ.ಎನ್. ಗುಪ್ತ, ಚಿಕ್ಕಲಿಂಗಯ್ಯ, ಡಿ. ಎಚ್. ಚಂದ್ರಶೇಖರಯ್ಯ, ಭೂಪಾಳಂ ಚಂದ್ರಶೇಖರಯ್ಯ ಅವರುಗಳಿಂದ 'ಮುಂದಿನ ಮೈಸೂರು' ಎಂಬ ವಿಷಯದಲ್ಲಿ ಉಪನ್ಯಾಸಗಳನ್ನು ಏರ್ಪಡಿಸಿತ್ತು. ಆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದವರು ಎಸ್.ವಿ. ಕೃಷ್ಣಮೂರ್ತಿರಾಯರು. ಆ ಸಂದರ್ಭದಲ್ಲಿ ಸಾಹಿತ್ಯ ಪರಿಷತ್ತು, ಭಾರತದ ಘಟನಾ ಸಮಿತಿಯು ಭಾಷಾವಾರು ಪ್ರಾಂತರಚನೆಗೆ ಸಮಿತಿಯೊಂದನ್ನು ರಚಿಸಿರುವುದನ್ನು ಮತ್ತು ಅದರಲ್ಲಿ ರಂಗನಾಥ ದಿವಾಕರರನ್ನು ಸದಸ್ಯರನ್ನಾಗಿ ನೇಮಿಸಿರುವುದನ್ನು ಸ್ವಾಗತಿಸಿತು. ಮೈಸೂರು ಸಂಸ್ಥಾನವೂ ಸೇರಿದಂತೆ ರಚಿತವಾಗುವ ಕರ್ನಾಟಕ ಪ್ರಾಂತವು ಮೈಸೂರಿನ ಮಹಾರಾಜರ ನೇತೃತ್ವದಲ್ಲೇ ಇರಬೇಕೆಂಬುದೂ ಅದರ ಅಪೇಕ್ಷೆಯಾಗಿತ್ತು.

ಭಾರತಕ್ಕೆ ೧೯೪೭ರ ಆಗಸ್ಟ್ ೧೫ರಂದು ಸ್ವಾತಂತ್ರ್ಯ ಲಭಿಸಿತು. ಮೈಸೂರು ಸಂಸ್ಥಾನದ

ಜನತೆ ನಂತರ ಜವಾಬ್ದಾರಿ ಸರ್ಕಾರಕ್ಕಾಗಿ 'ಮೈಸೂರು ಚಲೋ' ಚಳವಳಿಯನ್ನು ನಡೆಸಿ ೨೪-೧೦-೪೭ರಂದು ಜವಾಬ್ದಾರಿ ಸರ್ಕಾರ ಪಡೆದರು.

ಸ್ವಾತಂತ್ರ್ಯವೇನೋ ಲಭಿಸಿತು. ಅದರ ಜೊತೆಗೆ ಬಯಸಿದ್ದ ಏಕೀಕರಣ ಸಾಧ್ಯವಾಗಿರಲಿಲ್ಲ. ಹಿಡಿದ ಪಟ್ಟು ಬಿಡದೆ ಅದನ್ನೂ ಸಾಧಿಸಬೇಕೆಂಬುದು ಹಲವಾರು ನಾಯಕರ ಆಸೆಯಾಗಿತ್ತು. ಮೈಸೂರಿನ ಕೆಲವು ನಾಯಕರು ಮಾತ್ರ ಏಕೀಕರಣದ ವಿರುದ್ಧವಾದ ಅಭಿಪ್ರಾಯ ಹೊಂದಿದ್ದರೂ ಸಹ, ಬಹುತೇಕ ನಾಯಕರು ಏಕೀಕರಣದ ಪರವಾಗಿಯೇ ಇದ್ದರು. ಕರ್ನಾಟಕದಾದ್ಯಂತ ವಿವಿಧ ಭಾಗಗಳಲ್ಲಿ ಏಕೀಕರಣ ಪರವಾದ ಸಭೆ, ಸಮಾರಂಭ, ಇತ್ಯಾದಿಗಳು ನಡೆಯುತ್ತಲೇ ಇದ್ದವು.

೧೯೪೪೮ರ ಮೇ ೨೨ ಮತ್ತು ೨೩ರಂದು ಬೆಂಗಳೂರಿನ ಕುಮಾರಾ ಪಾರ್ಕ್‌ನಲ್ಲಿ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯಿಂದ ನೇಮಕವಾಗಿದ್ದ ಸಂಧಾನ ಸಮಿತಿಯ ಸದಸ್ಯರು ಮತ್ತು ಮೈಸೂರು ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿ ಸದಸ್ಯರೂ ಸೇರಿ ಕರ್ನಾಟಕ ಏಕೀಕರಣದ ಸಂಬಂಧವಾಗಿ ಮಾತುಕತೆಗಳನ್ನು ನಡೆಸಿದರು. ಅದರ ಫಲ ಶ್ರುತಿಯನ್ನು ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಎಸ್.ನಿಜಲಿಂಗಪ್ಪನವರು ಮತ್ತು ಎಂ.ಪಿ.ಸಿ.ಸಿ. ಅಧ್ಯಕ್ಷರಾದ ಟಿ. ಸಿದ್ಧಲಿಂಗಯ್ಯನವರು ಒಟ್ಟಾಗಿ ಪ್ರಕಟಿಸಿದರು. ಆ ಪ್ರಕಾರ 'ಕರ್ನಾಟಕಕ್ಕೆಲ್ಲಾ ಒಂದೇ ಆಡಳಿತ ಇರಬೇಕೆಂಬ ವಿಚಾರದಲ್ಲಿ ಸೌಹಾರ್ದದ ಮಾತುಕತೆಗಳು ನಡೆದು, ಮೈಸೂರು ಸಂಸ್ಥಾನ ಮತ್ತು ಕರ್ನಾಟಕದ ವಿವಿಧ ಭಾಗಗಳು ಸೇರಿದ ಏಕೀಕೃತ ಕರ್ನಾಟಕಕ್ಕೆ ಮೈಸೂರಿನ ಮಹಾರಾಜರೇ ಸಾಂಕುಶ ಪ್ರಭುತ್ವ ನಡೆಸುವ ಮಹಾರಾಜರಾಗಿದ್ದು ಒಂದೇ ಆಡಳಿತವಿರಬೇಕೆಂದೇ' ತೀರ್ಮಾನವಾಗಿತ್ತು. ಅಂತಹ ಸಮಯದಲ್ಲಿ ಹಲವಾರು ಆಕ್ಷೇಪಣೆಗಳೂ ಪ್ರಕಟಗೊಂಡವು. ಅಂತಹ ಆಕ್ಷೇಪಣೆಗಳಲ್ಲಿ ಒಂದೆಂದರೆ, 'ಕರ್ನಾಟಕದ ರಾಜಧಾನಿ ಯಾವುದು?', 'ಧಾರವಾಡವೋ ಬೆಂಗಳೂರೋ' ಎಂದು ಕೆಲವರೂ 'ಐತಿಹಾಸಿಕ ವೈಭವದ ದೃಷ್ಟಿಯಿಂದ ಹಂಪೆಯನ್ನೇ ರಾಜಧಾನಿಯನ್ನಾಗಿ ಮಾಡಬೇಕು, ಮತ್ತೆ ಅದೇ ನಮ್ಮ ವಿಜಯನಗರಿಯಾಗಬೇಕು' ಎಂದು ಹಲವರೂ 'ದಾವಣಗೆರೆ ಅಥವಾ ಹರಿಹರ ಆಗಬಹುದಲ್ಲ' ಎಂದು ಕೆಲವರೂ ಕೇಳುತ್ತಿದ್ದರು.

ಬೆಂಗಳೂರಿನ ಏಕೀಕರಣ ಸಂಘವು ಕ್ರಿಯಾಶೀಲವಾಗಿತ್ತು. ಬೆಂಗಳೂರಿನಲ್ಲಿ ಎಂದೂ ತನ್ನ ದನಿ ಉಡುಗಲು ಅವಕಾಶ ನೀಡಲಿಲ್ಲ. ಹಿರಿಯ ನಾಯಕರು ಯಾರು ಬೆಂಗಳೂರಿಗೆ ಬಂದರೂ ಅವರಿಗೆ ಮನವಿ ಸಲ್ಲಿಸುವ, ಮಾತನಾಡಿ ಏಕೀಕರಣದ ಅವಶ್ಯಕತೆ ಮತ್ತು ಅನಿವಾರ್ಯತೆಗಳನ್ನು ಮನವರಿಕೆ ಮಾಡಿಕೊಡುವ ಕೆಲಸ ನಡೆದೇ ಇತ್ತು.

೨೦-೪-೧೯೫೧ರಂದು ಎ.ಐ.ಸಿ.ಸಿ. ಅಧ್ಯಕ್ಷ ಪುರುಷೋತ್ತಮದಾಸ ಟಂಡನ್ ಅವರು ಬೆಂಗಳೂರಿಗೆ ಬಂದಾಗ, ಏಕೀಕರಣ ಸಂಘವು ಸನ್ಮಾನಿಸಿ ಶೀಘ್ರವೇ ಕರ್ನಾಟಕ ಪ್ರಾಂತ ರಚನೆಗೆ ಅವಕಾಶ ಮಾಡಿಕೊಡಬೇಕೆಂದು ಮನವಿ ಸಲ್ಲಿಸಿತು.

೧೩-೭-೧೯೫೧ರಂದು ಬೆಂಗಳೂರಿನ ಸರ್ ಕೆ.ಪಿ. ಪುಟ್ಟಣ್ಣ ಚೆಟ್ಟರ ನಗರ ಭವನದಲ್ಲಿ ಅಖಿಲ ಕರ್ನಾಟಕ ಪ್ರಾಂತರಚನಾ ಸಮ್ಮೇಳನ ನಡೆಯಿತು. ಅದೇ ಸಂದರ್ಭದಲ್ಲಿ ಬೆಂಗಳೂರಿನ ಲಾಲ್‌ಬಾಗಿನ ಗಾಜಿನಮನೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಮಾವೇಶವೂ

ನಡೆಯಿತು ಮತ್ತು ಭಾರತದ ಬಹುತೇಕ ಹಿರಿಯ ಕಾಂಗ್ರೆಸ್ ನಾಯಕರು ಆ ಸಂದರ್ಭ ಬೆಂಗಳೂರಿನಲ್ಲಿದ್ದರು. ಅಖಿಲ ಕರ್ನಾಟಕ ಪ್ರಾಂತರಚನಾ ಸಮ್ಮೇಳನಕ್ಕೆ ಎಲ್ಲ ರಾಜಕೀಯ ಪಕ್ಷಗಳ ಮುಖ್ಯರಲ್ಲದೆ, ಸಾಹಿತಿಗಳು, ಸಮಾಜದ ವಿವಿಧ ಕ್ಷೇತ್ರಗಳ ಗಣ್ಯರೂ ಸಹ ಪ್ರತಿನಿಧಿಗಳಾಗಿ ಬಂದಿದ್ದರು. ಆಗ ಬೆಂಗಳೂರು ನಗರ ಸಭೆಯ ಮೇಯರ್ ಆಗಿದ್ದ ಆರ್. ಅನಂತರಾಮನ್ ಅವರು ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿದ್ದರು. ಟಿ. ಸುಬ್ರಹ್ಮಣ್ಯಂ ಅವರು ಸಮ್ಮೇಳನದ ಅಧ್ಯಕ್ಷರಾಗಿದ್ದರು. ಸಮ್ಮೇಳನದಲ್ಲಿ ಆಂಧ್ರದ ಕಳಾ ವೆಂಕಟರಾಯರು, ಮಹಾರಾಷ್ಟ್ರದ ಬಿ.ಎಸ್. ಹಿರೇ, ಮದರಾಸಿನ ಕಾಮರಾಜ ನಾಡಾರ್ ಅವರುಗಳೂ ಪಾಲ್ಗೊಂಡು ಕರ್ನಾಟಕ ಏಕೀಕರಣವನ್ನು ಬೆಂಬಲಿಸಿ ಮಾತನಾಡಿದರು. ಆ ವೇಳೆಗೆ ಪ್ರಕಟವಾಗಿದ್ದ 'ಧರ್ ವರದಿಯು ಸಲ್ಲದ ಮನಸ್ತಾಪಕ್ಕೆ ಅವಕಾಶ ಮಾಡಿದೆ' ಎಂಬ ಸರ್ ಷಣ್ಮುಖಂ ಚೆಟ್ಟಿಯವರ ಅಭಿಪ್ರಾಯವನ್ನು ಪ್ರಸ್ತಾಪಿಸಿದ ಅನಂತರಾಮನ್ ಅವರು 'ಮೈಸೂರು ಸಂಸ್ಥಾನವನ್ನೊಳಗೊಂಡ, ಮೈಸೂರಿನ ಮಹಾರಾಜರೇ ರಾಜ ಪ್ರಮುಖರಾಗಿರುವ ಅಖಂಡ ಕರ್ನಾಟಕದ ನಿರ್ಮಾಣವು ಶೀಘ್ರವೇ ಆಗಬೇಕು' ಎಂದು ಆಶಿಸಿದರು.

೧೯೫೩ರ ಸೆಪ್ಟೆಂಬರ್ ಮೊದಲ ವಾರದಲ್ಲಿ ಅ.ಕ.ರಾ.ನಿ. ಪರಿಷತ್ತು (ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು) 'ಕರ್ನಾಟಕ ವಾರ'ವನ್ನು ಆಚರಿಸಲು ಕನ್ನಡಗರಿಗೆ ಕರೆ ನೀಡಿತು. ವಿದ್ಯಾರ್ಥಿಗಳು, ವ್ಯಾಪಾರಿಗಳು, ನಾಗರಿಕರು ಒಂದಾಗಿ ಹರತಾಳ, ಸಭೆ, ಮೆರವಣಿಗೆಗಳನ್ನು ನಡೆಸಿ ಕನ್ನಡಿಗರು ಕರ್ನಾಟಕವನ್ನು ಪಡೆಯಲು ಎಲ್ಲಾ ತ್ಯಾಗಕ್ಕೂ ಸಿದ್ಧವೆಂಬುದನ್ನು ಎಲ್ಲೆಡೆ ವ್ಯಕ್ತಪಡಿಸಿದರು. ಕೆಲವೆಡೆ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವ, ರೈಲ್ವೆ ಹಳಿಗಳನ್ನು ಕೀಳುವಂತಹ ವಿಧ್ವಂಸಕ ಕೃತ್ಯಗಳು ನಡೆದಾಗ ಅ.ಕ.ರಾ.ನಿ. ಪರಿಷತ್ತಿನ ಅನೇಕ ಮುಖಂಡರನ್ನು ಮುಂಬಯಿ ಸರ್ಕಾರ ಬಂಧಿಸಿ ಸೆರೆಯಲ್ಲಿ ಇಟ್ಟಿತು. ಸೆಪ್ಟೆಂಬರ್ ೬ ಮತ್ತು ೭ ರಂದು ಬೆಂಗಳೂರಿನಲ್ಲಿ ಕೆ.ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಅ.ಕ.ರಾ.ನಿ. ಪರಿಷತ್ತಿನ ಕ್ರಿಯಾಸಮಿತಿಯ ಸಭೆಯು ಬಂಧಿತರಾಗಿರುವ ತಮ್ಮ ನಾಯಕರನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಸರ್ಕಾರಗಳನ್ನು ಒತ್ತಾಯಿಸುವ ನಿರ್ಣಯ ಸ್ವೀಕರಿಸಿತು.

೧೯೫೩ರ ಅಕ್ಟೋಬರ್ ೧ ರಂದು ಬಳ್ಳಾರಿ ಜಿಲ್ಲೆಯು ಮೈಸೂರು ಸಂಸ್ಥಾನದೊಡನೆ ವಿಲೀನವಾದಾಗ ಬೆಂಗಳೂರು ಹರ್ಷಿಸಿತು; ಮಾತ್ರವಲ್ಲದೆ ಆ ಘಟನೆಯ ನೆನಪಿಗಾಗಿ ಬೆಂಗಳೂರಿನ ಪೂರ್ಣಿಮಾ ಅಡ್ವರ್ಟೈಸಿಂಗ್ ಕಂಪೆನಿಯು 'ವೆಲ್‌ಕಂ ಬಳ್ಳಾರಿ' ಎಂಬ ಸ್ಮರಣ ಸಂಚಿಕೆಯನ್ನು ಪ್ರಕಟಿಸಿತು.

ರಾಜ್ಯ ಪುನರ್ವಿಂಗಡಣಾ ಆಯೋಗದ ಸದಸ್ಯರು ಜನತೆಯ ಅಭಿಪ್ರಾಯ ತಿಳಿಯಲು ಪ್ರವಾಸ ಮಾಡುತ್ತಿದ್ದಾಗ ೧೯೫೪ರ ಜೂನ್ ೨೩ ಮತ್ತು ೨೪ರಂದು ಬೆಂಗಳೂರಿಗೂ ಭೇಟಿ ನೀಡಿತು; ಹಲವು ಗಣ್ಯರನ್ನು ಭೇಟಿ ಮಾಡಿತು. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ಪಕ್ಷದ ಹೆಸರಿನಲ್ಲಿ ಯಾರೂ ಮನವಿಯನ್ನು ನೀಡಲು ಮತ್ತು ಹೇಳಿಕೆಗಳನ್ನು ನೀಡಲು ನಿರ್ಬಂಧಿಸಿದ್ದುದರಿಂದ, ವೈಯುಕ್ತಿಕವಾಗಿ ಕೆಲವು ನಾಯಕರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಆಗ ಇತರ ಹಲವಾರು ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ರಾಜ್ಯ

ಪುನರ್ವಿಂಗಡಣಾ ಆಯೋಗಕ್ಕೆ ಏಕೀಕರಣವಾಗಲೇಬೇಕೆಂಬ ಮನವಿ ಸಲ್ಲಿಸಿದವು. ಆಯೋಗದ ಸದಸ್ಯರಿಗೆ 'ಸುದರ್ಶನ' ಅತಿಥಿಗೃಹದಲ್ಲಿ ವಾಸ್ತವ್ಯ ಏರ್ಪಡಿಸಲಾಗಿದ್ದು, ಅದರಿಂದ ಸದಸ್ಯರಿಗೆ ಬೇಸರವಾಗಿತ್ತೆಂದು ಊಹಿಸಬಹುದಾಗಿದೆ.

ಮೈಸೂರು ಶಾಸನ ಸಭೆಯಲ್ಲೂ ಏಕೀಕರಣ ಪರವಾದ ಅಭಿಪ್ರಾಯಗಳು ಮೂಡಿಬಂದವು. ಸದಸ್ಯರ ಸಂಖ್ಯೆ ಕಡಿಮೆ ಇತ್ತು. ಬಹಳ ಪ್ರಯತ್ನಗಳ ನಂತರ ೧-೧೧-೧೯೫೬ರಂದು ಮೈಸೂರು ರಾಜ್ಯ ವಿಶಾಲವಾಯಿತು. ಮುಂಬಯಿ ಕರ್ನಾಟಕದ, ಮದ್ರಾಸ್ ಅಧಿಪತ್ಯದ, ಹೈದರಾಬಾದ್ ಕರ್ನಾಟಕದ ಕನ್ನಡ ಭಾಗಗಳೆಲ್ಲ ಸೇರಿ ವಿಶಾಲ ಮೈಸೂರು ರಾಜ್ಯವಾಯಿತು. ಕೊಡಗೂ ವಿಶಾಲ ಮೈಸೂರಿನ ಭಾಗವಾಯಿತು.

೧-೧೧-೧೯೫೬ರಂದು ಬೆಂಗಳೂರಿನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಆಗಿನ ರಾಷ್ಟ್ರಪತಿ ಬಾಬೂ ರಾಜೇಂದ್ರಪ್ರಸಾದರು ವಿಶಾಲ ಮೈಸೂರು-ರಾಜ್ಯವನ್ನು ಉದ್ಘಾಟಿಸಿದರು.

ಹಲವಾರು ಸಾಹಿತಿಗಳ, ಕಲಾವಿದರ ನೆಲೆಯಾದ ಬೆಂಗಳೂರು, ಹಿಂದೆ ಮೈಸೂರು ಸಂಸ್ಥಾನದ ರಾಜಧಾನಿಯೂ ಆಗಿದ್ದುದರಿಂದ ಅನೇಕ ರಾಜಕಾರಣಿಗಳಿಗೂ ಆಶ್ರಯ ನೀಡಿತ್ತು. ರಾಜಕಾರಣಿಗಳಲ್ಲಿ ಮಾತ್ರ ಕೆಲವರು ಏಕೀಕರಣ ವಿರೋಧ ಅಥವಾ ದ್ವಿಕರ್ನಾಟಕ ವಾದವನ್ನು ಮುಂದಿಡುತ್ತಿದ್ದರು. ಅದೆಲ್ಲಾ ಈಗ ಗೌಣ: ಎಲ್ಲ ಬಗೆಯ ಚರ್ಚೆಗೆ ಅವಕಾಶ ನೀಡಿದ್ದ ಬೆಂಗಳೂರು ಏಕೀಕೃತ ಕರ್ನಾಟಕದ ರಚನೆಗೆ ಉತ್ತಮ ವೇದಿಕೆಯಾಗಿ ಕೆಲಸ ಮಾಡಿದೆ; ರಾಜಧಾನಿಯಾಗಿ ಮುಂದುವರಿದಿದೆ.

ಮೈಸೂರು ಸಂಸ್ಥಾನ ಮತ್ತು ಕರ್ನಾಟಕ ಏಕೀಕರಣ

ಎನ್.ಪಿ. ಶಂಕರನಾರಾಯಣರಾವ್

ಕರ್ನಾಟಕವು ರಾಜಕೀಯ ಆಡಳಿತ ರೀತ್ಯಾ ಒಂದು ಘಟಕವಾಗಿ ರೂಪುಗೊಂಡು ನಾಲ್ಕು ದಶಕಗಳು ಉರುಳಿವೆ. ಹರಿದು ಹತ್ತು ತುಂಡುಗಳಾಗಿದ್ದ ನಮ್ಮ ನಾಡು ಬಹು ಕಾಲದಿಂದ ಕಂಡ ಕನಸು ಈಗ ನನಸಾಗಿದೆ. ಏಕೀಕರಣ ಚಳವಳಿಯ ಇತಿಹಾಸವನ್ನು, ಅದರ ನಾನಾ ಮುಖಗಳನ್ನು ವಿಶ್ಲೇಷಿಸುವ ಕೆಲಸ ನಡೆಯಬೇಕಾದ ಕಾಲ ಬಂದಿದೆ. ಅಂತಹ ಒಂದು ವಿಶ್ಲೇಷಣೆ ನಮ್ಮ ಏಕೀಕರಣದ ತಳಪಾಯವನ್ನು ಭದ್ರಗೊಳಿಸುವ ದೃಷ್ಟಿಯಿಂದಲೂ ಏಕೀಕೃತ ಕರ್ನಾಟಕದ ಭವಿಷ್ಯವನ್ನು ಕುರಿತು ನಮ್ಮಲ್ಲಿ ತಲೆ ದೋರಬಹುದಾದ ಅನುಮಾನಗಳನ್ನು ಪರಿಹರಿಸುವ ದೃಷ್ಟಿಯಿಂದಲೂ ನಡೆಯಬೇಕಾದುದು ಅತ್ಯಗತ್ಯ. ಇಲ್ಲಿ ಅಂತಹ ವಿಶ್ಲೇಷಣೆ ಹಾಗೂ ಚರ್ಚೆಗಳನ್ನು ಕುರಿತು ಒಂದು ಎಚ್ಚರಿಕೆಯ ಮಾತನ್ನು ಹೇಳಬಹುದು; ಅವುಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ನಮ್ಮ ಮನಸ್ಸಿಗೆ ಎಷ್ಟೇ ಕಹಿಯಾಗಿ ತೋರಲಿ, ಆಕ್ರೋಶದಿಂದ ಉದ್ರೇಕಗೊಳ್ಳದೆ ಸಮಾಧಾನದಿಂದ ಆ ಅಭಿಪ್ರಾಯಗಳ ಸತ್ಯಾಸತ್ಯತೆಗಳ ಬಗ್ಗೆ ಆಲೋಚಿಸ ಬೇಕಾದುದು ಅಗತ್ಯ.

ಮೈಸೂರು ಸಂಸ್ಥಾನದ ಸ್ಥೂಲ ಇತಿಹಾಸ

ವಿಜಯನಗರ ಸಾಮ್ರಾಜ್ಯವು ಶಿಥಿಲಗೊಳ್ಳುತ್ತ ಬಂದ ಕಾಲದಲ್ಲಿ ಈಗಿನ ಕರ್ನಾಟಕದ ದಕ್ಷಿಣ ಭಾಗದಲ್ಲಿ ತಲೆಯೆತ್ತಿದ ಹಲವು ಸಣ್ಣ ರಾಜ್ಯಗಳಲ್ಲಿ ಮೈಸೂರು ಸಹ ಒಂದು. ಅದಿಲ್‌ಶಾಹಿಗಳ ದಂಡಯಾತ್ರೆ ಯನ್ನು ಯಶಸ್ವಿಯಾಗಿ ಎದುರಿಸಿ ನಿಂತ ಹೆಮ್ಮೆ ಅದರದು. ರಾಜ ಒಡೆಯ ಕಂಠೀರವ ನರಸಿಂಹರಾಜ, ದೊಡ್ಡದೇವರಾಜ ಹಾಗೂ ಚಿಕ್ಕದೇವರಾಜ ಒಡೆಯರುಗಳು, ದಳವಾಯಿ ದೇವರಾಜಯ್ಯ, ನಂಜರಾಜಯ್ಯ, ಹೈದರಾಲಿ

ಮತ್ತು ಟಿಪ್ಪು ಸುಲ್ತಾನರ ಆಳ್ವಿಕೆಗಳಲ್ಲಿ ಅವ್ಯಾಹತವಾಗಿ ವಿಸ್ತಾರಗೊಳ್ಳುತ್ತ ಬಂದು, ೧೭೮೦ರ ವೇಳೆಗೆ ಈಗಿನ ಕರ್ನಾಟಕದ ಬಹು ಭಾಗಗಳನ್ನು ತಮಿಳುನಾಡು ಹಾಗೂ ಆಂಧ್ರಗಳ ಹಲವು ಭಾಗಗಳನ್ನೂ ಒಳಗೊಂಡ ವಿಶಾಲ ರಾಜ್ಯವಾಯಿತು. ೧೮ನೆಯ ಶತಮಾನದ ಬ್ರಿಟಿಷ್ ವಿಸ್ತರಣೆಯ ಚಂಡಮಾರುತಕ್ಕೆ ಗುರಿಯಾಗಿ ತನ್ನ ಸ್ವತಂತ್ರ ಅಸ್ತಿತ್ವವನ್ನು ನೀಗಿಕೊಂಡಿತು.

ಆಗ ಬ್ರಿಟಿಷರು ಇಂದಿನ ಕರ್ನಾಟಕದ ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಹಾಸನ, ಮಂಡ್ಯ, ಬೆಂಗಳೂರು, ಕೋಲಾರ ಹಾಗೂ ಮೈಸೂರು–ಈ ಒಂಬತ್ತು ಜಿಲ್ಲೆಗಳ ಪ್ರದೇಶವನ್ನು ಒಂದು ಆಶ್ರಿತ ಸಂಸ್ಥಾನವನ್ನಾಗಿ ರೂಪಿಸಿ, ಒಡೆಯರ ಸಂತತಿಗೆ ವಹಿಸಿತು. ಮುಮ್ಮಡಿ ಕೃಷ್ಣರಾಜ, ಚಾಮರಾಜ, ನಾಲ್ಮಡಿ ಕೃಷ್ಣರಾಜ ಹಾಗೂ ಜಯ ಚಾಮರಾಜ ಒಡೆಯರುಗಳು ಅದರ ರಾಜರಾಗಿದ್ದರು. ೫೦ ವರ್ಷಕಾಲ ಬ್ರಿಟಿಷ್ ಕಮಿಷನರುಗಳು ಆಡಳಿತ ನಡೆಸಿದರಾದರೂ ಅದರ ಪ್ರತ್ಯೇಕ ಅಸ್ತಿತ್ವ ಅಳಿಸಿಹೋಗಲಿಲ್ಲ.

ದಿವಾನ ರಂಗಾಚಾರ್ಲು, ಕೆ. ಶೇಷಾದ್ರಿ ಅಯ್ಯರ್, ಎಂ. ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್‌ರಂತಹ ಸಮರ್ಥ ಆಡಳಿತಗಾರರ ನೇತೃತ್ವದಲ್ಲಿ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಭಾರತದ ಇತರ ಪ್ರಾಂತಗಳಿಗೆ ಸಮಸಮನಾಗಿ ಪ್ರಗತಿಪರವಾಗಿ ಮುಂದುವರಿದಿತ್ತು. ಕನ್ನಡ ಭಾಷೆ ಮತ್ತು ಕನ್ನಡಿಗರು ಬಹುಮಟ್ಟಿಗೆ ಸೂಕ್ತ ಸ್ಥಾನಮಾನಗಳನ್ನು ಪಡೆದಿದ್ದರು. ಅಲ್ಲಿ ಬ್ರಿಟಿಷರ ಕಾಲದಲ್ಲಿ ನೇರವಾಗಿ ಬ್ರಿಟಿಷರ ಅಸ್ತಿತ್ವವು ಸಾಮಾನ್ಯ ಜನರ ಗಮನಕ್ಕೆ ಬರುತ್ತಲೇ ಇರಲಿಲ್ಲ.

ಭಾಷಾ ರಾಷ್ಟ್ರೀಯತೆಯ ಉಗಮ

೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಅಮೆರಿಕದ ಸ್ವಾತಂತ್ರ್ಯ ಹೋರಾಟ, ಫ್ರಾನ್ಸಿನ ಕ್ರಾಂತಿ ಮುಂತಾದ ರಾಜಕೀಯ ಪಲ್ಲಟಗಳು ಆಗುವವರೆಗೂ ಸಾಮಾನ್ಯವಾಗಿ ಅರಸೊತ್ತಿಗೆಯೊಂದೇ ರಾಜಕೀಯ ವ್ಯವಸ್ಥೆಯು ಎಲ್ಲೆಲ್ಲೂ ಅಸ್ತಿತ್ವದಲ್ಲಿತ್ತು. ರಾಜ ನಮ್ಮವನಲ್ಲ, ಪರಕೀಯ ಎಂದು ಜನರು ಭಾವಿಸಿದರೆ, ಆ ಜನಾಂದೋಲನವು ಸಹ ರೂಪಿಸುತ್ತಿದ್ದುದು ಒಬ್ಬ ರಾಜನನ್ನು ಮತ್ತು ಒಂದು ರಾಜ ಸಂತತಿಯನ್ನು. ಒಬ್ಬ ರಾಜ ಆಕ್ರಮಿಸಿಕೊಂಡು ತನ್ನ ಹಿಡಿತದಲ್ಲಿ ಯಶಸ್ವಿಯಾಗಿ ಎಷ್ಟು ಪ್ರದೇಶವನ್ನು ಒಳಪಡಿಸಿಕೊಳ್ಳಬಲ್ಲನೋ ಅಷ್ಟು ಅವನ ರಾಜ್ಯ. ಜನರು ಆಡುವ ಭಾಷೆಗೆ ಅದರಲ್ಲಿ ಮುಖ್ಯತ್ವ ಇರಲಿಲ್ಲ.

ಆದರೂ ಪಲವು ರಾಜ್ಯಗಳು ಒಂದೇ ಭಾಷೆಯ ಜನರನ್ನು ಒಳಗೊಂಡಿದ್ದುವು. ೧೭ನೆಯ ಶತಮಾನದಲ್ಲಿ ೧೩ ಮತ್ತು ೧೪ನೆಯ ಲೂಯಿಗಳ ಆಳ್ವಿಕೆಯಲ್ಲಿ ಫ್ರಾನ್ಸ್, ಫ್ರೆಂಚ್ ಭಾಷೀ ಜನರನ್ನೆಲ್ಲ ಒಳಗೊಂಡಿತು. ಅನಂತರ ಕಾಲಕ್ರಮದಲ್ಲಿ ಯೂರೋಪಿನ ಇತರ ಭಾಗಗಳಿಗೂ ಈ ಭಾವನೆ ವ್ಯಾಪಿಸಿತು.

ಭಾರತದಲ್ಲಿ ಮರಾಠಾ ರಾಜ್ಯದ ಉಗಮವನ್ನು ಸ್ವಲ್ಪಮಟ್ಟಿಗೆ ಭಾಷಾ ರಾಷ್ಟ್ರೀಯತೆಯ ವ್ಯಕ್ತರೂಪ ಎನ್ನಬಹುದು. ಬ್ರಿಟಿಷ್ ಆಳ್ವಿಕೆ ಆರಂಭವಾದ ಮೇಲೆ ಬಂಗಾಳಿ ಸಾಹಿತ್ಯ, ಬಂಗಾಳಿ ಭಾಷಾ ಜನರಲ್ಲಿ ಅಂತಹ ಭಾವನೆಯನ್ನು ಬೆಳೆಸಲು ಪ್ರಯತ್ನಿಸಿ, ಬಹಳಷ್ಟು ಯಶಸ್ಸನ್ನು

ಸಾಧಿಸಿತು. ಇತರ ಭಾಷಾ ಪ್ರದೇಶಗಳಲ್ಲೂ ಭಾಷಾ ರಾಷ್ಟ್ರೀಯ ಭಾವನೆಗಳು ಬೆಳೆದವು. ೧೯೨೦ರ ದಶಕದಲ್ಲಿ ಮಹಾತ್ಮಾ ಗಾಂಧಿಯವರು ಕಾಂಗ್ರೆಸ್‌ನ ಅಗ್ರ ನಾಯಕರಾದಾಗ ಕಾಂಗ್ರೆಸ್ ಭಾಷಾವಾರು ವ್ಯವಸ್ಥೆಯನ್ನು ತನ್ನ ಸಂಘಟನೆಗೆ ಬಳಸಿಕೊಂಡಿತು. ಹಳೆಯ ಮೈಸೂರು ಸಂಸ್ಥಾನವೂ ಸೇರಿದಂತೆ ಇಡೀ ಕರ್ನಾಟಕಕ್ಕೆ ಒಂದು ಪ್ರಾಂತ ಕಾಂಗ್ರೆಸ್ ಸಮಿತಿಯು ರಚಿತವಾಯಿತು.

ಮೈಸೂರಿನ ಆಡಳಿತ ವ್ಯವಸ್ಥೆ

ಕಮೀಷನರುಗಳು ೧೮೩೧ರಿಂದ ೫೦ ವರ್ಷಕಾಲ ಮೈಸೂರು ಸಂಸ್ಥಾನವನ್ನು ಆಳಿದರು. ಆ ಅವಧಿಯಲ್ಲಿ ನೆರೆಯ ಮದರಾಸು ಪ್ರಾಂತದ ಮಾದರಿಯಿಂದ ಪ್ರಭಾವಿತವಾದ ಒಂದು ಸಾರ್ವಜನಿಕ ಸೇವಾ ವ್ಯವಸ್ಥೆ ಇಲ್ಲಿ ಏರ್ಪಟ್ಟಿತು. ಮುಂದೆ ೧೮೮೧ರಲ್ಲಿ ರಂಗಾಚಾರ್ಲು ದಿವಾನರಾದ ಮೇಲೆ ಜನರು ತಮ್ಮ ಕುಂದುಕೊರತೆಗಳನ್ನು ಸರ್ಕಾರಕ್ಕೆ ತಿಳಿಯಪಡಿಸಲು ಅವಕಾಶ ಒದಗಿಸುವ ಉದ್ದೇಶದಿಂದ 'ಪ್ರಜಾಪ್ರತಿನಿಧಿ ಸಭೆ' ಎಂಬ ಒಂದು ಏರ್ಪಾಟು ಅಸ್ತಿತ್ವಕ್ಕೆ ಬಂತು. ೧೯೦೭ರಲ್ಲಿ ನ್ಯಾಯ ವಿಧಾಯಕ ಸಭೆ ಎಂಬ ವಿಧಾನ ಸಭೆಯನ್ನು ರಚಿಸಿದಾಗ ಪೂರ್ಣವಾದ ಎರಡು ಸದನಗಳ ವಿಧಾನ ಮಂಡಲ ರಚಿತವಾದಂತಾಯಿತು.

ಪ್ರಸಿದ್ಧ ಕನ್ನಡ ವಿದ್ವಾಂಸರೂ ಸಂಶೋಧಕರೂ ಆದ ಲೂಯಿ ರೈಸ್ (ಬಿ.ಎಲ್. ರೈಸ್) ಬಹಳ ವರ್ಷಗಳ ಕಾಲ ಸಂಸ್ಥಾನದ ಶಿಕ್ಷಣ ಇಲಾಖೆಯ ಮುಖ್ಯಸ್ಥರಾಗಿದ್ದರು. ಕನ್ನಡಕ್ಕೆ ಸಂಬಂಧಪಟ್ಟ ಎಲ್ಲ ಉತ್ತಮ ಕಾರ್ಯಗಳಲ್ಲೂ ಅವರು ಉತ್ಸುಕರಾಗಿದ್ದರು. ಗ್ರಂಥ ಸಂಪಾದನ, ಶಾಸನ ಸಂಪಾದನ, ಪಠ್ಯಪುಸ್ತಕಗಳ ರಚನೆ ಇಂತಹ ಮೂಲಭೂತ ಕಾರ್ಯಗಳಲ್ಲಿ ಅವರು ಮಾಡಿದ ಸೇವೆ ಕನ್ನಡ ಸರಸ್ವತಿ ಸೌಧದ ಅಸ್ತಿಭಾರದ ಮೂಲೆಗಲ್ಲುಗಳಂತಿದೆ.

ಇಪ್ಪತ್ತನೆಯ ಶತಮಾನದ ಆರಂಭದ ವರ್ಷಗಳಲ್ಲಿ ಇಲ್ಲಿ ಆರ್ಥಿಕ ಅಭಿವೃದ್ಧಿಯ ಕಾರ್ಯಗಳು ಆರಂಭಗೊಂಡುವು; ಅವು ಸರ್ಕಾರದ ವತಿಯಿಂದಲೇ ಆರಂಭವಾದುದು ಒಂದು ವಿಶೇಷ. ಆ ವೇಳೆಗಾಗಲೇ ಖಾಸಗಿ ಕಂಪನಿಗಳು ಹಲವು ಜವಳಿ ಕಾರ್ಖಾನೆಗಳನ್ನೂ ಚಿನ್ನದ ಗಣಿಗಳನ್ನೂ ಪ್ರಾರಂಭಿಸಿದ್ದುವು.. ಆಗ ಸರ್ಕಾರ ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿತು. ಈ ಪ್ರವೃತ್ತಿ ಮುಂದುವರಿದು ಬ್ಯಾಂಕು, ಕಬ್ಬಿಣ-ಉಕ್ಕು ಮುಂತಾದ ಕ್ಷೇತ್ರಗಳಲ್ಲಿಯೂ ಸರ್ಕಾರ ಪ್ರಮುಖ ಪಾತ್ರ ವಹಿಸಿತು.

ಈ ಪ್ರದೇಶದ ನೀರಾವರಿ ಅಭಿವೃದ್ಧಿಗೆ ಕೈ ಹಾಕಿದಾಗ ಪ್ರತ್ಯಕ್ಷವಾಗಿ ಬ್ರಿಟಿಷರ ಆಳ್ವಿಕೆಯಲ್ಲಿಯೇ ಇದ್ದ ಮದರಾಸು ಸರ್ಕಾರದೊಂದಿಗೆ ಸೆಣಸಾಟಕ್ಕೆ ಇಳಿಯಬೇಕಾಯಿತು. ಸಾಮಾನ್ಯವಾಗಿ ಪ್ರಬಲ ತಮಿಳು ಅಧಿಕಾರಿಗಳ ಅಭಿಪ್ರಾಯ ಹಾಗೂ ಒತ್ತಡಗಳಿಗೆ ಮಾನ್ಯತೆ ನೀಡುತ್ತಿದ್ದ ಮದರಾಸು ಸರ್ಕಾರದೊಂದಿಗೆ ಹೋರಾಡಿ, ಕೃಷ್ಣರಾಜ ಸಾಗರದ ಮತ್ತು ಸಂಬಂಧಪಟ್ಟ ಕಾಲುವೆಗಳ ಕೆಲಸವನ್ನು ಮುಗಿಸಿದುದನ್ನು ಅಲ್ಪಕಾರ್ಯ ಎಂದು ಪರಿಗಣಿಸುವಂತಿಲ್ಲ.

ಈ ವಿವರಣೆಯನ್ನು ಹೆಚ್ಚು ಮುಂದುವರಿಸುವ ಅಗತ್ಯವಿಲ್ಲ. ಇಲ್ಲಿ ಸ್ಥೂಲವಾಗಿ ಚಿತ್ರಿಸಿದ ಇತಿಹಾಸ ಹಾಗೂ ಆಡಳಿತ ವ್ಯವಸ್ಥೆಗಳ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದ ಜನರಲ್ಲಿ ತಮ್ಮ

ರಾಜರು ಮತ್ತು ಸರ್ಕಾರಗಳನ್ನು ಕುರಿತು ಅಭಿಮಾನಭಾವವು ಮೂಡಿದುದರಲ್ಲಿ ಸೋಜಿಗವೇನೂ ಇಲ್ಲ. ಅಂತಹ ಭಾವನೆ ಸಾಕಷ್ಟು ಪ್ರಬಲವಾಗಿತ್ತು ಎಂಬುದು ಕರ್ನಾಟಕ ಏಕೀಕರಣ ಚಳವಳಿಗೆ ಸಂಬಂಧಪಟ್ಟ ಹಾಗೆ ಒಂದು ಮುಖ್ಯ ವಿಚಾರ. ಮೈಸೂರು ರಾಜಸಂತತಿ ಮತ್ತು ಕನ್ನಡ ಇವೆರಡರ ಮೇಲೂ ಇಪ್ಪ ಸಮಾನ ಪ್ರೇಮದಿಂದಲೇ ಬಿ.ಎಂ.ಶ್ರೀ. 'ಮೈಸೂರೆನ್ನಿ, ಕನ್ನಡವೆನ್ನಿ ಏನೆಂದರೂ ಒಂದೇ' ಎಂದು ಹಾಡಿದರು.

ಈಚೆಗೆ ಕರ್ನಾಟಕದ ಇತಿಹಾಸವನ್ನು ಬರೆಯುತ್ತಿರುವ ವಿದ್ವಾಂಸರುಗಳಲ್ಲಿ ಮೈಸೂರು ರಾಜಮನೆತನವು ಕರ್ನಾಟಕದ ಇತಿಹಾಸದಲ್ಲಿ ವಹಿಸಿರುವ ಪಾತ್ರವನ್ನು ಗೌಣಗೊಳಿಸುವ ಪ್ರವೃತ್ತಿ ಕಂಡುಬರುತ್ತದೆ. ಪ್ರಾಚೀನ ಹಾಗೂ ಮಧ್ಯಯುಗಗಳಲ್ಲಿ ಚಾಲುಕ್ಯ, ರಾಷ್ಟ್ರಕೂಟ, ಗಂಗ, ಕದಂಬ, ಹೊಯ್ಸಳ, ವಿಜಯನಗರ ರಾಜ ಸಂತತಿಗಳು ನಮ್ಮ ಇತಿಹಾಸದಲ್ಲಿ ಆಯಾ ಕಾಲದಲ್ಲಿ ತಮ್ಮ ಸಂದರ್ಭ ಹಾಗೂ ಶಕ್ತಿಗಳಿಗೆ ಅನುಗುಣವಾದ ಪಾತ್ರ ವಹಿಸಿರುವಂತೆಯೇ ಮೈಸೂರು ರಾಜ ಸಂತತಿಯೂ ಪಾತ್ರ ವಹಿಸಿದೆ. ಯಾವುದನ್ನೂ ಉತ್ಪ್ರೇಕ್ಷಿಸಿಯೋ, ಕ್ಷುಲ್ಲಕಗೊಳಿಸಿಯೋ ಬರೆಯುವುದು ಇತಿಹಾಸ ನಿರೂಪಣೆಯೂ ಆಗುವುದಿಲ್ಲ, ಸತ್ಯ ಕಥನವೂ ಆಗುವುದಿಲ್ಲ.

ಮೈಸೂರಿನಲ್ಲಿ ಜರುಗಿದ ರಾಜಕೀಯ ಚಳವಳಿಗಳು

ಭಾರತದ ಇತರ ಪ್ರದೇಶಗಳಂತೆ ಇಲ್ಲಿ ಸಹ ಪತ್ರಿಕೆಗಳ ಪ್ರಕಟಣೆಯು ಜನಜಾಗೃತಿಗೆ ನಾಂದಿಯಾಯಿತು. ಇಲ್ಲಿ ತಲೆ ಎತ್ತಿದ್ದ ಮೊಟ್ಟಮೊದಲ ರಾಜಕೀಯ ಚಳವಳಿ ಎಂದರೆ 'ಮೈಸೂರು ಮೈಸೂರಿಗರಿಗೆ' ಚಳವಳಿ. ಆಗಿನ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಕಮೀಷನರುಗಳು ಮತ್ತು ಮೊದಲ ದಿವಾನರುಗಳ ಆಡಳಿತ ಕಾಲದಿಂದ ತಮಿಳು ಜನರೇ ಇದ್ದರು. ಅದರ ವಿರುದ್ಧ ಜರುಗಿದ ಆಂದೋಲನ ಇದು. ಇದರ ಹಿಂದೆ ತಲೆ ಎತ್ತಿದುದು ಬ್ರಾಹ್ಮಣೇತರ ಚಳವಳಿ. ಸರ್ಕಾರಿ ಸೇವೆ, ಶಿಕ್ಷಣ–ಇವೆರಡು ರಂಗಗಳಲ್ಲಿ ಬ್ರಾಹ್ಮಣೇತರರಿಗೆ ಸೂಕ್ತ ಪಾಲು ದೊರಕಿಸುವ ಉದ್ದೇಶ ಇದರದು.

ಸುಮಾರು ಇದೇ ಸುತ್ತಿನಲ್ಲಿಯೇ ಕಾಂಗ್ರೆಸ್ ರಾಜಕೀಯವು ಇಲ್ಲಿ ಪಾದಾರ್ಪಣ ಮಾಡಿತಾದರೂ ೧೯೩೭-೩೮ರ ವರೆಗೆ ಕಾಂಗ್ರೆಸ್ ಪ್ರತ್ಯಕ್ಷವಾಗಿ ಸಂಸ್ಥಾನೀ ಚಳವಳಿಗಳಲ್ಲಿ ತಲೆಯಿಡುತ್ತಿರಲಿಲ್ಲ.

೧೯೧೭ರಲ್ಲಿ ಸ್ಥಾಪನೆಯಾದ ಪ್ರಜಾಮಿತ್ರ ಮಂಡಲಿ ಬಹಳ ಮಟ್ಟಿಗೆ ಮದರಾಸು ಪ್ರಾಂತದ ಜಸ್ಟಿಸ್ ಪಕ್ಷದ ಪ್ರಭಾವದಿಂದ ನಡೆಯುತ್ತಿತ್ತು. ೩೦ರ ದಶಕದಲ್ಲಿ ಮುಂಬಯಿ, ಮದರಾಸು ಪ್ರಾಂತಗಳಂತೆಯೇ ಇಲ್ಲಿ ಸಹ ಕಾಂಗ್ರೆಸ್ ಪ್ರಭಾವದಿಂದ ಬ್ರಾಹ್ಮಣೇತರ ಚಳವಳಿಗಳು ಇಳಿಮುಖವಾಗಿ ೧೯೩೮ರ ವೇಳೆಗೆ ಆಗಿನ ಸಂಯುಕ್ತ ಪ್ರಜಾಪಕ್ಷ ಮತ್ತು ಸಂಸ್ಥಾನದಲ್ಲಿದ್ದ ಕಾಂಗ್ರೆಸ್ ಕಾರ್ಯಕರ್ತರು ಒಂದುಗೂಡಿ ಮೈಸೂರು ಸ್ಟೇಟ್ ಕಾಂಗ್ರೆಸ್ ಸ್ಥಾಪನೆಯಾಯಿತು. ಅದು ರಾಜ್ಯಾದ್ಯಂತವೂ ಸತ್ಯಾಗ್ರಹ ಚಳವಳಿ ನಡೆಸಿ ಸಂಸ್ಥಾನದ ಪ್ರಮುಖ ರಾಜಕೀಯ ಸಂಸ್ಥೆಯಾಯಿತು.

ಭಾಷಾ ಚಳವಳಿ

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿಯೇ ಕನ್ನಡ ಮೈಸೂರು ಸಂಸ್ಥಾನದಲ್ಲಿ ಹೊಸ ದಾರಿಗಳನ್ನು ಕಂಡುಕೊಳ್ಳಲು ತವಕ ಪಡತೊಡಗಿತು ಎಂಬುದು ಸ್ಪಷ್ಟ. ಭಾಷೆಯ ಹೊಸವಿಧಾನಗಳ ಬಳಕೆಯಲ್ಲಿ ಮೈಸೂರು ಕರ್ನಾಟಕದ ಇತರ ಭಾಗಗಳಂತೆಯೇ, ಸರಿಸುಮಾರು ಅದೇ ದಾರಿಯಲ್ಲಿಯೇ ಸಾಗಿತು. ಕಾದಂಬರಿ, ಕವನ, ನಾಟಕ, ವಿಜ್ಞಾನವನ್ನು ಪರಿಚಯಪಡಿಸುವ ಸಾಹಿತ್ಯ ಮೊದಲಾದ ಎಲ್ಲ ಕ್ಷೇತ್ರಗಳೂ ಇದನ್ನು ಸಾಬೀತು ಪಡಿಸುತ್ತವೆ.

ಕರ್ನಾಟಕ ಏಕೀಕರಣದ ಭಾವನೆ ಇಲ್ಲಿಗೆ ಪ್ರವೇಶಿಸಿದುದು ಈ ಭಾಷಾ ಪುನರುಜ್ಜೀವನದ ಮೂಲಕ. ಉಳಿದ ಭಾಗಗಳಲ್ಲಿ ಮುಖ್ಯವಾಗಿ ಮುಂಬಯಿ ಪ್ರಾಂತ ಹಾಗೂ ಹೈದರಾಬಾದು ಸಂಸ್ಥಾನಗಳಲ್ಲಿ ಕನ್ನಡ ಜನರ ಮೇಲೆ ಪರಕೀಯ ಭಾಷೆಗಳನ್ನು ಹೇರುವ ಪ್ರಯತ್ನಗಳಿಗೆ ಪ್ರತಿಭಟನೆಯಾಗಿ ಕರ್ನಾಟಕ ಏಕೀಕರಣ ಭಾವನೆ ಜನರಲ್ಲಿ ಮೂಡಿ ಪ್ರಬಲವಾಯಿತು. ಅಂದರೆ ಮೈಸೂರಿನಲ್ಲಿ ಜನಸಾಮಾನ್ಯದ ಮಟ್ಟಿಗೆ ಯಾವ ಮಟ್ಟದಲ್ಲಿಯೂ, ಗ್ರಾಮಮಟ್ಟದಿಂದ ಮಹಾರಾಜರ ಮಟ್ಟದವರೆಗೆ ಕನ್ನಡ ಬಳಸಲು ಯಾವುದೇ ಅಡೆತಡೆಗಳಿರಲಿಲ್ಲ ಎಂಬುದು ಗಮನಾರ್ಹ ಸಂಗತಿ. ಪ್ರಭುವಿನ ಭಾಷೆಯೇ ಅದಾಗಿತ್ತು ಎಂಬುದು ಮಹತ್ವದ ವಿಚಾರ.

ಇದರಿಂದ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯ ಮುಂತಾದ ಸಂಸ್ಥೆಗಳು, ರೂಪುಗೊಂಡು ಕನ್ನಡ ಭಾಷೆಗೆ ನವಚೇತನ ತುಂಬಲು ಕೈಗೊಂಡ ಕಾರ್ಯಕ್ರಮಗಳಿಗೆ ಸರ್ಕಾರ ಸಹಾಯಕವಾಗಿತ್ತು. ಪರಿಷನ್ಮಂದಿರ, ಇಂಗ್ಲಿಷ್-ಕನ್ನಡ ನಿಘಂಟು ಇಂದಿಗೂ ಆ ಸಹಾಯಕ ಮನೋಭಾವದ ಸಾಕ್ಷಿಗಳಾಗಿ ನಿಂತಿವೆ.

ಈ ಕಾರಣಗಳಿಂದ ಇಲ್ಲಿ ಮುಖ್ಯವಾದ ಒತ್ತು ದೊರೆತುದು ಕರ್ನಾಟಕದ ಸಾಂಸ್ಕೃತಿಕ ಏಕತೆಯ ಕಡೆಗೆ. ಆಧುನಿಕ ರೀತಿಯ ಇತಿಹಾಸ ರಚನೆ, ಶಾಸನಗಳ ಸಂಗ್ರಹ ಹಾಗೂ ವಿಶ್ಲೇಷಣೆ, ಪ್ರಾಚ್ಯ ಉತ್ಖನನಗಳು ಇವೆಲ್ಲ ಉತ್ಸಾಹದಿಂದ ಜರುಗಿದುವು.

೪೦ರ ದಶಕದ ಆರಂಭದವರೆಗೆ ಈ ಎಲ್ಲ ಬೆಳವಣಿಗೆಗಳೂ ಮಂದಗತಿಯಲ್ಲಿ ಸಾಗುತ್ತಿದ್ದುವು. ಆ ದಶಕದ ಅಖಿಲ ಭಾರತದ ಹಾಗೂ ಜಗತ್ತಿನ ವಿದ್ಯಮಾನಗಳು ಬೀರಿದ ಪ್ರಭಾವದಿಂದಾಗಿ ಇವೆಲ್ಲವೂ ತ್ವರಿತಗೊಂಡುವು. ಸ್ವಾತಂತ್ರ್ಯವು ಬಾರದೆ ಏಕೀಕರಣವು ಕೈಗೂಡುತ್ತಿರಲಿಲ್ಲ; ಅಷ್ಟೇ ಮಟ್ಟಿಗೆ ೧೯೪೨ ಮತ್ತು ೧೯೪೭ರಲ್ಲಿ ಮೈಸೂರು ಸಂಸ್ಥಾನದಲ್ಲಿ ಜರುಗಿದ ಚಳವಳಿಗಳು ಜರುಗದೆ ಹೋಗಿದ್ದರೆ ಏಕೀಕರಣದ ದಾರಿ ಹೆಚ್ಚು ದುರ್ಗಮವಾಗುತ್ತಿತ್ತು ಎಂಬುದರಲ್ಲಿ ಏನೂ ಸಂದೇಹವಿಲ್ಲ.

ಕ್ವಿಟ್ ಇಂಡಿಯಾ ಮತ್ತು ಮೈಸೂರು ಚಲೋ

೨೦ರ ದಶಕಗಳಿಂದಲೂ ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯ ಭಾವನೆಗಳು ಪ್ರಬಲಗೊಳ್ಳುತ್ತಾ ಬಂದುವಾದರೂ, ಪ್ರತ್ಯಕ್ಷವಾಗಿ ಇಲ್ಲಿ ಯಾವ ಚಳವಳಿಯೂ ಜರುಗಲಿಲ್ಲ. ಆದ್ದರಿಂದ ದೇಶಪ್ರೇಮಿ ತರುಣರು ಹೊರಪ್ರಾಂತಗಳಿಗೆ ಹೋಗಿ ಚಳವಳಿಗಳಲ್ಲಿ ಪಾಲು

ಗೊಳ್ಳುತ್ತಿದ್ದರು. ೩೦-೩೧ರ ಚಳವಳಿಯಲ್ಲಿ ಸಂಸ್ಥಾನದ ನೂರಾರು ಸತ್ಯಾಗ್ರಹಿಗಳು ಅಂಕೋಲ, ಶಿರಸಿ, ಸಿದ್ದಾಪುರ ತಾಲೂಕುಗಳ ಚಳವಳಿಗಳಲ್ಲಿ ಸೆರೆಮನೆಗಳಿಗೆ ಹೋದರು. ಸಂಸ್ಥಾನ ಕಾಂಗ್ರೆಸ್ ನಡೆಸಿದ ೧೯೩೮, ೪೦ರ ಸತ್ಯಾಗ್ರಹಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿಯೂ ರಾಷ್ಟ್ರೀಯ ಭಾವನೆಗಳು ವ್ಯಾಪಿಸಿದುವು.

೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ಆರಂಭವಾದಾಗ ಇಲ್ಲಿ ನಡೆದ ಚಳವಳಿಯ ಬಿರುಸು ಯಾವ ಬ್ರಿಟಿಷ್ ಭಾರತೀಯ ಪ್ರಾಂತದ್ದಕ್ಕೂ ಕಡಿಮೆಯಲ್ಲ. ಬೆಂಗಳೂರು, ಮೈಸೂರುಗಳ ವಿದ್ಯಾರ್ಥಿ ಮುಷ್ಕರಗಳು, ಕಾರ್ಮಿಕ ಮುಷ್ಕರಗಳು, ನಗರಗಳಲ್ಲಿ ಗೋಲಿಬಾರುಗಳ ಸಂದರ್ಭದಲ್ಲಿ ಜನರ ವರ್ತನೆ, ಇವೆಲ್ಲವೂ ಆ ಅಂಶವನ್ನು ಸಾಬೀತುಗೊಳಿಸುತ್ತವೆ. ಶ್ರವಣಬೆಳಗೊಳ ಮತ್ತು ಹಾಸನ ಜಿಲ್ಲೆಯಾದ್ಯಂತ ನಡೆದ ಸಂತೆ ಸತ್ಯಾಗ್ರಹಗಳನ್ನು ಹಾಗೂ ಈಸೂರಿನ ಹೋರಾಟಗಳು ಗ್ರಾಮಾಂತರಗಳಲ್ಲಿ ಜರುಗಿದ ಆಂದೋಲನಗಳ ಪ್ರಖರತೆಯನ್ನು ತೋರಿಸುತ್ತವೆ. ಇವು ದಾಖಲಾತಿಗೆ ದೊರೆತ ಅಂಶಗಳು. ಕಣ್ಣಿಗೆ ಬೀಳದಂತೆ ಜನಮನದಲ್ಲಿ ಆದ ಮಾರ್ಪಾಡುಗಳು ಊಹೆಗೆ ಮಾತ್ರ ನಿಲುಕುವಂತಹವು.

೧೯೪೭ರಲ್ಲಿ ಸ್ವಾತಂತ್ರ್ಯ ದೊರೆತಾಗ, ಸೂಕ್ತ ಸಮಯದಲ್ಲಿ ಮೈಸೂರು ಭಾರತ ಒಕ್ಕೂಟದಲ್ಲಿ ವಿಲೀನಗೊಂಡಿತು. ಆದರೆ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಸರ್ಕಾರವು ಸ್ಥಾಪನೆಯಾಗಲಿಲ್ಲ. ಅದರ ಪೂರ್ವಾಪರಗಳ ಕಥನ ಇಲ್ಲಿ ಅಗತ್ಯವಿಲ್ಲ. ೧೯೪೭ರ ಸೆಪ್ಟೆಂಬರ್ ೧ ರಿಂದ 'ಮೈಸೂರು ಚಲೋ' ಎಂದು ಹೆಸರಾಗಿರುವ ಆಂದೋಲನ ಆರಂಭವಾಯಿತು. ಮೈಸೂರು ಅರಮನೆಯ ಮುಂದೆ ಸತ್ಯಾಗ್ರಹ ಹೂಡುವ ಚಳವಳಿ ಇದು. ಐದು ವಾರಗಳಿಗಿಂತಲೂ ಹೆಚ್ಚು ಕಾಲ ವ್ಯಾಪ್ತಿಯ ಹೋರಾಟ ಜರುಗಿ ಅಕ್ಟೋಬರಿನಲ್ಲಿ ಜವಾಬ್ದಾರಿ ಸರ್ಕಾರವು ಅಸ್ತಿತ್ವಕ್ಕೆ ಬಂತು.

''ಈ ಹೋರಾಟಗಳಿಗೂ, ಏಕೀಕರಣಕ್ಕೂ ಏನು ಸಂಬಂಧ?'' ಎಂದು ಯಾರಾದರೂ ಕೇಳಬಹುದು. ಆ ಕಾಲದ ಮೈಸೂರು ಸಂಸ್ಥಾನದಲ್ಲಿ ಒಡೆಯರ ಮನೆತನದ ಮೇಲಿನ ಅಭಿಮಾನ ಹಾಗೂ ಮೈಸೂರಿನ ಪ್ರತ್ಯೇಕತೆಯ ಬಗ್ಗೆ ಹೆಮ್ಮೆ ಈ ಎರಡು ಭಾವನೆಗಳೂ ಪ್ರಬಲವಾಗಿದ್ದುವು. ಬಹುಪಾಲು ಜನರು ಕನ್ನಡ ಭಾಷಾ ಪ್ರದೇಶಗಳೆಲ್ಲ ಮೈಸೂರಿಗೆ ಸೇರಿಕೊಳ್ಳಲಿ ಎಂದು ಅಭಿಪ್ರಾಯಪಡುತ್ತಿದ್ದರು. ಮೈಸೂರು ರಾಜಮನೆತನದ ಇರುವಿಕೆಗೇ ಧಕ್ಕೆ ಒದಗುವುದಾದರೆ, ಅವರು ಸುಲಭಕ್ಕೆ ಏಕೀಕರಣಕ್ಕೆ ಒಪ್ಪುತ್ತಿರಲಿಲ್ಲ. 'ಮೈಸೂರು ಅರಸರ ಕೃಪಾಛತ್ರದಲ್ಲಿ ಏಕೀಕೃತ ಕರ್ನಾಟಕ' ಎಂಬುದು ಅವರ ಕಲ್ಪನೆಯಾಗಿತ್ತು.

೧೯೪೨ ಮತ್ತು ೧೯೪೭ರಲ್ಲಿ ನಡೆದ ಚಳವಳಿಗಳು ಇಂತಹ ಭಾವನೆಗಳನ್ನು ಸಾಕಷ್ಟು ಮಟ್ಟಿಗೆ ದುರ್ಬಲಗೊಳಿಸಿದುವು. ೫೦ರ ದಶಕದಲ್ಲಿ ಏಕೀಕರಣವು ಕಾರ್ಯಗತವಾಗುವ ಮಟ್ಟ ಮುಟ್ಟಿದಾಗ ಮಹಾರಾಜರ ಹಾಗೂ ರಾಜಮನೆತನದ ಸ್ಥಾನಮಾನಗಳ ಸಮಸ್ಯೆಯು ಒಂದು ಕಗ್ಗಂಟಾಗಿ ಪರಿಣಮಿಸದೆ ಹೋದುದಕ್ಕೆ ಕಾರಣಗಳನ್ನು ಹುಡುಕುತ್ತ ಹೋದರೆ ಆ ಚಳವಳಿಗಳು ಜನಮನದ ಮೇಲೆ ಬೀರಿದ ಪ್ರಭಾವದ ಮಹತ್ವವು ಸ್ಪಷ್ಟವಾಗುತ್ತದೆ.

ಸ್ವಾತಂತ್ರ್ಯಾನಂತರ ಎದ್ದ ಸಮಸ್ಯೆ

ಸ್ವಾತಂತ್ರ್ಯ ಬಂತು; ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಬಂತು, ೧೯೫೨ರಲ್ಲಿ ಭಾರತದಲ್ಲಿ ವಯಸ್ಕ ಮತದಾನದ ಆಧಾರದ ಮೇಲೆ ಮೊಟ್ಟಮೊದಲ ಚುನಾವಣೆಗಳು ಜರುಗಿದುವು. ಪ್ರಸಿದ್ಧ ಮಾನವಶಾಸ್ತ್ರಜ್ಞ, ಪ್ರೊ. ಎಂ.ಎನ್. ಶ್ರೀನಿವಾಸ್‌ರಂತಹ ದೂರದರ್ಶಿಗಳಾದ ವಿದ್ವಾಂಸರು ಜಾತಿಯು ತನ್ನ ಪರಂಪರಾಗತ ಪಾತ್ರಗಳ ಜೊತೆ ಜೊತೆಗೆ ರಾಜಕೀಯದಲ್ಲಿ ಒತ್ತಡ ತರುವ ಒಂದು ವ್ಯವಸ್ಥೆಯಾಗಿ ಮಾರ್ಪಡುತ್ತಿದೆ ಎಂಬುದನ್ನು ಆಗಲೇ ಕಂಡುಕೊಂಡರು.

ಸ್ವಾತಂತ್ರ್ಯಾನಂತರವೂ ಏಕೀಕರಣವು ತಡವಾದುದಕ್ಕೆ ಪ್ರಮುಖ ಕಾರಣವು ಭಾರತ ಸರ್ಕಾರದ ಮನೋಭಾವವು. ಪ್ರಾಂತಗಳ ಭಾಷಾವಾರು ಪುನರ್ವ್ಯವಸ್ಥೆಗೆ ವಿರೋಧವಾಗಿದ್ದುದೇ ಆದರೂ, ಹಳೆಯ ಮೈಸೂರು ಸಂಸ್ಥಾನ ಪ್ರದೇಶದಲ್ಲಿ ಏಕೀಕರಣದ ಪರವಾಗಿ ಪ್ರಬಲವಾದ ಒತ್ತಡ ಏಳದೆ ಹೋದುದಕ್ಕೆ ಜಾತಿ ಆಧಾರದ ಮೇಲಿನ ಅಧಿಕಾರ ರಾಜಕೀಯದ ಲೆಕ್ಕಾಚಾರಗಳು ಸಹ ಒಂದು ಮುಖ್ಯ ಕಾರಣ. ಈಗ ಇವೆರಡನ್ನು ಸ್ವಲ್ಪ ನೋಡೋಣ.

೧೯೪೭ರಲ್ಲಿ ಸ್ವಾತಂತ್ರ್ಯ ಬಂತು, ಭಾರತವು ಮತದ ಆಧಾರದ ಮೇಲೆ ಇಬ್ಭಾಗವೂ ಆಯಿತು. ೧೯೪೭ರ ಆಗಸ್ಟ್‌ನಲ್ಲಿ ಆರಂಭವಾದ ಮತೀಯ ಗಲಭೆಗಳು ೭ ಲಕ್ಷ ಜನರ ಪ್ರಾಣ ತೆಗೆದು ೧ ಕೋಟಿ ೨೦ ಲಕ್ಷ ಜನರನ್ನು ನಿರ್ವಸಿತರನ್ನಾಗಿ ಮಾಡಿದುವು. ಸರ್ಕಾರದ ಮುಖ್ಯ ಗಮನ ಆ ಸಮಸ್ಯೆಯ ಮೇಲೆ ಇತ್ತು. ಮತದ ಹಾಗೆಯೇ ಭಾಷೆಯು ಸಹ ಎಷ್ಟು ಮಟ್ಟಿಗೆ ಒಂದುಗೂಡಿಸಬಲ್ಲ ಶಕ್ತಿಯೋ, ಅಷ್ಟೇ ಮಟ್ಟಿಗೆ ಜನರನ್ನು ಉದ್ರೇಕಿಸಿ ಸಂಘರ್ಷಕ್ಕೆ ದೂಡಬಲ್ಲಂತಹ ಒಂದು ಶಕ್ತಿ. ಮತದ ಆಧಾರದ ಮೇಲಿನ ವಿಭಜನೆಯು ತಂದ ದುರಂತವನ್ನು ಕಣ್ಣಾರೆ ಕಂಡಿದ್ದ ಅಂದಿನ ರಾಷ್ಟ್ರೀಯ ನಾಯಕರು, ಭಾಷಾವಾರು ಪ್ರಾಂತಗಳ ಬಗ್ಗೆ ಉತ್ಸುಕರಾಗಿಲ್ಲದೆ ಇದ್ದುದರಲ್ಲಿ ಆಶ್ಚರ್ಯ ಪಡುವಂತಹದೇನೂ ಇಲ್ಲ. ಅದರಿಂದ ೧೯೫೩ರಲ್ಲಿ ಪೊಟ್ಟಿ ಶ್ರೀರಾಮುಲು ಆಂಧ್ರದ ರಚನೆಗಾಗಿ ಹುತಾತ್ಮರಾಗುವವರೆಗೆ ಅವರ ಗಮನ ಅತ್ತ ಹೋಗಲಿಲ್ಲ. ಆ ನಂತರದ ಅಖಿಲ ಭಾರತ ಬೆಳವಣಿಗೆಗಳನ್ನು ಪ್ರಸ್ತಾಪಿಸುವುದು ಈ ಲೇಖನದ ವ್ಯಾಪ್ತಿಗೆ ಅಗತ್ಯವಿಲ್ಲ.

ಮೈಸೂರು ಸಂಸ್ಥಾನದಲ್ಲಿ ಪ್ರಬಲವಾಗಿದ್ದ ಒಕ್ಕಲಿಗ ಸಮುದಾಯವು ಏಕೀಕರಣದಿಂದ ತಾವು ತಮ್ಮ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತೇವೆ ಎಂದು ಭಾವಿಸಿದರು. ಆದರೆ ಆ ವಿಚಾರವನ್ನು ಬಹಿರಂಗವಾಗಿ ಪ್ರಚಾರ ಮಾಡಿ ಪ್ರತಿಪಾದಿಸುವುದು ಕಷ್ಟ. ಆ ಕಾರಣದಿಂದ ಸುತ್ತಿ ಬಳಸಿ, ಮೈಸೂರಿಗೆ ಪ್ರತ್ಯೇಕ ಇತಿಹಾಸವಿದೆ, ಸಣ್ಣ ಆಡಳಿತ ಘಟಕಗಳು ಆಡಳಿತಾನುಕೂಲದ ದೃಷ್ಟಿಯಿಂದ ಅತ್ಯಂತ ಸಮರ್ಥನೀಯ, ಮುಂತಾಗಿ ಹಲವು ವಾದಗಳನ್ನು (ಅಥವಾ ಅಪ-ವಾದಗಳನ್ನು!) ಮುಂದು ಮಾಡಲಾಯಿತು. ಆದರೆ ಅದಕ್ಕೆ ಮೀರಿದ ಅಡ್ಡಿಯೇನೂ ಏಳಲಿಲ್ಲ. ಏಕೀಕರಣದ ಪರವಾಗಿ ಬಲವತ್ತರವಾದ ಜನಾಭಿಪ್ರಾಯ ರೂಪಿಸಲು ಯಾವ ಪ್ರಮುಖ ರಾಜಕೀಯ ಪಕ್ಷವೂ ಮುಂದಾಗಲಿಲ್ಲ; ಅದೇ ರೀತಿ ಏಕೀಕರಣವನ್ನು ವಿರೋಧಿಸುವಂತಹ ಪಕ್ಷವೂ ಇರಲಿಲ್ಲ. ಕನ್ನಡಾಭಿಮಾನಿಗಳ ನಡುವೆ, ಅಂದರೆ ಮೊದಲಿನಿಂದ ಸಾಂಸ್ಕೃತಿಕವಾಗಿ

ಏಕೀಕರಣದ ಪ್ರತಿಪಾದನೆ ಮಾಡುತ್ತಿದ್ದ ಉತ್ಸುಕರ ನಡುವೆ ಕಂಡುಬರುತ್ತಿದ್ದ ಉತ್ಸಾಹ ಜನಸಾಮಾನ್ಯರಲ್ಲಿ ಕಂಡು ಬರುತ್ತಿರಲಿಲ್ಲ.

ಒಂದು ಅವಲೋಕನ

ಐತಿಹಾಸಿಕವಾಗಿ ತುಂಗಭದ್ರೆಯ ದಕ್ಷಿಣ ಹಾಗೂ ಉತ್ತರಗಳ ಬೆಳವಣಿಗೆಗಳಲ್ಲಿ ಸಾಕಷ್ಟು ಭೇದಗಳು ಕಂಡುಬರುತ್ತವೆಂಬುದು ಅಲ್ಲಗಳೆಯಲಾಗದ ಒಂದು ಸತ್ಯ ಸಂಗತಿ. ಉತ್ತರ ಭಾಗವು ಬಾದಾಮಿಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಬಹಮನಿ, ಅದಿಲ್‌ಶಾಹಿ ಹಾಗೂ ಮುಂಬಯಿ ಪ್ರಾಂತಗಳಲ್ಲಿ ಸೇರಿತ್ತಾದರೆ, ದಕ್ಷಿಣ ಭಾಗವು ಗಂಗ, ಕದಂಬ, ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಸಂಸ್ಥಾನಗಳಲ್ಲಿ ಸೇರಿತ್ತು. ಭಾಷೆ ಒಂದಾದರೂ ಈ ದೀರ್ಘಕಾಲದ ಪ್ರತ್ಯೇಕ ರಾಜಕೀಯ ಇತಿಹಾಸವು ತನ್ನದೇ ಆದ ವಿಶಿಷ್ಟ ಮನೋಭಾವಗಳನ್ನು ಸೃಷ್ಟಿಸಿರುತ್ತದೆ. ಕರ್ನಾಟಕ ಏಕೀಕರಣ ಚಳವಳಿಗೆ ಮೈಸೂರು ಸಂಸ್ಥಾನದಲ್ಲಿ ಕಂಡುಬಂದ ಪ್ರತಿಕ್ರಿಯೆಯ ಮೂಲ ಆ ದೀರ್ಘಕಾಲದ ಪ್ರತ್ಯೇಕ ರಾಜಕೀಯ ಇತಿಹಾಸದಲ್ಲಿ ಇದೆ. ಏಕೀಕರಣವಾಗುವ ಹಿಂದಿನ ದಿನದವರೆಗೆ ತನ್ನದೇ ಆದ ಒಂದು ಪ್ರತ್ಯೇಕ ಅಸ್ತಿತ್ವ ಪಡೆದಿದ್ದ ಒಂದು ರಾಜಕೀಯ ಹಾಗೂ ಆಡಳಿತ ಘಟಕ ಬೇರೆ ಯಾವ ಬಗೆಯಲ್ಲಿಯೂ ಪ್ರತಿಕ್ರಿಯಿಸುವ ಸಾಧ್ಯತೆ ಇರಲಿಲ್ಲ ಎಂದು ತೋರುತ್ತದೆ.

ಕನ್ನಡಿಗರ ಪರ ಇಲ್ಲದ ರಾಜಕೀಯ ಇಚ್ಛಾಶಕ್ತಿ

ವೇಣುಗೋಪಾಲ ಕಾಸರಗೋಡು

೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ನಿರ್ಮಾಣಗೊಂಡು ಭಾರತದ ಆಯಾ ಪ್ರದೇಶದ ಜನ ತಮ್ಮ ತಮ್ಮ ಮಾತೃಭಾಷೆ, ಸಂಸ್ಕೃತಿಗಳ ಚೌಕಟ್ಟಿನೊಳಗೆ ತಮ್ಮ ಭವಿಷ್ಯವನ್ನು ರೂಪಿಸುವ ಅವಕಾಶ ಪಡೆದರು. ಆದರೆ ಕಾಸರಗೋಡಿನಂಥ ಗಡಿ ಪ್ರದೇಶದ ಮಂದಿ ತಮ್ಮ ನೆಲದೊಳಗೇ ತಬ್ಬಲಿಗಳಾಗಿ, ಸ್ವಂತ ಸಂಸ್ಕೃತಿಗೆ ಎರವಾಗಿ, ಪರಕೀಯ ಸಂಸ್ಕೃತಿಗೆ ಅಪರಿಚಿತರಾಗಿ ತ್ರಿಶಂಕುಗಳಾದರು. ಕಾಸರಗೋಡಿನ ಬಹುಪಾಲು ಜನ – ಅವರು ತುಳುವರು, ಕೊಂಕಣಿ, ಮರಾಠೀ ಯಾರೇ ಇರಬಹುದು – ಕನ್ನಡಿಗರು ಕನ್ನಡ ಸಂಸ್ಕೃತಿ ಒಪ್ಪಿಕೊಂಡವರು.

ಕನ್ನಡಿಗರು ಮೊದಲಿಂದಲೂ ಸಾತ್ವಿಕರು. ಆದ್ದರಿಂದಲೇ ಬಹುಶಃ ಪ್ರಾಂತ್ಯ ಪುನರ್ವಿಂಗಡಣೆಯ ಹೊಣೆ ಹೊತ್ತ ಫಜಲ್ ಆಲಿ ಆಯೋಗ– ಅನಂತರ ಅದರ ವರದಿಯನ್ನು ಪುನರ್ವಿಮರ್ಶೆ ಮಾಡಿದ ಚತುರ್ನಾಯಕ ಸಮಿತಿ– ಮತ್ತೆ ೧೯೬೬ರಲ್ಲಿ ನೇಮಕಗೊಂಡ ಮಹಾಜನ ಆಯೋಗವೂ ಸೇರಿದಂತೆ ಎಲ್ಲ ನಿರ್ಣಾಯಕ ಗಳಿಗೆಗಳಲ್ಲೂ ತಮಗೆ ಅನ್ಯಾಯ ಆದಾಗ ಸಾತ್ವಿಕವಾಗಿ ಪ್ರಜಾಸತ್ತಾತ್ಮಕವಾಗಿ ಪ್ರತಿಕ್ರಿಯೆ ನೀಡಿದ್ದರು. ಆದರೆ ಅದರ ಪ್ರಯೋಜನ ಎಷ್ಟು, ಈ ೪೦ ವರ್ಷಗಳಲ್ಲಿ ನಡೆದದ್ದು ಏನು ಎಂಬುದು ಎಲ್ಲರಿಗೂ ಗೊತ್ತಿದೆ. ಕೇರಳ ಕಂಡ ಅತ್ಯುನ್ನತ ರಾಜಕೀಯ ನೇತಾರ ಇ.ಎಂ.ಎಸ್. ನಂಬೂದಿರಿಪಾಡ್ ಅವರಿಂದ ಹಿಡಿದು ಇಂದಿನ ಮುಖ್ಯಮಂತ್ರಿ ಇ.ಕೆ. ನಯನಾರ್‌ವರೆಗಿನ ಈ ಅವಧಿಯಲ್ಲಿ ಯಾರೇ ಮಲಯಾಳಿಯಿರಲಿ. ಎಲ್ಲರೂ ಕಾಸರಗೋಡು ಕನ್ನಡದ ನೆಲ, ತುಳುನಾಡು ಎಂದು ಮುಂತಾಗಿ ಒಪ್ಪಿಕೊಂಡವರೇ. ಚರಿತ್ರೆ. ಇತಿಹಾಸ, ಸಾಹಿತ್ಯ, ಜಾನಪದ ಎಲ್ಲವೂ ಕನ್ನಡದ ಪರ ಸಾಕ್ಷಿ ನುಡಿಯುತ್ತವೆ. ಆದರೂ

ರಾಜಕೀಯ ಹಿತಾಸಕ್ತಿ ಎಂಬುದೊಂದು ಇದೆಯಲ್ಲ. ಆಧುನಿಕ ಭಾರತದಲ್ಲಿ ಎಲ್ಲವನ್ನೂ ಜೀರ್ಣೋಭವ ಮಾಡುವ ವಾತಾಪಿ ಶಕ್ತಿಯಾದ ಅದರ ಮುಂದೆ ಬೇರೆ ಮಾತಿಲ್ಲ.

ನಿಜ. ರಾಜಕೀಯವಾಗಿ ಕಾಸರಗೋಡಿನಲ್ಲಿ ಕನ್ನಡಿಗರು ತಮ್ಮ ಬಲ, ಬೆಂಬಲ ಸಾಬೀತುಪಡಿಸುವುದು ಈಗ ಕಷ್ಟ. ಅಂದರೆ ಇಲ್ಲಿ ಕನ್ನಡಿಗರಿಲ್ಲವೆಂದಲ್ಲ. ಹತ್ತು ಹಲವು ಪಕ್ಷಗಳಲ್ಲಿ ಚದುರಿಹೋಗಿದ್ದಾರೆ. ಭ್ರಮನಿರಸನ ಸಹಜವಾದ್ದರಿಂದ ಇಂತಹ ಕಡೆ ಬಹುಮತದ ಪರಿಹಾರ ಕಷ್ಟ. ಕೇರಳೀಕರಣವನ್ನು ತಡೆಯಲು ಭಗೀರಥ ಪ್ರಯತ್ನ ಇಲ್ಲಿ ಸಾಧ್ಯವಾಗುತ್ತಿಲ್ಲ.

ಕಾಸರಗೋಡು ಕನ್ನಡನಾಡೆಂದು ಯಾವುದೆಲ್ಲ ವಿಧಾನಗಳಿಂದ ಸಾಧಿಸ ಬಹುದಾಗಿತ್ತೋ ಆ ಎಲ್ಲ ರೀತಿಗಳಲ್ಲೂ ತೋರಿಸಿಕೊಟ್ಟದ್ದಾಗಿದೆ. ನಾಲ್ಕೈದು ಬೃಹತ್ ಸಮ್ಮೇಳನಗಳನ್ನು ಸಂಘಟಿಸಿ ಇಲ್ಲಿನ ಕನ್ನಡತನವನ್ನು ಸಾಧಿಸಿದ್ದಾಗಿದೆ. ಇನ್ನೇನೂ ಉಳಿದಿಲ್ಲ. ರಾಜಕೀಯ ಇಚ್ಛಾಶಕ್ತಿ ಮಾತ್ರ ಕಾಸರಗೋಡಿನಲ್ಲಿ ಕನ್ನಡಿಗರ ಪರವಾಗಲಿಲ್ಲ. ಆದರೂ ಇಲ್ಲಿ ಕನ್ನಡದ ಕಸುವನ್ನು ಇನ್ನಷ್ಟು ಬಲವಾಗಿ ಕಾಪಾಡಿಕೊಳ್ಳಲು ಸಾಧ್ಯವಾಗಬೇಕಿತ್ತು ಅನ್ನಿಸುವುದು ಸಹಜ.

ಕೆಲವು ಸಮಸ್ಯೆಗಳನ್ನು ಕನ್ನಡಿಗರೇ ಇಲ್ಲಿ ನಿರ್ಮಿಸಿಕೊಂಡರು ಎನ್ನದೆ ವಿಧಿಯಿಲ್ಲ. ಮಹಾಜನ ವರದಿ ತಮಗೆ ಅನುಕೂಲವಾಗಿದೆ ಎಂದು ನಿರಾಳವಾದದ್ದು ಕನ್ನಡದ ಸಂಘಟನೆ ದುರ್ಬಲವಾಗಲು ಕಾರಣವಾಯಿತು.

'ಎಲ್ಲಾದರು ಇರು ಎಂತಾದರು ಇರು... ನೀ ಕನ್ನಡವಾಗಿರು' ಎಂದು ಮುಂಬೈ ಕನ್ನಡಿಗನಿಗೋ ದೆಹಲಿ, ಮದರಾಸ್ ಕನ್ನಡಿಗನಿಗೋ ಹೇಳಬಹುದು. ಯಾಕೆಂದರೆ ಆತ ಅಲ್ಲಿಗೆ ವಲಸೆ ಹೋಗಿ ನೆಲೆಸಿದ್ದು ಸ್ವಂತ ಇಚ್ಛೆಯಿಂದ. ಆದರೆ ಇದೇ ಕವಿಮಾತನ್ನು ಕಾಸರಗೋಡು, ಸೊಲ್ಲಾಪುರ, ಜತ್ತ, ಅಕ್ಕಲಕೋಟೆ, ಆದವಾನಿ, ಆಲೂರು, ರಾಯದುರ್ಗ, ಮಡಕಶಿರಾ, ಉದಕಮಂಡಲ ಮಂತಾದ ಸ್ಥಳಗಳ ಕನ್ನಡಗರಿಗೆ ಅನ್ವಯಿಸುವುದು ಕಷ್ಟ ಮತ್ತು ತಪ್ಪು ಕಾರಣ ಇಲ್ಲಿಯ ಕನ್ನಡಿಗ ವಲಸೆ ಹೋಗಿ ನಲೆಸಿದವನಲ್ಲ. ಹುಟ್ಟಿದ ನೆಲದಲ್ಲೇ ನೆಲಸಿದವನು. ಆತನಿಗೆ ಈ ಧಾಟಿಯಲ್ಲಿ ಉಪದೇಶ ನೀಡುವುದು ಅತ್ಯಂತ ಕ್ರೂರ ಮತ್ತು ಅಮಾನವೀಯ.

ಚೆನ್ನಮ್ಮನ ನಾಡಿನಲ್ಲಿ ಕನ್ನಡಕ್ಕೆ ಕಂಟಕ

ಪದ್ಮರಾಜ ದಂಡಾವತಿ

'ಕಾಯ್ ಪಾಹಿಜೆ?' ಬೆಳಗಾವಿ ನಗರದ ಯಾವುದೇ ಅಂಗಡಿಗೆ ಹೋದರೆ ಎದುರಾಗುವ ಪ್ರಶ್ನೆ ಇದು. ಬಂದ ಗಿರಾಕಿ ಕನ್ನಡದಲ್ಲಿ ಮಾತನಾಡಿದರೆ ಅನಿವಾರ್ಯ ಎಂಬಂತೆ ಅಂಗಡಿ ಮಾಲೀಕ ಕನ್ನಡದಲ್ಲಿ ಮಾತನಾಡುತ್ತಾನೆ.

ರಾಜ್ಯದಲ್ಲಿಯೇ ಅತಿ ಹೆಚ್ಚು ತಂಬಾಕು ಬೆಳೆಯುವ ಸಮೃದ್ಧ ಪ್ರದೇಶ ನಿಪ್ಪಾಣಿಯಲ್ಲಿ ನಿಮಗೆ ಎಲ್ಲಿಯೂ ಕನ್ನಡದ ಬೋರ್ಡುಗಳು ಕಾಣಸಿಗುವುದಿಲ್ಲ.

ಬೆಳಗಾವಿ ನಗರ ಹೊರವಲಯದ ಕಂಗ್ರಾಳಿ ಖುರ್ದ ಗ್ರಾಮದಲ್ಲಿ ಕಳೆದ ಹತ್ತು ವರ್ಷಗಳಿಂದ ಕನ್ನಡದ ಮಕ್ಕಳು ಮರಾಠಿ ಶಾಲೆಯ ಆವರಣದಲ್ಲಿ ತಲೆ ಮೇಲೆ ಸೂರು ಇಲ್ಲದೆ ಶಾಲೆ ಕಲಿಯುತ್ತಿದ್ದಾರೆ.

'ಕಿತ್ತೂರು ರಾಣಿ ಚನ್ನಮ್ಮನ ನಾಡು, ಕನ್ನಡದ ಗಂಡು ಮೆಟ್ಟಿನ ಪ್ರದೇಶ' ಎಂದೆಲ್ಲ ಹೆಸರಾದ ಬೆಳಗಾವಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿನ ಕನ್ನಡದ ಸ್ಥಿತಿಗತಿಗೆ ಈ ಮೇಲಿನ ಮೂರು ನಿದರ್ಶನಗಳು ಒಂದು ಕಿರು ಒಳನೋಟವನ್ನು ಒದಗಿಸಬಹುದು.

ಕರ್ನಾಟಕ ರಾಜ್ಯ ಹುಟ್ಟಿಕೊಂಡು ನಾಲ್ಕತ್ತು ವರ್ಷಗಳೇ ಕಳೆದಿವೆ. ನಾಡಿನ ರಾಜಧಾನಿಯಾದ ಬೆಂಗಳೂರಿನಲ್ಲೇ ಕನ್ನಡ ಮತ್ತು ಕನ್ನಡಿಗರು ತಬ್ಬಲಿತನ ಅನುಭವಿಸುತ್ತಿರುವಾಗ ಅಲ್ಲಿಂದ ಅರ್ಧ ಸಾವಿರ ಕಿ.ಮೀ. ದೂರ ಇರುವ ಬೆಳಗಾವಿ ಜನರಲ್ಲಿ ಮತ್ತೆ ಇನ್ನೆಂಥ ಭಾವನೆ ಇರಲು ಸಾಧ್ಯ?

'ಹೌದು. ಇದು ಉತ್ಪ್ರೇಕ್ಷೆಯಲ್ಲ ಅಥವಾ ಕೇವಲ ಸಾರಾಸಗಟು

ಟೀಕೆಯೂ ಅಲ್ಲ; ನಾಲ್ಕು ದಶಕಗಳು ಕಳೆದರೂ 'ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ಘೋಷಣೆ ಬಿಟ್ಟರೆ ರಾಜ್ಯ ಸರ್ಕಾರ ಬೇರೇನನ್ನೂ ಮಾಡಿಲ್ಲ' ಎಂದೇ ಬೆಳಗಾವಿಯ ಜನರು ದೂರುತ್ತಾರೆ.

'ಬೆಳಗಾವಿಯಲ್ಲಿ ೧೯೫೧ರ ಜನಗಣತಿ ಅನುಸಾರ ಕನ್ನಡಿಗರ ಸಂಖ್ಯೆ ಶೇಕಡಾ ೨೪ ಇತ್ತು. ಅದು ೧೯೯೧ರ ಜನಗಣತಿಯಲ್ಲಿ ೩೧ಕ್ಕೆ ಏರಿದೆ. ೪೦ ವರ್ಷಗಳಲ್ಲಿ ಒಂದು ಪ್ರದೇಶದಲ್ಲಿ ಕೇವಲ ಶೇಕಡಾ ಏಳರಷ್ಟು ಜನಸಂಖ್ಯೆ ಏರಬೇಕಾದರೆ ಅದಕ್ಕೆ ಸರ್ಕಾರದ ಯಾವುದೇ ವಿಶೇಷ ನೆರವು ಅಗತ್ಯವಿಲ್ಲ. ಯಾವ ಪೋಷಕಾಂಶ ದೊರೆಯದಿದ್ದಾಗಲೂ ಕೆಲವು ಮಕ್ಕಳು ಹಾಗೇ ಬೆಳೆಯುತ್ತವೆ. ಕಳೆದ ನಾಲ್ಕು ದಶಕಗಳ ಅವಧಿಯಲ್ಲಿ ಕನ್ನಡಿಗರೂ ಇದೇ ರೀತಿ ಬದುಕಿಕೊಂಡು ಬಂದಿದ್ದಾರೆ. ಈ ಅವಧಿಯಲ್ಲಿ ಬೆಳಗಾವಿಯಲ್ಲಿ ಕನ್ನಡವನ್ನು ಬಲಪಡಿಸಲು ನಡೆದ ಭಾಷಣಗಳಿಗೆ ಹೋಲಿಸಿದಲ್ಲಿ ಕನ್ನಡಿಗರ ಸಂಖ್ಯೆ ಆಗಾಧ ಪ್ರಮಾಣದಲ್ಲಿ ಬೆಳೆಯಬೇಕಿತ್ತು. ಒಂದಾದ ನಂತರ ಒಂದರಂತೆ ಬಂದ ಸರ್ಕಾರಗಳು ಈ ದಿಸೆಯಲ್ಲಿ ಮಾತಿನ ಮಂಟಪ ಕಟ್ಟುವುದರಲ್ಲಿ ಮೈ ಮರೆತ ಕಾರಣವಾಗಿಯೇ ಕನ್ನಡ-ಕನ್ನಡಿಗರಿಬ್ಬರೂ ಅನಾಥರಾಗಿ ಉಳಿದರು' ಎಂಬ ಭಾವನೆ ಇಲ್ಲಿನ ಜನರಲ್ಲಿ ಭದ್ರವಾಗಿ ನೆಲೆಯೂರಿದೆ.

ಬೆಳಗಾವಿ ಜಿಲ್ಲಾ ಕೇಂದ್ರದ ಮೂಗಿನ ಅಡಿಯಲ್ಲಿಯೇ ಇರುವ ಹಿಂಡಲಗಾ ಗ್ರಾಮದಲ್ಲಿ ಎಲ್ಲ ಭೂ ದಾಖಲೆಗಳು, ಉತಾರಗಳು ಇನ್ನೂ ಮರಾಠಿಯಲ್ಲಿಯೇ ಇವೆ. ಹಿಂಡಲಗಾ ಒಂದು ನಿದರ್ಶನ ಮಾತ್ರ. ಇಂಥ ಹಲವು ಹಳ್ಳಿಗಳು ಬೆಳಗಾವಿ ಸುತ್ತ ಮುತ್ತಲೂ ಇವೆ. ಮಹಾಜನ ವರದಿ ಜಾರಿಗೊಂಡರೆ ಮಹಾರಾಷ್ಟ್ರಕ್ಕೆ ಹೋಗಲಿರುವ ನಿಪ್ಪಾಣಿ ಮತ್ತು ಖಾನಾಪುರಗಳಲ್ಲಿ ಏಕೆ, ಈಗಲೂ ಬೆಳಗಾವಿ ನಗರದಲ್ಲಿ ಅಂಗಡಿ ಮಂಗಟ್ಟುಗಳ ಮೇಲೆ ಕನ್ನಡದ ನಾಮಫಲಕಗಳೇ ಇರಬೇಕು ಎಂಬ ಸರ್ಕಾರಿ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವ ಪ್ರಯತ್ನಗಳು ಜಿಲ್ಲಾ ಆಡಳಿತದಿಂದ ನಡೆದಿಲ್ಲ. ಅಂದರೆ ರಾಜ್ಯಗಳ ಪುನಾರಚನೆಗಿಂತ ಮುಂಚೆ ಮುಂಬೈ ಕರ್ನಾಟಕದ ಒಂದು ಭಾಗವಾಗಿದ್ದ ಬೆಳಗಾವಿ ಈಗಲೂ ಆ ಗುಂಗಿನಿಂದ, ಪ್ರಭಾವದಿಂದ ಹೊರಗೆ ಬಂದಂತೆ ಕಾಣುವುದೇ ಇಲ್ಲ.

ಯಾವುದೇ ಒಂದು ಪ್ರದೇಶದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಗಳು ಆ ಪ್ರದೇಶದ ಭಾಷೆ ಎಷ್ಟು ಗಟ್ಟಿಯಾಗಿ ಅಲ್ಲಿ ನೆಲೆಯೂರಿದೆ ಎಂಬುದಕ್ಕೆ ಕನ್ನಡಿ ಇದ್ದಂತೆ. ಬೆಳಗಾವಿ ಜಿಲ್ಲೆಯ ಶೇಕಡಾ. ೮೫ ರಷ್ಟು ಮರಾಠಿ ಶಾಲೆಗಳಿಗೆ ಸ್ವಂತ ಕಟ್ಟಡಗಳನ್ನು ನಮ್ಮ ಕರ್ನಾಟಕ ಸರ್ಕಾರ ಒದಗಿಸಿಕೊಟ್ಟಿದ್ದರೆ ಶೇಕಡಾ ೫೯ ರಷ್ಟು ಕನ್ನಡ ಶಾಲೆಗಳಿಗೆ ಇದೇ ಭಾಗ್ಯ ದೊರೆತಿದೆ. ಗ್ರಾಮೀಣ ಪ್ರದೇಶದಲ್ಲಿ ಮರಾಠಿ ಭಾಷಿಕ ೩೬ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಇದ್ದರೆ; ೫೬ ಕನ್ನಡ ಮಕ್ಕಳಿಗೆ ಒಬ್ಬ ಶಿಕ್ಷಕ ಇದ್ದಾನೆ. ನಗರ ಪ್ರದೇಶದಲ್ಲಿ ೨೭ ಮರಾಠಿ ಮಕ್ಕಳಿಗೆ ಒಬ್ಬ ಶಿಕ್ಷಕ ಮತ್ತು ೪೪ ಜನ ಕನ್ನಡ ಮಕ್ಕಳಿಗೆ ಒಬ್ಬ ಶಿಕ್ಷಕ ಇದ್ದಾನೆ.

ಆದರೆ, ಸಾಂಸ್ಕೃತಿಕವಾಗಿ ಕನ್ನಡ ಈ ಪ್ರದೇಶದಲ್ಲಿ ಬೆಳೆಯಬೇಕಾದಷ್ಟು ಬೆಳೆದಿಲ್ಲ. ವಿಚಿತ್ರ ಎಂದರೆ ಇನ್ನೂ ಮರಾಠಿ ಅಸ್ಮಿತೆಯನ್ನು ಈ ಪ್ರದೇಶದಲ್ಲಿ ಬೆಳೆಸಲು ಮಹಾರಾಷ್ಟ್ರ

ಸರ್ಕಾರ ಇಲ್ಲಿನ ಸಾಂಸ್ಕೃತಿಕ ಸಂಘಟನೆಗಳಿಗೆ ಉದಾರವಾಗಿ ನೆರವು ನೀಡುತ್ತಿದೆ. ಬರೀ ಸಾಂಸ್ಕೃತಿಕ ಮಾತ್ರವಲ್ಲ, ಇತರ ಯಾವುದೇ ಸಂಘಟನೆ ಹೋದರೂ ಆ ಸರ್ಕಾರ ಬರಿಗೈಯಿಂದ ಅವರನ್ನು ಕಳಿಸುತ್ತಿಲ್ಲ. ಇದಕ್ಕೆ ಸಮಾನವಾಗಿ ಕನ್ನಡಪರ ಸಂಘಟನೆಗಳಿಗೆ ನರವು ನೀಡುವಲ್ಲಿ ಕರ್ನಾಟಕ ಸರ್ಕಾರ ಔದಾರ್ಯವನ್ನೇನೂ ತೋರಿಲ್ಲ. ಚಿಕ್ಕೋಡಿ ತಾಲ್ಲೂಕಿನ ಯಕ್ಸಾಂಬಾ ಗ್ರಾಮದಲ್ಲಿ ಅಲ್ಲಿನ ಕೆಲವರು ಉತ್ಸಾಹಿ ಯುವಕರು ವರ್ಷಕ್ಕೊಮ್ಮೆ ನಡೆಸಿಕೊಂಡು ಬರುತ್ತಿರುವ ನಾಡಹಬ್ಬ ಆ ಗ್ರಾಮದಲ್ಲಿ ಕನ್ನಡ ಬಾವುಟ ಸದಾ ಹಾರುವಂತೆ ಮಾಡಿದೆ. ಇಂಥ ಸಂಸ್ಥೆಗಳು ಗಡಿ ಪ್ರದೇಶದಲ್ಲಿ ಚಟುವಟಿಕೆಯಿಂದ ಇರುವಂತೆ ಸರ್ಕಾರ ನೋಡಿಕೊಳ್ಳಬೇಕು ಎಂಬ ಅಭಿಪ್ರಾಯ ಕೇಳಿ ಬರುತ್ತದೆ.

'ಬೆಳಗಾವಿ ಜಿಲ್ಲೆಯ ಗಡಿ ಭಾಗದಲ್ಲಿ ಮರಾಠಿ ಪ್ರಭಾವ ಅಳಿಯದಂತೆ ನೋಡಿಕೊಳ್ಳುವಲ್ಲಿ ನಿರಂತರವಾಗಿ ತೊಡಗಿರುವ ಮಹಾರಾಷ್ಟ್ರ ಏಕೀಕರಣ ಸಮಿತಿಯಲ್ಲಿ ಈಗಾಗಲೇ ಸಾಕಷ್ಟು ನಿರಾಶೆ ಬೆಳೆದಿದೆ. ಒಡಕೂ ಕಾಣಿಸಿಕೊಂಡಿದೆ. ಅದರ ಜೊತೆಗೆ ಬೆಳಗಾವಿ, ಉಚಗಾಂಗಗಳಲ್ಲಿ ಎಂ.ಇ.ಎಸ್ ಅಭ್ಯರ್ಥಿಗಳು ಒಮ್ಮೆ ಸೋತು ಬಿಟ್ಟರೆ ಕನ್ನಡಿಗರ ಕೈ ಮೇಲಾಗುತ್ತದೆ. ಆದರೆ ಅದಕ್ಕೆ ಮುಖ್ಯವಾಗಿ ಆಗಬೇಕಾದದು ಬೆಳಗಾವಿ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ಕನ್ನಡಿಗರ ಜನಸಂಖ್ಯೆ ಹೆಚ್ಚುವಂತೆ ಮಾಡುವದು. ಸಿದ್ಧಯ್ಯ ಪುರಾಣಿಕ ಅವರು ಜಿಲ್ಲಾಧಿಕಾರಿ ಆಗಿದ್ದಾಗಿನಿಂದಲೂ ಈ ಕುರಿತ ಪ್ರಸ್ತಾಪಗಳು ಸರ್ಕಾರದ ಮುಂದೆ ಕೊಳೆಯುತ್ತಲೇ ಬಿದ್ದಿವೆ. ಪ್ರಯೋಜನ ಮಾತ್ರ ಆಗಿಲ್ಲ' ಎಂದು ರಾಘವೇಂದ್ರ ಜೋಶಿ ಹೇಳುತ್ತಾರೆ.

ಕನ್ನಡ ಚಳವಳಿಯ ಆರಂಭದ ಘಟ್ಟ ಒಂದು ಅವಲೋಕನ

ಆರ್.ಎಚ್.ಕೆ.

ಬ್ರಿಟಿಷರ ಮತ್ತು ಅದಕ್ಕೆ ಹಿಂದಿನ ಆಳರಸರ ಕಾಲದಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಮಾತನಾಡುವ ಬಹುತೇಕ ಭಾಗಗಳು ಕರ್ನಾಟಕ ಏಕೀಕರಣ ಹೋರಾಟದ ಫಲವಾಗಿ ಭೌಗೋಳಿಕವಾಗಿ ಒಂದುಗೂಡಿ ೧೯೫೬ರ ನವೆಂಬರ್ ಒಂದನೇ ದಿನದಿಂದ ಕರ್ನಾಟಕ ರಾಜ್ಯ ರಚನೆಯಾಗಿದೆ. ಹೀಗೆ ಒಂದುಗೂಡಿದ ರಾಜ್ಯಕ್ಕೆ ನಾಡಿನ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಹೆಸರಾದ 'ಕರ್ನಾಟಕ' ಎಂದು ನಾಮಕರಣ ಮಾಡುವುದಕ್ಕೆ ನಮ್ಮನ್ನು ಆಳಿದವರಿಗೆ ಹದಿನೇಳು ವರ್ಷಗಳು ಬೇಕಾದವು. ಅದೂ ಮಹಾಕವಿ ಕುವೆಂಪು, ಬೇಂದ್ರೆ, ಆಲೂರು ವೆಂಕಟರಾಯರೇ ಮೊದಲಾದ ಕವಿಗಳು, ಸಾಹಿತಿಗಳು; ಕೆಂಗಲ್ ಹನುಮಂತಯ್ಯ, ಶಾಂತವೇರಿ ಗೋಪಾಲಗೌಡ, ದೊಡ್ಡಮೇಟಿ ಅನ್ನದಾನಪ್ಪ ಅವರಂತಹ ರಾಜಕಾರಣಿಗಳು, ಕನ್ನಡಪರ ಹೋರಾಟವನ್ನು ಅರವತ್ತರ ದಶಕದಲ್ಲಿ ನಡೆಸಿದ ವಿದ್ಯಾರ್ಥಿ ಯುವಜನರ ಸತತ ಒತ್ತಾಯ ಹಾಗೂ ಪ್ರಬಲ ಹೋರಾಟದ ಪರಿಣಾಮವಾಗಿ, ವಿಶೇಷವೆಂದರೆ ಆ ಮೊದಲು 'ಕರ್ನಾಟಕ' ನಾಮಕರಣದ ಪ್ರಸ್ತಾಪ ಬಂದಾಗಲೆಲ್ಲಾ ಯಾರು ಪ್ರತಿಭಟನೆ ವ್ಯಕ್ತಮಾಡುತ್ತಿದ್ದರೋ, ಅದೇ ದಿ। ಡಿ. ದೇವರಾಜ ಅರಸು, ಮುಖ್ಯ ಮಂತ್ರಿಯಾಗಿದ್ದಾಗ ವಿಧಾನ ಸಭೆಯಲ್ಲಿ ಸ್ವತಃ ನಿರ್ಣಯ ಮಂಡಿಸಿ ಸಾರ್ವನುಮತದ ಅನುಮೋದನೆ ಪಡೆದರು.

ಭಾಷಾವಾರು ರಾಜ್ಯಗಳ ಉದ್ದೇಶ

ಕರ್ನಾಟಕ ಏಕೀಕರಣ ಹೋರಾಟವು ಭಾರತ ಸ್ವಾತಂತ್ರ್ಯ ಸಂಗ್ರಾಮದ ಜೊತೆ ಜೊತೆಗೆ ನಡೆಯಿತು. ಬಹುಭಾಷಾ ದೇಶವಾದ ಭಾರತವು ಐಕಮತ್ಯ ಹಾಗೂ ಸಾಮರಸ್ಯದಿಂದ ಒಂದಾಗಿ ಅಭಿವೃದ್ಧಿ ಹೊಂದಬೇಕಾದರೆ ದೇಶವು ಸ್ವಾಯತ್ತ ವ್ಯವಸ್ಥೆಯ ಭಾಷಾವಾರು

ರಾಜ್ಯಗಳಾಗಿ ವಿಂಗಡಣೆಗೊಳ್ಳಬೇಕು. ಈ ರಾಜ್ಯಗಳ ಒಕ್ಕೂಟವಾಗಿ ಅಖಂಡ ಭಾರತ ರೂಪುಗೊಳ್ಳಬೇಕು ಎಂಬುದು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯ ನಾಯಕರಾಗಿದ್ದ ರಾಷ್ಟ್ರಪಿತ ಮಹಾತ್ಮಗಾಂಧಿಯವರ ಆಶಯವಾಗಿದ್ದಿತು. ಈ ಆಶಯಕ್ಕನುಗುಣವಾಗಿಯೇ ಸ್ವಾತಂತ್ರ್ಯ ಸಂಗ್ರಾಮ ನಡೆಸಿದ ಮೂಲ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯು ೧೯೩೦ರ ದಶಕದಲ್ಲಿಯೇ ಪ್ರಾದೇಶಿಕವಾರು ಘಟಕಗಳಾಗಿ ವಿಂಗಡಣೆಗೊಂಡು ಕಾರ್ಯನಿರ್ವಹಿಸ ತೊಡಗಿದ್ದಿತು. ಗಾಂಧೀಜಿಯವರ ದೃಷ್ಟಿ- ಆಶಯ ಅನುಸರಿಸಿಯೇ ವಿವಿಧ ಭಾಷೆಗಳಾಡುವ ಜನರು ಭಾಷಾವಾರು ರಾಜ್ಯಗಳ ರಚನೆಗೆ ಹೋರಾಟ ನಡೆಸಿದರಾದರೂ ಈ ವ್ಯವಸ್ಥೆ ಕಾರ್ಯರೂಪಕ್ಕೆ ಬರಲು ಸ್ವಾತಂತ್ರ್ಯಾ ನಂತರ ಒಂಭತ್ತು ವರ್ಷಗಳೇ ಹಿಡಿಯಿತು. ಇದಕ್ಕಾಗಿ ಆಂಧ್ರ ಪ್ರದೇಶದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಪೊಟ್ಟಿ ಶ್ರೀರಾಮುಲು ಅವರು ಪ್ರಾಣಾರ್ಪಣೆಯನ್ನೇ ಮಾಡಬೇಕಾಗಿ ಬಂದಿತು. ಇದಕ್ಕೆ ಕಾರಣ ಭಾಷಾವಾರು ರಾಜ್ಯಗಳ ರಚನೆಗೆ ಪುರೋಹಿತಶಾಹಿ ಜನವರ್ಗದ ಧುರೀಣರು ತೀವ್ರ ಅಡ್ಡಗಾಲು ಹಾಕಿದ್ದರು. ದೇಶಾದ್ಯಂತ ಜನಸಮೂಹದಲ್ಲಿ ಗಾಢವಾದ ಪ್ರಭಾವ ಸಾಧಿಸಿಕೊಂಡಿದ್ದ ಗಾಂಧೀಜಿಯವರೊಡನೆ ಬೀಗತನ ಬೆಳೆಸಿಕೊಂಡಿದ್ದ ರಾಜಾಜಿ ಇಂತಹ ಜನವರ್ಗದ ಧುರೀಣರಲ್ಲಿ ಮುಂಚೂಣಿಯಲ್ಲಿದ್ದರು.

ಭಾಷಾವಾರು ರಾಜ್ಯಗಳು ಅಸ್ತಿತ್ವಕ್ಕೆ ಬಂದರೆ ದಕ್ಷಿಣ ಭಾರತದ ಹೆಸರಿನಲ್ಲಿ ತಮಿಳುನಾಡಿನ ತಮ್ಮ ಸಂತತಿಯವರನ್ನೇ ದೇಶದ ಎಲ್ಲ ಹುದ್ದೆಗಳಿಗೆ ತುಂಬಿಕೊಳ್ಳುವುದು ತಪ್ಪಿಹೋಗುತ್ತದೆ ಎಂಬುದು ರಾಜಾಜಿಯಂಥ ನಾಯಕರ ಹಂಚಿಕೆಯಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಭಾರತದ ಮೊಟ್ಟ ಮೊದಲ ಗೌರ್ನರ್ ಜನರಲ್ ಆಗಿದ್ದ ರಾಜಾಜಿ ಮುಂದೆ ಈಗಿನ 'ತಮಿಳುನಾಡಾ'ಗಿರುವ ಮದರಾಸು ಪ್ರಾಂತ್ಯದ ಮುಖ್ಯ ಮಂತ್ರಿಯಾಗುವಂತಹ ಮಟ್ಟಕ್ಕೆ ಇಳಿಯುವ ಅಧಿಕಾರಲಾಲಸಿ ರಜಕಾರಣಿ. ಆ ಬಳಿಕ ಬದುಕುಳಿದಿದ್ದ ತನಕ 'ಸ್ವತಂತ್ರ ಪಕ್ಷ' ಎಂಬ ಹೆಸರಿನಲ್ಲಿ ಶ್ರೀಮಂತರು ಹಾಗೂ ಪ್ರತಿಗಾಮೀ ಪಟ್ಟಭದ್ರಹಿತಾಸಕ್ತಿಗಳ ಸಂರಕ್ಷಣೆಯನ್ನೇ ಪ್ರಧಾನ ಧ್ಯೇಯವಾಗಿರಿಸಿ ಕೊಂಡಿದ್ದ ರಾಜಕೀಯ ಸಂಘಟನೆಯನ್ನು ಕಟ್ಟಿಕೊಂಡಿದ್ದರು.

ರಾಜಾಜಿಯಿಂದ ಕನ್ನಡ ಅವಹೇಳನ

ಇದೇ ರಾಜಾಜಿ ೧೯೬೮ರ ಜನವರಿ ೧೩ರ ತಮ್ಮ 'ಸ್ವರಾಜ್ಯ' ಸಂಚಿಕೆಯಲ್ಲಿ 'ಕನ್ನಡವು ಕ್ರೈಸ್ತಪಾದ್ರಿಗಳು ತಿದ್ದಿದ ತೆಲುಗು ಲಿಪಿಯಲ್ಲಿ ಬರೆಯಲಾಗುತ್ತಿರುವ ಬಹುತೇಕ ತಮಿಳು ಭಾಷೆ' ಎಂದು ಹೇಳಿಕೆ ನೀಡಿ ಕನ್ನಡ ಭಾಷೆಯ ಬುಡಕ್ಕೇ ಕೊಡಲಿ ಹಾಕಲೆತ್ನಿಸಿ ಕನ್ನಡಿಗರ ತೀವ್ರ ಪ್ರತಿಭಟನೆಗೆ ಗುರಿಯಾಗಿದ್ದವರು. ರಾಜಾಜಿಯವರ ಈ ಹೇಳಿಕೆಯನ್ನು ಪಂಡಿತರತ್ನ ಬಿ. ಶಿವಮೂರ್ತಿ ಶಾಸ್ತ್ರಿ, ಹಿರಿಯ ಸಾಹಿತಿ ಬಿ. ಪುಟ್ಟಸ್ವಾಮಯ್ಯ ಕರ್ನಾಟಕ ಏಕೀಕರಣ ಧುರೀಣರಾದ ಮಂಗಳವೇಢೆ ಶ್ರೀನಿವಾಸರಾವ್, ಜಿ.ವಿ. ಹಳ್ಳಿಕೇರಿ, ಹಿರಿಯ ಸಾಹಿತಿ - ಸಂಶೋಧಕ ಡಾ. ಶಂಬಾ ಜೋಶಿ, ಕನ್ನಡದ ಕಟ್ಟಾಳು ಡಾ. ದೇ. ಜವರೇಗೌಡ, ಹೆಸರಾಂತ ಲೇಖಕರಾದ ಡಾ. ಹಾ.ಮಾ.ನಾಯಕ, ಡಾ. ಪಿ. ತಿಪ್ಪೇರುದ್ರ ಸ್ವಾಮಿ, ಸುಜನಾ, ಕನ್ನಡ ಸಾಹಿತ್ಯ ಪರಿಷತ್ತಿನ ಆಗ ಗೌರವ ಕಾರ್ಯದರ್ಶಿಯಾಗಿದ್ದ ಪ್ರಾ. ಹಂಪನಾ, ಹಿರಿಯ ಪತ್ರಕರ್ತ ಕಲ್ಲೆ ಶಿವೋತ್ತಮ, ಶಿಕ್ಷಣ ತಜ್ಞ ಡಾ. ವಿ.ಕೋ. ಜವಳಿ ಇವರೇ ಮೊದಲಾದವರು ತೀವ್ರವಾಗಿ ಪ್ರತಿಭಟಿಸಿದರು. ಆದರೆ

ರಾಜಾಜಿಯವರ ಸಂತತಿಗೆ ಸೇರಿದ ಕನ್ನಡದಲ್ಲಿ ಬರೆದುದಕ್ಕಾಗಿ ಹಣ ಹಾಗೂ ಕೀರ್ತಿ - ಪ್ರತಿಷ್ಠೆಗಳನ್ನು ಗಳಿಸಿದ ಡಿ.ವಿ. ಗುಂಡಪ್ಪ, ಸಿದ್ಧವನಹಳ್ಳಿ ಕೃಷ್ಣಶರ್ಮ, ಜಿ.ಪಿ. ರಾಜರತ್ನಂ ಇವರೇ ಮೊದಲಾದವರು ರಾಜಾಜಿಯ ಹಸ್ತಕರಂತೆ ವರ್ತಿಸಿ, ಅವರ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಮುಂದಾದರು. ಕನ್ನಡಗರಿಂದ ಮಾನ-ಸನ್ಮಾನಗಳಿಗೆ ಪಾತ್ರರಾದ ಈ ಜನ ಕನ್ನಡಕ್ಕೆ ಕೇಡು ಬಗೆಯಲು ಹಿಂಜರಿಯಲಿಲ್ಲ. ಕನ್ನಡ ನಾಡು-ನುಡಿ-ನಾಡಿಗರ ಹಿತಕ್ಕೆ ಧಕ್ಕೆ ಒದಗಿದಾಗ ರಕ್ಷಣೆಗೆ ಧಾವಿಸಬೇಕಾದ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಆಗಿನ ಅಧ್ಯಕ್ಷ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು, ಕನ್ನಡ ಚಳವಳಿಯ ಹೆಸರಿನಲ್ಲಿ ಆ ವೇಳೆಗಾಗಲೇ ಶಾಸಕರಾಗಿದ್ದ ವಾಟಾಳ ನಾಗರಾಜ ಇವರೇ ಮೊದಲಾದವರು ಈ ವಿಚಾರದಲ್ಲಿ ದಿವ್ಯ ಮೌನ ವಹಿಸಿದ್ದರು. ಕನ್ನಡ ಪತ್ರಿಕೆಗಳಲ್ಲಿ ಕುಳಿತಿದ್ದ ಪುರೋಹಿತಶಾಹಿ ಜನವರ್ಗ ರಾಜಾಜಿಯ ಏಜಂಟರಂತೆ ಅವರ ಹಿತರಕ್ಷಿಸಿ ಅವರ ವಿರುದ್ಧ ನಡೆದ ಪ್ರತಿಭಟನಾ ಕಾರ್ಯಕ್ರಮಗಳಿಗೆ ತಕ್ಕ ಪ್ರಚಾರ ಸಿಗದಂತೆ ನೋಡಿಕೊಂಡರು.

ಆ ವೇಳೆಗೆ ಕನ್ನಡ ಪರ ಹೋರಾಟದಲ್ಲಿ ಆರೇಳು ವರ್ಷ ತೊಡಿಗಿಸಿಕೊಂಡಿದ್ದು ವಿದ್ಯಾರ್ಥಿ-ಯುವಜನ ಹೋರಾಟಗಳಲ್ಲಿಯೂ ಸಕ್ರಿಯವಾಗಿ ಭಾಗಿಯಾಗಿದ್ದ ಕೋ.ಹು. ರಾಮಣ್ಣಗೌಡ, ಜೀರಿಗೆ ಲೋಕೇಶ, ಆಗ ತಾನೇ ಸ್ಥಾಪಿತವಾಗಿದ್ದ 'ಕನ್ನಡ ದಳ' ಸಂಘಟನೆಯ ನೇತಾರರಾಗಿದ್ದ ಯಶವಂತ ನಾಗರಾಜ, ಲಕ್ಷ್ಮಯ್ಯ ಚಂದ್ರಶೇಖರ್ ಇವರೇ ಮೊದಲಾದವರು 'ಕನ್ನಡ ದ್ರೋಹಿ ರಾಜಾಜಿ ಹೆಸರಿನಲ್ಲಿರುವ ರಾಜಾಜಿನಗರದ ಹೆಸರನ್ನು ಕಿತ್ತು ಹಾಕಿ ಕರ್ನಾಟಕದ ಗತವೈಭವದ ಸಂಕೇತವಾಗಿ ವಿಜಯನಗರ' ಎಂದು ಮರುನಾಮಕರಣ ಮಾಡಬೇಕು ಎಂದು ಆಗ್ರಹಿಸಿ ಸಭೆ-ಮೆರವಣಿಗೆ, ಮೊದಲಾದ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದುದುಂಟು. ಈ ಹೋರಾಟಕ್ಕೆ ಹಿರಿಯ ಪತ್ರಕರ್ತ ಕಲ್ಲೆ ಶಿವೋತ್ತಮ ಅವರ ಮಾರ್ಗದರ್ಶನವಿದ್ದಿತು. ಕನ್ನಡ ದಳ, ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲ, ಕನ್ನಡ ಅಭಿಮಾನಿ ರಂಗ, ಜಯಕರ್ನಾಟಕ ಯುವಕ ಸಂಘ, ಕನ್ನಡ ಕುಲದೈವ ಕುಟೀರ, ಕನ್ನಡ ಮಾತೃ ಸೇವಾ ಸಂಘ ಇವೇ ಮೊದಲಾದ ಸಂಘ-ಸಂಸ್ಥೆಗಳು ಈ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದವು.

ಹೀಗೆ ರಾಜಾಜಿಯಂತಹ ಬಹುಜನ ಸಮುದಾಯದ ಏಳಿಗೆಯನ್ನು ಸಹಿಸದ ಪರಂಪರಾನುಗತವಾಗಿ ದುಡಿದುಣ್ಣದೆ ಪರರ ದುಡಿಮೆಯಿಂದಲೇ ಹೊಟ್ಟೆ ಬೆಳೆಸಿ ಬಲಿಷ್ಠವಾದ ಪರಾನ್ನಪುಷ್ಟ ವರ್ಗದ ನಾಯಕತ್ವ ಎಷ್ಟೇ ಅಡ್ಡಿ ಆತಂಕವೊಡ್ಡಿದರೂ ಅನೇಕ ಜನನಾಯಕರ ತ್ಯಾಗ ಬಲಿದಾನಗಳಿಂದ ಬಹುತೇಕ ಕನ್ನಡ ಪ್ರದೇಶಗಳು ಒಂದೇ ಆಡಳಿತದ ವ್ಯಾಪ್ತಿಗೆ ಬಂದವು. ಆದರೆ ಭಾಷಾವಾರು ರಾಜ್ಯ ರಚನೆಯ ಉದ್ದೇಶಕ್ಕನುಗುಣವಾಗಿ ಆಡಳಿತ ನಡೆಯತೊಡಗಲಿಲ್ಲ. ರಾಜ್ಯದ ಹೆಸರು 'ಕರ್ನಾಟಕ' ಎಂದಾಗಿರಲಿಲ್ಲ. ಆಡಳಿತ, ಶಿಕ್ಷಣ, ನ್ಯಾಯದಾನ ಎಲ್ಲೆಡೆಯೂ ಕನ್ನಡಮ್ಮನ ವಾತಾವರಣ ಮೂಡಿಬರಲಿಲ್ಲ. ನಮ್ಮನ್ನು ಆಳಲು ಆಯ್ಕೆಗೊಂಡವರು ಇಂಗ್ಲಿಷಿನ ಗುಲಾಮರಾದ ಅಧಿಕಾರಿಗಳ ಸಬೂಬುಗಳನ್ನೇ ಮುಂದು ಮಾಡಿಕೊಂಡು ಕನ್ನಡದ ಅನುಷ್ಠಾನಕ್ಕೆ ಹಿಂದೇಟು ಹಾಕತೊಡಗಿದ್ದರು. ರಾಜ್ಯ ಪುನರೋದಯ ಕಾಲಕ್ಕೆ ಕೇರಳದಲ್ಲಿ ಉಳಿದುಹೋದ ಕಾಸರಗೊಡು, ವೈನಾಡುಗಳು; ತಮಿಳುನಾಡಿನಲ್ಲಿ ಸೇರಿಹೋಗಿರುವ ಹೊಸೂರು, ತಾಳವಾಡಿ,

ನೀಲಗಿರಿ, ಉದಕಮಂಡಲಗಳು; ಆಂಧ್ರ ಪ್ರದೇಶದಲ್ಲಿ ವಿಲೀನವಾಗಿರುವ ಮಡಕಶಿರ, ಅನಂತಪುರ, ಆಲೂರು, ಆದವಾನಿ, ರಾಯದುರ್ಗ ಭಾಗಗಳು; ಮಹಾರಾಷ್ಟ್ರದಲ್ಲಿ ಸೇರ್ಪಡೆಗೊಂಡಿರುವ ಜತ್ತ, ಅಕ್ಕಲಕೋಟೆ, ಸಾಂಗಲಿ, ಮೀರಜ್, ದಕ್ಷಿಣ ಸತಾರ, ಸೊಲ್ಲಾಪುರಗಳನ್ನು ರಾಜ್ಯಕ್ಕೆ ಮರಳಿ ಪಡೆಯುವುದಕ್ಕೆ ಯಾವುದೇ ರೀತಿಯಲ್ಲೂ ಪ್ರಾಮಾಣಿಕ ಪ್ರಯತ್ನ ನಡೆಯಲೇ ಇಲ್ಲ. ಕೃಷ್ಣ - ಕಾವೇರಿ ನದಿ ನೀರಿನ ಹಂಚಿಕೆಯಲ್ಲೂ ಕೇಂದ್ರದಿಂದ ರಾಜ್ಯದ ಬಗೆಗೆ ಮಲತಾಯಿ ಧೋರಣೆ ಮುಂದುವರಿಯಿತು. ರಾಜ್ಯ ಪುನರೋದಯವಾಗಿ ಆರೇಳು ವರ್ಷಗಳೇ ಸಂದಿದ್ದರೂ ರಾಜ್ಯೋತ್ಸವ ಆಚರಣೆ ನಡೆಯುತ್ತಿರಲಿಲ್ಲ. ನಾಡು, ನುಡಿ, ಸಮಾಜ, ಸಂಸ್ಕೃತಿ, ಶಿಕ್ಷಣ, ಕಲೆ ಇತ್ಯಾದಿ ಕನ್ನಡದ ವಿವಿಧ ಕ್ಷೇತ್ರಗಳ ಗಣ್ಯರನ್ನು ಗುರುತಿಸಿ ಅವರಿಗೆ ಮಾನ - ಸನ್ಮಾನ ನೀಡಿ ಪುರಸ್ಕರಿಸುವ ಪರಿಪಾಠ ಸರಕಾರದಿಂದಾಗಲೀ ಸಾರ್ವಜನಿಕರಿಂದಾಗಲೀ ಇರಲಿಲ್ಲ.

ಕನ್ನಡ ಯುವಜನ ಸಭಾ

ಪರಿಸ್ಥಿತಿ ಹೀಗಿರುವಾಗ ರಾಜ್ಯ ಪುನರೋದಯವಾದ ನಾಲ್ಕೈದು ವರ್ಷಗಳ ಬಳಿಕ ಈ ಮೇಲಿನ ವಿಚಾರಗಳ ಪ್ರತಿಪಾದನೆಗಾಗಿ ರಾಜ್ಯದ ಸಾಂಸ್ಕೃತಿಕ ರಾಜಧಾನಿ ಮೈಸೂರು ನಗರದಲ್ಲಿ ಉತ್ಸಾಹಿ ವಿದ್ಯಾರ್ಥಿ ಯುವಜನರಿಂದ ಕೂಡಿದ 'ಕನ್ನಡ ಯುವಜನ ಸಭಾ' ಅಸ್ತಿತ್ವಕ್ಕೆ ಬಂದಿತು. ಕನ್ನಡ ನಾಡು - ನುಡಿ - ನಾಡಿಗರ ಅಭ್ಯುದಯದ ಬಗೆಗೆ ಕನ್ನಡಿಗರು ನಿರ್ವಹಿಸಬೇಕಾದ ಪಾತ್ರದ ಬಗೆಗೆ ಜಾಗೃತಿ ಮೂಡಿಸುವ, ಕನ್ನಡ ಕವಿಕುಲ ಸಾರ್ವಭೌಮ ರಾಷ್ಟ್ರಕವಿ ಡಾ. ಕುವೆಂಪು ಅವರ ಬರಹ - ಭಾಷಣಗಳು ಈ ಸಂಸ್ಥೆಯ ಉದಯಕ್ಕೆ ಮುಖ್ಯ ಪ್ರೇರಣೆಯಾಗಿದ್ದಿತು. ಸಮಾಜವಾದಿ ಸಿದ್ಧಾಂತದಿಂದ ಆಕರ್ಷಿತರಾಗಿದ್ದ ಆಗಿನ ವಿದ್ಯಾರ್ಥಿ ಮುಖಂಡರಾದ ಕೋಣಂದೂರು ಲಿಂಗಪ್ಪ, ಬಂದಗದ್ದೆ ರಮೇಶ ಇವರೇ ಮೊದಲಾದವರು ಈ ಸಂಸ್ಥೆಯ ನೇತಾರರಾಗಿದ್ದರು. ಹೆಸರಾಂತ ಸಮಾಜವಾದಿ ಧುರೀಣ ದಿ. ಶಾಂತವೇರಿ ಗೋಪಾಲಗೌಡ ಇವರಿಗೆ ಮಾರ್ಗ ದರ್ಶಕರಾಗಿದ್ದರು. ಇದೇ ಸರಿಸುಮಾರಿಗೆ ಬೆಂಗಳೂರಿನಲ್ಲಿ 'ಜಯ ಕರ್ನಾಟಕ, ಮಿತ್ರ ಸೇವಾ ಸಂಘ' ಮತ್ತು 'ಕರ್ನಾಟಕ ಕ್ರಾಂತಿಕಾರಿ ಪರಿಷತ್ತು', ಕನ್ನಡ ಸಾಹಿತ್ಯ ಕುಟೀರ' ಇವೇ ಮೊದಲಾದವು ಸಣ್ಣ ಪ್ರಮಾಣದಲ್ಲಿ ಕನ್ನಡಪರ ಹೋರಾಟದಲ್ಲಿ ತೊಡಗಿಸಿಕೊಂಡಿದ್ದವು.

ಮುಂದೆ ಲಿಂಗಪ್ಪ, ರಮೇಶ ತಮ್ಮ ವ್ಯಾಸಂಗ ಮುಂದುವರಿಸಲು ಬೆಂಗಳೂರಿಗೆ ಬಂದಾಗ ೧೯೬೨ರ ಸುಮಾರಿಗೆ ಬೆಂಗಳೂರಿನಲ್ಲಿಯೂ ಕನ್ನಡ ಯುವಜನ ಸಭಾದ ಚಟುವಟಿಕೆಯನ್ನು ಆರಂಭಿಸಿದರು.

ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿದ್ದರೂ ಇಲ್ಲಿ ಕನ್ನಡ ಮೂಲೆ ಗುಂಪಾಗತೊಡಗಿದ್ದಿತು. ಇದನ್ನು ಕಂಡು ವ್ಯಾಕುಲರಾಗಿದ್ದ ಕರ್ನಾಟಕ ಏಕೀಕರಣ ಹೋರಾಟದ ಮಂಚೂಣಿಯ ನಾಯಕ 'ಕರ್ನಾಟಕ ಕುಲಪುರೋಹಿತ'ರೆಂದೇ ಪ್ರಖ್ಯಾತರಾಗಿದ್ದ ಆಲೂರು ವೆಂಕಟರಾವ್ ಅವರು ರಾಜಧಾನಿಯಲ್ಲಿ ಕನ್ನಡಪರ ವಾತಾವರಣವನ್ನು ತೀವ್ರಗೊಳಿಸುವ ಅಗತ್ಯತೆಯನ್ನು ಕನ್ನಡಾಸಕ್ತರಲ್ಲಿ ಪ್ರತಿಪಾದಿಸಿದರು. ಇದನ್ನು ಕಾರ್ಯರೂಪಕ್ಕೆ ತರಲು ಕನ್ನಡ ಯುವಜನಸಭಾ ಮೊಟ್ಟಮೊದಲ ಕನ್ನಡ ಸಮಾವೇಶವನ್ನು ರಾಜಧಾನಿಯಲ್ಲಿ ಸಂಘಟಿಸಿತು. ಈ ಸಮಾವೇಶವನ್ನು ಕರ್ನಾಟಕ ಏಕೀಕರಣದ ಸಲುವಾಗಿ ಮುಖ್ಯಮಂತ್ರಿ ಪದವನ್ನು ತ್ಯಾಗ

ಮಾಡಿದ ಆಗ ಬೆಂಗಳೂರು ಕ್ಷೇತ್ರದ ಲೋಕ ಸಭಾ ಸದಸ್ಯರಾಗಿದ್ದ ಕೆಂಗಲ್ ಹನುಮಂತಯ್ಯ ಅವರು ಉದ್ಘಾಟಿಸಿದ್ದರು. ಹೆಸರಾಂತ ನಾಟಕಕಾರ ಆದ್ಯ ರಂಗಾಚಾರ್ಯ(ಶ್ರೀರಂಗ)ಅವರು ಇದರ ಅಧ್ಯಕ್ಷತೆ ವಹಿಸಿದ್ದರು. ಈ ಸಮಾವೇಶದ ಸೂತ್ರದಾರಿಕೆ ಕಲ್ಲೆ ಶಿವೋತ್ತಮ ಅವರದಾಗಿದ್ದಿತು. ಈ ಸಮಾವೇಶದಲ್ಲಿ ಕನ್ನಡ ನಾಡು ನುಡಿ ನಾಡಿಗರ ಅಭ್ಯುದಯಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ಆಗಬೇಕಾದ ಕೆಲಸಗಳ ಸಂಬಂಧ ೧೪ ನಿರ್ಣಯ ಕೈಗೊಳ್ಳಲಾಗಿದ್ದಿತು. ಆದರೆ ಅವು ಕಾರ್ಯಗತಗೊಳ್ಳುವ ದಿಸೆಯಲ್ಲಿ ಯಾವ ಕ್ರಮಗಳೂ ಜರುಗಲಿಲ್ಲ. ಇದೇ ಸಂದರ್ಭದಲ್ಲಿ ಕನ್ನಡಪರ ಹೋರಾಟದ ಚಟುವಟಿಕೆಗಳನ್ನು ಬಿಂಬಿಸಿ, ಕನ್ನಡಿಗರನ್ನು ಜಾಗೃತಿಗೊಳಿಸಲು ಸಭಾದ ವತಿಯಿಂದ 'ಕನ್ನಡ ಯುವಜನ' ಎಂಬ ಪತ್ರಿಕೆಯನ್ನು ಪ್ರಾರಂಭಿಸಲಾಯಿತು.

ರಾಜಧಾನಿಯಲ್ಲಿ ಕನ್ನಡ ಚಳವಳಿ ಆರಂಭಗೊಂಡದ್ದು ಹೀಗೆ. ಮುಂದೆ ಕನ್ನಡ ಯುವಜನ ಸಭಾ ರಾಜ್ಯದ ಹೆಸರು 'ಕರ್ನಾಟಕ'ವಾಗಬೇಕು. ಆಡಳಿತವೂ ಸೇರಿದಂತೆ ರಾಜ್ಯದ ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ಅನುಷ್ಠಾನಗೊಳ್ಳಬೇಕು, ಹೊರಗುಳಿದಿರುವ ಕನ್ನಡ ಪ್ರದೇಶಗಳು ರಾಜ್ಯಕ್ಕೆ ಸೇರ್ಪಡೆಯಾಗಬೇಕು, ರಾಜ್ಯದ ಎಲ್ಲ ಉದ್ಯಮ ಸಂಸ್ಥೆಗಳಲ್ಲಿ ಕನ್ನಡಗರಿಗೆ ಉದ್ಯೋಗದಲ್ಲಿ ಆದ್ಯತೆ ಸಿಗಬೇಕು, ರಾಜ್ಯದಲ್ಲಿ ಜರುಗುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕನ್ನಡ ಕಲಾವಿದರಿಗೆ ಪ್ರಾಧಾನ್ಯ ಸಿಗಬೇಕು ಎಂಬಿತ್ಯಾದಿ ಒತ್ತಾಯಗಳನ್ನು ಮುಂದಿಟ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಿತು. ಈ ಕಾರ್ಯಕ್ರಮಗಳಿಗೆ ಶಾಂತವೇರಿ ಗೋಪಾಲಗೌಡ, ಕೆ.ಜಿ. ಮಹೇಶ್ವರಪ್ಪ, ಕೋಣಂದೂರು ಲಿಂಗಪ್ಪ ಇವರೇ ಮೊದಲಾದವರ ಜೊತೆಗೆ ಆ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಅ.ನ. ಕೃಷ್ಣರಾವ್ ಅವರನ್ನು ತೊಡಗಿಸಿಕೊಳ್ಳಲಾಗಿತ್ತು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದವರಿಗೆ ಮುಂದಿನ ಸಮ್ಮೇಳನ ಜರುಗುವವರೆಗೆ ನಾಡಿನಾದ್ಯಂತ ಸುತ್ತಾಡಿ ಕನ್ನಡ ಜಾಗೃತಿ ಮೂಡಿಸುವ ಕಾರ್ಯನಿರ್ವಹಿಸಬೇಕಾದ ಹೊಣೆಗಾರಿಕೆಯೂ ಇದ್ದುದರಿಂದ ಅ.ನ.ಕೃ. ಅವರು ಸಭಾದ ಕಾರ್ಯಕ್ರಮಗಳನ್ನು ಸದುಪಯೋಗ ಪಡಿಸಿಕೊಂಡು ಕನ್ನಡಪರ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡರು. ಅಷ್ಟೇ ಅಲ್ಲ, ತಮ್ಮ ಸಾಹಿತ್ಯ ಸಂಗಾತಿಗಳಾದ ನಾಡಿಗೇರ ಕೃಷ್ಣರಾವ್, ಮ.ರಾಮಮೂರ್ತಿ ಕಲಾವಿದ ಮೈ.ಸು. ನಟರಾಜ ಇವರೇ ಮೊದಲಾದವರನ್ನೂ ತೊಡಗಿಸಿಕೊಂಡರು.

ಕರ್ನಾಟಕ ಸಂಯುಕ್ತ ರಂಗ

ಮುಂದೆ ಆ ವೇಳೆಗೆ ಅಲ್ಲಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ ನಿರತವಾಗಿದ್ದ ಕನ್ನಡ ಸಂಘ ಸಂಸ್ಥೆಗಳನ್ನು ಒಗ್ಗೂಡಿಸಿ 'ಕರ್ನಾಟಕ ಸಂಯುಕ್ತ ರಂಗ' ಎಂಬ ಹೆಸರಿನ ಒಕ್ಕೂಟ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅ.ನ.ಕೃ. ಅವರೇ ಅದರ ಅಧ್ಯಕ್ಷರು ಆದರು. ಮ. ರಾಮಮೂರ್ತಿ ಪ್ರಧಾನ ಕಾರ್ಯದರ್ಶಿ, ಮೈ.ಸು. ನಟರಾಜ ಖಜಾಂಚಿಯಾದರು. ಅ.ನ.ಕೃ. ಅವರ ನೇತೃತ್ವದಲ್ಲಿ ಕನ್ನಡ ಪರವಾದ ಬೀದಿ ಹೋರಾಟ ಮೊಟ್ಟ ಮೊದಲ ಬಾರಿಗೆ ನಡೆದದ್ದು ಚಾಮರಾಜಪೇಟೆಯ ರಾಮೋತ್ಸವ ಸಮಿತಿಯು ೧೯೬೨ರಲ್ಲಿ ಸಿಟಿ ಇನ್‌ಸ್ಟಿಟ್ಯೂಟ್ ಆವರಣದಲ್ಲಿ ವ್ಯವಸ್ಥೆಗೊಳಿಸಿದ್ದ ರಾಮೋತ್ಸವ ಸಂಗೀತ ಕಾರ್ಯಕ್ರಮದ ವಿರುದ್ಧ. ತಮಿಳುನಾಡಿನ ಸಂಗೀತ ವಿದುಷಿ ಎಂ.ಎಸ್.

ಸುಬ್ಬಲಕ್ಷ್ಮಿ ಅವರ ಸಂಗೀತ ಕಚೇರಿ ನಡೆಯದಂತೆ ಅಡ್ಡಿ ಪಡಿಸಿ ಹಲವಾರು ಕನ್ನಡ ಕಾರ್ಯಕರ್ತರು ಬಂಧನಕ್ಕೊಳಗಾದರು. ಈ ರೀತಿಯ ಸಾಂಸ್ಕೃತಿಕ ಕಾರ್ಯಕ್ರಗಳಲ್ಲಿ ಕನ್ನಡ ಕಲಾವಿದರಿಗೆ ಅವಕಾಶ ನೀಡದೆ ಅನ್ಯಾಯಮಾಡುತ್ತಿದ್ದ ಪ್ರವೃತ್ತಿಯ ವಿರುದ್ಧ ಈ ಪ್ರತಿಭಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದಿತು. ಮುಂದೆ ನಗರದ ವಿವಿಧ ಬಡಾವಣೆಗಳಲ್ಲಿ ಕನ್ನಡ ಜನಜಾಗೃತಿ ಸಭೆಗಳನ್ನು ಹಮ್ಮಿಕೊಂಡು ಕರ್ನಾಟಕ ಸಂಯುಕ್ತ ರಂಗದ ಅಧೀನದ ಹಲವಾರು ಕನ್ನಡಪರ ಸಂಘಟನೆಗಳು ಪ್ರಾರಂಭವಾಗತೊಡಗಿದವು. ಹೀಗೆ ನಗರದಲ್ಲಿ 'ಕನ್ನಡ ಯುವಜನ ಸಭಾ'ದಿಂದ ಪ್ರಾರಂಭವಾದ ಕನ್ನಡ ಚಳವಳಿ 'ಕರ್ನಾಟಕ ಸಂಯುಕ್ತ ರಂಗ'ದ ತೆಕ್ಕೆಯಲ್ಲಿ ಬಿದ್ದಿತು. ಸಾಹಿತ್ಯಕ್ಷೇತ್ರದಲ್ಲಿ ಪ್ರಖ್ಯಾತರಾಗಿದ್ದ ಅ.ನ.ಕೃ. ಅವರಿದ್ದ ಸಂಘಟನೆಯ ಕಾರ್ಯಕ್ರಮಗಳಿಗೆ ಪತ್ರಿಕೆಗಳಲ್ಲಿ ಸಹಜವಾಗಿ ಹೆಚ್ಚು ಪ್ರಚಾರ ಲಭಿಸಲಾರಂಭಿಸಿದುದರಿಂದ ಕನ್ನಡಪರ ಸಂಘಟನೆಗಳು ಹಾಗೂ ಕಾರ್ಯಕರ್ತರು 'ಕರ್ನಾಟಕ ಸಂಯುಕ್ತ ರಂಗ'ದತ್ತ ವಾಲಿದರು. 'ಕನ್ನಡ ಯುವಜನ' ಪತ್ರಿಕೆಯೂ ಆ ವೇಳೆಗೆ ಮ. ರಾಮಮೂರ್ತಿ ಅವರ ಸಂಪಾದಕತ್ವಕ್ಕೆ ವರ್ಗಾವಣೆಗೊಂಡಿದ್ದಿತು.

ಸಭಾದ ಮುಂದಾಳುಗಳಾದ ಕೋಣಂದೂರು ಲಿಂಗಪ್ಪ, ಬಂದಗದ್ದೆ ರಮೇಶ, ಮು.ವಸಂತಯ್ಯ, ಇವರೇ ಮೊದಲಾದವರು ರಾಷ್ಟ್ರಮಟ್ಟದಲ್ಲಿ ಡಾ। ರಾಮಮನೋಹರ ಲೋಹಿಯಾ ಹಾಗೂ ರಾಜ್ಯಮಟ್ಟದಲ್ಲಿ ಶಾಂತವೇರಿ ಗೋಪಾಲಗೌಡ ಅವರ ನೇತೃತ್ವದಲ್ಲಿ ಪ್ರಬಲವಾಗಿ ಬೆಳೆದಿದ್ದ ಸಂಯುಕ್ತ ಸಮಾಜವಾಗಿ ಪಕ್ಷದ ಯುವ ಸಂಘಟನೆಯಾಗಿ ಸಭಾವನ್ನು ಪರಿವರ್ತಿಸಿ ಅದಕ್ಕೆ ಸಮಾಜವಾದಿ ಯುವಜನ ಸಭಾ ಎಂದು ಹೆಸರು ಬದಲಾಯಿಸಿದರು. ಇದರ ಮೂಲಕ ಮುಂದೆ ಕನ್ನಡಪರ ಚಟುವಟಿಕೆಯ ಜೊತೆ ಜೊತೆಗೇ ಸಾಮಾಜಿಕಾರ್ಥಿಕ ಹಾಗೂ ರಾಜಕೀಯ ಚಟುವಟಿಕೆಗಳನ್ನು ನಡೆಸತೊಡಗಿದರು. ಇದೇ ಯುವಜನ ಸಭಾದ ಕಾರ್ಯಕರ್ತರು ಮೊದಲ ಬಾರಿಗೆ ರಾಜಧಾನಿಯಲ್ಲಿ ರಾಜ್ಯ ಪುನರೋದಯವಾದ ಏಳು ವರ್ಷಗಳ ಬಳಿಕ ೧೯೬೩ರಲ್ಲಿ ನವೆಂಬರ್ ೧ ರಂದು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಸಂಘಟಿಸಿದರು.

ಮೊದಲನೆಯ ರಾಜ್ಯೋತ್ಸವ

ಆಗಿನ ಮಹಾಪೌರ ಕೆ.ಎಂ. ನಂಜಪ್ಪ ಅವರ ಹಿರಿತನದಲ್ಲಿ ಶಾಂತವೇರಿ ಗೋಪಾಲಗೌಡ, ಎಸ್. ಶಿವಪ್ಪ, ಕೆ.ಜಿ. ಮಹೇಶ್ವರಪ್ಪ, ಎ.ಕೆ. ಅನಂತಕೃಷ್ಣ, ಕೋಣಂದೂರು ಲಿಂಗಪ್ಪ ಇವರೇ ಮೊದಲಾದ ಸಮಾಜವಾದಿ ಧುರೀಣರು ಈ ನಾಡಹಬ್ಬದ ನೊಗ ಹೊತ್ತು ಕಾರ್ಯನಿರ್ವಹಿಸಿದರು. ಆ ಸಂದರ್ಭದ ಸವಿನೆನಪಿಗಾಗಿ ತಂದ ಸಂಸ್ಮರಣ ಸಂಚಿಕೆಯ ಹೊಣೆಗಾರಿಕೆಯನ್ನು ಕಲ್ಲೆ ಶಿವೋತ್ತಮ ಅವರು ನಿರ್ವಹಿಸಿದ್ದರು. ಆಲೂರು ವೆಂಕಟರಾಯರೇ ಮೊದಲಾಗಿ ನಾಡು - ನುಡಿಗಳಿಗೆ ದುಡಿದ ಗಣ್ಯರು ಹಾಗೂ ಸರ್ವ ಪಕ್ಷಗಳ ಧುರೀಣರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಈ ವರ್ಷವೇ 'ಕರ್ನಾಟಕ ಸಂಯುಕ್ತ ರಂಗ'ದ ಆಶ್ರಯದಲ್ಲಿ ಅ.ನ.ಕೃ., ರಾಮಮೂರ್ತಿ ಅವರು ಈಗಿನ ಬೆಂಗಳೂರು ಬಸ್ಸು ನಿಲ್ದಾಣ ಇರುವ ಸುಭಾಷ್ ನಗರ ಕೆರೆ ಮೈದಾನದಲ್ಲಿ ಪ್ರತ್ಯೇಕವಾಗಿ ಎರಡು ದಿನಗಳ ರಾಜ್ಯೋತ್ಸವ ಕಾರ್ಯಕ್ರಮ ಸಂಘಟಿಸಿದ್ದರು. ಅನಂತರ ರಾಜ್ಯೋತ್ಸವ ಕಾರ್ಯಕ್ರಮಗಳು ಪ್ರತಿವರ್ಷವೂ ನಾಡಿನ ವಿವಿಧೆಡೆಗಳಲ್ಲಿ ನಡೆಯತೊಡಗಿವೆ. ಸರಕಾರವೂ ಸಹ ರಾಜ್ಯೋತ್ಸವ ಆಚರಣೆ ಅವಶ್ಯಕತೆಯನ್ನು ಮನಗಂಡು ಮುಂದೆ ಅಧಿಕೃತವಾಗಿ

ಆಚರಿಸತೊಡಗಿ ನಾಡಿನ ವಿವಿಧ ಕ್ಷೇತ್ರಗಳ ಮುನ್ನಡೆಯ ಗಣ್ಯರನ್ನು ಗುರುತಿಸಿ, ಪುರಷ್ಕರಿಸುವ ಪರಿಪಾಠ ರೂಢಿಸಿಕೊಂಡಿದೆ.

ಆದರೆ ಇದೇ ರಾಜ್ಯೋತ್ಸವ ಆಚರಣೆ ಕರ್ನಾಟಕ ಸಂಯುಕ್ತ ರಂಗದ ಅವನತಿಗೂ ಕಾರಣವಾಯಿತು. ೧೯೬೪ರ ರಾಜ್ಯೋತ್ಸವ ಕಾರ್ಯಕ್ರಮ ಆಚರಣೆ ಬಳಿಕ ರಂಗದ ಪ್ರಮುಖ ನಾಯಕರಾದ ಅ.ನ.ಕೃ. ಮತ್ತು ರಾಮಮೂರ್ತಿ ಇಬ್ಬರಲ್ಲಿ ಹಣಕಾಸಿನ ವಿಚಾರದಲ್ಲಿ ತೀವ್ರಭಿನ್ನಮತ ತಲೆಹಾಕಿತು. ಬೂದಿ ಮುಚ್ಚಿದ ಕೆಂಡದಂತಿದ್ದ ಈ ಭಿನ್ನಮತ ಮುಂದೆ ಆಗ ಮಾವಳ್ಳಿ ವೃತ್ತದಲ್ಲಿದ್ದ 'ಮಿನರ್ವ' ಚಿತ್ರಮಂದಿರದಲ್ಲಿ ಸಂಯುಕ್ತರಂಗದ ಕಾರ್ಯಕರ್ತರಿಗೆ ವಿಶೇಷವಾಗಿ ಪ್ರರ್ಶಿಸಿದ 'ಕಾಂಚಿತಲೈವಾನ್' ತಮಿಳು ಚಿತ್ರದ ಪ್ರದರ್ಶನಾವಧಿಯಲ್ಲಿ ಚಿತ್ರಮಂದಿರದ ಆಸನಗಳನ್ನು ಹರಿದು ತೀವ್ರವಾಗಿ ನಷ್ಟವುಂಟುಮಾಡಲಾಯಿತೆನ್ನಲಾದ ಪ್ರಕರಣದ ನೆಪವೊಡ್ಡಿ ಅ.ನ.ಕೃ. ಸಂಯುಕ್ತ ರಂಗದ ಅಧ್ಯಕ್ಷತೆಗೆ ರಾಜೀನಾಮೆ ನೀಡಿದರು. ಕಾಂಚಿತಲೈವಾನ್‌ನಲ್ಲಿ ಕನ್ನಡ ಚಕ್ರವರ್ತಿ ಪುಲಿಕೇಶಿಯನ್ನು ಹೀನಾಯವಾಗಿ ಚಿತ್ರಿಸಲಾಗಿದ್ದಿತೆಂದು ಅದರ ಪ್ರದರ್ಶನಕ್ಕೆ ಕನ್ನಡಿಗರ ತೀವ್ರ ಪ್ರತಿಭಟನೆ ವ್ಯಕ್ತವಾದಾಗ ಆ ಭಾಗವನ್ನು ಮರುಚಿತ್ರೀಕರಣ ಮಾಡಿದ್ದುದನ್ನು ತೋರಿಸುವದು ಚಿತ್ರವಿತರಕರ ಉದ್ದೇಶವಾಗಿದ್ದಿತು. ಮಿನರ್ವ ಚಿತ್ರಮಂದಿರ ಕನ್ನಡ ಚಿತ್ರಗಳನ್ನು ಪ್ರದರ್ಶಿಸದೇ ಕೇವಲ ತೆಲುಗು-ತಮಿಳು ಚಿತ್ರಗಳನ್ನೇ ಪ್ರದರ್ಶನ ಮಾಡುತ್ತಿದ್ದುದು ಕನ್ನಡ ಕಾರ್ಯಕರ್ತರ ಈ ಕಲಾಪಕ್ಕೆ ಕಾರಣವಾಗಿದ್ದಿತು.

ಸಂಯುಕ್ತರಂಗದ ಅವಸಾನ

ಈ ರೀತಿ ಕರ್ನಾಟಕ ಸಂಯುಕ್ತರಂಗದ ನಾಯಕತ್ವವನ್ನು ತ್ಯಜಿಸಿದ ಅ.ನ.ಕೃ. ಮುಂದೆ ಕನ್ನಡ ಪರ ಹೋರಾಟದಿಂದಲೂ ದೂರ ಸರಿದರು. ಅ.ನ.ಕೃ. ಮತ್ತು ರಾಮಮೂರ್ತಿ ಇಬ್ಬರನ್ನು ಒಂದುಗೂಡಿಸಿ 'ಸಂಯುಕ್ತರಂಗ'ವನ್ನು ಪುನರುಜ್ಜೀವ ಗೊಳಿಸಲು ರಾಮಣ್ಣ ಕೋಡಿಹೊಸಹಳ್ಳಿ, ಕೆ.ಬಿ. ಸೋಮಶೇಖರ, ರಾ.ನಾಗೇಶ, ವಿಶ್ವನಾಥ ರಾಮಕೃಷ್ಣ ಇವರೇ ಮೊದಲಾದ ಕನ್ನಡ ಕಾರ್ಯಕರ್ತರು ನಡೆಸಿದ ಪ್ರಯತ್ನ ಸಫಲವಾಗಲಿಲ್ಲ. ಈ ಉದ್ದೇಶದಿಂದ ಈಗ 'ಅಭಿನಯ' ಚಿತ್ರಮಂದಿರವಿರುವ ದಿ। ಸುಬ್ಬಯ್ಯ ನಾಯ್ಡು ಅವರ ರಾಜರಾಜೇಶ್ವರಿ ನಾಟಕ ಮಂದಿರದಲ್ಲಿ ಸೇರಿದ್ದ ಸಭೆ ರಾಮಮೂರ್ತಿ ಹಾಗೂ ಅ.ನ.ಕೃ. ಬೆಂಬಲಿಗರ ನಡುವೆ ಘರ್ಷಣೆ ಉಂಟಾಗಿ ಸಭೆ ಅರ್ಧಕ್ಕೇ ನಿಂತಿತು. ಎರಡು ಮೂರು ವರ್ಷಗಳ ಕಾಲ ರಾಜ್ಯದಲ್ಲಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕನ್ನಡಪರ ಹೋರಾಟ ಚಟುವಟಿಕೆಗೆ ತೀವ್ರ ಚಾಲನೆ ನೀಡಿದ್ದ 'ಕರ್ನಾಟಕ ಸಂಯುಕ್ತರಂಗ' ಪುನರುಜ್ಜೀವಗೊಳ್ಳುವ ಬದಲಿಗೆ ಈ ರೀತಿಯಲ್ಲಿ ಅವಸಾನಗೊಂಡಿತು. ಈ ವೇಳೆಗೆಗಾಗಲೇ ಕನ್ನಡ ಚಳವಳಿಯ ಹೆಸರಿನಲ್ಲಿ ಪ್ರಬಲವಾಗಿ ಬೆಳೆದು ದೊಡ್ಡವರಾಗಿರುವ ವಾಟಾಳ್ ನಾಗರಾಜ ಅವರು ತಮ್ಮ ಚಾಲಾಕು ವಾಚಾಳಿತನ, ಅ. ಸಂಜೀವಪ್ಪನವರ ಬುದ್ಧಿವಂತಿಕೆ, ಸರಕಾರದಲ್ಲಿದ್ದವರ ಕೃಪಾಶ್ರಯದಲ್ಲಿ ತಮ್ಮದೇ ಆದ ಸಂಘಟನೆಯನ್ನು ಕಟ್ಟಿಕೊಂಡು ಚಳವಳಿಯಲ್ಲಿ ಮುನ್ನಡೆದಿದ್ದರು. ಸಂಯುಕ್ತರಂಗ ಮೂಲೆ ಗುಂಪಾದ ಮೇಲೆ ಬಹುತೇಕ ಕನ್ನಡ ಕಾರ್ಯಕರ್ತರು ವಾಟಾಳರತ್ತ ವಾಲಿದರು.

ವಾಟಾಳ ನಾಗರಾಜ್ ಅವರು ನಗರಸಭೆ ಸದಸ್ಯರಾಗುವವರೆಗೆ ನಗರದಲ್ಲಿ ಕನ್ನಡ

'ಚಳವಳಿಯನ್ನು' ಕಾರ್ಯಕರ್ತರೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯಶಸ್ವಿಯಾಗಿಯೇ ಮುನ್ನಡೆಸಿದರೆನ್ನಬಹುದು. ಆದರೆ ಮುಂದೆ ಅಧಿಕಾರದ ರುಚಿ ಹತ್ತಿ, ಅದರ ಬೆನ್ನೇರಿದ ಬಳಿಕ ತಮ್ಮ ನೇತೃತ್ವದ ಚಳವಳಿಗೆ ಸಾಂಘಿಕ ಸ್ವರೂಪ ನೀಡಬೇಕೆಂಬ ಕಾರ್ಯಕರ್ತರ ಒತ್ತಾಯಕ್ಕೆ ಓಗೊಡದೆ ಏಕನಾಯಕತ್ವದ ಸರ್ವಾಧಿಕಾರಿ ಧೋರಣೆ ತೋರಿದಾಗ ಪ್ರಾಮಾಣಿಕ ಕನ್ನಡ ಕಾರ್ಯಕರ್ತರನೇಕರು ಅವರಿಂದ ದೂರ ಸರಿದರು. ಅವರಿಗೆ ಆಪ್ತ ಸಲಹೆಗಾರರಂತಿದ್ದು ಅವರ 'ಚಳವಳಿಯ ಮಿದುಳು' ಎಂದು ಹೇಳಲಾಗುತ್ತಿದ್ದ ಅ. ಸಂಜೀವಪ್ಪ ಅವರೂ ಸಹ ಕೆಲವು ಕಾರ್ಯಕರ್ತರೊಡನೆ ಬೇರ್ಪಟ್ಟರು. ಇವರೊಟ್ಟಿಗೇ ಚಳವಳಿಯಲ್ಲಿ ಬೆಳೆದ ಜಿ.ನಾರಾಯಣಕುಮಾರ್ ಅವರೂ ಮುಂದೆ ಪ್ರತ್ಯೇಕ ಸಂಸ್ಥೆ ಸ್ಥಾಪಿಸಿಕೊಂಡು ವಾಟಾಳರ ಹಾದಿಯಲ್ಲೇ ಚಳವಳಿಯನ್ನು ಕೊಂಡೊಯ್ದರು. ದೇವರಾಜು ಅರಸು ಅವರ ಎರಡನೆಯ ಅವಧಿಯಲ್ಲಿ ಅವರಿಗೆ ಹತ್ತಿರವಾದರು. ಮುಂದೆ ಎಸ್. ಬಂಗಾರಪ್ಪ ಅವರ ಕೃಪೆಯಿಂದ ೧೯೮೩ರಲ್ಲಿಯೂ, ಡಾ।ಜೀವರಾಜ ಆಳ್ವ ಹಾಗೂ ರಾಮಕೃಷ್ಣ ಹೆಗ್ಗಡೆಯವರ ಆಶೀರ್ವಾದದಿಂದ ೧೯೮೮ರಲ್ಲಿಯೂ ಶಾಸಕರಾದರು.

ಕನ್ನಡ ಹೋರಾಟಕ್ಕೆ ವಿದ್ಯಾರ್ಥಿಗಳು

ಕನ್ನಡ ಚಳವಳಿಯು ೬೦ರ ದಶಕದ ದ್ವಿತೀಯಾರ್ಧ ಹಾಗೂ ೭೦ರ ದಶಕದಲ್ಲಿ ವ್ಯಕ್ತಿಗಳ ವರ್ಚಸ್ಸಿನ ಹಿಂದೆ ಕೇಂದ್ರೀಕೃತವಾಗಿ ರಾಜಕೀಯ ಮಹತ್ವಾಕಾಂಕ್ಷೆ ಹಾಗೂ ಸ್ವಾರ್ಥಸಾಧನೆಯೇ ಪರಮಗುರಿಯಾಗಿ ಪರಿವರ್ತನೆಗೊಂಡಾಗ ಕೆಲವು ಉತ್ಸಾಹೀ ಕನ್ನಡ ಯುವಕರು 'ವಿದ್ಯಾರ್ಥಿ ಯುವಕ ಮೇಳ' ಎಂಬ ಹೆಸರಿನಲ್ಲಿ ಸಂಘಟಿತರಾಗಿ ಕನ್ನಡ ಪರ ಹೋರಾಟದಲ್ಲಿ ತೊಡಗಿದರು. ಮೈಸೂರು ಮಹಾರಾಷ್ಟ್ರ ನಡುವಿನ ಗಡಿ ಸಮಸ್ಯೆ ಮರಾಠಿಗರ ಮೊಂಡುತನದಿಂದ ತೀವ್ರಗೊಂಡಾಗ ಶಾಂತವೇರಿ ಗೋಪಾಲಗೌಡ, ಎಸ್. ಶಿವಪ್ಪ ಮೊದಲಾದ ಪ್ರತಿಪಕ್ಷಗಳ ಧುರೀಣರ ನೇತೃತ್ವದಲ್ಲಿ 'ಸಂಪೂರ್ಣ ಕರ್ನಾಟಕ ಸರ್ವ ಪಕ್ಷ ಸಮ್ಮೇಳನ'ವನ್ನು ನಡೆಸಿದರು. ಮರಾಠಿ ನಾಯಕರ ಒತ್ತಡಕ್ಕೆ ಮಣಿದು ಕೇಂದ್ರವು ಮರಾಠಿಗರಾದ ನ್ಯಾಯಮೂರ್ತಿ ಮಹಾಜನ್ ಅವರ ನೇತೃತ್ವದ ಏಕ ಸದಸ್ಯ ಆಯೋಗ ರಚನೆಗೆ ರಾಜ್ಯದ ನಾಯಕರು (ನಿಜಲಿಂಗಪ್ಪ, ರಾಮಕೃಷ್ಣ ಹೆಗ್ಡೆ) ಎ.ಐ.ಸಿ.ಸಿ. ಸಭೆಯಲ್ಲಿ ಒಪ್ಪಿಕೊಂಡು ಬಂದಾಗ ಇದೇ ವಿದ್ಯಾರ್ಥಿ ಯುವಕ ಮೇಳದ ನೇತೃತ್ವದಲ್ಲಿ ನಗರದ ಕಾಲೇಜು ವಿದ್ಯಾರ್ಥಿಗಳು ತೀವ್ರ ಪ್ರತಿಭಟನೆ ನಡೆಸಿದರು. ಆಗ ಪ್ರಧಾನಿಯಾಗಿದ್ದ ಲಾಲ್ ಬಹುದ್ದೂರ್ ಶಾಸ್ತ್ರಿಯವರು ರಾಜಧಾನಿಗೆ ಭೇಟಿಕೊಟ್ಟಿದ್ದ ಸಂದರ್ಭದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ವಿದ್ಯಾರ್ಥಿಗಳು 'ಟ್ರಿನಿಟಿಚೌಕ'ದ ಸಮೀಪ ಕಪ್ಪು ಬಾವುಟ ಪ್ರದರ್ಶನವನ್ನು ನಡೆಸಿದರು. ಈ ಕಾರ್ಯಕ್ರಮದ ನೇತೃತ್ವವನ್ನು ಬೇಗಾನೆ ರಾಮಯ್ಯ, ಬಸವನಗೌಡ, ಲೋಕೇಶಗೌಡ, ಕೋಡಿಹೊಸಹಳ್ಳಿ ರಾಮಣ್ಣಗೌಡರು, ಬಸಪ್ಪ, ಡಿ. ಕೆಂಪಣ್ಣ, ಸಿ. ಪುಟ್ಟಸ್ವಾಮಿ ಇವರೇ ಮೊದಲಾದವರು ವಹಿಸಿದ್ದರು.

ಮುಂದೆ ಇದೇ ಸಂಸ್ಥೆ ರಾಮಣ್ಣ ಕೋಡಿಹೊಸಳ್ಳಿ, ಲಕ್ಷ್ಮಯ್ಯ ಚಂದ್ರಶೇಖರ, ಜೀರಿಗೆ ಲೋಕೇಶ ನೇತೃತ್ವದಲ್ಲಿ 'ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲ' ಎಂಬ ಹೆಸರಿನೊಂದಿಗೆ ಹಲವಾರು ಕನ್ನಡ ಪರ ಕಾರ್ಯಕ್ರಮ ಹಮ್ಮಿಕೊಂಡಿದ್ದಿತು. ಈ ಸಂಘಟನೆ ಕನ್ನಡ ಚಳವಳಿಗೆ

ವ್ಯವಸ್ಥಿತ ರೂಪವನ್ನು ಅಭ್ಯಾಸಪೂರ್ವಕವಾಗಿ ಕೊಡಲೆತ್ನಿಸಿತು. ಗೋವಾ ಪೋರ್ಚುಗೀಸರಿಂದ ಸ್ವತಂತ್ರವಾದಾಗ, ಅದರ ಜನತೆಯೇ ತಮ್ಮ ಭವಿಷ್ಯವನ್ನು ನಿರ್ಧರಿಸಲು ಅವಕಾಶ ಮಾಡಿಕೊಡಬೇಕೆಂಬ ವಾದವನ್ನು ರಾಷ್ಟ್ರೀಯ ಹಿತದೃಷ್ಟಿಯಿಂದ ಪ್ರತಿಪಾದಿಸಿತು. ಗೋವೆಯ ಜನರು ಜನಮತಗಣನೆಯಲ್ಲಿ ಪ್ರತ್ಯೇಕವಾಗಿ ಉಳಿಯುವ ತೀರ್ಮಾನ ಕೈಗೊಂಡಾಗ ಅವರನ್ನು ಅಭಿನಂದಿಸುವ ಕಾರ್ಯಕ್ರಮವನ್ನು ಕೆಂಗಲ್ ಹನುಮಂತಯ್ಯನವರ ಹಿರಿತನದಲ್ಲಿ ಹಮ್ಮಿಕೊಂಡಿದ್ದಿತು. ಈ ವ್ಯವಸ್ಥೆಯ ಕಾರ್ಯಕರ್ತರೇ ೧೯೬೮ರಲ್ಲಿ ರಾಜಾಜಿ ಕನ್ನಡದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದಾಗ ಅದರ ವಿರುದ್ಧ ತೀವ್ರತರ ಪ್ರತಿಭಟನೆಯನ್ನು ಸಂಘಟಿಸಿ ರಾಜಾಜಿ ಕ್ಷಮೆಯಾಚಿಸುವಂತೆ ಒತ್ತಡ ತಂದಿತು. ಆ ಅವಧಿಯಲ್ಲಿ ಎದುರಾದ ಹತ್ತು-ಹಲವು ಸಮಸ್ಯೆಗಳ ಬಗೆಗೆ ತಕ್ಷಣ ಸ್ಪಂದಿಸಿ, ಹೋರಾಟದ ಕಾರ್ಯಕ್ರಗಳನ್ನು ಹಮ್ಮಿಕೊಳ್ಳುವ ಮೂಲಕ ಕನ್ನಡ ಜನರಲ್ಲಿ ಜಾಗೃತಿಯನ್ನು ಮೂಡಿಸುವಂತಹ ಓದುಗರ ಪತ್ರ, ಪತ್ರಿಕಾ ಹೇಳಿಕೆ, ಕರಪತ್ರಗಳೇ ಮೊದಲಾದ ಸಾಹಿತ್ಯವನ್ನು ಪ್ರಕಟಿಸುವಲ್ಲಿಯೂ ಈ ಸಂಘಟನೆ ಪರಿಣಾಮಕಾರಿ ಪಾತ್ರನಿರ್ವಹಿಸಿತು.

ಕನ್ನಡ ಜಾರಿ, ಇಲ್ಲ ಕುರ್ಚಿ ತೆರವು

ತಮಿಳುನಾಡಿನಲ್ಲಿ ಆರಂಭಗೊಂಡು ರಾಜ್ಯದಲ್ಲಿಯೂ ವಿದ್ಯಾರ್ಥಿಗಳಿಂದ ಹಿಂದಿ ವಿರೋಧಿ ಚಳವಳಿ ನಡೆದಾಗ ರಾಷ್ಟ್ರ ಹಾಗೂ ರಾಜ್ಯಗಳ ವ್ಯಾಪ್ತಿಯಲ್ಲಿ ಆಡಳಿತ, ಶಿಕ್ಷಣವೇ ಮೊದಲಾದೆಡೆಗಳಲ್ಲಿ ಯಾವ ಯಾವ ಹಂತದಲ್ಲಿ ಯಾವ ಯಾವ ಭಾಷೆ ಇರಬೇಕೆಂಬ ಬಗ್ಗೆ ತಿಳಿಯಪಡಿಸುವ 'ದಕ್ಷಿಣ ಭಾರತೀಯ ಭಾಷಾ ಸಮಾವೇಶ'ವೆಂಬ ಕಾರ್ಯಕ್ರಮವನ್ನು ಈ ಸಂಘಟನೆಯೇ ವ್ಯವಸ್ಥೆಗೊಳಿಸಿದ್ದಿತು. ಈ ವೇದಿಕೆಯಲ್ಲೇ ಹಿರಿಯ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು 'ಕನ್ನಡವನ್ನು ಅನುಷ್ಠಾನಕ್ಕೆ ತನ್ನಿ; ಇಲ್ಲವೇ ಕುರ್ಚಿ ತೆರವು ಮಾಡಿ' ಎಂಬ ಕರೆಯನ್ನು ಅಧಿಕಾರದಲ್ಲಿದ್ದವರಿಗೆ ನೀಡಿದುದು; ರಾಜ್ಯದ ಪ್ರಮುಖ ಪತ್ರಿಕಾಲಯಗಳಲ್ಲಿನ ಪಟ್ಟಭದ್ರಹಿತಾಸಕ್ತಿಗಳು ಕನ್ನಡದ ಧೀಮಂತ ನಾಯಕ ನಟ ರಾಜಕುಮಾರ ಅವರ ತೇಜೋವಧೆಗೆ ತೊಡಗಿದಾಗ ಪ್ರಾಧ್ಯಾಪಕ ಹಂಪನಾ ನೇತೃತ್ವದಲ್ಲಿ ೧೯೭೭ರ ಸುಮಾರಿಗೆ 'ರಾಜಕುಮಾರ ಕಲಾವಿಲಾಸಿ ಬಳಗ' ಸ್ಥಾಪಿಸಿ ಅವರ ಪರ ಹೋರಾಡಿದುದು ಇದೇ ಸಂಸ್ಥೆಯ ಕಾರ್ಯಕರ್ತರೇ. ೧೯೭೩ರಲ್ಲಿ ರಾಷ್ಟ್ರಕವಿ ಕುವೆಂಪು ಅವರು ಮೈಸೂರಿನಲ್ಲಿ 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ವನ್ನು ಉದ್ಘಾಟಿಸಿ ಮಾತನಾಡುತ್ತ ಮಾಧ್ವಮತದ ಬಗೆಗೆ ಪ್ರಸ್ತಾಪಿಸಿ, ಅದೊಂದು ಅಮಾನವೀಯ ಅಂಶಗಳಿಂದ ಕೂಡಿದುದು ಎಂಬ ಅಭಿಪ್ರಾಯ ವ್ಯಕ್ತಮಾಡಿದ್ದರು. ಆ ಸಂದರ್ಭದಲ್ಲಿ ರಾಜ್ಯದಾದ್ಯಂತ ಮಾಧ್ವ ಮತಾವಲಂಬಿಗಳು ಕುವೆಂಪು ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಅವರನ್ನು ನ್ಯಾಯಾಲಯದ ಕಟ್ಟೆ ಹತ್ತಿಸಲು ಮುಂದಾದರು. ಆಗ ನ್ಯಾಯವಾದಿ ಎಚ್. ಜಿ. ಬಾಲಕೃಷ್ಣ ಅವರ ನೇತೃತ್ವದಲ್ಲಿ ವಕೀಲರ ತಂಡವೊಂದು ಕುವೆಂಪು ರಕ್ಷಣೆಗೆ ಧಾವಿಸಿಬರುವಲ್ಲಿ ವ್ಯವಸ್ಥಿತ ಕಾರ್ಯಕ್ರಮ ರೂಪಿಸಿದುದು ಇದೇ ವ್ಯವಸ್ಥೆಯ ಕಾರ್ಯಕರ್ತರೇ. ಬಿ. ಬಸವಲಿಂಗಪ್ಪನವರು ೧೯೭೨ರಲ್ಲಿ ದೇವರಾಜ ಅರಸು ಸಂಪುಟದಲ್ಲಿ ಸಚಿವರಾಗಿದ್ದಾಗ 'ಕನ್ನಡ ಸಾಹಿತ್ಯ ಬೂಸಾ' ಎಂದು ಹೇಳಿದಾಗ ಅವರ ವಿರುದ್ಧ ಪಟ್ಟಭದ್ರರು ನಡೆಸಿದ ಚಳವಳಿಯ ವಿರುದ್ಧ ದನಿ ಎತ್ತಿ ಬಸವಲಿಂಗಪ್ಪನವರನ್ನು ಬೆಂಬಲಿಸಿದವರೂ ಸಹ ಈ ವ್ಯವಸ್ಥೆಯವರೇ.

ಇತಿಹಾಸಕ್ಕೆ ಅಪಚಾರ

ಹೀಗೆ ೧೯೬೦ ಹಾಗೂ ೭೦ರ ದಶಕದಲ್ಲಿ ರಾಜಧಾನಿಯಲ್ಲಿ ಅನೇಕರು ಕನ್ನಡ ಚಳವಳಿಯ ನೇತೃತ್ವ ವಹಿಸಿ ಮುನ್ನಡೆಸಿಕೊಂಡು ಬಂದಿದ್ದಾರೆ. ಆದರೆ ಪ್ರಚಾರ ದೊರೆತಿರುವುದು ಅ.ನ.ಕೃ., ಮ. ರಾಮಮೂರ್ತಿ ಮೊದಲಾದ ಕೆಲವರಿಗೆ ಮಾತ್ರವೇ. ಕಾರಣ ಪ್ರಚಾರ ಕ್ಷೇತ್ರವಾದ ಮಾಧ್ಯಮಗಳಲ್ಲಿ ಅವರ ಸಂತತಿಯವರೇ ಆಯಕಟ್ಟಿನ ಜಾಗಗಳಲ್ಲಿದ್ದು ಪ್ರಚಾರ ಹಾದರ ನಡೆಸುತ್ತಿದ್ದುದೇ ಆಗಿದೆ. ನಿಜವಾದ ಹೋರಾಟ ಮಾಡಿದವರಿಗೆ ಪ್ರೋತ್ಸಾಹ ನೀಡದೆ ಚಳವಳಿಯ ಹೆಸರಿನಲ್ಲಿ ಸ್ವಾರ್ಥ ಸಾಧಿಸಿಕೊಳ್ಳಲು ತೊಡಗಿದವರನ್ನು ಎತ್ತಿ ಹಿಡಿದು ಮೆರೆಸುವ ಮೂಲಕ ಕನ್ನಡ ಚಳವಳಿಯ ಇತಿಹಾಸಕ್ಕೆ ದ್ರೋಹ ಬಗೆಯಲಾಗುತ್ತಿದೆ. ಒಂದು ರೀತಿಯಲ್ಲಿ ೬೦ರ ದಶಕದ ಆರಂಭದಲ್ಲಿ ಕನ್ನಡ ಚಳವಳಿ ಪ್ರಬಲವಾಗಿ ರೂಪುಗೊಳ್ಳುತ್ತಿರುವಾಗ, ಸರಕಾರ ಹಾಗೂ ಸಾರ್ವಜನಿಕರು 'ಕರ್ನಾಟಕ ಸಂಯುಕ್ತ ರಂಗ'ದ ಬಗ್ಗೆ ಆಸಕ್ತಿಯಿಂದ ಗಮನಿಸಿ, ಅನುಕರಿಸುತ್ತಿದ್ದಂತಹ ಸಂದರ್ಭದಲ್ಲಿ ಅ.ನ.ಕೃ. ಮತ್ತು ರಾಮಮೂರ್ತಿ ಪರಸ್ಪರ ದ್ವೇಷಾಸೂಯೆಯನ್ನು ತೀರಾ ವೈಯಕ್ತಿಕ ನೆಲೆಯಲ್ಲಿ ಬೆಳೆಸಿಕೊಂಡು ಕನ್ನಡ ಚಳವಳಿಯ ವ್ಯವಸ್ಥಿತ ಬೆಳವಣಿಗೆಗೆ ಕುಠಾರಪ್ರಾಯರಾದರೆಂದೇ ಹೇಳಬಹುದು. ಸಂಯುಕ್ತ ರಂಗ ವಿಸರ್ಜನೆಗೊಂಡ ಮೇಲೆ ಮ.ರಾಮಮೂರ್ತಿ 'ಕನ್ನಡ ಪಕ್ಷ'ವನ್ನು ಸ್ಥಾಪಿಸಿದರು. ಅದರ ಮೂಲಕ ಬೆಂಗಳೂರು ನಗರ ಸಭೆಯ ಚುನಾವಣೆಗೆ 'ಆನೆಗುರುತು' ಚಿಹ್ನೆಯೊಂದಿಗೆ ನಿಂತು ಪರಾಜಿತರಾಗಿದ್ದರು. ಅನಂತರ ಚಳವಳಿಯಿಂದ ದೂರವಾಗಿ ಭೂಮಿಪಡೆದು ಕೃಷಿಯಲ್ಲಿ ತೊಡಗಲು ಬಾವಿ ತೊಡಿಸುತ್ತಿದ್ದಾಗ ಕುಸಿದ ಬಾವಿಯ ಮಣ್ಣಿನ ರಾಶಿಯಡಿ ತಮ್ಮ ಮಕ್ಕಳಿಬ್ಬರ ಜೊತೆ ಸಿಲುಕಿಕೊಂಡು ದುರ್ಮರಣಕ್ಕೀಡಾದರು. ಅ.ನ.ಕೃ. ಅವರಂತೂ ಸಂಯುಕ್ತರಂಗ ವಿಸರ್ಜನೆಯ ಬಳಿಕ ಯಾವುದೇ ಕನ್ನಡಪರ ಚಳವಳಿಯಲ್ಲಿ ತೊಡಗಿಸಿಕೊಂಡದ್ದೇ ಇಲ್ಲ; ವಾಸ್ತವ ಪರಿಸ್ಥಿತಿ ಹೀಗಿರುವಾಗ ಕನ್ನಡ ಚಳವಳಿಯನ್ನು ನಗರದಲ್ಲಿ ಆರಂಭಿಸಿ, ಮುನ್ನಡೆಸಿದವರು ಅ.ನ.ಕೃ. ಮತ್ತು ರಾಮಮೂರ್ತಿ ಎಂಬುದಾಗಿ ವ್ಯವಸ್ಥಿತ ಪ್ರಚಾರ ನಡೆಯುತ್ತಿರುವುದು ಇತಿಹಾಸಕ್ಕೆ ಎಸಗುತ್ತಿರುವ ಅಪಚಾರವಾಗುತ್ತದೆ. ಈ ಬಗ್ಗೆ ಕನ್ನಡಜನ ಸಮೂದಾಯಕ್ಕೆ ತಿಳಿಯಪಡಿಸುವುದಷ್ಟೇ ಈ ಲೇಖನದ ಉದ್ದೇಶವೇ ಹೊರತು ಯಾರೊಬ್ಬರನ್ನೂ ಹೀಗಳಿಯುವುದಾಗಲೀ ಅಥವಾ ಸ್ವತುತ್ತೂರಿ ಊದಿಕೊಳ್ಳುವುದಾಗಲೀ ಅಲ್ಲ ಎಂಬುದನ್ನು ಸ್ಪಷ್ಟಪಡಿಸ ಬಯಸುತ್ತೇನೆ.



ಅನ್ಯಭಾಷಾ ವ್ಯಾಮೋಹ

ಸುಜನಾ

ರಷ್ಯನ್ ಮಹಾ ಕಾದಂಬರಿಕಾರನಾದ ದಾಸ್ತಾವೆಸ್ಕಿ ನೂರು ವರ್ಷದ ಹಿಂದೆ (೧೮೭೬ರಲ್ಲಿ) ತನ್ನ ದಿನಚರಿಯ ಒಂದು ಕಡೆಯಲ್ಲಿ, ತನ್ನ ಭಾಷೆಯ ದಾರುಣ ಸ್ಥಿತಿಯನ್ನು ಮನೋಜ್ಞವಾಗಿ ಬರೆಯುತ್ತಾನೆ. ಅಲ್ಲಿ ಪ್ರಾಸಂಗಿಕವಾಗಿ ಭಾಷೆ- ಎಂದರೆ ರಷ್ಯನ್ ಭಾಷೆಯಲ್ಲಿ 'ಜನತೆ'ಯೆಂದೂ ಅರ್ಥವಿದೆಯೆಂದು ತಿಳಿಸುತ್ತಾ ಬೆರಗು ಪಡುತ್ತಾನೆ. ಅಂದರೆ ಭಾಷೆ ಎನ್ನುವುದು ಒಂದು ಜನತೆಯ ನುಡಿ ಮಾತ್ರವಲ್ಲ, ಆ ನುಡಿಯನ್ನು ಆಡುವ 'ಜನತೆ'ಯೆಂದೂ ಇರುವ ಅರ್ಥ, ಗಮನಿಸಬೇಕಾದ ವಿಶೇಷ ಅಂಶ. ಜನ ಮತ್ತು ಜನರ ಭಾಷೆ ಒಂದರ್ಥದಲ್ಲಿ ಅವಿಭಾಜ್ಯ. ಒಂದನ್ನು ತಿಳಿಯಲು ಮತ್ತೊಂದನ್ನು ತಿಳಯಲೇ ಬೇಕಾದ ಅನಿವಾರ್ಯತೆ ಇದೆ. ಕನ್ನಡ ಜನತೆಯನ್ನು ಕಾಡುತ್ತಿರುವ ಕೀಳರಿಮೆ ಎಷ್ಟರ ಮಟ್ಟಿಗೆ ಕನ್ನಡ ಭಾಷೆಯಲ್ಲಿ ಮೈಗೂಡಿದೆ ಎಂಬುದನ್ನು ತಿಳಿದರೆ ಮೇಲಿನ ಅರ್ಥದ ಸಾರ್ಥಕ್ಯ ತಿಳಿಯುತ್ತದೆ. ಇಂದು ಕನ್ನಡ ಇಂಗ್ಲಿಷ್, ಹಿಂದಿ ಭಾಷೆಗಳ ಪ್ರಭುತ್ವದಲ್ಲಿ ಬಳಲುತ್ತಿರುವಂತೆ ಹಿಂದೆ ಸಂಸ್ಕೃತದ ಸಾಂಸ್ಕೃತಿಕ ಪ್ರಭುತ್ವದಿಂದ ತೊಳಲಾಡಿತ್ತು. ಸಂಘರ್ಷದಲ್ಲಿ ಹೊಸ ಕಸುವನ್ನು ಪಡೆದಂತೆಯೇ ತನ್ನ ಹುಟ್ಟಿನಿಂದಲೇ ಬಂದ ಸಹಜವಾದ ಸಿರಿಯನ್ನು ಕಳೆದುಕೊಳ್ಳುತ್ತಾ ಬಂತು. ಆಮೇಲೆ ಬಂದ ಪಾರಸಿ, ಅರಾಬಿಕ್, ಉರ್ದು ಭಾಷೆಗಳ ಸಂಪರ್ಕದಲ್ಲಿಯೂ ಇದೇ ಗತಿಯನ್ನು ಅನುಭವಿಸಿತು.

ಇದನ್ನು ಕನ್ನಡ ಮಾತುಗಳಲ್ಲಿ ಕಂಡುಕೊಳ್ಳಬಹುದು. ಅನ್ಯ ಭಾಷೆಯ ಜನ ನಮ್ಮನ್ನು ಆಳಲು ಪ್ರಾರಂಭಿಸಿದಾಗ, ಅವರು ಸಹಜವಾಗಿಯೇ ತಮ್ಮ ಆಡಳಿತದಲ್ಲಿ ಹಾಗೂ ಇತರ ವ್ಯವಹಾರಗಳಲ್ಲಿ ತಮ್ಮ ಭಾಷೆಯನ್ನೇ ಬಳಸುತ್ತಾರೆ. ನಡೆ ನಡಾವಳಿಗಳಲ್ಲಿ ತಮ್ಮನ್ನು ನಮಗಿಂತ ಎತ್ತರದಲ್ಲಿ ಇರಿಸಿಕೊಂಡಿರುತ್ತಾರೆ. ಹಾಗಾಗಿ ಅವರ ನಡೆ

ನುಡಿ ಹೆಚ್ಚು ಥಾಳಿಡುತ್ತವೆ. ನಮ್ಮ ಕಣ್ಣನ್ನು ಕೋರೈಸಿ ನಮ್ಮದನ್ನು ನಮಗೆ ಮಾಸಲಾಗಿ ಕಾಣುವಂತೆ ಮಾಡುತ್ತವೆ. ಹಾಗೂ ತಮ್ಮ ನುಡಿಗಟ್ಟಿನ ನಡೆ ನಡಾವಳಿಯ ಕನ್ನಡಕವನ್ನು ನಮಗಿಟ್ಟು, ನಮ್ಮ ಇರುಳುಗಣ್ಣನ್ನು ಗುಣಪಡಿಸಿಕೊಳ್ಳುವಂತೆ ಮಾಡುತ್ತವೆ. ಆಳುವವರ ನಡೆ ನುಡಿಗಳು ಬಳಕೆಗೆ ಬರುತ್ತಾ ನಮ್ಮ ನಡೆನುಡಿಗಳು ಚಲಾವಣೆ ತಪ್ಪುತ್ತವೆ. ಅಷ್ಟು ಮಾತ್ರವೇ ಅಲ್ಲ, ಪ್ರಭು ಭಾಷೆಯ ಪದಗಳು ಪ್ರಜೆಗಳ ಬಾಯಿಯಲ್ಲಿ ಉಚ್ಛರಣೆಗೆಟ್ಟು, ಅರ್ಥವನ್ನೂ ಕಳೆದುಕೊಳ್ಳುತ್ತವೆ. ಇದೆಲ್ಲವನ್ನೂ ಕನ್ನಡದ ಸನ್ನಿವೇಶದಲ್ಲಿ ಕಂಡುಕೊಳ್ಳಬಹುದು. ಸಂಸ್ಕೃತಕ್ಕಿಂತಲೂ ಭಿನ್ನವಾದ ಭಾಷಾಮೂಲದಿಂದ ಹುಟ್ಟಿಕೊಂಡ ಕನ್ನಡ, ತನ್ನ ದಿನನಿತ್ಯದ ಅಗತ್ಯಗಳಿಗೂ ವಿಶೇಷ ಅಗತ್ಯಗಳಿಗೂ ಬೇಕಾದ ನುಡಿಗಳನ್ನು ತುಂಬಾ ಸುಂದರವಾಗಿ ಪಡೆದುಕೊಂಡಿತ್ತು. ಸಂಸ್ಕೃತದ ಪ್ರಭಾವ ಹೆಚ್ಚಿದಂತೆಲ್ಲಾ ಅವುಗಳು ಬಿಳಿಚಿಕೊಂಡವು. ಶಿಷ್ಟರು ಇವುಗಳ ಬಳಕೆಗೆ ಬದಲಾಗಿ ಸಂಸ್ಕೃತವನ್ನೇ ಮೊರೆಹೊಕ್ಕರು. ಕನ್ನಡದ ದೇಸಿಪದಗಳು ದೇಸಿಗ ಜನರನ್ನು ಆಶ್ರಯಿಸಿ ಬದುಕಬೇಕಾಯಿತು. ಶಿಷ್ಟರ ಜೊತೆಯಲ್ಲಿ ವ್ಯವಹರಿಸಲು ತಮ್ಮ ನುಡಿ ತಕ್ಕುದಲ್ಲ ಎನ್ನುವ ಕೀಳರಿಮೆ ಬಂದು ಈ ದೇಸಿಗ ಜನ ತೊಳಲಿದರು. ಮೊದಲನೆಯದಾಗಿ ತಮ್ಮ ನುಡಿಯನ್ನೇ ಬಿಡುತ್ತಾ ಬಂದರು. ಅದಕ್ಕೆ ಬದಲಾಗಿ ಶಿಷ್ಟರ ನುಡಿಯನ್ನು ಆಡ ಹೋಗಿ ಉಚ್ಛರಣೆ ತಪ್ಪಿ ಅರ್ಥ ಕಳೆದರು.

ಬದಲಾದ ದಿಕ್ಕು

ದಿಕ್ಕುಗಳನ್ನು ಸೂಚಿಸುವ ಪದಗಳಾದ ಮೂಡ, ಪಡುವ, ತೆಂಕ ಬಡಗ ಎಂಬ ನುಡಿಗಳ ಜಾಗದಲ್ಲಿ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಎಂಬ ಪದಗಳು ಕಾಲೂರಿ ಅವೇ ನಮ್ಮ ದಿಕ್ಕಾಗಿವೆ. ಈಗ ನೇಸರು, ತಿಂಗಳು, ಅರಿಲು, ಬಾನು, ಮುನ್ನೀರು, ನೊಸಲು, ಕದವು, ಆಲಿ, ಅಡಿ, ಕುರುಳು ಮುಂತಾದ ಪದಗಳು ಸೂರ್ಯ, ಚಂದ್ರ, ನಕ್ಷತ್ರ ಆಕಾಶ, ಸಮುದ್ರ, ಹಣೆ, ಕಪೋಲ, ನೇತ್ರ, ಪಾದ, ಚರಣ, ಕೇಶಗಳಿಗೆ ಎಡೆ ಬಿಟ್ಟಿವೆ. ನಲವು, ಚೆಲುವು, ಒಲವು, ಗೆಲುವು, ಅರಿವು, ಮರೆವು, ಚೆನ್ನಿ, ನನ್ನಿ, ಅರ, ಮೊರೆ ಮುಂತಾದ ಭಾವ ಸಂಬಂಧಿಯಾದ ನಮ್ಮ ನುಡಿಗಳೇ ಈಗ ಬಳಕೆ ತಪ್ಪಿ ಅನ್ಯ ಭಾಷೆಯ ಪದಗಳಂತೆ ತೋರತೊಡಗಿವೆ. ಅವುಗಳ ಸ್ಥಳಗಳಲ್ಲಿ ಸಂತೋಷ, ಆಹ್ಲಾದ, ಖುಷಿ, ಸೌಂದರ್ಯ, ಪ್ರೀತಿ, ವಿಜಯ, ಜ್ಞಾನ, ಮಾಯೆ, ವಿಸ್ಮೃತಿ, ಸುಂದರಿ, ಸತ್ಯ, ಧರ್ಮ, ವಂಶ ಮುಂತಾದ ಸಂಸ್ಕೃತ ಶಬ್ದಗಳು ಅಧಿಕಾರ ಚಲಾಯಿಸಿವೆ. ಮದುವೆಯೆಂದರೆ ಅರ್ಥ ಕುಂದುತ್ತದೆಂದು ತಿಳಿದು 'ಮದುವೆ' ಲಗ್ನ ಎಂದು ಹೇಳಹೊರಟು 'ಮದುವೇ ನಗ್ನ' ವೆಂದು ಹೇಳುತ್ತಿದ್ದ ಜನಗಳೂ ಇದ್ದರು. ಬಟ್ಟಲು, ಚೌಕ, ಎಂದರೆ ಕಡೆಮೆಯೆಂದು ತಿಳಿದು ಕಪ್‌ಲೋಟ, ಟುವೆಲ್‌ಚೌಕ, ಕೊನೆಲಾಸ್ಟ್ ಎಂದೆಲ್ಲಾ ಹೇಳುವ ಮೂಲಕ ತಮಗೂ ತಮ್ಮ ನುಡಿಗೂ ಘನತೆಯನ್ನು ತಂದುಕೊಳ್ಳುವ ಜನವಿನ್ನೂ ಇದ್ದಾರೆ. ಈ ಸ್ಥಿತಿ ಪಂಪನ ಕಾಲದಲ್ಲೇ ಇತ್ತೆಂದರೆ ಆಶ್ಚರ್ಯವಾಗಬೇಕಾಗಿಲ್ಲ. 'ಪಣ್‌ಫಲ', ಎನ್ನುವ ಮಾತನ್ನು ಪಂಪನೇ ಬಳಸುತ್ತಾನೆ. ಹಣ್ಣು ಎಂದರೆ (ಪಣ್) ಕಡಿಮೆ ಎನ್ನುವ ಭಾವ ಬಂದಿದ್ದರಿಂದಲೆ ಸಂಸ್ಕೃತದ 'ಫಲ'ವನ್ನು ಕೂಡಿಸಿ ಹೇಳುವ ಪದ್ಧತಿ ಆಗಲೇ ಬಂದಿತ್ತು. ಬಸವಣ್ಣನವರ ವಚನದಲ್ಲಿ 'ತರುಮರ' ಎನ್ನುವ ಸಂಸ್ಕೃತ ಕನ್ನಡಗಳ ಕೂಡಾವಳಿಯಾಗಿದೆ. 'ಹಣ್ಣು ಹಂಪಲ'

ಪದದಲ್ಲಿ ಹಣ್ಣು+ಹಣ್ಣು+ಫಲ ಇದೆ. ಈ ಪ್ರಯೋಗಗಳಲೆಲ್ಲಾ ಕನ್ನಡದ ಜೊತೆಯಲ್ಲಿ ಸಂಸ್ಕೃತದ ಎರವಲಿನ ನೆರವನ್ನು ಪಡೆಯಲಾಗಿದೆ. ಈ ಕೀಳರಿಮೆ ಇಷ್ಟಕ್ಕೆ ನಿಲ್ಲಲಿಲ್ಲ. ಕನ್ನಡದ ಜನರ ಬಾಯಿಯಲ್ಲಿ ಸಂಸ್ಕೃತದ ಪದಗಳು ಉಚ್ಚರಣೆ ಗೆಡುತ್ತಿದ್ದುದು ಸಹಜ. ಹಾಗಾಗುವಾಗ ಆ ಪದಗಳು ಅರ್ಥವನ್ನೂ ಕಳೆದುಕೊಳ್ಳುತ್ತಿದ್ದವು. ಯೋಗಿ-ಜೋಗಿ, ಯಾತ್ರೆ-ಜಾತ್ರೆ, ಪರಿಷತ್ತು-ಪರಿಸೆ, ಸಂಸ್ಥೆ-ಸಂತೆ ಮುಂತಾದ ಕಡೆಯಲ್ಲಿ ಇದನ್ನು ನೋಡಬಹುದು.

ಸಂಸ್ಕೃತಕ್ಕೆ ಸಂಬಂಧಿಸಿದಂತೆ ಮಾತ್ರವೇ ಅಲ್ಲ ಇಂಗ್ಲಿಷ್ ವಿಷಯದಲ್ಲೂ ಇದನ್ನೇ ಕಾಣುತ್ತೇವೆ. ಕಂಟ್ರಿ-ತಂತ್ರಿಯಾಗಿ , ಮಾಸ್ಟರ್-ಮೇಷ್ಟ್ರಾಗಿ, ಅರ್ಥವನ್ನು ಕೆಡಿಸಿಕೊಂಡಿವೆ. ಅದರೆ ನಮ್ಮ ವ್ಯಕ್ತಿನಾಮಗಳು, ಸ್ಥಳನಾಮಗಳು ಆಳುವ ಜನರ ಬಾಯಲ್ಲಿ ಧ್ವನಿಮೆಯನ್ನು ಕೆಡಿಸಿಕೊಂಡಾಗ ಅವುಗಳು ವಿಲಕ್ಷಣವಾಗಿ ತೋರುವ ಬದಲು ಪವಿತ್ರವೂ ಚಲಾವಣೆಯ ನಾಣ್ಯಗಳೂ ಆಗಿ ಪುರಸ್ಕಾರ ಪಡೆದವು. ಶ್ರೀರಂಗಪಟ್ಟಣ- ಸೆರಿಂಗ್‌ಪಟ್ಯಾಂ, ಚಿತ್ರದುರ್ಗ-ಚಿಟಲ್‌ಡುರ್ಗ್, ಶಿವಮೊಗ್ಗ - ಶಿಮೊಗ್ಗ, ಕಲ್ಲಿಕೋಟೆ-ಕ್ಯಾಲಿಕೋಟ್, ವಿಶಾಖಪಟ್ಟಣ- ವೈಸಗ್ ಎಂದೆಲ್ಲಾ ಆಗಿದೆ. ಭಾರತದ ಶ್ರೇಷ್ಠ ನ್ಯಾಯಾಧೀಶರಾಗಿದ್ದ ನ್ಯಾಯಮೂರ್ತಿ ವೆಂಕಟಾಚಲಯ್ಯರವರನ್ನು ವೆಂಕಟ್‌ಚಲೈಯ್ಯ ಎಂದೇ ದೂರದರ್ಶನದ ಇಂಗ್ಲಿಷ್ ಸುದ್ದಿವಾಚಕರು ಹೇಳುತ್ತಿದ್ದುದನ್ನು ಯಾರೂ ತಪ್ಪೆಂದು ಭಾವಿಸಿದಂತೆ ತೋರುವುದಿಲ್ಲ. ಆದರೆ ನಾವು ಮಾತ್ರ ಇಂಗ್ಲಿಷ್ ಹೆಸರುಗಳನ್ನು ಸರಿಯಾಗಿ ಉಚ್ಚರಿಸುವಲ್ಲಿ ಎಚ್ಚರ ವಹಿಸಬೇಕಾಗುತ್ತದೆ. ಈ ವೈಪರೀತ್ಯಗಳಿಗೆಲ್ಲಾ ಕಾರಣವೇನು? ಆಳುವವರ ಬಾಯಲ್ಲಿ ಬಂದುದಕ್ಕೆಲ್ಲಾ ರಾಜಮುದ್ರೆಯ ಒತ್ತು ಬಿದ್ದಿರುತ್ತದೆ. ನಮ್ಮಿಂದ ಇಂಗ್ಲಿಷ್ಗೆ, ಸಂಸ್ಕೃತಕ್ಕೆ ಪ್ರವೇಶ ಪಡೆದಿರುವ ಪದಗಳು, ಹೊಸ ಅರ್ಥ ಗೌರವವನ್ನು ಪಡೆದುಕೊಂಡಿವೆ. ನೀರು ಎಂದು ಹೇಳಿದರೆ ಕಡಿಮೆಯೆಂದು ತಿಳಿದುಕೊಂಡ ಜನ 'ತೀರ್ಥ' ಎನ್ನುವುದುಂಟು. ಆದರೆ ನೀರು ಎನ್ನುವ ಕನ್ನಡ ಪದ ಸಂಸ್ಕೃತಗೊಂಡಾಗ, ಸಂಯುಕ್ತ ಪದಗಳಲ್ಲಿ ಬಳಕೆಗೊಂಡು ಗೌರವ ಪಡೆಯಿತು. ನೀರಜ, ನೀರಜಾಕ್ಷಿ, ನೀರಧಿ, ನೀರೇಜ ಮುಖಿ, ಮುಂತಾದ ಕಡೆಗಳಲ್ಲಿ ಅದಕ್ಕೆ ಬಂದಿರುವ ಹೊಸ ಠೀವಿಯನ್ನು ನೋಡಬಹುದು. ಕನ್ನಡ ಮತ್ತು ತಮಿಳಿನಲ್ಲಿ ಬಳಕೆಯಲ್ಲಿರುವ 'ಕಟ್ಟುಮರ' ಎಂಬ ಪದ (ಒಂದು ಬಗೆಯ ತೆಪ್ಪ, ದೋಣಿ) ಇಂಗ್ಲಿಷ್ ನಿಘಂಟನ್ನು ಸೇರಿ ವಿಶೇಷ ಅರ್ಥವನ್ನು ಪಡೆದುಕೊಂಡಿದೆ. (ನೋಡಿ: CATAMARAN ಎಂಬ ಪದವನ್ನು ಇಂಗ್ಲಿಷ್ ನಿಘಂಟಿನಲ್ಲಿ) ಶಕ್ತರು, ಅಧಿಕೃತರು ಯಾವುದನ್ನೇ ಒಪ್ಪಿಕೊಂಡರೂ, ಶಕ್ತವೂ, ಅಧಿಕೃತವೂ ಆಗುತ್ತದೆ. ಈ ಶಕ್ತಿಯನ್ನು ಹಿಂದೆ ಸಂಸ್ಕೃತವೂ ಮಧ್ಯಂತರ ದಿನಗಳಲ್ಲಿ ಉರ್ದು, ಪರ್ಶಿಯನ್ನ ಭಾಷೆಯೂ ಬ್ರಿಟಿಷರ ಆಡಳಿತ ಬಂದ ಮೇಲೆ ಇಂಗ್ಲಿಷ್ ಭಾಷೆಯೂ ಗಿಟ್ಟಿಸಿಕೊಂಡಿವೆ. ಇತ್ತೀಚಿನ ದಿನಗಳಲ್ಲಿ ಹಿಂದಿ ತನ್ನ ಒಂಟಿ ಕಾಲನ್ನು ತೂರುತ್ತಿದೆ. ಇಂಥ ಸನ್ನಿವೇಶದಲ್ಲಿ ಸತ್ವಶಾಲಿಯಾಗಿದ್ದೂ ಬಳಲುತ್ತಿರುವ ಕನ್ನಡವನ್ನು ಕೀಳರಿಮೆಯಿಂದ ಪಾರು ಮಾಡುವುದು ಹೇಗೆ? ನಮ್ಮಲ್ಲಿರುವ ಕೀಳರಿಮೆಯನ್ನು ಕಳಚಿ ಎಸೆಯುವುದಲ್ಲದೆಯೇ ಬೇರಾವ ದಾರಿಯುಂಟು?

ಈ ವಿಷಯದಲ್ಲಿ ತಮಿಳರಿಂದ ಸ್ಫೂರ್ತಿ ಪಡೆಯಬಹುದು. ಅವರು ಅತಿ ಎನ್ನಿಸುವಷ್ಟರ

ಮಟ್ಟಿಗೆ ಎಲ್ಲವನ್ನೂ ತಮಿಳಾಗಿಸಿಕೊಂಡಿದ್ದಾರೆ. 'ಆಕಾಶವಾಣಿ' ಎಂಬ ಸಂಸ್ಕೃತ ಪದವನ್ನು ಬಳಸಲು ಬಯಸದೆ ವಾನುಲೈ (ಬಾನುಲಿ) ಬಾನ್+ಉಲಿ) ಎಂದೇ ಕರೆಯುತ್ತಾರೆ. ನಮ್ಮ ದುರಂತವೆಂದರೆ ನಾವು ನಮ್ಮ ನುಡಿಯ ಮಾತುಗಳನ್ನು ಗುಡಿಸಿ ಹಾಕಿ ಹಿಂದಿಯನ್ನು ಇಂಗ್ಲಿಷನ್ನು ಆ ಎಡೆಗೆ ತಂದುಕೊಂಡು ಪೂಜಿಸುತ್ತಿದ್ದೇವೆ. ಅಮ್ಮ ಹೋಗಿ ಮಮ್ಮಿ ಬಂದಳು; ಅಪ್ಪ ಹೋಗಿ ಡ್ಯಾಡಿ ಬಂದರು; ಮಾವ, ಚಿಕ್ಕಪ್ಪ ಹೋಗಿ- ಅಂಕಲ್ ಆದರು; ಚಿಕ್ಕಮ್ಮ ಸೋದರತ್ತೆ – ಅಂಟಿಯಾದರು. ಮಗುತನದಿಂದ ತನ್ನ ಸುತ್ತೂ ಬೆಳೆದ ತನ್ನ ಸಂಬಂಧಿಕರನ್ನು ತನ್ನ ನುಡಿಯಲ್ಲಿ ಕರೆಯುವುದನ್ನು ಬಿಟ್ಟು ಎಂಜಲು ಮಾತುಗಳಿಂದ ಕರೆಯುವುದು ತುಂಬಾ ನತದೃಷ್ಟ ಸ್ಥಿತಿ. ಕೂಳು ಎನ್ನುವ ಕನ್ನಡ ಪದ, ಅನ್ನಕ್ಕೆ ಜಾಗ ಕೊಟ್ಟು ಅರ್ಥ ಕೆಡಿಸಿಕೊಂಡಂತೆ ಈ ಸಂಬಂಧವಾಚಕಗಳಾದ ಅಪ್ಪ, ಅಮ್ಮ ಮುಂತಾದುವೂ ಕೂಡ ನಾಳೆ ಅರ್ಥ ಕೆಟ್ಟು ಪತಿತವಾದರೆ ಆಶ್ಚರ್ಯವಿಲ್ಲ. ಅನ್ಯ ಭಾಷೆಗಳ ರಾಜಕೀಯ ಸಾಂಸ್ಕೃತಿಕ ದಾಳಿ ಈ ಪ್ರಮಾಣದಲ್ಲಿ ಆಗುವುದಕ್ಕೆ ಬಿಡಬಾರದು. ನಮ್ಮಲ್ಲಿಲ್ಲದ ಪದಗಳನ್ನು ಇತರ ಭಾಷೆಗಳಿಂದ ಧಾರಾಳವಾಗಿ ತೆಗೆದುಕೊಳ್ಳೋಣ. ಆದರೆ ಅಪ್ಪ, ಅಮ್ಮ ಎಂಬ ಪದಗಳಂಥವಲ್ಲ.

ಅಪ್ಪ, ಅಮ್ಮ ಇಲ್ಲದೆ ಬೆಳೆದ ಮಕ್ಕಳು ತಮ್ಮನ್ನು ಸಾಕಿದವರನ್ನೇ ಅಪ್ಪ, ಅಮ್ಮ ಎನ್ನುವುದೇನೋ ಸರಿ. ಆದರೆ ಅವರೆಲ್ಲಾ ಇದ್ದೂ, ಮುದ್ದು ಮಾಡಿಯೂ ಹೀಗಾದರೆ ಏನೆನ್ನಬೇಕು? ಯಾವುದೇ ನುಡಿಯನ್ನು ಆಡುವ ಜನ ಸತ್ವಶಾಲಿಗಳೂ ಅಭಿಮಾನಶಾಲಿಗಳೂ ಆಗದಿದ್ದರೆ ಆ ಗುಣಕ್ಕಾಗಿ ಆ ನುಡಿಯನ್ನು ನಿಂದಿಸಿದರೆ ಫಲವಿಲ್ಲ. ಹುರುಳಿದ್ದ ಜನದ ಮಾತು ಕಳೆಗೆಟ್ಟಿರುವುದಿಲ್ಲ. ಎಷ್ಟೇ ಪೂರ್ವಾರ್ಜಿತ ಸತ್ವದಿಂದ ಕೂಡಿದ್ದರೂ ಭಾಷೆ, ಹೊಣೆಗೇಡಿ ವಾರಸುದಾರರ ಕೈಸೇರಿ ಕಳೆಗೆಡುತ್ತದೆ. ಕನ್ನಡದಂಥ ವಿಪುಲ ಸಂಪನ್ನವಾದ ಪ್ರಾಚೀನ ಭಾಷೆಗೆ ಮುಸುಕಿರುವ ಮಂಕು ಈ ನುಡಿಯ ಜನರ ಕೀಳರಿಮೆಯಿಂದ ಬಂದುದಾಗಿದೆ. ಸಾವಿರ ವರ್ಷಕ್ಕೂ ಹಿಂದೆ ಪಂಪನಂಥ ಧೀಮಂತನೂ ಪ್ರತಿಭಾವಂತನೂ ಆದ ಮಹಾಕವಿ ಸವ್ಯಸಾಚಿಯಾಗಿ ಸಂಸ್ಕೃತ ಕನ್ನಡಗಳೆರಡರಲ್ಲೂ ಸಮಾನ ಪ್ರಭುತ್ವವನ್ನು ಗಳಿಸಿಕೊಂಡು, ಎರಡೂ ಮಾರ್ಗಗಳನ್ನು ಕೂಡಿಸಿ ಹೆದ್ದಾರಿಯೊಂದನ್ನು ನಿರ್ಮಿಸಿದರು. ಅವನಿಂದಾಗಿ ಕನ್ನಡ ಭಾಷೆ ಮಹಾಕಾವ್ಯದ ತಾಯಿಯಾಯಿತು. ವಚನಕಾರರು ಬಂದು ನಿಜ ಕನ್ನಡದಲ್ಲಿ ಹದವನ್ನು, ಆಳವನ್ನು ಮತ್ತೂ ಅತಿಶಯವಾಗಿ ಸಾಧಿಸುತ್ತಾರೆ. ಕುಮಾರವ್ಯಾಸ ಆ ಭಾಷೆಯನ್ನು ಮಹಾಕಾವ್ಯಕ್ಕೆ ತೊಡಗಿಸಿಕೊಳ್ಳುತ್ತಾನೆ. ಇವರೆಲ್ಲಾ ಕನ್ನಡದ ಹುರುಳನ್ನು ಹೆಚ್ಚಿಸಿದವರು, ಸಂಸ್ಕೃತದ ಹಾಗೂ ಇತರ ಭಾಷೆಯ ಪದಗಳನ್ನು ತಮ್ಮ ಅರ್ಥಕ್ಕೆ ಒಗ್ಗಿಸಿಕೊಂಡವರು.

ಆದರೆ ಆರುನೂರು ವರ್ಷಕ್ಕೂ ಹೆಚ್ಚು ಕಾಲ ಕನ್ನಡ ನಾಡು ಹಲವು ಭಾಷೆಗಳ ಆಡಳಿತ ಕ್ಷೇತ್ರದಲ್ಲಿ ಸಿಕ್ಕು ಹಸಕೆಟ್ಟಿತು. ಆಗೆಲ್ಲಾ ಆಳುವವರ ಭಾಷೆಯ ಮುಂದೆ ತಲೆಬಾಗಿ ನಿಲ್ಲುವಂತೆ, ಸ್ವಾತಂತ್ರ್ಯ ಬಂದ ಮೇಲೂ ಕರ್ನಾಟಕ ರಾಜ್ಯ ಸ್ಥಾಪನೆಯಾದ ಮೇಲೂ ಬಾಳಬೇಕಾದ ಈ ಸ್ಥಿತಿ ಬದಲಾಗಿಲ್ಲ. ಮೇಲಾಗಿ ವಿಷಮಿಸಿದೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಭಾರತವೇನೋ ಒಂದಾಗಿರುವುದು ಸಂತೋಷದ ವಿಷಯ. ಆದರೆ ಆ ಒಂದುತನವನ್ನು ಒಂದು ಭಾಷೆಯ (ಹಿಂದಿಯ) ಮೂಲಕ ಸಾಧಿಸುತ್ತಿರುವಂತೆ ತೋರುತ್ತದೆ. ಅಂತಾರಾಷ್ಟ್ರೀಯವಾಗಿ ಜಗತ್ತೆಲ್ಲಾ

ಹತ್ತಿರಕ್ಕೆ ಬರುತ್ತಿರುವಾಗ ಅದು ಇಂಗ್ಲಿಷ್ ಮೂಲಕ ಸಾಧಿತವಾಗಿದೆ ಎನ್ನುವ ಭಾವನೆ ಗಾಢವಾಗಿ ಬೆಳೆಯುತ್ತಿದೆ. ಎಲ್ಲ ಮಾಧ್ಯಮಗಳೂ ಈ ಭಾಷೆಗಳ ಬೆಲೆಯನ್ನೂ ಚಲಾವಣೆಯ ವ್ಯಾಪ್ತಿಯನ್ನೂ ಹೆಚ್ಚಿಸುತ್ತಾ ಕನ್ನಡದ ಬೆಲೆಯನ್ನು, ಇರುವ ನೆಲೆಯನ್ನೂ ಕುಗ್ಗಿಸುತ್ತಿರುವುದರಿಂದಾಗಿ ಶ್ರೀ ಸಾಮಾನ್ಯನು ಮಾತ್ರವೇ ಅಲ್ಲ, ಅಸಾಮಾನ್ಯನೂ ಕೂಡ ತನ್ನ ಗತ್ತನ್ನು ಹೆಚ್ಚಿಸಿಕೊಳ್ಳಲು ಬೆಲೆಯುಳ್ಳವೆಂದು ಪ್ರಚಲಿತವಾದ ಭಾಷೆಗಳನ್ನೇ ಓಲೈಸತೊಡಗಿದ್ದಾನೆ. ಈ ವೈಭವ ಮೋಹ ಕನ್ನಡದ ಕಟ್ಟಾಳುಗಳು, ಸಾಹಿತಿ ಮಹೋದಯರ ಚಿತ್ತವನ್ನೂ ಒತ್ತಿ ಆಕ್ರಮಿಸಿಕೊಳ್ಳುತ್ತಿದೆ. ಈ ಅಂಶವನ್ನು ಇಲ್ಲಿ ವಿಸ್ತರಿಸದಿರುವುದೇ ಮೇಲು.

ಕನ್ನಡ ನಾಡಿನಲ್ಲಿ ಸೃಜನಶೀಲರಾದ ಹಾಗೂ ಆತ್ಮಾಭಿಮಾನಿಗಳಾದ ಕವಿ ಲೇಖಕರು ಮಾತ್ರವೇ ಅಲ್ಲ, ವಿಜ್ಞಾನಿಗಳು, ಸಮಾಜ ಚಿಂತಕರು, ಅರ್ಥಜ್ಞರು, ರಾಜಕಾರಣಿಗಳು, ಯಂತ್ರಶಿಲ್ಪಿಗಳು, ಉದ್ಯಮಿಗಳು, ಕಾರ್ಮಿಕರು, ಶಿಕ್ಷಕರು ವ್ರತಗೊಂಡು ತಮ್ಮ ಸಾರವತ್ತಾದ ಕೃತಿಗಳನ್ನು ಸಂಕ್ಷಿಪ್ತವಾದ ರೂಪದಲ್ಲಾದರೂ ಕನ್ನಡದಲ್ಲಿ ಮೊದಲು ಬರೆಯಬೇಕು. ಅನ್ಯಭಾಷೆಗಳಲ್ಲಿ ಜನರೊಡನೆ ವ್ಯವಹಾರ ಮಾಡುವಾಗಲೂ ತಾವು ಬಳಸುವ ಭಾಷೆಗಳಲ್ಲಿ ಒಂದನ್ನಾಗಿ ಕನ್ನಡವನ್ನು ಕಡ್ಡಾಯವಾಗಿ ಬಳಸಲೇಬೇಕು.

ಕನ್ನಡ ಭಾಷಾ ಸಂಪತ್ತು ನಮ್ಮ ಕೀಳರಿಮೆಯಿಂದ ಕಳೆಗೆಡದಿರುವಂತೆ ನೋಡಿಕೊಳ್ಳಬೇಕು. ಯಾವ ಕನ್ನಡಶಬ್ದವನ್ನೂ ಬಳಕೆಯಿಂದಾಚೆಗೆ ನೂಕಿ ಕೊಲೆ ಮಾಡಬಾರದು. ಹೆಚ್ಚು ವ್ಯಾಪಕವಾದ ಚಲಾವಣೆಗೆ ಇರಲೆಂದು, ಹಾಗೂ ಹೆಚ್ಚು ಅಧಿಕೃತತೆಯನ್ನು ಪಡೆಯಲೆಂದು ಸಂಸ್ಕೃತ, ಇಂಗ್ಲಿಷ್, ಹಿಂದಿ ಪದಗಳನ್ನು ಬಳಸುವ ಒತ್ತಡ ಎಷ್ಟೇ ಬಂದರೂ ಆಗಲೇ ಸಿದ್ಧವಾಗಿರುವ ಕನ್ನಡ ಪದಗಳನ್ನು ಎಷ್ಟಕ್ಕೂ ದೂಡಬಾರದು. ಜನರ ಮಾತಿನಲ್ಲಿ ಮೇಲುನೋಟಕ್ಕೆ ಮರೆಯಾದಂತೆ ಕಂಡರೂ ಎಲ್ಲ ರೀತಿಯ ಬರವಣಿಗೆಯಲ್ಲಾದರೂ ಆ ಪದಗಳ ಬಳಕೆಯನ್ನು ಚಲಾವಣೆಯಲ್ಲಿಯೇ ಇಟ್ಟುಕೊಂಡಿರಬೇಕು. ಎಲ್ಲ ವಲಯದಲ್ಲೂ ಸತ್ವಶಾಲಿಗಳು ಕನ್ನಡ ನೆಲದಿಂದ ಬಂದು ಅವರು ತಮ್ಮ ಹುರುಳನ್ನು ಬರೆಹದ ರೂಪದಲ್ಲಿಯೂ ಕನ್ನಡದಲ್ಲೇ ಕೊಡಬೇಕು.

ಗಾಂಧೀಜಿಯವರ ಆತ್ಮಕಥೆ ನಮಗೆ ಇಂಗ್ಲಿಷ್‌ನಲ್ಲಿ ಪರಿಚಿತವಾಗಿದ್ದರೂ ಅದನ್ನು ಅವರು ಬರೆದದ್ದು ತಮ್ಮ ತಾಯಿನುಡಿಯಾದ 'ಗುಜರಾತಿ'ಯಲ್ಲಿ. ಅದರ ಇಂಗ್ಲಿಷ್ ಅನುವಾದವನ್ನು, ಅವರ ಅನುಯಾಯಿಯಾದ ಮಹದೇವ ದೇಸಾಯಿಯವರು ಒದಗಿಸಿಕೊಟ್ಟರು. ಕಾವ್ಯಕ್ಕೆ ನೊಬೆಲ್ ಪ್ರಶಸ್ತಿಯನ್ನು ಪಡೆದ ಗೀತಾಂಜಲಿಯ ಕವಿಯಾದ ರವೀಂದ್ರನಾಥರು ಮೊದಲು ಆ ಕಾವ್ಯವನ್ನು ಬರೆದುದು ಬಂಗಾಳಿಯಲ್ಲಿ. ಎರಡು ಸಾವಿರ ವರ್ಷಗಳ ಕಾಲ ಯಾರದೋ ಯಾವುದೋ ಪಾಪಕ್ಕಾಗಿ ಹಲವು ನಾಡುಗಳಲ್ಲಿ ನಾಡಾಡಿಗಳಾಗಿ ಅಲೆದಾಡಿ ನೆಲಗಟ್ಟಿದ್ದ ಯಹೂದಿಗಳು, ಎರಡನೆಯ ಮಹಾಯುದ್ಧದ ನಂತರ ಒಂದು ನಾಡನ್ನು ಕಟ್ಟಿಕೊಂಡು, ಒಂದು ಸರ್ಕಾರವನ್ನು ರಚಿಸಿಕೊಂಡು ಮೊದಲು ಮಾಡಿದುದಾರೂ ಏನು? ಇಪ್ಪತ್ಮೂರು ಲಕ್ಷ ಜನರಿಂದ ಕೂಡಿ ಮೊದಲು ನೆಲೆಗೊಂಡ ಇಸ್ರೇಲ್ ರಾಷ್ಟ್ರ ತನ್ನ ಭಾಷೆಯನ್ನೂ ತನ್ನ ಸಂಸ್ಕೃತಿಯನ್ನೂ ಮೊದಲು ಒಗ್ಗೂಡಿಸತೊಡಗಿತು. ನೂರು ವರ್ಷಗಳ ಹಿಂದೆ ಫ್ರೆಂಚ್‌ಭಾಷೆಯ ಪ್ರಾಬಲ್ಯದಿಂದ

ಕಳೆಗಟ್ಟಿದ್ದ ರಷ್ಯನ್ ಭಾಷೆಯನ್ನು ಟಾಲ್‌ಸ್ಟಾಯ್ ಮೊದಲಾದ ಮಹಾನ್ ಲೇಖಕರೂ ಲೆನಿನ್ ಮೊದಲಾದ ಮಹಾನಾಯಕರೂ ಜಾಗತಿಕ ಭಾಷೆಯಾಗಿ ಬೆಳೆಸಿದ್ದಾರೆ. ಎರಡನೆಯ ಮಹಾಯುದ್ಧವಾದ ಮೇಲೆ ಜಗತ್ತಿನಲ್ಲಿ ರಷ್ಯಾ ಪಡೆದ ಗಣ್ಯ ಸ್ಥಾನದಿಂದಾಗಿಯೂ ರಷ್ಯನ್ ಭಾಷೆಗೆ ಹೆಚ್ಚು ಗಣ್ಯತೆ ಬರುತ್ತದೆ. ಜನ ಬೆಳೆಯದೆ ಜನರಾಡುವ ಮಾತು ಕಳೆಗೂಡದು. ನಮ್ಮ ನುಡಿಯ-ನಾಡಿನ ಒಳತಿರುಳನ್ನೂ ಹುರುಳನ್ನೂ ಕಂಡುಕೊಂಡು ಅದರಿಂದ ಕಳೆಗೂಡಿ ಬಾಳುವುದನ್ನು ನಾವು ಇನ್ನಾದರೂ ಕಲಿಯಬೇಕು. ಇತರ ಭಾಷೆಗಳನ್ನು ಪ್ರೀತಿಸುತ್ತಲೇ ಹಾಗೂ ಅವುಗಳಿಂದ ಹುರುಳನ್ನು ಪಡೆಯುತ್ತಲೇ ಈ ಸಾಧನೆಯನ್ನು ನಾವು ಮಾಡಬಹುದು. ವಚನಕಾರರ ಭಾಷೆಯವರಾದ ನಾವು ನಮ್ಮ ಭಾಷೆಯ ಹೊಳಹನ್ನು ಕುರುಡುಗಾಣಬಾರದು. ತಮಿಳರು ತಮ್ಮ ಆಳ್ವಾರರ ಹಾಗೂ ಶಿವ ಪುರಾತನರ ಪಾಸುರಗಳನ್ನೂ ತೇವಾರಗಳನ್ನೂ ದೇವಾಲಯಗಳಲ್ಲಿ ವೇದಮಂತ್ರಗಳಿಗಿಂತ ಹೆಚ್ಚಾಗಿ ಅಥವಾ ಸಮಸಮನಾಗಿ ಹಾಡುವ ಮೂಲಕ ಕಳೆಗೊಳ್ಳುತ್ತಾರೆ. ನಮ್ಮ ಶರಣರ ಸೂಳ್ನುಡಿಗಳಾದ ವಚನಗಳಿಗೆ ನಮ್ಮ ದೇವಾಲಯ, ಮಠಗಳಲ್ಲಾಗಲಿ ಯಾವ ಸ್ಥಾನವಿದೆ ಎನ್ನುವುದು ಎಲ್ಲರಿಗೂ ಗೊತ್ತು. ನಮ್ಮ ಸತ್ವಕ್ಕೆ ಈಗಾಗಲೇ ತಕ್ಕಷ್ಟು ತುಕ್ಕು ಹಿಡಿದಿದೆ. ಅದನ್ನು ಉಜ್ಜಿ ತೆಗೆಯದೆ, ಕಾವೂಡಿ, ನೀರೂಡಿ, ಉಕ್ಕುಗೊಳಿಸದಿದ್ದರೆ ನಮ್ಮ ಒಳಸತ್ವವೆಲ್ಲ ಮಣ್ಣು ಪಾಲಾಗಲು ಎಡೆಗೊಟ್ಟಂತೆ ಆಗುತ್ತದೆ. ಆತ್ಮಹತ್ಯಾಕಾರಿಯಾದ ಕೀಳರಿಮೆಯನ್ನು ಇನ್ನಾದರೂ ನಾವು ಉಗಿದಸೆಯಬೇಕು.

ಶಿಕ್ಷಣ ಮಾಧ್ಯಮವಾಗಿ ಕನ್ನಡ-ಒಂದು ಚಿಂತನೆ

ಪ್ರೊ. ಹೆಚ್.ಆರ್. ದಾಸೇಗೌಡ

ಶಿಕ್ಷಣ ವ್ಯಕ್ತಿಯ ಸರ್ವಾಂಗೀಣ ಪ್ರಗತಿಗೆ ಪೂರಕವಾದದ್ದು. ಅದು ನಿರಂತರವಾಗಿ ವ್ಯಕ್ತಿಯಲ್ಲಿ ಸಂತೃಪ್ತಿಯನ್ನುಂಟುಮಾಡಲು ಶ್ರಮಿಸುತ್ತಿರುತ್ತದೆ. ಅರಿಸ್ಟಾಟಲ್ ಎಂಬ ಗ್ರೀಕ್ ತತ್ವಜ್ಞಾನಿಯ ಪ್ರಕಾರ ''ಶಿಕ್ಷಣ ಆರೋಗ್ಯವಂತ ವ್ಯಕ್ತಿಯಲ್ಲಿ ಸಂತೃಪ್ತ ಮನಸ್ಸುಂಟಾಗುವಂತೆ ಮಾಡುವ ವಿಧಾನ''ವಾಗಿದೆ. ''ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಪ್ರಾಕೃತಿಕ ಪ್ರಗತಿಪರ ವಿಶೇಷಣಗಳ ಸಮ್ಮೇಳನದ ಮೂಲಕ ಅವನ ಮನೋ ವಿಕಾಸವಾಗುವಂತೆ ಮಾಡುವ ವಿಧಾನ ಶಿಕ್ಷಣದಿಂದ ಸಾಧ್ಯ''ವೆಂದು ಶಿಕ್ಷಣ ತಜ್ಞ ಪೆಸ್ಟಾಲಜಿಯ ಅಭಿಪ್ರಾಯವಾಗಿದೆ. ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರ ಪ್ರಕಾರ ''ವ್ಯಕ್ತಿಯಲ್ಲಿನ ಶ್ರೇಷ್ಠಗುಣಗಳನ್ನು ಪ್ರೋತ್ಸಾಹಿಸಿ ಸುಸಂಸ್ಕೃತನನ್ನಾಗಿ ಪರಿವರ್ತಿಸುವ ಶಕ್ತಿಯೇ ಶಿಕ್ಷಣವಾಗುತ್ತೆ''. ಅಂದಾಗ ಶಿಕ್ಷಣದ ಮಹತ್ವ ಬಹುಮುಖ್ಯವಾದದ್ದೆಂಬ ಅರಿವು ನಮಗಾಗುತ್ತೆ.

ಭಾರತಕ್ಕೆ ಅನ್ವಯಿಸುವುದಾದರೆ, ಶಿಕ್ಷಣದ ಮಹತ್ವ ಇನ್ನೂ ಹೆಚ್ಚೆನಿಸುತ್ತೆ. ಜೊತೆಗೆ ಶಿಕ್ಷಣ ಮಾಧ್ಯಮದ ಗಮ್ಮತ್ತು ಸಹ ಬಹಳವಾದದ್ದು ಎಂಬ ವಿಚಾರ ಐವತ್ತು ವರ್ಷಗಳ ಅನುಭವದಲ್ಲಿ ವ್ಯಕ್ತವಾಗಿದೆ. ಭಾರತ ಬಹು ಭಾಷಾ ವಸುಂಧರೆ. ರಾಜ್ಯಾಂಗದಲ್ಲಿ ಗುರುತಿಸಿರುವ ಭಾಷೆಗಳು ಹದಿನೆಂಟು, ಬಳಕೆಯಲ್ಲಿರುವ ಭಾಷೆಗಳು ಸುಮಾರು ಎರಡು ಸಹಸ್ರದಷ್ಟು, ಭಾರತ ಏಕರಾಷ್ಟ್ರ. ಆಂಗ್ಲರ ಆಳ್ವಿಕೆಯಲ್ಲಿದ್ದಾಗ ಆಡಳಿತದ ಅನುಕೂಲಗಳು ಭಾರತವನ್ನು ವಿವಿಧ ಪ್ರಾಂತ್ಯಗಳನ್ನಾಗಿ ವಿಂಗಡಿಸಿತ್ತು ಮತ್ತು ಅವರು ಚಾಲನೆಗೆ ತಂದ ಶಿಕ್ಷಣ ಪದ್ಧತಿ 'ಒಡೆದು ಆಳುವ ನೀತಿ'ಗೆ ಅನುಗುಣವಾಗಿತ್ತು. ೧೯೪೭.ರಲ್ಲಿ ರಾಷ್ಟ್ರ ನಾಯಕರ ತ್ಯಾಗ ಬಲಿದಾನಗಳಿಂದ ಪರಕೀಯರ ಆಳ್ವಿಕೆಯಿಂದ

ಮುಕ್ತವಾದ ರಾಷ್ಟ್ರ ೧೯೫೬ರಲ್ಲಿ ಭಾಷೆಯ ಅಧಾರದ ಮೇಲೆ ಪುನರ್ ವಿಂಗಡಣೆಯಾಯಿತು. ಅಂದರೆ, ಭಾಷಾವಾರು ಪ್ರಾಂತ್ಯಗಳು ಉದಯವಾದವು. ಭಾಷಾವಾರು ಪ್ರಾಂತಗಳ ರಚನೆಯಾದದ್ದು ಭಾಷಾ ಬಾಂಧವ್ಯವನ್ನು ಮೂಲ ನೆಲೆಯಾಗಿಟ್ಟುಕೊಂಡು ಜನತೆಯಲ್ಲಿ ಸಾಮರಸ್ಯವನ್ನುಂಟು ಮಾಡಿ ರಾಜ್ಯಗಳ ಪ್ರಗತಿ ಆ ಮೂಲಕ ರಾಷ್ಟ್ರದ ಪ್ರಗತಿಯನ್ನೂ ಸಾಧಿಸಬಹುದೆಂಬ ಉತ್ಕಟೇಚ್ಛೆಯಿಂದ. ಈ ದೃಷ್ಟಿಯಿಂದ ಅವಲೋಕಿಸಿದಾಗ, ಅರಿವನ್ನುಂಟುಮಾಡುವ ಶಿಕ್ಷಣ ಮೂಲತಃ ವ್ಯಕ್ತಿಯ ಆಡುಭಾಷೆಯಲ್ಲಿ ಲಭ್ಯವಾಗುವಂತಿದ್ದರೆ ಶ್ರೇಯಸ್ಕರವೆಂಬುದಾಗಿದೆ. ಅಂದರೆ ಭಾಷಾವಾರು ಪ್ರಾಂತ್ಯದ ರಚನೆಯಾಗಲು ಯಾವ ಭಾಷೆ ಮಾನದಂಡವಾಗಿತ್ತೋ ಆ ಭಾಷೆಯ ಮೂಲಕವೇ ಆ ರಾಜ್ಯದಲ್ಲಿ ಶಿಕ್ಷಣವನ್ನೂ ನೀಡುವ ಅನುಕೂಲಗಳು ಇದ್ದೂ, ಮಕ್ಕಳ ಪ್ರಗತಿಗೆ ಪೂರಕವಾಗಬೇಕೆಂಬುದು ಸರಿ ಎನಿಸುತ್ತೆ. ಕರ್ನಾಟಕದಲ್ಲಿ ಅಂದರೆ ಕನ್ನಡ ನಾಡಿನಲ್ಲಿ ಕನ್ನಡ ಭಾಷೆಯ ಮೂಲಕ ಶಿಕ್ಷಣವನ್ನು ಪಡೆಯುವ ಅವಕಾಶ ಕನ್ನಡಿಗ ಮಕ್ಕಳಿಗೆ ಲಭ್ಯವಾಗುವಂತಿರಬೇಕಾದ್ದು ಸರಿ.

ಈ ತಾತ್ತ್ವಿಕ ನಿಲುವಿನ ಆಧಾರದ ಮೇಲೆ ನಮ್ಮ ಶಿಕ್ಷಣದ ವ್ಯವಸ್ಥೆ ಇದೆಯೋ ಅಥವಾ ಮತ್ತೇನಾದರೂ ಆಗಿದೆಯೋ? ಎಂಬುದು ಬಿಡಿಸಲಾಗದ ಕಗ್ಗಂಟಾಗಿ ಮುಂದುವರಿಯುತ್ತಿರುವ ಪ್ರಶ್ನೆಯಾಗಿದೆ. ಶಿಕ್ಷಣ ತಜ್ಞರೆಲ್ಲರ ಅಭಿಪ್ರಾಯ ಮಾತೃ ಭಾಷೆಯಲ್ಲಿ ಶಿಕ್ಷಣ ನೀಡುವುದು ಉಚಿತವೆಂಬುದಾಗಿದೆ. ಆದರೆ ಜನಸಾಮಾನ್ಯರ ಅಭಿಲಾಷೆ ಪರಕೀಯ ಭಾಷೆಯಲ್ಲಿ (ಇಂಗ್ಲಿಷ್) ಶಿಕ್ಷಣ ಪಡೆಯುವುದು ಸರಿ ಎಂಬುದಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿ ಕೇವಲ ಕೆಲವೇ ಪ್ರಮುಖ ನಗರಗಳಲ್ಲಿ ಆಂಗ್ಲ ಮಾಧ್ಯಮ ಶಾಲಾ ಕಾಲೇಜುಗಳಿದ್ದದ್ದು ಇತಿಹಾಸದಿಂದ ತಿಳಿಯುತ್ತದೆ. ಇಂದು ಪ್ರತಿಯೊಂದು ಗ್ರಾಮದಲ್ಲಿಯೂ ಆಂಗ್ಲಮಾಧ್ಯಮ ಶಾಲೆಗಳು ತಲೆ ಎತ್ತಿವೆ. ತಂದೆ ತಾಯಿಗಳು ಆಂಗ್ಲಮಾಧ್ಯಮ ಶಾಲೆಗೆ ತಮ್ಮ ಮಕ್ಕಳನ್ನು ಸೇರ್ಪಡೆ ಮಾಡುತ್ತಿದ್ದಾರೆ. ಸರಕಾರದ ಧೋರಣೆಗೆ ವಿರುದ್ಧವಾಗಿ ಜನರ ಅಭಿಪ್ರಾಯ ರೂಪುಗೊಳ್ಳುತ್ತಿದೆ ಎನ್ನಬಹುದಾಗಿದೆ. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವುದು ಸರಿ ಎಂದು ವಾದ ಮಾಡುವ ಅನೇಕ ಮುಖಂಡರ ಮನೆಯ ಮಕ್ಕಳು ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಇಂದೊಂದು ವಿರೋಧಾಭಾಸವಾಗಿ ಪರಿಣಮಿಸಿದೆ.

ಇಂತಹ ಸ್ಥಿತಿಗೆ ಕಾರಣಗಳೇನು ಎಂಬುದನ್ನು ಪರಿಶೋಧನೆ ಮಾಡ ಹೊರಟರೆ ಅಪಾರವಾದ ಹಾಗೂ ಕ್ಲಿಷ್ಟವಾದ ತೊಡಕುಗಳು ನಮ್ಮೆದುರಿಗೆ ನಿಲ್ಲುತ್ತವೆ. ಮೊದಲನೆಯದಾಗಿ, ನಾವು ನೀಡುತ್ತಿರುವ ಶಿಕ್ಷಣದಿಂದ ಲಭ್ಯವಾಗುವ ಫಲಾಫಲಗಳೇನು ಎಂಬುದು ನಿಗೂಢವಾಗಿದೆ. ಭಾರತದಲ್ಲಿ ಲಭ್ಯವಿರುವ ಇಂದಿನ ಶಿಕ್ಷಣ ಕೇವಲ ಪರಾವಲಂಬಿಗಳನ್ನು ತಯಾರಿಸುವ ಶಿಕ್ಷಣವಾಗಿದೆ. ಸ್ವಂತಿಕೆಯ ಆಧಾರದ ಮೇಲೆ ಜೀವನ ಸವೆಸುವ ಯುವಕ ಯುವತಿಯರನ್ನು ತಯಾರಿಸುವಲ್ಲಿ ನಮ್ಮ ಶಿಕ್ಷಣ ಪದ್ಧತಿಗೆ ಶಕ್ಯತೆಯಿಲ್ಲವಾಗಿದೆ. ಅಲ್ಲದೆ ಪರಂಪರೆಯಿಂದ ಬೆಳೆದು ಬಂದಂತಹ ಮಾನವೀಯ ಮೌಲ್ಯಗಳಾದ ಸತ್ಯ ನಿಷ್ಠೆ, ಪರೋಪಕಾರ, ಅಪರಿಗ್ರಹದಂತಹ ಸತ್ವಗುಣಗಳು ರೂಢಿಯಲ್ಲಿರಲು ಅವಕಾಶ ನೀಡದಂತಹ ಶಿಕ್ಷಣ ಪದ್ಧತಿ ನಮ್ಮಲ್ಲಿದೆ. 'ತಾಯಿಯ' ಹಿರಿಮೆಯನ್ನು ಅರಿಯಲವಕಾಶವಾಗದ ಶಿಕ್ಷಣ ನಮ್ಮಲ್ಲಿದೆ.

ಎರಡನೆಯದಾಗಿ, ನಮ್ಮ ಸಾಮಾಜಿಕ ಪರಿಸ್ಥಿತಿಯೂ ಅತ್ಯಂತ ಹೀನಸ್ಥಿತಿಗೆ ತಲುಪಿದೆ. ನವಿಲು ನಾಟ್ಯವಾಡುವುದನ್ನು ನೋಡಿ ಕೆಂಬಕ್ಕಿ ಪುಕ್ಕ ತೆರೆದು ನಟಿಸಲು ಪ್ರಯತ್ನಿಸುವಂತೆ ನಾವು

ಪಾಶ್ಚಿಮಾತ್ಯ ಸಂಸ್ಕೃತಿಯ ದಾಸರಾಗಿ ಪರಕೀಯರ ಹಾವಭಾವಗಳಿಗೆ ಮನಸೋತು ನಮ್ಮತನವನ್ನು ಮರೆತಿದ್ದೇವೆ. ನಮ್ಮ ಹವ್ಯಾಸಗಳು ಮೌಲ್ಯರಹಿತವಾಗಿದೆ. ಈ ಪರಿಸ್ಥಿತಿ ಮಾತೃಭಾಷೆಯ ಬಗ್ಗೆ ಅಲಕ್ಷ್ಯವನ್ನುಂಟುಮಾಡಿದೆ. 'ಮಮ್ಮಿ', 'ಡ್ಯಾಡಿ' ಎಂದು ಮಕ್ಕಳು ಕರೆದರೆ ವಿಕಸನವಾಗುವ ತಂದೆ ತಾಯಿಗಳ ಮೋರೆ 'ಅಮ್ಮ', 'ಅಪ್ಪ' ಎಂದರೆ ಅಸಹ್ಯ ಪಟ್ಟುಕೊಳ್ಳುವ ಹಂತ ತಲುಪಿದೆ ನಮ್ಮ ಸಾಮಾಜಿಕ ಸ್ಥಿತಿ.

ಮೂರನೆಯದಾಗಿ, ನಮ್ಮ ಆರ್ಥಿಕ ವ್ಯವಸ್ಥೆ. ಸ್ವಾವಲಂಬಿಗಳಾಗಲು ಅವಕಾಶ ಕಡಿಮೆ ಇರುವ ಪರಿಸ್ಥಿತಿಯಲ್ಲಿ ಜೀವನೋಪಾಯಕ್ಕಾಗಿ ಪರರನ್ನೂ ಅವಲಂಬಿಸಲೇ ಬೇಕಾದ ಪರಿಸ್ಥಿತಿಯಲ್ಲಿ, ಬಹು ಭಾಷೆಗಳ ನಾಡಾದ ನಮ್ಮ ರಾಷ್ಟ್ರದಲ್ಲಿ ದುಡಿಯಲು ಅವಕಾಶಗಳು ಲಭ್ಯವಾಗಲು ಕನ್ನಡ ಭಾಷಾ ಬೋಧನೆ ಅಡ್ಡಿಯಾಗುತ್ತಿದೆ. ಕನ್ನಡ ಭಾಷೆಯಲ್ಲಿ ಕಲಿತ ವಿದ್ಯಾರ್ಥಿಗಳು ಗಳಿಸಿದ ಅನುಭವದಿಂದ ಹೊರ ರಾಜ್ಯಗಳಲ್ಲಿ ಹುದ್ದೆಗಳನ್ನು ಪಡೆಯಲು ಶಕ್ತರಾಗುವುದಿಲ್ಲ ಮತ್ತು ನಮ್ಮ ರಾಜ್ಯದಲ್ಲಿ ಕೆಲಸಗಳು ಲಭ್ಯವಾಗುತ್ತಿಲ್ಲ. ಇಂತಹ ದಾರುಣ ಪರಿಸ್ಥಿತಿಯಲ್ಲಿ ಶಿಕ್ಷಣದಲ್ಲಿ ಕನ್ನಡ ಏತಕ್ಕಾಗಿ ಬೇಕೆಂಬ ಚಿಂತೆ ಕಾಡುತ್ತಿದೆ. ಜೊತೆಗೆ ನಮ್ಮ ಶಾಲಾ ಕಾಲೇಜುಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡುವ ಪರಿಕರಗಳು, ಪುಸ್ತಕಗಳು ಅಲಭ್ಯವಾಗಿವೆ. ನೆರೆಯ ಚೈನಾ ದೇಶದಲ್ಲಿಯಾಗಲಿ, ಜರ್ಮನಿಯಲ್ಲಾಗಲಿ, ಪೂರ್ವ ಪ್ರಾಥಮಿಕ ಹಂತದಿಂದ ಮೊದಲ್ಗೊಂಡು ವಿಶ್ವವಿದ್ಯಾಲಯದ ಮಟ್ಟದವರೆಗೆ ಶಿಕ್ಷಣವನ್ನು ಅವರವರ ಭಾಷೆಯಲ್ಲಿ ನೀಡುವ ಸೌಲಭ್ಯ, ಪರಿಕರಗಳು, ಪುಸ್ತಕಗಳು ಲಭ್ಯವಿದೆ. ಆದರೆ ನಮ್ಮಲ್ಲಿ ಹಾಗಾಗಲು ಅವಕಾಶಗಳು ಕಡಿಮೆ. ಕನ್ನಡ ನಾಡಿನಲ್ಲಿ ಈ ಸೌಲಭ್ಯ ಇಲ್ಲವೇ ಇಲ್ಲವೆನ್ನಬಹುದಾಗಿದೆ. ಪುಸ್ತಕಗಳ ಕೊರತೆ ಅಪಾರವಾಗಿದೆ. ಜೊತೆಗೆ ಬೋಧಕರ ಕೊರತೆ ಮತ್ತು ನಿರ್ಲಕ್ಷ್ಯತೆ ಪರಿಹರಿಸಲಾಗದ ವಿಚಾರಗಳಾಗಿವೆ. ಕನ್ನಡ ಮಾಧ್ಯಮ ಬೋಧನೆಯಲ್ಲಿಲ್ಲದಿದ್ದಾಗ್ಯೂ, ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಉತ್ತರಿಸಲು ಅವಕಾಶವನ್ನು ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ನಮ್ಮಲ್ಲಿ ನೀಡಲಾಗಿದೆ. ವಿದ್ಯಾರ್ಥಿಗಳು ಬರೆದ ಕನ್ನಡದ ಉತ್ತರಗಳನ್ನು ಮೌಲ್ಯಮಾಪನ ಮಾಡುತ್ತಿರುವವರು ಯಾರು? ಕನ್ನಡ ಭಾಷಾಜ್ಞಾನ, ವಿಷಯಪ್ರಜ್ಞೆ ಪರಿಪೂರ್ಣವಾಗಿಲ್ಲದ ಶಿಕ್ಷಕರು, ಅಂದಾಗ ನ್ಯಾಯವೆಲ್ಲಿ ಲಭ್ಯವಾಗುತ್ತದೆ.

ಶಿಕ್ಷಣ ಸಂಪೂರ್ಣವಾಗಿ ಕನ್ನಡದಲ್ಲಾಗಬೇಕು, ನಿಜ. ಯಾವಾಗ? ಎಂಬ ಪ್ರಶ್ನೆ ನಮ್ಮ ಮುಂದೆ ಬೃಹದಾಕಾರವಾಗಿ ನಿಲ್ಲುತ್ತದೆ. ನಮ್ಮಲ್ಲಿ ನಮ್ಮ ಯುವ ಶಕ್ತಿಯನ್ನು ಸದುಪಯೋಗಪಡಿಸಿಕೊಳ್ಳುವ ಶಕ್ತಿ ಇದೆಯೇ? ನಾವು ಶಿಕ್ಷಣವನ್ನು ಕನ್ನಡದಲ್ಲಿ ನೀಡಬಯಸಲು ಸಮರ್ಥರಾಗುತ್ತಿದ್ದೇವೆಯೆ? ನಾವು ನಮ್ಮ ಯುವ ಪೀಳಿಗೆಯನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸನ್ನದ್ಧರನ್ನಾಗಿ ಮಾಡುವ ಸಂಪನ್ಮೂಲಗಳನ್ನು ಅವಕಾಶಗಳನ್ನು ಪಡೆದಿದ್ದೇವೆಯೇ? ಎಂಬ ಗುರುತರವಾದ ವಿಚಾರಗಳತ್ತ, ಮೊದಲಿಗೆ ಗಮನಹರಿಸಬೇಕಾಗಿದೆ. ನಮ್ಮ ಶಾಲಾ ಕಾಲೇಜುಗಳ ವ್ಯವಸ್ಥೆ ಹೇಗಿದೆ? ಕನ್ನಡದ ಶಾಲೆಗಳು ಕಲಿಸಲು ಸಶಕ್ತವಾಗಿವೆಯೇ ಎಂಬ ವಿಚಾರಗಳ ಬಗ್ಗೆಯೂ ಆಲೋಚಿಸಬೇಕಾಗಿದೆ. ಈ ಎಲ್ಲಾ ಶಕ್ತಿ ನಮ್ಮಲ್ಲಿರುವುದಾದರೆ, ಕನ್ನಡವೇ ಶಿಕ್ಷಣ ಮಾಧ್ಯಮವಾಗುವುದು ಸರ್ವ ವಿಧದಿಂದಲೂ ಸೂಕ್ತ. ಘೋಷಣೆ ಮತ್ತು ಭಾಷಣಗಳು ಈ ಸೌಲಭ್ಯಗಳನ್ನು ಒದಗಿಸಲಾರವು ಎಂಬ ಸತ್ಯ ನಮ್ಮಿಂದ ದೂರ ಸರಿಯದಿರಲಿ.

ಕರ್ನಾಟಕದ ನದಿ ನೀರಿನ ಸಮಸ್ಯೆ ಒಂದು ತಾತ್ವಿಕ ಚರ್ಚೆ

ಕಾ.ವೆಂ. ಶ್ರೀನಿವಾಸ ಮೂರ್ತಿ

ನದಿ ನೀರಿನ ಸಮಸ್ಯೆ ಎಂಬುದು ಜಗದ್ವ್ಯಾಪಿಯಾದುದು. ಯಾವ ಯಾವ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಜಲ ನೀತಿ ಇರುವುದಿಲ್ಲವೊ ಅಲ್ಲೆಲ್ಲಾ ಈ ಸಮಸ್ಯೆ ತಲೆದೋರಿದೆ. ಈ ಸಮಸ್ಯೆ ಭಾರತದಲ್ಲೂ ಇದೆ. ಕನಿಷ್ಠ ಎರಡು ರಾಜ್ಯಗಳಲ್ಲಿ ಒಂದು ನದಿ ನೀರು ಹರಿದಾಗ ಈ ಬಗೆಯ ಸಮಸ್ಯೆ ಮೂಡುತ್ತದೆ. ರಾಷ್ಟ್ರೀಯ ಜಲ ನೀತಿ ಇದಕ್ಕೆ ಪರಿಹಾರ ನೀಡಿದರೂ ಭಾರತದ ಸಂದರ್ಭದಲ್ಲಿ ಬದ್ಧತೆ ಇರದ ರಾಜಕಾರಣಿಗಳು ತಮ್ಮ ವರ್ಚಸ್ಸಿನ ವೃದ್ಧಿಗೆ ಪೂರಕವಾಗುವಂತೆ ವರ್ತಿಸಿದ್ದರಿಂದ ಇದು ಕಗ್ಗಂಟಾಗಿ ಉಳಿದಿದೆ. ಆದರೂ ಪರಿಹಾರ ಸಾಧ್ಯ. ಕಡಲಿಗೆ ಸೇರಿ ಪೋಲಾಗುತ್ತಿರುವ ನೀರನ್ನು ತಡೆದು ಬಳಸುವ ಮೂಲಕ ದೇಶದ ಸರ್ವಾಂಗೀಣ ಪ್ರಗತಿ ಮಾತ್ರವಲ್ಲದೆ, ಈ ನದಿಗಳ ಹೆಸರಿನಲ್ಲಿ ರಾಜ್ಯ-ರಾಜ್ಯಗಳ ಮಧ್ಯೆ ಮಧುರ ಭಾವೈಕ್ಯತೆ ಮೂಡಲೂ ಸಾಧ್ಯವಿದೆ. ಈ ತಾತ್ವಿಕ ಹಿನ್ನೆಲೆಯಲ್ಲಿ ಕರ್ನಾಟಕದ ನದಿ ನೀರಿನ ಸಮಸ್ಯೆಯೂ ಇದೆ

ಅಧಿಕೃತ ದಾಖಲೆಗಳ ಪ್ರಕಾರ ಈ ಸಮಸ್ಯೆಗೆ ೧೦೮ ವರ್ಷಗಳ ಇತಿಹಾಸವಿದೆ. ಆದರೆ ಇದಕ್ಕೂ ಪೂರ್ವದಲ್ಲಿ ಈ ಸಮಸ್ಯೆ ಇದ್ದದ್ದು ಕ್ರಿ.ಶ. ೧೩ನೆಯ ಶತಮಾನದಲ್ಲಿ ರಚಿತವಾದ ಶಬ್ದಮಣಿದರ್ಪಣ ಎಂಬ ಕನ್ನಡ ವ್ಯಾಕರಣ ಗ್ರಂಥವೊಂದರಿಂದ ತಿಳಿಯುತ್ತದೆ. ಅದರಲ್ಲಿ ಕಾವೇರಿ ವಿಷಯ ಹೀಗೆ ಪ್ರಸ್ತಾಪವಾಗುತ್ತದೆ-

ಕಾವೇರಿಯ ಕಾಲನಾತಿಗುಳನೇಂ ಕಡಂಗೊಂಡನೊ ಬಡ್ಡಿಗೊಂಡಿನೊ ಅಂದರೆ - ಕಾವೇರಿ ನದಿನೀರನ್ನು ಆ ತಮಿಳನೇನು ಕಡಕ್ಕೆ ತೆಗೆದು ಕೊಂಡಿದ್ದಾನೆಯೇ ಅಥವಾ ಬಡ್ಡಿಗೆ ಕೊಂಡಿದ್ದಾನೆಯೇ ಎಂಬುದು ಇದರ ಅರ್ಥ. ಇದರ ಮೂಲಕ ಕನ್ನಡಿಗರಿಗಿಂತ ತಮಿಳರೇ ಹೆಚ್ಚಾಗಿ

ಕಾವೇರಿ ನೀರನ್ನು ಬಳಸುತ್ತಿದ್ದ ಚಿತ್ರ ಇಲ್ಲಿ ವ್ಯಕ್ತವಾಗುತ್ತದೆ. ಇದರ ಬಗ್ಗೆ ಅಂದಿನ ಕನ್ನಡಿಗರಿಗೆ ಪ್ರಜ್ಞೆಯೂ ಇದೆ. ಕನ್ನಡ ದೇಶದಲ್ಲಿ ಹುಟ್ಟಿ ಹರಿಯುವ ಕಾವೇರಿ ನದಿ ನೀರನ್ನು ತಮಿಳರೇ ಹೆಚ್ಚು ಅನುಭವಿಸುತ್ತಿದ್ದುದರ ಬಗ್ಗೆ ಅಸಹನೆಯೂ ಇದೆ. ಅದನ್ನು ಹೇಳುವ ಧೋರಣೆಯಲ್ಲಿ ಸಿಟ್ಟು ಸಹ ಇದೆ. ಇದು ಅಸಹಾಯಕತೆಯ ನೋವಿನ ನೆಲೆಯಲ್ಲಿ ಮೂಡಿದ ಉದ್ಗಾರ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅಂತೂ ಆಧುನಿಕವಾದ ಕಾವೇರಿ ನದಿನೀರಿನ ಸಮಸ್ಯೆ ಎಂಟು ನೂರು ವರ್ಷಗಳ ಹಿಂದಕ್ಕೂ ಹೋಗುತ್ತದೆ. ಆದರೆ ಈ ಸಮಸ್ಯೆ ಇವತ್ತಿನ ಸ್ವರೂಪದಲ್ಲಿ ಆವತ್ತು ಇರಲಿಲ್ಲ ಎಂಬುದು ಮಾತ್ರ ಸ್ಪಷ್ಟ. ಕಾರಣ, ಸ್ವಾತಂತ್ರ್ಯಪೂರ್ವ ಕಾಲದಲ್ಲಿ ರಾಜಸತ್ತಾತ್ಮಕ ನೆಲೆಯಲ್ಲಿ ಪ್ರತ್ಯೇಕವಾಗಿ ಅಸ್ತಿತ್ವ ಪಡೆದಿದ್ದ ಮದ್ರಾಸ್ ಮತ್ತು ಮೈಸೂರು ಸಂಸ್ಥಾನಗಳಿದ್ದವು. ಇವುಗಳ ಕಾರ್ಯ ವ್ಯಾಪ್ತಿಯ ಒಳಗೆ ಅಧಿಕೃತ ದಾಖಲೆಗಳನ್ನಿಟ್ಟು ಕೊಂಡು-ಕೊಳ್ಳುತ್ತ ಈ ಸಮಸ್ಯೆ ಸೃಷ್ಟಿಯಾಯಿತು. ಇದುವರೆಗೂ ಅಧಿಕೃತತೆಯನ್ನು ಪಡೆಯದಿದ್ದ ಈ ಸಮಸ್ಯೆ ಇಲ್ಲಿ ರಾಜಕೀಯ ನೆಲೆಯನ್ನು ಪಡೆಯಿತು. ಬ್ರಿಟಿಷ್ ಸಂವಿಧಾನ ಭಾರತವನ್ನು ಆಳುತ್ತಿದ್ದುದರಿಂದ ಅದರ ಚೌಕಟ್ಟಿಗೆ ಈ ಸಮಸ್ಯೆ ಪ್ರವೇಶಿಸಿತು. ಇದುವರೆಗೂ ಈ ಭಾಗಗಳನ್ನಾಳಿದ ರಾಜಸತ್ತೆಯ ಯಾವ ಪ್ರಭುಗಳೂ ಇದರ ಬಗ್ಗೆ ಸಂಧಾನ - ಸಂಘರ್ಷದ ನೆಲೆಯಲ್ಲಿ ಮಾತನಾಡಿರಲಿಲ್ಲ. ಆದರೆ ಈಗ ಮಾತನಾಡಲೇಬೇಕಾದ ಅನಿವಾರ್ಯ ಆಳುವ ವರ್ಗಕ್ಕೆ ಒದಗಿತು.

ಹೀಗೆ ಸಾವಿರಾರು ವರ್ಷಗಳಿಂದ ನಿರಕ್ಷರಗಳ ದಾಖಲೆಗಳಲ್ಲಿ ಅಥವ ಮೌಖಿಕ ಪರಪಂರೆಯಲ್ಲಿ ಅನಧಿಕೃತ ಸಮಸ್ಯೆಯಾಗಿ ಬೆಳೆದು ಬಂದಿದ್ದ ನದಿ ನೀರಿನ ಪಾಲಿನ ವಿಷಯ ಮೊದಲಿಗೆ ಕ್ರಿ.ಶ. ೧೮೯೦ರಲ್ಲಿ ರಾಜಕೀಯ ಸಮಸ್ಯೆಯಾಗಿ ರೂಪು ತಳೆಯಿತು. ಅದರ ಸಂದರ್ಭ ಹೀಗಿದೆ. ಕ್ರಿ.ಶ. ೧೮೮೧ರಲ್ಲಿ ಬ್ರಿಟಿಷರು ಮೈಸೂರು ಮಹಾರಾಜರಿಗೆ ರಾಜ್ಯ ಪ್ರದಾನ ಮಾಡಿದರು. ಅಷ್ಟು ಹೊತ್ತಿಗಾಗಲೇ ಅಂದರೆ ೧೮೭೬-೭೮ರ ವರೆಗಿನ ಕಾಲಘಟ್ಟದಲ್ಲಿ ಮೈಸೂರು ರಾಜ್ಯದಲ್ಲಿ ಕ್ಷಾಮ ತಲೆದೋರಿತು. ಇದರ ಪರಿಣಾಮವಾಗಿ ಮೈಸೂರಿನ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಅವರು ಹರಿದು ಹೋಗುತ್ತಿದ್ದ ತುಂಗಭದ್ರೆಯನ್ನು ತಡೆದು, ಅದರ ಬಹೋಪಯೋಗ ಪಡೆಯಲು ವಾಣಿವಿಲಾಸ ಸಾಗರ ಅಣೆಕಟ್ಟು ಕಟ್ಟಲು ಕ್ರಮ ಕೈಗೊಂಡರು. ಇದಕ್ಕೆ ಬ್ರಿಟಿಷರ ನೇರ ಅಧಿಪತ್ಯಕ್ಕೆ ಒಳಪಟ್ಟ ಮದ್ರಾಸ್ ಪ್ರಾಂತ್ಯದಿಂದ ತೀವ್ರ ಆಕ್ಷೇಪ ಬಂತು. ಇದು ಆದದ್ದು ಕ್ರಿ.ಶ. ೧೮೯೦ರಲ್ಲಿ. ಆಗ ದಿವಾನರು ಮೈಸೂರಿನಲ್ಲಿದ್ದ ಬ್ರಿಟಿಷ ರೆಸಿಡೆಂಟರ ಮೊರೆಹೊಕ್ಕರು. ಪರಿಣಾಮವಾಗಿ ಅವರಿಂದ ಬಂದ ಆದೇಶ 'ಒಪ್ಪಂದ'ದ ರೂಪದಲ್ಲಿತ್ತು. ಅದರ ಸಾರಾಂಶ ಹೀಗೀದೆ:

೧. ಕಾವೇರಿಯ ಮುಖ್ಯ ವಾಹಿನಿಗೆ ಸಂಬಂಧಿಸಿ ಕೈಗೊಳ್ಳುವ ನೀರಾವರಿ ಕಾಮಗಾರಿಗಳಿಗೆ ಮದ್ರಾಸಿನ ಪೂರ್ವಾನುಮತಿ ಅಗತ್ಯ. ಮತ್ತು

೨. ಕಾವೇರಿಯ ಕೆಲವೊಂದು ಉಪನದಿಗಳನ್ನು ಮಾತ್ರ ಗುರುತಿಸಿ, ಅವುಗಳ ವಿಷಯದಲ್ಲಿ ನೇರವಾಗಿ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಬಹುದು.

ಇದು ನದಿ ನೀರಿಗೆ ಸಂಬಂಧಿಸಿದಂತೆ ಸಮಸ್ಯೆಯ ಇವತ್ತಿನ ಸ್ವರೂಪಕ್ಕೆ

ಅಂಕುರಾರ್ಪಣವಾಯಿತು. ಇಲ್ಲಿಂದ ಸಹಜವಾಗಿಯೇ ಕನ್ನಡಿಗರು ಮತ್ತು ತಮಿಳರ ನಡುವೆ ಭಾವ ಸಂಘರ್ಷ ಆರಂಭವಾಯಿತು. ಇದು ಕೇವಲ ಭಾವುಕತೆಯ ನೆಲೆಗಟ್ಟಿನವಾಗಿರದೆ ಆಂತರ್ಯದಲ್ಲಿ ಎರಡೂ ರಾಜ್ಯಗಳ ಆರ್ಥಿಕತೆಯ ವಿಚಾರ ಅಡಗಿರುವುದು ಸ್ಪಷ್ಟ. ನಾಡಿನ ಆರ್ಥಿಕತೆಯೇ ಭಾಷಾ ಚಳವಳಿಗಳ ಮೂಲ ಪ್ರೇರಣೆಗಳಲ್ಲಿ ಮುಖ್ಯವಾದ್ದು ಒಂದು ಎಂಬುದನ್ನು ಇಲ್ಲಿ ಮರೆಯ ಲಾಗದು. ಹೀಗೆ ತುಂಗಾಭದ್ರಾ ನದಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ತುಂಗಭದ್ರನದಿಗೆ ಅಡ್ಡವಾಗಿ ವಾಣಿವಿಲಾಸ ಸಾಗರ ಅಣೆಕಟ್ಟೆಯನ್ನು ಕಟ್ಟಿದಾಗ ಕರ್ನಾಟಕದ ನದಿನೀರಿನ ಸಮಸ್ಯೆ ಆರಂಭವಾಯಿತು. ಅನಂತರ ಇಂತಹ ಸಮಸ್ಯೆ ತೀವ್ರತೆಯನ್ನು ಪಡೆದದು ಮಾತ್ರ ಕಾವೇರಿ ನದಿ ನೀರಿನ ಹಂಚಿಕೆಯ ವಿಷಯದಲ್ಲಿ. ಅದರ ಚರ್ಚೆ ಈಗ ಆರಂಭ.

ಈ ಅವಧಿಯಲ್ಲಿ ಕನ್ನಂಬಾಡಿ ಕಟ್ಟೆಯ ಕೆಲಸ ಆರಂಭವಾಗಿ ಕ್ರಿ.ಶ. ೧೯೧೧ ಹೊತ್ತಿಗೆ ಮೊದಲ ಹಂತ ಪೂರ್ಣವಾಯಿತು. ಇದೇ ವರ್ಷ ಎರಡನೆಯ ಹಂತದ ಕಾರ್ಯಾಚರಣೆಯೂ ಮೊದಲಾಯಿತು. ಆಗ ಮೈಸೂರಿನ ಚೀಫ್ ಎಂಜಿನಿಯರ್ ಆಗಿದ್ದವರು ಸರ್ ಎಂ. ವಿಶ್ವೇಶ್ವರಯ್ಯನವರು. ಮುಂದೆ ಮದ್ರಾಸ್ ಪ್ರಾಂತದ ತಕರಾರಿನ ಮಧ್ಯೆಯೂ ೧೨ ವರ್ಷಗಳ ಕಾಲ ಕೆಲಸ ಕುಂಟುತ್ತಾ ಸಾಗಿ, ಕಡೆಗೂ ಯೋಜನೆ ಪೂರೈಸಿತು. ಹೀಗೆ ಆಳುವ ವರ್ಗದ ಅನಿಶ್ಚಿತ ಧೋರಣೆಗಳ ನಡುವೆ ಅಂತಿಮವಾಗಿ ಮೈಸೂರು ಸಂಸ್ಥಾನ ಒಪ್ಪಂದವೊಂದಕ್ಕೆ ಸಹಿ ಹಾಕಿತು. ಇಂತಹ ಒಪ್ಪಂದದ ಹಿಂದೆ ಮದ್ರಾಸ್ ಮತ್ತು ಕೇಂದ್ರ ಸರ್ಕಾರಗಳ ಒತ್ತಡವೂ ಇತ್ತು. ಈ ಒಪ್ಪಂದದಂತೆ ಮೈಸೂರು ೧,೫೦,೦೦೦ ಎಕರೆಗೆ ನೀರು ಬಳಸಬಹುದು. ಆದರೆ ಇಂತಹ ಮಿತಿ ಮದ್ರಾಸ್‌ಗೆ ಹತ್ತು ಲಕ್ಷ ಎಕರೆ. ವಾಸ್ತವವೆಂದರೆ, ಮದ್ರಾಸಿನ ನದೀ ಮುಖಜ ಭೂಮಿಯಲ್ಲಿ ಅಷ್ಟು ಹೊತ್ತಿಗಾಗಲೇ ೧೦ ಲಕ್ಷದ ಮಿತಿಗೂ ಮೀರಿ ನೀರಾವರಿ ಬಳಕೆ ಆಗುತ್ತಿತ್ತು. ಹೀಗೆ ೧೯೨೪ರಲ್ಲಿ ಆದ ಈ ಒಪ್ಪಂದ ಪ್ರತೀ ೫೦ ವರ್ಷಕ್ಕೆ ಪುನರ್ ವಿಮರ್ಶೆಗೆ ಈಡಾಗಬೇಕೆಂಬುದು ಸಹ ಗಮನಿಸಬೇಕಾದ ಮುಖ್ಯ ಸಂಗತಿ:

೧೯೨೪ರ ಈ ಒಪ್ಪಂದದಂತೆ ಮುಂದಿನ ಐವತ್ತು ವರ್ಷಗಳಲ್ಲಿ ಮದ್ರಾಸ್ ರಾಜ್ಯ ತನ್ನ ಮಿತಿಯಾದ ೧೦ ಲಕ್ಷ ಎಕರೆಯನ್ನು ಮೀರಿ ಹೆಚ್ಚುವರಿಯಾಗಿ ೮ ಲಕ್ಷ ಸೇರಿ, ಒಟ್ಟು ೧೮ ಲಕ್ಷ ಎಕರೆ ಪ್ರದೇಶಕ್ಕೆ ಕಾವೇರಿ ನೀರನ್ನು ಉಣಿಸುತ್ತಿತ್ತು. ಆದರೆ ಮೈಸೂರು ಮಾತ್ರ ತನ್ನ ಮಿತಿಯಾದ ೧,೫೦,೦೦೦ ಎಕರೆಯನ್ನು ಮೀರಿ ಕೇವಲ ೩,೦೦,೦೦೦ ಎಕರೆ ಪ್ರದೇಶಕ್ಕೆ ಮಾತ್ರ ಕಾವೇರಿ ನೀರನ್ನು ಹರಿಸಿತ್ತು. ಇದರಿಂದ ೧,೫೦,೦೦೦ ಎಕರೆಗೆ ಹೆಚ್ಚುವರಿಯಾಗಿ ಮೈಸೂರು ಸಂಸ್ಥಾನ ಕಾವೇರಿನೀರನ್ನು ಬಳಸಿದರೆ, ಮದ್ರಾಸು ೮,೦೦,೦೦೦ ಎಕರೆ ಗಡಿಯನ್ನು ಮುಟ್ಟಿತ್ತು. ಅಲ್ಲದೇ ಹಿಂದಿನ ಒಪ್ಪಂದವನ್ನು ಭಂಗಿಸಿ, ಮೊದಲ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಕ್ರಮವಾಗಿ ಮೆಟ್ಟೂರು ಉನ್ನತ ಮಟ್ಟದ ಕಾಲವೆ ಮತ್ತು ಕುಟ್ಟತ್ತಿ ಹಾಗೂ ಪುಲಂಬಾಡಿ ಕಾಮಗಾರಿಗಳನ್ನು ಕೈಗೊಂಡಿತು. ಆದರೆ ಮೈಸೂರು ಸಂಸ್ಥಾನವು ಒಪ್ಪಂದಕ್ಕೆ ಅನುಗುಣವಾಗಿಯೇ ಕಬಿನಿ, ಸುವರ್ಣಾವತಿ, ಹಾರಂಗಿ, ಹೇಮಾವತಿಗಳ ಕಾಮಗಾರಿ ಕೈಗೊಂಡಾಗ ಮಾತ್ರ ಮದ್ರಾಸು ಕೊಂಕು ಆಡಿ ವಿರೋಧಿಸಿದ್ದು ಇತಿಹಾಸದ ವ್ಯಂಗ್ಯವಾಗಿದೆ.

೧೯೨೪ರ ಒಪ್ಪಂದ ೧೯೭೪ಕ್ಕೆ ಮುಗಿಯಿತು. ಈಗ ಮೈಸೂರೂ (ಕರ್ನಾಟಕ) ಮದ್ರಾಸಿನಂತೆ ಸ್ವಾಯತ್ತತೆಯನ್ನು ಪಡೆದ ರಾಜ್ಯವಾಗಿದೆ. ಆದ್ದರಿಂದ ತನ್ನ ನೀರಾವರಿ ಯೋಜನೆಗಳಿಗೆ ಹಿಂದಿನ ಕಾಲದಂತೆ ಈಗ ಮದ್ರಾಸ್ ಕಡೆ ಮುಖ ಮಾಡುವ ಹಾಗಿಲ್ಲ. ಈಗೇನಿದ್ದರೂ ಪರಸ್ಪರ ಸಾಹಾರ್ದ ಒಪ್ಪಂದದ ಮೂಲಕ ಎರಡೂ ರಾಜ್ಯಗಳು ಕಾನೂನಿನ ಚೌಕಟ್ಟಿನಲ್ಲಿ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಆದರೂ ಈ ಸಮಸ್ಯೆ ತೀವ್ರವಾಗಿ ಬೃಹತ್ ವಿವಾದವಾಗಿ ಮಾರ್ಪಟ್ಟಿತು. ಈ ಪಾಲಿನ ವಿಷಯದಲ್ಲಿ ಕೇರಳವೂ ಭಾಗಿಯಾಗಿದೆಯಾದರೂ ಅದರ ಪಾಲಿನ ಪ್ರಮಾಣ ಕಡಿಮೆ. ಇದು ಅದರ ಹಕ್ಕಿಗೆ ಅನುಗುಣವಾಗಿಯೇ ಇದೆ. ಇಂತಹ ನದಿ ನೀರಿನ ವಿವಾದ ಕರ್ನಾಟಕ ಮತ್ತು ತಮಿಳುನಾಡುಗಳನ್ನು ಸಂಘರ್ಷದ ನೆಲೆಯಲ್ಲಿ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ನಿಲ್ಲಿಸಿತು. ಇದು ಭಾವುಕತೆಯ ಪ್ರಶ್ನೆಯೂ ಆಯಿತು. ಇದನ್ನು ರಾಜಕೀಯಕ್ಕಾಗಿ ಬಳಸಿಕೊಂಡ ಬಂಡವಾಳಶಾಹಿ ರಾಜಕಾರಣಿಗಳೂ ಇದ್ದಾರೆ. ಇದರಲ್ಲಿ ಸತ್ತ ನೂರಾರು ಅಮಾಯಕರೂ ಇದ್ದಾರೆ. ಹೀಗಾಗಿ ಕರ್ನಾಟಕ ತಮಿಳುನಾಡುಗಳ ನಡುವಿನ ಕಾವೇರಿಯಲ್ಲಿ ನೀರಿಗೆ ಬದಲು ರಕ್ತವೂ ಹರಿದದ್ದಿದೆ. ಇದಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ನೂರಾರು ಸಭೆ-ಸಮಾರಂಭಗಳು ಜರಗಿದವು. ಬುದ್ಧಿಜೀವಿಗಳು ಜನತೆಯು ಮುಂದೆ ಕಾವೇರಿ ವಿಚಾರವನ್ನು ಹರಡಿದರು. ರಾಜಕಾರಣಿಗಳು ಮನಬಂದಂತೆ ಮಾತಾಡಿದರು. ಇವರ ಹಿಂದೆ ಅವರ ಸೀಟುಗಳ ಭದ್ರತೆಯನ್ನು ಕಾಪಾಡಿಕೊಳ್ಳಬೇಕೆಂಬ ದುರಾಶಯವೂ ಇತ್ತು. ಇಂತಹ ಸನ್ನಿವೇಶದ ನಡುವೆ ಅಂದರೆ ದಿನಾಂಕ ೨.೬.೧೯೯೦ ರಂದು ಕಾವೇರಿ ನ್ಯಾಯ ಮಂಡಳಿಯು ರಚನೆಯಾಗಿ ೨೫.೬.೧೯೯೦ರಂದು ಮಧ್ಯಂತರ ಆದೇಶ ಹೊರಟಿತು. ಇದನ್ನು ಪೂರ್ವಭಾವಿಯಾಗಿ ವಿರೋಧಿಸುತ್ತ ಬಂದ ಕನ್ನಡಿಗರನ್ನು ಲೆಕ್ಕಸದೆ ಪಿ.ವಿ. ನರಸಿಂಹರಾವ್ ನೇತೃತ್ವದ ಕೇಂದ್ರ ಸರ್ಕಾರ ಕಡೆಗೂ ಆದೇಶವನ್ನು ಗೆಜೆಟ್‌ನಲ್ಲಿ ಪ್ರಕಟಿಸಿಯೇ ಬಿಟ್ಟಿತು. ಇದು ಕರ್ನಾಟಕದ ಮೇಲೆ ಕರಾಳ ಛಾಯೆಯನ್ನು ಚಾಚಿತು. ಕರ್ನಾಟಕದ ಇತಿಹಾಸದಲ್ಲಿ ಇದೊಂದು ಕರಾಳ ದಿನವಾಗಿ ಏರ್ಪಟ್ಟಿತು. ಆಗ ಇಡೀ ಕರ್ನಾಟಕ ತೀವ್ರವಾಗಿ ಪ್ರತಿಕ್ರಿಯಿಸಿದರೂ ಕರ್ನಾಟಕದ ದಕ್ಷಿಣಾರ್ಧ ಹೊತ್ತಿ ಉರಿಯಿತು. ಕರ್ನಾಟಕದ ತಮಿಳರು ಇಲ್ಲಿಂದ ಗುಳೆ ಎದ್ದು ತಮ್ಮ ರಾಜ್ಯವನ್ನು ಸೇರಿದರು. ತಮಿಳರ ರಹಿತ ಕರ್ನಾಟಕ ಎಂದು ನೋಡುಗರ ಕಣ್ಣಿಗೆ ಆಗ ಭಾಸವಾಗುತ್ತಿತ್ತು. ತಮಿಳುನಾಡು ಮತ್ತು ಕರ್ನಾಟಕಗಳ ನಡುವೆ ಸಂಚಾರ ವ್ಯವಸ್ಥೆ ಮುರಿದು ಬಿತ್ತು. ಇದನ್ನು ಮೀರಿದ ವಾಹನಗಳು ಬೆಂಕಿಗೆ ಈಡಾಗುತ್ತಿದ್ದವು. ಹೀಗೆ ಎರಡು ಭಾಷಿಕ ವರ್ಗದವರ ಮಧ್ಯೆ ಸಂಘರ್ಷ ನಡೆದು ಕರ್ನಾಟಕ ಇತಿಹಾಸದಲ್ಲಿ ಇದೇ ಮೊದಲಬಾರಿಗೆ ಕರ್ನಾಟಕ ಏಕೀಕರಣ, ಗೋಕಾಕ ಚಳವಳಿಗಳಿಗೂ ಮೀರಿದ ಕಾವು ಕಾಣಿಸಿತು. ಕಾವು ಎಂದರೆ ಸುಟ್ಟು ಬೂದಿ ಮಾಡುವಷ್ಟು ತೀವ್ರತೆ ಪಡೆದಿದ್ದು ಬೆಂಕಿ ಸ್ವರೂಪಿ.

ಇಂತಹ ಸನ್ನಿವೇಶದಲ್ಲಿ ಅಂದಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರ ನಿಲುವು ಮತ್ತು ಕ್ರಮ ಪ್ರಶಂಸನೀಯವಾದುದು. ಮಧ್ಯಂತರ ತೀರ್ಪನ್ನು ಜಾರಿಗೊಳಿಸಿದ ಕೇಂದ್ರ ಸರ್ಕಾರವು ಪಿ.ವಿ. ನರಸಿಂಹರಾಯರ ಕಾಂಗ್ರೆಸ್ ಪಕ್ಷವೇ ಆಗಿತ್ತು. ಅದೇ ಪಕ್ಷ ರಾಜ್ಯದಲ್ಲೂ ಇತ್ತು. ಅದರ ಮುಖ್ಯಮಂತ್ರಿ, ಬಂಗಾರಪ್ಪ ಇದನ್ನೆಲ್ಲಾ ತಿಳಿದವರೇ ಆಗಿದ್ದರು. ಇಲ್ಲಿ ಪಕ್ಷ

ಮತ್ತು ರಾಜ್ಯದ ಹಿತ-ಎರಡೂ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಂತಿದ್ದವು. ಇಂತಹ ಸನ್ನಿವೇಶದಲ್ಲಿ ತಾವು ತೆಗೆದುಕೊಳ್ಳುವ ಯಾವ ಒಂದು ನಿಲುವೂ ತಮ್ಮ ಅಸ್ತಿತ್ವಕ್ಕೆ ಧಕ್ಕೆ ತರುತ್ತಿತ್ತು. ಈ ಹಿನ್ನೆಲೆಯಲ್ಲಿ ಸ್ವಾರ್ಥ ಮತ್ತು ತ್ಯಾಗ-ಎರಡೂ ತಮ್ಮ ಕಣ್ಣ ಮುಂದಿದ್ದವು. ಆಗ ಅವರು ಆಯ್ದುಕೊಂಡದ್ದು 'ತ್ಯಾಗ'ವನ್ನೇ ಹೊರತು 'ಸ್ವಾರ್ಥ'ವನ್ನಲ್ಲ. ಅದನ್ನು ಕ್ರಿಯಾರೂಪಕ್ಕೂ ಇಳಿಸಿದರು. ಪರಿಣಾಮವಾಗಿ ೧೯೯೧ನೇ ಇಸವಿ ಜುಲೈ ೬ ರಂದು ವಿಧಾನ ಸಭೆಯಲ್ಲಿ ಕೈಗೊಂಡಿದ್ದ ಸರ್ವ ಪಕ್ಷಗಳ ಒಮ್ಮತವಾದ ಮಧ್ಯಂತರ ಆದೇಶವನ್ನು ತಿರಸ್ಕರಿಸುವ ನಿರ್ಣಯಕ್ಕೆ ತಾವು ಬದ್ಧರಾಗಿ ಉಳಿದರು. ಇದು ಸಾಲದೆಂಬಂತೆ ದಿನಾಂಕ ೨೫.೭.೧೯೯೧ರಂದು ಕಾವೇರಿ ಪ್ರದೇಶದ 'ನೀರಾವರಿ ಸಂರಕ್ಷಣಾ ಸುಗ್ರೀವಾಜ್ಞೆ'ಯನ್ನು ಹೊರಡಿಸಿದರೂ ಇದರಲ್ಲಿ ಯಾವುದೇ ರಾಜಕೀಯವಿಲ್ಲ ಹೀಗೆ ಕನ್ನಡಿಗರ ಪರವಾದ ಧೀಮಂತಿಕೆಯ ನಿಲುವನ್ನು ಪ್ರಕಟಮಾಡಿದರು. ಇವರು ಹೊರಡಿಸಿದ ಸುಗ್ರೀವಾಜ್ಞೆ ಸುಪ್ರೀಂ ಕೋರ್ಟಿನಲ್ಲಿ ನಿಲ್ಲಲಾರದೆಂಬ ಊಹೆ ಪ್ರಜ್ಞಾವಂತರಾದವರಿಗೆ ಇತ್ತು. ಆದರೂ ರಾಜ್ಯ ಮತ್ತು ಕೇಂದ್ರಗಳಲ್ಲಿ ಸರ್ಕಾರ ರಚಿಸಿದ್ದ ತಮ್ಮ ಪಕ್ಷದ ನಿಲುವು-ತೀರ್ಮಾನವನ್ನು ವಿರೋಧಿಸಿ, ನಾಡಿನ ಪರವಾದ ಶುದ್ಧ ಕಾಳಜಿಯನ್ನು ವಿಷಮ ಸನ್ನಿವೇಶದಲ್ಲಿ ಕ್ರಿಯಾರೂಪಕ್ಕೆ ಇಳಿಸಿದ ಬಂಗಾರಪ್ಪನವರು ಕನ್ನಡಾಭಿಮಾನಕ್ಕೊಂದು ಮಾದಿರಿಯೇ ಆಗಿ ನಿಂತರು.

ಈಗಾಗಲೇ ಕಾವೇರಿ ನ್ಯಾಯ ಮಂಡಳಿ ರಚನೆಯಾಗಿದೆ. ಅದರ ತೀರ್ಮಾನದಂತೆ ವರ್ಷಕ್ಕೆ ೨೦೫ ಟಿ.ಎಂ.ಸಿ. ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ. ಕರ್ನಾಟಕ ತನ್ನ ಹಕ್ಕನ್ನು ಪೂರ್ಣವಾಗಿ ಪಡೆಯುವ ನಿಟ್ಟಿನಲ್ಲಿ ಹೋರಾಟ ಮಾಡುತ್ತಲೇ ಬಂದಿದೆ. ಇದರಲ್ಲಿ ಎಲ್ಲಾ ಸ್ತರದ ಜನರೂ ಭಾಗಿಗಳಾಗಿದ್ದಾರೆ. ಇದನ್ನು ಬಂಡವಾಳ ಮಾಡಿಕೊಂಡು ಬೆಳೆದವರೂ ಇದ್ದಾರೆ.

'ಕೃಷ್ಣಾ ಕಾವೇರಿ ಎಂದೆಂದೂ ನಮ್ಮದು' ಎಂದು ಹೇಳಿಕೊಂಡು ಬಂದ ಜನತಾದಳ ಸರ್ಕಾರವು ಕೃಷ್ಣಾ ನದಿನೀರಿನ ಪಾಲನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಕೈಗೊಂಡ ಕ್ರಮ ಪ್ರಶಂಸಾರ್ಹವೇ ಸರಿ. ಅಧಿಕಾರದ ಗದ್ದುಗೆ ಏರುವ ಪೂರ್ವದಲ್ಲಿ ಎಚ್.ಡಿ. ದೇವೇಗೌಡರು ಪಕ್ಷದ ಅಧ್ಯಕ್ಷರಾಗಿದ್ದರು. ಬಂಗಾರಪ್ಪನವರ ಕಾಲದಲ್ಲಾದ ಈ ಕಾವೇರಿ ಚಳವಳಿಯನ್ನು ಬಂಡಾವಳ ಮಾಡಿಕೊಂಡ ದೇವೇಗೌಡರು 'ಕರ್ನಾಟಕ ವಿಕಾಸ ವೇದಿಕೆಯನ್ನು ಕಟ್ಟಿದರು, ಬಹಳ ಜಾಣ್ಮೆಯಿಂದ ಸಿದ್ಧಯ್ಯ ಪುರಾಣಿಕ, ಎಲ್.ಎಸ್. ಶೇಷಗಿರಿರಾವ್ ಮೊದಲಾದವರನ್ನು ವೇದಿಕೆಗೆ ತಂದರು. ಸಿ.ಪಿ.ಕೆ, ಆರ್. ಜಿ. ಹಳ್ಳಿ ನಾಗರಾಜ ಮೊದಲಾದ ಹಿರಿ-ಕಿರಿಯ ಪ್ರಜ್ಞಾವಂತ ಬರಹಗಾರರ ಮೂಲಕ ಮೈಸೂರಿನಲ್ಲಾದ ವೇದಿಕೆಯ ಉದ್ಘಾಟನಾ ಸಮಾರಂಭದಲ್ಲಿ ನಿರ್ಣಯಗಳನ್ನು ಓದಿಸಿದರು. ರಾಜಕೀಯ ಚಾಣಾಕ್ಷತೆಯನ್ನು ಬಳಸಿ ತಮ್ಮ ಪಕ್ಷದ ಸಭೆಗೆ ಬರುವ ಅಸಂಖ್ಯ ಜನರನ್ನು ಇಲ್ಲಿಗೂ ಬರಮಾಡಿಕೊಂಡರು. ಇದು ದೊಡ್ಡ ಸಮಾವೇಶವೇ ಆಗಿ ಮಾರ್ಪಟ್ಟಿತ್ತು. ಅದರಲ್ಲಿ ನನ್ನಂತಹ ಸಾವಿರಾರು ಪಕ್ಷಾತೀತ ವ್ಯಕ್ತಿಗಳೂ ಪಾಲುಗೊಂಡಿದ್ದರು. ಇಂತಹ ಸಭೆಯಲ್ಲಿ ಹಲವು ಮುಖ್ಯ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ವಿಕಾಸ ವೇದಿಕೆ

ಮತ್ತು ದೇವೇಗೌಡರಿಗೆ ಅತೀವ ಪ್ರಚಾರವೂ ಸಿಕ್ಕಿತು. ಮುಂದೆ ರಾಜ್ಯ ಸರ್ಕಾರದ ಗದ್ದುಗೆ ಪಡೆಯಲು ಇದೊಂದು ಮೆಟ್ಟಿಲೂ ಆಗಿತ್ತು. ಗೌಡರ ಆಕಾಂಕ್ಷೆಯಂತೆ ಜನತಾದಳವು ರಾಜ್ಯ ಸರ್ಕಾರದ ಗದ್ದುಗೆಯನ್ನೂ ಏರಿತು. ಮುಖ್ಯ ಮಂತ್ರಿಗಳೂ ಆದರು. ಆದರೆ ಈ ಸಂದರ್ಭದಲ್ಲಿ ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟ ವಿಚಾರದಲ್ಲಿ ತಮ್ಮ ಹಿಂದಿನ ನಿಲುವು ಮತ್ತು ಕರ್ನಾಟಕ ವಿಕಾಸ ವೇದಿಕೆಯ ಆಶಯ ಪೂರ್ತಿ ವ್ಯತಿರಿಕ್ತವಾಗಿದ್ದ ಈ ಸನ್ನಿವೇಶದಲ್ಲಿ ಹಲವಾರು ದ್ವಂದ್ವ ನೀತಿಗಳನ್ನು ಪಾಲಿಸಿದರು; ಬೆಣ್ಣೆಯಲ್ಲಿ ಕೂದಲು ತೆಗೆಯುವ ಮಾತಿನ ಜಾಣ್ಮೆಯಿಂದ ಬಂಗಾರಪ್ಪನವರ ಹಾಗೆ ದಡ್ಡರೂ ಎನ್ನಿಸಿಕೊಳ್ಳದಾದರು.

ಪ್ರಾಚೀನ ಕಾಲ ಮತ್ತು ಸಮಕಾಲೀನ ಇತಿಹಾಸದಲ್ಲಿ ಮೂಡಿಸಿದ ಹೆಜ್ಜೆ ಗುರುತಿನಿಂದ ಕಾವೇರಿ ನದಿ ನೀರಿನ ಸಮಸ್ಯೆ ಕರ್ನಾಟಕದ ಸಂದರ್ಭದಲ್ಲಿ ಅತಿ ಮುಖ್ಯ ಎನಿಸಿದೆ.

ದಕ್ಷಿಣ ಕರ್ನಾಟಕದಲ್ಲಿ 'ಕಾವೇರಿ' ಪಡೆದ ಸ್ಥಾನವನ್ನು ಉತ್ತರ ಕರ್ನಾಟಕದಲ್ಲಿ ಕೃಷ್ಣಾ ನದಿಯು ಪಡೆದಿದೆ. ಅಂತಹ ಸ್ಥಾನದಲ್ಲಿ ತುಂಗ-ಭದ್ರೆಯರು 'ಕಾವೇರ'ಯಾಗದಿರುವುದು ನೆಮ್ಮದಿಯ ವಿಷಯ.

ಸ್ವಾತಂತ್ರ ಪೂರ್ವದಲ್ಲಿ ಕರ್ನಾಟಕದಲ್ಲಿ ನದಿ ಸಂಪನ್ಮೂಲಗಳ ಬಳಕೆ ಸಮರ್ಪಕವಾಗಿ ಆಗಿರಲಿಲ್ಲ. ಅದಕ್ಕೆ ನಾವಲ್ಲದವರು ನಮ್ಮನ್ನು ಆಳಿದ್ದುದೆ ಮುಖ್ಯ ಕಾರಣ. ಆದರೂ ಕೆಲವು ಸಣ್ಣಪುಟ್ಟ ಯೋಜನೆಗಳು ಮಾತ್ರ ಕಾರ್ಯಗತಗೊಳ್ಳುವ ದಿಕ್ಕಿನಲ್ಲಿ ದಾಪುಗಾಲು ಹಾಕಿದ್ದವು.

ಕರ್ನಾಟದ ಅತ್ಯಂತ ದೊಡ್ಡ ನದಿಯಾದ ಕೃಷ್ಣಾ ನದಿ ನೀರಿನ ಬಳಕೆಯೂ ಸಮರ್ಪಕವಾಗಿರಲಿಲ್ಲ. ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಬೆಳೆದು, ಆಂಧ್ರ ಪ್ರದೇಶದ ಮೂಲಕ ಬಂಗಾಳಕೊಲ್ಲಿ ಮಹಾಸಾಗರವನ್ನು ಸೇರುವ ಕೃಷ್ಣಾ ನದಿಯು ನಮ್ಮ ರಾಜ್ಯದ ಶೇಕಡ ೬೦ ರಂದು ಭೌಗೋಳಿಕ ಪ್ರದೇಶವನ್ನು ಆಕ್ರಮಿಸಿದೆ. ಕರ್ನಾಟಕದ ಎಲ್ಲಾ ನದಿಗಳ ನೀರಿನ ಬಳಕೆಯಿಂದ ೫೫ ಲಕ್ಷ ಹೆಕ್ಟೇರು ಭೂಮಿಗೆ ಸಮರ್ಪಕ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯ. ಇದರಲ್ಲಿ ಕೃಷ್ಣಾ ನೀರನ್ನು ಸಮರ್ಪಕವಾಗಿ ಬಳಸಿದರೆ ೩೦ ಲಕ್ಷ ಹೆಕ್ಟೇರು ಪ್ರದೇಶಕ್ಕೆ ನೀರುಣಿಸಲು ಸಾಧ್ಯವಾಗುತ್ತದೆ.

ಈ ನಿಟ್ಟಿನಲ್ಲಿ ಅರುವತ್ತರದಶಕದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಶಂಕು ಸ್ಥಾಪನೆಯಾಯಿತು. ಆದರೆ ಪ್ರಗತಿ ಮಾತ್ರ ಮತ್ತೊಂದು ಶಂಕು ಸ್ಥಾಪನೆಗೆ ಎದುರು ನೋಡುವಂತಿತ್ತು.

ಇದಕ್ಕೆ ಹಿನ್ನೆಲೆಯಾಗಿ ಕರ್ನಾಟಕವು ತನ್ನ ಪಾಲಿನ ಕೃಷ್ಣಾನದಿ ನೀರನ್ನು ಬಳಸಲು ೧೯೫೮ರಲ್ಲಿ ಕೇಂದ್ರ ಜಲ ಮತ್ತು ಶಕ್ತಿ ಆಯೋಗವು ಈ ಕೆಳಕಂಡ ಹಂಚಿಕೆಯ ನಿರ್ದೇಶನವನ್ನು ಕೊಟ್ಟಿತು.

ಕ್ರಮ ಸಂಖ್ಯೆ	ರಾಜ್ಯಗಳು	ಕೇಂದ್ರ ಜಲ ಮತ್ತು ಶಕ್ತಿ ಆಯೋಗದ ಹಂಚಿಕೆ		ಕೃಷ್ಣಾ ಕಣಿವೆಗೆ ಕೊಡುಗೆ
		ಟಿ.ಎಂ.ಸಿ.	%	ಶೇಕಡ ಭಾಗ
೧	ಮಹಾರಾಷ್ಟ್ರ	೨೮೬	೧೬.೪	೨೮.೦೦
೨	ಕರ್ನಾಟಕ	೪೭೬	೨೭.೨	೪೭.೫೦
೩	ಆಂಧ್ರಪ್ರದೇಶ	೯೮೩	೫೬.೪	೨೪.೫೦
	ಒಟ್ಟು	೧,೭೪೫	೧೦೦.೦೦	೧೦೦.೦೦

ಈ ಹಂಚಿಕೆಯ ಕೋಷ್ಟಕ ಬಳಕೆಯ ಪ್ರಮಾಣವನ್ನು ಆಧರಿಸಿದ್ದು. ಇದರಿಂದ ಕರ್ನಾಟಕಕ್ಕೆ ಅನ್ಯಾಯವಾಗಿರುವುದನ್ನು ಅಂಕಿ ಅಂಶಗಳೇ ಹೇಳುತ್ತವೆ. ಇದನ್ನು ಮನಗಂಡ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಗಳು ೧೯೬೦-೬೨ರಲ್ಲಿ ಕೇಂದ್ರ ಸರ್ಕಾರಕ್ಕೆ ತಕರಾರು ಅರ್ಜಿಗಳನ್ನು ಸಲ್ಲಿಸಿದವು. ಅದರಲ್ಲಿ ರಾಷ್ಟ್ರೀಯ ಜಲನೀತಿಯನ್ನು ರೂಪಿಸುವುದು ಮತ್ತು ಶೇಖರಣಾ ಪ್ರಮಾಣಕ್ಕನುಗುಣವಾಗಿ ರಾಜ್ಯಗಳಿಗೆ ನೀರನ್ನು ಹಂಚುವುದು ಪ್ರಧಾನ ಬೇಡಿಕೆಗಳಾಗಿ ಇದ್ದವು. ಆಗ ಕೇಂದ್ರದಲ್ಲಿ ನೀರಾವರಿ ಸಚಿವರಾಗಿದ್ದವರು ಆಂಧ್ರ ಮೂಲದ ಕೆ.ಎಲ್. ರಾವ್ ಅವರು. ಇವರು ತಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಆಗದ ರೀತಿಯಲ್ಲಿ ಅಂದರೆ ನಾಗಾರ್ಜುನ ಸಾಗರ ಅಣೆಕಟ್ಟು ಪೂರ್ಣಗೊಂಡಮೇಲೆ ೧೯೬೯ರ ಏಪ್ರಿಲ್‌ನಲ್ಲಿ ಬಚಾವತ್ ನ್ಯಾಯಮಂಡಳಿಯನ್ನು ರಚಿಸಿದರು.

ಈ ಆಯೋಗವು ಮೂರು ರಾಜ್ಯಗಳ ಕೃಷ್ಣಾ ನದಿನೀರಿನ ಹಂಚಿಕೆಯ ವಿಷಯದಲ್ಲಿ ೧೯೭೬ರಲ್ಲಿ ಅಂತಿಮ ತೀರ್ಪ ನೀಡಿತು. ಇದರಿಂದ ಕರ್ನಾಟಕಕ್ಕೆ ೧೯೫೮ರಲ್ಲಿ ಆದ ಅನ್ಯಾಯಕ್ಕೆ ಸಾಕಷ್ಟು ನ್ಯಾಯ ದೊರಕಿರುವುದು ಅವರ ಹಂಚಿಕೆಯ ಕೋಷ್ಟಕದಿಂದ ವ್ಯಕ್ತವಾಗುತ್ತದೆ. ಅದು ಹೀಗಿದೆ:

ಕ್ರಮ ಸಂಖ್ಯೆ	ರಾಜ್ಯಗಳು	ಹಂಚಿಕೆ		ಕಣಿವೆಗೆ ಶೇಕಡ ಕೊಡುಗೆ
		ಟಿ.ಎಂ.ಸಿ	ಶೇಕಡ	
೧	ಕರ್ನಾಟಕ	೭೩೪	೩೪	೪೭.೫
೨	ಮಹಾರಾಷ್ಟ್ರ	೫೬೨	೨೭	೨೮.೦೦
೩	ಆಂಧ್ರಪ್ರದೇಶ	೮೦೦	೩೯	೨೪.೫
-	ಒಟ್ಟು	೨,೦೬೦	೧೦೦	೧೦೦.೦೦

ಈ ಹಂಚಿಕೆಯ ಕೋಷ್ಟಕದಿಂದ ಕರ್ನಾಟಕಕ್ಕೆ ಹಲವು ಅನ್ಯಾಯಗಳಾಗಿವೆ. ಅವುಗಳಲ್ಲಿ ಮುಖ್ಯವಾದವು ಹೀಗಿವೆ:

ಕೃಷ್ಣಾನದಿಯಲ್ಲಿ ಲಭ್ಯವಿರುವ ೨,೨೪೯ ಟಿ.ಎಂ.ಸಿ. ನೀರಿನಲ್ಲಿ ೨,೦೬೦ ಟಿ.ಎಂ.ಸಿ. ನೀರನ್ನು ಮಾತ್ರ ಆಯೋಗವು ಮೂರು ರಾಜ್ಯಗಳಿಗೆ ಹಂಚಿದೆ. ಇದರಿಂದ ಸುಮಾರು ಶೇ. ೮೫

ರಷ್ಟು ಮಾತ್ರ ನೀರಿನ ಹಂಚಿಕೆಯಾಗಿದೆ. ಇದು ಶೇಖರಣಾ ಪ್ರಮಾಣಕ್ಕನುಗುಣವಾಗಿ ಇರದೆ ಬಳಕೆ ಪ್ರಮಾಣಕ್ಕನುಸಾರವಾಗಿ ಇರುವುದರಿಂದ, ಬಳಕೆಯ ಹೆಸರಿನಲ್ಲಿ ಆಂಧ್ರಪ್ರದೇಶಕ್ಕೆ ೨೫೦ ಟಿ.ಎಂ.ಸಿ.ಗೂ ಹೆಚ್ಚು ನೀರು ದೊರೆತಂತಾಗುತ್ತದೆ.

ಈ ಹಂಚಿಕೆಯ ನೀರನ್ನು ಕ್ರಿ.ಶ. ೨,೦೦೦ ಇಸವಿಯೊಳಗೆ ಸದರಿ ರಾಜ್ಯಗಳು ಬಳಸದಿದ್ದರೆ, ಉಳಿಯುವ ನೀರನ್ನು ಮರು ಹಂಚಿಕೆ ಮಾಡಲಾಗುವುದು. ಇದು ಅಂದಿನ ಕರಾರು.

ರಾಜಕೀಯ ಇಚ್ಛಾಶಕ್ತಿ ಇರದ ರಾಜಕಾರಣಿಗಳು ನಮ್ಮನ್ನು ಆಳುತ್ತಾ ಬಂದಿದ್ದು, ಈ ಪಾಲಿನ ನೀರನ್ನು ಪೂರ್ಣವಾಗಿ ಬಳಸುವ ನಿಟ್ಟಿನಲ್ಲಿ ಸೂಕ್ತ ಹೆಜ್ಜೆಯನ್ನು ಇದುವರೆಗೂ ಇಟ್ಟಿಲ್ಲವಾದ ಕಾರಣ ಕರ್ನಾಟಕವು ಆತಂಕದ ಕ್ಷಣಗಳನ್ನು ಎದುರಿಸುವಂತಾಗಿದೆ.

ಕೃಷ್ಣಾ ನದಿಯ ತಮ್ಮ ಪಾಲಿನ ನೀರನ್ನು ನಿಗಧಿತ ಕಾಲಾವಧಿಯದಲ್ಲಿ ಪೂರ್ಣವಾಗಿ ಬಳಸುವುದಾಗಿ ಘೋಷಣೆ ಮಾಡುತ್ತಾ, ಅದನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿ ೧೯೯೪ ಡಿಸೆಂಬರನಲ್ಲಿ ಗೆದ್ದು ಬಂದ ಎಚ್.ಡಿ. ದೇವೇಗೌಡ ನೇತೃತ್ವದ ಜನತಾದಳ ಸರ್ಕಾರ ಆ ನಿಟ್ಟಿನಲ್ಲಿ ಗಮನಾರ್ಹ ಹೆಜ್ಜೆ ಇಟ್ಟಿದೆ. ಪ್ರಸ್ತುತ ರಾಜ್ಯ ಸರ್ಕಾರದ ನೀರಾವರಿ ಸಚಿವರಾದ ಕೆ.ಎನ್. ನಾಗೇಗೌಡರು ಆ ವಿಷಯದಲ್ಲಿ ಕಳಕಳಿ ವ್ಯಕ್ತ ಪಡಿಸುತ್ತಿರುವುದು ಅವರ ಕಾರ್ಯ ವೈಖರಿಯಿಂದ ವ್ಯಕ್ತವಾಗುತ್ತಿದೆ. ಇಂತಹ ಪ್ರಯತ್ನಗಳು ಹಿಂದೆಂದೂ ಆಗಿರಲಿಲ್ಲ. ನಿರ್ಲಕ್ಷ್ಯ ಧೋರಣೆ ತಾಳಿ ಇದುವರೆಗೂ ರಾಜ್ಯವಾಳಿದ ನಾಯಕರು ಇಂದು 'ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ' ಎನ್ನುವಂತೆ ಕಾರ್ಯೋನ್ಮುಖರಾಗಿರುವುದು ಸಂತೋಷಕರವಲ್ಲದಿದ್ದರೂ ಸಮಾಧಾನಕರ ಸಂಗತಿ ಎಂದು ಹೇಳಲೇಬೇಕಾಗಿದೆ. ಈ ನಿಟ್ಟಿನಲ್ಲಿ ಕೃಷ್ಣಾ ಕಣಿವೆಯ ನೀರಿನ ಬಳಕೆ ಪೂರ್ಣವಾಗಲು ಆ ಕಣಿವೆಯ ಕಿರುನೀರಾವರಿ ಯೋಜನೆಗಳೂ ಸೇರಿದಂತೆ ಎಲ್ಲಾ ೫೫ ಯೋಜನೆಗಳೂ ಪೂರ್ಣಗೊಳ್ಳಬೇಕು. ಆ ನಿಟ್ಟಿನಲ್ಲಿ ಮಾರ್ಚಿ, ೧೯೯೪ರ ವೇಳೆಗೆ ರು ೧,೧೦೨೪೩ ಕೋಟಿ ಹಣ ವೆಚ್ಚವಾಗಿದೆ. ಸದರಿ ಯೋಜನೆಯನ್ನು ಪೂರ್ಣಗೊಳಿಸಲು ಈಗಿನ ಅಂದಾಜು ದರಗಳಂತೆ ರೂ, ೬,೦೦೦-೦೦ ಕೋಟಿ ಬೇಕೆಂದೂ, ಬೆಲೆ ಏರಿಕೆಯನ್ನು ಗಮನದಲ್ಲಿ ಇಟ್ಟುಕೊಂಡರೆ ಶೇಕಡ ರೂ ೮,೦೦೦ ಕೋಟಿ ಬೇಕಾಗಬಹುದೆಂದು ರಾಜ್ಯ ಯೋಜನಾ ಆಯೋಗವು ಅಭಿಪ್ರಾಯಪಟ್ಟಿದೆ. ಈ ಗುರಿ ಸಾಧಿಸಲು ಕೃಷ್ಣಾ ಭಾಗ್ಯ ಜಲನಿಗಮವು ೧೯೯೫-೯೬ರಲ್ಲಿ ಬಾಂಡುಗಳ ಮಾರಾಟದ ಮೂಲಕ ರೂ.೨೭೪.೪೪ ಕೋಟಿ ರೂ. ಗಳನ್ನು ಸಂಗ್ರಹಿಸಿದೆ. ಇದರ ಗುರಿ ಇದ್ದದ್ದು ರೂ. ೧,೦೦೦-೦೦ ಕೋಟಿ ಸಂಗ್ರಹಣೆ.

ಹೀಗೆ ಕೃಷ್ಣಾನದಿನೀರಿನ ಪಾಲಿನ ವಿಷಯದಲ್ಲಿ ಕರ್ನಾಟಕದ ನೆತ್ತಿಯ ಮೇಲೆ ಕತ್ತಿ ತೂಗಾಡುತ್ತಿದೆ. ತನ್ನ ಪಾಲಿನ ನೀರನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸಲು ಕರ್ನಾಟಕ ಸರ್ಕಾರವೇ ಅಲ್ಲದೆ ಸಾರ್ವಜನಿಕ ಸಂಸ್ಥೆಗಳು ಮತ್ತು ಸಾರ್ವಜನಿಕರು ಮುಂದೆ ಬರಬೇಕಿದೆ. ಇಲ್ಲಿ ನೈಜ ಅಭಿಮಾನವನ್ನು ಇವರೆಲ್ಲರೂ ವ್ಯಾವಹಾರಿಕ ನೆಲೆಗಟ್ಟಿನಲ್ಲಿಯೂ ತೋರಿಸಬಹುದಾಗಿದೆ. ಈ ಯೋಜನೆಗಳು ಪೂರ್ಣಗೊಂಡರೆ ಉತ್ತರ ಕರ್ನಾಟಕವು ಸುಭಿಕ್ಷೆಯಾಗುತ್ತದೆ. ಅಲ್ಲಿಯ ಕೈಗಳಿಗೆ ಸಾಕಷ್ಟು ಕೆಲಸ ದೊರಕುವುದರಿಂದ ಅವರ ಮನಸ್ಸು ಅತ್ತ ವಾಲುತ್ತದೆ. ಆಗ ಸಹಜವಾಗಿಯೇ ಉತ್ತರ ಕರ್ನಾಟಕದ ಜನತೆ

ಚಿಂತಿಸುವಂತಾಗಬೇಕು. ಚಿಂತಿಸುವುದೇ ಅಲ್ಲದೆ ತಮ್ಮ ತಮ್ಮ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಇದಕ್ಕಾಗಿ ಬದ್ಧತೆಯಿಂದ ದುಡಿಯುವಂತಾಗಬೇಕು. ಆದ್ದರಿಂದ ಕೃಷ್ಣಾ ನದಿ ನೀರಿನ ಪ್ರದೇಶಗಳಿಗೆ ತಾವು ವರ್ಗಾವಣೆ ಆದಾಗ, ಅದನ್ನು ಮನಃಪೂರ್ವಕವಾಗಿ ಸ್ವೀಕರಿಸಿ, ಕನ್ನಡಾಭಿಮಾನದ ಹೆಸರಿನಲ್ಲಾದರೂ ಅಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಬೇಕು. ಇದನ್ನು ಹೊರತುಪಡಿಸಿ, ವರ್ಗಾವಣೆಯ ರದ್ಧತಿಗಾಗಿ ಮಂತ್ರಿಗಳ ಮನೆ ಬಾಗಿಲಿಗೆ ಸುತ್ತುವುದನ್ನು ಇಂದಿನ ಅನೇಕರು ನಿಲ್ಲಿಸಬೇಕು.

ಕೃಷ್ಣಾ ನದಿ ನೀರಿಗೆ ಸಂಬಂಧಿಸಿದ ಈ ತಾತ್ವಿಕ ಚರ್ಚೆ ಕರ್ನಾಟಕದಲ್ಲಿ ಇದುವರೆಗೂ ಪೂರ್ಣಗೊಳ್ಳದಿರುವ ಬೀದರಿನ ಕಾರಂಜಾ ಮೊದಲಾಗಿ ಹತ್ತಾರು ಯೋಜನೆಗಳಿಗೂ ಅನ್ವಯಿಸುತ್ತದೆ. ಅವನ್ನು ಕುರಿತು ಪ್ರತ್ಯೇಕವಾಗಿ ಇಷ್ಟಲ್ಲದೆ ಮತ್ತಾವ ಹೊಸ ಚರ್ಚೆಯನ್ನು ಮಾಡಲಾಗುವುದಿಲ್ಲ. ಆದ್ದರಿಂದ ಸಮಸ್ತ ಕನ್ನಡಿಗರೂ ಕಾವೇರಿ, ತುಂಗಭದ್ರ, ಕೃಷ್ಣಾ ಮೊದಲಾಗಿ ಕರ್ನಾಟಕದ ಎಲ್ಲಾ ನೀರಾವರಿ ಯೋಜನೆಗಳ ವಿಷಯದಲ್ಲಿ ಬದ್ಧತೆಯಿಂದ ಕ್ರಿಯಾ ಶೀಲರಾಗುವುದು ಕೇವಲ ಕನ್ನಡಾಭಿಮಾನದ ವಿಷಯವಾಗಿರದೆ ನಾಡಿನ ಸರ್ವಾಂಗಣ ಅಭಿವೃದ್ಧಿಯ ದಿಕ್ಕಿನಲ್ಲಿ ತೊಟ್ಟ ವೈಚಾರಿಕ ಕ್ರಮವಾಗುತ್ತದೆ.

ಈ ದಿಸೆಯಲ್ಲಿ ಕರ್ನಾಟಕದ ನದಿ ನೀರಿನ ಸಮಸ್ಯೆ ಸ್ಥೂಲ ಇತಿಹಾಸವು ಕಣ್ಣ ಮುಂದಿದ್ದು, ಇದನ್ನು ಹೊಸ ಇತಿಹಾಸವನ್ನಾಗಿ ಮುಂದುವರೆಸುವುದು ಇಂದಿನ ಕನ್ನಡಿಗರ ಚಾರಿತ್ರಿಕ ಅಗತ್ಯವಾಗಿದೆ. ಈ ಸವಾಲಿನಲ್ಲಿ ಜಯಶೀಲರಾಗುವುದು ಅವರ ನೈಜ ಕನ್ನಡಾಭಿಮಾನಕ್ಕೆ ದ್ಯೋತಕವೂ ಆಗುತ್ತದೆ. ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಹಿರೋಶಿಮ ಮತ್ತು ನಾಗಾಸಾಕಿಗಳ ಮೇಲೆ ಅಮೆರಿಕಾದ ಎರಡು ಅಣು ಬಾಂಬುಗಳು ಬಿದ್ದು, ಆ ಪ್ರದೇಶಗಳು ಬೂದಿಯಾದಾಗ; ಅದೇ ಬೂದಿಯ ಮೇಲೆ ಕೆಲವೇ ವರ್ಷಗಳಲ್ಲಿ ಸಮೃದ್ಧಮಯ ಮಾದರಿ ಸಾಮ್ರಾಜ್ಯವನ್ನೂ ಕಟ್ಟಿದ ಜಪಾನೀಯರ ದೇಶ ಪ್ರೇಮ ಇಲ್ಲಿ ನೆನಪಾಗುತ್ತದೆ. ಆ ದಿಸೆಯಲ್ಲಿ ಕನ್ನಡಿಗರಾದ ನಾವೂ ಕಾರ್ಯ ಪ್ರವೃತ್ತರಾಗೋಣ.

ಭಾಗ – ೩

ಜೀವನ ಸಾಧನೆ

ಆದರ್ಶವಾದಿ ಪತಿ

ಗಾಯತ್ರಿ ರಾಮಣ್ಣ

"ಏನ್ರಿ ಪ್ರಾರ್ಥನೆ ಹಾಡಿ ಅಂದ್ರೆ ದೇವರ ನಾಮ ಹಾಡಿದ್ರಲ್ಲಾ. ಕನ್ನಡ ಕಾರ್ಯಕ್ರಮದಲ್ಲಿ ಮೊದಲು ನಾಡಗೀತೆ ಹಾಡಬೇಕು. ಕುವೆಂಪು ಅವರ ಜೈಭಾರತ ಜನನಿಯ ತನುಜಾತೆ ಕಲಿತಿಲ್ವೇನ್ರಿ" ಎಂಬಿತ್ಯಾದಿ ಪ್ರಶ್ನೆಗಳನ್ನು ನಾನು ಪಾರ್ಥನೆ ಹಾಡಿ ವೇದಿಕೆಯಿಂದ ಕೆಳಗಿಳಿಯುತ್ತಿದ್ದಂತೆ ಛೇಡಿಸಿದ ಯುವಕನನ್ನೇ ಮುಂದೊಂದು ದಿನ ಮದುವೆ ಆಗುತ್ತೇನೆಂದು ಕನಸು-ಮನಸಿನಲ್ಲಿಯೂ ಎಣಿಸಿರಲಿಲ್ಲ.

ಮಲ್ಲೇಶ್ವರದ ವಾಸವಿ ಮಹಲಿನಲ್ಲಿ ೧೮-೧೨-೧೯೭೦ರ ಸಂಜೆ ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣೆ ಮತ್ತು ಪ್ರಚಾರೋಪನ್ಯಾಸ ವಿಭಾಗವು ಶಾಂತಿನಾಥ ಕವಿಯ ಬಗ್ಗೆ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮವದು. ಈ ಉಪನ್ಯಾಸ ನೀಡಿದವರು ಆಗ ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದ, ನನ್ನ ಚಿಕ್ಕಮ್ಮನವರಾದ ಶ್ರೀಮತಿ ಕಮಲಾ ಹಂಪನಾ ಅವರು. ಆಗ ನಾನು ಅವರ ಮನೆಯಲ್ಲಿ ಓದಿಕೊಂಡಿದ್ದೆ. ಅವರ ಸೂಚನೆಯ ಮೇರೆಗೆ ಅಂದು ನಾನು ಆ ಕಾರ್ಯಕ್ರಮದ ಆರಂಭದಲ್ಲಿ ಪ್ರಾರ್ಥನೆ ಹಾಡಲು ನಿಯೋಜಿತಳಾಗಿದ್ದೆ. ಕಾರ್ಯಕ್ರಮದ ವ್ಯವಸ್ಥೆಯನ್ನು ಅರವತ್ತರ ದಶಕದ ದ್ವಿತೀಯಾರ್ಧದಲ್ಲಿ ಬೆಂಗಳೂರಿನಲ್ಲಿ ಜನಪರ ಹಾಗೂ ಕನ್ನಡಪರ ಚಟುವಟಿಕೆಗಳನ್ನು ಸಂಘಟಿಸುವಲ್ಲಿ ಅತ್ಯಂತ ಕ್ರಿಯಾಶೀಲವಾಗಿದ್ದ 'ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲ' ಎಂಬ ಸಂಸ್ಥೆ ಅದರ ಚೇತನ ಶಕ್ತಿಯಾಗಿದ್ದವರು, ಆಗ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಉಪಸಂಪಾದಕರಾಗಿದ್ದ ರಾಮಣ್ಣ ಕೋಡಿಹೊಸಹಳ್ಳಿಯವರು. ಆ ಸ್ಥಾನ ಬಲದಿಂದಲೇ ಇರಬೇಕು ಅವರು ಪರಿಚಯವೇ ಇಲ್ಲದಿದ್ದ ನನ್ನನ್ನು ನಾಡಗೀತೆ ಹಾಡದೆ ದೇವರ ನಾಮ ಹಾಡಿದ್ದಕ್ಕೆ ತರಾಟೆಗೆ ತೆಗೆದುಕೊಂಡದ್ದು.

ಈ ರೀತಿ ಪರಿಚಯವಾದ ರಾಮಣ್ಣನವರು ಮುಂದೆ ಅನೇಕ ಸಲ ನಮ್ಮ ಚಿಕ್ಕಮ್ಮನವರ ಮನೆಗೆ ಕಾರ್ಯನಿಮಿತ್ತ ಬಂದುಹೋಗುತ್ತಿದ್ದರು. ಒಂದು ದಿನ ಬೆಳಗ್ಗೆ ನಾನು ಮನೆಯ ಬಾಗಿಲು ಹಾಕಿಕೊಂಡು ಎದುರುಮನೆಯವರ ಸಂಗಡ ಅವರ ಮನೆಯಲ್ಲಿ ಮಾತನಾಡುತ್ತಿದ್ದೆ. ರಾಮಣ್ಣನವರು ಬಾಗಿಲು ತಟ್ಟುತ್ತಿದ್ದುದನ್ನು ಕಂಡು ಬಂದು ಏನುಬೇಕೆಂದು ವಿಚಾರಿಸಿದೆ. ನನ್ನ ವಿಚಾರಣೆಗೆ ಉತ್ತರಕೊಡುವ ಬದಲು ನಾನು ಎದುರು ಮನೆಗೆ ಹೋಗಿ ಮಾತನಾಡುತ್ತ ನಿಂತಿದ್ದರ ಬಗ್ಗೆ ಆಕ್ಷೇಪಿಸುವ ರೀತಿಯಲ್ಲಿ ಮಾತನಾಡಿದರು. ''ಏನಾದರು ಓದುವುದು-ಬರೆಯುವುದು ಮಾಡದೆ ಕಾಲಕಳೆಯುವುದೇಕೆ?'' ಎಂಬಿತ್ಯಾದಿಯಾಗಿ ಅವರ ಮಾತುಗಳಿಂದ ಬಹಳ ಸಿಟ್ಟು ಬಂದಿತ್ತು. ಕಾರಣ ಎಂದೂ ಯಾರ ಮನೆಗೂ ಹೋಗದ ನಾನು ಚಿಕ್ಕಮ್ಮ ಚಿಕ್ಕಪ್ಪನವರು ''ಏನು ಯಾವಾಗಲು ಮನೆಬಾಗಿಲು ಹಾಕಿಕೊಂಡು ಇರ್ತೀಯಲ್ಲ. ನೋಡು ಎದುರು ಮನೆಯವರು ಏನ್ರಿ ನಿಮ್ಮ ಮಗಳನ್ನು ಘೋಷದಲ್ಲಿ ಇಟ್ಟಿದ್ದೀರ ಎಂದು ಕೇಳುತ್ತಾರೆ. ಸ್ವಲ್ಪ ಜನರ ಜೊತೆ ಬೆರಿಯಬೇಕು ಗೊತ್ತಾ'' ಎಂದು ಅಂದು ಬೆಳಗ್ಗೆತಾನೇ ಹೇಳಿದ್ದರಿಂದ ಅದೇ ತಾನೆ ಹೋಗಿದ್ದೆ. ಅದೇ ಸಮಯಕ್ಕೆ ಬಂದ ರಾಮಣ್ಣನವರು ಈ ರೀತಿ ಆಕ್ಷೇಪಿಸಿದ್ದು.ಆಗ 'ನನ್ನನ್ನು ಈ ರೀತಿ ದಂಡಿಸಲು ನೀವ್ಯಾರು?' ಎಂದು ಪ್ರಶ್ನಿಸಬೇಕೆಂದು ಮನಸ್ಸಿಗೆ ಬಂದರೂ ಚಿಕ್ಕಮ್ಮ-ಚಿಕ್ಕಪ್ಪ ಏನೆಂದುಕೊಂಡಾರೋ ಎಂಬ ಅಂಜಿಕೆಯಿಂದ ಸೂಕ್ತವಾಗಿ ಉತ್ತರಿಸಿ ಸುಮ್ಮನಾಗಿದ್ದೆ. ಆನಂತರ ಸಾಕಷ್ಟು ಸಲ ಮನೆಗೆ ಬಂದಿದ್ದ ಅವರೊಡನೆ ಮಾತನಾಡುವ ಅವಕಾಶ ಲಭಿಸಿತ್ತು. ಹೀಗೊಂದು ದಿನ ಮಾತನಾಡುತ್ತಿದ್ದಾಗ ಅವರೇ ಅಂತರ್‌ಜಾತಿ ವಿವಾಹದ ಬಗೆಗೆ ನನ್ನ ಅಭಿಪ್ರಾಯ ಕೇಳಿ ''ನನ್ನನ್ನು ಮದುವೆಯಾಗುತ್ತೀರಾ'' ಎಂದು ನೇರವಾಗಿ ಕೇಳಿಯೇ ಬಿಟ್ಟರು. ಆ ವೇಳೆಗಾಗಲೇ ರಾಮಣ್ಣನವರ ಕುಟುಂಬ ಮಿತ್ರರಾಗಿದ್ದ ಗೀತಾ ಎಂಬ ನನ್ನ ಎಸ್.ಎಸ್.ಎಲ್.ಸಿ. ಪರೀಕ್ಷಾ ಗೆಳತಿಯ ಮೂಲಕ ಅವರ ಗುಣ-ಸ್ವಭಾವ ನಡವಳಿಕೆ ಬಗ್ಗೆ ಕೇಳಿ ತಿಳಿದಿದ್ದ ನಾನು ಮರುಮಾತಿಲ್ಲದೆ ಸಮ್ಮತಿ ಸೂಚಿಸಿದ್ದೆ.

ತಂದೆ-ತಾಯಿಗೆ (ದಿ॥ ಜಿ. ವೀರಯ್ಯ-ಶ್ರೀಮತಿ ವಿಶಾಲಾಕ್ಷಮ್ಮ) ಮೊದಲನೇ ಮಗಳು ನಾನು. ಜೊತೆಗೆ ಇಬ್ಬರು ತಂಗಿಯರು. ಸಣ್ಣ ಪತ್ರಿಕೆಯ ಸಂಪಾದಕರಾಗಿದ್ದ ತಂದೆಯವರಿಗೆ ನಿರ್ದಿಷ್ಟ ಆದಾಯವಿರಲಿಲ್ಲ. ಹೀಗಾಗಿ ನಮ್ಮ ಕುಟುಂಬ ಬಡತನದ ಕಷ್ಟ-ಕೋಟಲೆಗಳನ್ನು ಅನುಭವಿಸುತ್ತಲೇ ಸಾಗಿತ್ತು. ಮಕ್ಕಳ ಭವಿಷ್ಯದ ಬಗೆಗೆ ತಂದೆಯವರು ಹೆಚ್ಚಿನ ಕಾಳಜಿಯನ್ನು ವಹಿಸುತ್ತಿರಲಿಲ್ಲ. ಆದರೆ ಸ್ವಜಾತಿ ಅಭಿಮಾನವಂತೂ ಹೇಳತೀರದಷ್ಟು. ತಂದೆಯವರು ನಾಯಕ (ಬೇಡರು) ಜಾತಿಯನ್ನು ಸೂಚಿಸುವ ಹೆಸರುಗಳ ಪತ್ರಿಕೆಗಳನ್ನು ನಡೆಸುತ್ತಿದ್ದವರು. ನಮ್ಮ ಚಿಕ್ಕಮ್ಮ ಶ್ರೀಮತಿ ಕಮಲಮ್ಮನವರು ಶ್ರೀ ಹಂಪನಾ ಅವರನ್ನು ಅಂತರ್‌ಜಾತಿ ಮದುವೆ ಮಾಡಿಕೊಂಡಾಗ ನಮ್ಮ ತಂದೆ ಬಹಳವಾಗಿ ವಿರೋಧಿಸಿದ್ದರು. ನಮ್ಮನ್ನು ಆ ಮದುವೆ ಕಾರ್ಯಕ್ರಮಕ್ಕೆ ಹೋಗದ ಹಾಗೆ ತಡೆಹಿಡಿದಿದ್ದರು. ಆಗ ಸುಮಾರು ಎಂಟು ವರ್ಷದವಳಿದ್ದು, ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದ ನನಗೆ ಚಿಕ್ಕಮ್ಮನ ಮದುವೆಗೆ ನಮ್ಮನ್ನು ಕಳುಹಿಸದೇ ಇದ್ದ ಬಗ್ಗೆ ತಂದೆಯವರ ಮೇಲೆ ಬಹಳ ಕೋಪ ಬಂದಿತ್ತು. ಸಾಧ್ಯವಾದರೆ ನಾನೂ ಅಂತರಜಾತಿ ಮದುವೆಯಾಗಿ ತಂದೆಗೆ ಸರಿಯಾಗಿ ಬುದ್ಧಿಕಲಿಸಬೇಕೆಂದು ನನ್ನ ಎಳೆಯ ಮನಸ್ಸು ಆಗಲೇ ನಿರ್ಧರಿಸಿತ್ತು. ಇದು ನೆರವೇರುವುದು ಸಾಧ್ಯವೇ? ವರದಕ್ಷಿಣೆ ಪಿಡುಗು ಅಟ್ಟಹಾಸದಿಂದ

ತಾಂಡವನೃತ್ಯ ಮಾಡುತ್ತಿದ್ದು, ಯುವಕರು ಮಾವನ ಮನೆಯ ಹಣಕ್ಕಾಗಿ ಹಪಾಹಪಿಸುತ್ತಿರುವ ಪರಿಸ್ಥಿತಿಯಲ್ಲಿ, ನನ್ನಂತಹ ಬಡಹುಡುಗಿಯನ್ನು ಕೈಹಿಡಿಯಲು ಇವರು ಮುಂದೆ ಬಂದಿದ್ದರು. ಗುಣವಂತರೂ ಇದ್ದುದರಲ್ಲಿ ಗೌರವಾನ್ವಿತ ಉದ್ಯೋಗದಲ್ಲಿದ್ದವರೂ ಆಗಿದ್ದ ಆದರ್ಶವಾದಿ ಯುವಕ, ರಾಮಣ್ಣನವರು ಸ್ವತಃ ತಾವೇ ಮದುವೆಗೆ ನನ್ನ ಸಮ್ಮತಿ ಕೇಳಿದಾಗ ನನಗೆ 'ಸ್ವರ್ಗಕ್ಕೆ ಮೂರೇಗೇಣು' ಇದ್ದಂತೆ ಭಾಸವಾಯಿತು.

ಈ ರೀತಿ ಇಬ್ಬರೂ ಮದುವೆಯಾಗುವ ಬಗ್ಗೆ ಪರಸ್ಪರ ಒಪ್ಪಿದ ಬಳಿಕವೇ ಹೆಚ್ಚು ಸಲಿಗೆಯಿಂದ ಮಾತನಾಡುವುದು-ಓಡಾಡುವುದು ಮಾಡತೊಡಗಿದೆವು. ಚಿಕ್ಕಮ್ಮನ ಮನೆಯಲ್ಲಿದ್ದು ನಾನು ಈ ರೀತಿ ಓಡಾಡುತ್ತಿದ್ದುದನ್ನು ಕಂಡು ತಂದೆಯವರು ಸಿಡಿಮಿಡಿಗೊಂಡರು. ಆಗ ಮಹಾರಾಣಿ ಕಾಲೇಜಿನಲ್ಲಿ ಪಿ.ಯು.ಸಿ. ಕಲಿಯಲು ಸೇರಿದ್ದೆ. ಜೊತೆಗೆ ಸಂಜೆವೇಳೆ ಟೈಪಿಂಗ್‌ಗೂ ಹೋಗುತ್ತಿದ್ದೆ. ಸಂಗೀತಾಭ್ಯಾಸವು ನಡೆಯುತ್ತಿತ್ತು. ರಾಮಣ್ಣನವರ ಸಂಗಡ ಓಡಾಡುವುದನ್ನು ಕಂಡು ಇವು ಯಾವುದಕ್ಕೂ ಕಳಿಸದೆ ತಂದೆ ಗೃಹ ಬಂಧನದಲ್ಲಿಟ್ಟರು. ಜೊತೆಗೆ ಚಿಕ್ಕಮ್ಮನ ಮನೆಯಿಂದ ತಾಯಿ ಮನೆಗೆ ನನ್ನ ವಾಸಸ್ಥಾನವೂ ಬದಲಾಯಿತು. ಇದರಿಂದ ನಮ್ಮಿಬ್ಬರ ಭೇಟಿಗೂ ಸಂಚಕಾರ ಒದಗಿತು. ಆದರೆ ನಮ್ಮಿಬ್ಬರಿಗೂ ಸಮಾನ ಗೆಳತಿಯಾಗಿದ್ದ ಗೀತಾಳ ಸಹಕಾರದಿಂದ ನಮ್ಮಿಬ್ಬರ ನಡುವಿನ ಪತ್ರಸಂಪರ್ಕ ಮುಂದುವರಿಯಿತು. ಅಷ್ಟು ಹೊತ್ತಿಗೆ ಗಾಢವಾಗಿ ನಮ್ಮಿಬ್ಬರಲ್ಲಿ ಬೆಳೆದಿದ್ದ ಪ್ರೀತಿಯನ್ನು ತೊಡೆದು ಹಾಕಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಅರಿವು ನನ್ನ ತಂದೆ-ತಾಯಿ-ಬಂಧು ಬಳಗಕ್ಕೆ ಮೂಡಿತ್ತು ಎಂದು ಕಾಣುತ್ತದೆ. ರಾಮಣ್ಣನವರ ಬಗ್ಗೆ ಅವರಿವರಿಂದ ಸಾಕಷ್ಟು ಮಾಹಿತಿಯನ್ನು ತಂದೆಯವರು ಸಂಗ್ರಹಿಸಿದ್ದರೆನೋ. ಒಟ್ಟಿನಲ್ಲಿ ಮುಂದೆ ಕಾಲೇಜಿಗೆ ಹೋಗಲು ನನಗೆ ಅನುಮತಿ ಸಿಕ್ಕಿತು. ಇದರಿಂದ ನಮ್ಮಿಬ್ಬರ ನಡುವೆ ನೇರ ಸಂಪರ್ಕಕ್ಕೆ ಅವಕಾಶವಾಯಿತು.

೧೯೭೭ರ ಮೇ ೨೫ ರಂದು ಕೆಂಪೇಗೌಡ ರಸ್ತೆ ಜಿಲ್ಲಾ ಕಛೇರಿ ಆವರಣದಲ್ಲಿನ ಉಪನೋಂದಣಾಧಿಕಾರಿ ಕಛೇರಿಯಲ್ಲಿ ನಮ್ಮ ಮದುವೆ ಜರುಗಿತು. ಉಭಯತ್ರರ ಮಾತಾಪಿತರೂ ಗೈರು ಹಾಜರಿ. ಆದರೆ ನನ್ನ ಕಡೆಯಿಂದ ಚಿಕ್ಕಪ್ಪ-ಚಿಕ್ಕಮ್ಮಂದಿರು, ಸೋದರ ಮಾವ, ದೊಡ್ಡಮ್ಮ ಹಾಗೂ ಸೋದರ ಮಾವಂದಿರ ಮಕ್ಕಳು ಹೀಗೆ ಅನೇಕ ಬಂಧುಗಳು ಬಂದಿದ್ದರು. ರಾಮಣ್ಣನವರ ಕಡೆಯಿಂದ ಯಾವ ಬಂಧುಗಳು ಇದ್ದಂತಿರಲಿಲ್ಲ, ಗೆಳೆಯರೇ ಅಧಿಕ ಸಂಖ್ಯೆಯಲ್ಲಿದ್ದರು. ಹೀಗೆ ಎಲ್ಲರ ಸಮ್ಮುಖದಲ್ಲಿ ನಿರ್ವಿಘ್ನವಾಗಿ ನೆರವೇರಿದ ಮದುವೆ ಬಳಿಕ ಅಂದೇ ನಾವು ಪ್ರಕಾಶನಗರದಲ್ಲಿ ಮೊದಲೇ ಗೊತ್ತುಪಡಿಸಿಕೊಂಡಿದ್ದ ಒಂದು ವಠಾರದ ಪುಟ್ಟ ಮನೆಯಲ್ಲಿ ನಮ್ಮ ಹೊಸ ಸಂಸಾರವನ್ನು ಪ್ರತಿಷ್ಠಾಪಿಸಿದೆವು. ಅದುವರೆಗೂ ತಮ್ಮ ಅಕ್ಕ ಶ್ರೀಮತಿ ಸಾವಿತ್ರಮ್ಮನವರ ಮನೆಯಲ್ಲಿದ್ದ ಶ್ರೀ ರಾಮಣ್ಣನವರು ಅಲ್ಲಿದ್ದ ತಮ್ಮ ವಸ್ತುಗಳನ್ನು ತೆಗೆದುಕೊಂಡು ಬರಲು ಹೋದಾಗ ನನ್ನನ್ನು ಅಲ್ಲಿಗೆ ಕರೆದುಕೊಂಡುಹೋಗಿ ಅಧಿಕೃತವಾಗಿ ಅಕ್ಕನವರಿಗೆ ಪರಿಚಯಿಸಿದರು. ಆ ಸಂದರ್ಭದಲ್ಲಿ ನಮ್ಮ ಅತ್ತಿಗೆಯವರು ತಮ್ಮನನ್ನು ಅಕ್ಕರೆಯಿಂದ ಜೋಪಾನವಾಗಿ ಸಾಕಿರುವ ಬಗ್ಗೆ ವಿವರಿಸಿ, "ನಿನ್ನನ್ನು ನಂಬಿ ಮದುವೆಯಾಗಿದ್ದಾನೆ ಚೆನ್ನಾಗಿ ನೋಡಿಕೋ" ಎಂದು ಎಚ್ಚರಿಸಿ, ಕೆಲವು ತಿಳುವಳಿಕೆಯ ಮಾತುಗಳನ್ನು ಹೇಳಿ, ಆಶೀರ್ವದಿಸಿ ಕಳುಹಿಸಿಕೊಟ್ಟರು.

ಮದುವೆಯಾದ ಎರಡು-ಮೂರು ದಿನಗಳಲ್ಲೇ ನಮ್ಮ ಮಾವನವರು ನಮ್ಮ ಹೊಸ ಮನೆಗೆ ಸಂಜೆ ವೇಳೆ ಬಂದರು. ಆದರೆ ಅವರೇ ನಮ್ಮ ಮಾವನವರು ಎಂದು ನನಗೆ ತಿಳಿದಿರಲಿಲ್ಲ. ಕಾರಣ ಅದಕ್ಕೆ ಮುನ್ನ ನಾನು ಅವರನ್ನೆಂದೂ ನೋಡಿರಲಿಲ್ಲ. ರಾಮಣ್ಣನವರು ಈ ಮೊದಲೇ ಪರಿಚಯಿಸಿದ್ದ ಅವರ ಸೋದರಮಾವನ ಮಕ್ಕಳ ಜೊತೆ ಬಂದಿದ್ದರಿಂದ ಒಳಕ್ಕೆ ಕರೆದುಕೂರಿಸಿ ಬಿಸ್ಕೆಟ್, ಟೀ ಕೊಟ್ಟು ಉಪಚರಿಸಿದ್ದೆ. ಆಗ ಇವರು ಮನೆಯಲ್ಲಿ ಇರಲಿಲ್ಲ. ಮಧ್ಯಾಹ್ನದ ಪಾಳಿಯ ಕೆಲಸಕ್ಕೆ ಕಛೇರಿಗೆ ಹೋಗಿದ್ದರು. ಮದುವೆಯಾಗಿ ಮನೆಮಾಡಿದ್ದರ ವಿಚಾರ ತಿಳಿಸಿ ಇವರು ತಂದೆಗೆ ಪತ್ರ ಬರೆದಿದ್ದರು. ಅದನ್ನನುಸರಿಸಿ ಮಾವನವರು ನೋಡಿಕೊಂಡು ಹೋಗಲು ಬಂದಿದ್ದರು. ಸ್ವಲ್ಪಹೊತ್ತಿನ ಬಳಿಕ ಇವರ ಮಾವನ ಮಕ್ಕಳು ಇವರೇ 'ರಾಮುವಿನ ತಂದೆ ಎಂದು' ಪರಿಚಯಿಸಿದರು. ಆಗ ನನ್ನ ಆತಿಥ್ಯದಿಂದ ಏನೆಂದುಕೊಂಡರೋ ಎಂಬ ಅಳುಕು-ಭಯಗಳ ನಡುವೆಯೇ ಅವರ ಕಾಲಿಗೆರಗಿ ನಮಸ್ಕರಿಸಿದೆ. ಹೃದಯ ತುಂಬಿ ಹರಸಿ ಬುದ್ಧಿಯ ಮಾತುಗಳನ್ನು ಹೇಳಿ ಹಿಂದಿರುಗಿದರು. ಮತ್ತೆ ಎರಡು ದಿನಗಳಲ್ಲೇ ವಾಪಸ್ಸಾದವರು ಇವರ ಬಳಿ ೨೦೦ ರೂ. ಕೊಟ್ಟು ಕಿವಿಗೆ 'ಓಲೆ' ಕೊಡಿಸಿ ಕೂಡಲೇ ಊರಿಗೆ ಕರೆದುಕೊಂಡು ಬರಲು ಹೇಳಿಹೋದರು. ಕಾರಣ ಆಗ ನನ್ನ ಕಿವಿಯಲ್ಲಿ ಓಲೆ ಇರಲಿಲ್ಲ. ಉಮಾಗೋಲ್ಡಿನ ರಿಂಗ್‌ಮಾತ್ರ ಇತ್ತು ಮೂಗಿನಲ್ಲಿ ಸ್ವಲ್ಪದಿನಗಳ ಹಿಂದೆ ಮೂಗು ಚುಚ್ಚಿಸಿಕೊಂಡಾಗ ಹಾಕಿಕೊಂಡಿದ್ದ 'ಮೂಗುನತ್ತು' ಬಿಟ್ಟರೆ ನನ್ನದೇ ಆದ ಚಿನ್ನದ ಒಡವೆ ಯಾವುದೂ ಇರಲಿಲ್ಲ.

ಮಾವನವರ ಆಹ್ವಾನದ ಮೇರೆಗೆ ೧೯೭೭ರ ಜೂನ್ ಮೊದಲವಾರದಲ್ಲಿ ಕೋಡಿ ಹೊಸಹಳ್ಳಿಗೆ ಹೊಸದಂಪತಿಗಳು ಪ್ರಯಾಣ ಬೆಳೆಸಿದೆವು. ಅದು ನನಗೆ ಅಪರಿಚಿತಸ್ಥಳ- ಇವರನ್ನು ಬಿಟ್ಟರೆ ಯಾರೊಬ್ಬರೂ ಪರಿಚಯದವರಿಲ್ಲ. ನನ್ನನ್ನು ಚಿಕ್ಕಅತ್ತಿಗೆ ಶ್ರೀಮತಿ ಕೆಂಪಕ್ಕನವರನ್ನು ಮಾತ್ರ ಅವರ ಕೊನೆಯ ಮಗಳು ಹೆರಿಗೆಗೆ ಬಂದಿದ್ದಾಗ ವಾಣಿವಿಲಾಸ ಆಸ್ಪತ್ರೆಗೆ ಇವರು ನನ್ನನ್ನು ಕರೆದೊಯ್ದು ಪರಿಚಯಿಸಿದ್ದರಷ್ಟೆ. ನಾಲ್ಕೈದು ನಿಮಿಷದ ಭೇಟಿ. ಇದ್ದುದ್ದರಲ್ಲಿಎರಡು ಸಲ ಮನೆಗೆ ಬಂದಾಗ ನೋಡಿದ್ದ ಮಾವನವರೇ ಪರಿಚಿತರು. ಹೀಗೆ ಹೊಸ ಊರು, ಹೊಸ ಜನ ಹೇಗೋ ಏನೋ ಎಂಬ ಭಯ-ಅಂಜಿಕೆ ಸಂಕೋಚಗಳಿಂದ ನಾನು ಕುಗ್ಗಿ ಹೋಗಿದ್ದೆ. ನಾವು ಊರು ತಲುಪುತ್ತಿದ್ದಂತೆಯೇ ಮೊದಲೇ ನಮ್ಮ ಮದುವೆ ವಿಚಾರ ತಿಳಿದಿದ್ದ ಊರಿನ ನೆಂಟರಿಷ್ಟರು ಹೆಚ್ಚಿನ ಸಂಖೆಯಲ್ಲಿ ಹಟ್ಟಿಯಲ್ಲಿ ಜಮಾಯಿಸಿದ್ದರು. ಮನೆಯ ಹತ್ತಿರ ಹೋಗುತ್ತಿದ್ದಂತಯೇ ಎಲ್ಲರೂ 'ತಮ್ಮಯ್ಯ ಬಂದ' ಎಂದು ಹೇಳುತ್ತಾ ಮುಂಬಾಗಿಲ ಬಳಿ ಬಂದರು. (ರಾಮಣ್ಣನವರನ್ನು ಅವರ ನೆಂಟರಿಷ್ಟರೆಲ್ಲರೂ ಪ್ರೀತಿಯಿಂದ 'ತಮ್ಮಯ್ಯ' ಎಂದೇ ಕರೆಯುತ್ತಿದ್ದರು. ಮನೆಯಲ್ಲಿ ಕರೆಯುವ ಹೆಸರು 'ರಾಮು') ನಾವು ಬರುವುದು ಮೊದಲೇ ಗೊತ್ತಿದ್ದುದರಿಂದ ಮದುವೆಯಾದ ಮೇಲೆ ಅದೇ ಮೊದಲು ಬಾರಿಗೆ ಹೋಗುತ್ತಿದ್ದುದರಿಂದ ನನ್ನ ಅತ್ತೆ-ಅತ್ತಿಗೆ ಮತ್ತಿತರ ನೆಂಟರಿಷ್ಟರು ಬಾಗಿಲಲ್ಲೇ ಆರತಿ ಬೆಳಗಿ ಒಳಗೆ ಬರಮಾಡಿಕೊಂಡರು. ಒಳಗೆ ಹೋದ ನಾನು ಸಂಕೋಚದಿಂದ ಕುಳಿತುಕೊಳ್ಳುವುದೋ ನಿಂತಿರುವುದೋ ಎಂಬ ಜಿಜ್ಞಾಸೆಯಲ್ಲಿರುವಾಗಲೇ ನನ್ನ ಅತ್ತೆ ಹಜಾರದಲ್ಲಿ ಚಾಪೆ ಹಾಕಿ ಕುಳಿತುಕೊಳ್ಳಲು ಹೇಳಿದರು. ನಾನು ಕುಳಿತುಕೊಳ್ಳಲು ಮುಂದಾದಾಗ ಅಲ್ಲಿದ್ದ ಮಹಿಳೆಯರಲ್ಲಿ 'ಯಾಕೆ ಒಳಗೆ ಕರೆದುಕೊಂಡು ಹೋಗು ನಿಂಗವ್ವ' ಎಂದು ಕೆಲವರು ಹೇಳಿದರೆ 'ಮನೆ ಕೆಲ್ಸ-ಗಿಲ್ಸ ಏನಾದರೂ ಮಾಡಲು ಬರುತ್ತಾಕೇಳು' ಎಂದು

ಇನ್ನು ಕೆಲವರು ತಮಾಷೆ ಮಾಡತೊಡಗಿದರು. ಆಗ ನನ್ನ ಅತ್ತೆ 'ಏ, ಸುಮ್ಗಿರಿ ಇನ್ನು ಈಗ್ ತಾನೆ ಬಂದದೆ ಮೊಗ ಎಲ್ಲಾ ಮುಂದ್ಕೆ ಮಾಡ್ತಾಳೆ ಬಿಡಿ' ಎಂದು ನನ್ನ ಪರ ವಾದಿಸಿ ಅವರನ್ನು ತೆಪ್ಪಗಾಗಿಸಿದರು. ಆಗ ಅತ್ತೆಯವರ ಬಗ್ಗೆ ಇದ್ದ ಭಯಹೋಗಿ ಅಭಿಮಾನ ಮೂಡಿತು. ಎಲ್ಲರೂ ತೋರಿದ ಪ್ರೀತಿ-ವಾತ್ಸಲ್ಯದಿಂದ ನಾನು ಅಂಜಿಕೆ-ಸಂಕೋಚ ತೊರೆದು ಓಡಾಡತೊಡಗಿದೆ.

ಈ ಮೊದಲ ಭೇಟಿಯ ಸಂದರ್ಭ ನಾವು ಊರಿನಲ್ಲಿ ನಾಲ್ಕುದಿನ ಉಳಿದಿದ್ದೆವು. ಇವರು ನೆಂಟರ ಮನೆಗಳಿಗೆಲ್ಲಾ ಕರದೊಯ್ದು ಪರಿಚಯಿಸಿದರು. ಇವರ ತಾಯಿ ಊರಾದ ಉಜ್ಜನ ಹಳ್ಳಿಯಲ್ಲಿನ ಸೋದರಮಾವದಿಂರ ಮನೆ, ರಾಮೇಗೌಡನ ದೊಡ್ಡಿಯ ಸೋದರತ್ತೆ ಮನೆಗೆಲ್ಲಾ ಕರೆದೊಯ್ದುರು. ಇವರು ಸ್ವಭಾವತಃ ಜೋರು-ಜೂರತ್ತಿನ ಆಸಾಮಿಯಾಗಿದ್ದರಿಂದ ಯಾರೊಬ್ಬರೂ ನಮ್ಮ ವಿವಾಹದ ಬಗ್ಗೆ ತುಟಿ-ಪಿಟುಕ್ಕೆನ್ನದೆ ಸಹಜವಾಗಿ ಮಾತನಾಡಿ ಕಳುಹಿಸುತ್ತಿದ್ದರು. ಸ್ವಲ್ಪ ಕೀಟಲೆಯ ಧ್ವನಿ ತೆಗೆದು ಮಾತನಾಡಿದವರಿಗೆ ತಕ್ಕ ಉತ್ತರಕೊಡುತ್ತಿದ್ದ ಇವರ ಧಾಟಿಯಿಂದ ಅಂಥವರು ಮರುಮಾತನಾಡದೆ ತೆಪ್ಪಗಿರುತ್ತಿದ್ದರು. ಊರಿನಲ್ಲಿದ್ದ ನಾಲ್ಕು ದಿನಗಳನ್ನು ನಾನು ಕಳೆದದ್ದೇ ತಿಳಿಯಲಿಲ್ಲ. ನಾನು ಕೆಳಜಾತಿಯವಳೆಂಬ ಬೇಸರವಾಗಲೀ ಅವರ ಇಚ್ಛೆಗೆ ವಿರುದ್ಧವಾಗಿ ನನ್ನನ್ನು ಇವರು ಮದುವೆಯಾದ ಬಗ್ಗೆ ಯಾವ ಅಸಮಾಧಾನವಾಗಲಿ ನನ್ನ ಅತ್ತೆ-ಮಾವನರಲ್ಲಿ ಉಳಿದಿಲ್ಲವೆಂಬುದು ಈ ಸಂದರ್ಭದಲ್ಲಿ ನನಗೆ ಮನವರಿಕೆಯಾಯಿತು. ಒಬ್ಬನೇ ಮಗನೆಂದು ಮುದ್ದಾಗಿ ಸಾಕಿದ್ದ ಅವರಿಗೆ ಮಗ ತಮ್ಮಿಂದ ದೂರವಾಗದಿರಲಿ ಎಂಬ ಕಾರಣದಿಂದ ನನ್ನನ್ನು ಅಕ್ಕರೆಯಿಂದ ಕಂಡಿರಬಹುದು. ಅತ್ತೆ-ಮಾವಂದಿರೇ ನನ್ನನ್ನು ಚೆನ್ನಾಗಿ ಕಾಣುತ್ತಿದ್ದರಿಂದ ಇತರರೂ ಅದನ್ನು ಅನುಸರಿಸಿದರು. ಒಟ್ಟಾರೆ ಈ ಭೇಟಿ ಮುಗಿಸಿ ನಾವು ಬೆಂಗಳೂರಿಗೆ ಹಿಂತಿರುಗುವ ಹೊತ್ತಿಗೆ ಅತ್ತೆ-ಮಾವನವರು ನನಗೂ ಅವ್ವ-ಅಪ್ಪ ಆಗಿಬಿಟ್ಟರು. ಅವರ ಜೀವಿತಾವಧಿಯುದ್ದಕ್ಕೂ ನಾನು ಅವರನ್ನು ಅವ್ವ-ಅಪ್ಪ ಎಂದೇ ಸಂಬೋಧಿಸುತ್ತಿದ್ದೆ. ನಾನು ಅವರ ಮೆಚ್ಚಿನ ಸೊಸೆಯಾಗಿ ಒಲವು ಗಳಿಸಿದೆ.

ನಮ್ಮ ಮದುವೆಯಾದಾಗ ನನಗೆ ೧೮ ವರ್ಷ ಪೂರೈಸಿತ್ತು ಅಷ್ಟೆ. ಆಗಿನ್ನೂ ನನಗೆ ಅಡಿಗೆ-ತಿಂಡಿ ಪದಾರ್ಥಗಳನ್ನು ಮಾಡುವುದು ಸರಿಯಾಗಿ ಬರುತ್ತಿರಲಿಲ್ಲ. ಚಿಕ್ಕಮ್ಮನ ಮನೆಯಲ್ಲಿ ಅಲ್ಪ-ಸ್ವಲ್ಪ ಮಾಡಿ ಕಲಿತಿದ್ದೆ. ಆ ಸಂದರ್ಭದಲ್ಲಿ ನನ್ನ ನೆರವಿಗೆ ಬಂದವರು ನಮ್ಮ ವಠಾರದಲ್ಲಿದ್ದ ನನಗಿಂತ ಹಿರಿಯರಾಗಿದ್ದ ಆಗಲೇ ಮೂರು ಮಕ್ಕಳ ತಾಯಿಯಾಗಿದ್ದ, ಶ್ರೀಮತಿ ವನಜಾಕ್ಷಮ್ಮನವರು. ನಾವು ಅಲ್ಲಿ ಸಂಸಾರ ಹೂಡಿದಾಗ ಮೊದಲಿಗೆ ಪ್ರೀತಿಯಿಂದ ಮಾತನಾಡಿಸಿ ಸ್ನೇಹ ಬೆಳಸಿದವರು. ನಾನು ಹೆಚ್ಚಿನ ಪಾಲು ಅಡಿಗೆ-ತಿಂಡಿ ಪದಾರ್ಥ ಮಾಡುವುದನ್ನು ಕಲಿತದ್ದು ಅವರಿಂದಲೇ ಎನ್ನಬಹುದು. ನಾನು ಚೊಚ್ಚಲ ಗರ್ಭಿಣಿಯಿದ್ದಾಗ ತತ್ಸಂಬಂಧದ ಅನಾರೋಗ್ಯದಲ್ಲಿ ಬಳಲುತ್ತಿದ್ದಾಗ ನನ್ನ ಬೇಕು-ಬೇಡಗಳನ್ನೆಲ್ಲಾ ಕೇಳಿ-ತಿಳಿದುಮಾಡಿ ಉಪಚರಿಸಿ ಹೆತ್ತತಾಯಿಗಿಂತ ಹೆಚ್ಚಾಗಿ ಆರೈಕೆ ಮಾಡಿದವರು. ನನ್ನ ಮಗನ (ಸುಜಯ್) ಹೆರಿಗೆ ಸಮಯದಲ್ಲಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿ, ಆಸ್ಪತ್ರೆಯಿಂದ ಮನೆಗೆ ಬಂದು ಕೋಡಿಹೊಸಹಳ್ಳಿಗೆ ಹೋಗುವ ಮುನ್ನ ಮಗ-ಬಾಣಂತಿಗೆ ನೀರು ಕಾಯಿಸಿ ಸ್ನಾನಮಾಡಿಸಿ ಅಡಿಗೆ ಮಾಡಿ ಊಟಹಾಕಿ ಶುಭಹಾರೈಸಿ ಬೀಳ್ಕೊಟ್ಟವರು ಅವರೇ. ಅವರ ಸ್ನೇಹ-ಪ್ರೀತಿ-ವಿಶ್ವಾಸವನ್ನು ನಾನು ಎಂದಿಗೂ ಮರೆಯುವಂತಿಲ್ಲ.

ಚೊಚ್ಚಲ ಬಾಣಂತನ ಸಾಮಾನ್ಯವಾಗಿ ತೌರಿನಲ್ಲಿ ಆಗುವುದು ವಾಡಿಕೆ ಆದರೆ ನನ್ನ ತೌರಿನಿಂದ ಈ ನಿಟ್ಟಿನಲ್ಲಿ ಯಾವುದೇ ಕರೆ ಬಂದಿರಲಿಲ್ಲ. (ತಾಯಿ ಮಾತ್ರ ಹೆರಿಗೆಯಾದ ನಾಲ್ಕುದಿನಗಳನಂತರ ಬಂದು ನೋಡಿಕೊಂಡು ಹೋಗಿದ್ದರಷ್ಟೆ) ಬಾಣಂತನ ಕೋಡಿ ಹೊಸಹಳ್ಳಿಯಲ್ಲೇ ನಡೆಯುವುದಕ್ಕೆ ತೀರ್ಮಾನವಾಗಿತ್ತು. ಆದುದರಿಂದಲೇ ಹೆರಿಗೆಯಾದ ಬಳಿಕ ಹತ್ತು ದಿನಗಳ ಕಾಲ ಕೆ.ಸಿ. ಜನರಲ್ ಆಸ್ಪತ್ರೆಯ ವಿಶೇಷ ಕೊಠಡಿಯಲ್ಲಿರಿಸಿ,ಆನಂತರ ಟ್ಯಾಕ್ಸಿಯಲ್ಲಿ ಕೋಡಿಹೊಸಹಳ್ಳಿಗೆ ಹೋಗುವ ಏರ್ಪಾಡು ಆಗಿತ್ತು. ಅಪ್ಪ (ನನ್ನ ಮಾವ)ನವರು ಹೆರಿಗೆಯಾದ ಎರಡು ಮೂರು ದಿನದಲ್ಲೇ ಬಂದು ನೋಡಿಕೊಂಡು ಊರಿಗೆ ಕರೆದು ಹೋಗಿದ್ದರು. ಮಗನನ್ನು ಎತ್ತಿಕೊಂಡು ಊರು ತಲುಪಿದಾಗ ನನಗೆ ದೊರೆತ ಸ್ವಾಗತ ಬೇರೆ ಯಾವ ಸೊಸೆಗೂ ದೊರೆತಿರಲಾರದೆಂದೇ ನನ್ನ ಅನಿಸಿಕೆ, ಬಾಣಂತನಕ್ಕೆ ಅಲ್ಲಿದ್ದ ಮೂರೂವರೆ ತಿಂಗಳ ಅವಧಿಯಲ್ಲಿ ದಿನ ಕಳೆದದ್ದೇ ಗೊತ್ತಾಗಲಿಲ್ಲ. ಬಿಡುವು ಸಿಕ್ಕಿದಾಗಲೆಲ್ಲ ಅಪ್ಪ ಅವರ ಮನೆತನದ ಹಿರಿಮೆ-ಹಿನ್ನೆಲೆ, ಬಂಧು ಮಿತ್ರರ ವಿವರ, ಚಿಕ್ಕಂದಿನಲ್ಲಿ ಮಗನನ್ನು ಸಾಕಿ ಬೆಳೆಸಿದ ರೀತಿ, ಜಮೀನು-ತೋಟಗಳ ವಿವರ ಇತ್ಯಾದಿಗಳ ಬಗೆಗೆ ಹೇಳುತ್ತಿದ್ದರು. ಇವರು ರೈಲು ಪಾಸು ಮಾಡಿಸಿ ನೆನಪಾದಾಗಲೆಲ್ಲಾ ಊರಿಗೆ ಬಂದು ಹೋಗುತ್ತಿದ್ದರು. ಅವ್ವನ ಕೈಯ ಊಟ-ಉಪಚಾರದಲ್ಲಿ ಬಸುರಿಯಾಗಿದ್ದಾಗ ವಾಂತಿ ಇತ್ಯಾದಿಗಳಿಂದ ಸೊರಗಿ ಹೋಗಿದ್ದ ನಾನು ಮೈತುಂಬಿ ಹಿಗ್ಗಿ ಹೋಗಿದ್ದೆ. ಅತ್ತಿಗೆ ಕೆಂಪಕ್ಕ ಹಾಗು ಅವರ ಮಕ್ಕಳ ಸಹಕಾರ ಯಾವ ಸಹೋದರಿಯ ಕಡೆಯಿಂದಲೂ ದೊರೆಯದಿರುವಷ್ಟು ಸಿಕ್ಕುತ್ತಿತ್ತು. ಬೇಸರ ಹತ್ತಿರ ಸುಳಿಯಗೊಡದಂತೆ ಎಲ್ಲರೂ ನೋಡಿಕೊಳ್ಳುತ್ತಿದ್ದರು. ಬಾಣಂತನ ಮುಗಿಸಿ ಬೆಂಗಳೂರಿಗೆ ಹೊರಡುವಾಗ ತೌರಿನಿಂದ ಮಗಳನ್ನು ಕಳುಹಿಸುವ ರೀತಿಯಲ್ಲಿ ಬೀಳ್ಕೊಡಲಾಯಿತು. ಮಗುವಿಗೆ ಹೊಸಬಟ್ಟೆ ಕಿವಿಗೆ ಸ್ವಾರು, ಸೊಂಟಕ್ಕೆ ಬೆಳ್ಳಿ ಉಡದಾರ ಇತ್ಯಾದಿಗಳನ್ನು ಹಾಕಿ, ನನಗೆ ಹೊಸ ಸೀರೆ-ರವಿಕೆ ತೊಡಿಸಿ ಮಡಿಲುತುಂಬಿ ಆಶೀರ್ವಾದ ಮಾಡಿ ಕಳುಹಿಸಿಕೊಟ್ಟ ಅವ್ವ-ಅಪ್ಪನವರ ಪ್ರೀತಿ-ವಾತ್ಸಲ್ಯ ನನಗೆ ತಂದೆ-ತಾಯಿಯಿಂದ ಎಂದೂ ಸಿಗಲಿಲ್ಲವೆಂದರೆ ಉತ್ಪ್ರೇಕ್ಷೆಯಿಲ್ಲ ಅಕ್ಷರಸಹ ನಿಜ.

ಈ ರೀತಿಯಲ್ಲಿ ಬಾಣಂತನ ಮುಗಿಸಿ ಬೆಂಗಳೂರಿಗೆ ಬಂದಾಗ ವಠಾರದ ಗೆಳತಿಯರೆಲ್ಲರೂ ''ಏನ್ರಿ ಎಲ್ಲಾ ತೌರಿಗೆ ಹೋಗಿ ಬಾಣಂತನ ಮುಗಿಸಿ ಗುಂಡ್‌ಗುಂಡಾಗಿ ಬಂದ್ರೆ ನೀವು ಅತ್ತೆಮನೆಗೆ ಹೋಗಿ ಗುಂಡ್‌ಗುಂಡಾಗೆ ಒಳ್ಳೆ ಮದುವಣಗಿತ್ತಿಯಂತೆ ಆಗಿ ಬಂದಿದ್ದೀರಿ'' ಎಂಬ ಮೆಚ್ಚಿಗೆಯ ನುಡಿಗಳನ್ನಾಡಿದ್ದುಂಟು. ಮೂರು ವರ್ಷದ ಬಳಿಕ ಎರಡನೆಯ ಹೆರಿಗೆ ಸಂದರ್ಭದಲ್ಲಿ ಅವ್ವ ಅನಾರೋಗ್ಯದಿಂದ ನರಳುತ್ತಿದ್ದ ಕಾರಣ ಆ ವೇಳೆಗೆ ನನ್ನ ತಂದೆ-ತಾಯಿ, ತಮ್ಮ ಬಿಡಾರವನ್ನು ನನ್ನ ತಂದೆಯ ಸ್ವಂತ ಸ್ಥಳವಾದ ಮಂಗಳವಾಡಕ್ಕೆ ವರ್ಗಾಯಿಸಿದ್ದರಿಂದ ಅವರಿಗೆ ಪತ್ರಬರೆದು ಅಲ್ಲೇ ಬಾಣಂತನಗಳ ಏರ್ಪಾಡು ಮಾಡಲು ಕೋರಿದ್ದೆ. ಅದಕ್ಕೆ ತಂದೆಯಿಂದ ಒಪ್ಪಿಗೆಯೂ ಬಂದಿತು. ಇದರಿಂದಾಗಿ ಮದುವೆಯಾಗಿ ನಾಲ್ಕು ವರ್ಷದ ಬಳಿಕ ಇವರು ಅತ್ತೆ-ಮಾವನ ಮನೆಗೆ ಮೊದಲ ಸಲ ಬಂದದ್ದು. ಅವರು ಬೆಂಗಳೂರಿನಲ್ಲಿದ್ದಾಗ ನಾನು ಮಾತ್ರ ಅವರ ಮನೆಗೆ ಆಗಾಗ ಹೋಗಿ ಬರುತ್ತಿದ್ದೆ. ಹೀಗಾಗಿ ನನ್ನ ಮಗಳ (ಸುಷ್ಮಾ) ಬಾಣಂತನ ಮಂಗಳವಾಡದಲ್ಲಿ ಒಂದು ತಿಂಗಳ ಮಟ್ಟಿಗೆ ನಡೆಯಿತು. ತಂದೆಯವರ ಉದಾಸೀನ ಮನೋಭಾವದಿಂದ ಒಂದು ತಿಂಗಳು ಪೂರೈಸುವಷ್ಟರಲ್ಲಿ ಅಲ್ಲಿಯ ಪರಿಸ್ಥಿತಿಯನ್ನರಿತ ಇವರು, ಅಷ್ಟರಲ್ಲಿ ಅವ್ವನ ಆರೋಗ್ಯವೂ

ಸ್ವಲ್ಪ ಸುಧಾರಿಸಿದ್ದರಿಂದ, ಅಪ್ಪನಿಗೆ ಹೇಳಿ ಬಾಣಂತನದ ಉಳಿದ ಎರಡೂವರೆ ತಿಂಗಳು ಕೋಡಿಹೊಸಹಳ್ಳಿಯಲ್ಲೇ ಏರ್ಪಾಡು ಮಾಡಿ ಮಂಗಳವಾಡದಿಂದ ಕೋಡಿಹೊಸಹಳ್ಳಿಗೆ ಕರೆದೊಯ್ದುದ್ದರು, ಹೀಗೆ ನನ್ನ ಎರಡನೆಯ ಬಾಣಂತನವೂ ಅತ್ತೆಮನೆಯಲ್ಲೇ ಅಚ್ಚುಕಟ್ಟಾಗಿ ನಡೆಯಿತು.

ಕೋಡಿಹೊಸಹಳ್ಳಿಯಲ್ಲಿ ನಾನು ಹೆಚ್ಚು ಕಾಲ ಇದ್ದದ್ದು ಈ ಎರಡು ಬಾಣಂತನದ ಸಮಯದಲ್ಲೇ. ಉಳಿದಂತೆ ಹಬ್ಬ ಇತ್ಯಾದಿ ವಿಶೇಷ ಸಂದರ್ಭಗಳಲ್ಲಿ ಹೋಗಿ ಮುರ್ನಾಲ್ಕು ದಿನ ಇದ್ದು ಬಂದದ್ದೇ ಹೆಚ್ಚು. ಅವ್ವ-ಅಪ್ಪ ನನಗೆ ಎಂದೂ ಯಾವುದೇ ವಿಷಯಕ್ಕೆ ನಿಂದಿಸಿದ್ದಾಗಲೀ ಹೀಯಾಳಿಸಿದ್ದಾಗಲೀ ಇಲ್ಲ. ಇನ್ನು ಅರಿವಿಗೆ ಬಾರದೆ ಅವರಿಗೆ ನನ್ನಿಂದಲೇ ಬೇಸರ ವಾಗಿರಬಹುದಾದ ಸಂದರ್ಭಗಳು ನಡೆದಿರಬಹುದು. ಅಂತಹುಗಳನ್ನ ಅವರು ಗಣನೆಗೆ ತೆಗೆದುಕೊಳ್ಳದೆ ಮಗಳೆಂಬ ಮಮತೆಯಿಂದ ಕ್ಷಮಿಸಿ ದೊಡ್ಡತನ ತೋರಿದ್ದಾರೆ. ನಾನು ನನಗೆ ಬೇಕಾದ ತಿಂಡಿತಿನಿಸುಗಳನ್ನೆಲ್ಲಾ ಅವ್ವನ ಬಳಿ ಹೇಳಿ ಮಾಡಿಸಿಕೊಂಡು ತಿಂದದ್ದೂ ಉಂಟು. ನನ್ನ ಹಠದಿಂದ ಒಂದು ದಿನವೂ ಬೇಸರಗೊಂಡವರಲ್ಲ ನನ್ನ ಅವ್ವ ನನ್ನನ್ನು ಅಕ್ಕರೆಯ ಮಗಳಂತೆಯೇ ನಡೆಸಿಕೊಂಡರು. ಅವರು ಬದುಕಿರುವವರೆಗೂ ನಾವು ಊರಿಗೆ ಹೋದಾಗಲೆಲ್ಲ ನಮ್ಮಿಬ್ಬರನ್ನು ಒಟ್ಟಿಗೆ ಊಟಕ್ಕೆ ಕೂಡಿಸಿ ಬಡಿಸುತ್ತಿದ್ದರು. ತಾವು ಮಾತ್ರ ಎಲ್ಲರ ಊಟ ಆದಮೇಲೆ ಕಡೆಯಲ್ಲಿ ಕುಳಿತು ಮಾಡುತ್ತಿದ್ದರು. ಅವ್ವ-ಅಪ್ಪ ತಾವು ಬದುಕಿರುವವರೆಗೆ ಮಗ-ಸೊಸೆ-ಮೊಮ್ಮಕ್ಕಳ ಶ್ರೇಯಸ್ಸನ್ನೇ ಬಯಸಿದವರು. ವರದಕ್ಷಿಣೆ ದಾಹದಿಂದ ಸೊಸೆಯರನ್ನು ಜೀವಂತ ಸುಡುತ್ತಿದ್ದ ದಿನಗಳಲ್ಲಿ ಇಂತಹ ಆದರ್ಶ ಅತ್ತೆ-ಮಾವಂದಿರು ಸಿಗುವುದು ಅತ್ಯಂತ ಅಪರೂಪವೇ ಸರಿ.

ನನ್ನ ಅತ್ತೆ ಅಕ್ಷರ ಕಲಿಯದ ಮುಗ್ಧೆ. ಇತರರ ಕಷ್ಟಕ್ಕೆ ಆಗುವ, ದೇಹಿ ಎಂದು ಬಂದವರಿಗೆ ತಮಗೆ ಇಲ್ಲದೆ ಹೋದರೂ ಕೊಟ್ಟು ಸಂತೈಸುವ ಉದಾರ ಮನೋಭಾವದವರು. ಊರಿನಲ್ಲಿಅವರಿಂದಉಪಕಾರ ಪಡೆಯದವರು ಇಲ್ಲವೆಂದೇ ಹೇಳಬಹುದು. ಎಲೆ-ಅಡಿಕೆ ಹೊಗೆಸೊಪ್ಪಿನ ದಾನಧರ್ಮ ನೋಡಿ ನಾನು ''ಅವ್ವಾ ಒಂದು ಎಲೆ-ಅಡಿಕೆ ಅಂಗಡಿ ಇಟ್ಟರೆ ಹೇಗೆ'' ಎಂದು ತಮಾಷೆ ಮಾಡುತ್ತಿದ್ದೆ. ರೇಷ್ಮೆಹುಳುವಿಗೆ ಹಿಪ್ಪನೇರಳೆ ಸೊಪ್ಪು ಕೀಳಲು ಬಂದವರು, ಹುಳ ಹಣ್ಣಾದಾಗ ಆಯಲು ಬಂದವರು ಕೂಲಿಯ ಜೊತೆಗೆ ಊಟಮಾಡಿ ಎಲೆ-ಅಡಿಕೆ-ಹೊಗೆಸೊಪ್ಪು ಪಡೆದೇ ಹೋಗುತ್ತಿದ್ದರು. ನನ್ನ ಮಾವನವರು ಕೂಲಿಮಠದಲ್ಲಿ ಕಲಿತವರಾದರೂ ಅಮರಕೋಶವನ್ನು ಬಾಯಿಪಾಠಮಾಡಿ ಹೇಳುತ್ತಿದ್ದವರು. ಪುರಾಣ-ಪುಣ್ಯ ಕಥೆಗಳನ್ನು ಓದಿಕೊಂಡಿದ್ದವರು. ಸುತ್ತ ಮುತ್ತಲ ಹಳ್ಳಿಗಳಲ್ಲಿ ಜಗಳ-ಬವರ ನಡೆದಾಗ ನ್ಯಾಯ ಮಾಡಲು ಹೋಗುತ್ತಿದ್ದರು. ಆ ನ್ಯಾಯ ಪಂಚಾಯಿತಿಗಳಲ್ಲಿ ರಾಮಾಯಣ-ಮಹಾಭಾರತ ಕಥೆಗಳ ಉದಾಹರಣೆ ನೀಡಿ ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ತೀರ್ಪು ನೀಡುವುದಕ್ಕೆ ಹೆಸರಾಗಿದ್ದವರು. ಕಠೋರ ನಿಷ್ಠುರವಾದಿಗಳ ನ್ಯಾಯ ಪಕ್ಷಪಾತಿಯೂ ಆಗಿದ್ದವರು. ಅವರ ಈ ನಡೆತೆಯೇ ಮಗನಲ್ಲಿಯೂ ಬಳುವಳಿಯಾಗಿ ಬಂದಿದೆ ಎಂದು ಕಾಣುತ್ತದೆ. ಊರೊಟ್ಟಿನ ಯಾವುದೇ ಕೆಲಸಕಾರ್ಯಗಳು ನಡೆದರೂ ಮಾವನವರು ಇದ್ದೇ ಇರುತ್ತಿದ್ದರು. ಅಂತೆಯೇ ಹೆಸರಿಗೆ ಮಾತ್ರ ಪ್ರಾಥಮಿಕ ಶಾಲೆ ಇದ್ದ ಕೋಡಿಹೊಸಹಳ್ಳಿಯಲ್ಲಿ ಶಾಲಾಕಟ್ಟಡ ತಲೆ ಎತ್ತಲು

ಪ್ರಮುಖ ಕಾರಣ ಕರ್ತರಾದವರು. ಅತ್ತೆ-ಮಾವ ಇಬ್ಬರೂ ಮಗನಿಗೆ, ಮೊಮ್ಮಗಳನ್ನು ತಂದುಕೊಳ್ಳಬೇಕೆಂಬ ಹೆಬ್ಬಯಕೆ ಇಟ್ಟುಕೊಂಡಿದ್ದು, ಮೊದ-ಮೊದಲು ನಮ್ಮ ಮದುವೆಗೆ ವಿರೋಧ ತೋರಿದರೂ ಅತ್ಯಂತ ಪ್ರೀತಿಯಿಂದ ಬೆಳಸಿದ ಮಗನ ಅಚಲ ನಿರ್ಧಾರ ಹಾಗು ಆತನ ಸುಖ-ಸಂತೋಷ-ಆದರ್ಶಗಳಿಗೆ ಅಡ್ಡಿ ಬರಬಾರದೆಂದು ಉದಾರ ಮನೋಭಾವದಿಂದ ನಮ್ಮ ಮದುವೆಗೆ ಕಟ್ಟಕಡೆಗೆ ಸಮ್ಮತಿಸಿದ್ದವರು. ಖುದ್ದಾಗಿ ಬರಲಾಗದಿದ್ದರೂ ಪತ್ರ ಬರೆದು ''ದೂರದಿಂದಲೇ ಹರಸುತ್ತೇವೆ'' ಎಂದು ಶುಭಕೋರಿದ್ದವರು. ಇಂತಹ ಅತ್ತೆ-ಮಾವನವರನ್ನು ಐದಾರು ವರ್ಷಗಳ ಹಿಂದೆ ಕೇವಲ ಮೂರು ತಿಂಗಳ ಅವಧಿಯಲ್ಲಿ ಕಳೆದುಕೊಂಡು ನಾನು ತಬ್ಬಲಿಯಾದೆ. ಇಂತಹ ಪುಣ್ಯವಂತರ ಸುಪುತ್ರ ನನ್ನವರು ಎಂಬ ಹೆಮ್ಮೆ ನನ್ನದು.

ಇನ್ನು ನಮ್ಮ ದಾಂಪತ್ಯ ಜೀವನದ ಇಪ್ಪತ್ತೈದು ವರ್ಷಗಳ ಬಗೆಗೆ ಬರೆಯಲು ನನಗೆ ಗೊತ್ತುಪಡಿಸಿದ ಪುಟಮಿತಿಯು ಸಾಲದು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ. ನಾವು ಪರಸ್ಪರ ಅರಿತು ಸುಖ-ದುಃಖಗಳಲ್ಲಿ ಹಿಗ್ಗದೆ-ಕುಗ್ಗದೆ ಬದುಕು ನಡೆಸಿದ್ದೇವೆ. ಇವರು ಮೊದಲಿಂದಲೂ ಮನೆಯ ಬಗೆಗೆ ಯೋಚಿಸಿದವರಲ್ಲ. ಸದಾ-ನಾಡು-ನುಡಿ ವೃತ್ತಿ-ಸಮಾಜ ಎಂದೇ ಓಡಾಡಿಕೊಂಡಿದ್ದವರು. ಚಿಕ್ಕಂದಿನಲ್ಲಿ ತಂದೆ-ತಾಯಿ-ಅಕ್ಕಂದಿರು, ಒಬ್ಬನೇ ಮಗ ತಮ್ಮ ಎಂದು ಯಾವೊಂದು ಕೆಲಸವನ್ನೂ ಹೇಳದೆ, ಮಾಡಿಸದೆ ಬೆಳೆಸಿದವರು. ಮದುವೆಯಾದ ಬಳಿಕವೂ ಮನೆಯ ಕೆಲಸಕಾರ್ಯಗಳ ಬಗೆಗಿನ ಇವರ ಮನೋಭಾವ ಬದಲಾಗಲಿಲ್ಲ. ಪತ್ರಕರ್ತರ ಸಂಘ, ಕನ್ನಡಪರ ಚಟುವಟಿಕೆಗಳೇ ಇವರ ಆದ್ಯತೆಯ ಕ್ಷೇತ್ರವಾಯಿತು. ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಬೇರೆಡೆ ಅಲ್ಪಾವಧಿ ಕೆಲಸ ಮಾಡಲು ಮನಸ್ಸು ಮಾಡಲಿಲ್ಲ. ಬದಲಿಗೆ ಹಿರಿಯ ಮಿತ್ರರೂ ಪತ್ರಿಕಾಕ್ಷೇತ್ರದಲ್ಲಿ ಅವರಿಗೆ ಗುರುಸಮಾನರೂ ಆದ ಶ್ರೀ ಕಲ್ಲೆ ಶಿವೋತ್ತಮರಾಯರ 'ಜನಪ್ರಗತಿ'ಗೆ ಉಚಿತವಾಗಿ ಕೆಲಮಾಡುತ್ತಿದ್ದರು. ''ಹಾಸಿಗೆ ಇದ್ದಷ್ಟು ಕಾಲು ಚಾಚಬೇಕೆಂಬ'' ಗಾದೆಗೆ ಅಂಟಿಕೊಂಡು ಬಂದವರು. ಇವರಿಗಿದ್ದ ಪರಿಸ್ಥಿತಿ ಅವಕಾಶಗಳಲ್ಲಿ ಸಾಕಷ್ಟು ಹಣ ಮಾಡಬಹುದಿತ್ತು. ದುರಭ್ಯಾಸ ಕಲಿಯಬಹುದಿತ್ತು. ಆದರೆ ಇವರು ಕುಡಿತ-ಸಿಗರೇಟು ಇತ್ಯಾದಿ ದುಶ್ಚಟಗಳಿಗೆ ಬಲಿಯಾಗಲಿಲ್ಲ. ಹಾಗು ಅನ್ಯಾಯದ ಹಣಕ್ಕೆ ಎಂದೂ ಆಸೆಪಡಲಿಲ್ಲ. 'ಸಂಯುಕ್ತ ಕರ್ನಾಟಕ'ದಲ್ಲಿ ಇವರಿಗೆ ಬರುತ್ತಿದ್ದ ಸಂಬಳದಲ್ಲಿ ಊರಿಗೆ ಕಳುಹಿಸಿ, ನಮ್ಮ ಕುಟುಂಬ ನಿರ್ವಹಣೆ ಮಾಡಲು ಸಾಲದಾಗಿತ್ತು. ಸಾಲಮಾಡುವುದು ಅನಿವಾರ್ಯವಾಯಿತು. ಇಂಥ ಪರಿಸ್ಥಿತಿಯಲ್ಲಿ ನಾನೂ ದುಡಿದು ಮನೆಯ ಖರ್ಚು-ವೆಚ್ಚಗಳನ್ನು ತೂಗಿಸಿಕೊಂಡು ಹೋಗಬೇಕೆಂಬ ಮನಸ್ಸು ಮಾಡಿದೆ. ಪಿ.ಯು.ಸಿ ಮೊದಲ ವರ್ಷಕ್ಕೇ ವ್ಯಾಸಾಂಗ ಮೊಟಕುಗೊಳಿಸಿದ್ದ ನನಗೆ ಕೆಲಸವಾದರೂ ಎಲ್ಲಿ ಸಿಗಬೇಕು. ಕಡೆಗೆ ಟಿ.ಸಿ.ಎಚ್., ಕಲಿತು, ಶಿಕ್ಷಕಿಯಾಗುವುದು ಸೂಕ್ತ ಎಂಬ ನಿರ್ಧಾರಕ್ಕೆ ಬಂದೆವು.

ನಾವು ಈ ರೀತಿ ನಿರ್ಧಾರ ಮಾಡುವ ವೇಳೆಗೆ ಟಿ.ಸಿ.ಎಚ್. ತರಗತಿಗಳು ಆರಂಭವಾಗಿ ಒಂದೂವರೆ ತಿಂಗಳೇ ಆಗಿದ್ದಿತು. ಆಗ ಈ ಕೋರ್ಸಿಗೆ ಈಗಿನಷ್ಟು ಒತ್ತಡ ಇರಲಿಲ್ಲವಾದ ಕಾರಣ ತಡವಾಗಿದ್ದರೂ ಪ್ರವೇಶ ದೊರೆಯಿತು. ಎರಡು ವರ್ಷಗಳಲ್ಲೇ ಈ ಕೋರ್ಸನ್ನು ಬಹಳ ಕಷ್ಟದಲ್ಲಿ ಓದಿ ಒಳ್ಳೆಯ ಅಂಕಗಳನ್ನು ಗಳಿಸಿ ೧೯೭೭ರಲ್ಲಿ ತೇರ್ಗಡೆಯಾದೆ. ಅದೇ ವರ್ಷ

ಡಿ.ಎಲ್.ಆರ್.ಸಿ. ಮೂಲಕ ನಡೆದ ಸಂದರ್ಶನದಲ್ಲಿ ಇವರ ಮಿತ್ರರ ಸಹಕಾರದಿಂದ ಆಯ್ಕೆಗೊಂಡೆ. ೧೯೭೮ರ ಡಿಸೆಂಬರ್‌ನಲ್ಲಿ ಸರ್ಕಾರೀ ಪ್ರಾಥಮಿಕ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ನೇಮಕಗೊಂಡೆ. ಹಿಂಗದ ವ್ಯಾಸಂಗದ ಹಂಬಲದಿಂದ ಪಿ.ಯು.ಸಿ., ಬಿ.ಎ.ಗಳನ್ನು (ಬೆಂ.ವಿ.ವಿ) ಬಾಹ್ಯ ಅಭ್ಯರ್ಥಿಯಾಗಿಯೂ, ಬಿ.ಇಡಿ.ಯನ್ನು ಆರ್.ವಿ.ಶಿಕ್ಷಕರ ಸಂಜೆ ಕಾಲೇಜಿನಲ್ಲೂ ಎರಡುವರ್ಷ ಓದಿ ಪೂರೈಸಿದೆ. ನಂತರ ಇತಿಹಾಸದ ವಿಷಯದಲ್ಲಿ ಎಂ.ಎ. ಪದವಿಯನ್ನು ಗಳಿಸಿದೆ. ಅಷ್ಟೇ ಅಲ್ಲ ಚಿಕ್ಕಂದಿನಿಂದಲೂ ಇದ್ದ ಸಂಗೀತ ಕಲಿಯಬೇಕೆಂಬ ಆಸೆಯನ್ನು ಈಡೇರಿಸುವ ದಿಸೆಯಲ್ಲಿ ಶಾಸ್ತ್ರೀಯ ಸಂಗೀತ ಕಿರಿಯಪರೀಕ್ಷೆಯಲ್ಲಿ ತೇರ್ಗಡೆಹೊಂದಿದೆ. ಜೊತೆಗೆ ಇವರಿಗೆ ಚಿಕ್ಕಂದಿನಿಂದ ಪರಿಚಯವಿದ್ದ ಖ್ಯಾತ ಸುಗಮ ಸಂಗೀತಗಾರರಾದ ಶ್ರೀ ನಾರಾಯಣರಾವ್ ಮಾನೆ ಅವರಿಂದ ಸುಗಮಸಂಗೀತ ಅಭ್ಯಾಸ ಮಾಡಿದ್ದೇನೆ. ಸುಗಮ ಸಂಗೀತ ಕಾರ್ಯಕ್ರಮ ನೀಡುವಷ್ಟು ನನ್ನನ್ನು ತರಬೇತಿಗೊಳಿಸಿದ ಗುರು ಶ್ರೀ ಮಾನೆಯವರಿಗೆ ನಾನು ಚಿರಋಣಿ. ನನ್ನ ಎಲ್ಲಾ ಸಾಧನೆಗೆ, ಪ್ರೇರಣೆ ಡಾ॥ ಕಮಲಾ ಹಂಪನಾರವರೇ. ಅವರು ಚಿಕ್ಕಂದಿನಲ್ಲಿ ತೊಂದರೆಯ ನಡುವೆ ಕಷ್ಟಪಟ್ಟು ಓದಿ ಮುದೆ ಬಂದವರು. ಇಂದು ಸಾಹಿತ್ಯ ಕ್ಷೇತ್ರದಲ್ಲಿ ಉನ್ನತ ಸ್ಥಾನ ಗಳಿಸಿ ನಮ್ಮೆಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

ರಾಮಣ್ಣನವರು ರಾಜ್ಯ ಪತ್ರಕರ್ತರ ಸಂಘದ ಮುಂಚೂಣಿ ನಾಯಕರಾಗಿ, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಲಿ ಸದಸ್ಯರಾಗಿ ಸಭೆ-ಅಧಿವೇಶನಗಳಿಗಾಗಿ ದೇಶದ ಬೇರೆ ಬೇರೆ ಸ್ಥಳಗಳಿಗೆ ಹೋಗುವ ಸಂದರ್ಭ ಒದಗುತ್ತಿದ್ದವು. ಮಕ್ಕಳು ದೊಡ್ಡವರಾದ ಮೇಲೆ ಅಂತಹ ಸಂದರ್ಭ ಬಂದಾಗ ನನ್ನನ್ನೂ ಕೆಲವು ಸ್ಥಳಗಳಿಗೆ ಕರೆದೊಯ್ದು ತೋರಿಸಿದ್ದಾರೆ. ಈ ಪೈಕಿ ವೈಷ್ಣವಿ, ಕೇದಾರ, ಬದರಿ, ಹೃಷಿಕೇಶ, ಹರಿದ್ವಾರ, ಮಸ್ಸೂರಿ, ಡೆಹರಾಡೂನ್, ಜಮ್ಮು ಅಮೃತಸರ, ಮೌಂಟ್‌ಅಬು, ದೆಹಲಿ, ಆಗ್ರಾ, ಫತೇಪುರ್‌ಸಿಕ್ರಿ, ಗಾಂಧೀನಗರ, ಅಹಮದಾಬಾದ್, ನರ್ಮದಾ ಪ್ರಾಜೆಕ್ಟ್, ಮುಂಬಯಿ, ಎಲಿಫೆಂಟಾಗುಹೆ, ಮದ್ರಾಸು, ಇವು ಪ್ರಮುಖವಾದವುಗಳು.

ಇವರ ಸಾರ್ವಜನಿಕ ಚಟುವಟಿಕೆಗಳಿಗೆ ಎಂದೂ ನಾನು ಅಡ್ಡಿಯಾಗಿಲ್ಲ. ಬದಲಿಗೆ ಸಾಧ್ಯವಾದಗಲೆಲ್ಲಾ, ಸಹಕರಿಸಿದ್ದೇನೆ. ಇವರು ಅಧ್ಯಕ್ಷರಾಗಿರುವ 'ಕನ್ನಡ ಸಂಘರ್ಷ ಸಮಿತಿ'ಯ ಚಟುವಟಿಕೆಗಳಲ್ಲಿ ನಾನು ಸಹ ತೊಡಗಿಸಿಕೊಂಡಿರುವೆ. ಕನ್ನಡಪರ ನಾಯಕರನೇಕರು ತಮ್ಮ ಮಡದಿ-ಮಕ್ಕಳನ್ನು ಚಟುವಟಿಕೆಗಳಿಗೆ ಕರೆತರದೆ ಇರುವಾಗ ನಮ್ಮವರು ಮನೆಮಂದಿಯನ್ನೆಲ್ಲಾ ಕನ್ನಡಕ್ಕಾಗಿ ದುಡಿಯುವ ದೀಕ್ಷೆತೊಟ್ಟಿರುತ್ತಾರೆ. ನಾವಷ್ಟೇ ಅಲ್ಲದೆ ನಮ್ಮಿಬ್ಬರು ಮಕ್ಕಳನ್ನು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಸಂಘರ್ಷ ಸಮಿತಿಯ ಆಜೀವ ಸದಸ್ಯರನ್ನಾಗಿ ಮಾಡಿದ್ದಾರೆ. ಇತರ ಕನ್ನಡ ಹೋರಾಟಗಾರ ನಾಯಕರು ತಮ್ಮ ಮಕ್ಕಳನ್ನು ಇಂಗ್ಲೀಷ್ ಶಾಲೆಗೆ ಸೇರಿಸಿದ್ದರೆ ನಾವು ನಮ್ಮ ಮಕ್ಕಳನ್ನು ೭ನೆಯ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿಯೇ ಕಲಿಸಿದ್ದೇವೆ. ಇದೀಗ ಮಗ ಮೈಕಾನಿಕಲ್ ಡಿಪ್ಲೊಮೋ ಇಂಜಿನಿಯರ್ ಆಗಿ ಎಚ್.ಎ.ಎಲ್. ನಲ್ಲಿ ಉದ್ಯೋಗ ನಿರತನಾಗಿದ್ದಾನೆ. ಮಗಳು ಬಿ.ಎ. (ಪತ್ರಿಕೋದ್ಯಮ) ಕಲಿತು ಕಂಪ್ಯೂಟರ್ ತರಬೇತಿ ಪಡೆಯುತ್ತಿದ್ದಾಳೆ. ಹೀಗೆ ಸಾಗಿದೆ ನಮ್ಮ ಸಂಸಾರ. ನಮ್ಮವರು ಕನ್ನಡಪರ ಜನಪರ ಹೋರಾಟ-ಸಾಹಿತ್ಯ ಪರಿಷತ್ತು ಹಾಗೂ ಪರ್ತಕರ್ತರ ಸಂಘಟನೆಗಳಲ್ಲಿ ಮಾಡಿದ ಕೆಲಸಕ್ಕಾಗಿ ಮೆಚ್ಚಿ ಮಿತ್ರರು ಅಭಿನಂದನಾ ಸಮಾರಂಭ ಏರ್ಪಡಿಸಿ ನನಗೆ ಈ ಲೇಖನ ಬರೆಯಲು ಅವಕಾಶ ಕಲ್ಪಿಸಿರುವುದಕ್ಕೆ ವಂದಿಸಿ ಈ ಲೇಖನ ಮುಗಿಸುವೆ.

*

ಶತಮಾನಂ ಭವತಿ

ಕಯ್ಯಾರ ಕಿಞ್ಞಣ್ಣ ರೈ

ಶ್ರೀ ರಾಮಣ್ಣ ಕೋಡಿಹೊಸಹಳ್ಳಿ ಅವರಿಗೆ ಐವತ್ತು ವರ್ಷ ವಯಸ್ಸು ಆಯಿತು. ಅವರ ವೈವಾಹಿಕ ಜೀವನದ ಇಪ್ಪತ್ತೈದು ವರ್ಷಗಳಾದುವು ಎಂಬೀ ಸಂತಸದ ಸಂದರ್ಭ, ಅವರಿಗೆ ಅಭಿನಂದನ ಗ್ರಂಥವೊಂದನ್ನು ಸಮರ್ಪಿಸುವ ಸುವಾರ್ತೆಯನ್ನು ಕೇಳಿ ನಾನು ಅತೀವ ಹರ್ಷಿತನಾಗಿದ್ದೇನೆ. ಸಾಹಿತ್ಯಕ, ಕಲಾತ್ಮಕ, ಸಾಮಾಜಿಕ, ರಾಜಕೀಯ ಇತ್ಯಾದಿ ವಿವಿಧ ವಿಷಯಗಳಲ್ಲಿ ಪ್ರಗತಿಪರವೂ ರಚನಾತ್ಮಕವೂ ಆದ ಹಲವು ಕಾರ್ಯಕಲಾಪಗಳನ್ನು ಸ್ವಂತದಲ್ಲಿಯೂ, ಸಂಘಟನಾ ರೂಪದಲ್ಲಿಯೂ ಎಡೆಬಿಡದೆ ನಡೆಸುತ್ತಾ ಬಂದ ಶ್ರೀ ರಾಮಣ್ಣ ಕೋಡಿಹೊಸಹಳ್ಳಿಯವರಂತಹ ಯೋಗ್ಯವ್ಯಕ್ತಿಗೆ ಇಂತಹ ಸಂಭಾವನೆಯ ಉಡುಗೊರೆ ಅತ್ಯಂತ ಅರ್ಹವೇ ಆಗಿದೆ. ಇಂತಹ ಕೃತಜ್ಞತಾ ಸಮರ್ಪಣೆಯಿಂದ ಅವರಿಗೆ ನಾಡು ನುಡಿಗಳ ಬಗೆಗೆ ಇನ್ನಷ್ಟು ಉತ್ತಮೋತ್ತಮವಾದ ಕಾರ್ಯಗಳನ್ನು ಮುಂದಕ್ಕೆ ನರವೇರಿಸಲು ಪ್ರೋತ್ಸಾಹಕರವಾಗುವ ನಿಮಿತ್ತ, ಅಂತಹ ಸತ್ಕಾರ್ಯಕ್ಕೆ ಮನಸ್ಸು ಮಾಡಿದ ಅಭಿನಂದನ ಸಮಿತಿಯ ಸಕಲ ಮಹನೀಯರನ್ನು ನಾನು ಅಭಿನಂದಿಸುತ್ತೇನೆ. ಸಾರ್ವಜನಿಕ ಸೇವಾತತ್ಪರರಾದವರು, ತಾವು ಮಾಡುತ್ತಿರುವ ಕೆಲಸಗಳಿಗಾಗಿ ಯಾವುದೇ ಪ್ರತಿಫಲವನ್ನು ಅಪೇಕ್ಷಿಸುವುದಿಲ್ಲವಾದರೂ ಸಮಾಜ ಹಾಗೂ ಸಾರ್ವನಿಕರು ಅವರನ್ನು ಸರಿಯಾದ ಅರ್ಹವಾದ ರೀತಿಯಲ್ಲಿ ಪ್ರೋತ್ಸಾಹಿಸುವುದು ಕರ್ತವ್ಯವಾಗಿದೆ.

ಶ್ರೀ ರಾಮಣ್ಣ ಕೋಡಿಹೊಸಹಳ್ಳಿಯವರ ಪರಿಚಯ ನನಗೆ ಮೊದಲು ಅಪ್ರತ್ಯಕ್ಷವಾಗಿ ಆದುದು ಅವರ ಪತ್ರಿಕಾ ಲೇಖನಗಳಿಂದ. 'ಸಂಯುಕ್ತ ಕರ್ನಾಟಕ', 'ಮುಂಗಾರು' ಮೊದಲಾದ ನಾಡಿನ ಪತ್ರಿಕೆಗಳಲ್ಲಿ ಆಗಾಗ ಬರುವ ಅವರ ಲೇಖನಗಳು ಸಾಹಿತ್ಯ ಸಮಾಜ ರಾಜಕೀಯಗಳಲ್ಲಿ

ಅವರಿಗಿರುವ ಪ್ರಗತಿಪರ ವಿಚಾರಗಳನ್ನು ಪ್ರತಿಬಿಂಬಿ ಸುತ್ತಿದ್ದವು. ಜೀವನದಲ್ಲಿ ವಿವಿಧ ಲೋಕಾನುಭವಗಳನ್ನು ಸರಿಯಾಗಿ ಅರಿತುಕೊಳ್ಳಲು, ಹಾಗೆ ಅನುಭವಕ್ಕೆ ಬಂದ ವಿಷಯ ವಿಚಾರಗಳನ್ನು ಜನತೆಯ ಮುಂದೆ ನಿರ್ಧಾರಾತ್ಮಕವಾಗಿ ಮಂಡಿಸಲು ಪತ್ರಿಕೋದ್ಯಮ ಉತ್ತಮ ಮಾಧ್ಯಮವಾಗಿದೆ. ಅಲ್ಲಿ ದೊರಕುವ ತರಬೇತಿ ವಿಚಾರಶೀಲರನ್ನು ಇನ್ನಷ್ಟು ಧೀಮಂತ ರನ್ನಾಗಿಸುತ್ತದೆ. ಇಂತಹ ಒಂದು ಉತ್ತಮ ಕ್ಷೇತ್ರದ ಶ್ರದ್ಧಾಮಾರ್ಗವಾದ ಶಿಕ್ಷಣದಿಂದ ಶ್ರೀ ಕೋಡಿಹೊಸಹಳ್ಳಿಯವರ ವ್ಯಕ್ತಿತ್ವ ರೂಪುಗೊಂಡು, ಇಂದು ಸಾರ್ವಜನಿಕರಿಗೆ ಅವರ ಸತ್ಕಾರ್ಯಗಳ ಫಲ ದೊರಕುವಂತಾಗಿದೆ. ಅಂತಹ ಉತ್ತಮ ಕ್ರಿಯೆಯೊಂದಿಗೆ ಇಂದಿನ ಅವರ ವ್ಯಕ್ತಿತ್ವದ ಯೋಗ್ಯತೆ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸಿ ಸತ್ಪರಿಣಾಮನವನ್ನುಂಟು ಮಾಡಿದೆ.

ಶ್ರೀ ರಾಮಣ್ಣ ಅವರು ಈ ಹಿಂದೆಯೇ 'ಕನ್ನಡ ಸಾಹಿತ್ಯಕಲಾ ಸಂಘ', 'ಕರ್ನಾಟಕ ಸಂಯುಕ್ತರಂಗ' ಇಂತಹ ಸಂಸ್ಥೆಗಳ ಮೂಲಕ ಕನ್ನಡ ನಾಡು ನುಡಿಗಳ ಬಗ್ಗೆ ಸಕ್ರಿಯರಾಗಿ ದುಡಿದಿದ್ದರೂ ಆ ದುಡಿತದ ಹಿನ್ನೆಲೆಯಲ್ಲಿ ಇಂದು 'ಕನ್ನಡ ಸಂಘರ್ಷ ಸಮಿತಿ'ಯ ಮಾನ್ಯ ಅಧ್ಯಕ್ಷರಾಗಿ ಮಾಡುತ್ತಿರುವ ಸಾಹಿತ್ಯ ಕಲಾತ್ಮಕ ಪ್ರಗತಿಪರ ನಿರಂತರ ಚಟುವಟಿಕೆ ಹೆಚ್ಚು ಗಣನೀಯವಾಗಿದೆ. ದಾಕ್ಷಿಣಾತ್ಯರು ಸಾಮಾನ್ಯತಃ ಆರಂಭ ಶೂರರು ಎಂಬ ಮಾತಿದೆ. ಕಾರಣ, ಅತ್ಯುತ್ಸಾಹದಿಂದ ತೊಡಗಿದ ಕಾರ್ಯ ಕೆಲವೇ ಸಮಯದಲ್ಲಿ ನಿಂತು ಹೋಗುವುದೇ ಹೆಚ್ಚಿನ ಅನುಭವ. ಆದರೆ ಶ್ರೀ ಕೋಡಿಹೊಸಹಳ್ಳಿ ತಮ್ಮ ಶೂರತ್ವವನ್ನು ಆರಂಭದಲ್ಲಿ ಎಂತೋ ಅಂತೆ ಇಂದಿಗೂ ಚೆನ್ನಾಗಿ ಮುಂದುವರಿಸಿಕೊಂಡು ಸಮರ್ಪಕವಾಗಿ ನಡೆಸುತ್ತಿದ್ದಾರೆ. ಹೆಚ್ಚಾಗಿ, ತಿಂಗಳಿಗೆ ಒಂದರಂತೆಯಾದರೂ ಸಂಘರ್ಷ ಸಮಿತಿ ವಿವಿಧ ಕಾರ್ಯಕ್ರಮಗಳಿಂದ ಕೂಡಿದ ಸಮಾರಂಭವನ್ನು ಹಲಗಾಲದಿಂದ ಮಾಡುತ್ತಾ ಬರುತ್ತಿರುವುದು ಆ ಸಂಘದ ನೇತಾರರಾದ ಶ್ರೀ ರಾಮಣ್ಣನವರ ಹಿರಿಯ ಧುರೀಣತೆಯೂ ಆಗಿದೆ.

ಈ ಕೆಲಸ ಇನ್ನಷ್ಟು ಯಶಸ್ವಿಯಾಗಿ ಮುಂದುವರಿಯಬೇಕು. ಇಂದು ನಮ್ಮ ನಾಡಿನ ಸಾಹಿತ್ಯ, ಕಲೆ, ಸಮಾಜ, ರಾಜಕೀಯ ಎಲ್ಲದರಲ್ಲಿಯೂ ಹಲವಾರು ಅಪ್ರಾಗತಿಕ ವಿಚಾರಗಳ ಕೆಸರು ತುಂಬಿಹೋಗಿದೆ. ಈ ಕೊಳೆಯನ್ನು ಸಮರ್ಥವಾಗಿ ತೊಳೆದು ನಿರ್ಮಲಗೊಳಿಸುವುದು ಧೀಮಂತಕಾರ್ಯಕರ್ತರ ಕರ್ತವ್ಯ. ಕನ್ನಡ ಸಂಘರ್ಷ ಸಮಿತಿಯ ಆಮಂತ್ರಣ ಪತ್ರಗಳು, ಕಾರ್ಯಕ್ರಮಗಳ ಸಮಾರಂಭಗಳ ಕರೆಯೋಲೆಗಳು ನನಗೆ ಆಗಾಗ ಬರುತ್ತಾ ಇವೆ; ಪ್ರತಿಯೊಂದು ಆಮಂತ್ರಣ ಪತ್ರಿಕೆಯಲ್ಲಿಯೂ ನವೀನವೂ ಪ್ರಗತಿಪರವೂ ಆದ ವಿಚಾರ ವಿಮರ್ಶೆಗಳಲ್ಲದೆ ಸಂಗೀತ ಕಲೆಗಳ ಸುಂದರ ಸುಗಮ ಸಮಾವೇಶವೂ ಕೂಡಿರುತ್ತದೆ. ಅದನ್ನು ಓದಿ ಅರಿತುಕೊಳ್ಳುವುದೇ ಒಂದು ಶಿಕ್ಷಣವೆಂಬಂತೆ ನನ್ನಲ್ಲಿ ಉತ್ಸಾಹ ಮೂಡಿಸುತ್ತದೆ.

ಶ್ರೀ ರಾಮಣ್ಣ ಕೋಡಿಹೊಸಹಳ್ಳಿಯವರು ಇಂದು ಬೆಂಗಳೂರು ನಗರ ಜಿಲ್ಲಾ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದಾರೆ. ಈ ಹಿಂದೆಯೇ ಪರಿಷತ್ತಿನ ಮುಖವಾಣಿ 'ಕನ್ನಡ ನುಡಿ'ಯ ಸಂಪಾದಕರಾಗಿಯೂ ಒಳ್ಳೆಯ ಕೆಲಸಮಾಡಿದ್ದಾರೆ. 'ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕವೂ ಶ್ರೀಯುತರು ನಾಡು ನುಡಿಗಳ ಕುರಿತು ಶ್ರದ್ಧಾನ್ವಿತರಾಗಿ ದುಡಿಯುತ್ತಿದ್ದಾರೆ. ಆ ಕುರಿತು ಹೋರಾಟವನ್ನು ಮಾಡುತ್ತಿದ್ದಾರೆ. ಶ್ರೀಯುತರು ಯಾವ ಸಂಘ

ಸಂಸ್ಥೆಗಳಲ್ಲೇ ಇರಲಿ, ಜನತೆಯ ಏಳಿಗೆಗಾಗಿ ಸಮರ್ಪಣಭಾವದಿಂದ ಸತ್ಕಾರ್ಯ ಮಾಡುತ್ತಾ ಇರುವುದು ಅವರ ವಿಶೇಷ ವ್ಯಕ್ತಿತ್ವವಾಗಿದೆ; ಯೋಗ್ಯತೆಯೂ ಎನಿಸಿದೆ.

ಹೀಗೆ ಇಪ್ಪತ್ತೈದರ ಯುವಕರ ಶಕ್ತಿ ಉತ್ಸಾಹಗಳಿಂದ ದುಡಿಯುತ್ತಾ ಇರುವ, ನಾಡುನುಡಿಗಳ ಸೇವೆಯ ದೀಕ್ಷಾವಂತರಾದ ಶ್ರೀ ರಾಮಣ್ಣ ಕೋಡಿಹೊಸಹಳ್ಳಿಯವರಿಗೆ ಐವತ್ತು ವರ್ಷವಾಯಿತು ಎಂದು ಕೇಳಿದಾಗ ಒಮ್ಮೆ ಆಶ್ಚರ್ಯವಾಯಿತು. ಇನ್ನೂ ಅವರಿಗೆ ಅಷ್ಟು ವರ್ಷವಯಸ್ಸಿನಂತೆ ನನಗೆ ಗೋಚರಿಸುವುದಿಲ್ಲ. ಅವರ ಚೈತನ್ಯ ಧೀರಯುವಕರದು. ಈ ಉತ್ಸಾಹ ನೂರುವರ್ಷಕ್ಕೂ ಮೀರಿ ನೆಲೆ ನಿಲ್ಲಲಿ ಎಂದು ಹಾರೈಸುತ್ತೇನೆ.

‘ಕುರ್ವನ್ನೇವೇಹ ಕರ್ಮಾಣಿ ಜಿಜೀವಿತೇತ್ ಶತಂ ನಮಾಃ’ ಎಂಬುದು ಉಪನಿಷತ್‌ವಾಣಿ ತಾನು ಕೈಗೆತ್ತಿಕೊಂಡ ಕಾರ್ಯಗಳನ್ನು ನಿರಂತರ ಮಾಡುತ್ತಾ ಸಮೃದ್ಧವಾಗಿ ನೂರು ವರ್ಷ ಬದುಕಬೇಕು ಎಂಬುದು ಆ ಮಂತ್ರದ ಅರ್ಥ. ಇದು ನಮ್ಮ ಭಾರತೀಯರ ಅಧ್ಯಾತ್ಮದ ಉತ್ತಮ ಸಂಸ್ಕೃತಿಯಾಗಿದೆ. ಮನುಷ್ಯ ಜೀವನ ಎಲ್ಲ ಮಾಯೆ-ನಿರರ್ಥಕ ಎಂಬುದು ನಿಜವಾದ ಭಾರತೀಯ ಸಂಸ್ಕೃತಿಯನ್ನು ತಿಳಿಯದ ಪುರೋಹಿತಶಾಹಿಯ ತಪ್ಪುತಿಳುವಳಿಕೆಯ ಪ್ರಚಾರ. ನೂರವರ್ಷ ಬದುಕಬೇಕೆಂಬುದು ಮಾತ್ರವಲ್ಲ ಸಮೃದ್ಧವಾಗಿ ಬದುಕಬೇಕೆಂದೇ ಆರ್ಷವಾಣಿ ಸಾರುತ್ತದೆ. ಅಂತಹ ಸಮೃದ್ಧವಾದ ನೂರು ವರ್ಷದ ಬಾಳುವೆ ಶ್ರೀ ರಾಮಣ್ಣ ಕೋಡಿಹೊಸಹಳ್ಳಿಯವರದು ಆಗಬೇಕು, ಆಗುತ್ತದೆ. ‘ಜೀವೇಮೀಶರದಃ ಶತಂ ಪಶ್ಯಾಮೀ ಶರದ ಃ ಶತಂ ಮೋದಾಮೀಶರದಃ ಶತಂ-’ ಇಂತಹದೇ ಶುಭವಾಣಿ ನಮ್ಮ ದ್ರಷ್ಟಾರರದು.

‘ಶತಮಾನಂಭವತಿ ಶತಾಯು ಪುರುಷಃ’

ಶ್ರೀ ರಾಮಣ್ಣ ಕೋಡಿಹೊಸಹಳ್ಳಿಯವರ ಜೀವನವೂ ‘ಶತಮಾನಂಭವತಿ’ ಇದು ನನ್ನ ಹರಕೆ-ಹಾರೈಕೆ ಆಗಿದೆ.

*

ಆದರ್ಶಮಯ ವ್ಯಕ್ತಿತ್ವದ ಅಪರೂಪದ ಪತ್ರಕರ್ತ

ವಡ್ಡರ್ಸೆ ರಘುರಾಮಶೆಟ್ಟಿ

ನಾನು ಡೆಕ್ಕನ್ ಹೆರಾಲ್ಡ್ ದೈನಿಕದಲ್ಲಿ ವರದಿಗಾರನಾಗಿ ಕೆಲಸ ಮಾಡುತ್ತಿದ್ದ ದಿನಗಳವು. ಸಂಯುಕ್ತ ಕರ್ನಾಟಕ ಪತ್ರಿಕೆಗೆ ರಾಮಣ್ಣ ಎಂಬ ಯುವ ಪತ್ರಕರ್ತ ಸೇರಿದ್ದಾರೆ. ಆತ ಯಾರ ಮುಲಾಜಿಗೂ ಒಳಗಾಗದವರು. ನಡೆ-ನುಡಿ ಶುದ್ಧವಾಗಿದೆ. ಆದರೆ ಯಾರ ಜೊತೆಯೂ ಹೊಂದಿಕೊಳ್ಳುವುದು ಕಷ್ಟ ಎಂಬಿತ್ಯಾದಿಯಾಗಿ ಗೆಳೆಯರು ಹೇಳುತ್ತಿದ್ದರು. ಆಗ ರಾಮಣ್ಣನನ್ನು ನೋಡಬೇಕೆಂಬ ಕೂತೂಹಲ ನನ್ನಲ್ಲಿ ಉಂಟಾಯಿತು.

ಬಹುಶಃ ೧೯೭೩ ಎಂದು ಕಾಣುತ್ತೆ. 'ಮೈಸೂರು ಪತ್ರಕರ್ತರ ಸಹಕಾರ ಸಂಘ'ದ ಚುನಾವಣೆಯ ಸಂದರ್ಭ. ರಾಮಣ್ಣನ ಪ್ರಥಮ ಭೇಟಿ ಆಯಿತು. ಆತ ಆ ಸಂಘದ ನಿರ್ದೇಶಕರ ಸ್ಥಾನಕ್ಕೆ ಓರ್ವ ಸ್ಪರ್ಧಿಯಾಗಿದ್ದರು. ಆತ ಪತ್ರಕರ್ತ ಕಲ್ಲೆ ಶಿವೋತ್ತಮರಾವ್ ಅವರಿಗೆ ಬಹಳ ಹತ್ತಿರದವರಾಗಿದ್ದರು. ಕಲ್ಲೆಯವರು ಆತನನ್ನು ವಿಧಾನಸೌಧದ 'ಪ್ರೆಸ್ ರೂಮಿ'ಗೆ ಕರೆತಂದು ನನಗೆ ಪರಿಚಯಿಸಿ ಪ್ರಜಾವಾಣಿ-ಡೆಕ್ಕನ್‌ಹೆರಾಲ್ಡ್ ಪತ್ರಕರ್ತರಿಗೆ ಹೇಳಿ ಆತನಿಗೆ ಮತ ದೊರಕಿಸಲು ಕೇಳಿಕೊಂಡರು. ಅದರಂತೆ ಅವರನ್ನು ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್‌ಗೆ ಬರಮಾಡಿಕೊಂಡು ಎಲ್ಲರಿಗೂ ಪರಿಚಯಿಸಿಕೊಟ್ಟಿದ್ದೆ. ಆ ಸಲ ರಾಮಣ್ಣ ಅವರು ಸಹಕಾರ ಸಂಘದ ನಿರ್ದೇಶಕನಾಗಿ ಗೆದ್ದುದಷ್ಟೇ ಅಲ್ಲ, ಖಜಾಂಚಿ ಯಾಗಿಯೂ ಆಯ್ಕೆಗೊಂಡು ಕಾರ್ಯ ನಿರ್ವಹಿಸಿದರು. ಸಂಯುಕ್ತ ಕರ್ನಾಟಕದ ಪತ್ರಕರ್ತರೊಬ್ಬರು ಸಹಕಾರ .ಸಂಘದ ನಿರ್ದೇಶಕರಾಗಿ ಚುನಾವಣೆಯಲ್ಲಿ ಆಯ್ಕೆಗೊಂಡ ಮೊಟ್ಟ ಮೊದಲಿಗರೂ ಅವರಾದರು. ಅದುವರೆಗೆ ಸಂಯುಕ್ತ ಕರ್ನಾಟಕದ ಪರವಾಗಿ ಪ್ರತಿನಿಧಿಸುತ್ತಿದ್ದ ನಿರ್ದೇಶಕರೆಲ್ಲರೂ ಕೇವಲ ನಾಮಕರಣ ಹೊಂದುತ್ತಿದ್ದವರೇ ಆಗಿದ್ದರು.

ವೃತ್ತಪತ್ರಿಕಾ ಕ್ಷೇತ್ರದಲ್ಲಿ ಪುರೋಹಿತಶಾಹಿ ಜನವರ್ಗ ತಮ್ಮ ಕಪಟ ಕುಟಿಲತೆಯಿಂದ ಅವಕಾಶವಾದಿತನವನ್ನು ಮೆರೆದು ಬೀಗುತ್ತಿದ್ದರು. ಬ್ರಾಹ್ಮಣ-ಶೂದ್ರರೆಂಬ ಭೇದವೆಣಿಸಿ ತಮ್ಮ ನೀಚ ಸ್ವಭಾವದ ಪ್ರದರ್ಶನವನ್ನು ನಿರ್ಲಜ್ಜೆಯಿಂದ ಮಾಡುತ್ತಿದ್ದರು. ಪತ್ರಕರ್ತರ ವೃತ್ತಿ ಹಾಗೂ ಕಾರ್ಮಿಕ ಸಂಘಟನೆಯಾದ 'ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ'ದ ಪರಿಸ್ಥಿತಿಯೂ ಅದೇ ಆಗಿತ್ತು. ಇದನ್ನೆಲ್ಲ ಬಯಲಿಗೆಳೆಯಬೇಕೆಂಬ ಬಯಕೆ ನನ್ನಲ್ಲಿ ಮನೆಮಾಡಿತು. ಅದೇ ಸಮಯ ೧೯೭೪ರ ಸಾಲಿನ ಪತ್ರಕರ್ತರ ಸಂಘದ ಚುನಾವಣೆ ಬಂದಿತು. ಎಡಪಂಥೀಯ ಧೋರಣೆಯನ್ನು ಮೈಗೂಡಿಸಿಕೊಂಡಿದ್ದ ಪ್ರಜಾವಾಣಿಯಲ್ಲಿ ಗ್ರಾಮಾಂತರ ಸುದ್ದಿ ವಿಭಾಗದ ಮುಖ್ಯಸ್ಥರಾಗಿದ್ದ ಎಚ್.ಎ. ಮುನಿಯಪ್ಪ ಅವರ ನೇತೃತ್ವದಲ್ಲಿ ಸಂಘವನ್ನು ವಶಕ್ಕೆ ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿದೆವು. ಮುನಿಯಪ್ಪ ಹೆಸರಿಗೆ ತಕ್ಕಂತೆ ಬೇಗ ಮುನಿಯುತ್ತಿದ್ದರು. (ಈಗ ಅವರು ಕಾಣೆಯಾಗಿದ್ದಾರೆ. ಜೀವಂತವಾಗಿದ್ದಾರೋ ಏನು ಎಂಬುದು ತಿಳಿಯದು. ನಿರುದ್ಯೋಗಿ ಪತ್ರಕರ್ತರು ಹಾಗೂ ಪತ್ರಿಕಾ ನೌಕರರ ಪುನರುಜ್ಜೀವನದ ಗುರಿಹೊತ್ತು ಸಾಲ-ಸೋಲ ಮಾಡಿ ಕಟ್ಟಿದ 'ಹೊಸಹಾದಿ' ಸಂಸ್ಥೆಯ ನೆಚ್ಚಿದ ಗೆಳೆಯರಿಂದ ಹಾದಿತಪ್ಪಿ, ಸಾಲ ನೀಡಿದ ಕೆ.ಎಸ್.ಎಫ್.ಸಿ. ಸಂಸ್ಥೆಯು ಯಂತ್ರ ಸಾಮಗ್ರಿಗಳನ್ನು ಬಾಕಿವಸೂಲಿಗಾಗಿ ಹರಾಜು ಮಾಡುವ ಹಂತ ತಲುಪಿದಾಗ ತಲೆ ಮರೆಸಿಕೊಂಡು ಹೋದವರು ಏನಾಗಿದ್ದಾರೆ ಎಂದು ತಿಳಿಯದಾಗಿದೆ.) ಆ ಸಲ ಸಂಘದ ಅಧ್ಯಕ್ಷ ಸ್ಥಾನಕ್ಕೆ ಮುನಿಯಪ್ಪ, ಪ್ರಧಾನಕಾರ್ಯದರ್ಶಿ ಸ್ಥಾನಕ್ಕೆ ನಾನು ಹಾಗೂ ಖಜಾಂಚಿ ಸ್ಥಾನಕ್ಕೆ ರಾಮಣ್ಣ ಸ್ಪರ್ಧಿಸಿ ಗೆದ್ದೆವು. ಆಗ ರಾಮಣ್ಣ ನನಗೆ ಬಹಳ ಹತ್ತಿರವಾದರು. ಅವರ ಸ್ವಭಾವದ ಪರಿಚಯವಾದದ್ದು, ಆತ್ಮೀಯತೆ ಬೆಳೆದದ್ದೂ ಆಗಲೇ.

೧೯೭೫ರಲ್ಲಿ ನಾನು ಉಪಾಧ್ಯಕ್ಷನಾದೆ. ಆ ನಂತರ ರಾಷ್ಟ್ರೀಯ ಮಂಡಳಿ ಸದಸ್ಯನಾದೆ. ೧೯೭೫ ಮತ್ತು ೧೯೭೬ ಎರಡೂ ವರ್ಷಗಳು ಡೆಕ್ಕನ್ ಹೆರಾಲ್ಡ್‌ನಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ಎಸ್.ಜಿ. ಮೈಸೂರುಮಠ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಮುನಿಯಪ್ಪ ಮತ್ತು ರಾಮಣ್ಣ ಇಬ್ಬರೂ ಅಧ್ಯಕ್ಷ ಮತ್ತು ಖಜಾಂಚಿಯಾಗಿಯೇ ಮುಂದುವರಿದಿದ್ದರು. ಕನ್ನಡ ಪ್ರಭಾದಲ್ಲಿ ಪ್ರಧಾನ ಉಪ ಸಂಪಾದಕರಾಗಿದ್ದ, ಕಾರ್ಮಿಕ ಸಂಘಟನೆಯಲ್ಲಿ ಆಸಕ್ತಿ ಹೊಂದಿದ್ದ ರಂಗನಾಥ್ ಎಂಬುವರನ್ನು (ಈಗ ಅವರೂ ಇಲ್ಲ) ನಾನು ಸಂಘಕ್ಕೆ ಕರೆತಂದು ಉಪಾಧ್ಯಕ್ಷನನ್ನಾಗಿ ಮಾಡಿಸಿದ್ದೆ. ಆತ ಮುನಿಯಪ್ಪ ಮತ್ತು ಮೈಸೂರುಮಠ, ಇಬ್ಬರಿಗೂ ದಬಾವಣೆ ಮಾಡಿಕೊಂಡು ಸಂಘವನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳುವ ಪ್ರಯತ್ನ ನಡೆಸಿದ್ದ. ಆಗ ಕನ್ನಡಪ್ರಭಾದ ಕೆಲ ಗೆಳೆಯರು ರಂಗನಾಥ್ ಪ್ರಭಾವವನ್ನು ಸಂಘದಿಂದ ಹಿಮ್ಮೆಟ್ಟಿಸಲು ನನ್ನ ಅಧ್ಯಕ್ಷತೆಯಲ್ಲಿ ಸಂಘದ ಆಡಳಿತ ಸೂತ್ರ ಹಿಡಿದುಕೊಳ್ಳಬಯಸಿದರು. ನಾನು ಅದಕ್ಕೆ ಸಮ್ಮತಿಸಿದ್ದೆ. ನಾನು ತುರ್ತಾಗಿ ಊರಿಗೆ ಹೋಗಬೇಕಾಗಿದ್ದುದರಿಂದ ಅಧ್ಯಕ್ಷ, ಸ್ಥಾನದ ನಾಮಪತ್ರ ಭರ್ತಿಮಾಡಿ ಕನ್ನಡಪ್ರಭದ ಗೆಳೆಯರೊಬ್ಬರ ಬಳಿಕೊಟ್ಟು ಎಲ್ಲಾ ಸ್ಥಾನಗಳಿಗೂ ನಮಗೆ ಹೊಂದಿಕೊಳ್ಳುವವರಿಂದ ನಾಮಪತ್ರಗಳನ್ನು ಸಲ್ಲಿಸಲು ಸೂಚಿಸಿ ಹೋಗಿದ್ದೆ. ಅದರಂತೆ ಎಲ್ಲ ಸ್ಥಾನಗಳಿಗೂ ಅವರು ನಾಮಪತ್ರ ಭರ್ತಿ ಮಾಡಿಸಿ ಸಕಾಲಕ್ಕೆ ಸಲ್ಲಿಸಿದ್ದರು. ಖಜಾಂಚಿ ಸ್ಥಾನಕ್ಕೆ ಆಗ ಡೆಕ್ಕನ್ ಹೆರಾಲ್ಡ್‌ನಲ್ಲಿ ವರದಿಗಾರರಾಗಿದ್ದ ಸಿ.ಟಿ. ಜೋಶಿ ಅವರಿಂದ ನಾಮಪತ್ರವನ್ನು ಹಾಕಿಸಿದ್ದರು. ಮೂರು ವರ್ಷ ಖಜಾಂಚಿಯಾಗಿದ್ದ ರಾಮಣ್ಣನವರೂ ಮತ್ತೆ ಉಮೇದುವಾರಿಕೆ

ಸಲ್ಲಿಸಿದ್ದರು. ನಾಮಪತ್ರ ಪರಿಶೀಲನೆ ಕಾಲಕ್ಕೆ ತಾಂತ್ರಿಕ ಕಾರಣದ ಮೇಲೆ ಜೋಶಿ ಅವರ ಉಮೇದುವಾರಿಕೆ ತಿರಸ್ಕೃತಗೊಂಡಿತ್ತು. ರಾಮಣ್ಣ ಅವಿರೋಧವಾಗಿ ಆಯ್ಕೆಗೊಂಡಿದ್ದರು. ಅವರಂತೆ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಹುದ್ದೆಗಳಿಗೆ ಯಾರೊಬ್ಬರದೂ ನಾಮಪತ್ರವಿರದಿದ್ದ ಕಾರಣ ನಾನು ಅಧ್ಯಕ್ಷನಾಗಿ, ಸಿ. ಸೀತಾರಾಮ್ ಪ್ರಧಾನ ಕಾರ್ಯದರ್ಶಿಯಾಗಿ ಟಿ.ಜಿ. ಅಶ್ವತ್ಥನಾರಾಯಣ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಗೊಂಡಿದ್ದೆವು. ಉಪಾಧ್ಯಕ್ಷ ಸ್ಥಾನಕ್ಕೆ ಮಾತ್ರ ಸ್ಪರ್ಧೆಯಿತ್ತು. ಅವಿರೋಧವಾಗಿ ಆಯ್ಕೆಗೊಂಡಿದ್ದರೂ ರಾಮಣ್ಣ ನನ್ನ ಮೇಲಿನ ಕೋಪದಿಂದ ನಾಮಪತ್ರವನ್ನು ಹಿಂತೆಗೆದುಕೊಂಡಿದ್ದರು. ನಾನು ಅವರಿಗೆ ಆತ್ಮೀಯನಾಗಿದ್ದರೂ, ಅವರು ಮುಂದುವರಿಯಲು ಇಷ್ಟವಿದೆಯೇ ಇಲ್ಲವೇ ಎಂದು ವಿಚಾರಿಸದೇ ಸಿ.ಟಿ. ಜೋಶಿಯಿಂದ ನಾಮಪತ್ರ ಹಾಕಿಸಿದ್ದುದು ಅವರ ಕೋಪಕ್ಕೆ ಕಾರಣವಾಗಿತ್ತು. ಹೀಗಾಗಿ ಖಜಾಂಚಿ ಸ್ಥಾನ ಉಮೇದುವಾರ ರಹಿತವಾಗಿ ತೆರವಾಗಿಯೇ ಉಳಿಯಿತು.

ಊರಿನಿಂದ ವಾಪಸಾದವನೇ ವಿಚಾರ ತಿಳಿದು ಸಂಘದ ಬಳಿಗೆ ಹೋದ ನಾನು, ರಾಮಣ್ಣನನ್ನು ಒಂಟಿಯಾಗಿ ಡಿ.ಸಿ.ಕ್ಯಾಂಟೀನ್‌ಗೆ ಕಾಫಿಗೆಂದು ಕರೆದೊಯ್ದು ''ಯಾಕೆ ಹೀಗೆ ಮಾಡಿದಿರಿ'' ಎಂದು ಪ್ರಶ್ನಿಸಿದೆ. ಅವರು ''ನಿಮಗೆ ಅನುಕೂಲವಾಗುವ ಒಬ್ಬರನ್ನು ಖಜಾಂಚಿಯನ್ನಾಗಿ ಸರ್ವಸದಸ್ಯರ ಸಭೆಯಲ್ಲಿ ಆಯ್ಕೆಮಾಡಿಕೊಳ್ಳಲಿ'' ಎಂದು ತುಸು ಕೋಪದ ಧ್ವನಿಯಲ್ಲಿಯೇ ಉತ್ತರಿಸಿದರು. ನಾನು ತುರ್ತಾಗಿ ಊರಿಗೆ ಹೋಗಬೇಕಾಗಿ ಬಂದ ಪರಿಸ್ಥಿತಿ ಹಾಗೂ ಜವಾಬ್ದಾರಿ ವಹಿಸಿದವರಿಗೆ ಅವರ ಪರಿಚಯವಿಲ್ಲದೆ ಹೋಗಿದ್ದುದು ಇತ್ಯಾದಿ ವಸ್ತುಸ್ಥಿತಿ ವಿವರಿಸಿದ ಬಳಿಕ ರಾಮಣ್ಣನಿಗೆ ಸಮಾಧಾನವಾಯಿತು. ನನ್ನ ಮೇಲಿನ ಕೋಪ ತಗ್ಗಿತು. ಮುಂದೆ ಸರ್ವ ಸದಸ್ಯರ ಸಭೆಯಲ್ಲಿ ರಾಮಣ್ಣನವರೇ ಸರ್ವಾನುಮತದಿಂದ ಖಜಾಂಚಿಯಾಗಿ ಆಯ್ಕೆಗೊಂಡರು. ಇದು ಖಜಾಂಚಿಯಾಗಿ ಅವರು ಅಚ್ಚುಕಟ್ಟಾಗಿ ಲೆಕ್ಕವಿಡುತ್ತಿದ್ದುದರ ದ್ಯೋತಕ.

೧೯೭೭ರಲ್ಲಿ ನಾನು ಅಧ್ಯಕ್ಷನಾಗಿದ್ದಾಗ ಒಂದೇ ವರ್ಷದಲ್ಲಿ ರಾಜ್ಯಮಟ್ಟದ ಎರಡು ಸಮ್ಮೇಳನಗಳನ್ನು ಮಂಗಳೂರು ಹಾಗೂ ಶಿವಮೊಗ್ಗಗಳಲ್ಲಿ ಯಶಸ್ವಿಯಾಗಿ ನಡೆಸಿದೆವು. ಸರಕಾರದಿಂದ ಈ ಸಮ್ಮೇಳನಗಳಿಗಾಗಿ ಸಾಕಷ್ಟು ಹಣ ತಂದೆವು.ಹೀಗೆ ಬಂದ ಹಣವನ್ನು ಸಮರ್ಪಕ ರೀತಿಯಲ್ಲಿ ರಾಮಣ್ಣ ನಿರ್ವಹಿಸಿದರು. ಹಣಕಾಸಿನ ವಿಷಯದಲ್ಲಿ ನನಗೆ ಒಂದು ದೌರ್ಬಲ್ಯವಿದೆ. ನನ್ನ ಇಡೀ ಜೀವನದಲ್ಲಿ ಬ್ಯಾಂಕು ಖಾತೆಯನ್ನು ತೆರೆದು ನಿರ್ವಹಿಸಿದವನಲ್ಲ. ಇದನ್ನರಿತಿದ್ದ ರಾಮಣ್ಣ ಸಂಘದ ಹಣಕಾಸಿನ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ತಾವೇ ನೋಡಿಕೊಳ್ಳುತ್ತಿದ್ದರು. ಅವರ ಹಣಕಾಸು ನಿರ್ವಹಣೆ ಹಾಗೂ ಲೆಕ್ಕದ ಅಚ್ಚುಕಟ್ಟುತನದಿಂದಾಗಿ ಯಾರಿಗೂ ಚಕಾರವೆತ್ತಲು ಅವಕಾಶವಿರಲಿಲ್ಲ. ಇದರಿಂದಾಗಿ ಆಗ ನನಗೂ ಒಳ್ಳೆಯ ಹೆಸರು ಬಂದಿತು.

ರಾಮಣ್ಣನ ಪ್ರಾಮಾಣಿಕತನ, ನಿಷ್ಠುರ ಸ್ವಭಾವ ಹಾಗೂ ಒಂದು ಸಂಸ್ಥೆಯನ್ನು ಕಟ್ಟಿಬೆಳೆಸುವಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದಕ್ಕೆ ಒಂದು ಘಟನೆ ನೆನಪಾಗುತ್ತದೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಸರ್ಕಾರ ಒದಗಿಸಿರುವ ಕಟ್ಟಡ ಸಾಲದು. 'ಪತ್ರಿಕಾ ಭವನ'ವೆಂಬ ಹೆಸರಿನಲ್ಲಿ ಕಟ್ಟಡವೊಂದನ್ನು ಕಟ್ಟಬೇಕು ಎಂಬ ಆಲೋಚನೆ ಹೊಳೆಯಿತು.

ಅದಕ್ಕೆ ಅಪಾರ ಹಣದ ಅವಶ್ಯಕತೆ ಇದ್ದುದರಿಂದ, ಸಂಗ್ರಹಣೆಗೆ ಮಾರ್ಗಗಳನ್ನು ಯೋಚಿಸತೊಡಗಿದೆವು. ಕೆಲವರು ಸಿನಿಮಾ ನಟ-ನಟಿಯರನ್ನು ಕರೆಸಿ 'ರಸಸಂಜೆ' ಕಾರ್ಯಕ್ರಮ ಮಾಡಬೇಕೆಂಬ ಸಲಹೆಯಿತ್ತರು. ಇದನ್ನು ರಾಮಣ್ಣ ವಿರೋಧಿಸಿದರೂ ನಾನು ದುರ್ಬಲ ಮನಸ್ಸಿನಿಂದ ಒಪ್ಪಿಗೆಯನ್ನು ಸೂಚಿಸಿದೆ. ಕಾರ್ಯಕ್ರಮವನ್ನು 'ಕಂಠೀರವ ಕ್ರೀಡಾಂಗಣ'ದಲ್ಲಿ ವ್ಯವಸ್ಥೆ ಮಾಡುವ ನಿಶ್ಚಯವಾಯಿತು. ಸಿನಿಮಾ ಪತ್ರಕರ್ತರಾಗಿ ನಟ-ನಟಿಯರಿಗೆ ಹತ್ತಿರವಿದ್ದ ವಿ.ಎನ್ ಸುಬ್ಬರಾವ್ ಮತ್ತು ಟಿ.ಜಿ. ಅಶ್ವತ್ಥನಾರಾಯಣ ಇಬ್ಬರೂ "ಮದರಾಸಿಗೆ ಹೋಗಿ ಕಾರ್ಯಕ್ರಮಕ್ಕೆ ನಟ-ನಟಿಯರನ್ನು ಗೊತ್ತುಪಡಿಸಿ ಬರುತ್ತೇವೆ. ಖರ್ಚಿಗೆ ನಾಲ್ಕು ಸಾವಿರ ರೂಪಾಯಿಗಳನ್ನು ಕೊಡಿ'' ಎಂದು ಕೇಳಿದರು. ನಾನು ಅಧ್ಯಕ್ಷನಾಗಿ ಚೆಕ್ಕಿಗೆ ಸಹಿಮಾಡಿದೆ. ರಾಮಣ್ಣ ಅಲ್ಲೇ ಇದ್ದರು. ಅವರ ಸಹಿಗೆ ಚೆಕ್ಕು ಪುಸ್ತಕ ಮುಂದಿಟ್ಟೆ. ಅವರಿಗೆ ಕೋಪ ಬಂದಿತ್ತು. "ಸಂಘದ ಹಣ ಈ ರೀತಿ ಅಪವ್ಯಯ ಮಾಡುವುದು ಸರಿಯಲ್ಲ. ಈ ಕಾರ್ಯಕ್ರಮ ನಡೆಸುವ ಬಗೆಗೆ ನನಗೆ ಅನುಮಾನವಿದೆ'' ಎಂದು ಹೇಳಿದರು. "ಇವರು ಮದರಾಸಿಗೆ ಹೋಗಿ ಏನು ಮಾಡಿಕೊಂಡು ಬರುತ್ತಾರೆ ಎಂದು ಒಂದು ಪ್ರಯತ್ನ ಮಾಡಿ ನೋಡೋಣ'' ಎಂದು ಒಪ್ಪಿಸಿ ಅವರಿಂದಲೂ ಸಹಿ ಮಾಡಿಸಿದೆ. ಹಣ ಪಡೆದು ಮದರಾಸಿಗೆ ಹೋದವರು ಬರಿಗೈಲಿ ಹಿಂತಿರುಗಿದರು.

ಕೆಲವು ದಿನಗಳ ನಂತರ ಅದೇ ವ್ಯಕ್ತಿಗಳು ಬಂದು "ನಾವು ಮತ್ತೊಮ್ಮೆ ಮದರಾಸಿಗೆ ಹೋಗಿ ನಟ-ನಟಿಯರನ್ನು ಗೊತ್ತು ಮಾಡಿಕೊಂಡು ಬರುತ್ತೇವೆ'' ಎಂದು ತಿಳಿಸಿದರು. "ಕಳೆದ ಬಾರಿ ಹಣ ಸಾಲದೆ ಬಂತು. ಈ ಬಾರಿ ಐದು ಸಾವಿರ ರೂಪಾಯಿ ಕೊಡಿ''ಎಂದು ಕೇಳಿದರು. ನಾನು ಇನ್ನೂ ಅವರಲ್ಲಿ ನಂಬಿಕೆ ಇಟ್ಟುಕೊಂಡಿದ್ದೆ. ಈ ಬಾರಿ ಚೆಕ್ಕಿಗೆ ಮೊದಲು ಸಹಿ ಹಾಕಲು ರಾಮಣ್ಣನವರಿಗೆ ಕೇಳಿದೆ. ಅವರು ಕೋಪದಿಂದ "ನಾನು ಸಹಿ ಮಾಡುವುದಿಲ್ಲ. ಒಂದು ಸಲ ಸಂಘದ ಹಣ ಅಪವ್ಯಯವಾಗುವುದಕ್ಕೆ ಅವಕಾಶ ಕೊಟ್ಟಿದ್ದೇ ಸಾಕು. ಬೇಕಾದರೆ ನೀವು ಪ್ರಧಾನ ಕಾರ್ಯದರ್ಶಿ ಸಹಿ ಹಾಕಿ ತೆಗೆದುಕೊಳ್ಳಿ. ಇದಕ್ಕೆ ನನ್ನ ಒಪ್ಪಿಗೆಯಂತೂ ಖಂಡಿತವಾಗಿ ಇಲ್ಲ'' ಎಂದು ಹೇಳಿದವರೇ ಚೆಕ್ಕು ಪುಸ್ತಕವನ್ನು ನನ್ನ ಮುಖದ ಮೇಲೆ ಹೊಡೆದಂತೆ ಎಸೆದು,"ತೆಗೆದುಕೊಳ್ಳಿ ನನ್ನ ರಾಜೀನಾಮೆ'' ಎಂದು ಹೇಳಿ ಅಲ್ಲಿಂದ ಹೊರಟೇಬಿಟ್ಟರು. ಅಲ್ಲಿ ಆಗ ಸಾಕಷ್ಟು ಜನ ಇದ್ದರು. ಆ ಎಲ್ಲರ ಎದುರಿಗೆ ಈ ಘಟನೆ ನಡೆದದ್ದರಿಂದ ನನ್ನ ಮನಸ್ಸಿಗೆ ತುಂಬಾ ನೋವಾಯಿತು. '''ರಾಮಣ್ಣ ಕೋಪಬೇಡ. ಸ್ವಲ್ಪ ಸಮಾಧಾನ ಮಾಡಿಕೊಂಡು ಕುಳಿತುಕೊಳ್ಳಿ'' ಎಂದು ಎಷ್ಟೇ ಹೇಳಿದರೂ ಅವರು ಕುಳಿತುಕೊಳ್ಳದೆ ಹೊರಟೇ ಬಿಟ್ಟರು. ತರುವಾಯ ನಾನೇ ಸಂಯುಕ್ತ ಕರ್ನಾಟಕಕ್ಕೆ ಹೋಗಿ ರಾಮಣ್ಣನವರನ್ನು ಸಮಾಧಾನಪಡಿಸಿ, ಸಂಘಕ್ಕೆ ವಾಪಸು ಕರೆತಂದು "ನನಗೆ ಬೇಸರವಿಲ್ಲ. ನನ್ನನ್ನು ಹೀಗೆ ನಡುನೀರಿನಲ್ಲಿ ಕೈಬಿಡಬೇಡಿ. ರಾಜೀನಾಮೆಯನ್ನು ವಾಪಸ್ಸು ಪಡೆಯಿರಿ'' ಎಂದು ಕೇಳಿಕೊಂಡೆ. ಆಗ ರಾಮಣ್ಣ "ನೀವು ಮೊದಲಿನಿಂದಲೂ ಹೀಗೆಯೇ, ನಿಮ್ಮನ್ನು ಹೊಗಳುವವರನ್ನು ತೃಪ್ತಿಪಡಿಸುತ್ತಾ ಬಂದಿದ್ದೀರಿ. ಇದರಿಂದ ಸಂಘಕ್ಕೆ ಒಳಿತಾಗದು'' ಎಂದರು. ಸಮಾಧಾನದಿಂದ ಅವರ ಮನವೊಲಿಸಿ ರಾಜೀನಾಮೆಯನ್ನು ವಾಪಸು ಪಡೆಯುವಂತೆ ಮಾಡಿದೆ. ಇದು ಅವರ ಮತ್ತು ನನ್ನ ನಡುವೆ ಇರುವ ಪ್ರೀತಿಯ ಸಂಕೇತ. ವ್ಯಕ್ತಿತ್ವಕ್ಕೆ ಬೆಲೆಕೊಡುವ ಸ್ವಭಾವ ರಾಮಣ್ಣನವರದು.

೧೯೭೭ರ ಚುನಾವಣೆಯ ಬಳಿಕ ಮುನಿಯಪ್ಪ, ಮೈಸೂರುಮಠರಾದಿಯಾಗಿ ನಮ್ಮ

ಗುಂಪಿನ ಅನೇಕ ಹಿರಿಯ ಶೂದ್ರ ಪತ್ರಕರ್ತರು ನನಗೆ ವಿರೋಧವಾಗಿದ್ದರು. ರಂಗನಾಥ್ ಹಾಗೂ ಆಗ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ವರದಿಗಾರರಾಗಿ ಕಾರ್ಯನಿರ್ವಹಿಸುತ್ತಿದ್ದ ವಿ.ಟಿ. ರಾಜಶೇಖರಶೆಟ್ಟಿ ಇದಕ್ಕೆ ಕಾರಣಕರ್ತರು. ಕಲ್ಲೆ ಶಿವೋತ್ತಮರಾವ್ ಅವರ ಪಾತ್ರವೂ ಸ್ವಲ್ಪ ಇರಬಹುದು. ಇವರು ಇನ್ನೊಬ್ಬರ ಏಳಿಗೆಯನ್ನು ಸಹಿಸದವರು. ಮುನಿಯಪ್ಪ ಹಿತ್ತಾಳಿ ಕಿವಿಯಾಗಿ ಇವರ ತಾಳಕ್ಕೆ ಕುಣಿದರು. ನನಗೆ ವಿರೋಧಿಗಳಾಗಿದ್ದ ಬ್ರಾಹ್ಮಣರು ಈ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡರು. ಶೂದ್ರ ಪತ್ರಕರ್ತರಲ್ಲಿ ಮೂಡುತ್ತಿದ್ದ ಒಗ್ಗಟ್ಟು ಮುರಿಯಿತು. ೧೯೭೭ರ ಸಂಘದ ಚುನಾವಣೆಯಲ್ಲಿ ನಾನು ಮತ್ತೊಂದು ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದೆ. ಸಂಘದ ಹಿರಿಯರೆಲ್ಲರೂ ಸೇರಿ ನನ್ನ ವಿರುದ್ಧ ಮೈಸೂರುಮಠ ಅವರನ್ನು ಕಣಕ್ಕಿಳಿಸಿದ್ದರು. ಚುನಾವಣಾ ಪ್ರಚಾರ ಬಹಳ ಬಿರುಸಿನಿಂದ ನಡೆಯಿತು. ಆ ಸಲ ರಾಮಣ್ಣ ಖಜಾಂಚಿಯಾಗಿ ಮುಂದುವರಿಯಲು ಇಚ್ಛಿಸಿರಲಿಲ್ಲ. ನಾನು ಬಹಳವಾಗಿ ಅವರ ಮನವೊಲಿಸಿಕೊಂಡು ಒಪ್ಪಿಸಿದೆ. ಒಲ್ಲದ ಮನಸ್ಸಿನಿಂದಲೇ ಆತ ಸ್ಪರ್ಧಿಸಿದರು. ನನಗೆ ಎಂಟೆದೆ ಧೈರ್ಯ ಬಂತು. ಯಥಾಪ್ರಕಾರ ರಾಮಣ್ಣ ಅವಿರೋಧವಾಗಿ ಆಯ್ಕೆಗೊಂಡಿದ್ದರು. ಆಗ ಈಗಿನಂತೆ ಅಂಚೆ ಮೂಲಕ ಮತದಾನವಿರಲಿಲ್ಲ. ರಾಜ್ಯದ ಎಲ್ಲಾ ಕಡೆಯ ಸದಸ್ಯರು ಸಂಘಕ್ಕೇ ಬಂದು ಮತ ಚಲಾಯಿಸಬೇಕಿತ್ತು. ಚುನಾವಣೆ ಮತ್ತು ಸರ್ವಸದಸ್ಯರ ಸಭೆ ಏಕಕಾಲದಲ್ಲಿ ಜೊತೆ ಜೊತೆಗೇ ನಡೆಯುತ್ತಿದ್ದವು. ಹೀಗಾಗಿ ಬೆಂಗಳೂರಿನ ಪತ್ರಕರ್ತರದ್ದೇ ಚುನಾವಣೆಯಲ್ಲಿ ಮೇಲುಗೈ ಸಾಧಿಸುತ್ತಿದ್ದರು. ಚುನಾವಣಾ ಪ್ರಚಾರದಲ್ಲಿ ಹಿರಿಯ ಪತ್ರಕರ್ತರು ನನ್ನ ವಿರುದ್ಧ ಹಾಗೂ ಮೈಸೂರುಮಠ ಅವರ ಪರ ಪ್ರಚಾರನಿರತರಾಗಿದ್ದುದು ಹಾಗೂ ಸರ್ವ ಸದಸ್ಯರ ಸಭೆಯಲ್ಲಿ ಸಣ್ಣಪುಟ್ಟದ್ದನ್ನೆಲ್ಲ ದೊಡ್ಡದು ಮಾಡಿ ಟೀಕಾಸ್ತ್ರಗಳ ಸುರಿಮಳೆಗೈದದ್ದು ನೋಡಿ ನಾನು ಕಂಗಾಲಾಗಿದ್ದೆ. ಮತದಾನ ಮುಗಿದು ಎಣಿಕೆ ಪ್ರಾರಂಭವಾದಾಗ ಮೊದ ಮೊದಲು ಮೈಸೂರುಮಠ ಮುಂದಿದ್ದುದನ್ನು ಕಂಡು ನಾನು ಗೆಲ್ಲಲಾರೆ ಎಂಬ ಅನಿಸಿಕೆ ಬಲವಾಗಿ ಅಲ್ಲಿಂದ ಪ್ರೆಸ್‌ಕ್ಲಬ್ಬಿಗೆ ಹೋಗಿ ಮದಿರೆ ಸೇವಿಸುತ್ತಾ ಜೂಜಾಟದಲ್ಲಿ ತೊಡಗಿಸಿಕೊಂಡೆ. ಆಗ ಸಂಘದಲ್ಲಿ ಪ್ರಭಾವಶಾಲಿಯಾಗಿ ಬೆಳೆದಿದ್ದ ರಾಮಣ್ಣ ನನ್ನ ಪರವಾಗಿ ತಮ್ಮ ಕಿರಿಯ ಪತ್ರಕರ್ತ ಮಿತ್ರರನ್ನು ಪ್ರಚಾರದಲ್ಲಿ ತೊಡಗಿಸಿ, ಹಿರಿಯ ಪತ್ರಕರ್ತರ ಆರೋಪಗಳಿಗೆಲ್ಲ ಸರ್ವಸದಸ್ಯರ ಸಭೆಯಲ್ಲಿ ಸವಾಲೆಸೆದು ಬಾಯಿ ಮುಚ್ಚಿಸಿದರು. ನನ್ನ ಗೆಲುವಿನ ಬಗ್ಗೆ ರಾಮಣ್ಣ ಮಾತ್ರ ವಿಶ್ವಾಸ ಉಳ್ಳವರಾಗಿ ಎಣಿಕೆಯ ಸಂದರ್ಭದಲ್ಲಿ ಎಚ್ಚರಗಣ್ಣಿನಿಂದ ಕಾದುನಿಂತಿದ್ದರು. ಎಣಿಕೆಯ ಅಂತಿಮಘಟ್ಟ ತಲುಪುತ್ತಿದ್ದ ಹಾಗೆ ನನ್ನ ಪರವಾಗಿ ಬಹುಮತದ ಅಂತರ ಹೆಚ್ಚತೊಡಗಿತಂತೆ. ತನ್ನ ಗೆಲವು ನಿಶ್ಚಿತವೆಂದು ಬಲವಾಗಿ ನಂಬಿ ಸ್ಥಳದಲ್ಲೇ ಇದ್ದ ಮೈಸೂರುಮಠ ಫಲಿತಾಂಶ ಪ್ರಕಟವಾದಾಗ ರಾಮಣ್ಣನ ಕೈಕುಲುಕಿ "ಇದು ಶೆಟ್ಟಿಯ ಗೆಲುವಲ್ಲ ನಿನ್ನದು" ಎಂದು ಹೇಳಿದರಂತೆ. ಹೀಗೆ ಎರಡನೆಯ ಸಲ ನಾನು ಅಧ್ಯಕ್ಷನಾಗಿ ಆಯ್ಕೆಗೊಳ್ಳಬೇಕಾದರೆ ಅದಕ್ಕೆ ರಾಮಣ್ಣನೇ ಪ್ರಮುಖ ಕಾರಣಕರ್ತ. ೧೯೭೭ ಸಂಘದ ಇತಿಹಾಸದಲ್ಲಿ ಸಾಧನೆಯ ವರ್ಷ ಎಂದು ಹೇಳಬಹುದು. ಸಂಯುಕ್ತ ಕರ್ನಾಟಕ, ಪ್ರಜಾಮತ, ಪ್ರಜಾವಾಣಿಗಳಲ್ಲಿ ಗೊಂದಲ ಇತ್ತು. ಪ್ರಿಂಟರ್‍ಸ್ ಲಿಮಿಟೆಡ್‌ನಲ್ಲಿ ಮಾಲಿಕರ ಮಗ ನೆಟ್ಟಕಲ್ಲಪ್ಪನವರನ್ನೇ ಸಂಸ್ಥೆಯಲ್ಲಿ ಕೂಲಿಗಾಗಿ ಸೇರಿದ್ದ ಬ್ರಾಹ್ಮಣರು ಹೊರಹಾಕಲು ಸಂಚು ನಡೆಸಿದ್ದರು. ಈ ಪ್ರಯತ್ನವನ್ನು

ಸಂಘವು ಬೆಂಗಳೂರು ವೃತ್ತಪತ್ರಿಕಾ ನೌಕರರ ಸಂಘದ ಜೊತೆಗೂಡಿಸಿಕೊಂಡು ತೀವ್ರವಾಗಿ ವಿರೋಧಿಸಿ ಮುಷ್ಕರಕ್ಕೆ ಕರೆಕೊಟ್ಟೆವು. ಸಂಸ್ಥೆಯ ಮಾಲಿಕರಾದ ಕೆ.ಎನ್. ಗುರುಸ್ವಾಮಿ ಕಂಗಾಲಾದರು. ಅವರು ನೆಟ್ಟಕಲ್ಲಪ್ಪ ಅವರ ಬದಲಿಗೆ ಅವರ ಮಕ್ಕಳನ್ನು ಆಡಳಿತ ಮಂಡಳಿಗೆ ನಾಮಕರಣ ಮಾಡಿ ಪ್ರಿಂಟರ್ಸ್ ಸಂಸ್ಥೆಯ ಆಡಳಿತ ಸೂತ್ರವನ್ನು ಅವರ ಕೈಗೆ ಒಪ್ಪಿಸಿದರು. ಹೀಗೆ ಸಂಘವು ಮುಷ್ಕರಕ್ಕೆ ಕರೆ ಕೊಟ್ಟಿದ್ದರಿಂದ ಈಗ ಆ ಸಂಸ್ಥೆಯನ್ನು ಅತ್ಯಾಧುನಿಕವಾಗಿ ಮುನ್ನಡೆಸಿರುವ ನೆಟ್ಟಕಲ್ಲಪ್ಪನವರ ಮಕ್ಕಳು ಬರಲು ಕಾರಣವಾಯಿತೆನ್ನಬಹುದು.

೧೯೭೭ರ ಸಾಲಿಗೆ ಪತ್ರಕರ್ತರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಪ್ರಜಾವಾಣಿಯ ನ.ಅರ್ಜುನದೇವ ಅವರನ್ನು ಅಧ್ಯಕ್ಷತೆಗೆ ನಿಲ್ಲಿಸಿ, ರಾಮಣ್ಣನನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಸಬೇಕೆಂದು ಮನಸ್ಸುಮಾಡಿದೆ. ಅರ್ಜುನದೇವ ಸಮ್ಮತಿಸಿದರು. ಆ ವೇಳೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮುಖವಾಣಿ 'ಕನ್ನಡ ನುಡಿ' ಪಾಕ್ಷಿಕದ ಗೌರವ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ರಾಮಣ್ಣ ಎರಡೂ ಕೆಲಸ ನಿಭಾಯಿಸಲಾಗದೆಂಬ ಹಾಗೂ ಸತತವಾಗಿ ಐದು ವರ್ಷ ಸಂಘದ ಪದಾಧಿಕಾರಿಯಾಗಿದ್ದ ಬೇಸರದಿಂದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಸಲ್ಲಿಸಿದ್ದ ತನ್ನ ಉಮೇದುವಾರಿಕೆ ಹಿಂತೆಗೆದುಕೊಂಡರು. ಆದರೆ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ತನ್ಮೂಲಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸಕ್ರಿಯ ಸದಸ್ಯರಾಗಿ ಮುಂದುವರಿದಿದ್ದರು. ಅಂದಿನಿಂದ ಇಂದಿನವರೆಗೂ ಪ್ರತಿಬಾರಿಯ ಚುನಾವಣೆಯಲ್ಲಿ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಆಯ್ಕೆಗೊಳ್ಳುತ್ತಾ ಬಂದಿದ್ದಾರೆ. ಇದು ಸಂಘದಲ್ಲಿ ಅವರಿಗಿರುವ ಆಸಕ್ತಿ ಹಾಗೂ ಸದಸ್ಯರು ಅವರಲ್ಲಿಟ್ಟಿರುವ ವಿಶ್ವಾಸವನ್ನು ಎತ್ತಿ ತೋರಿಸುತ್ತದೆ.

'ಸಂಯುಕ್ತ ಕರ್ನಾಟಕ' ಬೆಂಗಳೂರು ಆವೃತ್ತಿಯು ೧೯೮೦ರಲ್ಲಿ ಮುಚ್ಚಿದಾಗ ಅವರನ್ನು ಪ್ರಜಾವಾಣಿಗೆ ನೇಮಕ ಮಾಡಿಸಿಕೊಳ್ಳಲು ನನ್ನಿಂದ ಸಾಧ್ಯವಾಗದೇ ಹೋಯಿತು. ರಾಮಣ್ಣನವರ ನೇರ ನಡೆ-ನುಡಿ ಹಾಗೂ ಕಾರ್ಮಿಕ ಚಳುವಳಿಯಲ್ಲಿನ ಪ್ರಾಮಾಣಿಕ ಕಳಕಳಿ ಅವರ ಪ್ರಜಾವಾಣಿ ಪ್ರವೇಶಕ್ಕೆ ಅಡ್ಡಿಯಾಯಿತು. 'ಸಂಯುಕ್ತ ಕರ್ನಾಟಕ' ೧೯೮೦ರಲ್ಲಿ ಹನ್ನೊಂದು ತಿಂಗಳು ಮುಚ್ಚಿದ್ದರೂ ಮತ್ತೆ ಪುನರಾರಂಭಗೊಂಡಿತು. ಈ ಪುನರಾರಂಭದ ಪ್ರಯತ್ನದಲ್ಲಿ ರಾಮಣ್ಣನವರದು ಸಿಂಹಪಾಲು.

೧೯೮೮ರಲ್ಲಿ ನಾನು ಪ್ರಜಾವಾಣಿ ತೊರೆದು, ಮಂಗಳೂರಿನಿಂದ 'ಮುಂಗಾರು' ಪತ್ರಿಕೆಯನ್ನು ಆರಂಭಿಸಿದೆ. ಅದರ ಬೆಂಗಳೂರಿನ ಮುಖ್ಯ ವರದಿಗಾರರಾಗಿ ರಾಮಣ್ಣ ನನ್ನೊಟ್ಟಿಗೆ ಬಂದರು. ೨-೩ ವರ್ಷ ಸಂಬಳಕೊಟ್ಟೆ. ಅದೂ ಎರಡು ಮೂರು ತಿಂಗಳಿಗೊಮ್ಮೆ. ಅನಂತರ ಆ ರೀತಿಯೂ ಕೊಡಲು ಸಾಧ್ಯವಾಗಲಿಲ್ಲ. 'ಮುಂಗಾರು' ಸೇರಿ ಅವರು ತುಂಬಾ ಕಷ್ಟ ಎದುರಿಸಿದರು. ನಾನು ಅವರಿಗೆ ನೋವು ಕಷ್ಟಗಳನ್ನು ಕೊಟ್ಟಿದ್ದೇನೆ. ಇದನ್ನು ಬಿಟ್ಟು ಏನನ್ನೂ ಕೊಡಲು ಸಾಧ್ಯವಾಗಿಲ್ಲ. ನಾನು ರಾಮಣ್ಣನವರ ಜೊತೆ ಮಾತನಾಡುವಾಗಲೆಲ್ಲಾ 'ಅಪರಾಧಿ ಪ್ರಜ್ಞೆ' ನನ್ನನ್ನು ಸದಾ ಕಾಡುತ್ತದೆ. 'ಮುಂಗಾರು' ಸೇರಿ ಕಷ್ಟದ ದಿನಗಳಲ್ಲಿ ತೊಳಲಾಡುತ್ತಿದ್ದಾಗ ರಾಮಣ್ಣನನ್ನು ಸ್ವಾಭಿಮಾನದಿಂದ ಬದುಕಿಸಿದ್ದು ಅವರ ಪತ್ನಿ ಗಾಯತ್ರಿಯವರು. ಅವರಿಲ್ಲದಿದ್ದರೆ ರಾಮಣ್ಣ ಏನಾಗುತ್ತಿದ್ದರು ಎಂದು ಊಹಿಸುವುದು ಕಷ್ಟ. ರಾಮಣ್ಣನವರ ಶ್ರೇಯಸ್ಸಿನಲ್ಲಿ ಗಾಯತ್ರಿಯವರ ಪಾತ್ರ ಹಿರಿಯದಾಗಿದೆ.

ವೈಯಕ್ತಿಕ ಜೀವನದಲ್ಲಿ ರಾಮಣ್ಣ ಸಿದ್ಧಾಂತಕ್ಕೆ ಅಂಟಿಕೊಂಡೇ ಬದುಕಿದವರು. ಒಂದು ಜನಾಂಗ ಹೆಮ್ಮೆ ಪಡುವಂತಹ ಆದರ್ಶವಾದಿ. ಮಾನವ ಜೀವನದ ಮೌಲ್ಯಗಳ ಪ್ರತಿಮೂರ್ತಿ ಮನುಷ್ಯನಲ್ಲಿರಬಹುದಾದ ಎಲ್ಲ ಒಳ್ಳೆಯ ಗುಣಗಳೂ ಅವರಲ್ಲಿವೆ. ಕನ್ನಡದ ವಿಚಾರದಲ್ಲಿ ಕುವೆಂಪು ಅವರು ರಾಮಣ್ಣನಿಗೆ ಆದರ್ಶವಾಗಿದ್ದಾರೆ. ಹುಟ್ಟಿನಿಂದ ನೀಚೋಚ್ಚತೆಯನ್ನು ನಿರ್ಧರಿಸುವ ಹಿಂದೂಧರ್ಮದಲ್ಲಿನ ಜಾತಿ ಪದ್ಧತಿಯನ್ನು ಕಂಡರೆ ಅವರಿಗಾಗದು. ಈ ಕಾರಣದಿಂದ ಒಕ್ಕಲಿಗರಾದ ಅವರು ತಮ್ಮ ಜಾತಿ ಸೂಚಕವಾಗಿ ಅವರ ಹೆಸರಿನ ಕೊನೆಗೆ ಇದ್ದ 'ಗೌಡ' ಎಂಬುದನ್ನು ತೆಗೆದು ತನ್ನ ಊರಿನ ಹೆಸರನ್ನು ಸೇರಿಸಿಕೊಂಡರು. ತಾಯಿ ತಂದೆಗೆ ಒಬ್ಬನೇ ಮಗನಾದರೂ ಅವರ ಮನ ಒಲಿಸಿಕೊಂಡು ಬೇರೆ ಜಾತಿಯ ಹುಡುಗಿಯನ್ನು ಮದುವೆಯಾಗಿ ಸಮರಸ ಜೀವನ ನಡೆಸಿದವರು.

ಒಕ್ಕಲಿಗರಾದರೂ ರಾಮಣ್ಣ ತನ್ನ ಜಾತ್ಯಾತೀತ ಮನೋಭಾವದಿಂದಾಗಿ ಒಕ್ಕಲಿಗ ಮಿತ್ರರ ಒಡನಾಟ ಹೆಚ್ಚು ಇರಿಸಿಕೊಂಡಿದ್ದವರಲ್ಲ. ಆದರೆ ಒಕ್ಕಲಿಗರ ಬಗೆಗೆ ನನಗೆ ಮಾನಸಿಕವಾಗಿ ಒಂದು ಸೆಳೆತ (ದಕ್ಷಿಣ ಕನ್ನಡ ಜಿಲ್ಲೆಯ ಭಂಟರು ಹಾಗೂ ಹಳೇ ಮೈಸೂರಿನ ಒಕ್ಕಲಿಗರು ಸಾಮಾಜಿಕವಾಗಿ ಒಂದೇ ಜನಾಂಗವೆಂದು ಸಮೀಕರಿಸಲಾಗಿದೆ). ನಾನು ಮುಂಗಾರು ಆರಂಭಿಸಿದಾಗ ಅನೇಕ ಒಕ್ಕಲಿಗರು ಷೇರು ಪಡೆದು ನನ್ನನ್ನು ಆತ್ಮೀಯವಾಗಿ ಆಶೀರ್ವದಿಸಿದರು. ನನಗೆ ಇದು ಆನಂದವನ್ನು ತಂದಿತ್ತು. ಅನೇಕ ಒಕ್ಕಲಿಗ ರಾಜಕಾರಣಿಗಳು ನನ್ನನ್ನು ಆತ್ಮೀಯವಾಗಿ ಕಂಡಿದ್ದಾರೆ. ಜಾತಿವಿಚಾರದಲ್ಲಿ ನಿರ್ಲಿಪ್ತರಾಗಿ ಒಕ್ಕಲಿಗ ಜನ ಸಮುದಾಯದಿಂದ ದೂರವಿರಲು ಬಯಸುತ್ತಿದ್ದ ರಾಮಣ್ಣನವರಿಗೆ ನಾನು ಅನೇಕ ಸಲ ತಿಳುವಳಿಕೆ ಹೇಳಿದ್ದೆ. ''ಎಲ್ಲ ಒಕ್ಕಲಿಗರೂ ನೀತಿವಂತರು ಸಿಗಲಾರರು. ಈ ಅಳತೆಗೋಲನ್ನು ಇಟ್ಟುಕೊಂಡು ಎಲ್ಲರನ್ನೂ ದೂರೀಕರಿಸಬಾರದು. ಬ್ರಾಹ್ಮಣರು ನಮ್ಮ ಬಗ್ಗೆ ವಕ್ರದೃಷ್ಟಿ ಇಡುವಂತೆ ದಲಿತರೂ ಕಾಣುತ್ತಾರೆ. ನೀವು ಎಷ್ಟೇ ಪ್ರಾಮಾಣಿಕತೆಯಿಂದ ದಲಿತ ಪಕ್ಷಪಾತಿಯಾಗಿ ನಡೆದುಕೊಂಡರೂ ನಿಮ್ಮನ್ನು ದಲಿತರೆಂದು ಅವರು ಸ್ವೀಕರಿಸುವುದಿಲ್ಲ. ಒಕ್ಕಲಿಗರಲ್ಲಿನ ಒಳ್ಳೆತನವನ್ನು ಗುರುತಿಸಬೇಕಾಗುತ್ತದೆ. ಈ ಜನಾಂಗದಲ್ಲಿ ಬಹುಮಂದಿ ಅವಿವೇಕಿ, ಅಜ್ಞಾನಿ, ಕ್ರೂರಿಗಳಿದ್ದರೂ, ಕೆಲವರಲ್ಲಿ ಯಾರಾದರೂ ಪರಂಪರೆಯಿಂದ ಬಂದ ಔದಾರ್ಯತೆ ಇದೆ.''

ನಾನೇ ಕಟ್ಟಿದ 'ಮುಂಗಾರು' ಸಂಸ್ಥೆಯನ್ನು ಬಿಟ್ಟು ಹೊರಬಿದ್ದ ಮೇಲೆ ಬೆಂಗಳೂರಿನಲ್ಲಿ ಕೆಲ ಒಕ್ಕಲಿಗ ಮಿತ್ರರು ಪ್ರಕಾಶನ ಸಂಸ್ಥೆಯೊಂದನ್ನು ಆರಂಭಿಸುವ ಆಸಕ್ತಿ ತೋರಿ ನನ್ನ ಬಳಿ ಬಂದಿದ್ದರು. ಅದಕ್ಕೆ ಜನಾಂಗದ ಹಿನ್ನೆಲೆಯಲ್ಲಿ ಹೆಸರು ಸೂಚಿಸಲು ಕೋರಿದ್ದರು. ಆಗ ರಾಮಣ್ಣನವರೇ 'ಹೊನ್ನೇರು ಪ್ರಕಾಶನ' ಎಂದು ಹೆಸರು ಸೂಚಿಸಿದ್ದರು. ಅದು ಎಲ್ಲರಿಗೂ ಸಮ್ಮತವಾಗಿ ನೋಂದಣಿ ಮಾಡಿಸಲಾಯಿತು. ಲಕ್ಕೇಗೌಡರು ಅದರ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಆ ಸಂಸ್ಥೆಯಲ್ಲಿ ರಾಮಣ್ಣನವರಿಗೂ ಒಂದು ಸ್ಥಾನ ಕಲ್ಪಿಸಲು ನಾನು ಸೂಚಿಸಿದೆ. ಅದರಲ್ಲಿನ ಅನೇಕರಿಗೆ ರಾಮಣ್ಣನನ್ನು ಅಪ್ಪಿಕೊಳ್ಳುವ ಹೃದಯವಂತಿಕೆ ಇರಲಿಲ್ಲ. ಇದು ನಮ್ಮ ಜನರ ಸಣ್ಣತನಕ್ಕೆ ಒಂದು ನಿದರ್ಶನ. ಈ ಜನಾಂಗ ಈ ಪ್ರಕಾಶನ ಸಂಸ್ಥೆ ಮೂಲಕ ಪ್ರಭಾವೀ ಮಾಧ್ಯಮವನ್ನು ಹಿಡಿಯುತ್ತಾರೆ ಎಂದು ಎಣಿಸಿದ್ದೆ. ಆದರೆ ಅದು ವ್ಯರ್ಥವಾಯಿತು. ನನಗೆ ಈಗ ಆ ಬಗೆಗೆ ಆಸಕ್ತಿಯಿಲ್ಲ.

ರಾಮಣ್ಣನಂತಹ ಪತ್ರಕರ್ತರು ಈ ನಾಡಿನಲ್ಲಿ ಹುಟ್ಟಲಿಲ್ಲ. ಅವರು ಜಳ್ಳು ಪತ್ರಕರ್ತರಂತೆ ಎಂದೂ ಅಕ್ಷರ ಹಾದರ ಮಾಡಿದವರಲ್ಲ. ಅಂತಹವರು ರಾಮಣ್ಣನವರ ಹತ್ತಿರ ಸುಳಿಯುವ ಯೋಗ್ಯತೆಯನ್ನು ಪಡೆದಿಲ್ಲ. ಪತ್ರಿಕಾರಂಗಕ್ಕೆ ಬಂದ ರಾಮಣ್ಣ ತನ್ನ ಭವಿಷ್ಯದ ಬಗ್ಗೆ ಎಂದೂ ಚಿಂತಿಸಲಿಲ್ಲ. ಎಷ್ಟೇ ಕಷ್ಟ ಬಂದಾಗ್ಯೂ ತಾನು ನಂಬಿದ ಮೌಲ್ಯಗಳನ್ನು ಬಿಟ್ಟುಕೊಡಲಿಲ್ಲ; ಅಧೀರನಾಗಲಿಲ್ಲ. ಜೀವನದ ವಾಸ್ತವಗಳ ನೆಪದಲ್ಲಿ ಅವನ್ನು ಬಲಿಗೊಡಲಿಲ್ಲ. ಪತ್ರಿಕಾರಂಗಕ್ಕೆ ಬಂದವರು ಏನೆಲ್ಲ ಮಾಡಿಕೊಂಡರು. ಉನ್ನತವಾಗಿ ಬೆಳೆದರೂ ಪತ್ರಿಕಾ ಹಾದರ ಮಾಡಿ ದುಡ್ಡು ಮಾಡಿ ದೊಡ್ಡವರೆನಿಸಿಕೊಂಡರು. ರಾಮಣ್ಣ ಎಂದೂ ದುಡ್ಡು ಮಾಡಿಕೊಳ್ಳಬೇಕೆಂದು ಹಂಬಲಿಸಿದವರಲ್ಲ. ಹಣಕ್ಕಾಗಿ ಹಪಾಪಿಸಿದವರಲ್ಲ. ಪ್ರಭಾವೀ ಪತ್ರಿಕೆಯಲ್ಲಿದ್ದರೂ ಯಾವ ರಾಜಕಾರಣಿಯನ್ನೂ ತಾವಾಗಿಯೇ ಪರಿಚಯ ಮಾಡಿಕೊಳ್ಳಲು ಮೇಲೆ ಬಿದ್ದು ಹೋದವರಲ್ಲ.

‘ಕನ್ನಡ ಸಂಘರ್ಷ ಸಮಿತಿ’ ಎಂಬ ಸಂಘಟನೆಯನ್ನು ಬಲವಾಗಿ ಕಟ್ಟಿ ಅದನ್ನು ನಾಡಿನ ಪ್ರತಿಷ್ಠಿತ ಸಂಘಟನೆಗಳಲ್ಲೊಂದಾಗಿ ಬೆಳೆಸಿದ್ದಾರೆ. ಇದೀಗ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನಗರದ ತುಂಬೆಲ್ಲಾ ಕನ್ನಡ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ.

ರಾಮಣ್ಣನವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಒಟ್ಟಿನಲ್ಲಿ ರಾಮಣ್ಣ ಕರ್ನಾಟಕ ಕಂಡ ಆದರ್ಶಮಯ ವ್ಯಕ್ತಿತ್ವದ ಅಪರೂಪದ ಪತ್ರಕರ್ತರು.

*

ರಾಮಣ್ಣನ ದಶಾವತಾರಗಳು

ಡಾ. ಹಂಪ. ನಾಗರಾಜಯ್ಯ

ಪುರಾಣ ಪುರುಷನಾದ ರಾಮನಿಗೆ ಅವತಾರಗಳನ್ನು ಆರೋಪಿಸಲಾಗಿದೆ; ವಿಷ್ಣುವಿನ ಹತ್ತು ಅವತಾರಗಳಲ್ಲಿ ರಾಮಾವತಾರವೂ ಒಂದು. ನಮ್ಮ ರಾಮಣ್ಣನಿಗೆ ಈ ಮನುಷ್ಯಾವತಾರದಲ್ಲಿ ಒಂದರಲ್ಲೇ ಹತ್ತು ಅವತಾರಗಳು ಕಾಣಿಸುತ್ತಿವೆ:

೧. ಒಳ್ಳೆಯ ವಿದ್ಯಾರ್ಥಿ: ರಾಮಣ್ಣ ಎಚ್. ಕೋಡಿಹೊಸಳ್ಳಿ ಮೂವತ್ತು ವರ್ಷಗಳ ಹಿಂದೆ ನನ್ನ ವಿದ್ಯಾರ್ಥಿ. ಬೆಂಗಳೂರಿನ ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜು ೧೯೬೭ರಲ್ಲಿ ಗ್ಯಾಸ್ ಕಾಲೇಜೆಂದು ಹೆಸರುವಾಸಿಯಾಗಿತ್ತು; ಗೌರ್ನಮೆಂಟ್ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ಎಂಬ ದೀರ್ಘ ರೂಪದ ಸ್ವರೂಪವೇ (G.A.S)'ಗ್ಯಾಸ್' ಕಾಲೇಜು ಎಂಬುದು. ನಾನು ಆ ಕಾಲೇಜಿನ ಕನ್ನಡ ವಿಭಾಗದಲ್ಲಿ ಒಬ್ಬ ಅಧ್ಯಾಪಕನಾಗಿ ವಿದ್ಯಾರ್ಥಿಗಳ ಅಕ್ಕರೆ ಗಳಿಸಿದ್ದೆ. ಅಲ್ಲದೆ ಕಾಲೇಜಿನ ಪ್ರಾಂಶುಪಾಲರೂ ಉಪಾಧ್ಯಾಯರೂ ಸೇರಿ ನನ್ನನ್ನು ಇಡೀ ಕಾಲೇಜಿನ ಸಂಘದ (ಯೂನಿಯನ್) ಅಧ್ಯಾಪಕ ಕಾರ್ಯದರ್ಶಿಯಾಗಿ ನಾಮಕರಣ ಮಾಡಿದ್ದರು. ಹೀಗಾಗಿ ತರಗತಿಯ ಒಳಗೂ ಹೊರಗೂ ನನಗೆ ವಿದ್ಯಾರ್ಥಿಗಳ ನಿಕಟ ಸಂಪರ್ಕವಿತ್ತು. ಪದವಿ ತರಗತಿಯಲ್ಲಿ ಓದುತ್ತಿದ್ದ ಒಬ್ಬ ಚೆಲುವ ಚೂಟಿ ಹುಡುಗ ರಾಮಣ್ಣನ ಪರಿಚಯ ನನಗೆ ಆದದ್ದು ಇದೇ ಅವಧಿಯಲ್ಲಿ. ಬೆಳೆಯುವ ಪೈರು ಮೊಳಕೆಯಲ್ಲಿಯೇ ಕುರುಗಳನ್ನು ಬಿಟ್ಟುಕೊಡುತ್ತದೆ ಎಂಬಂತೆ ರಾಮಣ್ಣ ತನ್ನ ಒರಟುತನವನ್ನು, ಅಂದರೆ ಮುಚ್ಚುಮರೆಗಳಿಲ್ಲದೆ, ಹಿಂದು ಮುಂದು ನೋಡದೆ ಇದ್ದುದನ್ನು ಇರುವಂತೆಯೂ ಕಡಾಖಂಡಿತವಾಗಿಯೂ ದಯಾದಾಕ್ಷಿಣ್ಯವನ್ನು ಇಟ್ಟುಕೊಳ್ಳದೆಯೂ ಹೇಳುವ ಒರಟುತನವನ್ನು ಅಂದಿನ ದಿನಗಳಲ್ಲೇ ಬೆಳಸಿಕೊಂಡಿದ್ದ. ವ್ಯಕ್ತಿ ಬೆಳೆದಂತೆ ಬದಲಾಗುವುದುಂಟು. ರಾಮಣ್ಣ

ಮಾತ್ರ ಈ ಮುಲಾಜಿಲ್ಲದೆ ನೇರವಾಗಿ ಮುಖಕ್ಕೇ ಮಾತಾಡುವ ಸ್ವಭಾವದಲ್ಲಿ, ಅಂದಿನಿಂದ ಇಂದಿನ ತನಕ ಒಂದೇ ಸಮನಾದ ಏಕರೂಪತೆಯನ್ನು ಉಳಿಸಿಕೊಂಡಿದ್ದಾನೆ.

೨. **ನಿರ್ಭೀತ ಪತ್ರಕರ್ತ:** ವಿದ್ಯಾರ್ಥಿ ಅವತಾರವನ್ನು ಇನ್ನೂ ಮುಂದಕ್ಕೆ ಸ್ನಾತಕೋತ್ತರ ಮತ್ತು ಅದರ ಅನಂತರ ಎಂದು ಉತ್ತರೋತ್ತರವಾಗಿ ಅದನ್ನು ರಾಮಣ್ಣ ಮುಂದುಮರಿಸಲಿಲ್ಲ. ಸ್ನಾತಕ ಹಂತವನ್ನು ದಾಟುತ್ತಿದ್ದಂತೆ ರಾಮಣ್ಣ ಒಬ್ಬ ಪತ್ರಕರ್ತನಾದದ್ದು ಆತನ ಎರಡನೆಯ ಅವತಾರ. ಹಲವು ವಿಷಯಗಳಲ್ಲಿ ಆಸಕ್ತಿ ಇರುವ ರಾಮಣ್ಣ ಪತ್ರಿಕೋದ್ಯಮಕ್ಕೆ ಹೊರಳಿದ್ದು ಆಕಸ್ಮಿಕವಾಗಿ ಒದಗಿ ಬರದೆ ಸಹಜವಾಗಿಯೇ ದೊರೆತ ಅವಕಾಶ. ಆ ದಿನಗಳಲ್ಲಿ ರಾಮಣ್ಣನಿಗೆ ಹಿರಿಯರಾದ ಇಬ್ಬರು ಪತ್ರಕರ್ತರ ಸಂಪರ್ಕ ಉಂಟಾಯಿತು. ಒಬ್ಬರು ಕಲ್ಲೆ ಎನ್. ಶಿವೋತ್ತಮರಾವ್, ಇನ್ನೊಬ್ಬರು ವಡ್ಡರ್ಸೆ ರಘುರಾಮಶೆಟ್ಟಿ. ನಾನು ಆ ಕೆಲವು ವರ್ಷಗಳಕಾಲ ಮಲ್ಲೇಶ್ವರದಲ್ಲಿ ಬಾಡಿಗೆ ಮನೆಯಲ್ಲಿದ್ದೆ; ಇದರ ವಿಚಾರ ಮತ್ತೆ ಮುಂದೊಂದು ಹಂತದಲ್ಲಿ ಪ್ರಸ್ತಾಪವಾಗಲಿದೆ. ರಾಮಣ್ಣ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಉಪಸಂಪಾದಕನಾಗಿ ಕೆಲಸ ಮಾಡಿದ್ದು ಆತನ ಬದುಕಿನಲ್ಲಿ ಒಂದು ಆತ್ಮವಿಶ್ವಾಸ ತಂದುಕೊಟ್ಟ ಘಟ್ಟ. ರಾಮಣ್ಣ ತನ್ನ ರಾಜಿಯಾಗದ ಒರಟು ಸ್ವಭಾವಕ್ಕೆ ಅನುಗುಣವಾಗಿ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಬಿಟ್ಟು ಹೊರಬಂದದ್ದು ಅನಿರೀಕ್ಷಿತವೇನಲ್ಲ. ಆ ಪತ್ರಿಕೆಯನ್ನು ತೂರೆದದ್ದು ಯಾಕೆ ಹೇಗೆ ಏನು ಎತ್ತ ಎಂಬುದು ನನ್ನ ಈ ಲೇಖನದಲ್ಲಿ ಅಪ್ರಸ್ತುತವಾದೀತೆಂದು ನಾನು ವಿವರಿಸದೆ ಅದರ ಮುಂದಿನ ಹೆಜ್ಜೆಗಳನ್ನು ಹೇಳುತ್ತೇನೆ. ಮಲ್ಲೇಶ್ವರದಲ್ಲಿ ಜನಪ್ರಗತಿ ಪತ್ರಿಕೆ ಅಚ್ಚಾಗುತ್ತಿದ್ದ ದಿನಗಳು ರಾಮಣ್ಣನ ಲೇಖಣಿ ಕುದುರಿದ ಅವಧಿಯೂ ಹೌದು. ನಾನಾ ವಿಷಯಗಳನ್ನು ಕುರಿತು ಬರೆಯಬೇಕಿತ್ತು, ಹಲವು ಸಂದರ್ಶನಗಳನ್ನು ಮಾಡಬೇಕಿತ್ತು. ರಾಮಣ್ಣ ಇವೆಲ್ಲವನ್ನೂ ಮಾಡುತ್ತ, ತನ್ನ ಬುದ್ಧಿಗೆ ಸಾಣೆ ಹಿಡಿಯುತ್ತ, ಹೊಸವರಸೆಗಳಿಂದ ಲೇಖಣಿ ಝುಳಪಿಸುವುದಕ್ಕೆ ಸಜ್ಜಾದ . ಮಲ್ಲೇಶ್ವರದಲ್ಲಿ ಮಾಡಿದ ಈ ಸಾಮು, ಬೈಟಕ್ಕು ನೋಡಿದರೆ ಬೆಂಗಳೂರಿನ ಮಲ್ಲೇಶ್ವರ ಎಂಟನೇ ಕ್ರಾಸು ರಾಮಣ್ಣನ ಗರಡಿಮನೆ ಎನಿಸುತ್ತದೆ.

೩. **ಗೃಹಸ್ಥಾಶ್ರಮ:** ರಾಮಣ್ಣ ತನ್ನ ಬ್ರಹ್ಮಚರ್ಯವನ್ನು ಕಳೆದುಕೊಂಡು ಸಂಸಾರಿಯಾದದ್ದು ಆತನ ಮೂರನೆಯ ಅವತಾರ. ಮಲ್ಲೇಶ್ವರದ ಜನಪ್ರಗತಿ ಗರಡಿಮನೆಯ ಈ ವುಸ್ತಾದ್ ಪೈಲ್ವಾನ್ ರಾಮಣ್ಣನ ಪೊಗರು ಇಳಿಸಲು ಒಬ್ಬ ಸಂಗಾತಿಯ ಅಗತ್ಯ ಇತ್ತು. ಯೋಗಾಯೋಗವೆಂದರೆ ಆತನ ಬಾಳಸಂಗಾತಿಯಾಗುವ ಹುಡುಗಿ ಮಲ್ಲೇಶ್ವರದಲ್ಲಿಯೇ, ಅದೂ ಆಗಿನ ನನ್ನ ಬಾಡಿಗೆ ಮನೆಯಲ್ಲಿಯೇ ದೊರೆತದ್ದು. ನಾನು ಅಂತರ್ಜಾತೀಯ ವಿವಾಹವಾಗಿದ್ದುದು ಆ ದಿನಗಳಲ್ಲಿ ಆದರ್ಶವಾದಿ ಯುವಕರಿಗೆ ಒಂದು ಮಾದರಿ ಎಂಬ ಮಾತು ಚಲಾವಣೆಯಲ್ಲಿತ್ತು. ಕೆಲವು ಅಂತರ್ಜಾತೀಯ ಹಾಗೂ ಕುವೆಂಪು ಹೇಳುವ ಮಂತ್ರಮಾಂಗಲ್ಯ ಮಾದರಿಯ ಸರಳ ವಿವಾಹಗಳಿಗೆ ನನ್ನ ಮುಂದಾಳುತನವನ್ನು ಯುವವೃಂದ ಇಷ್ಟ ಪಡುತ್ತಿತ್ತು. ರಾಮಣ್ಣನೂ ಇಂಥ ಒಂದೆರಡು ಮದುವೆಗಳಿಗೆ ನನ್ನನ್ನು ಬರಮಾಡಿಕೊಂಡಿದ್ದುಂಟು. ನನ್ನ ಮನೆಯಲ್ಲಿ ಆ ಅವಧಿಯಲ್ಲಿ ಡಾ. ಕಮಲಾ ಹಂಪನಾ ಅವರ ಅಕ್ಕ ಮತ್ತು ಭಾವರ (ವಿಶಾಲಾಕ್ಷಿ ಮತ್ತು ವೀರಣ್ಣ ದಂಪತಿಗಳ) ಮಗಳು ಕುಮಾರಿ, ಗಾಯತ್ರಿ ಓದಿಕೊಂಡಿದ್ದಳು. ಪತ್ರಿಕೆ ಮತ್ತು

ಸಾಂಘಿಕ ಚಟುವಟಿಕೆ ಸಂಬಂಧವಾಗಿ ರಾಮಣ್ಣ ಮಲ್ಲೇಶ್ವರದ ನಮ್ಮ ಮನೆಗೆ ಬಂದು ಹೋಗುತ್ತಿದ್ದ ಕಾಲದಲ್ಲಿ ಗಾಯತ್ರಿಗೂ ರಾಮಣ್ಣನಿಗೂ ಪರಿಚಯವಾಯಿತು, ಸಲುಗೆ ಬೆಳೆಯಿತು. ಇಬ್ಬರೂ ಒಬ್ಬರನ್ನೊಬ್ಬರು ಇಷ್ಟಪಟ್ಟರು. ಒಲಿದ ಜೀವಗಳು ಒಂದಾದರು. ಜಾತಿಗಳು ಅಡ್ಡಬರಲಿಲ್ಲ. ನನ್ನ ಅತ್ತಿಗೆಯವರ ಮಗಳನ್ನು ಮದುವೆಯಾಗಿ ರಾಮಣ್ಣ ನನಗೆ ಅಳಿಯನಾದ! ಶಿಷ್ಯ ಹೋಗಿ ಅಳಿಯ ಆದದ್ದು ಈ ಗುರುವಿಗೆ ಸಿಕ್ಕ ಕಾಣಿಕೆ. ಆದರೆ ಈ ನೆಂಟಸ್ತಿಕೆಯನ್ನು ದೊಡ್ಡಸ್ತಿಕೆಯಾಗಿ ಬಂಡವಾಳ ಮಾಡಿಕೊಳ್ಳಲಿಲ್ಲ, ಸಲುಗೆಯ ದುರುಪಯೋಗಕ್ಕೆ ಅವಕಾಶ ಕೊಡಲಿಲ್ಲ ಎಂಬುದನ್ನೂ ನಾನಿಲ್ಲಿ ದಾಖಲಿಸಬೇಕು. ರಾಮಣ್ಣ ಸಭ್ಯತೆಯ ಎಲ್ಲೆಯನ್ನು ದಾಟದೆ ತನ್ನತನವನ್ನು ಉಳಿಸಿಕೊಂಡು, ತನ್ನ ಸ್ವಾಭಿಮಾನವನ್ನೂ ಬಿಟ್ಟುಕೊಡದೆ ನಡೆದುಕೊಂಡನೆಂಬುದು ನನಗೆ ಅಭಿಮಾನದ ವಿಷಯ.

೪. **ಸಂಘಟಕ:** ರಾಮಣ್ಣನ ಶಕ್ತಿಯ ನಾಲ್ಕನೆಯ ಮುಖ ಆತನ ಸಂಘಟನ ಆಸಕ್ತಿ. ಸಂಘಟನೆ ಎಂಬುದು ವ್ಯಾಪಕವಾದದ್ದು. ಮನೆಯಲ್ಲೇ ಅದು ಪ್ರಾರಂಭ ಆಗಬೇಕು. ರಾಮಣ್ಣ ತೀರ ಕಷ್ಟ ಹಾಗೂ ಪ್ರತಿಕೂಲ ಪರಿಸ್ಥಿಯಲ್ಲಿ ಕೂಡ ತನ್ನ ಸಂಘಟನೆಗೆ ಧಕ್ಕೆ ಬರದಂತೆ ಮನೆಯನ್ನು ಮುನ್ನಡೆಸಿದ್ದು ಮೆಚ್ಚಬೇಕಾದ ಅಂಶ. ತನ್ನ ಹೆಂಡತಿ ಗಾಯತ್ರಿಯನ್ನು ಪದವಿ, ಸ್ನಾತಕೋತ್ತರ ಪದವಿ ಪಡೆಯುವಂತೆ ಪ್ರೋತ್ಸಾಹಿಸಿದ್ದು ಶ್ಲಾಘನೀಯ. ರಾಮಣ್ಣನಿಗೆ ಸುಮ್ಮನೆ ಕುಳಿತುಕೊಳ್ಳುವುದೆಂದರೆ ಹಿಂಸೆ, ಶಿಕ್ಷೆ. ಆತನಿಗೆ ಜನ ಬೇಕು, ಸಂಘ ಬೇಕು, ಚಟುವಟಿಕೆ ಬೇಕು. ಮಲ್ಲೇಶ್ವರದಲ್ಲಿ ಇದ್ದಾಗಲೇ ಇಂಥ ಪ್ರವೃತ್ತಿಗೆ ತಕ್ಕ ತಳಪಾಯ ಬಿದ್ದಿತ್ತು. ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲದ ವತಿಯಿಂದ ಹಮ್ಮಿಕೊಂಡು ನಡಸಿದ ಎಲ್ಲ ಸಮಾವೇಶಗಳ ಯಶಸ್ಸಿಗೆ ದುಡಿದ ತರುಣರಲ್ಲಿ ಸಿಂಹಪಾಲು ರಾಮಣ್ಣನಿಗೆ ಸೇರುತ್ತದೆ. ಆ ಸಂಸ್ಥೆಯ ವತಿಯಿಂದ ಹೊರತಂದ ಹೊತ್ತಗೆಗಳ ಸಂಯೋಜನೆಗೂ ನನಗೆ ಸಹಯೋಗ ನೀಡಿದ ಜವ್ವನಿಗ ರಾಮಣ್ಣ. ಆಗ ನಾವು ಅಂದಿನ ದಿನಗಳಲ್ಲಿ ಜ್ವಲಂತವೂ ಜೀವಂತವೂ ಆದ ಸಮಸ್ಯೆಗಳನ್ನು ಕೇಂದ್ರವಾಗಿರಿಸಿ ಸಂಕಿರಣಗಳನ್ನು ಏರ್ಪಡಿಸಿದ್ದುಂಟು. ಒಂದು ನೂರು ಚಿತ್ರಗಳಲ್ಲಿ ಅಭಿನಯಿಸಿದ ಸಂದರ್ಭದಲ್ಲಿ ಡಾ. ರಾಜಕುಮಾರರಿಗೆ ಸಾರ್ವಜನಿಕ ಸತ್ಕಾರ ಸಮಾರಂಭವನ್ನು ಮಲ್ಲೇಶ್ವರದಲ್ಲಿ ಅದ್ದೂರಿಯಾಗಿ ವ್ಯವಸ್ಥೆ ಮಾಡಿದ್ದು ರಾಜಕುಮಾರ್ ವಿರುದ್ಧ ಪಟ್ಟಭದ್ರಹಿತಾಸಕ್ತ ಪತ್ರಕರ್ತರು ಕಲಾವಿದರು ಅಪಪ್ರಚಾರದಲ್ಲಿ ನಿರತವಾದಾಗ ನನ್ನ ಅಧ್ಯಕ್ಷತೆಯಲ್ಲಿ ರಾಜಕುಮಾರ್ ಕಲಾವಿಲಾಸಿ ಸಂಘ ಸ್ಥಾಪಿಸಿ ರಾಜ್ ವಿರೋಧಿಗಳ ಧ್ವನಿಯಡಗಿಸಿದ್ದು ರಾಮಣ್ಣನ ದೂರದೃಷ್ಟಿ. ಹಿಂದಿ ಭಾಷೆಯ ದಬ್ಬಾಳಿಕೆಯನ್ನು ಧಿಕ್ಕರಿಸುವ ವಿಚಾರ ಸಂಕಿರಣವನ್ನು ನಡೆಸಲು ನನಗೆ ಬೆಂಬಲವಾಗಿ ನಿಂತವರಲ್ಲಿ ರಾಮಣ್ಣನನ್ನು ಮರೆಯುವಂತಿಲ್ಲ. ಮುಂದಿನ ವರ್ಷಗಳಲ್ಲಿ ಆತ ಕರ್ನಾಟಕ ಪತ್ರಕರ್ತರ ಸಂಘದ ಖಜಾಂಚಿಯಾಗಿ ಕಾರ್ಯದರ್ಶಿಯಾಗಿ ಕೈಗೂಡಿಸಿದ ಯೋಜನೆಗಳು ಹಲವಾರು. ನೆಲಕಚ್ಚಿ ತುಕ್ಕು ಹಿಡಿದ ಸಂಘಕ್ಕೆ ಎಚ್.ಎ. ಮುನಿಯಪ್ಪ, ವಡ್ಡರ್ಸೆ ರಘುರಾಮಶೆಟ್ಟಿ, ಅರ್ಜುನದೇವ, ಜತೆಯಲ್ಲಿ ತನ್ನ ಆರೋಗ್ಯವನ್ನೂ ಲೆಕ್ಕಿಸದೆ ರಾಮಣ್ಣ ಕಾಯಕಲ್ಪವೆಸಗಿ ಜೀವತುಂಬಿದ್ದು ಎಲ್ಲರಿಗೂ ತಿಳಿದ ವಿಷಯವೇ. ಸುಮಾರು ಎರಡು ದಶಕಕಾಲ ರಾಷ್ಟ್ರೀಯ ಹಾಗೂ ಪ್ರಾಂತೀಯ ವಲಯ ಮಟ್ಟದಲ್ಲಿ ಪತ್ರಕರ್ತರ ಸಂಘದ ಹಾಗೂ ಒಕ್ಕೂಟದ ಪದಾಧಿಕಾರಿಯಾಗಿ ರಾಷ್ಟ್ರೀಯ ಮಂಡಳಿ ಸದಸ್ಯನಾಗಿ ದುಡಿದ ರಾಮಣ್ಣ ತನ್ನ ಕಾಯಕಕ್ಕೆ ವಿರಾಮಕೊಟ್ಟೇ ಇಲ್ಲ. ಕನ್ನಡ

ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಘಟಕದ ಚುನಾಯಿತ ಅಧ್ಯಕ್ಷನಾಗಿ ರಾಮಣ್ಣ ಇಡೀ ಕರ್ನಾಟಕಕ್ಕೆ ಮಾದರಿಯಾಗುವಂತೆ ನಿರಂತರ ಕಾರ್ಯಕ್ರಮಗಳಿಂದ ದೊಡ್ಡ ಹೆಸರಾಗಿದ್ದಾನೆ. ಕನ್ನಡ ಸಂಘರ್ಷ ಸಮಿತಿಯಂತೂ ದಶಕಗಳಿಂದ ನೂರಾರು ಕಾರ್ಯಕ್ರಮಗಳನ್ನು ಮಾಡಿ ಸಂಘ ಸಂಸ್ಥೆಗಳ ಸಾಲಿನಲ್ಲಿ ಅಗ್ರಗಣ್ಯವೆನಿಸುವಂತೆ ದುಡಿದಿದ್ದಾನೆ; ಈ ದುಡಿಮೆಯಲ್ಲಿ ಮಡದಿ ಗಾಯತ್ರಿಯೂ ಹೆಗಲೆಣೆಯಾಗಿದ್ದಾಳೆ.

೫. **ಕನ್ನಡಾಭಿಮಾನಿ:** ರಾಮಣ್ಣನ ಪಂಚಮುಖ ಕನ್ನಡಮ್ಮ. ಇದು ಆತನ ಜೀವಸ್ವರ. ಗೋಕಾಕ ಚಳವಳಿಯಲ್ಲಿ ಪ್ರಚಾರಕ್ಕಾಗಿ ಕಂಡುಕೊಂಡ, ಹುಟ್ಟಿಕೊಂಡ ಖೋಟಾ ಚಳವಳಿಗಾರರೂ ಇರುವುದರಿಂದ ರಾಮಣ್ಣನಂಥ ಅಪ್ಪಟ ಕನ್ನಡ ಪ್ರೇಮಿಗಳು ಮಿಂಚುತ್ತಾರೆ. ಗೌರವಾರ್ಹರಾಗುತ್ತಾರೆ. ಕನ್ನಡ ಎಂ.ಎ. ಪಡೆದು, ಕನ್ನಡ ಪ್ರಾಧ್ಯಾಪಕರಾಗಿಯೂ ತಮ್ಮ ಮಕ್ಕಳನ್ನು ಮಾತ್ರ ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸಿ ಕಂಡವರ ಮಕ್ಕಳನ್ನು ಕನ್ನಡ ಕಲಿಯುವಂತೆ ಹೇಳುವ ಖದೀಮರನ್ನು ಕಂಡರೆ ರಾಮಣ್ಣ ಕೆಂಡವಾಗಿ, ಕಂಡತುಂಡ ರೀತಿಯಲ್ಲಿ ಬೆಂಡೆತ್ತುತ್ತಾರೆ. ವಿದ್ಯಾರ್ಥಿಕಾಲದಿಂದಲೂ ಕನ್ನಡ ರಾಮಣ್ಣನ ಮೊದಲ ಮತ್ತು ಕಡೆಯ ಪ್ರೇಮ; ಅನಂತರ ಕನ್ನಡಪರ ಸಂಘಟನೆಗಳಲ್ಲಿ ತೊಡಗಿಕೊಂಡು, ಅಡಿಯಿಂದ-ಮುಡಿಯವರೆಗೆ ಕನ್ನಡವೇ ಆಗಿ ಬದುಕುತ್ತ ಬಂದಾತ. ಕುವೆಂಪು , ದೇಜಗೌ, ಹಾಮಾನಾ ರೀತಿ ಆತನಿಗೆ ಆದರ್ಶ. ಅನಕೃ ಜತೆ ಬೆಂಗಳೂರಲ್ಲಿ ೩೦ ವರ್ಷಗಳ ಹಿಂದೆ ನಾನು, ರಾಮಣ್ಣ, ಕಮಲಾ ಹಂಪನಾ, ಕೋಣಂದೂರು ಲಿಂಗಪ್ಪ, ನಾಡಿಗೇರ ಕೃಷ್ಣರಾಯ ಬಡಾವಣೆಯ ಮೂಲೆಗಳವರೆಗೆ ಕನ್ನಡ ಚಳವಳಿ ನಡಸಿದ್ದು ಇಂದಿಗೂ ನೆನಪಿಡುವಂತಹುದು. ರಾಜಧಾನಿಯಲ್ಲಿ ಕನ್ನಡದ ಸಸಿಗಳನ್ನು ಅಂದು ನಾಟಿ ಹಾಕುವ ಕೆಲಸವನ್ನು ನಾವು ಮಾಡಿದ್ದು ಇಂದು ಸಸಿಗಳು ಮರಗಳಾಗಿ ಹೂ ಬಿಡುವುದನ್ನು ನೋಡುತ್ತಿದ್ದೇವೆ. ರಾಮಣ್ಣ ಪತ್ರಕರ್ತನಾಗಿಯೂ, ಲೇಖಕನಾಗಿಯೂ, ಸಂಘಟಕ ನಾಗಿಯೂ ಇದೇ ಕನ್ನಡದ ಪರಿಚಾರಿಕೆಗೆ ತನ್ನನ್ನು, ತನ್ನ ಇಡೀ ಕುಟುಂಬವನ್ನೂ ಅರ್ಪಿಸಿಕೊಂಡಿರುವುದು ಸಹಜವಾಗಿಯೇ ಇದೆ. ರಾಮಣ್ಣನ ಪರಿವಾರವೆಲ್ಲ ಕನ್ನಡ ಪರ ಪ್ರವೃತ್ತ ಪಡೆ. ಅಪ್ರತಿಮ ಕನ್ನಡ ಕಾರ್ಯಕರ್ತ ರೆಹಮಾನ್‌ಖಾನರ ತ್ಯಾಗ ಜೀವನಕ್ಕೆ ಸ್ಪಂದಿಸಿದ ಸಹೃದಯಿ ರಾಮಣ್ಣ. ಅವರ ಸ್ಮರಣೆಗಾಗಿ ಪುಸ್ತಕವೊಂದನ್ನು ಪ್ರಕಟಿಸಿರುವುದೇ ಅಲ್ಲದೆ 'ಕನ್ನಡದ ಕಟ್ಟಾಳು' ಎಂಬ ಪ್ರಶಸ್ತಿಯನ್ನು ಪ್ರಾರಂಭಿಸಿ ಕನ್ನಡದ ಹಿರಿಯ ಕಾರ್ಯಕರ್ತರಾದ ಆಳ್ಲ ಚಿರಂಜೀವಿ ಮತ್ತು ಜೆ.ರ. ರಂಗರಾಜು ಅವರಿಗೆ ಮೊದಲನೆಯ ಎರಡು ಪ್ರಶಸ್ತಿಯನ್ನು ವಿತರಣೆ ಮಾಡಿದ ಸ್ನೇಹಜೀವಿಯೀತ. ತಾನು, ತನ್ನ ಜಾತಿ ಮಾತ್ರ ಎಂದು ಸ್ವರತಿಯಿಂದ ಬಳಲುವ ಪತ್ರಿಕಾ ಪ್ರಚಾರಪ್ರಿಯ ಚಳವಳಿಗಾರರು ರಾಮಣ್ಣನ ಮುಂದೆ ಕುಬ್ಜರಾಗುವುದು ಈತನ ಈ ದೊಡ್ಡಗುಣಗಳಿಂದಾಗಿ. ರಾಮಕೃಷ್ಣೇಗೌಡ, ಸಮೀಉಲ್ಲಾ, ಪಾರ್ಶ್ವನಾಥ್, ವಿಜಯೇಂದ್ರ, ಸಾವಿತ್ರಿ ವಿಜಯೇಂದ್ರ, ಶ್ರೀನಿವಾಸ ಇವರೆಲ್ಲ ರಾಮಣ್ಣನ ಎಡಗೈ ಬಲಗೈ ಆಗಿ ಕನ್ನಡ ಕಂಕಣ ಕಟ್ಟಿದ್ದಾರೆ.

೬. **ಹೋರಾಟಗಾರ:** ರಾಮಣ್ಣನ ಷಣ್ಮುಖವಾಗಿ ಹೊಳೆಯುತ್ತ ಹೊಮ್ಮುತ್ತಿರುವದು ಆತನ ಬತ್ತದ ಛಲ, ದಣಿವರಿಯದ ಹೋರಾಟ, ಸ್ವಲ್ಪ ಅಲ್ಪ ಹೆಸರು ಬಂದರೂ ಸಾಕು, ಎಲ್ಲರನ್ನೂ ಹೋರಾಟಗಾರರೆಂದು ಕರೆಯುವುದಾಗುತ್ತಿದೆ. ಹೋರಾಟ ಎನ್ನುವುದು ಕುಸ್ತಿಯಲ್ಲ,

ಅದೊಂದು ನಿಶ್ಚಲ ಮನೋಧರ್ಮ, ನಿರ್ದಿಷ್ಟಧ್ಯೇಯಕ್ಕಾಗಿ ಮಾಡುವ ಪ್ರಾಮಾಣಿಕ ಪ್ರಯತ್ನ. ಮಾಡುವ ಪ್ರಯತ್ನಗೆಳೆಲ್ಲವೂ ಪ್ರಾಮಾಣಿಕವಾಗಿರುತ್ತವೆಂದು ಹೇಳಲಾಗದು; ಪ್ರಾಮಾಣಿಕವೇ ಆದರೂ ಮಾಡುವ ಪ್ರಯತ್ನಗಳೆಲ್ಲ ಫಲಕೊಡುತ್ತವೆಂದೂ ಹೇಳಲು ಬರುವುದಿಲ್ಲ. ರಾಮಣ್ಣನ ಪ್ರಯತ್ನಗಳು ಪ್ರಾಮಾಣಿಕವೂ ಫಲಪ್ರದವೂ ಆಗಿರುವುದೊಂದು ಹೆಚ್ಚಳ. ಆತನ ಹೋರಾಟ ಮದುವೆಯಿಂದ ಆರಂಭವಾಯಿತು. ಎರಡೂ ಕಡೆಯ ವೈಮನಸ್ಯವಿದ್ದರೂ ಬಯಸಿದ ಹುಡುಗಿಯ ಕೈ ಹಿಡಿಯಲು ಉಡದ ಹಿಡಿತದಿಂದ ಸೆಣಸಿದ್ದುಂಟು. ವೃತ್ತಿಸಂಬಂಧವಾದ ಹೋರಾಟವಂತೂ ದೊಡ್ಡ ಕಣ್ಣೀರಿನ ಕಥೆ. ಸಂಯುಕ್ತ ಕರ್ನಾಟಕಕ್ಕೆ ವಿದಾಯ ಹೇಳಿ ಹೊರಬಂದ ಮೇಲೆ ಹೊಸದಾಗಿ ಹುಟ್ಟಿದ ಮುಂಗಾರು ಪತ್ರಿಕೆಗೆ ರಾಜಧಾನಿಯ ಪ್ರಮುಖ ವರದಿಗಾರನಾಗಿ ಪುಟಗಟ್ಟಲೆ ಬರೆದು ಬೆವರು ಸುರಿಸಿದರೂ ಬರುತ್ತಿದ್ದುದು ಅಷ್ಟಕ್ಕಷ್ಟೆ; ಆ ಪತ್ರಿಕೆಯೂ ನಿಂತು ಹೋಯಿತು. ಫ್ರೀ-ಲಾನ್ಸ್‌ಜರ್ನಲಿಸ್ಟ್ ಆಗಿ ತನ್ನ ಹುರುಪು ಒಣಗದಂತೆ ಒದ್ದೆಯಾಗಿ ಇಟ್ಟುಕೊಂಡು ಹೋರಾಡುತ್ತಲೇ ಬಂದ ರಾಮಣ್ಣ ಹೆಜ್ಜೆಗಳನ್ನು ಹಿಂತಿರುಗಿಸಲೂ ಇಲ್ಲ, ಬದಲಿಸಲೂ ಇಲ್ಲ ಒಂದೇ ದಿಕ್ಕು, ಒಂದೇ ದಾರಿ, ಒಂದೇ ಗುರಿ; ಅದಕ್ಕೆ ತಾಳ ಮೇಳವಿಲ್ಲ ಹೋರಾಟವೇ. ಇದರೊಂದಿಗೆ ಕನ್ನಡದ ಹೋರಾಟವಂತೂ ಇದ್ದೇ ಇತ್ತು. ಜತೆಗೆ ಪತ್ರಕರ್ತರ ನ್ಯಾಯಕ್ಕಾಗಿ ಹೋರಾಟ. ಸಂಘಸಂಸ್ಥೆಗಳಲ್ಲಿಯೂ ಇದೇ ಕಸರತ್ತು; ಸರ್ಕಾರದೊಂದಿಗೂ ಇದೇ ಸೆಣಸು, ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯಲ್ಲೂ ಇದೇ ಬಿರುಸು. ಬೇರೆಯವರಿಗೆ ಎಷ್ಟೋ ಸಲ ಈತನ ಈ ಹೋರಾಟ ಕಷ್ಟವಾದದ್ದುಂಟು, ಇರುಸುಮುರುಸು ಆದದ್ದಿದೆ. ಆದರೆ ರಾಮಣ್ಣನಿಗೆ ಅದರ ಪರಿವೆಯೇ ಇರುವುದಿಲ್ಲ; 'ನೀವು ಒಪ್ಪಿ ಬಿಡಿ, ಇದು ನನ್ನ ನಿಷ್ಠೆ, ಇದು ನನ್ನ ಪ್ರತಿಷ್ಠೆ' ಎಂದು ದಾಪುಗಾಲಿನಿಂದ ದಾಟಿರುತ್ತಾನೆ. ಈ ಬಗೆಯ ನಿಷ್ಠುರ ಹೋರಾಟದ ಬಿಸಿತಟ್ಟಿದರೂ, ನೋವು ಗಾಯ ಆದರೂ ಹೋರಾಟದ ಹರಿತ ಮಾತ್ರ ಮೊಂಡಾಗುವುದಿಲ್ಲ.

೭. **ಅಪ್ರತೀಕಾರಬುದ್ಧಿ:** ರಾಮಣ್ಣನ ಒರಟುತನ, ಜಿಗುಟುತನ, ಹೋರಾಟದ ಬಿಸಿ-ಎಲ್ಲವೂ ಸಹ್ಯವಾಗುವುದು ಆತನ ಶುದ್ಧಾಂತಃಕರಣದಿಂದ. ಯಾರನ್ನೇ ವಿರೋಧಿಸಲಿ, ಯಾವುದನ್ನೇ ಪ್ರತಿಭಟಿಸಲಿ ಅದು ವೈಯಕ್ತಿಕ ರಾಗದ್ವೇಷ ಪ್ರೇರಿತವಲ್ಲ. ರಾಮಣ್ಣನ ಭಿನ್ನಾಭಿಪ್ರಾಯಗಳು ತಾತ್ವಿಕವಾದವು, ಸಾತ್ವಿಕವಾದವು. ತಾನು ಬೇರೆ ನಿಲುವನ್ನು ತಳೆದು ಒಬ್ಬರನ್ನು ಎದುರಿಸಿ, ಖಂಡಿಸಿ ಮಾತನಾಡಿದ್ದರೂ ಅದು ಆ ವೇದಿಕೆಯಿಂದ ಕೆಳಗೆ ಇಳಿಯುತ್ತಿದ್ದ ಹಾಗೆ ಆವಿಯಾಗಿ ಹೋಗಿರುತ್ತದೆ. ಅಂಥದೊಂದು ಕ್ರೀಡಾಮನೋಭಾವ ಅಪರೂಪ. ಒಳಗೊಳಗೇ ಕತ್ತಿಮಸೆಯುತ್ತ ತನಗೆ ಬೇಕಾದವರಿಗೆ ಒಂದು ನೀತಿ, ಬೇಡಾದವರಿಗೆ ಇನ್ನೊಂದು ತತ್ತ್ವ ಎಂದು ಕಲಸುಮೇಲೋಗರ ಮಾಡುವವರ ನಡುವೆ ಇಂತಹ ಗುಣ ಪ್ರಿಯವಾಗುತ್ತದೆ. ಕನ್ನಡದ ಕಾರ್ಯಕ್ರಮ ಮಾಡಿದರೆ ಯಾರ ಅಭಿಪ್ರಾಯಗಳನ್ನು ತಾನು ತೀವ್ರವಾಗಿ ಖಂಡಿಸಿರುತ್ತಾನೆಯೋ ಅಂತಹವರನ್ನೂ ಕರೆಸಿ ಮಾತಾಡಿಸುವುದು ರಾಮಣ್ಣನಿಗೆ ಸುಲಭ ಸಾಧ್ಯವಾಗುವುದು ಈ ಕಾರಣಕ್ಕಾಗಿ. ವಿರೋಧಿಗಳನ್ನು ತನ್ನ ಸಂಸ್ಥೆಯ ವೇದಿಕೆಗೆ ಕರೆದು ಗೌರವಿಸಿದ ಕಾರಣಕ್ಕಾಗಿ ಆತ ಅವರೊಂದಿಗೆ ಒಳಂಡಂಬಡಿಕೆ ಮಾಡಿಕೊಂಡಿದ್ದಾನೆಂಬ ಗುಮಾನಿ ಪಡಬೇಕಾದ್ದಿಲ್ಲ. ಏಕೆಂದರೆ ಮರು ದಿನವೇ ತನ್ನ ಭಿನ್ನಾಭಿಪ್ರಾಯವನ್ನು ಸ್ಥಾಪಿಸಿರುತ್ತಾನೆ. ಹೀಗೆ ಸ್ನೇಹ ಬೇರೆ, ಸಿದ್ಧಾಂತ ಬೇರೆ ಎಂಬ ಸಮಾನಾಂತರ ಜೀವನ ರೇಖೆಗಳ ಮೇಲೆ ರಾಮಣ್ಣನ ಜೀವನಯಾನ ನಡೆದಿದೆ.

೮. ಉದಾರತೆ: ರಾಮಣ್ಣನ ಅಷ್ಟಗುಣವೆಂದರೆ ಔದಾರ್ಯ. ತನಗೆ ಇರಲಿ ಇಲ್ಲದಿರಲಿ ಇನ್ನೊಬ್ಬರಿಗೆ ತನ್ನ ಕೈಲಾದ ನೆರವನ್ನು, ಇತರರು ಕೋರಿದಾಗ, ಕೊಡುವುದು ಆತನಿಗೆ ಸಲೀಸಾಗಿ ಸಿದ್ಧಿಸಿದೆ. ಹೀಗೆ ಬೇರೆಯವರಿಗೆ ಕೊಡುವುದು ಎಂದು ಹೇಳಿದಾಗ ಅದು ಹಣ ರೂಪದ ಸಹಾಯ ಎಂದು ಅರ್ಥೈಸಲಾಗದು. ಅಧಿಕಾರ, ಅನುಕೂಲ, ಅವಕಾಶ, ವಸ್ತು ಪದಾರ್ಥ ಎಲ್ಲದರಲ್ಲಿಯೂ ಹಂಚಿ ಉಣ್ಣುವ, ಸಹಪಂಕ್ತಿ ಭೋಜನ ಸ್ವಭಾವ ಆತನಲ್ಲಿದೆ. ಎಲ್ಲ ಕಡೆ ತಾನೇ ಕಾಣಿಸಿಕೊಳ್ಳಬೇಕು, ತನ್ನ ಹೆಸರೇ ರಾರಾಜಿಸಬೇಕು ಎಂಬಂಥ ಅತಿಸ್ವಾರ್ಥ ಲಾಲಸೆಯ ಕಾಹಿಲೆ ಬಂದಿಲ್ಲ. ತನ್ನ ಒಡನಾಡಿಗಳ ವೈಯಕ್ತಿಕ ಕಷ್ಟನಷ್ಟಗಳಿಗೂ ಸ್ಪಂದಿಸುತ್ತಾನೆ, ಶಕ್ತಿಮೀರಿ ಸಹಾಯ ಮಾಡುತ್ತಾನೆ. ಅನೇಕರಿಗೆ ತನ್ನ ಜಾಗಬಿಟ್ಟು ಕೊಟ್ಟು ಹಿಂದೆ ನಿಂತು ಬೆನ್ನು ತಟ್ಟಿ ಹುರಿದುಂಬಿಸುತ್ತಾನೆ.

೯. ವಿಚಾರವಾದಿ: ರಾಮಣ್ಣನ ನವರತ್ನದ ಗುಣ ಆತನಲ್ಲಿ ನಖಶಿಖಾಂತವಾಗಿ ತುಂಬಿ ತುಳುಕುವ ವಿಚಾರವಾದ. ಅಪ್ಪಟ ವಿಜ್ಞಾನದ ವಿದ್ಯಾರ್ಥಿಯಾದ ಆತ ಖಚಿತ ವೈಜ್ಞಾನಿಕ ದೃಷ್ಟಿಯನ್ನು ಮೇಳೈಸಿಕೊಂಡು ಡಾ.ಎಚ್. ನರಸಿಂಹಯ್ಯ ಅವರಿಂದಲೂ ಸೈ ಎನಿಸಿಕೊಂಡಿದ್ದಾರೆ. ಪ್ರತಿನಿತ್ಯದ ಬದುಕಿನಲ್ಲಿ ಈ ವೈಚಾರಿಕ ಪ್ರಖರತೆಯ ಹೊಳಹುಗಳನ್ನು ಕಾಣಬಹುದು. ಪ್ರತಿಯೊಂದಕ್ಕೂ ವಾರ ತಿಥಿ ಗ್ರಹ ನಕ್ಷತ್ರ ಎಂದು ನೋಡುವುದು ಆತನ ಜಾಯಮಾನಕ್ಕೆ ಒಗ್ಗದ ವಿಷಯ. ರಾಷ್ಟ್ರಕವಿ ಕುವೆಂಪು ಹೇಳುವ ವಿಚಾರವಾದ ಆತನಿಗೆ ಒಪ್ಪಿತವಾಗಿದೆ. ಮೂಢನಂಬಿಕೆಯನ್ನು ಕತ್ತುಹಿಡಿದು ನೂಕಿ ಅರ್ಥಪೂರ್ಣವಾದದ್ದನ್ನು ಅಳವಡಿಸಿಕೊಂಡು ಅಪ್ಪಟ ವಿಚಾರವಾದಿಯಾಗಿ ಬಾಳುತ್ತಿರುವುದನ್ನು ನಾನು ಚೆನ್ನಾಗಿ ಬಲ್ಲೆ.

೧೦. ಮಾತು-ಕೃತಿ: ರಾಮಣ್ಣನ ಹತ್ತನೆಯ ಮುಖ ಆತನ ಮಾತು-ಕೃತಿ. ಆತನ ಮಾತುಗಾರಿಕೆಯಲ್ಲಿ ನಯ ನುಣುಪು ಸಾಲದು, ಶಿಸ್ತು ಕಡಿಮೆ, ಸಂಯಮ ಸಡಿಲ ಎಂದೆಲ್ಲಾ ತೂತುಗಳನ್ನು ಹುಡುಕುತ್ತಾ ಹೋಗಬಹುದು. ಆದರೆ ಆತನ ಮಾತು ಕೃತಿಯನ್ನು ಎಲ್ಲರೂ ಸಹಿಸಿ ನುಂಗಿಕೊಳ್ಳುತ್ತಾರೆ. ಏಕೆಂದರೆ ರಾಮಣ್ಣ ಸತ್ಯವನ್ನು ಹೇಳುತ್ತಾನೆ. ಸತ್ಯ ಅಪ್ರಿಯವಾಗಿ ಪರಿಣಮಿಸಿದರೆ ಅದಕ್ಕೆ ಆತ ಹೊಣೆಯೆ! ಏನು ಹೇಳಬೇಕೋ ಅದನ್ನು ಉಪ್ಪು ಹುಳಿ, ಖಾರ ಅತಿರಂಜನೆಗಳಿಲ್ಲದೆ ಸೀದಾ ಸಾದಾ ತಿಳಿಸುವುದು ಆತನ ಶೈಲಿ. ಅದು ಮಿತಿಯೂ ಹೌದು, ಹಿತವೂ ಹೌದು, ಹೆಚ್ಚುಗಳವೂ ಹೌದು. ಬರವಣಿಗೆಯೂ ಇದಕ್ಕೆ ಹೊರತಲ್ಲ. ರಾಮಣ್ಣನದು ನಿರಲಂಕೃತ ಶೈಲಿ. ಆದರೆ ಅದರಲ್ಲಿ ನಿಜದ ಬೆಳಕು ಇರುತ್ತದೆ. ನಿಜ ಎಂಬುದು ನಿರಂಜನವಾಗಿರುತ್ತದೆ. ಆತ ವೇದಿಕೆ ಹತ್ತಿದರೆ, ಮೈಕು ಹಿಡಿದರೆ ಕೆಲವರ ಎದೆ ಡವಡವ ಎನ್ನುತ್ತದೆ. ಕೆಲವರ ಹೃದಯದ ಬಡಿತ ಹೆಚ್ಚುತ್ತದೆ. ಕೆಲವರು ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ. ಈ ಬಗೆಯ ಪ್ರತಿಕ್ರಿಯೆಗಳಿಗೆ ಕಾರಣ ರಾಮಣ್ಣನ ನೇರ ನಡೆ ನುಡಿ, ಆತ ನುಡಿದಂತೆ ನಡೆಯುತ್ತಾನೆ, ನಡೆದಂತೆ ನುಡಿಯುತ್ತಾನೆ.

ರಾಮಣ್ಣ ಎಚ್. ಕೋಡಿಹೊಸಹಳ್ಳಿ ಇದುವರೆಗೆ ಮಾಡಿರುವುದನ್ನು ನೋಡಿದಾಗ, ತುಳಿದಿರುವ ದಾರಿಯನ್ನು ಹಿಂತಿರುಗಿ ಸಮೀಕ್ಷಿಸಿದಾಗ ಹೆಮ್ಮೆಯಾಗುತ್ತದೆಂಬುದು ದಿಟ. ಆದರೆ ರಾಮಣ್ಣ ಹೋಗಬೇಕಾದ ದಾರಿ ಇನ್ನೂ ಇದೆ, ಮಾಡಬೇಕಾದ ದೊಡ್ಡ ಸಾಧನೆಗಳು ಇನ್ನೂ ಇವೆ ಎಂಬುದು ಅಷ್ಟೇ ನಿಜ.

*

ಗಾಯತ್ರಿ ಪ್ರಿಯ : ರಾಮಣ್ಣ

ಡಾ. ಕಮಲಾ ಹಂಪನಾ

'ಗಾಯತ್ರಿ ಪ್ರಿಯ' ರಾಮಣ್ಣ ಆಗುವುದಕ್ಕೆ ಮೊದಲಿಂದಲೂ ರಾಮಣ್ಣ ಕೋಡಿಹೊಸಳ್ಳಿ ನನಗೆ ಪರಿಚಿತರು. ಕನ್ನಡದ ಹುಚ್ಚನ್ನು ಬಹಳ ಕಿರಿಯ ವಯಸ್ಸಿನಲ್ಲಿಯೆ ತಲೆಗೇರಿಸಿಕೊಂಡ ಹುಡುಗ ರಾಮಣ್ಣ. ಅಂದಿನಿಂದ ಇಂದಿನವರೆಗೂ ಆತನ ಉತ್ಸಾಹದ ಓಡಾಟವನ್ನು, ಕ್ರಿಯಾಶೀಲತೆಯನ್ನು ದ್ವಂದ್ವಗಳಿಲ್ಲದ ನೇರ ನಡೆ-ನುಡಿಯನ್ನೂ, ವಿಶಿಷ್ಟ ರೀತಿಯಲ್ಲಿ ಬೆಳೆದ ಪರಿಯನ್ನೂ ಗಮನಿಸುತ್ತಲೇ ಬಂದಿದ್ದೇನೆ. ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ಅಚ್ಚರಿ ಮೂಡುವಂತೆ ಬೆಳೆದ ಪರಿಯನ್ನು ವಿಸ್ಮಿತಳಾಗಿ ನೋಡುತ್ತಾ ಬಂದಿದ್ದೇನೆ.

ಶ್ರೀಯುತ ರಾಮಣ್ಣ ಕೋಡಿಹೊಸಳ್ಳಿಯ ಎಲ್ಲ ಸಾಧನೆಗಳನ್ನು ಅಲ್ಲದಿದ್ದರೂ ಕೆಲವನ್ನಾದರೂ ನಿರೂಪಿಸಲು ಒಂದು ಹೊತ್ತಗೆಯ ಸಾಮಗ್ರಿ ನನ್ನ ಬಳಿ ಇದೆ. ಆದರೆ ಇಲ್ಲಿ ಅದು ಪ್ರಸ್ತುತವೂ ಅಲ್ಲ; ಸಾಧುವೂ ಅಲ್ಲ. ನಾನು ಕೇವಲ ರಾಮಣ್ಣ ಗಾಯತ್ರಿಗೆ ಸಂಬಂಧಿಸಿದ ಒಂದೇ ಒಂದು ಎಳೆಯನ್ನು ಕುರಿತು ಇಲ್ಲಿ ದಾಖಲಿಸುವ ಪ್ರಯತ್ನ ಮಾಡಿದ್ದೇನೆ. ಗಾಯತ್ರಿ-ರಾಮಣ್ಣ, ಈ ಇಬ್ಬರೂ ಒಂದೇ ನಾಣ್ಯದ ಎರಡು ಮುಖಗಳು. ಆದುದರಿಂದ ಗಾಯತ್ರಿಯನ್ನು ಪ್ರತ್ಯೇಕ ವಾಗಿಯಾಗಲೀ ರಾಮಣ್ಣನನ್ನು ಬೇರೆ ರೀತಿಯಿಂದಲಾಗಲಿ ನೋಡಲು ನನಗಂತೂ ಸಾಧ್ಯವಿಲ್ಲ. ಆದುದರಿಂದ ಅವರಿಬ್ಬರನ್ನೂ ಅವಿನಾಭಾವದಿಂದ ಕಂಡ ಒಂದೆರಡು ಸಂಗತಿಗಳನ್ನು ಇಲ್ಲಿ ಬಿಚ್ಚಿಟ್ಟಿದ್ದೇನೆ.

೧೯೫೪ ರಿಂದ ೧೯೬೨ ರವರೆಗೂ ನಾವು (ಡಾ. ಹಂಪನಾ) ಮಲ್ಲೇಶ್ವರದ ೮ನೇ ಅಡ್ಡರಸ್ತೆಯ ದೇವಾಲಯದ ಬೀದಿಯಲ್ಲಿ ವಾಸವಾಗಿದ್ದೆವು. ಶ್ರೀ ಕಲ್ಲೆ ಶಿವೋತ್ತಮರಾಯರು ಅಲ್ಲಿಯೆ ೮ನೇ

ಅಡ್ಡರಸ್ತೆಯ ಕನ್ನಿಕಾ ಪರಮೇಶ್ವರಿ ದೇವಾಲಯದ ಬಳಿ ವಾಸವಾಗಿದ್ದರು. ಆ ವೇಳೆಗಾಗಲೇ ಕಲ್ಲೆ ಅವರು ಉತ್ತಮ ಪತ್ರಕರ್ತರು ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಕನ್ನಡ ಪತ್ರಿಕಾರಂಗದ ಪಿತಾಮಹರಾಗಿದ್ದ ಶ್ರೀ ಬಿ.ಎನ್. ಗುಪ್ತರು, ಸಂಸ್ಥಾಪಕ ಸಂಪಾದಕರಾಗಿದ್ದ 'ಜನಪ್ರಗತಿ' ವಾರಪತ್ರಿಕೆಯ ಸಂಪಾದಕತ್ವವನ್ನು ಆಗ ತಾನೆ ಶ್ರೀ ಕಲ್ಲೆ ಶಿವೋತ್ತಮರಾಯರಿಗೆ ವಹಿಸಿದ್ದರು. ಶ್ರೀ ಶಿವೋತ್ತಮರಾಯರು ಹಿಂದುಳಿದ, ಅಲ್ಪಸಂಖ್ಯಾತ ಹರಿಜನ-ಗಿರಿಜನರ ಬಗೆಗಿನ ಹೋರಾಟದ ಬದುಕಿಗೂ ತಮ್ಮನ್ನು ಅರ್ಪಿಸಿಕೊಂಡಿದ್ದರು. ಕಲ್ಲೆ ಅವರು ತಮ್ಮ ವಲಯಕ್ಕೆ ಸಮೀಪಿಸುತ್ತಿದ್ದ ಜನರಿಗೆ ತಾವು ನಂಬಿರುವ, ಬೆಳಸಿಕೊಂಡು ಬಂದಿರುವ ಭಾವನೆಗಳನ್ನು ಸಮರ್ಥರೀತಿಯಿಂದ ಪ್ರತಿಪಾದಿಸಿ ಅದೇ ರೀತಿ ನಡೆಯುವಂತೆ ಪ್ರೇರೇಪಿಸುತ್ತಿದ್ದರು. ಅವರ ಬಳಿ ಯಾವಾಗಲೂ ಒಂದು ಉತ್ಸಾಹಿ ಯುವಕರ ತಂಡ ಇರುತ್ತಿತ್ತು. ಅಂಥ ತಂಡದಲ್ಲಿ ಎದ್ದು ಕಾಣುತ್ತಿದ್ದ ಚುರುಕು ಹುಡುಗನೆಂದರೆ ರಾಮಣ್ಣ ಕೋಡಿಹೊಸಹಳ್ಳಿ.

'ಜನಪ್ರಗತಿ' ಪತ್ರಿಕೆಗೆ ನಾನು ಹಾಗು ಹಂಪನಾ ಇಬ್ಬರೂ ಲೇಖನಗಳನ್ನು ಬರೆಯುವ ಅಭ್ಯಾಸವನ್ನು ಇಟ್ಟುಕೊಂಡಿದ್ದೆವು. ಲೇಖನಗಳನ್ನು ಕೇಳಲು, ಕನ್ನಡ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯ ತಿಳಿಯಲು, ಚರ್ಚಿಸಲು ರಾಮಣ್ಣ ನಮ್ಮ ಮನೆಗೆ ಆಗಾಗ ಎಡತಾಗುತ್ತಿದ್ದರು. ರಾಮಣ್ಣನಲ್ಲಿ ಆ ಕಿರುವಯಸ್ಸಿಗಾಗಲೇ ಚಿಗುರೊಡೆದಿದ್ದ ಕನ್ನಡ ಪರ ಕಾಳಜಿ, ಕನ್ನಡ ಪರ ಚಟುವಟಿಕೆ, ಹೋರಾಟ, ಚಳವಳಿ, ಪತ್ರಿಕೋದ್ಯಮದಲ್ಲಿ ತೋರುತ್ತಿದ್ದ ಶ್ರದ್ಧೆ-ಇವೆಲ್ಲ ದಿನಕ್ರಮೇಣ ದಟ್ಟವಾಗಿ ಬೆಳೆಯಲಾರಂಭಿಸಿತು. ಭರವಸೆಯ ಒಳ್ಳೆಯ ಕಾರ್ಯಕರ್ತನಾಗಿ ರಾಮಣ್ಣ ವರ್ಧಿಸಿದರು. ಯಾವುದೇ ಕಾರ್ಯಕ್ರಮವಾಗಲಿ, ಕೆಲಸವಾಗಲಿ ಶ್ರದ್ಧೆಯಿಂದ ನೆರವೇರಿಸುವ ಸಾಮರ್ಥ್ಯವನ್ನು ರಾಮಣ್ಣ ಗಳಿಸಿಕೊಂಡರು. ತಮ್ಮದೇ ಆದ ರೀತಿಯಲ್ಲಿ ಜನರನ್ನು ಸಂಘಟಿಸುವ ಕಲೆಯನ್ನೂ ಪಡೆದುಕೊಂಡರು. ಕ್ರಿಯಾತ್ಮಕ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನದಲ್ಲಿ ಸಫಲರಾದರು. ಯಶಸ್ಸಿನ ಮೆಟ್ಟಿಲನ್ನು ಏರತೊಡಗಿದರು.

ಈ ಸಂದರ್ಭದಲೆಲ್ಲಾ ನಮ್ಮ ಮನೆಗೆ ಬರುತ್ತಿದ್ದ ರಾಮಣ್ಣ ನಮ್ಮ ಮನೆಯ ಸದಸ್ಯರಲ್ಲಿ ಒಬ್ಬರು ಎನ್ನುವ ಆತ್ಮೀಯತೆಯನ್ನು ಪಡೆದಿದ್ದರು. ಒಂದು ದಿವಸ ಇದ್ದಕ್ಕಿದ್ದಂತೆ ಈ ಹುಡುಗನ ಮೇಲೆ ಒಂದು ಅಪಸ್ವರದ ಧ್ವನಿ ನಮ್ಮ ಬಂಧು ಬಳಗದವರಿಂದ ಕೇಳಿಬಂತು. ಅದೆಂದರೆ ರಾಮಣ್ಣನ ಪ್ರೇಮ ಪ್ರಸಂಗ.

ನಮ್ಮ ಮನೆಯಲ್ಲಿಯೇ ಪಿ.ಯು.ಸಿ. ಓದುತ್ತಿದ್ದ ನನ್ನ ಅಕ್ಕನ ಮಗಳು ಗಾಯತ್ರಿ ಹಾಗೂ ರಾಮಣ್ಣನ ಪ್ರೇಮ ಪ್ರಸಂಗ ತೀವ್ರಸ್ವರೂಪದ ವಿರೋಧಕ್ಕೆ ಗುರಿಯಾಯಿತು. ಇದಕ್ಕೆ ಮುಖ್ಯ ಕಾರಣ ವಿಭಿನ್ನ ಜಾತಿಯ ನಡುವಣ ಈ ಸಂಬಂಧ; ಎರಡೂ ಕಡೆ ಅಸಮಧಾನದ ಹೊಗೆ ಎದ್ದಿತು. ಗಾಯತ್ರಿಯ ತಂದೆಯಂತೂ ಕೋಪದ ಕೆಂಡವಾದರು. ಆದರೆ ನನಗಾಗಲಿ ಹಂಪನಾ ಅವರಿಗಾಗಲಿ ಇವರೀರ್ವರ ಪ್ರೇಮ ಬೆಳವಣಿಗೆಯ ಬಗೆಗೆ ಆಶ್ಚರ್ಯವಾಗಲಿ ಅಸಮಾಧಾನವಾಗಲಿ ಇರಲಿಲ್ಲ. ಅಂತರ್‌ಜಾತಿ, ಅಂತರ್‌ಧರ್ಮೀಯ ವಿವಾಹವಾಗಿದ್ದ ನಮಗೆ ಇಂಥ ಪ್ರಸಂಗ ತುಂಬಾ ಸಹಜ ಹಾಗೂ ಸಮಾಧಾನಕರ ಸಂಗತಿಯೇ ಆಗಿತ್ತು. ದಿನಾಂಕ ೨೫.೫.೭೨ರಲ್ಲಿ

ಗಾಯತ್ರಿ ಹಾಗೂ ರಾಮಣ್ಣನ ವಿವಾಹ ಸರಳವಾಗಿ ನೆರವೇರಿತು. ಗಾಯತ್ರಿಯ ತಂದೆ-ತಾಯಿ ಮದುವೆಗೆ ಬರಲಿಲ್ಲ. ನಾವು ಮಾತ್ರ ಸಂತಸದಿಂದ ಆ ಮದುವೆಯಲ್ಲಿ ಭಾಗಿಯಾದೆವು..

ಗಾಯತ್ರಿ-ರಾಮಣ್ಣ ದಂಪತಿಗಳಿಬ್ಬರೂ ಕಷ್ಟಧಾರಿಗಳು, ಕಷ್ಟಸಹಿಷ್ಣುಗಳು, ಸ್ವಾಭಿಮಾನಿಗಳು, ಸ್ವತಂತ್ರ ಬದುಕಿನ ಸರದಾರರು, ಸ್ವಂತ ಪರಿಶ್ರಮದಿಂದ ಮುಂದೆ ಬಂದವರು. ಮದುವೆಯ ನಂತರ ಗಾಯತ್ರಿಯ ವಿದ್ಯಾಭ್ಯಾಸಕ್ಕೆ ರಾಮಣ್ಣ ಹೆಚ್ಚಿನ ಗಮನಕೊಟ್ಟರು. ಆಕೆಯ ಅಸ್ಪಷ್ಟ ಅಭಿರುಚಿಗೆ ಸ್ಪಷ್ಟರೂಪ ಕೊಟ್ಟರು. ಆಕೆ ಅಪೂರ್ಣ ಗೊಳಿಸಿದ್ದ ವಿದ್ಯಾಭ್ಯಾಸಕ್ಕೆ ಪೂರ್ಣ ಸಹಕಾರ ನೀಡಿ ಮುಂದುದುವರಿಸಲು ಪ್ರೋತ್ಸಾಹಿಸಿದರು. ಆಕೆ ಟಿ.ಸಿ.ಎಚ್. ಮುಗಿಸಿಕೊಂಡು ಅಧ್ಯಾಪಕಿಯಾಗಿ ನೇಮಕಗೊಂಡಳು. ಗಾಯತ್ರಿಯು ಒಂದು ರೀತಿಯ ಸಾತ್ವಿಕಹಠದ ಹುಡುಗಿ, ಆ ಹಠದಲ್ಲಿ ಒಂದನೆಯದು ವಿದ್ಯೆ, ಎರಡನೆಯದು ಸಂಗೀತ-ಇವೆರಡನ್ನೂ ಕಷ್ಟಪಟ್ಟು ದಕ್ಕಿಸಿಕೊಳ್ಳುವತ್ತ ನಿರಂತರ ಪ್ರಯತ್ನಶೀಲೆಯಾದಳು. ಒಂದು ಕಡೆ ಸಂಸಾರದ ಹೊಣೆ, ಇನ್ನೊಂದು ಕಡೆ ಮಕ್ಕಳ ಪೋಷಣೆ, ಮಗುದೊಂದು ಕಡೆ ಅಧ್ಯಾಪಕಿ ಕರ್ತವ್ಯದ ಜವಾಬ್ದಾರಿ. ಇವೆಲ್ಲದರ ಜೊತೆಗೆ ಹೃದಯದಲ್ಲಿ ಮಿಡಿಯುತ್ತಿದ್ದ ವಿದ್ಯಾಭ್ಯಾಸದ ಅತಿಆಸೆ, ಎದೆಯ ಕಮಲದಲ್ಲಿ ಟುವ್ವಿ ಟುವ್ವಿ ಎನ್ನುತ್ತಿದ್ದ ಸಂಗೀತದ ಝೇಂಕಾರ! ಆಸೆಯ ಈಡೇರುವಿಕೆಗೆ ಗಂಡ ರಾಮಣ್ಣನ ಪ್ರೋತ್ಸಾಹವೂ ಸೇರಿತು. ವಿದ್ಯಾದಾಹಿ ಗಾಯತ್ರಿಯ ಓದು ಪುನಃ ಪ್ರಾರಂಭವಾಯಿತು. ಬಿ.ಎ. ಪದವಿಧರೆಯಾದಳು; ಅಷ್ಟಕ್ಕೆ ತೃಪ್ತಳಲ್ಲ ಈ ಗಾಯತ್ರಿ. ಮುಂದೆ ಬಿ.ಎಡ್. ತರಗತಿಗೆ ಸೇರ್ಪಡೆ. ಬೆಳಗ್ಗೆ ಮನೆಯಲ್ಲಿ ಎಲ್ಲ ಕೆಲಸ ಮುಗಿಸಿ ಶಾಲೆಗೆ ನಡೆದು, ಅಲ್ಲಿ ಸಂಜೆ ಐದು ಗಂಟೆಯವರೆಗೂ ಅಧ್ಯಾಪಕಿಯಾಗಿ ಕರ್ತವ್ಯ ನಿರ್ವಹಿಸಿ ಅನಂತರ ಸಂಜೆ ಆರ್.ವಿ. ಟೀಚರ್ಸ್ ಕಾಲೇಜಿಗೆ ಓಟ. ಅಲ್ಲಿ ರಾತ್ರಿ ೮.೩೦ರವರೆಗೆ ವಿದ್ಯಾರ್ಥಿ. ಅಲ್ಲಿಂದ ಎರಡು ಬಸ್ಸು ಹಿಡಿದು ಜೀವನಬೀಮಾನಗರದ ತನ್ನ ಮನೆ ಸೇರುವುದು. ಇದು ಎರಡು ವರುಷಗಳ ದೈನಂದಿನ ಕ್ರಿಯೆಯಾಯಿತು ಗಾಯತ್ರಿಗೆ. ಆದರೆ ಆಕೆ ಬಳುಕಲಿಲ್ಲ, ಬಾಡಲಿಲ್ಲ, ಸುಸ್ತು ಎನಲಿಲ್ಲ- ಬದಲು ಉತ್ಸಾಹದ ಚಿಲುಮೆಯಾಗಿ ಮುನ್ನಡೆದಳು. ಆಕೆಯ ಪ್ರತಿ ಹೆಜ್ಜೆಯಲ್ಲಿಯೂ ಪ್ರೀತಿಯ ಹಸ್ತ ಹಿಡಿದು ಸಪ್ತಪದಿ ಇಟ್ಟವರು ರಾಮಣ್ಣ. ಬಿ.ಎಡ್. ಪದವೀಧರೆಯಾದ ಗಾಯತ್ರಿ ಸುಮ್ಮನೆ ಕೂಡುವ ಜಾಯಮಾನದ ಹೆಣ್ಣಲ್ಲ. ಇತಿಹಾಸ ವಿಷಯವನ್ನು ಆರಿಸಿಕೊಂಡು ಬಾಹ್ಯ ಅಭ್ಯರ್ಥಿಯಾಗಿ ಎಂ.ಎ. ಪೂರೈಸಿದಳು. ಅಧ್ಯಯನ-ಅಧ್ಯಾಪನ ಆಕೆಗೆ ತುಂಬ ಪ್ರಿಯವಾದ ವಿಷಯಗಳು.

ರಾಮಣ್ಣ, ಗಾಯತ್ರಿಯ ಬಯಕೆ-ಕನಸುಗಳಿಗೆಲ್ಲ ಬಣ್ಣಕೊಟ್ಟವ, ರೂಪಕೊಟ್ಟವ, ನನಸು ಮಾಡಿದವ. 'ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಹೆಣ್ಣುಮಗಳಿರುತ್ತಾಳೆ' ಎನ್ನುವುದು ಲೋಕ ಪ್ರಸಿದ್ಧಿಯ ಉಕ್ತಿ. 'ಆದರೆ ಪ್ರತಿಯೊಬ್ಬ ಯಶಸ್ವಿ ಹೆಣ್ಣಿನ ಹಿಂದೆ ಒಬ್ಬ ಪುರುಷ ಇರುತ್ತಾನೆ' ಎನ್ನುವ ಪರ್ಯಾಯ ಉಕ್ತಿ ರಾಮಣ್ಣನಂಥವರಿಗೆ ಅನ್ವಯವಾಗುತ್ತದೆ.

ನಮ್ಮ ಮನೆಯಲ್ಲಿ ಗಾಯತ್ರಿ ಪಿ.ಯು.ಸಿ. ಓದುತ್ತಿದ್ದಾಗ ಅವಳು ಸುಗಮಸಂಗೀತ ಕಲಿಯಲೆಂದು ಶ್ರೀ ನಾರಾಯಣರಾವ್ ಮಾನೆ ಅವರನ್ನು ಸಂಗೀತ ಗುರುಗಳಾಗಿ ಗೊತ್ತುಪಡಿಸಲಾಗಿತ್ತು. ಒಳ್ಳೆಯ ಶಾರೀರವನ್ನು ಹೊಂದಿದ್ದ ಆಕೆ ಚೆನ್ನಾಗಿ ಹಾಡಲು ಕಲಿತಳು.

ಮದುವೆ, ಮನೆ, ಮಕ್ಕಳು, ಗಂಡ-ಇವರ ಸೇವೆಯಲ್ಲಿ ಕೆಲವು ಕಾಲ ಮರೆಯಲ್ಲಿಯೇ ಗುನುಗುತ್ತಿದ್ದ ಸಂಗೀತದ ಲಹರಿ ಮತ್ತೆ ಮತ್ತೆ ಗಾಯತ್ರಿಯನ್ನು ಕೆಣಕುತ್ತಿತ್ತು, ಕಾಡುತ್ತಿತ್ತು. ಹೀಗೆ ಕುಳಿತಲ್ಲಿ, ನಿಂತಲ್ಲಿ ಕಾಡುತ್ತಿದ್ದ ಸಂಗೀತ ಮಗುವಿಗೆ ಆಕೆ ಜೋಗುಳ ಹಾಡಲೇಬೇಕಾಯಿತು, ಸಂಗೀತಾಭ್ಯಾಸದ ಬಯಕೆ ಕುಡಿಯೊಡೆಯಿತು. ಸ್ವಲ್ಪಕಾಲ ವೀಣೆಯ ಅಭ್ಯಾಸ ನಡೆಯಿತು. ಅನಂತರ ಶ್ರೀಯುತ ನಾರಾಯಣರಾವ್ ಮಾನೆಯವರ ಬಳಿ ಸುಗಮ ಸಂಗೀತಾಭ್ಯಾಸ ಪುನಃ ಪ್ರಾರಂಭವಾಯಿತು. ಗಾಯತ್ರಿಯ ಸತತ ಅಭ್ಯಾಸ, ರಾಮಣ್ಣನ ನಿರಂತರ ಪ್ರೋತ್ಸಾಹ, ನಾರಾಯಣರಾವ್ ಮಾನೆಯವರ ಮಾರ್ಗದರ್ಶನ-ಇವು ಮುಪ್ಪರಿಗೊಂಡು ಆಕೆಯನ್ನು ಇಂದು ಒಬ್ಬ ಉತ್ತಮ ಸುಗಮ ಸಂಗೀತಗಾರಳನ್ನಾಗಿ ಮಾಡಿದೆ. ಇತ್ತೀಚೆಗೆ ತಾನೇ ಸ್ವರ ಸಂಯೋಜನೆ ಮಾಡಿ ಹಾಡುವ ಹಾಡುಗಳನ್ನು ಈಗಾಗಲೇ ಎಷ್ಟೋ ಜನ ಸಹೃದಯರು ಕೇಳಿ ಆನಂದಿಸಿದ್ದಾರೆ. ಕನ್ನಡ-ಸಂಸ್ಕೃತಿ ಇಲಾಖೆಯಿಂದಲೂ ಇತರ ಸಂಘ-ಸಂಸ್ಥೆಗಳ ಆಶ್ರಯದಲ್ಲಿಯೂ ಅನೇಕ ಸಂಗೀತ ಕಾರ್ಯಕ್ರಮಗಳನ್ನು ಈಗಾಗಲೇ ಕೊಟ್ಟ, ಕೊಡುತ್ತಿರುವ ಹಿರಿಮೆ ಗಾಯತ್ರಿಯದಾಗಿದೆ. ಇಲ್ಲೆಲ್ಲ ರಾಮಣ್ಣನವರ ನಿರಂತರ ಒತ್ತಾಸೆಯನ್ನು ಮೆಚ್ಚಿಕೊಳ್ಳಲೇಬೇಕು.

ರಾಮಣ್ಣ ಕನ್ನಡ ಸಂಘರ್ಷ ಸಮಿತಿಯ ಅಧ್ಯಕ್ಷರಾಗಿ ಪತ್ರಿಕಾಕರ್ತರ ಸಹಕಾರ ಸಂಘದ ಅಧ್ಯಕ್ಷರಾಗಿ, ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಬೆಂಗಳೂರು ನಗರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡಪರ ಚಳವಳಿಗಾರರಾಗಿ, ಉತ್ತಮ ಸಂಘಟಕರಾಗಿ ಅನೇಕ ಕಾರ್ಯಕ್ರಮಗಳನ್ನು ನೆರವೇರಿಸುತ್ತಾ ಬಂದಿದ್ದಾರೆ. ತಮ್ಮ ಇಡೀ ಬದುಕನ್ನು ಈ ರೀತಿಯ ನಾಡು-ನುಡಿ ಸೇವೆಗೆ ಸಮರ್ಪಿಸಿಕೊಂಡವರು ಇಂದಿನ ದಿವಸಗಳಲ್ಲಿ ಬಹಳ ಅಪರೂಪ. ಡೊಂಗಿ ಕನ್ನಡ ಚಳವಳಿಗಾರರ ಮಧ್ಯೆ ರಾಮಣ್ಣ ಕೋಡಿಹೊಸಹಳ್ಳಿಯವರಂಥ ನಿಷ್ಠಾವಂತ ಚಳವಳಿಗಾರರು ನಮಗೆ ಇಂದು ಬಹಳ ಮುಖ್ಯರಾಗುತ್ತಾರೆ. ಭಾಷಣ-ಬರವಣಿಗೆ-ಹೋರಾಟ ಇವುಗಳ ತ್ರಿವೇಣಿ ಸಂಗಮ ರಾಮಣ್ಣ. ನಿರಂತರ ಕಾರ್ಯಚಟುವಟಿಕೆಯಿಂದ ದುಡಿಯುವ ರಾಮಣ್ಣನಂಥವರು ನಮ್ಮ ಕನ್ನಡ ನಾಡಿಗೆ ತೀರ ಅಗತ್ಯ. ಅಂಥವರ ಸಂಖ್ಯೆ ಸಾವಿರವಾಗಲಿ.

*

ಸುಸಂಸ್ಕೃತ ಸಂಘಟಕ

ಪ್ರೊ. ಡಿ. ಲಿಂಗಯ್ಯ

ಕನ್ನಡ ಪತ್ರಕರ್ತರೂ ಕನ್ನಡ ಚಳವಳಿಗಾರರೂ ಸಾಂಸ್ಕೃತಿಕ ಸಂಘಟಕರೂ ಆದ ಶ್ರೀ ರಾಮಣ್ಣ ಕೋಡಿಹೊಸಹಳ್ಳಿಯವರು ಹತ್ತಾರು ವರ್ಷಗಳಿಂದ ಕನ್ನಡಪರ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಪ್ರಾರಂಭದಲ್ಲಿ ಕೇವಲ ಚಳವಳಿ ಸಂದರ್ಭಗಳಲ್ಲಿ ಮಾತ್ರ ಗುರುತಿಸಿ ಕೊಳ್ಳುತ್ತಿದ್ದ ಇವರು, 'ಕನ್ನಡ ಸಂಘರ್ಷ ಸಮಿತಿ'ಯ ಮೂಲಕ ಸಾಹಿತ್ಯ ಸಾಂಸ್ಕೃತಿಕ ಒಲವುಗಳನ್ನೂ ಮೈಗೂಡಿಸಿಕೊಂಡುದರಿಂದ ಬುದ್ಧಿಜೀವಿಗಳ ಸಂಪರ್ಕಕ್ಕೂ ಭಾಜನರಾಗಿದ್ದಾರೆ. ಈ ಹಿನ್ನೆಲೆಯಲ್ಲೇ ನಾನು ಇವರು ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮನಸ್ಸು ಮಾಡಿದ್ದು. ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಅರಿಯದೆ, ಅರಗಿಸಿಕೊಳ್ಳದೆ, ಕೇವಲ ಘೋಷಣೆಯ ಚಳವಳಿಗಾರರಾಗುವುದರಿಂದ ನಾಡುನುಡಿಗೆ ಅಷ್ಟಾಗಿ ಪ್ರಯೋಜನವಾಗುವುದಿಲ್ಲ ಎಂಬ ಕಟುಸತ್ಯವನ್ನು ಶ್ರೀ ರಾಮಣ್ಣ ಮತ್ತು ಇವರ ಸಂಗಡಿಗರು ಮನಗಂಡಿರುವುದು ಸಮಾಧಾನ ತಂದಿದೆ.

ವಿವಿಧ ಕಾರಣಗಳಿಗಾಗಿ ಕನ್ನಡ ನಾಡು ನುಡಿ ಸಂಸ್ಕೃತಿಯ ರಕ್ಷಣೆಗೆ ಕನ್ನಡ ಗರುಡರು, ಕನ್ನಡಬಂಟರು, ನಾಡಭಟರು, ಕನ್ನಡಕಟ್ಟಾಳುಗಳು, ಚಳವಳಿಗಾರರು ಅಗತ್ಯವಾಗಿದ್ದಾರೆ. ಆದರೆ, ಇವರ ಯಾವುದೇ ಚಟುವಟಿಕೆ ಕನ್ನಡ ಪರಂಪರೆಗೆ ಪೂರಕವಾಗಿರಬೇಕು, ಸಾಂಸ್ಕೃತಿಕ ಮರ್ಯಾದೆಯನ್ನು ಮೀರದಂತಿರಬೇಕು ಎಂಬ ಎಚ್ಚರ ಅಷ್ಟೇ ಮುಖ್ಯವಾಗಿದೆ. ಈ ಎಚ್ಚರ ರಾಮಣ್ಣನವರಲ್ಲಿ ಇರುವುದನ್ನು ಗಮನಿಸಿದ್ದೇನೆ. ಇಲ್ಲದಿದ್ದರೆ ಯಾವ ಚಳವಳಿಯೂ ಸ್ವಾರ್ಥಶನಿಯಿಂದ, ಅಧಿಕಾರಲಾಲಸೆಯಿಂದ, ಕ್ಷುಲ್ಲಕ ಪ್ರಚಾರದಿಂದ, ಸಮಷ್ಟಿಹಿತದ ದೂರದೃಷ್ಟಿಯ ಕೊರತೆಯಿಂದ ಹೊರಬಂದು ಪ್ರಜ್ವಲಿಸಲಾರದು; ಕಠಿಣ ಪರಿಶ್ರಮ, ಸಹನೆ, ತ್ಯಾಗಗಳಿಲ್ಲದ ಯಾವ ಚಳವಳಿಯೂ ಅರ್ಥಪೂರ್ಣವಾಗಲಾರದು. ಈ ದಿಶೆಯಲ್ಲಿ ನಮ್ಮ ಹಿಂದಿನ ಹಿರಿಯ ಕನ್ನಡ ಚಳವಳಿಗಾರರು ಮಾರ್ಗದರ್ಶಿ ಗಳಾಗುವುದನ್ನು ಮರೆಯಬಾರದು.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದಾಗ ರಾಮಣ್ಣನವರು 'ಕನ್ನಡ ನುಡಿ'ಯ ಸಂಪಾದಕರಾಗಿದ್ದರು. ಆ ಸಂದರ್ಭದಲ್ಲಿ ಇವರಲ್ಲಿದ್ದ ಪತ್ರಕರ್ತನ ಆತ್ಮಾಭಿಮಾನ, ಸ್ವತಂತ್ರ ಪ್ರವೃತ್ತಿಯನ್ನು ಗಮನಿಸಿದ್ದೇನೆ. ವಿವಿಧ ಚಳವಳಿಗಳಲ್ಲಿ ಇವರಿಗಿರುವ ಕನ್ನಡ ಕಳಕಳಿಯನ್ನು ಮನಗಂಡಿದ್ದೇನೆ. ಕನ್ನಡ ಸಂಘರ್ಷ ಸಮಿತಿಯ ಮೂಲಕ ರಾಷ್ಟ್ರಕವಿ ಕುವೆಂಪು, ಗೋವಿಂದ ಪೈ, ಜನಪ್ರಿಯ ಲೇಖಕಿ ಡಾ॥ ಅನುಪಮಾ ನಿರಂಜನರ ಬಗೆಗೆ ತಪ್ಪದೆ ಕಾರ್ಯಕ್ರಮಗಳನ್ನು ನಡೆಸುವುದು, ಸಂಕ್ರಾಂತಿ ಸಾಹಿತ್ಯೋತ್ಸವದ ನೆಪದಲ್ಲಿ ಕವಿಗೋಷ್ಠಿ, ನವಗಾಯಕರಿಗೆ ವೇದಿಕೆ ಕಲ್ಪಿಸುವುದು ಮೊದಲಾದ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಮೆಚ್ಚಿಕೆಯಾಗಿವೆ.

ರಾಮಣ್ಣ ಮತ್ತು ಸಂಗಡಿಗರು ಹಮ್ಮಿಕೊಂಡ ಕನ್ನಡ ನಿರುದ್ಯೋಗಿಗಳ ಬಗೆಗೆ ಸಾರ್ವಜನಿಕರ ಗಮನ ಸೆಳೆಯಲು ಬೂಟ್ ಪಾಲಿಷ್ ಮಾಡುವುದು, ಕನ್ನಡ ಕ್ರೈಸ್ತರಿಗೆ ನ್ಯಾಯ ದೊರಕಿಸಲು ಧರಣಿ ಮುಷ್ಕರ ಮಾಡುವುದು ಮುಂತಾದ ಚಳವಳಿಗಳಲ್ಲಿ, ಹಲವು ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ನಾನೂ ಭಾಗವಹಿಸಿದ್ದೇನೆ. ಎಲ್ಲಾ ವರ್ಗದ ಸ್ತ್ರೀಪುರುಷರು ಭಾಗವಹಿಸುವುದು ಇವರ ಸಭೆಗಳ ವಿಶೇಷವಾಗಿದೆ.

ರಾಮಣ್ಣನವರಲ್ಲಿ ತುಂಬಿ ತುಳುಕುವ ಉತ್ಸಾಹಕ್ಕೆ ಕೊರತೆಯಿಲ್ಲ. ಇದು ಒಮ್ಮೊಮ್ಮೆ ಅತಿಯೇನೋ ಎನ್ನುವಷ್ಟರ ಮಟ್ಟಿಗೆ ಮುನ್ನುಗ್ಗುವ ಸ್ವಭಾವ. ಮಾತೂ ಅಷ್ಟೆ ನೇರ, ಒರಟು, ನಯನಾಜೂಕಿಗಿಂತ ಗಡಸುತನ ಅಧಿಕ. ಇದು ಇವರ ರೀತಿ. ಎಡಪಂಥೀಯ ಭಾವನೆಗಳಿಗೆ ಒತ್ತು. ಇದರಿಂದಾಗಿ ಕೆಲವರ ನಿಷ್ಠುರ. ಇದು ಇದ್ದದ್ದೇ. ಇದಕ್ಕಾಗಿ ಬೆದರುವ ಜಾಯಮಾನವಲ್ಲ. ಶ್ರಮಕ್ಕೂ ಕೊರತೆಯಿಲ್ಲ. ಎಷ್ಟೋ ಸಭೆಗಳಲ್ಲಿ ನಿರೂಪಣೆ, ಸ್ವಾಗತ, ಅಧ್ಯಕ್ಷತೆ, ವಂದನಾರ್ಪಣೆ ಎಲ್ಲಾ ಕೆಲಸಗಳನ್ನೂ ಒಬ್ಬರೇ ಮಾಡಿ ದಣಿಯುವುದೂ ಉಂಟು! ಪ್ರೇಕ್ಷಕರ ಸಂಖ್ಯೆ ಕಡಮೆಯಾದರೂ ಚಿಂತೆಯಿಲ್ಲ, ಮತ್ತೆ ಮತ್ತೆ ವಿವಿಧ ಸಮಾರಂಭಗಳಲ್ಲಿ ತೊಡಗಿಕೊಳ್ಳುತ್ತಾರೆ. ಹಾಗಾಗಿ ಇವರ ಕಾರ್ಯಚಟುವಟಿಕೆಗಳ ಸಂಖ್ಯೆಯೂ ಹೆಚ್ಚು.

ರಾಮಣ್ಣನವರಿಗೆ ಬರೆಯುವ ಹವ್ಯಾಸವೂ ಇದೆ. ಪತ್ರಿಕಾಧಾಟಿಯಲ್ಲಿ ಇವರ ಬರವಣಿಗೆ ಸಾಗುತ್ತದೆ. ಪಾಂಡಿತ್ಯಕ್ಕಿಂತ ಜನಸಾಮಾನ್ಯರ ನಿಗಾ ಅಧಿಕ. ಬರವಣಿಗೆಯ ಗಾತ್ರ ಚಿಕ್ಕದು. ಆಗೊಮ್ಮೆ ಈಗೊಮ್ಮೆ ಅಲ್ಲಷ್ಟು ಇಲ್ಲಷ್ಟು, ಅಷ್ಟೇ. ತಾವು ತೊಡಗಿಕೊಂಡಿರುವ ಸಂಸ್ಥೆಗಳಲ್ಲಿ ಆಗಾಗ ಸ್ಮರಣಸಂಚಿಕೆಗಳನ್ನು ತರುತ್ತಿದ್ದು ಇವುಗಳಲ್ಲಿ ಹೊಸಬರಿಗೆ ಹೆಚ್ಚು ಅವಕಾಶ ಇರುತ್ತದೆ. ಉಳಿದಂತೆ ಕೆಲವು ಅಂಕಿ ಅಂಶಗಳು, ಸಾಂಸ್ಕೃತಿಕ ಮಾಹಿತಿಗಳು ದೊರೆಯುತ್ತವೆ.

ರಾಮಣ್ಣನವರ ಜೊತೆಯಲ್ಲಿ ಇವರ ಹೆಂಡತಿ ಶ್ರೀಮತಿ ಗಾಯತ್ರಿಯವರೂ ಸಭೆ ಸಮಾರಂಭಗಳಿಗಾಗಿ ದುಡಿಯುತ್ತಾರೆ. ಶ್ರೀಮತಿ ಗಾಯತ್ರಿ ಉತ್ತಮ ಗಾಯಕಿ. ಕನ್ನಡ ಕವಿತೆಗಳನ್ನು ಮನದುಂಬಿ ಸುಶ್ರಾವ್ಯವಾಗಿ ಹಾಡುತ್ತಾರೆ. ಇವರ ಹಾಡುಗಾರಿಕೆಯಿಲ್ಲದ ಕಾರ್ಯಕ್ರಮ ಬಹುಶಃ ಇಲ್ಲ. ಕನ್ನಡಪರವಾದ ಎಲ್ಲ ಕಾರ್ಯಕ್ರಮಗಳಲ್ಲೂ ಈ ದಂಪತಿಗಳನ್ನು ಕಾಣಬಹುದು. ಇವರಿಬ್ಬರ ವೃತ್ತಿ ಬೇರೆ; ಪ್ರವೃತ್ತಿ ಒಂದೇ, ಕನ್ನಡದ ವಿಷಯದಲ್ಲಿ ಇಬ್ಬರದೂ ಸಮಾನ ಮನೋಧರ್ಮ.

ರಾಮಣ್ಣನವರು ಸಾಕಷ್ಟು ಕನ್ನಡ ಚಳವಳಿಗಾರರ ಜೊತೆಯಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಕನ್ನಡದ ನೆಲೆಬೆಲೆಗಳ ಬಗೆಗೆ ಸ್ಪಷ್ಟವಾದ ಕಲ್ಪನೆ ಇವರಿಗೆ ಮೂಡಿದೆಯೆಂದು ಭಾವಿಸಿದ್ದೇನೆ. ಇವರಲ್ಲಿ ದೈಹಿಕವಾಗಿ, ಮಾನಸಿಕವಾಗಿ ದುಡಿಯುವ ಶಕ್ತಿಯಿದೆ; ದುಡಿಮೆಯ ದಾರಿಯ ನಿಚ್ಚಳ ಕಲ್ಪನೆಯಿದೆ. ೧೯೬೦ರ ದಶಕದಲ್ಲಿ 'ಕನ್ನಡ ಸಾಹಿತ್ಯ ಕಲಾಸಂಘ'ದ ವತಿಯಿಂದ ಕನ್ನಡಪರ ಹೋರಾಟಗಳಲ್ಲಿ ಪಾಲ್ಗೊಂಡು ಮುಂದೆ ಚಳವಳಿಯ ಹಾದಿಯಲ್ಲೇ ಸಾಗಿದ್ದಾರೆ. 'ಕನ್ನಡ ಸಂಘರ್ಷ ಸಮಿತಿ'ಯ ಸ್ಥಾಪನೆಯಿಂದ ತಮ್ಮದೇ ಆದ ಚಳವಳಿಯ ನೆಲೆಯನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ತಮ್ಮ ವೃತ್ತಿಗೆ ಸಂಬಂಧಿಸಿದ 'ಕರ್ನಾಟಕ ಪತ್ರಿಕಾ ಅಕಾಡೆಮಿ'ಯ ಸದಸ್ಯರಾಗಿ ಆ ಕ್ಷೇತ್ರದ ಹಾಸುಬೀಸನ್ನು ಅರಿತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಪರಿಸರದಲ್ಲಿ ಚಳವಳಿ ಮಾಡುತ್ತಿದ್ದ ಇವರು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರೂ ಆಗಿದ್ದರು. ಇವೆಲ್ಲ ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಕೆಲಸ ಮಾಡಲು ಇರುವ ಅವಕಾಶಗಳೇ ಆಗಿವೆ.

ರಾಮಣ್ಣನವರು ಈಗತಾನೇ ಮಧ್ಯವಯಸ್ಸಿನ ಗಡಿಯನ್ನು ದಾಟಿದ್ದಾರೆ. ಸಾಧನೆ ಮಾಡಲು ಸುದೀರ್ಘವಾದ ಜೀವನದ ದಾರಿ ಮುಂದಿದೆ. ಕನ್ನಡ ನಾಡು ನುಡಿ ಸಂಸ್ಕೃತಿಗೆ ಸಂಬಂಧಿಸಿದಂತೆ ಇವರಿಂದ ಇನ್ನೂ ಅತಿಶಯವಾದ ಸೇವೆ ಸಲ್ಲಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

*

ಕನ್ನಡದ ಛಲಗಾರ

ಪ್ರಹ್ಲಾದ ಡಿ. ಕುಳಲಿ

ಕನ್ನಡ ನಾಡು-ನುಡಿ ಹಿತರಕ್ಷಣೆಗೆ ಸಂಬಂಧಿಸಿದಂತೆ ಹೋರಾಟಕ್ಕೆ ಸದಾ ಸಜ್ಜಾಗಿರುವ ರಾಮಣ್ಣ ಕೋಡಿಹೊಸಹಳ್ಳಿ ನಿರ್ಭೀತ ಪತ್ರಕರ್ತರೂ ಹೌದು. ಅವರು ಪತ್ರಿಕೋದ್ಯಮ ಪ್ರವೇಶಿಸಿದಾಗಿನಿಂದಲೂ ನನಗೆ ಪರಿಚಿತರಾಗಿರುವರು. ಆತ್ಮೀಯ ಸ್ನೇಹಿತರೂ ಕೂಡ.

ಪತ್ರಕರ್ತರಾಗಿ ಕಾರ್ಯನಿರ್ವಹಿಸುವಾಗ, ಕನ್ನಡ ನಾಡು-ನುಡಿ, ನೆಲ-ಜಲಗಳ ಹಿತರಕ್ಷಣೆ ಪ್ರಶ್ನೆ ಬಂದಾಗಲೆಲ್ಲ ಸಂಬಂಧಪಟ್ಟ ಅಧಿಕಾರಿಗಳನ್ನು, ರಾಜಕಾರಣಿಗಳನ್ನು, ಮಂತ್ರಿಗಳನ್ನು, ಮುಖ್ಯ ಮಂತ್ರಿಗಳನ್ನು, ಉದ್ಯಮಿಗಳನ್ನು ಇವರು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವುದುಂಟು. ಕನ್ನಡದ ಹಿತರಕ್ಷಣೆಯ ಸಂಬಂಧವಾಗಿ ಇವರ ಕೂರಂಬುಗಳ ದಾಳಿಗೆ ರಾಮಕೃಷ್ಣ ಹೆಗಡೆ, ದೇವೇಗೌಡ, ಬೊಮ್ಮಾಯಿ, ವೀರಪ್ಪ ಮೊಯಿಲಿಯೇ ಮೊದಲಾದವರೂ ಈಡಾಗಿದ್ದಾರೆ.

ಸಾಮಾನ್ಯವಾಗಿ ಪತ್ರಿಕಾಗೋಷ್ಠಿಗಳಲ್ಲಿ ಇಂಗ್ಲಿಷಿನಲ್ಲಿಯೇ ಮಾತನಾಡುತ್ತಾ ಇಂಗ್ಲಿಷ್ ಪತ್ರಿಕೆಗಳ (ವಿಶೇಷವಾಗಿ ದೆಹಲಿ ಮೂಲದವು) ಹಾಗೂ ಸುದ್ದಿ ಸಂಸ್ಥೆಗಳ ಪ್ರತಿನಿಧಿಗಳ ಕಡೆಗೇ ಹೆಚ್ಚು ಲಕ್ಷ್ಯವಹಿಸುತ್ತಿದ್ದ ರಾಮಕೃಷ್ಣ ಹೆಗಡೆಯವರನ್ನು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯೆಂದು ಘೋಷಿಸಿರುವ ಸರಕಾರದ ಮುಖ್ಯಸ್ಥರಾಗಿ ಕನ್ನಡದಲ್ಲಿಯೇ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಬೇಕಾಗಿದುದು ಅವರ ಪರಮ ಕರ್ತವ್ಯ ಎಂಬ ಅಂಶವನ್ನು ಅವರಿಗೆ ಮನದಟ್ಟು ಮಾಡಿಕೊಟ್ಟಿದ್ದನ್ನು ಓರ್ವ ವರದಿಗಾರನಾಗಿ ಸಂಬಂಧಿಸಿದ ಪತ್ರಿಕಾ ಗೋಷ್ಠಿಯಲ್ಲಿ ಹಾಜರಿದ್ದ ನಾನು ಬಲ್ಲವನಾಗಿದ್ದೇನೆ.

ಅದೇ ಸುಮಾರಿಗೆ ಎಂ. ರಘುಪತಿಯವರು ಶಿಕ್ಷಣ ಸಚಿವರಾಗಿದ್ದಾಗ

ಅವರೂ ಇದೇ ರೀತಿ ರಾಮಣ್ಣನವರ ಕೈಗೆ ಸಿಕ್ಕಿಬಿದ್ದು, ತೀವ್ರಪ್ರತಿಭಟನೆ ಎದುರಿಸಬೇಕಾಯಿತು. ಪತ್ರಿಕಾಗೋಷ್ಠಿಯ ಒಂದು ಹಂತದಲ್ಲಿ ಇವರ ಹಾಗೂ ಸಚಿವರ ನಡುವೆ ನೇರ ವಾಗ್ವಾದ ನಡೆದು ಕೆಲಕಾಲ ಪತ್ರಿಕಾಗೋಷ್ಠಿ ಸ್ಥಗಿತಗೊಂಡಾಗ ಇತರ ವರದಿಗಾರರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ ಉದಾಹರಣೆಯೂ ಇದೆ.

ಬೊಮ್ಮಾಯಿಯವರು ಮುಖ್ಯ ಮಂತ್ರಿಯಾಗಿದ್ದಾಗ, ಸಂಪುಟ ಸಭೆಯ ನಡವಳಿಕೆಯ ಟಿಪ್ಪಣಿಗಳನ್ನು ಇಂಗ್ಲಿಷಿನಲ್ಲಿ ಪತ್ರಕರ್ತರಿಗೆ ಲಿಖಿತರೂಪದಲ್ಲಿ ಒದಗಿಸುತ್ತಿದ್ದುದನ್ನು ಪ್ರತಿಭಟಿಸಿ, ಈ ಸಾಮಗ್ರಿ ತರುವಾಯ ಕನ್ನಡದಲ್ಲಿ ಲಭ್ಯವಾಗುವ ಹಾಗೆ ಮಾಡಿದ ಹೆಗ್ಗಳಿಕೆಯ ಸಿಂಹಪಾಲು ರಾಮಣ್ಣನವರದೆಂದೇ ಹೇಳಬಹುದು. ಇಂತಹುದೇ ವಿಚಾರದಲ್ಲಿ ವೀರಪ್ಪಮೊಯಿಲಿ ಅವರು ಒಂದೆರಡು ಸಲ ಇವರಿಂದ ತರಾಟೆಗೊಳಗಾಗಿ ಕ್ಷಮೆಯಾಚಿಸಿರುವುದೂ ಇದೆ.

ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಅವರ ನಿವಾಸ 'ಕೃಷ್ಣಾ'ದಲ್ಲಿ ನಡೆದ ಕನ್ನಡಪರ ಸಂಘಟನೆಗಳ ಪ್ರಮುಖರ ಸಭೆಯಲ್ಲಿ "ಕನ್ನಡಿಗರ ಸ್ವಾಭಿಮಾನ ಕಾಪಾಡುವ ಆಶ್ವಾಸನೆಯಿಂದ ಅಧಿಕಾರಕ್ಕೆ ಬಂದ ನೀವು ಸ್ವಾರ್ಥ ರಾಜಕೀಯ ಮಹತ್ವಾಕಾಂಕ್ಷೆಗೆ ತಮಿಳುನಾಡಿನ ಮುಖ್ಯಮಂತ್ರಿ ಶ್ರೀಮತಿ ಜಯಲಲಿತಾರ ಮುಂದೆ ಕನ್ನಡಿಗರ ಮಾನಮರ್ಯಾದೆ ಹರಾಜಾಗಲು ಅವಕಾಶ ನೀಡಬೇಡಿ" ಎಂದು ಛೇಡಿಸಿದ ಉದಾಹರಣೆ ಇದೆ. ತಮಿಳುನಾಡಿಗೆ ನೀರು ಬಿಡುವ ಸಂಬಂಧ ಕನ್ನಡಪರ ಸಂಘಟನೆಗಳ ಮನವೊಲಿಸಿಕೊಳ್ಳಲು ಕರೆದಿದ್ದ ಸಭೆಯೊಂದರಲ್ಲಿ ದೇವೇಗೌಡರು ಮತ್ತು ಅವರ ಸಂಪುಟ ಸಹೋದ್ಯೋಗಿಗಳು ಎರಡು ಗಂಟೆಗಳಿಗೂ ಹೆಚ್ಚುಕಾಲ ಹಲಬಗೆಯಿಂದ ಪ್ರಯತ್ನಿಸಿದರು. ರಾಷ್ಟ್ರೀಯ ಜಲನೀತಿ ರೂಪಿತವಾಗದ ಹೊರತು ಕಾವೇರಿ ವಿಚಾರದಲ್ಲಿ ನ್ಯಾಯಮಂಡಳಿಯ ಕಲಾಪದಲ್ಲಿ ಸರಕಾರ ಭಾಗವಹಿಸಕೂಡದು ಯಾವುದೇ ರೀತಿಯ ಮಧ್ಯಂತರ ತೀರ್ಪಿಗೆ ಸೊಪ್ಪು ಹಾಕಬಾರದು" ಎಂದು ಕನ್ನಡಪರ ಸಂಘಟನೆಗಳ ನಿಲುವನ್ನು ದೇವೇಗೌಡರ ಮುಖಕ್ಕೆ ನೇರವಾಗಿ ಹೇಳಿ ಸಭೆಯಿಂದ ಇವರು ಮೊದಲು ಹೊರಬಿದ್ದರು. ಬಳಿಕ ಸಭೆಯಲ್ಲಿ ಕನ್ನಡ ಕಾರ್ಯಕರ್ತರಿಂದ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳು ಮೊಳಗಿ ಸಭೆ ಅಷ್ಟಕ್ಕೇ ಬರಕಾಸ್ತಾದ ಘಟನೆ ಇನ್ನೂ ಹಚ್ಚ ಹಸಿರಾಗಿ ಮನದಾಳದಲ್ಲಿ ಉಳಿದಿದೆ.

ಹೀಗೆ ರಾಮಣ್ಣ ಕೋಡಿಹೊಸಹಳ್ಳಿ ಎಂದರೆ ಕನ್ನಡ ಹೋರಾಟದ ಮುಂಚೂಣಿ ವ್ಯಕ್ತಿ ಎಂಬ ಚಿತ್ರ ಕಣ್ಮುಂದೆ ಬಂದು ನಿಲ್ಲುತ್ತದೆ.

ಕನ್ನಡ ಮಾಧ್ಯಮ ಹಾಗೂ ಹೆಚ್ಚಿಗೆ ಕನ್ನಡದ ಪದವೀಧರರಾಗಿರುವ ಇವರು ಪ್ರೌಢಶಾಲಾ ದಿನಗಳಲ್ಲಿಯೇ ಕನ್ನಡ ಪರ ಹೋರಾಟಗಳಲ್ಲಿ ಆಸಕ್ತಿ ಬೆಳೆಸಿಕೊಂಡವರು. ಬಿ.ಎಸ್ಸಿ., ಪದವಿಯನ್ನು ಕಲಿಯುತ್ತಿದ್ದಾಗ ತಮ್ಮ ದೈನಂದಿನ ಚಟುವಟಿಕೆಯ ಬಹುಭಾಗವನ್ನು ಕನ್ನಡಪರ ಹೋರಾಟಕ್ಕೇ ವಿನಿಯೋಗಿಸಿ ಆ ಪದವಿ ಗಳಿಸಲಾರದೆಯೇ ಮನೆಯವರ ಕಡುಕೋಪಕ್ಕೆ ಗುರಿಯಾದರು. ಮುಂದೆ ಸಂಯುಕ್ತ ಕರ್ನಾಟಕಕ್ಕೆ ಸೇರಿದ ಬಳಿಕ ಮತ್ತೆ ಕಾಲೇಜು ಸೇರಿ ಬಿ.ಎ., ಪದವೀಧರರಾದವರು. ಶಾಲಾ ಕಾಲೇಜು ದಿನಗಳಲ್ಲಿ ಪ್ರಬಂಧ ಸ್ಪರ್ಧೆ ಹಾಗೂ ಚರ್ಚಾ ಸ್ಪರ್ಧೆಗಳಲ್ಲಿ ಭಾಗಿಯಾಗಿ, ಕನ್ನಡದ ಹಿತರಕ್ಷಣೆಯ ವಿಷಯವಾಗಿ ದಿಟ್ಟತನದಿಂದ ತರ್ಕಬದ್ಧವಾಗಿ ವಿಚಾರ ಪ್ರತಿಪಾದಿಸಿ ಹತ್ತು-ಹಲವು ಬಹುಮಾನಗಳನ್ನು ಗಳಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ರಾಮೋತ್ಸವ-ಗಣೇಶೋತ್ಸವಗಳ ಸಂದರ್ಭಗಳಲ್ಲಿ ಸಂಗೀತ ಕಛೇರಿ, ವಾದ್ಯಗೋಷ್ಠಿಗಳನ್ನು ಏರ್ಪಡಿಸುವ ರೂಢಿಯುಂಟು. ಇವುಗಳಲ್ಲಿ ಕನ್ನಡ ಕಲಾವಿದರಿಗೆ ಆಗುತ್ತಿದ್ದ ಅನ್ಯಾಯದ ವಿರುದ್ಧ ಕೋಣಂದೂರು ಲಿಂಗಪ್ಪ, ಬಂದಗದ್ದೆ ರಮೇಶ, ಅ.ನ.ಕೃ.,ಮ. ರಾಮಮೂರ್ತಿ ಮೊದಲಾದವರ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನಗಳು ೧೯೬೧ರಲ್ಲಿ ಆರಂಭಗೊಂಡಾಗ ರಾಮಣ್ಣನವರು ಅತ್ಯುತ್ಸಾಹದಿಂದ ಹೋರಾಟಕ್ಕೆ ಧುಮುಕಿದರು. ಅಂದಿನಿಂದಲೂ ಕನ್ನಡಕ್ಕಾಗಿ ಅಹರ್ನಿಶಿ ತಮ್ಮ ಹೋರಾಟವನ್ನು ನಡೆಸುತ್ತಾ ಬಂದಿದ್ದಾರೆ.

ನಿರ್ಭೀತ ಹಾಗೂ ನಿಷ್ಠುರ ವಿಚಾರಗಳ ಹಿರಿಯ ಪತ್ರಕರ್ತ ಕಲ್ಲೆ ಎಸ್. ಶಿವೋತ್ತಮರಾವ್ ಅವರ ಮಾರ್ಗದರ್ಶನ ಹಾಗೂ ಪ್ರೋತ್ಸಾಹದಿಂದ ರಾಮಣ್ಣ ಅವರು ಪತ್ರಿಕೋದ್ಯಮಿಯಾಗಿ ಸೇವೆ ಸಲ್ಲಿಸಲು ಆರಂಭಿಸಿದರು. ಇವರು ಮೊದಲು ಸೇರಿದ ಪತ್ರಿಕೆ ರಾಜ್ಯದ ಅತ್ಯಂತ ಹಿರಿಯ ಹಾಗೂ ಪ್ರತಿಷ್ಠಿತ ಪತ್ರಿಕೆಯಾಗಿರುವ 'ಸಂಯುಕ್ತ ಕರ್ನಾಟಕ'. ಇದರ ಬೆಂಗಳೂರು ಆವೃತ್ತಿಯಲ್ಲಿ ಸೇವೆ ಸಲ್ಲಿಸುವದಕ್ಕೆ ಅವಕಾಶಮಾಡಿಕೊಟ್ಟವರು ಕನ್ನಡ ಪತ್ರಿಕೋದ್ಯಮದ ಭೀಷ್ಮಾಚಾರ್ಯರೆಂದು ಖ್ಯಾತರಾಗಿರುವ ಶ್ರೀ ಕೆ.ಶಾಮರಾವ್ ಅವರು.

ಕಲ್ಲೆ ಶಿವೋತ್ತಮರಾವ್ ಅವರು ನಾನು ವಾಸವಾಗಿದ್ದ ಮನೆಯ ಆವರಣದಲ್ಲೇ ವಾಸಿಸುತ್ತಿದ್ದರು. ೧೯೬೮ರ ಮೇ ತಿಂಗಳಲ್ಲಿ ಒಂದು ದಿನ ಅವರು ನನಗೆ ರಾಮಣ್ಣನವರನ್ನು ಪರಿಚಯಮಾಡಿಕೊಟ್ಟು, ''ಸಂಯುಕ್ತ ಕರ್ನಾಟಕ'ದಲ್ಲಿ ಇವರಿಗೆ ಪತ್ರಕರ್ತನಾಗಿ ಕಾರ್ಯನಿರ್ವಹಿಸಲು ಶಾಮರಾಯರಿಗೆ ಹೇಳಿ ಅವಕಾಶ ಕಲ್ಪಿಸಿಕೊಡಿ'' ಎಂದು ಹೇಳಿದರು. ಆಗ ಸಂಯುಕ್ತ ಕರ್ನಾಟಕದ ಬೆಂಗಳೂರು ಆವೃತ್ತಿಯ ಸಂಪಾದಕೀಯ ವಿಭಾಗದ ಸಂಪೂರ್ಣ ಹೊಣೆಗಾರಿಕೆಯನ್ನು ಸಹಾಯಕ ಸಂಪಾದಕರಾಗಿ ಶಾಮರಾಯರೇ ನಿರ್ವಹಿಸುತ್ತಿದ್ದರು. ಶ್ಯಾಮರಾಯರು ಮಾಡಿದ ಶಿಫಾರಸ್ಸುಗಳನ್ನು ಸಂಪಾದಕರೂ ಧರ್ಮದರ್ಶಿಗಳೂ ಆಗಿದ್ದ ರಂ.ರಾ. ದಿವಾಕರ ಅವರು ತಳ್ಳಿಹಾಕದೆ ನೆರವೇರಿಸುತ್ತಿದ್ದರು.

ಪತ್ರಿಕೆಯ ಹಿರಿಯ ವರದಿಗಾರನಾಗಿ ನಾನು ಶಾಮರಾಯರಿಗೆ ಬಹಳ ಹತ್ತಿರದವನಾಗಿ, ಅವರ ವಿಶ್ವಾಸಕ್ಕೆ ಪಾತ್ರನಾಗಿದ್ದೆ.ಕಲ್ಲೆಯವರ ಸೂಚನೆಯಂತೆ ರಾಮಣ್ಣನವರನ್ನು ಶ್ಯಾಮರಾಯರಿಗೆ ಪರಿಚಯಿಸಿ ಇವರಿಗೆ ಸಂಸ್ಥೆಯಲ್ಲಿ ಪತ್ರಕರ್ತನಾಗಿ ದುಡಿಯಲು ಅವಕಾಶ ಕಲ್ಪಿಸಲು ಕೋರಿದೆ. ಅವರು ರಾಮಣ್ಣನವರಿಗೆ ಪತ್ರಿಕೋದ್ಯಮದಲ್ಲಿನ ಆಸಕ್ತಿ, ಸಾಮಾನ್ಯಜ್ಞಾನ, ಸುದ್ದಿಗಳ ಭಾವಾಂತರ ಇವೇ ಮೊದಲಾದ ಬಗೆಗೆ ಪರೀಕ್ಷೆ ನಡೆಸಿ, 'ಉಪ ಸಂಪಾದಕ'ನಾಗಿ ಸಂಯುಕ್ತ ಕರ್ನಾಟಕದ ಸಂಪಾದಕೀಯ ಬಳಗ ಸೇರಲು ಅವಕಾಶಮಾಡಿಕೊಟ್ಟರು. ಹೀಗೆ ಒಬ್ಬ ತತ್ತ್ವನಿಷ್ಠ-ನಿರ್ಭೀತ ನ್ಯಾಯ ನಿಷ್ಠುರ ಪತ್ರಕರ್ತನನ್ನು ಉದ್ಯಮಕ್ಕೆ ಪದಾರ್ಪಣೆ ಮಾಡಿಸಿದ ಅವಕಾಶ ನನ್ನಪಾಲಿಗೆ ಒದಗಿಸಿದ ಬಗೆಗೆ ಹೆಮ್ಮೆ ಎನಿಸಿದೆ.

'ಸಂಯುಕ್ತ ಕರ್ನಾಟಕ' ಸೇರಿದ ಬಳಿಕವೂ ರಾಮಣ್ಣ ಕನ್ನಡಪರ ಜನಪರ ಹೋರಾಟಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳುತ್ತಿದ್ದರು. ಅವರು ಸೇರಿ ಒಂದೆರಡು ತಿಂಗಳಾಗಿತ್ತೇನೋ ಎಂದು ಕಾಣುತ್ತೆ. ಮಲ್ಲೇಶ್ವರ 'ಬಿ.ಪಿ. ಇಂಡಿಯನ್ ಸ್ಕೂಲ್'ನ ಸಭಾಂಗಣದಲ್ಲಿ ಚಕ್ರವರ್ತಿ

ರಾಜಗೋಪಾಲಾಚಾರಿ (ರಾಜಾಜಿ) ಇವರ ಹುಟ್ಟುಹಬ್ಬಕಾರ್ಯಕ್ರಮ ನಡೆಯುತ್ತಿತ್ತು. ವಿಶ್ವ ಪ್ರಥಮ ತಮಿಳು ಸಮ್ಮೇಳನದ ಸಂದರ್ಭದಲ್ಲಿ 'ಕನ್ನಡವೆಂದರೆ ತಿದ್ದಿದ ತೆಲುಗು ಲಿಪಿ . ಬಹುತೇಕ ತಮಿಳು' ಎಂಬುದಾಗಿ ತಮ್ಮ ಸ್ವರಾಜ್ಯ ಪತ್ರಿಕೆಯಲ್ಲಿ ಬರೆದು ಕನ್ನಡದ ಅಸ್ತಿತ್ವ ಅಲ್ಲಗಳೆಯುವ ದುಸ್ಸಾಹಸವನ್ನು ಮಾಡಿದ್ದರು. ಆಗ ರಾಜಾಜಿಯವರ ಕನ್ನಡ ದ್ರೋಹತನದ ವಿರುದ್ಧ ರಾಮಣ್ಣ ಗೆಳೆಯರನ್ನು ಕೂಡಿಕೊಂಡು ಬೆಂಗಳೂರಿನ ರಾಜಾಜಿನಗರ ಬಡಾವಣೆಯ ಹೆಸರು ಬದಲಿಸಬೇಕೆಂದು, , ರಾಜಾಜಿ ಕನ್ನಡಿಗರ ಕ್ಷಮೆಕೇಳಬೇಕೆಂದು ದೊಡ್ಡ ಪ್ರಮಾಣದ ಚಳವಳಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಮಲ್ಲೇಶ್ವರದಲ್ಲಿ ನಡೆಯುತ್ತಿದ್ದ ರಾಜಾಜಿ ಹುಟ್ಟುಹಬ್ಬ ಆಚರಣೆ ವಿರುದ್ಧ ಅವರು ಪದಾಧಿಕಾರಿಯಾಗಿದ್ದ ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲದ ಕಾರ್ಯಕರ್ತರ ಸಂಗಡ ಹೋಗಿ ಪ್ರತಿಭಟಿಸಿ,ಕರಪತ್ರವನ್ನು ಸಹ ವಿತರಣೆ ಮಾಡಿದ್ದರು. ಆ ಕಾರ್ಯಕ್ರಮದ ವರಿದಿಮಾಡಲು ಹೋಗಿದ್ದ ಸಂಯುಕ್ತ ಕರ್ನಾಟಕದ ವರದಿಗಾರರೊಬ್ಬರು ಕಛೇರಿಯಲ್ಲಿ ಅದರ ಪ್ರಸ್ತಾಪ ಮಾಡತೊಡಗಿದಾಗ ಹೊರಗೆ ಆದ ಘಟನೆಗಳ ಬಗ್ಗೆ ಕಛೇರಿಯಲ್ಲಿ ಪ್ರಚುರಪಡಿಸಿ ಹೊಸದಾಗಿ ನೇಮಕಗೊಂಡಿರುವ ಇವರಿಗೆ ತೊಂದರೆಯಾಗುವುದಕ್ಕೆ ಅವಕಾಶ ಕಲ್ಪಿಸಬಾರದೆಂದು ಆ ವಿಚಾರ ತಿಳಯಹೇಳಿದ ನೆನಪು.

ಉಪಸಂಪಾದಕರಾಗಿ ಸಂಯುಕ್ತ ಕರ್ನಾಟಕ ಸೇರಿದ ರಾಮಣ್ಣ ಮುಂದೆ ವಾಣಿಜ್ಯ, ವಿಭಾಗದ ಸಂಪಾದಕರಾಗಿ, ಗ್ರಾಮಾಂತರ ಸುದ್ದಿ ವಿಭಾಗದ ಪ್ರಧಾನ ಉಪಸಂಪಾದಕರಾಗಿ ಹದಿನಾರು ವರ್ಷಗಳ ಕಾಲ ಸಂಯುಕ್ತ ಕರ್ನಾಟಕದಲ್ಲಿ ಕಾರ್ಯನಿರ್ವಹಿಸಿದವರು. ಮೊಳೆಜೋಡಿಸುವರಿರಲಿ, ಮುದ್ರಣವಿಭಾಗದವರಿರಲಿ, ಕರಡು ಪಠಿಸುವವರಾಗಲಿ, ಇತರರಂತೆ ಮೇಲುಕೀಳು ಮನೋಭಾವ ತೋರದೆ ಎಲ್ಲರೊಡನೆ ಸರಿಸಮನಾಗಿ ಬೆರೆತು, ಕಛೇರಿಯಲ್ಲಿ ಯಾರಿಗಾದರೂ ಸಮಸ್ಯೆಗಳು ತಲೆದೋರಿದರೆ ಅವುಗಳನ್ನು ಪರಿಹರಿಸಲು ಮುಂದಾಗುತ್ತಿದ್ದರು. ೧೯೭೦ರಲ್ಲಿ ಒಂದು ದಿನ ರಾತ್ರಿ ಪಾಳಿಮುಗಿಸಿ ಮನೆಗೆ ಹಿಂತಿರುಗುತ್ತಿದ್ದಾಗ ಪತ್ರಿಕೆಯ ವಾಹನ ತೀವ್ರ ಅಪಘಾತಕ್ಕೀಡಾಗಿ ಚಾಲಕ ಸ್ಥಳದಲ್ಲೆ ಅಸುನೀಗಿದ್ದನು. ಚಾಲಕನು ಪಕ್ಕದಲ್ಲಿ ಕುಳುತಿದ್ದ ರಾಮಣ್ಣ ಪವಾಡ ಸದೃಶರೀಪಿಯಲ್ಲಿ ಗಾಯಗಳೊಡನೆ ಪಾರಾಗಿದ್ದರು. ಚಿಕಿತ್ಸೆಪಡೆದು ವಿಶ್ರಾಂತಿ ಪಡೆಯುತ್ತಿದ್ದ ರಾಮಣ್ಣನವರನ್ನು ಭೇಟಿಯಾಗಿ ಶಾಮರಾವ್ ಅವರು ಅಪಘಾತದ ಸಂಬಂಧ ಮೊಕದ್ದಮೆ ಹೂಡಬಾರದೆಂದೂ ಅವರ ಸೇವೆಯನ್ನು ಖಾಯಂ ಮಾಡಿಸುವುದಾಗಿಯೂ ಹೇಳಿದ್ದರಂತೆ (ಕೆಲಸಕ್ಕೆ ಸೇರಿದಾಗ ೬ ತಿಂಗಳು ಹೆಚ್ಚೆಂದರೆ ಒಂದು ವರ್ಷದೊಳಗೆ ಖಾಯಂ ಮಾಡುವುದಾಗಿ ಆಶ್ವಾಸನೆ ನೀಡಿದ್ದು ಮೂರು ವರ್ಷಗಳಾಗಿ ಖಾಯಂ ಮಾಡಿರಲಿಲ್ಲ. ಆಗ ಶಾಮರಾಯರು ತನಗೆ ಖಾಯಂ ಮಾಡಿದರೆ ಸಾಕು ಎಂಬ ಸ್ವಾರ್ಥ ಮನೋಭಾವ ತೊರೆದು ತನಗಿಂತ ಎರಡು-ಮೂರು ವರ್ಷಗಳಷ್ಟು ಹಿಂದಿನಿಂದ ಕೆಲಸಮಾಡುತ್ತಿರುವ ಕರಡು ಪಠಕರು, ಉಪಸಂಪಾದಕರಿಗೆ ಖಾಯಂ ಮಾಡದೆ ನನಗೆ ಮಾತ್ರ ಮಾಡಿದರೆ ನ್ಯಾಯ ಮಾಡಿದಂತಾಗದು, ಅವರೆಲ್ಲರಿಗೂ ಖಾಯಂ ಮಾಡಿದರೆ ಆಗಲಿ ಎಂದು ವಾದಿಸಿದರಂತೆ. ಅದಕ್ಕೊಪ್ಪಿದ ಶಾಮರಾಯರು ಆಡಳಿತವರ್ಗದ ಜೊತೆ ವ್ಯವಹರಿಸಿ ಇವರು ವೈದ್ಯಕೀಯ ರಜೆ ಮುಗಿಸಿ ಕರ್ತವ್ಯಕ್ಕೆ ಹಾಜರಾಗುವ ಹೊತ್ತಿಗೆ ಸುದೀರ್ಘಾವಧಿಯಿಂದ ಕ್ರೋಢೀಕೃತ ಸಂಬಳದ ಮೇಲೆ ಕೆಲಸಮಾಡುತ್ತಿದ್ದ ಸಂಪಾದಕೀಯ ವಿಭಾಗದ ಎಲ್ಲರೂ ಸಂಸ್ಥೆಯಲ್ಲಿ ಖಾಯಂಗೊಂಡರು. ಇಲ್ಲಿಂದ ಪತ್ರಿಕಾವೃತ್ತಿ ಸಂಘಟನೆಯಲ್ಲಿ ರಾಮಣ್ಣನವರ ನಾಯಕತ್ವ ಆರಂಭವಾಯಿತು.

• ನ್ಯಾಯಕ್ಕಾಗಿ ಹೋರಾಡುವ, ಎಂತಹ ಪರಿಸ್ಥಿತಿಯೇ ಬರಲಿ ಮುನ್ನುಗ್ಗಿ ಕೆಲಸಮಾಡುವ ಪ್ರವೃತ್ತಿಯನ್ನು ರಾಮಣ್ಣನವರಲ್ಲಿ ಕಂಡ ಹಿರಿಯ-ಕಿರಿಯ ಪತ್ರಕರ್ತರು, ಪತ್ರಕರ್ತರ ಸಹಕಾರ ಸಂಘ, ಕಾರ್ಯನಿರತ ಪತ್ರಕರ್ತರ ಸಂಘಗಳಲ್ಲಿ ಅವರು ಯಾವ ಹುದ್ದೆಗೆ ಚುನಾವಣೆಗೆ ಸ್ಪರ್ಧಿಸಿದರೆ ಸಂಯುಕ್ತ ಕರ್ನಾಟಕದಿಂದ ಒಮ್ಮತದ ಬೆಂಬಲ ದೊರಕುತ್ತಿತ್ತು. ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಮೊದಲೆರಡು ವರ್ಷ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು, ಆ ನಂತರದ ಮೂರು ವರ್ಷ ಅವಿರೋಧವಾಗಿ ಗೆದ್ದರು. ಹಣಕಾಸು ವಿಚಾರದಲ್ಲಿ ಇವರ ಶಿಸ್ತು-ಪ್ರಾಮಾಣಿಕತೆಗಳಿಂದಾಗಿ ಇವರು ಸಂಘದಲ್ಲಿ ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿದ್ದರು.

ಸಂಯುಕ್ತ ಕರ್ನಾಟಕದ ಬೆಂಗಳೂರು ಆವೃತ್ತಿ ೧೯೮೦ರ ಜನವರಿ ೩೧ರಂದು ಹಠಾತ್ತನೆ ತನ್ನ ಪ್ರಕಟನೆಯನ್ನು ನಿಲ್ಲಿಸಿದಾಗ ಇತರರಂತೆ ಬೇರೆ ಬೇರೆ ಕಡೆ ಕೆಲಸ ಹುಡುಕಿಕೊಂಡು ಹೋಗದೆ 'ಕರ್ನಾಟಕ ಏಕೀಕರಣ' ಹಾಗೂ 'ಭಾರತ ಸ್ವಾತಂತ್ರ್ಯ' ಹೋರಾಟಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದಂತಹ ಹಿರಿಯ ಪತ್ರಿಕೆ ರಾಜಧಾನಿಯಿಂದ ಪ್ರಕಟವಾಗುವುದು ನಿಲ್ಲಬಾರದು, ಅದನ್ನೇ ನೆಚ್ಚಿಕೊಂಡಿರುವ ನೂರಾರು ಕುಟುಂಬಗಳು ಬೀದಿಪಾಲಾಗಬಾರದು ಎಂಬ ಉದ್ದೇಶದಿಂದ ಸ್ವಂತ ಹಿತಾಸಕ್ತಿ ಬದಿಗೊತ್ತಿ, ಬೆಂಗಳೂರು ಆವೃತ್ತಿಯ ಪುನರಾರಂಭಕ್ಕೆ ಸಂಘದ ಪದಾಧಿಕಾರಿಗಳ ಜೊತೆ ಅಹರ್ನಿಶಿ ದುಡಿದರು. ಇಡೀ ಭಾರತದಲ್ಲಿ ಹನ್ನೊಂದು ತಿಂಗಳುಗಳ ಕಾಲ ಪ್ರಕಟಣೆಯನ್ನು ನಿಲ್ಲಿಸಿದ್ದ ಪತ್ರಿಕೆಯೊಂದು ಪುನರ್‌ಪ್ರಸಾರ ಕಂಡುಕೊಂಡಿದ್ದರೆ ಅದು ಸಂಯುಕ್ತ ಕರ್ನಾಟಕ ಮಾತ್ರ. ಇದಕ್ಕೆ ಆಗಿನ ಮುಖ್ಯಮಂತ್ರಿ ಆರ್. ಗುಂಡೂರಾವ್ ಮನಸ್ಸು ಮಾಡಿದುದು ಮುಖ್ಯ ಕಾರಣವೆನ್ನಬಹುದು.

ಪತ್ರಕರ್ತನಾಗಿ ರಾಮಣ್ಣ ಕಾರ್ಯನಿರ್ವಹಿಸುತ್ತಿದ್ದರೂ ಕನ್ನಡಪರ ಹಾಗೂ ಜನಪರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ, ಕನ್ನಡಕ್ಕಾಗಿ ಕೆಲಸಮಾಡುವವರನ್ನು ಪ್ರೋತ್ಸಾಹಿಸುವ ಪ್ರವೃತ್ತಿಯನ್ನೂ ಉಳಿಸಿ-ಬೆಳೆಸಿಕೊಂಡು ಬಂದಿರುವ ರಾಮಣ್ಣ ವರದಿಗಾರರಾಗಿರದಿದ್ದರೂ ಕನ್ನಡ ಹಿತಾಸಕ್ತಿಯ ಸುದ್ದಿಗಳು ಅವರ ಗಮನಕ್ಕೆ ಬಂದಾಗ, ಅವನ್ನು ಬರೆದುಕೊಟ್ಟು, ಅವುಗಳು ಪತ್ರಿಕೆಯಲ್ಲಿ ಬೆಳಕು ಕಾಣುವ ಹಾಗೆ ನಿಗಾವಹಿಸುತ್ತಿದ್ದರು.

ಹಿರಿಯ ಪತ್ರಕರ್ತ ವಡ್ಡರ್ಸೆ ರಘುರಾಮ ಶೆಟ್ಟಿಯವರು ತಾವು ಪ್ರಧಾನ ವರದಿಗಾರರಾಗಿ ಕೆಲಸಮಾಡುತ್ತಿದ್ದ 'ಪ್ರಜಾವಾಣಿ'ಯನ್ನು ತಮ್ಮ ಕೆಲವು ಅನುಯಾಯಿಗಳ ಸಂಗಡ ತೊರೆದು ಜನಪರವಾದ ಪತ್ರಿಕೆಯೊಂದನ್ನು ನಡೆಸುವ ಉದ್ದೇಶದಿಂದ ೧೯೮೪ರಲ್ಲಿ ಮಂಗಳೂರಿನಲ್ಲಿ 'ಮುಂಗಾರು' ದಿನಪತ್ರಿಕೆ ಆರಂಭಿಸಿದಾಗ ಶೆಟ್ಟರಿಗೆ ಆತ್ಮೀಯರಾಗಿದ್ದ ರಾಮಣ್ಣ ಅದರ ರಾಜಧಾನಿಯ ಪ್ರಧಾನ ವರದಿಗಾರರಾಗಿ ನೇಮಕಗೊಂಡ ಕಾರಣ ಸಂಯುಕ್ತ ಕರ್ನಾಟಕ ಬಿಟ್ಟರು. ಆದರೆ ಅವರ ಸ್ನೇಹಪರ ನಡವಳಿಕೆಯಿಂದಾಗಿ ಇಂದಿಗೂ ಸಂಯುಕ್ತ ಕರ್ನಾಟಕದ ಅವರ ಸಮಕಾಲೀನ ಸಹೋದ್ಯೋಗಿಗಳ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ.

ತಮ್ಮ ಜನ್ಮಸ್ಥಳವಾದ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಕೋಡಿಹೊಸಹಳ್ಳಿ ಬಳಿಯ ಸಿಂಗರಾಜಪುರದಲ್ಲಿ ಪ್ರೌಢಶಾಲೆಯೊಂದಿದೆ. ಅಲ್ಲಿ ಕನ್ನಡದಲ್ಲಿ ಅಧಿಕ ಅಂಕಗಳಿಸುವ ಹಾಗೂ ಹೆಚ್ಚಿನ ಅಂಕಗಳೊಂದಿಗೆ ಎಸ್ಸೆಸ್ಸೆಲ್ಸಿಯಲ್ಲಿ ತೇರ್ಗಡೆ ಹೊಂದಿದ

ಪ್ರತಿಭಾವಂತ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ತಾತ ರಾಮೇಗೌಡರು, ತಂದೆ ಹುಚ್ಚೇಗೌಡರು ಹಾಗೂ ತಾಯಿ ಲಿಂಗಮ್ಮನವರ ಹೆಸರುಗಳಲ್ಲಿ ನಗದು ಬಹುಮಾನಗಳನ್ನು ಪ್ರತಿವರ್ಷವೂ ಕೊಡುತ್ತಾ ಬಂದಿದ್ದಾರೆ. ಆರ್ಥಿಕವಾಗಿ ಅನುಕೂಲಸ್ಥರಲ್ಲದಿದ್ದರೂ ಗ್ರಾಮಾಂತರ ಪ್ರದೇಶದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಯತ್ಕಿಂಚಿತ್ ಸೇವೆ ಸಲ್ಲಿಸಬೇಕೆಂಬ ಹಂಬಲದಿಂದ ಈ ಯೋಜನೆ ಕೈಗೊಂಡಿದ್ದಾರೆ.

ಕರ್ನಾಟಕ ಅಂಚೆವೃತ್ತ ಸಲಹಾಸಮಿತಿ ಸದಸ್ಯರಾಗಿ 'ಕರ್ನಾಟಕ ವಾರ್ತಾ ಇಲಾಖೆಯ ಪತ್ರಿಕಾ ಮಾನ್ಯತಾ ಸಮಿತಿಯ ಸದಸ್ಯರಾಗಿ, ಕಾರ್ಯನಿರ್ವಹಿಸಿರುವ ರಾಮಣ್ಣನವರು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಪತ್ರಿಕಾ ಅಕಾಡಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನುಡಿ'ಯ ಸಂಪಾದಕರಾಗಿ ೧೯೭೮ರಿಂದ ೮೧ರವರೆಗೆ ಕಾರ್ಯನಿರ್ವಹಿಸಿದ್ದಾರೆ. ಪ್ರಸಕ್ತ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ೧೯೯೫ರಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಸಮಾಜವಾದಿ ಸಿದ್ಧಾಂತದಲ್ಲಿ ಅಚಲವಿಶ್ವಾಸವಿಟ್ಟಿರುವ ಇವರು ವಿಚಾರವಾದಿಯೂ ಆಗಿದ್ದಾರೆ. ಪತ್ರಕರ್ತನಾಗಿ, ಸಾಹಿತಿಯಾಗಿ, ಕನ್ನಡಕ್ಕಾಗಿ ಹೋರಾಡುವ ಛಲಗಾರನಾಗಿ ಇವರ ಸೇವೆ ಕನ್ನಡ ನಾಡು-ನುಡಿಗೆ ಸದಾ ಸಿಗುವಂತಾಗಲಿ.

*

ಹೋರಾಟಗಾರ

ಎನ್. ಅರ್ಜುನದೇವ

'ಹೋರಾಟ, ಹೋರಾಟ, ಎಲ್ಲಿಯವರೆಗೆ ಹೋರಾಟ ಗೆಲ್ಲುವವರೆಗೆ ಹೋರಾಟ.'

ಕಾರ್ಯನಿರತ ಪತ್ರಕರ್ತರು ಮತ್ತು ಇತರ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅಥವಾ ಯಾವುದೇ ಮುಚ್ಚಿರುವ ಪತ್ರಿಕಾ ಸಂಸ್ಥೆಯ ಬಾಗಿಲು ತೆರೆಸಲು ಅಥವಾ ಪತ್ರಕರ್ತರ ಮತ್ತು ಪತ್ರಿಕಾ ಸ್ವಾತಂತ್ರ್ಯ ಮೇಲೆ ನಡೆದ ಹಲ್ಲೆ ಪ್ರತಿಭಟಿಸಲು ಸಂಘಟಿಸಿದ ಜಾಥಾ, ಮರವಣಿಗೆಗಳಲ್ಲಿ ಸಾಮಾನ್ಯವಾಗಿ ಕೇಳಿ ಬರುತ್ತಿದ್ದ ಘೋಷಣೆ, ಅದನ್ನು ಮುಗಿಲು ಮುಟ್ಟುವಂತೆ ಕೂಗುತ್ತಿದ್ದವರು ಮತ್ತು ಇತರರು ಹೇಳುವಂತೆ ಮಾಡುತ್ತಿದ್ದವರು ರಾಮಣ್ಣ ಕೋಡಿಹೊಸಹಳ್ಳಿ ಅವರು. ಯಾವುದೇ ಮೆರವಣಿಗೆ ರಾಮಣ್ಣ ಇಲ್ಲದಿದ್ದರೆ ಕಳೆಕಟ್ಟುತ್ತಿರಲಿಲ್ಲ. ಅಂಥ ಸಂದರ್ಭಗಳನ್ನು ಅವರು ತಪ್ಪಿಸಿಕೊಳ್ಳುತ್ತಿದ್ದುದೂ ತುಂಬಾ ಅಪರೂಪ.

ಹೋರಾಟಕ್ಕೆ ಇಳಿಯಲು ಹಿಂಜರಿಯುತ್ತಿದ್ದವರನ್ನು ಬೀದಿಗಿಳಿಸಿ ಅವರು ಉಚ್ಚರಿಸಬೇಕಾದ ಧಿಕ್ಕಾರ, ಜಯಕಾರಗಳಿಗೆ ಧ್ವನಿ ತುಂಬುತ್ತಿದ್ದರು. ಒಂದೆರೆಡು ವರ್ಷಗಳಿಂದ ರಾಮಣ್ಣ ಪತ್ರಕರ್ತರ ಸಂಘಟನೆಗಳಿಂದ ದೂರವಾಗಿದ್ದಾರೆ. ಅವರ ಗೈರು ಹಾಜರಿ ಅಲ್ಲಿ ಎದ್ದು ಕಾಣುತ್ತದೆ. ಸಭೆ, ಸಮಾರಂಭಗಳಲ್ಲಿ ಭಾಗವಹಿಸಬಹುದು. ಆದರೆ ನಾಯಕತ್ವವಹಿಸಬೇಕಾದ ಹೊಣೆಗಾರಿಕೆಯಿಂದ ದೂರ ಸರಿದಿದ್ದಾರೆ. ಅದಕ್ಕೆ ಕಾರಣ ಅವರಲ್ಲ, ನಾವೇ ಪತ್ರಕರ್ತರು. ಈಗ ಅಂಥ ಹೋರಾಟಗಳೂ ಇಲ್ಲ; ರಾಮಣ್ಣನವರಂಥ ಮನೋಭಾವದ ಕಾರ್ಯಕರ್ತರೂ ಇಲ್ಲ.

ಲಾಭ-ನಷ್ಟ

ರಾಮಣ್ಣನವರು ಈಗ ಹೆಚ್ಚು, ಹೆಚ್ಚು, ಕನ್ನಡ ಸಾಹಿತ್ಯ ಮತ್ತು

ಕನ್ನಡಿಗರಿಗೆ ಸಂಬಂಧಿಸಿದ ವಿಷಯಗಳಲ್ಲಿ ತಮ್ಮನ್ನು ಹೆಚ್ಚು ತೊಡಗಿಸಿಕೊಂಡಿದ್ದಾರೆ. ಅದರಿಂದ ಪತ್ರಕರ್ತರ ಸಂಘಟನೆಗಳಿಗೆ ಆದ ನಷ್ಟ ಸಾಹಿತ್ಯಕ್ಕೆ ಲಾಭವಾಗಿದೆ.

ಅಲ್ಲಿಗೆ ಏರಲು ಕೂಡ ಅವರದ್ದು ಹೋರಾಟದ ಮಾರ್ಗವೇ ಆಗಿದೆ. ಕನ್ನಡ ಸಂಘರ್ಷ ಸಮಿತಿಯನ್ನು ಅಂಥದೇ ಮನೋಭಾವ ಉಳ್ಳ ಹಲವು ಯುವಕರ ಮುಕ್ತ ಸಹಕಾರದಿಂದ ಅನೇಕ ಕನ್ನಡಪರ ಚಳವಳಿಗಳನ್ನು ಹುಟ್ಟು ಹಾಕಿ ಸ್ವಲ್ಪ ಮಟ್ಟಿಗೆ ಅವುಗಳಲ್ಲಿ ಯಶಸ್ಸನ್ನೂ ಸಾಧಿಸಿ ಈಗ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದಾರೆ.

ಎಲ್ಲಿದ್ದರೂ ರಾಮಣ್ಣ ಸುಮ್ಮನೆ ಕುಳಿತುಕೊಳ್ಳುವವರಲ್ಲ. ಅಲ್ಲಿ ಕೂಡ ಅನೇಕ ಸಭೆ,ಸಮಾರಂಭಗಳನ್ನು ಸಂಘಟಿಸಿ ಸಾಹಿತ್ಯಕ್ಷೇತ್ರಕ್ಕೂ ತಮ್ಮ ಸೇವೆ ಸಲ್ಲುತ್ತಿದ್ದೇನೆಂಬುದನ್ನು ರುಜುವಾತು ಪಡಿಸುತ್ತಿದ್ದಾರೆ. ಅದನ್ನು ಅವರ ವಿರೋಧಿಗಳೂ ಅಲ್ಲಗಳೆಯುವಂತಿಲ್ಲ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಹಲವು ಹುದ್ದೆಗಳಲ್ಲಿದ್ದ ಅವರು ಪತ್ರಕರ್ತರು ಮತ್ತಿತರ ಪತ್ರಿಕಾ ನೌಕರರ ಸೇವಾಸೌಲಭ್ಯಗಳು ಸುಧಾರಿಸಲು ಮತ್ತು ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗೆ ಸೇವೆಸಲ್ಲಿಸಿದ್ದಾರೆ. ಆ ಸಂಘದ ಅತ್ಯುನ್ನತ ಪದವಿಯೇ ಅಲ್ಲದೆ ರಾಷ್ಟ್ರಮಟ್ಟದ ಸಂಸ್ಥೆಗಳ ಪದಾಧಿಕಾರಿಯಾಗಿದ್ದ ನಾನು ಈ ಮಾತನ್ನು ನಿಸ್ಸಂಕೋಚವಾಗಿ ಇಲ್ಲಿ ದಾಖಲಿಸುತ್ತಿದ್ದೇನೆ.

ಗಣನೀಯಪಾತ್ರ: ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಶಾಸನಗಳನ್ನು ಬಿಹಾರ, ಕರ್ನಾಟಕ ಮತ್ತಿತರ ರಾಜ್ಯಗಳು ಕೈಗೆತ್ತಿಕೊಂಡಾಗ ನಡೆದ ಪ್ರತಿಭಟನೆ-ಹೋರಾಟಗಳಲ್ಲಿ ಪತ್ರಕರ್ತರ ಮೇಲೆ ನಡೆದ ಹಲ್ಲೆ, ಬೆದರಿಕೆಗಳ ಸಂದರ್ಭದಲ್ಲಿ ನಡೆದ ಪ್ರತಿಭಟನೆಗಳಲ್ಲಿ ರಾಮಣ್ಣ ಸಕ್ರಿಯ ಪಾತ್ರ ವಹಿಸಿದವರಾಗಿದ್ದಾರೆ. ಅದೇ ರೀತಿ ಇತ್ತೀಚೆಗೆ ಅಂದರೆ ಸುಮಾರು ನಾಲ್ಕೈದು ವರ್ಷಗಳ ಹಿಂದೆ ನಾನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಮ್ಮೇಳನವನ್ನು ತುಮಕೂರಿನಲ್ಲಿ ಸಂಘಟಿಸಲು ಮತ್ತು ಮಾರನೆಯ ವರ್ಷ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಎರಡನೆಯ ಬಾರಿ ಅಧ್ಯಕ್ಷನಾಗಿದ್ದಾಗ ಅಖಿಲ ಭಾರತ ಕಾರ್ಯನಿರತ ಪತ್ರಕರ್ತರ ಸಂಘದ ವಜ್ರಮಹೋತ್ಸವ ಇವೆರಡೂ ಕಾರ್ಯನಿರತ ಪತ್ರಕರ್ತರ ಸಂಘಟನೆಯ ಐತಿಹಾಸಿಕ ಘಟನೆಗಳು- ಸಂಘಟಿಸಲು ರಾಮಣ್ಣ ಕೋಡಿಹೊಸಹಳ್ಳಿ ಕೆ.ಯು.ಡಬ್ಲ್ಯು.ಜೆ.ಯ ಪ್ರಧಾನ ಕಾರ್ಯದರ್ಶಿಯಾಗಿ ಗಣನೀಯ ಕಾರ್ಯನಿರ್ವಹಿಸಿದರು.

ಇಲ್ಲಿ ಇನ್ನೊಂದು ಘಟನೆಯನ್ನು ತಪ್ಪದೇ ಸ್ಮರಿಸಿಬೇಕಾಗುತ್ತದೆ. ಆರ್. ಗುಂಡೂರಾವ್ ಅವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಸಂಯುಕ್ತ ಕರ್ನಾಟಕದ ಬೆಂಗಳೂರು ಆವೃತ್ತಿ ದಿಢೀರನೆ ಬೀಗಮುದ್ರೆ ಹಾಕಿ ಸುಮಾರು ೨೦೦ ಕುಟುಂಬಗಳನ್ನು ಬೀದಿಪಾಲು ಮಾಡಿತು. ಆಗ ಕೂಡ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷನಾಗಿದ್ದ ನಾನು ಕೇವಲ, ಪತ್ರಕರ್ತರು, ಪತ್ರಿಕಾನೌಕರರು ಅಲ್ಲದೆ ಇತರ ಕಾರ್ಮಿಕ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳ ಸಹಕಾರ ಪಡೆದು ಸುಮಾರು ಒಂದು ವರ್ಷದ ಸಂಗ್ರಾಮದ ನಂತರ ಪುನಃ ಅದರ

ಬಾಗಿಲು ತೆರೆಸಲು ರಾಷ್ಟ್ರದ ಪತ್ರಿಕೋದ್ಯಮ ಇತಿಹಾಸದಲ್ಲಿ ಕಾಣದಂತಹ ಹೋರಾಟ ಮಾಡಬೇಕಾಯಿತು. ಆಗ ತನು, ಮನಗಳನ್ನು ಅರ್ಪಿಸಿ ದುಡಿದವರಲ್ಲಿ ರಾಮಣ್ಣ ಕೂಡ ಒಬ್ಬರೆಂದು ಹೇಳಲು ಹೆಮ್ಮೆಯಾಗುತ್ತದೆ.

ರಾಮಣ್ಣ ನೇರ ನುಡಿಗೆ ಹೆಸರಾದವರು. ಇದ್ದದ್ದನ್ನು ಸಂಬಂಧಪಟ್ಟವರ ಎದುರಿನಲ್ಲಿ ಹೇಳುವವರು. ಅವರಿಗೆ ಅನೇಕ ಬಾರಿ ಅವರ ಈ ಗುಣವೇ ಮುಳುವಾಗಿದೆ. ತಮಗೆ ಅದರಿಂದ ತೊಂದರೆಯಾಗುವುದೆಂಬ ಅರಿವಿದ್ದರೂ ಅಥವಾ ಬೇರೆಯವರೂ ತಿಳಿ ಹೇಳಿದರೂ ಅವರು ತಮ್ಮ ದಾರಿಯನ್ನು ಮಾತ್ರ ಬದಲಿಸುವುದಿಲ್ಲ. ಈ ಗುಣವನ್ನು ಕಂಡ ನನ್ನ ಮತ್ತು ಅವರ ಮಿತ್ರರೊಬ್ಬರು ಹೀಗೆ ಅವರ ವ್ಯಕ್ತಿತ್ವವನ್ನು ಬಣ್ಣಿಸಿದರು.

''ರಾಮಣ್ಣ ಆನೆ ಇದ್ದಹಾಗೆ ಅದು ಹೋದದ್ದೇ ದಾರಿ. ಆದರೆ ಅದು ಒಂದೊಂದು ಸಾರಿ ತನ್ನ ತಲೆಯ ಮೇಲೆಯೇ ಮಣ್ಣೆರೆಚಿಕೊಳ್ಳುತ್ತದೆ.''

ರಾಮಣ್ಣ ಅವರ ಧೋರಣೆಯನ್ನು ಸಹಿಸದ ಕೆಲವರು ಅವರ ಬಗ್ಗೆ ಅಪಪ್ರಚಾರದಲ್ಲಿ ನಿರತರಾದ ಸಂದರ್ಭಗಳೂ ಉಂಟು. ಅದೇ ಕಾರಣದಿಂದ ಅವರಿಗೆ ದೊರಕಬೇಕಾದ ಹುದ್ದೆ, ಉದ್ಯೋಗಗಳು ಅವರ ಕೈತಪ್ಪಿ ಹೋಗಿ ತೊಂದರೆಗಳಿಗೆ ಈಡಾಗಿದ್ದಾರೆ. ಆದರೂ ರಾಮಣ್ಣ ಅವುಗಳಿಗೆ ಹೆದರಿ ಹಿಮ್ಮೆಟ್ಟುವವರಲ್ಲವೆಂಬುದು ಅವರನ್ನು ಹತ್ತಿರದಿಂದ ಬಲ್ಲ ಎಲ್ಲರೂ ಬಲ್ಲರು. ಅವರ ಹೋರಾಟ ಮುಂದುವರಿದೇ ಇರುತ್ತದೆ. ''ಹೋರಾಟ, ಹೋರಾಟ, ಗೆಲ್ಲುವವರೆಗೆ ಹೋರಾಟ''.

*

ರಾಮಣ್ಣ ಅವರ ಸಂಪಾದಿತ ಕೃತಿಗಳು

ಡಾ. ವರದಾ ಶ್ರೀನಿವಾಸ

ಸಾಹಿತ್ಯದಲ್ಲಿ ಸೃಜನೆ, ಸಂಶೋಧನೆ, ಸಂಪಾದನೆ ಎಂದು ಮೂರು ವಿಧ. ಸೃಜನೆ ಭಾವಗಮ್ಯವಾದರೆ ಸಂಶೋಧನೆ ಬುದ್ಧಿಗಮ್ಯವಾದುದು. ಭಾವಬುದ್ಧಿಗಳ ಮೇಳವಿಕೆಯಲ್ಲಿ ಸಂಪಾದನೆ ಸಾಧ್ಯವಾಗುತ್ತದೆ. ಹಳೆಯ ಗ್ರಂಥಗಳ ಸಂಪಾದನೆ (ಸೃಜನಸಾಹಿತ್ಯ), ಸಂಶೋಧನೆ ಸಾಹಿತ್ಯ, ಸಂಪಾದನೆ, ಶಾಸನ ಸಾಹಿತ್ಯ ಸಂಪಾದನೆ, ಸ್ಮರಣ ಹಾಗೂ ಅಭಿನಂದನ ಗ್ರಂಥಗಳ, ವಿಶೇಷ,ಸಂಚಿಕೆಗಳ ಸಂಪಾದನೆ-ಎಂದು ಸಂಪಾದನೆ ವಿಭಾಗವನ್ನು ಮತ್ತೆ ವರ್ಗೀಕರಿಸಬಹುದಾಗಿದೆ.

ಸಂಪಾದನೆಯ ಕಾರ್ಯ ಗುರುತರವಾದುದು. ಸಂಪಾದಕನಲ್ಲಿ ಸಹನೆ, ಹೊಂದಾಣಿಕೆಯ ಮನೋಭಾವಗಳೊಡನೆ ಸಾಹಿತ್ಯಾಸಕ್ತಿ,ಸಾಹಿತ್ಯ ಪ್ರೇಮ, ನಾಡು ನುಡಿಯ ಕುರಿತ ಕಳಕಳಿ ಕೂಡ ಇರಬೇಕಾಗುತ್ತದೆ. ಉತ್ತಮ ಸಂಪಾದನೆ ಶಾಶ್ವತವಾದ ದಾಖಲೆಯಾಗಿ ಉಳಿಯುವ ಕೃತಿಯಾಗುತ್ತದೆ. ಅಷ್ಟೇ ಅಲ್ಲ ಚಾರಿತ್ರಿಕವಾಗಿ ಮಹತ್ವದ ಕೃತಿಯಾಗುತ್ತದೆ.

ಪ್ರಸ್ತುತ ಲೇಖನ '' ರಾಮಣ್ಣ ಕೋಡಿಹೊಸಹಳ್ಳಿ ಅವರ ಸಂಪಾದಿತ ಕೃತಿಗಳ ಸಮೀಕ್ಷೆ''. ರಾಮಣ್ಣ ಅವರು ಸಂಪಾದನೆ ಕ್ಷೇತ್ರಕ್ಕೆ ಕಾಲಿರಿಸಿದ್ದು ೧೯೭೪ರಿಂದ. ಕನ್ನಡ ಸಾಹಿತ್ಯ ಪರಿಷತ್ತಿನ ಮುಖವಾಣಿಯಾದ 'ಕನ್ನಡನುಡಿ'ಯ ಸಂಪಾದಕರಾಗಿ ೧೯೮೧ರ ವರೆಗೆ ಕೆಲಸ ನಿರ್ವಹಿಸಿದರು. ಈ ಅವಧಿಯಲ್ಲಿ ಸಮ್ಮೇಳನದ ವಿಶೇಷಾಂಕ, ರಾಜ್ಯೋತ್ಸವ ವಿಶೇಷ ಸಂಚಿಕೆ ಹಾಗೂ ಸಾಹಿತ್ಯ ಮತ್ತು ಪತ್ರಿಕೆ ವಿಶೇಷ ಸಂಚಿಕೆಗಳ ಸಂಪಾದಕರಾಗಿ ಅವರ ಕಾರ್ಯ ಸಂದಿದೆ.

ತರುವಾಯ ಕನ್ನಡ ಸಂಘರ್ಷ ಸಮಿತಿಯ ಅಧ್ಯಕ್ಷರಾಗಿ ಅಂದರೆ ೧೯೮೬ರಿಂದ ಈ ವರೆಗೆ ಬಹಳಷ್ಟು ಕೃತಿಗಳನ್ನು ಸಂಘರ್ಷ ಸಮಿತಿಯ ವತಿಯಿಂದ ಸಂಪಾದಿಸಿದ್ದಾರೆ.

ಪುಟಗಳ ಮಿತಿಯಿರುವುದರಿಂದ ಎಲ್ಲ ಸಂಪಾದಿತ ಕೃತಿಗಳನ್ನು ಹೆಸರಿಸಿ, ಕೆಲವೊಂದನ್ನು ಮಾತ್ರ ಇಲ್ಲಿ ಉಲ್ಲೇಖಿಸಿ ಸಮೀಕ್ಷಿಸುವುದು ಅನಿವಾರ್ಯವಾಗಿದೆ. ಕನ್ನಡನುಡಿಯ ಸಂಪಾದಕರಾಗಿದ್ದ ಅವಧಿಯಲ್ಲಿ 'ಸಾಹಿತ್ಯ ಮತ್ತು ಪತ್ರಿಕೆ' ಶೀರ್ಷಿಕೆಯ ಸಂಚಿಕೆ ಬಗ್ಗೆ ಒಂದೆರಡು ಮಾತು ಹೇಳಬಹುದಾಗಿದೆ.

೧೯೮೦ರ ಜೂನ್ ೧೪,೧೫ರ ಸಂಚಿಕೆಯಾಗಿ 'ಸಾಹಿತ್ಯ ಮತ್ತು ಪತ್ರಿಕೆ' ಎಂಬ ವಿಶೇಷ ಸಂಚಿಕೆ, ಅವುಗಳಲ್ಲಿನ ವಿಭಿನ್ನ ವಿಷಯಗಳ ಲೇಖನಗಳಿಂದ ಗಮನ ಸೆಳೆಯುತ್ತದೆ. ಪತ್ರಿಕಾರಂಗದ ಹಿರಿ ಕಿರಿಯರಿಂದ ಲೇಖನಗಳನ್ನು ಸಂಗ್ರಹಿಸಿರುವುದು ಈ ಸಂಚಿಕೆಯ ವೈಶಿಷ್ಟ್ಯ. ಪ್ರಸಿದ್ಧ ಹಾಗೂ ಹಿರಿಯ ಪತ್ರಕರ್ತರು, ಕಿರಿಯ ಪತ್ರಕರ್ತರು, ಹಿರಿಯ ಹಾಗೂ ಕಿರಿಯ ಸಾಹಿತಿಗಳು, ಲೇಖಕಿಯರುಗಳ ಲೇಖನಗಳನ್ನು ಒಳಗೊಂಡ ಸಂಚಿಕೆ ಇದು.

ಸಂಪಾದಕೀಯದಲ್ಲಿ ಸಂಪಾದಕರ ಹೇಳಿಕೆ ಹೀಗಿದೆ: ''ಪತ್ರಿಕೋದ್ಯಮ, ಸಾಹಿತ್ಯ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿಕೊಂಡು ಬರುತ್ತಿರುವ ವಿಚಾರವಂತ ಹಿರಿಯ-ಕಿರಿಯ ಪತ್ರಕರ್ತರು ಮತ್ತು ಸಾಹಿತಿಗಳ ಲೇಖನಗಳಿಂದ ಈ ಸಂಚಿಕೆ ಮೈತುಂಬಿಕೊಂಡಿದೆ. ಇದಕ್ಕೆ ವ್ಯಂಗ್ಯಚಿತ್ರಕಾರರ ಕಾಣಿಕೆಯೂ ಅಷ್ಟೇ ಮಹತ್ತರವಾಗಿದೆ. ಜತೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಮ್ಮೇಳನದ ಸ್ಮರಣ ಸಂಚಿಕೆಗಳಿಂದ, ಪತ್ರಕರ್ತರಿಂದ ಕೆಲವು ಸ್ವಾರಸ್ಯಕರ ಲೇಖನಗಳನ್ನು ಆಯ್ದು ಪ್ರಕಟಿಸಲಾಗಿದೆ''.

ಪತ್ರಿಕೋದ್ಯಮ ಹಾಗೂ ಸಾಹಿತ್ಯ ಕುರಿತ ಲೇಖನಗಳಿಂದ ಈ ಸಂಚಿಕೆ, ಎರಡೂ ನಿಟ್ಟಿನಲ್ಲಿ ವಿಶಿಷ್ಟ ಸಂಚಿಕೆಯಾಗಿ ಮೂಡಿಬಂದಿದೆ.

ಲೇಖನಗಳ ವಿಷಯ, ಲೇಖಕರ ಒಲವುಗಳು ವ್ಯಕ್ತಗೊಂಡಿರುವ ಲೇಖನಗಳ ಆಯ್ಕೆಯಲ್ಲಿ ಸಂಪಾದಕರ ವೈಶಿಷ್ಟ್ಯವೂ ಅಭಿವ್ಯಕ್ತಗೊಂಡಿರುವುದು ಇಲ್ಲಿ ಗಮನಾರ್ಹವಾಗಿದೆ.

ರಾಮಣ್ಣ ಅವರು ಸಂಘರ್ಷ ಸಮಿತಿಯ ಅಧ್ಯಕ್ಷರಾಗಿ, ಈ ಹನ್ನೊಂದು ವರ್ಷಗಳ ಅವಧಿಯಲ್ಲಿ ಸಂಪಾದಿಸಿರುವ ಕೃತಿಗಳು ಇವು. ೧. ಸಂಘರ್ಷ, ೨. ಕುವೆಂಪು-ಕನ್ನಡ ಸಂಘರ್ಷ, ೩. ಕುವೆಂಪು-ಸಾಮಾಜಿಕ ಕಳಕಳಿ, ೪. ಕುವೆಂಪು ಕಾದಂಬರಿಗಳ ಆದರ್ಶ, ೫. ಕುವೆಂಪು ಚಿತ್ರಿಸಿದ ಮಹಿಳೆಯರು, ೬. ಕುವೆಂಪು ಕಾದಂಬರಿಗಳು-ಜನಜೀವನ , ೭. ಕುವೆಂಪು ಚಿತ್ರಿಸಿರುವ ಏಕಲವ್ಯ, ೮. ಕುವೆಂಪು-ಮಕ್ಕಳ ಕವನಗಳು, ೯ ವಿಶ್ವಮಾನವ. ೧೦. ಕುವೆಂಪು-ಸಾಮಾಜಿಕ ಪ್ರಜ್ಞೆ, ೧೧. ಕುವೆಂಪು-ಶೂದ್ರ ತಪಸ್ವಿ, ೧೨. ಕುವೆಂಪು ವಿಚಾರದರ್ಶನ, ೧೩. ಕನ್ನಡ ಸಂಘರ್ಷ ಸಮಿತಿ, ೧೪. ಡಾ।ಅನುಪಮಾ ನಿರಂಜನ-ಅವರ ೬೨,೬೩,೬೪ನೆಯ ಹುಟ್ಟುಹಬ್ಬಗಳ ಸಂದರ್ಭ-ಬೆಂಗಳೂರು ಜಿಲ್ಲಾ ಮಹಿಳಾ ಸಾಹಿತ್ಯ ಸಮಾವೇಶಗಳ ನೆನಪಿನ ಸಂಚಿಕೆಗಳು ಮೂರು. ೧೫. ಪ್ರಥಮ ರಾಷ್ಟ್ರಕವಿ ಎಂ. ಗೋವಿಂದ ಪೈ ಅವರ ೧೧೨,೧೧೩,೧೧೪ನೆಯ ಹುಟ್ಟು ಹಬ್ಬಗಳ ಸಂದರ್ಭ-ನೆನಪಿನ ಸಂಚಿಕೆಗಳು (ಮೂರು) ೧೬. ವಿಕಸಿತೆ, (ಕಥಾ ಸಂಕಲನ), ೧೭. ಕನ್ನಡದ ಧೀಮಂತ ಹೋರಾಟಗಾರ ರಹಮಾನ್‌ಖಾನ್. ಮತ್ತು ೧೮. ಕನ್ನಡಜನ-ಕನ್ನಡಮನ (ಕವನ ಸಂಕಲನ).

ಕುವೆಂಪು ಅವರ ೮೪ನೆಯ ಹುಟ್ಟುಹಬ್ಬದಿಂದ ತೊಡಗಿ, ೯೩ನೆಯ ಹುಟ್ಟುಹಬ್ಬದ,

ಅಂದರೆ ೧೦ ಹುಟ್ಟುಹಬ್ಬಗಳ ಆಚರಣೆ ಸಂದರ್ಭಗಳಲ್ಲಿ ಸಂಘರ್ಷ ಸಮಿತಿ ಏರ್ಪಡಿಸಿದ ವಿವಿಧ ವಿಚಾರಗಳನ್ನು ಕುರಿತ ಲೇಖನ ಸ್ಪರ್ಧೆಗಳ ಬಹುಮಾನಿತ ಲೇಖನಗಳು, ಕುವೆಂಪು ಅವರ ನಾಡಗೀತೆ ಹಾಗೂ ಕನ್ನಡಾಭಿಮಾನ ಜಾಗೃತಗೊಳಿಸುವ ಕವನಗಳು, ಪ್ರಸಿದ್ಧ ಲೇಖಕರ ಲೇಖನಗಳನ್ನು ಈ ವಿಶೇಷ ಸಂಚಿಕೆಗಳು ಒಳಗೊಂಡಿವೆ. ಅಲ್ಲದೇ ಆಯಾ ವಿಷಯ ಕುರಿತ ಶೀರ್ಷಿಕೆ-ಸಂಚಿಕೆಯ ಶೀರ್ಷಿಕೆಯೂ ಆಗಿರುವುದು ಈ ಸಂಚಿಕೆಗಳ ಗಮನಾರ್ಹ ಅಂಶ.

ಮೊದಲೇ ತಿಳಿಸಿದಂತೆ ಲೇಖನಗಳ ಸಂಪಾದನೆ ಜವಾಬ್ದಾರಿಯುತ ಕೆಲಸದ ಜತೆಯಲ್ಲಿ ಕೆಲವೊಮ್ಮೆ ಬೇಸರಕ್ಕೆ ಅಸಹನೆಗೆಡೆ ಮಾಡಿಕೊಡುವ ಸಂದರ್ಭಗಳೂ ಇವೆ. ಉದಯೋನ್ಮುಖ ಗಣ್ಯಲೇಖಕರು, ವಿನಯವಂತ ಗಣ್ಯಲೇಖಕರು, ಸೌಜನ್ಯಮನಸ್ಸಿನ ಗಣ್ಯಲೇಖಕರು ಲೇಖನಗಳನ್ನು ಕೇಳಿದ ಅವಧಿಯಲ್ಲಿ ಕೊಟ್ಟುಬಿಡುತ್ತಾರೆ. ಇನ್ನು ಕೆಲವರು ಕೊಡದೇ ಸತಾಯಿಸುತ್ತಾರೆ. ಅದನ್ನು ಆರಂಭದ ಸಂಪಾದನೆಯಲ್ಲೆ ಬೇಸರದಿಂದಷ್ಟೇ ಅಲ್ಲ, ನೇರವಾಗಿ ರಾಮಣ್ಣ ಟೀಕಿಸಿರುವುದು ಹೀಗೆ- ''ಈ ನೆನಪಿನ ಸಂಚಿಕೆ ಕೇವಲ ಒಂದು ತಿಂಗಳ ಅವಧಿಯಲ್ಲಿ ರೂಪುಗೊಂಡದ್ದು, ಇದಕ್ಕೆ ಲೇಖನ ಕೊಡಲು ಕನ್ನಡ ಮತ್ತು ಕುವೆಂಪು ಕುರಿತಂತೆ ಕೆಲವೊಂದು ವಿಷಯಗಳನ್ನು ಸೂಚಿಸಿ ಸಮಕಾಲೀನ ಗಣ್ಯ ಬರಹಗಾರರಲ್ಲಿ ಕೆಲವರಿಗೆ ವಿನಂತಿಸಿಕೊಂಡಿದ್ದೆವು. ಅವರಿಗೆ ನೀಡಿದ್ದ ೧೫ ದಿನಗಳ ಗಡುವು ಮೀರಿ ಹತ್ತು ದಿನಗಳಾದರೂ ಲೇಖನ ಬರುವ ಸುಳಿವು ಸಿಗಲಿಲ್ಲ. ಒಬ್ಬೊಬ್ಬರ ಬಳಿಗೆ ನಾಲ್ಕಾರು ಬಾರಿ ಅಲೆದರೂ ಆಗ-ಈಗ ಎಂಬ ವಾಯಿದೆ ಸಿಕ್ಕಿತೇ ಹೊರತು ಲೇಖನ ಸಿಗಲಿಲ್ಲ. ಅವರಿಗೆ ಅವರ ವ್ಯಾವಹಾರಿಕ ಕಾರ್ಯದಲ್ಲೇ ತೊಡಗಲು ತಿಳಿಸಿ, ಇನ್ನು ಈ ಸಂಚಿಕೆಗೆ ಲೇಖನ ಬರೆಯುವ ಪ್ರಯತ್ನ ಬೇಡವೆಂದು ತಿಳಿಸಲಾಯಿತು. ತಮ್ಮ ದೈನಂದಿನ ವ್ಯವಹಾರದಲ್ಲಿ ಕೆಲಸಕಾರ್ಯಗಳ ಒತ್ತಡದ ನಡುವೆ ಈ ನಮ್ಮ ಕೋರಿಕೆಯನ್ನು ಈಡೇರಿಸಲು ಅವರಿಗೆ ಪ್ರಾಮಾಣಿಕವಾಗಿ ಸಾಧ್ಯವಾಗದೆ ಹೋಗಿರಬಹುದು. ಆದರೆ ಒಪ್ಪಿಕೊಂಡ ಮೇಲೆ ನಿಗದಿತ ಅವಧಿಯೊಳಗಲ್ಲದಿದ್ದರೆ ಹೋಗಲಿ ಸ್ವಲ್ಪ ತಡವಾಗಿಯಾದರೂ ಆ ಕೆಲಸ ಮಾಡಿಕೊಡದಿರುವ ಲೇಖಕರ ಅಸಹಕಾರ ಮನೋಭಾವದ ಬಗ್ಗೆ ಸ್ವಲ್ಪ ಬೇಸರಗೊಳ್ಳಬೇಕಾಗಿದೆ.''*

ಈ ಉಲ್ಲೇಖವೊಂದೇ 'ಸಂಪಾದನೆ' ಸುಲಭದ ಕೆಲಸವಲ್ಲ ಎಂಬುದನ್ನು ಸೂಚಿಸುತ್ತದೆ. ಇಲ್ಲಿ ಗಮನಿಸಬಹುದಾದ ಇನ್ನೊಂದು ಸಂಗತಿಯೆಂದರೆ ಕುವೆಂಪು ಅಂಥ ದಿವ್ಯಚೇತನದ ನೆನಪನ್ನು ಪ್ರತಿವರ್ಷ ಮಾಡುವುದರ ಜತೆಯಲ್ಲಿ ಪದವಿಕಾಲೇಜಿನ ವಿದ್ಯಾರ್ಥಿಗಳಿಗಾಗಿ ಪ್ರಬಂಧ ಸ್ಪರ್ಧೆ ಏರ್ಪಡಿಸಿ, ಬಹಮಾನಿತ ಪ್ರಬಂಧಗಳ ಪ್ರಕಟನೆಯ ಜತೆಯಲ್ಲಿ ಗಣ್ಯ ಬರಹಗಾರರ ಲೇಖನಗಳನ್ನು ಪ್ರಕಟಿಸಿ, ಆ ಮೂಲಕ ಓದುಗ ಸಮುದಾಯಕ್ಕೆ ಉತ್ತಮ ವಿಚಾರವನ್ನು ಒದಗಿಸಿರುವುದು. ಕುವೆಂಪು ಅವರ ಕೃತಿಗಳನ್ನು ಓದಲು ಹಾಗೂ ಆ ಕುರಿತು ವಿದ್ಯಾರ್ಥಿಗಳು ಚಿಂತನೆ ಮಾಡಲು ಅವಕಾಶ ಕಲ್ಪಿಸುವುದು, ಅಷ್ಟೇ ಅಲ್ಲ ಅವರನ್ನು ಪ್ರೋತ್ಸಾಹಿಸುವ ಸಲುವಾಗಿ ಬಹುಮಾನ ನೀಡುವುದು ಸಂಘರ್ಷ ಸಮಿತಿಯ ಯೋಜನೆ. ಈ ಯೋಜನೆಯಡಿ ಬಂದ ಲೇಖನಗಳನ್ನು ಮೂಲೆಗೆಸೆಯದೆ ಸಂಪಾದಿಸಿ ಪ್ರಕಟಿಸುವ ಕಾರ್ಯ ನಿಜಕ್ಕೂ ಪ್ರಶಂಸನೀಯ ೧೯೮೭ರಿಂದ ಪ್ರತಿ ವರ್ಷವೂ ಇಂಥ ಒಂದು ಪ್ರಶಂಸನೀಯ ಕಾರ್ಯವನ್ನು ಮಾಡಿಕೊಂಡು ಬಂದಿದೆ ಸಂಘರ್ಷ ಸಮಿತಿ. ಅದರ ಅಧ್ಯಕ್ಷರಾಗಿ ರಾಮಣ್ಣ ಅವರು ಈ ಹತ್ತು ವಿಶೇಷ ಸಂಚಿಕೆಗಳನ್ನು ಸಂಪಾದಿಸಿದ್ದಾರೆ.

---

೧. ಕುವೆಂಪು-ಕನ್ನಡ ಸಂಘರ್ಷ, ನಮ್ಮಮಾತು, ರಾಮಣ್ಣ ಕೋ.

ವಿಶೇಷ ಸಂಚಿಕೆಗಳ ಶೀರ್ಷಿಕೆಗಳ ಕುರಿತ ಚಿಂತನೆಗೆ ಅವಕಾಶವಾಗಿ ಮೂಡಿ ಬಂದ ಲೇಖನಗಳು ವಿದ್ಯಾರ್ಥಿಗಳ ವಿಚಾರಶಕ್ತಿಗೆ ಸವಾಲಾಗಿವೆ. ಕನ್ನಡ ಸಂಘರ್ಷ, ಸಾಮಾಜಿಕ ಕಳಕಳಿ, ವಿಶ್ವಮಾನವತೆ, ಸಾಮಾಜಿಕ ಪ್ರಜ್ಞೆ, ನಾಡು-ನುಡಿಯ ಪ್ರಜ್ಞೆ, ಮಹಿಳೆಯರು, ಕಾದಂಬರಿಗಳ ಆದರ್ಶ, ಮಕ್ಕಳ ಕವನಗಳು, ಶೂದ್ರತಪಸ್ವಿ, ಜನಜೀವನ, ಏಕಲವ್ಯ-ಮೊದಲಾದ ವಿಷಯಗಳನ್ನು ಕುರಿತಂತೆ ಕುವೆಂಪು ಅವರ ವಿಚಾರವನ್ನು ಅವರ ಕೃತಿಗಳಿಂದಲೇ ಅರಿಯುವ ಪ್ರಯತ್ನ ಈ ಲೇಖನಗಳಲ್ಲಿ ಕಾಣಬಹುದಾಗಿದೆ.

ಈ ಲೇಖನಗಳಲ್ಲಿ ಹೆಚ್ಚಿನವು ವಿದ್ಯಾರ್ಥಿನಿಯರು ಬರೆದವುಗಳು. ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರ ಮೇಲುಗೈ ಕಾಣಬಹುದಾಗಿದೆ. ಈ ಬಹುಮಾನಿತ ಲೇಖನಗಳಲ್ಲಿ ಲೇಖಕ-ಲೇಖಕಿಯರ ತರ್ಕಸರಣಿ, ವಿಷಯಮಂಡನೆ, ಸಂಬಂಧಪಟ್ಟ ಉಲ್ಲೇಖಗಳ ಉದ್ಧರಣೆ, ಸಮರ್ಥ ಭಾಷೆ, ಅಭಿವ್ಯಕ್ತಿಸುವ ರೀತಿ-ಮೆಚ್ಚತಕ್ಕ ಅಂಶಗಳು. ಒಟ್ಟಿನಲ್ಲಿ ಕುವೆಂಪು ಹುಟ್ಟುಹಬ್ಬದ ಆಶಯದಲ್ಲಿ ಹೊರಬಂದ, ರಾಮಣ್ಣ ಅವರು ಸಂಪಾದಿಸಿದ ಕೃತಿಗಳು ಎಲ್ಲರೂ ಓದಬೇಕಾದಂಥ ಕೃತಿಗಳಾಗಿವೆ.

ಕುವೆಂಪುರವರ ಮೇಲೆ ರಾಮಣ್ಣ ಅವರಿಗೆ ಎಷ್ಟು ಅಭಿಮಾನ ಇದೆಯೆನ್ನುವುದು ಈ ಎಲ್ಲ ವಿಶೇಷ ಸಂಚಿಕೆಗಳಿಗೆ ಬರೆದ 'ನಮ್ಮ ಮಾತು'ವಿನಲ್ಲೂ ಅಭಿವ್ಯಕ್ತವಾಗಿದೆ. ಹುಟ್ಟುಹಬ್ಬದ ಸಂಚಿಕೆಗಳಲ್ಲದೆ ಕುವೆಂಪು ಕುರಿತ ಸಂಪಾದಿತ ಕೃತಿ ಇನ್ನೊಂದು 'ಕುವೆಂಪು ವಿಚಾರ ದರ್ಶನ' ೧೯೮೬ರಲ್ಲಿ ಇದು ಪ್ರಕಟವಾಗಿದೆ. ಪ್ರೊ॥ ಎಂ.ಎಚ್. ಕೃಷ್ಣಯ್ಯ ಅವರ ಮುನ್ನುಡಿಯೊಡನೆ ಪ್ರಸಿದ್ಧ ಲೇಖಕ ಲೇಖಕಿಯರು ಬರೆದ, 'ಕುವೆಂಪು ದೃಷ್ಟಿಯಲ್ಲಿ ಮಹಿಳೆ', 'ಕುವೆಂಪು ಸಾಹಿತ್ಯದಲ್ಲಿ ಸಾಮಾಜಿಕ ಕಳಕಳಿ', 'ಕುವೆಂಪು ಸಾಹಿತ್ಯದಲ್ಲಿ ಶೂದ್ರ ಪ್ರಜ್ಞೆ', 'ಕುವೆಂಪು ಸಾಹಿತ್ಯದಲ್ಲಿ ಸರ್ವೋದಯ', 'ಕುವೆಂಪು ಅವರ ದಾರ್ಶನಿಕ ಮೀಮಾಂಸೆ' ಮೊದಲಾದ ಲೇಖನಗಳನ್ನು ರಾಮಣ್ಣ ಸಂಪಾದಿಸಿದ್ದಾರೆ. ಈ ಲೇಖನಗಳು ಕುವೆಂಪು ಅವರ ಎಲ್ಲ ಕೃತಿಗಳ ಸಮಗ್ರ ವಿಚಾರಗಳನ್ನು ಪ್ರತಿಬಿಂಬಿಸಲು ಆಗದಿದ್ದರೂ ಓದುಗರಿಗೆ ವಿಚಾರಪ್ರವೇಶಕ್ಕೆ ಅನುಕೂಲವಾಗಿ ಪರಿಣಮಿಸಿದೆ. ಇಂಥ ಒಳ್ಳೆಯ ಕೃತಿಯೊಂದನ್ನು ರಾಮಣ್ಣ ಅವರು ಸಂಪಾದಿಸಿದ್ದಾರೆ.

ಇನ್ನು ಉಳಿದಂತೆ ಹಾಗೂ ಅನುಪಮಾ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಬೆಂಗಳೂರು ಜಿಲ್ಲಾ ಮಹಿಳಾ ಸಾಹಿತ್ಯ ಸಮಾವೇಶ ಏರ್ಪಡಿಸಿ, ಕನ್ನಡದ ಒಬ್ಬ ಮಹಾನ್ ಲೇಖಕಿಯನ್ನು ನೆನಪಿಸುವುದರ ಜತೆಯಲ್ಲಿ ಅವರ ಕೃತಿಗಳನ್ನು ಕುರಿತ ಪ್ರಬಂಧ ಮಂಡನೆ, ಭಾಷಣಗಳಿಗೆ ಅವಕಾಶ ನೀಡಿ, ಆ ಪ್ರಬಂಧಗಳನ್ನು ಸಂಪಾದಿಸಿ ಪ್ರಕಟಿಸುವ ಉತ್ತಮ ಕೆಲಸವನ್ನು ರಾಮಣ್ಣ ಅವರು ಮಾಡುತ್ತಿದ್ದಾರೆ. ಅಂಥ ಮೂರು ಸಂಕಲನಗಳು ಈಗಾಗಲೇ ಬಂದಿವೆ. ಈ ಸಂಕಲನಗಳಲ್ಲಿ, ೧೯೯೫, ೧೯೯೬,೧೯೯೭ರಲ್ಲಿ ಡಾ. ಅನುಪಮಾ ನಿರಂಜನರ ಹೆಸರಲ್ಲಿ ಏರ್ಪಡಿಸಿ ಕಥಾಸ್ಪರ್ಧೆಯ ಬಹುಮಾನಿತ ಕಥೆಗಳು, ತೀರ್ಪುಗಾರರ ನುಡಿಗಳು, ಮಹಿಳಾ ಸಮಾವೇಶದಂದು ಮಂಡಿಸಿದ ಪ್ರಬಂಧಗಳು ಒಳಗೊಂಡಿವೆ. ಈ ಸ್ಪರ್ಧೆ ಮಹಿಳೆಯರಿಗೆ ಮಾತ್ರ ಮೀಸಲು. ಉದಯೋನ್ಮುಖ ಕಥೆಗಾರ್ತಿಯರಿಗೆ ಈ ಒಂದು ವೇದಿಕೆ ನಿರ್ಮಿಸುವ ಮೂಲಕ ಕಥಾಕ್ಷೇತ್ರಕ್ಕೆ ಸಮರ್ಥ ಕಥೆಗಾರ್ತಿಯರನ್ನು ನೀಡುವ ಈ ಒಂದು ಶೌರ್ಯ ಹಾಗೂ ಮಹಿಳಾ ಲೇಖಕಿಯೊಬ್ಬರನ್ನು

ಪ್ರತಿವರ್ಷ ಸ್ಮರಿಸುವ ಈ ಒಂದು ಯೋಜನೆಗೆ, ಸಂಘರ್ಷ ಸಮಿತಿಗೆ ಕನ್ನಡ ಸಾಹಿತ್ಯಾಭಿಮಾನಿಗಳು ಕೃತಜ್ಞತೆ ಸಲ್ಲಿಸಬೇಕಾಗಿದೆ.

ಈ ಸಂಕಲನದ ಕಥೆಗಳು, ಲೇಖನಗಳು ಸಹೃದಯ ಓದುಗರ ಮನಸ್ಸಿನ ಹಸಿವನ್ನು ನೀಗಿಸುವ ಗ್ರಾಸವಾಗಿದೆ. ತಮ್ಮ ವಿಶಿಷ್ಟಧೋರಣೆ, ಕಾಳಜಿ, ಬಂಡಾಯ ಮನೋಭಾವ ಹೊಂದಿದ ದಿಟ್ಟ ಲೇಖಕಿ ಹಾಗೂ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ, ಚಾಲನೆ ನೀಡಿ ಕಾದಂಬರಿ ಕ್ಷೇತ್ರದಲ್ಲಿ ಮನ್ನಣೆ ಪಡೆದ ಡಾ. ಅನುಪಮಾ ನಿರಂಜನರ ಹುಟ್ಟುಹಬ್ಬವನ್ನು ಹೀಗೆ ಸಾರ್ಥಕಪಡಿಸಿದ್ದಾರೆ ರಾಮಣ್ಣ ಅವರು.

ಅದೇ ರೀತಿ ಕನ್ನಡದ ಪ್ರಥಮ ರಾಷ್ಟ್ರಕವಿ ಗೋವಿಂದ ಪೈ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ, ಔಚಿತ್ಯಪೂರ್ಣವಾಗಿ ಆಚರಿಸಿ, ರಾಷ್ಟ್ರಕವಿ ಹೆಸರಿನಲ್ಲಿ ಕವನ ಸ್ಪರ್ಧೆ ಏರ್ಪಡಿಸಿ, ಬಹುಮಾನಿತ ಕವನಗಳನ್ನು ಪ್ರಕಟಿಸುವುದರ ಜತೆಯಲ್ಲಿ ಕವಿಕಾವ್ಯ ಕುರಿತ ಲೇಖನಗಳನ್ನು ಪ್ರಕಟಿಸಿದೆ ಸಂಘರ್ಷ ಸಮಿತಿ, ರಾಮಣ್ಣ ಅವರ ಸಂಪಾದನೆ ಮೂಲಕ ರಾಷ್ಟ್ರಕವಿ ಗೋವಿಂದ ಪೈ ಅವರ ೧೧೨,೧೧೩,೧೧೪ನೆಯ ಹುಟ್ಟುಹಬ್ಬಗಳ ನೆನಪಿನ ಪುಸ್ತಕ ಕವಿಯ ಅಭಿಮಾನಿಗಳಿಗೆ ಇಷ್ಟವಾಗುತ್ತದೆ.

೧೯೯೫ರಲ್ಲಿ ರಾಮಣ್ಣ ಅವರು ಸಂಪಾದಿಸಿದ 'ಕನ್ನಡದ ಧೀಮಂತ ಹೋರಾಟಗಾರ'- ಕನ್ನಡವೇ ತನ್ನ ಉಸಿರು ಎಂದು ಭಾವಿಸಿದ, ಕನ್ನಡಕ್ಕಾಗಿ ಹೋರಾಡಿ, ಆಕಸ್ಮಿಕ ಅಪಘಾತದಲ್ಲಿ, ಸಣ್ಣ ವಯಸ್ಸಿನಲ್ಲಿ ನಿಧನ ಹೊಂದಿದ ದಿ॥ರಹಮಾನ್‌ಖಾನ್ ನೆನಪಿನ ಕೃತಿ ರೆಹಮಾನ್‌ಖಾನ್‌ಗೆ ಅಭಿಮಾನಿ ಗೆಳೆಯರು, ಲೇಖಕರು ಅರ್ಪಿಸಿದ ಶ್ರದ್ಧಾಂಜಲಿ. ಹನ್ನೆರಡು ಲೇಖನಗಳು ಹಾಗೂ ಮುನ್ನುಡಿಯಲ್ಲಿ ಖಾನ್ ಕುರಿತ, ಅವರ ಕನ್ನಡದ ಅಭಿಮಾನ, ಕನ್ನಡದ ಉಳಿವಿನ ಬಗ್ಗೆ ಹೋರಾಟ, ಕನ್ನಡಪರ ಚಟುವಟಿಕೆ, ಕನ್ನಡದ ಯುವಕನಾಗಿ ಮಾಡಿದ ಕಾರ್ಯಗಳನ್ನು ಕುರಿತ ಆತ್ಮೀಯ ಹ ಾಗೂ ಸಂತಾಪ ಸೂಚಕ ಲೇಖನಗಳು ಕನ್ನಡಾಭಿಮಾನಶೂನ್ಯರಿಗೆ ಎಚ್ಚರ ನೀಡುವಂತಿವೆ.

ಈ ಸಂಕಲನದಲ್ಲಿ ರಾಮಣ್ಣ ಅವರ ಲೇಖನವೂ ಇದೆ. ಭಾಷಾಭಿಮಾನ ಶೂನ್ಯರನ್ನು ಜಾಗೃತಿಗೊಳಿಸುವ ಲೇಖನಗಳನ್ನು ರಾಮಣ್ಣ ಅವರು ಸಂಪಾದಿಸಿ ಒಳ್ಳೆಯ ಕೆಲಸ ಮಾಡಿದ್ದಾರೆ. ಇದು ಪ್ರತಿಯೊಬ್ಬ ಕನ್ನಡಿಗನಿಗೆ (ಕರ್ನಾಟಕದ ನೆನಸಿಗ) ದೊರೆತು, ಎಲ್ಲರೂ ಓದುವಂತಾದರೆ ಕರ್ನಾಟಕದಲ್ಲಿ ಕನ್ನಡದ ಸ್ಥಿತಿ ಉನ್ನತ ಸ್ಥಿತಿಗೇರುವ ದಿನ ದೂರವಿರಲಾರದು.

೧೯೯೪ರಲ್ಲಿ ಪ್ರಕಟವಾದ 'ಕನ್ನಡ ಸಂಘರ್ಷ ಸಮಿತಿ'ಯ ೧೫ನೆಯ ವರ್ಷದ ವಾರ್ಷಿಕೋತ್ಸವ ಸಂದರ್ಭದಲ್ಲಿ ಪ್ರಕಟವಾದ ವಿಶೇಷ ಸಂಚಿಕೆ. ಕನ್ನಡ ಸಂಘರ್ಷ ಸಮಿತಿ ನಡೆದ ದಾರಿಯ ಹೆಜ್ಜೆ ಗುರುತಗಳ ವಿವರಗಳ ಜತೆಯಲ್ಲಿ ಸಮಿತಿ ಕೈಕೊಂಡ ಕನ್ನಡಪರ ಹೋರಾಟಗಳ ವರದಿ, ದಿ॥ ಕುವೆಂಪು ಅವರಿಗೆ ನುಡಿನಮನ, ದಿ॥ ರಹಮಾನ್‌ಖಾನ್ ಸ್ಮರಣೆ ಇತ್ಯಾದಿ ಲೇಖನಗಳು 'ಕನ್ನಡ ಸಂಘರ್ಷ ಸಮಿತಿ' ವಿಶೇಷ ಸಂಚಿಕೆಯಲ್ಲಿ ಇವೆ. ಜತೆಯಲ್ಲಿ ಸಮಿತಿಯನ್ನು ಕಟ್ಟಿ ಬೆಳೆಸಿದವರ ವಿಷಯ ಇದೆ.

'ವಿಕಸಿತೆ' ರಾಮಣ್ಣ ಅವರು ಸಂಪಾದಿಸಿದ ಕಥೆಗಳ ಸಂಕಲನ. 'ಕನ್ನಡ ಜನ-ಕನ್ನಡ ಮನ'- ಅವರು ಸಂಪಾದಿಸಿದ ಕವನ ಸಂಕಲನ.

'ವಿಕಸಿತೆ'ಯಲ್ಲಿ ದಿ॥ಡಾ. ಅನುಪಮಾ ನಿರಂಜನ ಅವರ ಸ್ಮರಣಾರ್ಥ ಮಹಿಳೆಯರಿಗಾಗಿ ನಡೆಸಿದ ರಾಜ್ಯಮಟ್ಟದ ಸಣ್ಣ ಕಥೆಗಳ ಸ್ಪರ್ಧೆಯ ಬಹುಮಾನಿತ ಹಾಗೂ ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆಗಳು ಇವೆ. ಶೀರ್ಷಿಕೆಯೂ ಔಚಿತ್ಯಪೂರ್ಣವಾಗಿದೆ. ಇದಕ್ಕೆ ಡಾ. ಕಮಲಾ ಹಂಪನಾ ಅವರ ಸೂಕ್ತ ಮುನ್ನುಡಿಯಿದೆ. ಪ್ರೊ॥ ಸಾವಿತ್ರಿ ವಿಜಯೇಂದ್ರ ಸಂಪಾದಕರಾಗಿದ್ದಾರೆ, ರಾಮಣ್ಣ ಈ ಕೃತಿಯ ಪ್ರಧಾನ ಸಂಪಾದಕರಾಗಿದ್ದಾರೆ.

ಇದರಲ್ಲಿ ಒಂಭತ್ತು ಕಥೆಗಳಿದ್ದು, ಅವುಗಳ ಕೇಂದ್ರಬಿಂದು ಹೆಣ್ಣು. ಒಂದಲ್ಲ ಒಂದು ರೀತಿಯ ಶೋಷಣೆಯ ಸುತ್ತ ಪರಿಭ್ರಮ ಹೊಂದುತ್ತಿರುವ ಆಕೆಯ ಸಮಸ್ಯೆಗಳನ್ನು ಕುರಿತ ತೀವ್ರ ಸ್ಪಂದನ ಇಲ್ಲಿನ ಕಥೆಗಳಲ್ಲಿದೆ. ಇಲ್ಲಿನ ಪಾತ್ರಗಳು ಶೋಷಣೆಗೆ ಒಳಗಾದರೂ ನೆಲಕಚ್ಚುವುದಿಲ್ಲ. ಪ್ರತಿಭಟಿಸಿ ತನ್ನ ಅಸ್ತಿತ್ವಕ್ಕಾಗಿ ಹೋರಾಡುವ ದಿಟ್ಟ ನಿಲುವನ್ನು ತಳೆದಿವೆ.

ಎಲ್ಲ ಕಥೆಗಳೂ ಪ್ರಥಮ ಪುರುಷದಲ್ಲಿ ಆರಂಭವಾಗುವುದರಿಂದ ಆತ್ಮೀಯವಾಗುತ್ತವೆ. ಇಲ್ಲಿನ ಕಥೆಗಾರ್ತಿಯರಿಗೆ ಈ ಕ್ಷೇತ್ರದಲ್ಲಿ ಉತ್ತಮ ಭವಿಷ್ಯವಿದೆ. ಇಂಥ ಕಥೆಗಾರ್ತಿಯರು ಈ ಕ್ಷೇತ್ರ ಪ್ರವೇಶಿಸಲು ಕಾರಣ ಕನ್ನಡ ಸಂಘರ್ಷ ಸಮಿತಿ. ಅದನ್ನು ಪ್ರಕಟಿಸಿದ್ದೂ ಸಮಿತಿ, ಅದರ ಅಧ್ಯಕ್ಷರಾಗಿ ರಾಮಣ್ಣ ಅವರ ಕಾರ್ಯ ಸರಳ ಸಾಧಾರಣವಲ್ಲ.

ಕನ್ನಡ ಜನ, ಕನ್ನಡ ಮನ

ಕನ್ನಡ ಸಂಘರ್ಷ ಸಮಿತಿ ಪ್ರಕಟಿಸಿದ 'ಕನ್ನಡ ಜನ-ಕನ್ನಡ ಮನ'-ರಾಮಣ್ಣ ಅವರ ಪ್ರಧಾನ ಸಂಪಾದಕತ್ವದಲ್ಲಿ ಹೊರಬಂದ ಪ್ರಥಮ ಕವನ ಸಂಕಲನ. 'ನಮ್ಮ ನುಡಿ'ಯಲ್ಲಿ ರಾಮಣ್ಣ ಅವರು ಹೇಳಿರುವುದು ಹೀಗೆ- ''ಸಮಿತಿಯು ಆಚರಿಸಿಕೊಂಡು ಬರುತ್ತಿರುವ ಗೋವಿಂದ ಪೈ ಅವರ ಹುಟ್ಟು ಹಬ್ಬದ ಸಂದರ್ಭದಲ್ಲಿ ಕಾವ್ಯರಚನೆಯಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಮತ್ತು ಉದಯೋನ್ಮುಖರನ್ನು ಪ್ರೋತ್ಸಾಹಿಸಲು ವ್ಯವಸ್ಥೆಗೊಳಿಸಲಾಗುತ್ತಿರುವ ಕಾವ್ಯರಚನಾ ಸ್ಪರ್ಧೆಯಲ್ಲಿ ತೀರ್ಪುಗಾರರಿಂದ ಹೆಚ್ಚು ಅಂಕಗಳಿಸಿ ಆಯ್ಕೆಗೊಂಡ ಕವನಗಳನ್ನು ಬೆಳಕು ಕಾಣಿಸುವ ಪ್ರಯತ್ನವೇ ಈ ಕವನ ಸಂಕಲನದ ಆಶಯ. ಜೊತೆಗೆ ಸಮಿತಿ ಸದಸ್ಯರು ರಚಿಸಿರುವ ಕುವೆಂಪು ಹಾಗೂ ಕನ್ನಡ ನಾಡು-ನುಡಿ-ಸಂಸ್ಕೃತಿಗಳನ್ನು ಕುರಿತ ಕೆಲವು ಕವನಗಳನ್ನು ಸಹ ಇಲ್ಲಿ ಸೇರ್ಪಡೆ ಮಾಡಲಾಗಿದೆ.''

ಕನ್ನಡದ ಹೆಸರಾಂತ ಲೇಖಕ ಪ್ರೊ॥ ಡಿ. ಲಿಂಗಯ್ಯ ಅವರ ಮುನ್ನುಡಿಯಲ್ಲಿ ಸಂಕಲನದ ಕವನಗಳ ಸರಳ ಸಮೀಕ್ಷೆ ಇದೆ. ಇದರಲ್ಲಿ ಎರಡು ಭಾಗ ಮಾಡಲಾಗಿದ್ದು ಮೊದಲ ಭಾಗದಲ್ಲಿ ಕುವೆಂಪು ಮತ್ತು ಕನ್ನಡ ನಾಡು-ನುಡಿ ಕುರಿತ ಕವನಗಳಿದ್ದು, ಭಾಗ ಎರಡರಲ್ಲಿ ರಾಷ್ಟ್ರಕವಿ ಎಂ. ಗೋವಿಂದ ಪೈ ಸ್ಮಾರಕ ಸ್ಪರ್ಧೆಯ ಬಹುಮಾನಿತ ಕವನಗಳಿವೆ.

ಈ ಕವನಗಳಲ್ಲಿ ಕಾವ್ಯಾಂಶಕ್ಕಿಂತ ವಸ್ತುವಿಷಯದ ಕಡೆಗೆ ಕವಿಗಳ ಗಮನ ಹೊರಳಿರುವುದು ಒಂದು ವಿಚಾರವಾದರೆ ಸಂಕೀರ್ಣತೆಗಿಂತ ಅಭಿಮಾನದ ಉದ್ಗಾರಗಳು, ಅಸಹಾಯಕತೆಯ ಅನಿಸಿಕೆಗಳು ಅಭಿವ್ಯಕ್ತಗೊಂಡಿರುವುದು ಮತ್ತೊಂದು ಅಂಶವಾಗಿದೆ. ಮೊದಲ ಭಾಗದ ಕವಿಗಳಲ್ಲಿ ಭಾವೋತ್ಕಟತೆ, ಪ್ರಶಂಸೆ, ಕಲಾವಂತಿಕೆಗಳನ್ನು ವ್ಯಕ್ತಪಡಿಸುವ ಪ್ರಜ್ಞೆ ಕಂಡು ಬರುತ್ತದೆ.

ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕವಿಗಳಲ್ಲಿ ಉತ್ಸಾಹ, ನಾಡುನುಡಿಯ ಅಭಿಮಾನ,ಅಲ್ಲಲ್ಲಿ ಖೇದ, ಉತ್ಸಾಹ, ಸಂದೇಶ ಇತ್ಯಾದಿಗಳೂ ಕಾಣಬಹುದಾಗಿದೆ.

ಎಲ್ಲ ವಸ್ತುಗಳ ಬೆಲೆ ಏರುತ್ತಿರುವ ಸಂದರ್ಭದಲ್ಲಿ ಕಾಗದ ಮುದ್ರಣಗಳ ಬೆಲೆ ಗಗನಕ್ಕೇರುತ್ತಿರುವ ಈ ಸಮಯದಲ್ಲಿ ವರ್ಷ ವರ್ಷವೂ ನೆನಪಿನ ಸಂಚಿಕೆ ಹಾಗೂ ಇತರ ಕೃತಿಗಳನ್ನು ಸಂಪಾದಿಸುವ ಕಾರ್ಯವನ್ನು ಇಲ್ಲಿ ಶ್ಲಾಘಿಸಬೇಕಾಗಿದೆ. ಕನ್ನಡದ ಸೊಲ್ಲು ಕಾಣದಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣ ಹಾಗೂ ವ್ಯವಹಾರ ಮಾಧ್ಯಮಗಳಲ್ಲಿ ಆಂಗ್ಲ ಭಾಷೆಯೇ ಮೆರೆಯುತ್ತಿರುವ, ಆಂಗ್ಲತನ, ಆಂಗ್ಲ ವ್ಯಾಮೋಹಗಳ ಸುಳಿಯಲ್ಲಿ ಸಿಕ್ಕಿರುವ ನಮ್ಮ ಕನ್ನಡಿಗರನ್ನು 'ಎಚ್ಚರಿಸಲು' ಕನ್ನಡ ಸಂಘರ್ಷ ಸಮಿತಿ ಮಾಡುತ್ತಿರುವ ಈ ಸಂಪಾದನೆ ಸ್ವಾಗತಾರ್ಹ ಅಷ್ಟೇ ಅಲ್ಲ; ಪ್ರಸಂಶನೀಯವೂ ಹಾಗೂ ಅಭಿನಂದನೀಯವೂ ಹೌದು. ಅಂಥ ಸಮಿತಿಯ ಅಧ್ಯಕ್ಷರಾಗಿ ರಾಮಣ್ಣ ಅವರ ಈ ಕಾರ್ಯವೂ ಅಭಿನಂದನೀಯ, ಅವರೂ ಅಭಿನಂದನೀಯರು. !

*

ಹಿತೈಷಿ-ಮಾರ್ಗದರ್ಶಕ ಅಣ್ಣ

ಹೆಚ್.ಪಿ. ಫಿಲೋಮಿನ

ನುಡಿದಂತೆ ನಡೆಯುವ, ಸಮಾಜದ ವಿವಿಧ ವರ್ಗಗಳ ಪ್ರೀತಿ ವಿಶ್ವಾಸವನ್ನು ಗಳಿಸಿಕೊಂಡಿರುವ ಸರಳಜೀವಿ. ನಿರಂತರ ಖಾದಿ ಜುಬ್ಬ ಪೈಜಾಮ ಧರಿಸುವ ಅಪ್ಪಟ ದೇಶಪ್ರೇಮಿ. ಸಮಾಜದ ಹೃದಯಬೇನೆಗೆ ಸ್ಪಂದಿಸುವ, ಮಾನವೀಯ ಮೌಲ್ಯಗಳನ್ನು ಗೌರವಿಸುವ ಮಾನವತಾವಾದಿ. ನೋವುನಲಿವುಗಳನ್ನು ಸಮಚಿತ್ತದಿಂದ ಬರಮಾಡಿಕೊಳ್ಳುವ ಸಂಯಮಿ. ಅನ್ಯಾಯವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಬಲ್ಲ, ಅಷ್ಟೇ ಎದೆಗಾರಿಕೆಯಿಂದ ಬರೆಯಬಲ್ಲ ಇವರಿಗೆ ಅಳುಕಿಲ್ಲ, ಅಂಜಿಕೆಯಿಲ್ಲ. ತಾಯ್ನಾಡಿನ ರಕ್ಷಣೆಗೆ ಕಟಿಬದ್ಧವಾಗಿ ಹಗಲಿರುಳು ಹೋರಾಡುತ್ತಾ ಬರುತ್ತಿರುವ ಕನ್ನಡಾಭಿಮಾನಿ. ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಯಾವ ತ್ಯಾಗಕ್ಕೂ ಸಿದ್ಧರಾಗಿ ನಿಂತರುವ ಶಿಸ್ತಿನ ಸಿಪಾಯಿ.

ಸುಮಾರು ಎರಡು ದಶಕಗಳಿಂದ ನಾನು ಕಂಡ ರಾಮಣ್ಣ ಎಚ್. ಕೋಡಿಹೊಸಹಳ್ಳಿಯವರ ಬದುಕಿನ ವಿವಿಧ ಮಗ್ಗಲುಗಳ ಪರಿಚಯವಿದು. ಅರ್ಧಶತಮಾನವನ್ನು ಕಂಡ ಈ ಧೀಮಂತ ವ್ಯಕ್ತಿಯ ಕುರಿತಾದಂತೆ ಅವರ ಅಭಿಮಾನಿಗಳು ಹೊರತರುತ್ತಿರುವ ಅಭಿನಂದನ ಗ್ರಂಥಕ್ಕೆ ನಾನು ಅವರ ಅಭಿಮಾನಿಯಾದ್ದರಿಂದ ಜೊತೆಗೂಡಿ ಧ್ವನಿಗೂಡಿಸಲು ಅಮಿತಾನಂದವಾಗುತ್ತಿದೆ. ಸೌಹಾರ್ದತೆಗೆ, ಹಾಸ್ಯಪ್ರವೃತ್ತಿಗೆ ಹೆಸರಾದ ರಾಮಣ್ಣ ಮೊದಲಿನಿಂದಲೂ ನಮ್ಮೆಲ್ಲರ ಪ್ರೀತಿಯ ಅಣ್ಣನಾಗಿ, ಮಾರ್ಗದರ್ಶಕರಾಗಿ ಜಾತಿ ಮತಗಳ ಭೇದಭಾವಗಳಿಲ್ಲದೆ, ಎಲ್ಲರ ಮಧ್ಯೆ ಸ್ನೇಹದ ಸೇತುವೆ ಕಟ್ಟುತ್ತಾ ಬರುತ್ತಿರುವ ಸ್ನೇಹಜೀವಿ.

ನಾನು ಕಂಡಂತೆ ರಾಮಣ್ಣನವರು ಕೌಟಂಬಿಕ ಜವಾಬ್ದಾರಿಯ ಜೊತೆಗೆ ಕನ್ನಡನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿ ಪೋಷಣೆಗಾಗಿ ಹೋರಾಡುತ್ತಲೇ ಬರುತ್ತಿದ್ದು, ಹಲವಾರು ವೇದಿಕೆಗಳಲ್ಲಿ ಕನ್ನಡನಾಡಿನ

ಒಂದಂಗುಲ ಕೂಡ ಪರರ ಪಾಲಾಗಬಾರದು ಹಾಗೂ ಕನ್ನಡಕ್ಕೆ ಅನ್ಯ ಭಾಷೆಗಳಿಂದ ಧಕ್ಕೆಯಾಗುವುದರ ವಿರುದ್ಧ ಎಚ್ಚರಿಸುತ್ತಲೇ ಬರುತ್ತಿರುವ ಒಬ್ಬ ಪ್ರಾಮಾಣಿಕ ಕನ್ನಡಿಗ.

ಈ ಹಿರಿಯ ಚೇತನದ ಬಗ್ಗೆ ಬರೆಯುವಾಗ ಅವರನ್ನು ಮೊಟ್ಟಮೊದಲ ಬಾರಿಗೆ ಪರಿಚಯವಾದ ಸಂದರ್ಭದ ಹಳೆಯ ನೆನಪಿನ ಬುತ್ತಿಯನ್ನು ಇಲ್ಲಿ ಬಿಚ್ಚಿದ್ದೇನೆ.

೧೯೮೦ರಲ್ಲಿ ನಾನು ಪತ್ರಿಕೋದ್ಯಮ ವಿದ್ಯಾರ್ಥಿಯಾಗಿದ್ದೆ. ಈ ಸಂದರ್ಭದಲ್ಲಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರಕಿತ್ತು. ನಾನಿನ್ನು ವಿದ್ಯಾರ್ಥಿ ದೆಸೆಯಲ್ಲಿದ್ದುದರಿಂದ ಸಂಪಾದಕೀಯ ವಿಭಾಗದಲ್ಲಿ ದುಡಿಯಲು ಅವಕಾಶ ದೊರಕಲಿಲ್ಲ. ಆದರೆ ಆಡಳಿತ ವಿಭಾಗದಲ್ಲಿ ದುಡಿಯತ್ತಿದ್ದೆ. ಬರವಣಿಗೆಯಲ್ಲಿ ಆಸಕ್ತಿಯುಳ್ಳವಳಾಗಿದ್ದ ನನಗೆ ಪತ್ರಕರ್ತೆಯಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಈ ದಿನಪತ್ರಿಕೆಗೆ ಸೇರಿದ್ದೆ. ಆಗಿಂದಾಗ್ಗೆ ಸಣ್ಣ ಕವನ ಮತ್ತು ಲೇಖನಗಳನ್ನು ಬರೆಯುತ್ತಿದ್ದೆ. ಈ ಸಂದರ್ಭದಲ್ಲಿ ರಾಮಣ್ಣನವರು ಈ ಪತ್ರಿಕೆಯಲ್ಲಿ ಉಪಸಂಪಾದಕರಾಗಿ ದುಡಿಯುತ್ತಿದ್ದರು. ನನ್ನ ಪತ್ರಿಕೋದ್ಯಮ ಕೋರ್ಸ್ ಪೂರೈಸಿದ ನಂತರವೂ ಸಂಪಾದಕೀಯ ವಿಭಾಗದಲ್ಲಿ ಅವಕಾಶ ದೊರಕಲಿಲ್ಲ. ನೋವು ನುಂಗಿ ಬರವಣಿಗೆ ಮುಂದುವರೆಸಿದೆ. ನನ್ನ ಬರವಣಿಗೆಯನ್ನು ಗಮನಿಸುತ್ತಾ ಬಂದ ರಾಮಣ್ಣ ಒಂದು ಬೇಸಿಗೆಯ ಅಪರಾಹ್ನ ಕಛೇರಿಯ ಆವರಣದಲ್ಲಿ ನನ್ನನ್ನು ಮಾತನಾಡಿಸಿ ನನ್ನ ಬರವಣಿಗೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಹೃದಯತುಂಬಿ ಅಭಿನಂದಿಸಿದರು.

ನನ್ನ ಪ್ರತಿಭೆಯನ್ನು ಗುರುತಿಸಿ ಹುರಿದುಂಬಿಸಿದ ರಾಮಣ್ಣನವರ ಅಭಿಮಾನದ ನುಡಿಗಳಿಂದ ಹರ್ಷಚಿತ್ತಳಾದೆ. ಮತ್ತಷ್ಟು ಬರೆಯಬೇಕೆಂಬ ನನ್ನ ಆಸೆಗಳಿಗೆ ರೆಕ್ಕೆಮೂಡಿ ಉತ್ಸಾಹ ಭರಿತಳಾದೆ. ಅವರು ಉತ್ತೇಜನ ಕೊಟ್ಟ ಆ ಕ್ಷಣಗಳು ಅವಿಸ್ಮರಣೀಯ. ಕಾರಣವಿಷ್ಟೇ, ಅವರು ನನ್ನ ಬರವಣಿಗೆಯಲ್ಲಿನ ಬಿಗಿ, ವ್ಯಾಕರಣ, ಶಬ್ದಗಳ ಜೋಡಣೆ, ವಾಕ್ಯರಚನೆಗಳ ಬಗ್ಗೆ ತಿಳುವಳಿಕೆ ನೀಡಲು ಮರೆಯಲಿಲ್ಲ. ಈ ಮಾರ್ಗದರ್ಶನದಿಂದ ಅವರು ನನ್ನ ಮಾರ್ಗದರ್ಶಕರಾದರು, ಹಿತೈಷಿಯಾದರು ಮತ್ತು ಪ್ರೀತಿಯ ಅಣ್ಣನಾದರು. ಆ ಸಹೃದಯತೆ, ಸ್ನೇಹಶೀಲತೆಗಳು ಇಂದಿಗೂ ನನ್ನಲ್ಲಿ ಹಸಿರು ನೆನಪಾಗಿವೆ.

ಮುಂದೆ ಕಾರಣಾಂತರದಿಂದ ಸಂಯುಕ್ತ ಕರ್ನಾಟಕ ಪತ್ರಿಕೆ ಬೆಂಗಳೂರು ಆವೃತ್ತಿ ೧೯೮೦ರಲ್ಲಿ ತಾತ್ಕಾಲಿಕವಾಗಿ ನಿಲುಗಡೆಯಾಗಿದ್ದಾಗ ಅದರ ಪುನರಾರಂಭಕ್ಕಾಗಿ ಮಾಡಿದ ಹೋರಾಟ, ಉಪವಾಸ ಸತ್ಯಾಗ್ರಹಗಳು ಅವಿಸ್ಮರಣೀಯ. ಈ ರೀತಿಯ ಹೋರಾಟ ನನಗೆ ಹೊಸದಾಗಿದ್ದುದರಿಂದ ರಾಮಣ್ಣನವರು ಅದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಧೈರ್ಯ, ಸ್ಥೈರ್ಯ ಭರವಸೆಗಳನ್ನು ತುಂಬಿದ್ದರು.

ಮುಂದೆ ೧೯೮೨ರಲ್ಲಿ ನಡೆದ ಗೋಕಾಕ ಭಾಷಾ ಚಳವಳಿಯ ಸಂದರ್ಭದಲ್ಲಿಯೂ ಚಿದಾನಂದಮೂರ್ತಿ, ರಾಮಣ್ಣ, ಹೆಚ್.ಎಸ್. ಪಾರ್ವತಿ, ಕುಲಶೇಖರಿ, ಕವಿ ಗೋಪಾಲಕೃಷ್ಣ ಅಡಿಗ ಮುಂತಾದ ಹಿರಿಯರೊಡಗೂಡಿ ಉಪವಾಸ ಸತ್ಯಾಗ್ರದಲ್ಲಿ ಕುಳಿತಿದ್ದಾಗ ರಾಮಣ್ಣನವರು ತಾಳ್ಮೆಯ ನುಡಿಗಳನ್ನಾಡಿದರು ''ಕರ್ನಾಟಕದಲ್ಲಿ ಕನ್ನಡಿಗರೇ ಅಲ್ಪ ಸಂಖ್ಯಾತರಾಗುತ್ತಿದ್ದಾರೆ.

ಈ ನೆಲ, ಜಲ, ನುಡಿಗಳ ರಕ್ಷಣೆಗೆ ಸಂಘಟಿತವಾಗಿ ಹೋರಾಡದಿದ್ದರೆ ಒಂದು ದಿನ ನಾವು ತಾಯಿಯಿಲ್ಲದ ತಬ್ಬಲಿಗಳಂತಾಗುತ್ತೇವೆ'' ಎಂದು ಅವರು ಎಚ್ಚರಿಸಿದ ಮಾತುಗಳು ನನ್ನಲ್ಲಿ ಭಾಷಾಭಿಮಾನದ ಕಿಚ್ಚನ್ನು ಹೊತ್ತಿಸಿತ್ತು. ನನ್ನ ಬರವಣಿಗೆ ಕನ್ನಡ ಪತ್ರಿಕೋದ್ಯಮಕ್ಕೆ ಮೀಸಲಾಗಿರಿಸಬೇಕೆಂದು ಅಂದೇ ಸಂಕಲ್ಪ ತೊಟ್ಟೆ. ಗೋಕಾಕ ಚಳವಳಿಯ ಸಂದರ್ಭದಲ್ಲಿ ರಾಮಣ್ಣನವರು ವಹಿಸಿದ ಪಾತ್ರ ಮಾಡಿದ ತ್ಯಾಗಗಳನ್ನು ಕಣ್ಣಾರೆ ಕಂಡ ನನಗೆ ಅವರೊಬ್ಬ ಪ್ರಾಮಾಣಿಕ ಹೋರಾಟಗಾರರೆಂದು ತಿಳಿದುಕೊಳ್ಳಲು ಅವಕಾಶ ದೊರಕಿತ್ತು. ಅವರದು ನ್ಯಾಯಸಮ್ಮತ ಹೋರಾಟವೇ ಹೊರತು ಹಿಂಸಾತ್ಮಕ ರೀತಿಯದಲ್ಲ ಎಂಬ ಅಂಶವು ನನ್ನ ಕಣ್ಣು ತೆರೆಸಿತ್ತು.

ಒಂದೆರಡು ದಿನಪತ್ರಿಕೆ ಹಾಗೂ ವಾರಪತ್ರಿಕೆಗಳಿಗೆ ಬರೆಯುತ್ತಾ ಬರುತ್ತಿದ್ದ ನನಗೆ ನನ್ನಂತರಂಗದ ಒಲವಿಗೆ ಒಂದು ಸದಾವಕಾಶ ದೊರಕಿತು. ೧೯೮೪ರಲ್ಲಿ ಪ್ರಜಾಮತದಲ್ಲಿ ನನಗೆ ಪತ್ರಕರ್ತೆಯಾಗಿ ದುಡಿಯುವ ಅವಕಾಶ ಲಭ್ಯವಾಯಿತು. ಈ ಪತ್ರಿಕೆಯಲ್ಲಿ ದುಡಿಯುತ್ತಿದ್ದ ಸಂದರ್ಭದಲ್ಲಿ ಒಮ್ಮೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಸದಸ್ಯತ್ವದ ಶುಲ್ಕ ಕಟ್ಟಲು ತೆರಳಿದ್ದಾಗ ರಾಮಣ್ಣ ಸಂಘದ ಪ್ರಮುಖರಲೊಬ್ಬರಾಗಿ ದುಡಿಯುತ್ತಿದ್ದರು. ನನ್ನನ್ನು ಕಂಡು ಅಭಿನಂದಿಸಿ ''ನಿಮಗೀಗ ಪತ್ರಿಕೋದ್ಯಮದ ಬಾಗಿಲು ತೆರದಿದೆ. ಪ್ರಾಮಾಣಿಕತೆಯಿಂದ, ಛಲದಿಂದ ದುಡಿದರೆ ಮುಂದೆ ಉತ್ತಮ ಪತ್ರಕರ್ತೆಯಾಗಬಹುದು, ನಿಮಗೆ ಶುಭವಾಗಲಿ'' ಎಂದು ಹರ್ಷಚಿತ್ತದಿಂದ ಹಾರೈಸಿದರು. ಅವರ 'ಶುಭವಾಗಲಿ' ಎಂಬ ಶುಭನುಡಿ ನನಗೆ ಹೊಸ ಚಾಲನೆಯನ್ನಿತ್ತಿತು. 'ಪ್ರಜಾಮತ' ವಾರಪತ್ರಿಕೆಯಲ್ಲಿ ಮಹಿಳಾವಿಭಾಗದಲ್ಲಿ ದುಡಿಯಲು ಪ್ರಾರಂಭಿಸಿದೆ. ನನ್ನ ಪ್ರಜಾಮತ ಲೇಖನಗಳಿಗೆ ಮೂರುವರ್ಷ ಸತತವಾಗಿ ಅತ್ಯುತ್ತಮ ಮಾನವೀಯ ವರದಿಗೆ ಪತ್ರಕರ್ತರ ಸಂಘದ ಚಿನ್ನದ ಪದಕ ದೊರೆತಾಗ ರಾಮಣ್ಣನವರ ಪ್ರೋತ್ಸಾಹದ ನುಡಿಗಳು ನೆನಪಿಗೆ ಬಂದವು..

ಕರ್ನಾಟಕ ಪತ್ರಿಕಾ ಅಕಾಡಮಿಗೆ ನನ್ನನ್ನು ಸದಸ್ಯಳಾಗಿ ಆಯ್ಕೆ ಮಾಡಿದ ಸಂದರ್ಭವನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಕರ್ನಾಟಕ ಪತ್ರಿಕಾ ಅಕಾಡೆಮಿಯ ಎರಡನೆಯ ಅವಧಿಗೆ ಪತ್ರಕರ್ತರ ಸಂಘದಿಂದ ಹದಿನೈದು ಮಂದಿಯ ಪತ್ರಕರ್ತರ ಪಟ್ಟಿಯನ್ನು ಕಳುಹಿಸಿದ ಸಂದರ್ಭದಲ್ಲಿ ಐ.ಎಫ್. ಡಬ್ಲ್ಯು.ಜೆ. ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಸಂಘದ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಾ ಪ್ರಭಾವಶಾಲಿಯಾಗಿದ್ದ ರಾಮಣ್ಣನವರು ಪತ್ರಿಕಾರಂಗದಲ್ಲಿ ನಾನು ಸಾಕಷ್ಟು ಕಿರಿಯಳಾಗಿದ್ದರೂ ಸಹ ನನ್ನ ಮೇಲಿನ ವಾತ್ಸಲ್ಯ-ವಿಶ್ವಾಸದಿಂದ ಪತ್ರಿಕಾಕ್ಷೇತ್ರದಲ್ಲಿ ಗಟ್ಟಿಯಾಗಿ ನೆಲೆಯೂರಬೇಕೆಂಬ ಮಹದಾಸೆಯಿಂದ ಆ ಪಟ್ಟಿಯಲ್ಲಿ ನನ್ನ ಹೆಸರನ್ನು ಸೇರ್ಪಡೆ ಮಾಡಿಸುವಲ್ಲಿ ಯಶಸ್ವಿಯಾಗಿದ್ದರು. ಓರ್ವ ಅಲ್ಪಸಂಖ್ಯಾತ ಪತ್ರಕರ್ತಳಾಗಿದ್ದು ಪಟ್ಟಿಯಲ್ಲಿದ್ದ ಹೆಸರುಗಳಲ್ಲಿ ನಾನು ಓರ್ವಳೇ ಮಹಿಳೆಯಾಗಿದ್ದ ಕಾರಣದಿಂದಲೇ ಏನೋ ಸಂಘದಿಂದ ಆಯ್ಕೆಯಾದ ಪಟ್ಟಿಯ-ಐದು ಮಂದಿಯಲ್ಲಿ ನನ್ನ ಹೆಸರು ಇತ್ತು. ಈ ಸಂಬಂಧ ಅಕಾಡೆಮಿಯಿಂದ ನನಗೆ ಸೂಚನೆ ಬಂದಾಗ ಸಂತೋಷವಾಯಿತು. ಆದರೆ ಪತ್ರಿಕೋದ್ಯಮದಲ್ಲಿ ಆಗತಾನೆ ಅಂಬೆಗಾಲಿರಿಸಿದ್ದ ನನ್ನನ್ನು ಸದಸ್ಯಳನ್ನಾಗಿ ನೇಮಕಮಾಡಿದ್ದರಿಂದ ಕೆಲವರಿಂದ ಟೀಕೆಗಳನ್ನು

ಎದುರಿಸಬೇಕಾಗಿ ಬಂದಿತು. ಆನಂದದಿಂದಿದ್ದ ನನ್ನ ಅಂತರಂಗಕ್ಕೆ ಆಘಾತವಾಯಿತು. ನನ್ನ ಹಿತೈಷಿಗಳಂತೆ ವರ್ತಿಸಿದವರೇ ಸಹಿಸದಾದರು. ಅಂತಿಮವಾಗಿ ನಾನು ಸದಸ್ಯತ್ವಕ್ಕೆ ಒಪ್ಪಿಗೆ ಸೂಚಿಸಲಾಗಲಿಲ್ಲ. ಆನಂತರ ಒಮ್ಮೆ ರಾಮಣ್ಣ ಸಿಕ್ಕಿದಾಗ ನನ್ನ ಮೇಲೆ ಕೋಪ ತೋರಿ, ನಿಮ್ಮ ಆಪ್ತ ಸ್ನೇಹಿತೆಯಂತಿದ್ದವರೇ ನಿಮ್ಮನ್ನು ಸದಸ್ಯೆಯಾಗಿ ತೆಗೆದುಕೊಂಡಿರುವುದನ್ನು ಸಹಿಸುತ್ತಿಲ್ಲವೆಂಬುದು ನನ್ನ ಗಮನಕ್ಕೆ ಬಂದು ಬೇಸರವಾಗಿದೆ ಎಂದು ಹೇಳಿ ಸದಸ್ಯತ್ವವನ್ನು ನಿರಾಕರಿಸಬಾರದಿತ್ತೆಂದರು. ನನ್ನ ಬೆಳವಣಿಗೆಯ ಬಗೆಗೆ ಅವರು ಇರಿಸಿಕೊಂಡಿದ್ದ ಆಶಾವಾದ ಕಂಡು ಆನಂದಗೊಂಡೆ. ನಂತರ ಪರಿಸ್ಥಿಯ ನೈಜಚಿತ್ರವನ್ನು ಅವರಲ್ಲಿ ಬಿಚ್ಚಿಟ್ಟು ಸಂತೈಸಿದೆ.

ಪ್ರಶಸ್ತಿ ಪ್ರದಾನ ಸಮಾರಂಭದ ಕಹಿನೆನಪೊಂದು ನನ್ನಂತರಂಗದಲ್ಲಿ ಹುದುಗಿರುವುದರಿಂದ ಆ ಸಂದರ್ಭವನ್ನು ಇಲ್ಲಿ ಬರೆಯಬೇಕಾಗಿದೆ.

೧೯೮೭-೮೭ನೆಯ ಸಾಲಿನ ಪತ್ರಕರ್ತರ ಸಂಘದ ವಾರ್ಷಿಕ ಸಮ್ಮೇಳನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸಾಗರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಪ್ರಶಸ್ತಿ ಸ್ವೀಕರಸಬೇಕಾಗಿದ್ದವರಲ್ಲಿ ನಾನು ಒಬ್ಬಳು. ಸಮ್ಮೇಳನಕ್ಕೆ ಸ್ವಲ್ಪ ತಡವಾಗಿ ತೆರಳಿದ್ದೆ. ನನಗೆ ಅಲ್ಲಿನ ಹಲವು ಬೆಳವಣಿಗೆಗಳ ಬಗ್ಗೆ ಅರಿವಿರಲಿಲ್ಲ. ಅಲ್ಲಿ ಏರ್ಪಡಿಸಿದ್ದ ಪೀತಪತ್ರಿಕೆಗಳ ಪ್ರದರ್ಶನದ ಉದ್ಘಾಟನೆಯನ್ನು ಮಾಡಲು ನನ್ನನ್ನು ಆಹ್ವಾನಿಸಲಾಯಿತು. ಆ ಪ್ರದರ್ಶನ ಸಣ್ಣಪತ್ರಿಕೆಗಳ ಪ್ರದರ್ಶನವೆಂದು ಪರಿಗಣಿಸಿ ನಾನು ಉದ್ಘಾಟಿಸಿದೆ. ಆಗತಾನೆ ಸಮ್ಮೇಳನಕ್ಕೆ ತೆರಳಿದ್ದ ನನಗೆ ಮುಂದೇನಾಗುವುದೆಂಬ ಅರಿವಿರಲಿಲ್ಲ. ಹಾಗೂ ಅಲ್ಲಿಂದ ಕೆಲವು ಹಿರಿಯ ಪತ್ರಕರ್ತರಿಗೆ ವಿಷಯ ತಿಳಿದಿದ್ದರೂ ನನಗೆ ಆ ಬಗ್ಗೆತಿಳಿವಳಿಕೆ ಕೊಡಲಿಲ್ಲ.ಉದ್ಘಾಟನೆಯಾದ ನಂತರ ಅಲ್ಲಿ ಉದ್ವೇಗದ ವಾತಾವರಣ ವುಂಟಾಯಿತು. ಹಲವಾರು ಸ್ಥಳೀಯ ಪತ್ರಕರ್ತರು ನಾನು ಈ ಪ್ರದರ್ಶವನ್ನು ಉದ್ಘಾಟಿಸಿದ್ದರಿಂದ ನನ್ನ ವಿರುದ್ಧ ಸಿಡಿದೆದ್ದರು. ನನಗೆ ಪ್ರಶಸ್ತಿ ಪ್ರದಾನ ಮಾಡಬಾರದೆಂದು ಪಟ್ಟು ಹಿಡಿದರು. ಇದೊಂದು ಹಠಾತ್ತನೆ ಎರಗಿದ ಕಹಿ ಅನುಭವವಾಗಿ ಮನೋವೇದನೆ ತಂದಿತು. ಆ ಸಂದರ್ಭದಲ್ಲಿ ರಾಮಣ್ಣ, ಜಿ.ಕೆ. ಸತ್ಯ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರನೇಕರು ಒಟ್ಟುಗೂಡಿ ಚರ್ಚಿಸಿ ಈ ಉದ್ವೇಗದ ವಾತಾವರಣವನ್ನು ತಿಳಿಗೊಳಸಿದ್ದು ಒಂದು ಮಹತ್ಸಾಧನೆಯಾಯಿತು. ನೀವು ಅರಿತೋ, ಅರಿಯದೆಯೋ ಮಾಡಿದ ಉದ್ಘಾಟನೆಯಿಂದಾಗಿ ನಾವು ಗಂಟಗಟ್ಟಲೇ ಹೋರಾಟ ಮಾಡಿ ಶಾಂತಿ ಸ್ಥಾಪನೆಮಾಡಬೇಕಾಯಿತೆಂದು ರಾಮಣ್ಣ ಹಾಸ್ಯ ಚಟಾಕಿ ಹಾರಿಸಿ ಘಟನೆಯಿಂದ ಕಂಗಾಲಾಗಿದ್ದ ನನಗೆ ಧೈರ್ಯ ಹೇಳಿ ಸಂತೈಸಿದರು. ಜಿ.ಕೆ. ಸತ್ಯರವರು ನನ್ನನ್ನು ಸಮಾಧಾನ ಮಾಡಿ ಹುರಿದುಂಬಿಸಿದ್ದನ್ನು ಇಲ್ಲಿ ಮರೆಯುವಂತಿಲ್ಲ.

ಮರುದಿನ ಪ್ರಶಸ್ತಿ ಪ್ರದಾನ ಸಮಾರಂಭ ಯಾವ ಅಡಚಣೆಯೂ ಇಲ್ಲದೆ ಜರುಗಿತು. ಚಿನ್ನದ ಪದಕ ಪಡೆದು ನನ್ನೂರಿಗೆ ಮರಳಿದರೂ ಅಲ್ಲಿನ ಕಹಿ ಅನುಭವ ಇಂದಿಗೂ ನೆನೆದರೆ ಬೆನ್ನಿನಲ್ಲಿ ಇರಿದಂತಾಗುತ್ತದೆ. ಆ ಸಂದರ್ಭದಲ್ಲಿ ರಾಮಣ್ಣನವರನ್ನು ನನ್ನ ನಿಜವಾದ ಅಣ್ಣನನ್ನಾಗಿ ಕಾಣಲು ಸಾಧ್ಯವಾಯಿತು.

೧೯೮೮ರಿಂದಾಚೆಗೆ ರಾಮಣ್ಣನವರು ಮುಂಗಾರು ದಿನ ಪತ್ರಿಕೆಗೆ ಸೇರಿದ ನಂತರ ಅವರನ್ನು ಪತ್ರಕರ್ತರ ಸಂಘದಲ್ಲಿ ಹಾಗೂ ಪತ್ರಕರ್ತರ ಸಮ್ಮೇಳನಗಳಲ್ಲಿ ಕಾಣುವ ಅವಕಾಶ ದೊರಕಿತ್ತು.

೧೯೯೨ರಲ್ಲಿ ನನಗೆ ರಾಜ್ಯೋತ್ಸವ ಪ್ರಶಸ್ತಿ ದೊರಕಿತು. ಪತ್ರಕರ್ತರ ಸಂಘದಲ್ಲಿ ರಾಜ್ಯೋತ್ಸವ ಪ್ರಶಸ್ತಿ ವಿಜೇತರಿಗೆ ಸಂಘ ಸನ್ಮಾನವಿಟ್ಟುಕೊಂಡಿತು. ಆಗ ರಾಮಣ್ಣ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ರಾಜ್ಯೋತ್ಸವ ಪ್ರಶಸ್ತಿ ಪಡೆದ ಪತ್ರಕರ್ತರನ್ನು ಸಂಘದಲ್ಲಿ ಸನ್ಮಾನಿಸುವ ಪರಿಪಾಠ ಅವರೇ ಆರಂಭಿಸಿದ್ದು. ಹಿರಿಯ ಪತ್ರಕರ್ತ ಜಯಶೀಲರಾವ್, ಅರ್ಜುನದೇವ, ಬಿ.ವಿ. ಮಲ್ಲಿಕಾರ್ಜುನಯ್ಯ ಹಾಗೂ ರಾಮಣ್ಣನವರು ಹೃದಯಪೂರ್ವಕವಾಗಿ ಅಭಿನಂದಿಸಿದ್ದು ನನ್ನ ಮನಸ್ಸಿನಲ್ಲಿ ಹಚ್ಚ ಹಸಿರಾಗಿ ನೆನಪಲ್ಲಿ ಉಳಿದಿದೆ.

ರಾಮಣ್ಣನವರನ್ನು ಪತ್ರಕರ್ತರನಾಗಿ, ಸಾಹಿತಿಯಾಗಿ, ಒಬ್ಬ ನಿಷ್ಠಾವಂತ ಹೋರಾಟ ಗಾರರನ್ನಾಗಿ ಕಂಡಿರುವ ನಾನು ಕನ್ನಡಪರ ಹಾಗೂ ಜನಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಾ ಬರುತ್ತಿರುವುದನ್ನು ಗಮನಿಸಿದ್ದೇನೆ.

ಕನ್ನಡಪರ ಚಟುವಟಿಕೆಗಳಿಗೆ ಖ್ಯಾತವಾದ ಕನ್ನಡ ಸಂಘರ್ಷ ಸಮಿತಿಯ ಅಧ್ಯಕ್ಷರಾಗಿ ೧೯೮೬ರಿಂದ ದುಡಿಯುತ್ತಿರುವ ಇವರು ಈ ಸಂಘದ ವತಿಯಿಂದ ಹಲವಾರು ಹೋರಾಟಗಳನ್ನು, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬರುತ್ತಿದ್ದಾರೆ. ಕೆಲಕಾಲ ಸಮಿತಿಯ ಸಂಘಟನಾಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವ ಅವಕಾಶ ನನಗೆ ಲಭಿಸಿದುದು ಒಂದು ಸುಯೋಗವೆನ್ನಬಹುದು. ಅಲಕ್ಷ್ಯಕ್ಕೊಳಗಾದ ಮಹಿಳೆಯರಿಗೆ ವೇದಿಕೆಯಲ್ಲಿ ತಮ್ಮ ಕಾವ್ಯವಾಚನಮಾಡಲು, ಪ್ರಬಂಧಗಳನ್ನು ಮಂಡಿಸಲು ಕಾರ್ಯಕ್ರಮ ನಿರೂಪಣೆ ಮಾಡಲು ರಾಮಣ್ಣ ವಿಪುಲ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಮಹಿಳೆಯರ ಮುನ್ನಡೆಯಲ್ಲಿಯೂ ಕಳಕಳಿಯಿರುವ ರಾಮಣ್ಣ ಪ್ರತಿಭೆಗೆ ಲಿಂಗ ಭೇದವಿಲ್ಲದೆ ಮತ್ತು ಪ್ರತಿಭಾವಂತರು ಯಾರೇ ಆದರೂ ಅವರಿಗೆ ಮನ್ನಣೆ ದೊರಕಬೇಕು ಎಂದು ಪ್ರತಿಪಾದಿಸುತ್ತಾರೆ.

ಕರ್ನಾಟಕದಲ್ಲಿ ಕನ್ನಡದ ಸ್ಥಾನಮಾನ ಸುಧಾರಣೆಗೆ ರಾಮಣ್ಣನವರು ಮಾಡಿರುವ ಹೋರಾಟ ಅಷ್ಟಿಷ್ಟಲ್ಲ. ಕನ್ನಡವೇ ಇವರ ಉಸಿರು ಬದುಕು. ಸಂಘರ್ಷ ಸಮಿತಿಯ ವತಿಯಿಂದ ತಮ್ಮ ಕನ್ನಡಾಭಿಮಾನಿಗಳ ತಂಡದೊಡನೆ ಸಾರ್ವಜನಿಕ, ಸರ್ಕಾರಿ ಹಾಗೂ ಖಾಸಗಿ ಕಛೇರಿಗಳಲ್ಲಿ ಕನ್ನಡದಲ್ಲೇ ವ್ಯವಹರಿಸಬೇಕೆಂಬುದರ ಬಗ್ಗೆ ತಮ್ಮ ಶಾಂತಿಯುತ ಹೋರಾಟದ ಮೂಲಕ ಸಾಕಷ್ಟು ಜಾಗೃತಿ ಮೂಡಿಸುವುದರಲ್ಲಿ ಸಫಲರಾಗಿದ್ದಾರೆ. ರಾಜ್ಯದ ಚರ್ಚುಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನ ನೀಡಬೇಕೆಂದು ಕನ್ನಡ ಕ್ರೈಸ್ತರೊಡಗೂಡಿ ಹೋರಾಡಿದ್ದಾರೆ.

ರಾಮಣ್ಣನವರ ಚಟುವಟಿಕೆಗಳು ಕೇವಲ ಭಾಷಾ ಹೋರಾಟಕ್ಕೆ ಸೀಮಿತವಾದುದಲ್ಲ. ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ; ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ-ಉಪಾಧ್ಯಕ್ಷರಾಗಿ, ಖಜಾಂಚಿಯಾಗಿ ಪ್ರೆಸ್‌ಕ್ಲಬ್‌ನ ಉಪಾಧ್ಯಕ್ಷರಾಗಿ, ಬೆಂಗಳೂರು ವರಿದಗಾರರ ಕೂಟದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಾಗೂ ಪತ್ರಿಕಾ ಅಕಾಡಮಿ ಸದಸ್ಯರಾಗಿ ದುಡಿದಿದ್ದಾರೆ ಹೀಗೆ ತಮ್ಮ ಅಮೂಲ್ಯ ಸಮಯವನ್ನು ಈ ಚಟುವಟಿಕೆಗಳಲ್ಲಿ ಸದ್ವಿನಿಯೋಗಪಡಿಸಿಕೊಂಡಿರುವುದನ್ನು ನಾನು ಹಾಗೂ ಅನೇಕ ಯುವ ಪತ್ರಕರ್ತರು, ಪತ್ರಕರ್ತೆಯರು ಗಮನಿಸಿದ್ದೇವೆ.

ಇವರೊಬ್ಬ ಸಾಹಿತಿಯಾಗಿಯೂ ಸೇವೆಸಲ್ಲಿಸಿರುವುದು ಉಂಟು. ಹಲವಾರು ನೆನಪಿನ

ಸಂಚಿಕೆಗಳನ್ನು, ಕವನ ಮತ್ತು ಕಥಾಸಂಕಲನಗಳನ್ನು ಸಂಪಾದನೆ ಮಾಡಿ, ಕೆಲವು ಕಿರುಪುಸ್ತಕಗಳ ರಚನೆ ಮಾಡಿರುವುದನ್ನು ನಾನು ಕಂಡಿದ್ದೇನೆ. ನನಗೆ ಮತ್ತು ನಮ್ಮ ಯುವಪೀಳಿಗೆಗೆ ರಾಮಣ್ಣನವರು ತಮ್ಮ ಈ ಹಲವಾರು ಕೊಡುಗೆಗಳಿಂದ ಒಬ್ಬ ಆದರ್ಶವ್ಯಕ್ತಿಯಾಗಿದ್ದಾರೆ ಹಾಗೂ ಯುವಪೀಳಿಗೆಯ ಹೃದಯ ಸೂರೆಗೊಂಡಿದ್ದಾರೆ. ಅಪಾರ ಜನಮನ್ನಣೆಗೆ ಪಾತ್ರರಾಗಿದ್ದಾರೆ.

ಪ್ರಸ್ತುತ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮಾಡಿರುವ-ಮಾಡುತ್ತಿರುವ ಕೆಲಸಗಳು ಅಪಾರ. ನಾಡುನುಡಿಗೆ ತಮ್ಮನ್ನೇ ಸಮರ್ಪಿಸಿಕೊಂಡಿರುವ ಹಾಗೂ ಐವತ್ತು ವಸಂತಗಳನ್ನು ಕಂಡು ತುಂಬು ಜೀವನ ಸಾಗಿಸಿರುವ ಈ ಶ್ರೇಷ್ಠ ನೈಜ ವ್ಯಕ್ತಿತ್ವವನ್ನು ಅಭಿನಂಧಿಸಿ ಗ್ರಂಥವೊಂದನ್ನರ್ಪಿಸುತ್ತಿರುವುದು ಸಂತೋಷದ ಸಂಗತಿ.

ಈ ಸಂತೋಷದಲ್ಲಿ ನನ್ನ ಈ ಕಿರುಲೇಖನದ ಮೂಲಕ ನಾನು ಭಾಗಿ. ಇವರ ಸೇವಾ ಸೌರಭ ಎಲ್ಲೆಡೆ ಹರಡಿದೆ. ಇನ್ನೂ ಹರಡುತಿರಲಿ. ದೀರ್ಘಕಾಲ ಸೇವೆ ಸಲ್ಲಿಸಲು ತಾಯಿ ಭವನೇಶ್ವರಿ ಆಯುರಾರೋಗ್ಯವನ್ನು ದಯಪಾಲಿಸಲಿ ಎಂಬುದೇ ಈ ಸಂದರ್ಭದಲ್ಲಿ ನನ್ನ ತುಂಬುಹೃದಯದ ಹಾರೈಕೆ. ಇವರ ಕಾರ್ಯಚಟುವಟಿಕೆಗಳಿಗೆ ಹೆಗಲುಕೊಟ್ಟು ಪ್ರೋತ್ಸಾಹಿಸಿಕೊಂಡು ಬರುತ್ತಿರುವ ಇವರ ಧರ್ಮಪತ್ನಿ ಕನ್ನಡ ಕಾರ್ಯಕರ್ತೆ 'ಗಾಯತ್ರಿ ರಾಮಣ್ಣ' ಎಂಬ ಹೆಸರಿನಲ್ಲಿ ಸುಗಮ ಸಂಗೀತದ ಕ್ಷೇತ್ರದಲ್ಲಿ ಹೆಸರು ಮಾಡುತ್ತಿರುವ ಶ್ರೀಮತಿ ಎಂ.ವಿ. ಗಾಯತ್ರಿಯವರಿಗೂ ಶುಭಕಾಮನೆಗಳು. ಈ ಜೋಡಿಸೊಡರು ನಿರಂತರ ಬೆಳಗುತಿರಲಿ.

*

ಸಂಘಟಕನಾಗಿ ಬೆಳೆದ ವಿದ್ಯಾರ್ಥಿ ಮಿತ್ರ

ಕಾ.ನಾ. ಶ್ರೀನಿವಾಸ್

೧೯೫೬ರಲ್ಲಿ ಕರ್ನಾಟಕ ರಾಜ್ಯ ಉದಯವಾಗಿದ್ದರೂ ಮೊದಲ ರಾಜ್ಯೋತ್ಸವ ಕಾರ್ಯಕ್ರಮ ಬಿಟ್ಟರೆ ಮತ್ತೆ ರಾಜ್ಯದಲ್ಲಿ ಆ ಹಬ್ಬದ ಸೊಲ್ಲೇ ಅಡಗಿಹೋಗಿತ್ತು. ೧೯೬೩ರಲ್ಲಿ ಕರ್ನಾಟಕ ಕುಲಪುರೋಹಿತ ದಿವಂಗತ ಆಲೂರು ವೆಂಕಟರಾಯರು ಬೆಂಗಳೂರಿಗೆ ಬಂದು ಕೋಣಂದೂರು ಲಿಂಗಪ್ಪ, ಶಾಂತವೇರಿ ಗೋಪಾಲ ಗೌಡರಂತಹ ಅಪ್ಪಟ ಸಮಾಜವಾದಿ ಧುರೀಣರನ್ನು ಹುರಿದುಂಬಿಸಿ ರಾಜ್ಯೋತ್ಸವವನ್ನು ಅದ್ದೂರಿಯಿಂದ ಆಚರಿಸಿ ಕನ್ನಡ ಜಾಗೃತಿಯ ಕಹಳೆಯನ್ನು ಊದಿದರು. ಆ ಕಹಳೆಯಿಂದ ಪುಳಕಿತರಾದ ಅನೇಕರಲ್ಲಿ ರಾಮಣ್ಣ ಮತ್ತು ನಾನು ಇಂದೂ ಸಹ ಅದೇ ಕೈಂಕರ್ಯದಲ್ಲಿ ನಿರತರಾಗಿದ್ದೇವೆ.

ರಾಮಣ್ಣ ಮತ್ತು ನಾನು ಬೆಂಗಳೂರಿನ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಕನ್ನಡದ ಪ್ರಸಿದ್ಧ ಕವಿಗಳಾಗಿದ್ದ 'ರಾಘವ' ಕಾವ್ಯನಾಮದ ದಿವಂಗತ ಎಂ.ವಿ. ಸೀತಾರಾಮಯ್ಯನವರು ಕಾಲೇಜು ವಿದ್ಯಾರ್ಥಿಗಳಲ್ಲಿನ ಸಾಹಿತ್ಯ ಪ್ರತಿಭೆಗಳನ್ನು ಹೊರಹೊಮ್ಮಲು ಅನುಕೂಲವಾಗಲು ಪ್ರತಿವಾರ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಬರೆದ ಕವನ, ಚುಟುಕ, ಲೇಖನಗಳನ್ನು ಕಾಲೇಜಿನ ನೋಟೀಸ್ ಬೋರ್ಡ್‌ನಲ್ಲಿ ಪ್ರಚುರಪಡಿಸುತ್ತಿದ್ದರು. ಕವಿಯಾಗಬೇಕೆಂಬ ಆಸೆಯಿಂದ ಚುಟುಕ ಕವನಗಳನ್ನು ನಾನೂ ಬರೆಯುತ್ತಿದ್ದೆ. ಹೀಗೆ ನಾನು ಬರೆದ ಕವನ ಪ್ರಕಟವಾದಾಗ ಅದನ್ನು ಓದಿದ ರಾಮಣ್ಣ ನನ್ನನ್ನು ನೇರವಾಗಿ ಬಂದು ನೀವು ಕಾಲೇಜಿನ ಕರ್ನಾಟಕ ಸಂಘದ ಕಾರ್ಯಸಮಿತಿ ಸದಸ್ಯರಾಗಿ ಎಂದು ಆಹ್ವಾನಿಸಿದರು. ಮೊದಲೇ ಹಳ್ಳಿಯಿಂದ ಬಂದಿದ್ದ ನನಗೆ ಈ ಅವಕಾಶ ಒಂದು ದೊಡ್ಡಗೌರವವೆಂದೇ ತಿಳಿದು ನನ್ನನ್ನು ಈ ಕಾರ್ಯಕ್ಕಾಗಿ ಗುರುತಿಸಿದ ರಾಮಣ್ಣ ಅಂದಿನಿಂದ ನನ್ನ ಖಾಸಗಿ ಸ್ನೇಹಿತರಾಗಿ ಬಿಟ್ಟರು.

ಬಹುಶಃ ಅಂದು ರಾಮಣ್ಣ ನನ್ನನ್ನು ಗುರಿತಿಸದೆ ಇದ್ದಿದ್ದರೆ ನಾನು ಕಾ.ನಾ. ಶ್ರೀನಿವಾಸರಾವ್ ಆಗಿರುತ್ತಿದ್ದೆನೇ ಹೊರತು 'ಕಾನಾಶ್ರೀ' ಆಗಿ ಪರಿವರ್ತಿಸಲು ಸಾಧ್ಯವಾಗುತ್ತಿತ್ತೆ ಎಂದು ನನಗೆ ಈಗಲೂ ಅನಿಸುತ್ತದೆ. ಅಂತಹ ಸೂಕ್ಷ್ಮಮತಿಯ ರಾಮಣ್ಣನ ಗೆಳೆತನದಿಂದಾಗಿ ನಾನು ಮೂರುದಶಕಗಳಿಗೂ ಮೀರಿ ಸಾಹಿತ್ಯದ ಪರಿಚಾರಕನಾಗಿ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ ಎಂಬ ಮಾತಂತೂ ಸತ್ಯ.

ಹೀಗೆ ಪ್ರಾರಂಭವಾದ ಕನ್ನಡದ ಪರಿಚಾರಿಕೆಯ ಕೆಲಸ ನಾನು ಅಂತಿಮ ಬಿ.ಎ. ತರಗತಿಯಲ್ಲಿ ಓದುತ್ತಿದ್ದಾಗ ಶೇಷಾದ್ರಿಪುರಂ, ಮಲ್ಲೇಶ್ವರ, ಯಶವಂತಪುರ ಪ್ರದೇಶಗಳನ್ನು ಒಳಗೊಂಡಂತೆ ಬೆಂಗಳೂರು ಉತ್ತರ ಬಡಾವಣೆ ಕನ್ನಡ ರಾಜ್ಯೋತ್ಸವ ಸಮಿತಿ ರಚಿಸಿ, ರಾಜ್ಯೋತ್ಸವ ಆಚರಿಸಿದ್ದು, ಆ ರಾಜ್ಯೋತ್ಸವಗಳಲ್ಲಿ ಬಳ್ಳಾರಿ ಸೋದರರರನ್ನು ಕಂಡು ಕನ್ನಡದಲ್ಲಿಯೇ ಸಂಗೀತ ಕಛೇರಿ ನಡೆಸಿದ್ದು, ಈ ಪ್ರದೇಶಗಳ ವಿದ್ಯಾರ್ಥಿ ಯುವಜನತೆಗೆ ಭಾವಗೀತೆ, ಜನಪದ ಗೀತೆ ಸ್ಪರ್ಧೆಗಳನ್ನು ಏರ್ಪಡಿಸಿದ್ದು ಆ ಕಾಲಕ್ಕೆ ನಿಜಕ್ಕೂ ಮಹತ್ವದ ಕೆಲಸಗಳೇ.

ಹೀಗೆ ಪ್ರಾರಂಭವಾದ ರಾಮಣ್ಣಗೌಡರ ಸಾರ್ವಜನಿಕ ಸಂಘಟನೆಯ ಕಾರ್ಯ ಖ್ಯಾತಪತ್ರಿಕೋದ್ಯಮಿ ಕಲ್ಲೆ ಶಿವೋತ್ತಮರಾಯರ ಮಾರ್ಗದರ್ಶನದಲ್ಲಿ 'ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲನವು' ೧೯೬೭ರಲ್ಲಿ ಬೆಂಗಳೂರಿನಲ್ಲಿ ಸಂಘಟಿಸಿದ ರಾಷ್ಟ್ರೀಯ ವಿದ್ಯಾರ್ಥಿ ಯುವ ಸಮ್ಮೇಳನ ಮಹತ್ವದ್ದು. ಇಂದಿನ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್ ಅವರು ಅಂದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರದ ಹಿರಿಯ ಸಮಾಜವಾದಿ ಮುಖಂಡರಾದ ರಬೀರಾಯ್, ನಾಥ್ ಪೈ, ಕೆ.ಜಿ. ಮಹೇಶ್ವರಪ್ಪ, ಕಾರ್ಮಿಕ ಮುಖಂಡ ಎಸ್ .ವೆಂಕಟರಾಂ, ಜನರಲ್‌ಕಾರ್ಯಪ್ಪ ಮುಂತಾದ ಮುಖಂಡರು ಸಮ್ಮೇಳನದ ಮಾರ್ಗದರ್ಶಿಗಳಾಗಿದ್ದರು ಎಂದರೆ ಆ ಸಮ್ಮೇಳನದ ಮಹತ್ವವನ್ನು ನೀವೇ ಊಹಿಸಬಹುದು.

ಈ ಸಮ್ಮೇಳನವನ್ನು ಸಂಘಟಿಸುವ ಮುನ್ನ ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲದ ಸದಸ್ಯರು ತಮ್ಮ ಹೆಸರುಗಳ ಮುಂದೆ ಇದ್ದ ಜಾತಿಸೂಚಕ ಪದಗಳನ್ನು ಸ್ವಯಂ ಇಚ್ಛೆಯಿಂದ ತೆಗೆದು ಹಾಕಿ ; ಇಂದು ಎಲ್ಲರೂ ಬೊಬ್ಬಿಡುತ್ತಿರುವ 'ಜಾತ್ಯಾತೀತತೆಯ' ನಿಜವಾದ ಕೆಲಸವನ್ನು ಮೂರು ದಶಕಗಳ ಹಿಂದೆಯೇ ಯಾವುದೇ ಲಾಭದ ದೃಷ್ಟಿಯಿಲ್ಲದೆ ರಾಷ್ಟ್ರೀಯತೆಯ ಬೀಜಮಂತ್ರವನ್ನು ನಾವು ಪಾಲಿಸಿ ಜನತೆಗೆ ಅದರ ಮಹತ್ವವನ್ನು ತೋರಿಸಿಕೊಟ್ಟಿದ್ದೆವು. ರಾಮಣ್ಣ ಕೋಡಿಹೊಸಹಳ್ಳಿಯಾದ ರಾಮಣ್ಣಗೌಡರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಖ್ಯಾತ ಗಾಯಕಿ ಶ್ರೀಮತಿ ಗಾಯತ್ರಿ ಅವರನ್ನು ಇಪ್ಪತ್ತೈದು ವರ್ಷಗಳುಷ್ಟು ಹಿಂದೆಯೇ ಅಂತರಜಾತಿ ವಿವಾಹವಾಗಿ ಸಾರ್ವಜನಿಕ ಬದುಕಿಗೊಂದು ಉದಾಹರಣೆಯಾಗಿದ್ದಾರೆ.

ಹೀಗಾಗಿ ರಾಮಣ್ಣ ಇದ್ದಲ್ಲಿ ಪ್ರಗತಿಪರ ಆಲೋಚನೆ, ಅದಕ್ಕಾಗಿ, ಸಂಘಟನೆ,ನಿರಂತರ ಬದುಕಾಗಿದೆ. ನನ್ನ ಅವರ ಸ್ನೇಹ ಮೂರುದಶಕಗಳಿಗೆ ಮೀರಿದ್ದರೂ, ಯೌವ್ವನ ಅವರಿಂದ ದೂರವಾಗಿಲ್ಲ ಸ್ನೇಹ ಮುಪ್ಪಾಗಿಲ್ಲ. ಪ್ರೀತಿಗೆ ಎಂದೂ ಬಾಧಕವೇ ಬಂದಿಲ್ಲ. ಅದೇ ಸರಸ ಅದೇ ಸಲಿಗೆ. ಅಂತಹ ಆತ್ಮೀಯ ರಾಮಣ್ಣ ನನ್ನ ಗೆಳೆಯನೆಂಬುದೇ ನನಗೊಂದು ಹೆಮ್ಮೆ,ಆನಂದ.

*

ನೇರ-ನಿಷ್ಠೂರವಾದಿ

ರಂಗಮುತ್ತಯ್ಯ

೧೯೬೭ ನವೆಂಬರ್ ಎರಡು 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಗೆ ಕಾಲಿಟ್ಟಾಗ ನನಗೆ ಆಗಿನ್ನೂ ೧೭ರ ವಯಸ್ಸು. ನನ್ನನ್ನು ಆ ಪತ್ರಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಚ್ಚುಮೊಳೆ ಜೋಡಿಸುವ ಶಿವರಾಂ ನನ್ನನ್ನು ಗೋಲಿ ಆಡುವ ಹುಡುಗರೆಲ್ಲ ಏಕೆ ಕೆಲಸಕ್ಕೆ ಬರುತ್ತೀರಿ ಎಂದು ಕರಡುಗಳನ್ನು ತಿದ್ದುವ ಸಮಯದಲ್ಲಿ ತಪ್ಪಿದಾಗ ಈ ರೀತಿ ರೋಫಾಕಿ ಒನ್‌ಬೈಟು ಟೀ ಕುಡಿಯುತ್ತಿದ್ದರು. ಇದೇ ರೀತಿಯ ಜಾಯಮಾನ ಅಲ್ಲಿಯ ಗ್ರೂಪ್ ಲೀಡರಾಗಿದ್ದು ಉಪಸಂಪಾದಕರಾಗಿ ಮುಂಬಡ್ತಿ ಹೊಂದಿದ್ದ ಜಿ. ನಾರಾಯಣ್‌ರವರು ಸಹ ನನ್ನ ನೆನಪಿನಲ್ಲಿ ಉಳಿದಿದ್ದಾರೆ. ಇದೇ ಸಮಯಕ್ಕೆ ಕೆ.ಹೆಚ್. ರಾಮಣ್ಣಗೌಡ ಎಂಬ ಸುಮಾರು ೨೧-೨೨ರ ಯುವಕ ಉಪ ಸಂಪಾದಕರಾಗಿ ನಾನು ಸಂಯುಕ್ತ ಕರ್ನಾಟಕಕ್ಕೆ ಸೇರಿದ ಸ್ವಲ್ಪ ಸಮಯದಲ್ಲೇ ಸೇರಿಕೊಂಡರು. ಆಗ ನನಗೆ ಕೊಡುತ್ತಿದ್ದ ಸಂಬಳ ೭೫ ರೂ. ರಾಮಣ್ಣಗೌಡರಿಗೆ ೧೫೦ ರೂ.

ಆಗಿನ ಸಂಯುಕ್ತ ಕರ್ನಾಟಕದ ಬೆಂಗಳೂರು ಆವೃತ್ತಿಗೆ ಈಗ ಲೋಕಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಹಾಗೂ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ಕೆ. ಶಾಮರಾಯರು, ಪ್ರಧಾನ ವರದಿಗಾರರು ಹಾಗೂ ಸಹಾಯಕ ಸಂಪಾದಕರಾಗಿದ್ದರು. ಇವರ ಆಕ್ರೋಶಕ್ಕೆ, ಆವೇಶಕ್ಕೆ ಅವರ ಮೂಗಿನ ಸಿಟ್ಟಿಗೆ ಒಳಗಾಗಿಯೂ ಹೆದರದ ವ್ಯಕ್ತಿಯೆಂದರೆ ಕೆ.ಹೆಚ್. ರಾಮಣ್ಣಗೌಡರೊಬ್ಬರೆ.

ಈ ಯುವಕನಲ್ಲಿ ದರ್ಪ ಪ್ರಾಮಾಣಿಕತನ ತತ್ತ್ವನಿಷ್ಠೆ ನೇರ ನಡೆ-ನುಡಿ ಮತ್ತು ನಿಷ್ಠೂರತೆ ಅಲ್ಲಿದ್ದ ಬಹಳಷ್ಟು ಮಂದಿಗೆ ಅಪ್ಯಾಯಮಾನವಾಗಿರಲಿಲ್ಲ. ಅಷ್ಟೇ ಅಲ್ಲ, ಅವರ ಹತ್ತಿರ ಸಲಿಗೆಯನ್ನು ಬೆಳಸಿಕೊಂಡ ಸ್ನೇಹಿತರೆಂದರೆ ನಾನೊಬ್ಬನೆ ಎಂದರೆ ಅತಿಶಯೋಕ್ತಿಯಾಗಲಾರದು.

ಅಂದಿನಿಂದಲೇ ಸಂಯುಕ್ತ ಕರ್ನಾಟಕ ಸಂಪಾದಕ ಬಳಗದಲ್ಲಿ ಮತ್ತು ಅಚ್ಚುಕೂಟ ಬಳಗದಲ್ಲಿ ಸಂಘಟನೆ ತತ್ತ್ವನಿಷ್ಠೆ ಹೋರಾಟದ ಅಡಿಪಾಯದ ಹೆಜ್ಜೆಯ ಗುರುತುಗಳನ್ನು ರಾಮಣ್ಣ ಮೂಡಿಸುವಲ್ಲಿ ಮತ್ತು ಪಿ. ಶಿವಮೂರ್ತಿ ಕಾರಣೀಭೂತರಾಗಿದ್ದರು.

ರಾಮಣ್ಣನ ತೀರ ಒರಟುತನ ಒರಟು ಉತ್ತರಗಳು ನಿರ್ಭಿಡೆ ನಿರ್ಭೀತಿಯ ಮಾತುಗಳು ತತ್ತ್ವನಿಷ್ಠ ಸಾಮಾಜಿಕ ಒಲವು ನಿಲುವುಗಳು ಇವರನ್ನು ಬಹಳಷ್ಟು ವಿರೋಧಿ ಗುಂಪಿನಲ್ಲಿಯೇ ಬೆಳೆಯುವಂತಹ ವಾತಾವರಣ ನಿರ್ಮಾಣಕ್ಕೆ ಕಾರಣವಾಯಿತು.

ಹೊಗಳಿಕೆ, ಭಟ್ಟಂಗಿತನ, ಬುರುಡೆ ಮಾತುಗಳನ್ನು ಇವರು ಎಂದೂ ಆಡಲಿಲ್ಲ ಮತ್ತು ಅನುಸರಿಸಲಿಲ್ಲ. ಇದು ಪತ್ರಿಕೋದ್ಯಮದಲ್ಲಿನ ಇವರ ಅಂದಿನ ಬೆಳವಣಿಗೆಗೆ ಮಾರಕವಾಯಿತೆಂದೇ ಹೇಳಬಹುದು. ಇವರನ್ನು ಬ್ರಾಹ್ಮಣ ವಿರೋಧಿ ಎಂಬ ಹಣೆಪಟ್ಟಿಯನ್ನು ತೂಗು ಹಾಕಿ ಇವರ ಪ್ರಾಮಾಣಿಕ ತತ್ವನಿಷ್ಠೆ ನಡೆ-ನುಡಿಯನ್ನು ಪ್ರತಿ ಹಂತದ ಬೆಳವಣಿಗೆಯಲ್ಲೂ ತುಳಿದು ಇವರನ್ನು ಮೂಲೆ ಗುಂಪಾಗಿಸಿದ ಕೀರ್ತಿ ಅಂದು ಪತ್ರಿಕೋದ್ಯಮದಲ್ಲಿ ಧೀಮಂತರೆಂದು, ಭೀಷ್ಮರೆಂದು, ಕರೆಸಿಕೊಂಡವರಿಗೆ ಸಲ್ಲುತ್ತದೆ. ಇವರು ಎಂದಿಗೂ ಯಾರನ್ನೂ ಅನವಶ್ಯಕವಾಗಿ ಹಾಡಿ ಹೊಗಳಿದ ಕೀರ್ತಿಗೆ ಭಾಜನರಾಗಿಲ್ಲ.

೬೭ರ ಸುಮಾರಿನಲ್ಲಿ ಅಪ್ಪಟ ಖಾದಿವಸ್ತ್ರಧಾರಿಯಾಗಿದ್ದ, ಕನ್ನಡ ಭಾಷಾ ಬೆಳವಣಿಗೆ ನಾಡುನುಡಿಗಳ ಪ್ರೀತಿ ಪ್ರೇಮಗಳನ್ನು ಹೊರಹೊಮ್ಮಿಸುವ ಸಲುವಾಗಿ ಅನೇಕ ಸಣ್ಣ ಪುಟ್ಟ ಸಂಘಟನೆಗಳನ್ನು ಮಾಡುವ ಛಾತಿಯನ್ನು ಹೊಂದಿದ್ದರು.

ಈ ಎಲ್ಲಾ ರೀತಿಯ ಬೆಳವಣಿಗೆ ಹಿನ್ನೆಲೆಯಲ್ಲಿ ಹಿರಿಯ ಪತ್ರಕರ್ತರಾದ 'ಜನಪ್ರಗತಿ'ಯ ಸಂಪಾದಕರಾಗಿರುವ ಕಲ್ಲೆ ಶಿವೋತ್ತಮರಾವ್ ಅವರ ನಡೆ-ನುಡಿಗಳು ಇವರ ಜೀವನದ ಹಾದಿಯಲ್ಲಿ ಇಣುಕು ಹಾಕಿವೆ ಎಂದರೆ ತಪ್ಪಾಗಲಾರದು.

ಪತ್ರಿಕೋದ್ಯಮದ ಜೀವನವನ್ನು ಆರಂಭಿಸುವ ಮುನ್ನ ಕಲ್ಲೆ ಶಿವೋತ್ತಮರಾಯರ 'ಜನಪ್ರಗತಿ' ವಾರಪತ್ರಿಕೆಯಲ್ಲಿ ಮತ್ತವರ ಗರಡಿಯಲ್ಲಿ ಪಳಗಿದ ಅನುಭವ ಗಟ್ಟಿತನ ಇವರ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿರಬಹುದು. ಕೆಲವೊಮ್ಮೆ ಈ ಗುರು ಶಿಷ್ಯರ ನಡುವೆ ಮಾತಿನ ಚಕಮಕಿ ಸಂಘರ್ಷಗಳು ನಡೆದು ಮಧ್ಯೆ ಮಾತು ಬಿಟ್ಟಿದ್ದು ಉಂಟು ಮತ್ತೆ ಸೇರಿದ್ದೂ ಉಂಟು. ಒಂದು ರೀತಿಯ ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ ಎಂಬಂತೆ ಇವರೀರ್ವರ ಸಂಬಂಧ ಬಹಳ ವರ್ಷಗಳ ಕಾಲ ಇದ್ದದ್ದನ್ನು ನಾನು ತೀರ ಹತ್ತಿರದಿಂದ ಬಲ್ಲವನಾಗಿದ್ದು ಇವರ ಆತ್ಮೀಯ ಸರಸವಿರಸಗಳನ್ನು ಬಲ್ಲವನಾಗಿದ್ದೇನೆ.

ಕಲ್ಲೆ ಶಿವೋತ್ತಮರಾಯರು ಸಹ ಹಿರಿಯ ಉತ್ತಮ ಪತ್ರಕರ್ತರಲ್ಲಿ ಒಬ್ಬರು. ಪ್ರಗತಿಪರ ಧೋರಣೆಯನ್ನು ಹೊಂದಿದವರು. ಕನ್ನಡ ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದವರು. ನಿಷ್ಠುರವಾದಿ. ಇವರ ನಿರ್ಭಿಡೆ, ನೇರ ನಡೆ-ನುಡಿಗಳು ಅವರ ಬೆಳವಣಿಗೆಯನ್ನು ಚಿವುಟಿ ಹಾಕುವಂತೆ ಸನ್ನಿವೇಶಗಳು ನಡೆದದ್ದು ಇತಿಹಾಸವಾಗಿದೆ.

ಪತ್ರಕರ್ತರ ಸಂಘ ಒಂದೇ ಕೋಮಿನ ಹಿಡಿತಕ್ಕೊಳಗಾಗಿದ್ದ ೭೦ರ ದಶಕದ ಸುಮಾರಿನಲ್ಲಿ ಅದರ ಶಾಪ ವಿಮೋಚನೆ ಮಾಡಿದ ಕೀರ್ತಿ ಅಂದು ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಬಳಗದಲ್ಲಿ ಭೀಷ್ಮ, ದ್ರೋಣ, ಗುರುಪಿತಾಮಹರಂತಿದ್ದ ಮುನಿಯಪ್ಪ, ರಘುರಾಮಶೆಟ್ಟಿ, ಅರ್ಜುನದೇವ, ಮೈಸೂರುಮಠ, ದೇವನಾಥ ವೈಕುಂಠರಾಜು, ದಾಸಪ್ಪ ಇವರುಗಳು ಪತ್ರಕರ್ತರ ಸಂಘದ ಗತಿಯನ್ನೇ ಬದಲಿಸಿದ ಕೀರ್ತಿಗೆ ಒಳಗಾಗಿದ್ದಾರೆ.

ಜಯಶೀಲರಾವ್,ಶಾಮಣ್ಣ ಮತ್ತಿತರ ವ್ಯಕ್ತಿಗಳು ಈ ಸಂಘ ಮತ್ತು ಪತ್ರಕರ್ತರ ಸಹಕಾರ ಸಂಘ ಅಧಿಕಾರದ ಚುಕ್ಕಾಣಿಯನ್ನು ಬಹಳಷ್ಟು ವರ್ಷಗಳ ಕಾಲ ತಮ್ಮದಾಗಿಸಿಕೊಂಡಿದ್ದರು. ಇಂತಹ ಅಭೇದ್ಯಕೋಟೆಗೆ ಲಗ್ಗೆ ಹಾಕಿದ ಕೀರ್ತಿ ಇವರುಗಳದಾಗಿದೆ. ಇವರೆಲ್ಲರ ಅಧಿಕಾರಾವಧಿಯಲ್ಲಿ ಬಹಳಷ್ಟು ವರ್ಷಗಳ ಕಾಲ ಸಂಘದಲ್ಲಿ ಖಜಾಂಚಿಯಾಗಿ ಖಾಲಿಯಾಗಿದ್ದ ಖಜಾನೆಯನ್ನು ತುಂಬಿದ ಕೀರ್ತಿ ರಾಮಣ್ಣನವರದಾಗಿದೆ.

೧೯೭೪-೭೯ರ ಅವಧಿಯಲ್ಲಿ ಅನೇಕ ರೀತಿಯ ಪತ್ರಿಕಾ ನೌಕರರ ಪತ್ರಕರ್ತರ ಬಳಗದ ಹೋರಾಟದ ಹಿನ್ನೆಲೆಯಲ್ಲಿದ್ದ ಸಂಘಟನೆ, ಬೀದಿಗಿಳಿದು ಚಳವಳಿ ಮಾಡಿದ ಕೀರ್ತಿ ಈ ಎಲ್ಲರಲ್ಲಿಯೂ ಇದ್ದು ಸಂಘಟನೆಯ ಬೆನ್ನೆಲುಬಾಗಿ ರಾಮಣ್ಣ ನವರು ದುಡಿದಿದ್ದಾರೆಂದರೆ ಅದು ಸತ್ಯಕ್ಕೆ ಹತ್ತಿರವಾದುದು. ಹಣಕಾಸಿನ ವಿಷಯದಲ್ಲಿತುಂಬಾ ಕಟ್ಟುನಿಟ್ಟಿನ ಕೈ ಹಿಡಿತದ ಪ್ರತಿಯೊಂದಕ್ಕೂ ಪ್ರಾಮಾಣಿಕ ಲೆಕ್ಕಗಳನ್ನು ಕೇಳಿ ಒಪ್ಪಿಕೊಳ್ಳುವ ತಿರಸ್ಕರಿಸುವ ಪ್ರತಿಭಟಿಸುವ ವ್ಯಕ್ತಿತ್ವ ರಾಮಣ್ಣನವರಲ್ಲಿ ಸದಾಕಾಲ ಇರುವುದನ್ನು ತೀರ ಹತ್ತಿರದವನಾಗಿ ಬಲ್ಲವನಾಗಿದ್ದೇನೆ. ಕರಾರುವಕ್ಕಾದ ಲೆಕ್ಕ ಪತ್ರಗಳನ್ನು ಒಪ್ಪಿಸುವಲ್ಲಿ ರಾಮಣ್ಣನವರು ಒಬ್ಬರಾಗಿದ್ದಾರೆ.

ಒರಟು ಉತ್ತರ ನಿಷ್ಕಳಂಕ ಮನೋಭಾವದಿಂದ ಕೂಡಿದ್ದ ರಾಮಣ್ಣನನ್ನು ಅರ್ಥಮಾಡಿಕೊಂಡ ವ್ಯಕ್ತಿ ಯಾವತ್ತಿಗೂ ಇವರ ಆಚಾರ-ವಿಚಾರಗಳನ್ನು ಸ್ನೇಹವನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ.

ರಾಮಣ್ಣ ಅನೇಕ ರೀತಿಯ ಸಂಘಟನೆಗಳನ್ನು ಮಾಡಿ ಅವುಗಳನ್ನು ಬೆಳೆಸಿದ್ದು ಉಂಟು. ಅವುಗಳಲ್ಲಿ 'ಪ್ರಗತಿ ಗೆಳೆಯರ ಬಳಗ', 'ಕನ್ನಡ ಸಂಘರ್ಷ ಸಮಿತಿ' ಗಳನ್ನು ಹೆಸರಿಬಹುದಾಗಿದೆ.

ಕನ್ನಡ ಸಂಘರ್ಷ ಸಮಿತಿಯ ಮೂಲಕ ಭಾಷಾನೀತಿಯ ಬಗ್ಗೆ ಹೋರಾಟಗಳನ್ನು ಪ್ರತಿ ಹಂತದಲ್ಲಿಯೂ ಮಾಡುತ್ತಲೇ ಬಂದಿದ್ದಾರೆ. ಇದರ ಮೂಲಕ ಕುವೆಂಪುರವರ ಜನ್ಮದಿನದಂದು ಕುವೆಂಪು ಸಾಹಿತ್ಯದ ಬಗ್ಗೆ ಎಲ್ಲಾ ಮಜಲುಗಳ ವಿಚಾರ ವಿಮರ್ಶೆಯನ್ನು ಮಾಡುವಲ್ಲಿ ಇವರು ನಿರತರಾಗಿರುವುದು ಇಂದಿಗೂ ಸಾಕ್ಷಿಯಾಗಿದೆ.

ತತ್ವನಿಷ್ಠೆ ಪ್ರಾಮಾಣಿಕತೆಗೆ ಹೆಸರಾದ ಈ ವ್ಯಕ್ತಿ ಹೆಚ್ಚು ಹಣವಂತರೇನೂ ಅಲ್ಲ. ಸಾಮಾನ್ಯ ಬಡರೈತನ ಕುಟುಂಬದಲ್ಲಿ ಹುಟ್ಟಿದವರು. ತಿಂಗಳ ಸಂಬಳದಲ್ಲಿ ಎಣಿಸಿದ ಕಜ್ಜಾಯದಂತೆ ಹಣಕ್ಕೆ ಹೊಂದುವ ರೀತಿಯಲ್ಲಿ ಜೀವನವನ್ನು ಸವೆಸಿಕೊಂಡು ಬಂದಿದ್ದಾರೆ. ಒಬ್ಬ ಸಾಮಾನ್ಯ ಪರಿಶಿಷ್ಟ ಜಾತಿಗೆ ಸೇರಿದ ಹೆಣ್ಣನ್ನು ಮದುವೆಯಾಗಿ ಸುಮಾರು ೨೫ ವಸಂತಗಳನ್ನು ಕಳೆದಿದ್ದಾರೆ. ಇವರ ವಿವಾಹವೂ ಕೂಡ ನೀತಿ ತತ್ವಗಳಿಗೆ ಅಂಟಿಕೊಂಡಿದೆ.

ಓರ್ವ ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕಿಯ ಸಂಬಳದಲ್ಲಿ ಮತ್ತು ತನಗೆ ಬರುವ ಅಲ್ಪಾದಾಯದಲ್ಲಿ ಹೆಂಡತಿ ಮಕ್ಕಳ ಪರಿವೆಯನ್ನು ಲೆಕ್ಕಿಸಿದೆ ಸಮಾಜ ಸೇವೆಗೆ ತೊಡಗಿಸಿಕೊಂಡ ಒಬ್ಬ ಆದರ್ಶವ್ಯಕ್ತಿಯಾಗಿರುತ್ತಾರೆ. ಇವರ ಸಂಸಾರವೂ ಸಹ ಅತಿಯಾಗಿರದೆ ಒಂದು ಗಂಡು ಒಂದು ಹೆಣ್ಣು ಮಗುವಿಗೆ ಸೀಮಿತವಾಗಿರುತ್ತದೆ. ಇದರಲ್ಲೂ ಇವರು ಮತ್ತೊಬ್ಬರಿಗೆ ಆದರ್ಶ ಪ್ರಾಯರಾಗಿಯೇ ಇದ್ದಾರೆ.

ಅಖಿಲ ಭಾರತ ಪರ್ತಕರ್ತರ ಒಕ್ಕೂಟದ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಕನ್ನಡ ನುಡಿಯ ಸಂಪಾದಕರಾಗಿ, ಪತ್ರಿಕಾ ಅಕಾಡೆಮಿ ಸದಸ್ಯರಾಗಿ, ಪ್ರೆಸ್‌ಕ್ಲಬ್‌ನ ಉಪಾಧ್ಯಕ್ಷರಾಗಿ, ಪತ್ರಕರ್ತರ ಸಂಘದ ಪ್ರಧಾನಕಾರ್ಯದರ್ಶಿಯಾಗಿ 'ಪತ್ರಕರ್ತರ ಸಹಕಾರ ಸಂಘದ' ಅಧ್ಯಕ್ಷ, ಉಪಾಧ್ಯಕ್ಷ ಖಜಾಂಚಿಯಾಗಿ ಕಾರ್ಯನಿರ್ವಹಿಸಿರುವುದು ಮತ್ತು ನಿರ್ವಹಿಸುತ್ತಿರುವುದು ಪ್ರಸ್ತುತದಲ್ಲಿ ಸ್ತುತ್ಯಾರ್ಹವಾಗಿರುತ್ತದೆ.

ಪ್ರಜಾವಾಣಿಯ ಪ್ರಧಾನ ವರದಿಗಾರರಾಗಿ ಸದಾ ಹೋರಾಟಜೀವಿಯಾದ ಇವರು ಹೀಗೆ ಹಿಂದೆ ಅನೇಕ ಸಂಘಸಂಸ್ಥೆಗಳಲ್ಲಿ ದುಡಿದಿದ್ದಾರೆ. ಮುಂಗಾರು ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿರುವ ರಘುರಾಮಶೆಟ್ಟರ ಪತ್ರಿಕೋದ್ಯಮದ ಬಹುಪಾಲು ಮಿತ್ರರಲ್ಲಿ ಆತ್ಮೀಯರಾಗಿದ್ದಾರೆ. ರಘುರಾಮಶೆಟ್ಟಿ ಇವರಿಗೆ ಸಾಕಷ್ಟು ಸುಖದುಃಖ ನೋವು ನಲಿವುಗಳ ಸಮ್ಮಿಶ್ರ ಅನುಭವಗಳನ್ನು ತಂದುಕೊಟ್ಟಿದೆ.

ರಾಮಣ್ಣನನ್ನು ಮಾತನಾಡಿಸಿ ಗೆಲ್ಲುವ ವ್ಯಕ್ತಿ ಜೀವನದಲ್ಲಿ ಪ್ರಾಮಾಣಿಕನಾಗಿರಬೇಕು. ಇಲ್ಲವಾದಲ್ಲಿ ನೇರವಾಗಿ ಮುಖಕ್ಕೆ ರಾಚುವ ಮಾತುಗಳನ್ನು ಇವರಿಂದ ಕೇಳಲು ಸಿದ್ಧವಾಗಿರಬೇಕು. ಹಿಂದೆಮುಂದೆ ನೋಡದೆ ಮಾತನಾಡುವ ಸ್ವಭಾವ. ಇದರಿಂದಾಗಿ ಪತ್ರಿಕೋದ್ಯಮದ ಹಾದಿಯಲ್ಲಿ ಇವರ ಏಳಿಗೆಯೂ ಕುಂಠತವಾಗಿಯೇ ಉಳಿದಿರುವುದಕ್ಕೆ ಸಾಕ್ಷಿ. ಬೆಳೆದ ಹೊಗಳುಭಟ್ಟಂಗಿತನ ಮಾಡಿಕೊಂಡು ಜಾತಿಯ ಪರಾಕುಗಳನ್ನು ಹಾಕಿಕೊಂಡು ಬೆಳೆಯುವ ಸ್ವಭಾವ ರಾಮಣ್ಣನದಾಗಲಿಲ್ಲ. ಅದಕ್ಕಾಗಿಯೇ ಇಂದಿಗೂ ಇವರ ಜೀವನದ ಹಾದಿ ಸಂಘರ್ಷದ ಹಾದಿಯಲ್ಲಿಯೇ ನಡೆದಿದೆ.

ಇವರು ಪತ್ರಕರ್ತರಾಗಿ ಎಷ್ಟು ಜನ ಮಿತ್ರರನ್ನು ಪಡೆದರೋ ಅಷ್ಟೇ ಶತ್ರುಗಳನ್ನೂ ಸಹ ಕಂಡದ್ದು ಉಂಟು. ಇದಕ್ಕೆ ಕಾರಣ ಇವರ ಮಾತು. ಯಾವಾಗಲು ವಾದಕ್ಕೆಳೆಯುವ ರೀತಿಯಲ್ಲಿರುತ್ತದೆ. ಇದರಿಂದ ಈತನ ಸಹವಾಸವೇ ಬೇಡ ಎನ್ನುವವರು ಇದ್ದಾರೆ. ಅಂದ ಮಾತ್ರಕ್ಕೆ ಇವರ ಬಗ್ಗೆ ಇವರ ಸಂಘಟನೆ ಬಗ್ಗೆ ಇವರ ಪ್ರಾಮಾಣಿಕತೆ ಬಗ್ಗೆ ಗೌರವವಿಲ್ಲವೆಂದಲ್ಲ; ಎಲ್ಲರಿಗೂ ಗೌರವವಿದೆ.

ಸಂಘ ಸಂಸ್ಥೆಗಳಲ್ಲಿ ಇಂತಹ ಒಬ್ಬ ಕಟ್ಟಾನಿಷ್ಠೂರತೆಯ ಪ್ರಾಮಾಣಿಕತೆಯ ವ್ಯಕ್ತಿ ಇರಬೇಕೆನ್ನುವ ಶಾಶ್ವತ ಪ್ರೀತಿಯನ್ನು ಇವರ ವಿರೋಧಿಗಳಲ್ಲಿಯೂ ಬೆಳೆಸಿರುವುದು ಒಂದು ಹೆಮ್ಮೆಯ ಸಂಗತಿಯಾಗಿದೆ.

೫೦ ವಸಂತಗಳನ್ನು ಕಂಡಿರುವ ಇವರಿಗೆ, ಇವರ ಬಾಳಸಂಗಾತಿಯಾಗಿರುವ ಗಾಯತ್ರಿಯವರಿಗೆ ಈ ಶುಭ ಸಂದರ್ಭದಲ್ಲಿ ಹೆಚ್ಚಿನ ಆಯುರಾರೋಗ್ಯ ಸಿಗಲೆಂದು ಮನಃ ಪೂರ್ವಕವಾಗಿ ಹಾರೈಸುತ್ತೇನೆ.

*

‘ಕನ್ನಡ ನುಡಿ’ಯ ಸಂಪಾದಕರಾಗಿ ರಾಮಣ್ಣ

ಎಸ್. ವಿ. ಮಸ್ವಾಚಾರ್ಯ

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕಾಗಿಯೇ ಮೀಸಲಾದ ಪತ್ರಿಕೆಗಳು ತುಂಬ ವಿರಳವೆಂದೇ ಹೇಳಬಹುದು. ಇತರ ಕ್ಷೇತ್ರಗಳಾದ ರಾಜಕೀಯ-ಸಾಂಸ್ಕೃತಿಕ - ಚಲನಚಿತ್ರ ಮುಂತಾದ ಮನೋರಂಜಕ ವಿಷಯಗಳಿಗೆ ಸಂಬಂಧಿಸಿದ ಪತ್ರಿಕೆಗಳೇ ಹೆಚ್ಚು. ಪೂರ್ಣಪ್ರಮಾಣದ ಸಾಹಿತ್ಯಕ ಮತ್ತು ಭಾಷಾ ಶಾಸ್ತ್ರಕ್ಕೆ ಸಂಬಂಧಿಸಿದ ಲೇಖನಗಳಿಗೆ ಮೀಸಲಾದ ಪತ್ರಿಕೆಗಳನ್ನು ಕುರಿತು ಯೋಚಿಸಿದಾಗ ಕೇವಲ ಬೆರಳೆಣಿಕೆಯಷ್ಟು ಪತ್ರಿಕೆಗಳು ಸಿಗುತ್ತವೆ. ಅವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವ ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’ ಹಾಗೂ ‘ಕನ್ನಡ ನುಡಿ’ ಎರಡೂ ಮಹತ್ವಪೂರ್ಣವಾದವುಗಳು. (ವಿಶ್ವವಿದ್ಯಾಲಯಗಳಿಂದ ಮತ್ತು ಇತರ ಸಂಘ ಸಂಸ್ಥೆಗಳಿಂದ ಪ್ರಕಟವಾಗುತ್ತಿರುವ ವಿದ್ವತ್‌ಪತ್ರಿಕೆಗಳು ಅವುಗಳದೇ ಆದ ಬೇರೆ ಬೇರೆ ಕಾರಣಗಳಿಗಾಗಿ - ಅನಿಮಿತವಾಗಿ ಬರುತ್ತವೆ; ಮತ್ತೆ ಕೆಲವು ನಿಂತೇ ಹೋಗಿವೆ).

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವ ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’ ವಿದ್ವತ್ ಲೋಕಕ್ಕೆ ವಿದ್ವತ್ ಲೇಖನಗಳಿಗೆ ಮೀಸಲಾದ ಪತ್ರಿಕೆಯಾದರೆ ‘ಕನ್ನಡ ನುಡಿ’ ಕನ್ನಡ ಸಾಹಿತ್ಯ ಪರಿಷತ್ತಿನ ಮುಖವಾಣಿಯಾಗಿ ಕಾರ್ಯಕ್ರಮಗಳ ವರದಿ, ನಾಡು-ನುಡಿ-ಗಡಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳ ವರದಿ, ಲೇಖನ, ಪುಸ್ತಕ ವಿಮರ್ಶೆ ಮುಂತಾದವುಗಳನ್ನೊಳಗೊಂಡ ಸಂಪೂರ್ಣ ಕನ್ನಡ ಪರ ಪತ್ರಿಕೆಯಾಗಿ ಬರುತ್ತಿದೆ. ನಾಡು-ನುಡಿ, ಜಲ-ನೆಲ, ಗಡಿಗಳ ಬಗೆಗೆ ಅತ್ಯಂತ ಕಳಕಳಿಯನ್ನು ವ್ಯಕ್ತಪಡಿಸುತ್ತ-ಕನ್ನಡ ಸಾಹಿತ್ಯ ಪರಿಷತ್ತಿನ ಧೋರಣೆಗನುಗುಣವಾಗಿ - ಕನ್ನಡದ ಸರ್ವಾಂಗೀಣ ಬೆಳವಣಿಗೆಗೆ ಒತ್ತಾಸೆಯಾಗಿ ನಿಂತ ಐಕ್ಯೆಕ ಪತ್ರಿಕೆ ಎನ್ನಬಹುದು.

ಇಂತಹ ನುಡಿ ೧೯೩೮ರಲ್ಲಿ ಪ್ರಾರಂಭವಾಯಿತು ಇದರ ಪ್ರಥಮ ಸಂಪಾದರರಾಗಿ ಹಿರಿಯ ಸಾಹಿತಿ – ಕಾದಂಬರಿಕಾರ, ಹೋರಾಟಗಾರ ಅ.ನ.ಕೃಷ್ಣರಾವ್ ಅವರು ದುಡಿದಿದ್ದಾರೆ. ನಂತರ ಬಿ. ವೆಂಕೋಬರಾವ್, ಬಿ. ಶಿವಮೂರ್ತಿ ಶಾಸ್ತ್ರಿ, ಮೋ. ಶಂ. ಸುಬ್ರಹ್ಮಣ್ಯ ಶಾಸ್ತ್ರಿ, ಎಂ.ಜಿ. ನಂಜುಂಡಾರಾಧ್ಯ, ಸಿದ್ಧವನಹಳ್ಳಿ ಕೃಷ್ಣಶರ್ಮ, ಎಂ.ಆರ್. ಶ್ರೀ., ಡಿ.ಸಿ. ಸುಬ್ಬರಾಯಪ್ಪ, ವಿ. ಸೀತಾರಾಮಯ್ಯ, ಅನ್ನದಾನಯ್ಯ ಪುರಾಣಿಕ, ಡಿ.ಆರ್. ರಾಮಯ್ಯ, ಜಿ. ವೆಂಕಟಸುಬ್ಬಯ್ಯ ಹಾಗೂ ಹೀ.ಮ. ನಾಗಯ್ಯ ಅವರುಗಳು ಅತ್ಯಂತ ಪ್ರಾಮಾಣಿಕರಾಗಿ ದುಡಿದಿದ್ದಾರೆ. ಅಂತಹ ಹಿರಿಯ ಚೇತನಗಳ ಮಾರ್ಗದಲ್ಲಿಯೇ ರಾಮಣ್ಣ ಕೋಡಿಹೊಸಹಳ್ಳಿ ಅವರೂ 'ಕನ್ನಡ ನುಡಿ'ಯ ಸಂಪಾದಕರಾಗಿ ಅತ್ಯಂತ ಸಮರ್ಥವಾಗಿ ಸಂಪಾದಕರಾಗಿದ್ದ ಅವಧಿಯಲ್ಲಿ ಮುನ್ನಡೆಸಿರುವರು.

ಡಾ. ಹಂಪ ನಾಗರಾಜಯ್ಯ ಅವರು ಅಧ್ಯಕ್ಷರಾದ ಕೂಡಲೇ ೧೯೭೮ ಆಗಸ್ಟ್ ತಿಂಗಳಲ್ಲಿ ರಾಮಣ್ಣ ಅವರು ಸಂಪಾದಕರಾಗಿ ನೇಮಕಗೊಂಡರು. ಮೊದಲು ಅನಂತ ಪದ್ಮನಾಭರಾವ್ ನಂತರ ೧೯೮೦ ಜನವರಿ ೧ ರಿಂದ ಬಿ. ವಿ. ನಾಗರಾಜು ಅವರು ನಂತರ ರಾಮಣ್ಣನವರ ಜೊತೆ ಕೆಲಸ ಮಾಡಿದ್ದಾರೆ. ರಾಮಣ್ಣ ಅವರು ೧೯೮೧ ಜುಲೈ ೧ರವರೆಗೆ ಮೂರು ವರ್ಷಗಳ ಕಾಲ ಸಂಪಾದಕರಾಗಿ ಅತ್ಯಂತ ಸಮರ್ಥವಾಗಿ – ಪ್ರಾಮಾಣಿಕವಾಗಿ ದುಡಿದಿದ್ದಾರೆ ಎನ್ನಬಹುದು. ಪತ್ರಿಕೋದ್ಯಮದ ಅವರ ಅನುಭವವನ್ನೆಲ್ಲ ಬಳಸಿಕೊಂಡು ಕನ್ನಡ ನುಡಿಯನ್ನು ಸರ್ವಾಂಗ ಸುಂದರವಾಗಿ ತಂದಿದ್ದಾರೆ. ಅಲ್ಲಲ್ಲಿ ಕಾರಣಾಂತರಗಳಿಂದ ಸಂಯುಕ್ತ ಸಂಚಿಕೆಯಾಗಿ ಹೊರಬಂದಿದ್ದರೂ ಪ್ರತಿ ಸಂಚಿಕೆಯಲ್ಲೂ ಅಚ್ಚುಕಟ್ಟುತನ ಎದ್ದುಕಾಣುತ್ತದೆ. ಪ್ರತಿ ಸುದ್ದಿಗೆ ಪೂರಕವಾದ ಭಾವಚಿತ್ರಗಳು, ಗ್ರಂಥಾಂತರಗ, ಸಾದರ ಸ್ವೀಕಾರ, ಸಂದರ್ಭಕ್ಕೆ ತಕ್ಕ ಲೇಖನಗಳಿಂದ ಸಂಚಿಕೆಗಳು ಮತ್ತಷ್ಟು ಮಹತ್ವಪೂರ್ಣವಾಗಿ ಕಾಣಿಸುತ್ತವೆ. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಿಗೆಲ್ಲ ಉಚಿತವಾಗಿ ಕಳುಹಿಸಲ್ಪಡುವ ಈ ಸಂಚಿಕೆಯಲ್ಲಿ ಸದಸ್ಯರೆಲ್ಲರ ಅವಗಾನೆಗಾಗಿ ಆಗಾಗ ವಿಚಾರ ಸಂಕಿರಣಗಳ, ಸಮ್ಮೇಳನಗಳ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳೂ ದಾಖಲಾಗಿರುವುದು, ಗ್ರಂಥಾಂತರಂಗದಲ್ಲಿ ಹಿರಿ–ಕಿರಿಯ ವಿಮರ್ಶಕರಿಂದ ಕೃತಿಗಳ ವಿಮರ್ಶೆ ಯಿರುವುದು ಮುಂದಿನ ಯುವ ಪೀಳಿಗೆಗಳಿಗೆ ಒಂದು ಆಕರ ವಿಷಯವಾಗಿರುತ್ತದೆ.

ರಾಮಣ್ಣ ಅವರು ಸಂಪಾದಕರಾಗಿದ್ದ ಅವಧಿಯಲ್ಲಿ ಅಖಿಲ–ಭಾರತ ಮಟ್ಟದ – ೧೯೭೯,೧೯೮೦,೧೯೮೧ರಲ್ಲಿ–ಮೂರು ಸಮ್ಮೇಳನಗಳು ಕ್ರಮವಾಗಿ ಧರ್ಮಸ್ಥಳ, ಬೆಳಗಾವಿ ಹಾಗೂ ಚಿಕ್ಕಮಗಳೂರುಗಳಲ್ಲಿ ನಡೆದಿವೆ. ಈ ಸಮ್ಮೇಳನಗಳ ಸಾಂದರ್ಭಿಕ ಸಂಚಿಕೆಗಳಾಗಿ ವಿಶೇಷ ಸಂಚಿಕೆಗಳನ್ನು ತರಲಾಗಿದೆ. ಪ್ರತಿ ಸಂಚಿಕೆಯಲ್ಲೂ ಆಯಾ ಸಮ್ಮೇಳನದಲ್ಲಿ ನಡೆದ ಕಾರ್ಯಕಲಾಪಗಳ ಸಂಪೂರ್ಣ ವಿವರಗಳು ನಮಗೆ ಸಿಗುತ್ತವೆ. ಭಾಗವಹಿಸಿದವರ ಪಟ್ಟಿ– ಗೋಷ್ಠಿಗಳ ವಿಷಯಗಳೆಲ್ಲವೂ ಯಥಾವತ್ತಾಗಿ ಸಿಗುವುದರಿಂದ ಒಂದೊಂದು ಅಪೂರ್ವ ದಾಖಲೆಯಾಗುತ್ತವೆ. 'ಪತ್ರಿಕೆ ಮತ್ತು ಕನ್ನಡ ಸಾಹಿತ್ಯ', 'ಜಿ.ಪಿ. ರಾಜರತ್ನಂ ಸ್ಮರಣ ಸಂಚಿಕೆ', 'ಮಕ್ಕಳ ವರ್ಷ' ಹಾಗೂ 'ರಾಜ್ಯೋತ್ಸವ' ಹೀಗೆ ಬೇರೆ ಬೇರೆ ವಿಶೇಷ ಸಂಚಿಕೆಗಳನ್ನು ಹೊರತಂದಿದ್ದಾರೆ.

ಮೇ ೧೯೭೯ರಲ್ಲಿ, ಹಲವಾರು ದೃಷ್ಟಿಗಳಿಂದ ವಿಶಿಷ್ಟವಾದ ವ್ಯಕ್ತಿತ್ವವನ್ನು ಪಡೆದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪೂರ್ವವಾದ ಕಾಣಿಕೆಯನ್ನು ನೀಡಿದ ಹಿರಿಯ ಕವಿ-ಸಾಹಿತಿ ಜಿ.ಪಿ. ರಾಜರತ್ನಂ ಅವರ ನೆನಪಿನಾರ್ಥವಾಗಿ 'ಕನ್ನಡ ನುಡಿ'ಯನ್ನು ಸ್ಮರಣ ಸಂಚಿಕೆಯಾಗಿ ಪ್ರಕಟಿಸಲಾಗಿದೆ. ಈ ಸಂಚಿಕೆಯಲ್ಲಿ ಡಾ॥ ಶಿವರಾಮ ಕಾರಂತ, ಎಂ.ವಿ. ಸೀತಾರಾಮಯ್ಯ, ಎಲ್.ಎಸ್. ಶೇಷಗಿರಿ ರಾವ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ವಿ.ಕೃ. ಗೋಕಾಕ, ಸಿದ್ಧಯ್ಯ ಪುರಾಣಿಕ. ಹಂಪ ನಾಗರಾಜಯ್ಯ, ನಾಡಿಗ ಕೃಷ್ಣಮೂರ್ತಿ, ಕಲ್ಲೆ ಶಿವೋತ್ತಮರಾವ್, ಜಿ. ವೆಂಕಟಸುಬ್ಬಯ್ಯ, ನೀಲತ್ತಹಳ್ಳಿ ಕಸ್ತೂರಿ, ಬಸವರಾಜ ಕಟ್ಟೀಮನಿ, ದಿನಕರ ದೇಸಾಯಿ - ಮುಂತಾದವರ ಲೇಖನಗಳನ್ನೊಳಗೊಂಡು 'ಕನ್ನಡದ ರತ್ನ'ನ ಬದುಕು-ಬರೆಹ, ಏರಿದ ಎತ್ತರ, ಕನ್ನಡಕ್ಕಾಗಿ ಮಾಡಿದ ಕೆಲಸದ ವಿವರ, ತೋರಿದ ದಾರಿ, ಅವರ ವಿದ್ವತ್ತಿನ ಪರಿಚಯ-ಮುಂತಾದ ವಿವಿಧ ಮುಖಗಳನ್ನು ಪರಿಚಯಿಸುವ ವಿದ್ವತ್‌ಪೂರ್ಣ ಲೇಖನಗಳನ್ನೊಳಗೊಂಡಿದೆ. ಹೀಗಾಗಿ ಜಿ.ಪಿ. ರಾಜರತ್ನಂ ಅವರನ್ನು ಅಭ್ಯಸಿಸುವವರಿಗೊಂದು ಉತ್ತಮ ಆಕರ ಗ್ರಂಥವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಲ್ಲದೆ, ಸಂಗ್ರಹಯೋಗ್ಯ ಸಂಚಿಕೆಯಾಗಿರುತ್ತದೆ.

ಜನವರಿ ೧೯೮೦ರಲ್ಲಿ ಮಕ್ಕಳ ವರ್ಷ ಎಂದು ಘೋಷಣೆಯಾಗಿತ್ತು. ಆಗ ರಾಜ್ಯದ್ಯಂತ ಪ್ರತಿ ಜಿಲ್ಲೆ ತಾಲ್ಲೂಕು ಮಟ್ಟದಲ್ಲೂ ಮಕ್ಕಳ ಸಾಹಿತ್ಯ ಕುರಿತ ಕಾರ್ಯಕ್ರಮಗಳು ನಡೆದವು. ಅದರ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು ಇನ್ನೂರು ಪುಸ್ತಕಗಳನ್ನು ಅತ್ಯಂತ ಕಡಿಮೆ ಬೆಲೆಗೆ ಸಿಗುವಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಕಟಿಸಿದೆ. ಮಕ್ಕಳ ವರ್ಷದ ಪ್ರಯುಕ್ತ ನಡೆದ ಈ ಎಲ್ಲಾ ಕಾರ್ಯಕ್ರಮಗಳ ವರದಿಗಳನ್ನೊಳಗೊಂಡು ಬಂದ ವಿಶೇಷಾಂಕವು ಕೂಡ ಒಂದು ಉತ್ತಮ ಸಂಗ್ರಹಯೋಗ್ಯ ಸಂಚಿಕೆಯಾಗಿ ಬಂದಿರುತ್ತದೆ.

೧೯೮೦ ಜೂನ್‌ನಲ್ಲಿ 'ಪತ್ರಿಕೆ ಮತ್ತು ಸಾಹಿತ್ಯ' ಕುರಿತು ಹೊರತಂದಿರುವ ವಿಶೇಷ ಸಂಚಿಕೆಯು ಪರಿಷತ್ತಿನ ರಚನಾತ್ಮಕ ಕಾರ್ಯಕ್ರಮಗಳ ನೋಟದ ಒಂದು ವಿಶಿಷ್ಟ ಸಂಚಿಕೆಯಾಗಿದೆ. 'ಪತ್ರಿಕೋದ್ಯಮ ಸಾಹಿತ್ಯ' ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿಕೊಂಡು ಬರುತ್ತಿದ್ದಂತಹ ಬಿ. ಪುಟ್ಟಸ್ವಾಮಯ್ಯ, ಕಲ್ಲೆ ಶಿವೋತ್ತಮರಾವ್, ಜಯಶೀಲರಾವ್, ಸಿ.ವಿ. ರಾಜಗೋಪಾಲ್, ಪ.ಲೋ. ಬಂಕಾಪುರ, ಟಿ. ಸುನಂದಮ್ಮ ಎಂ.ಕೆ. ಇಂದಿರಾ, ಗೊ.ರು. ಚನ್ನಬಸಪ್ಪ, ಶ್ರೀನಿವಾಸ ಹಾವನೂರ, ಪಿ. ಲಂಕೇಶ್, ಕೆ. ಶ್ರೀಧರ ಆಚಾರ್ - ಮುಂತಾದ ವಿಚಾರವಂತ ಹಿರಿ-ಕಿರಿಯ ಪತ್ರಿಕರ್ತರು ಮತ್ತು ಸಾಹಿತಿಗಳ ಲೇಖನಗಳಿಂದ ಕೂಡಿದ್ದು, ಒಂದು ಆಕರ ಗ್ರಂಥದಂತೆ ಇದೆ. ಇಲ್ಲಿಯ ವಿಚಾರಪೂರಿತ ಲೇಖನಗಳೊಂದಿಗೆ ವ್ಯಂಗ್ಯಚಿತ್ರಗಳೂ ಸೇರಿ ಸರ್ವಾಂಗಸುಂದರವಾಗಿ ಬಂದಿದೆ. ಇಲ್ಲಿಯ ಲೇಖನಗಳೆಲ್ಲವೂ ವಿಚಾರಪೂರಿತವಾಗಿದ್ದು ಪತ್ರಿಕೋದ್ಯಮದ ಬಗೆಗೆ ಒಂದು ಸಮಗ್ರ ಚಿತ್ರಣವನ್ನು ನೀಡುತ್ತದೆ.

ಅದೇ ವರ್ಷ ನವೆಂಬರ್ ೧ ರಂದು, ರಾಜ್ಯೋತ್ಸವದ ನೆನಪಿಗಾಗಿ ಬಂದ ವಿಶೇಷ ಸಂಚಿಕೆಯು ಕೂಡ ಒಂದು ಉತ್ತಮ ಸಂಚಿಕೆಯಾಗಿ ಬಂದಿದೆ. ಈ ಸಂಚಿಕೆಯಲ್ಲಿ ರಾಮಣ್ಣ ಅವರು 'ಬೀಸೋ ದೊಣ್ಣೆ ತಪ್ಪಿದರೆ ಸಾವಿರ ವರ್ಷ' ಎಂಬ ಲೇಖನ ಬರೆದು ''ಆಡಳಿತದಲ್ಲಿ

ಕನ್ನಡ ಬೆಳಸುವಂತೆ ಪ್ರೋತ್ಸಾಹಿಸಲು ಇದುವರೆಗೆ ತೋರುತ್ತಿದ್ದ ಬಹುಮಾನಗಳ ಆಮಿಷ ನಿಲ್ಲಬೇಕು. ಕನ್ನಡವನ್ನು ಬಳಸದಿರುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮಕೈಗೊಳ್ಳಬೇಕು. ನಿರ್ದಾಕ್ಷಿಣ್ಯವಾಗಿ ದಂಡಿಸಬೇಕು''. ಎಂದು ಹೇಳಿ ತಮ್ಮ ಮತನವನ್ನು, ಕನ್ನಡದ ಬಗೆಗೆ ಅವರಿಗಿರುವ ಕಳಕಳಿಯನ್ನು ಮೆರೆದಿರುವರು. ಎಚ್. ನರಸಿಂಹಯ್ಯ, ಘನಲಿಂಗಪ್ಪ ಮನ್ವಾಚಾರ್, ಬೈರಮಂಗಲ ರಾಮೇಗೌಡ, ಜಿ.ಆರ್. ತಿಪ್ಪೇಸ್ವಾಮಿ ಯವರುಗಳ ಲೇಖನಗಳೇ ಅಲ್ಲದೆ, ವಿವಿಧ ಕಾರ್ಯಕ್ರಮಗಳ ಸುದ್ದಿಗಳನ್ನೊಳಗೊಂಡ ಈ ಸಂಚಿಕೆಯು ಕೂಡ ಒಂದು ಉತ್ತಮ ನೆನಪಿನ ಸಂಚಿಕೆಯಾಗಿ ಹೊರಬಂದಿದೆ.

ಕೊನೆಯದಾಗಿ, ಈ ಅವಧಿಯಲ್ಲಿಯ ಸಂಪಾದಕೀಯದ ಬಗೆಗೆ ಒಂದು ಮಾತನ್ನು ಹೇಳಬೇಕು. ಈ ಅವಧಿಯಲ್ಲಿ ಯಾವುದೇ ವಿಶೇಷವಾದ ಅಗ್ರಲೇಖನಗಳು ಇರುವುದಿಲ್ಲ. ಅಲ್ಲದೆ, ಅನೇಕ ಸಂಚಿಕೆಗಳಲ್ಲಿ ಸಂಪಾದಕೀಯವೇ ಕಾಣುವುದಿಲ್ಲ. ಬಂದ ಸಂಪಾದಕೀಯದಲ್ಲೂ ಕೂಡ ಕನ್ನಡ ನೆಲ-ಜಲ ಗಡಿ ಸಮಸ್ಯೆ ಭಾಷೆಯ ಬಗೆಗೆ ಬಂದಂತಹ ಸಂಪಾದಕೀಯಗಳೇ ಹೆಚ್ಚು ಇರುವುದು. ಆದಾಗ್ಯೂ ಬಂದ ಸಂಚಿಕೆಗಳಲ್ಲಿ ಗುರುತಿಸಬಹುದಾದಂತ ಈ ಕೆಲವನ್ನು ಗುರುತಿಸ ಬಹುದು ಅವುಗಳೆಂದರೆ, ಈಗಲೂ ಚರ್ಚಿತವಾಗುತ್ತಿರುವ ಪ್ರಾರ್ಥನೆಯ ವಿಷಯ-ಚರ್ಚುಗಳಲ್ಲಿ ತಮಿಳು-ಇತರೆ ಭಾಷೆಯ ಪಾದ್ರಿಗಳೇ ಇದ್ದು, ಪಾರ್ಥನೆಯ ಸಂದರ್ಭದಲ್ಲಿ ಕನ್ನಡದ ಬದಲಾಗಿ ತಮಿಳು-ಇತರೆ ಭಾಷೆಗಳನ್ನೇ ಬಳಸಲಾಗುತ್ತಿದೆ. ಇದು ಬದಲಾಗಿ, ಕರ್ನಾಟಕದ ಎಲ್ಲ ಚರ್ಚುಗಳಲ್ಲೂ ಕನ್ನಡದಲ್ಲೇ ಪ್ರಾರ್ಥನೆ ಸಲ್ಲುವಂತಾಗಬೇಕು ಎನ್ನುವ ಆಗ್ರಹಪೂರ್ವಕವಾದ ಸಂಪಾದಕೀಯ ಒಂದಿದೆ.

ಕಾಸರಗೋಡು ಕರ್ನಾಟಕದೊಂದಿಗೆ ವಿಲೀನವಾಗಬೇಕು ಮತ್ತು ಕನ್ನಡ ನಾಡಿನಲ್ಲಿ ಉದ್ಯೋಗಕಾವಕಾಶಗಳು ಕನ್ನಡಿಗರಿಗೇ ಮೀಸಲಾಗಿರಬೇಕು, 'ಮಣ್ಣಿನ ಮಕ್ಕಳಿಗೇ ಕೆಲಸ' ಎಂದು ಘೋಷಿಸಿದ್ದ ಆಗಿನ ಮುಖ್ಯಮಂತ್ರಿ ಆರ್. ಗುಂಡೂರಾಯರು, ಮುಂದೆ ಕೇರಳ ಮುಖ್ಯಮಂತ್ರಿ ಇ.ಕೆ. ನಯನಾರ್‌ರ ಬಳಿ ' ಆ ಮಾತುಗಳಿಗೆ ಹೆಚ್ಚಿನ ಮಹತ್ವ ನೀಡ ಬೇಕಾಗಿಲ್ಲ' ಎಂದು ವರದಿಯಾದಾಗ, ಮುಖ್ಯಮಂತ್ರಿಗಳು ಮೌನಮುರಿದು ಸ್ಪಷ್ಟನೆ ನೀಡಬೇಕೆಂದು ಆಗ್ರಹಿಸಿ ಅಗ್ರಲೇಖನ ಬರೆದಿದ್ದಾರೆ. ಮುಂದೆ ಮತ್ತೆ ಅದೇ ವಿಷಯಕ್ಕೆ ಸಂಬಂಧಿಸಿದಂತೆ 'ಕನ್ನಡಿಗರ ಪ್ರತಿಷ್ಠೆಗೆ ಭಂಗ' ಎಂಬ ಲೇಖನ ಬರೆದಿದ್ದು; ಹಾಗೂ ರಾಜ್ಯದ ಪ್ರೌಢ ವ್ಯಾಸಂಗದಲ್ಲಿ ಸಂಸ್ಕೃತದ ಸ್ಥಾನ ಯಾವುದಿರಬೇಕೆಂಬ ಬಗೆಗೆ ಪ್ರೊ॥ ವಿ.ಕೃ. ಗೋಕಾಕ ಸಮಿತಿ ನೀಡಿದ ವರದಿಯನ್ನು ತಕ್ಷಣ ಜಾರಿಗೆ ತರಬೇಕೆಂದು ಆಗಿನ ಮುಖ್ಯಮಂತ್ರಿ ಆರ್. ಗುಂಡೂರಾಯರನ್ನು ಒತ್ತಾಯಿಸಿ ಬರೆದ ಸಂಪಾದಕೀಯವೂ ಒಂದು ಮಹತ್ವಪೂರ್ಣವಾದುದಾಗಿದೆ. ಹೀಗೆ ಇರುವ ಕೆಲವೇ ಸಂಚಿಕೆಗಳಲ್ಲಿಯ ಸಂಪಾದಕೀಯಗಳಲ್ಲೂ ಎದ್ದು ಕಾಣುವಂತಹ ಕೆಲವು ಸಂಪಾದಕೀಯಗಳು ಇವೆ.

ಇಷ್ಟಾಗಿಯೂ ರಾಮಣ್ಣ ಅವರು ತಾವು ನಂಬಿದ ತತ್ತ್ವಾದರ್ಶಗಳನ್ನು ಎಂದೂ ಬಿಟ್ಟುಕೊಟ್ಟವರಲ್ಲ; ಪತ್ರಿಕಾ ನೀತಿಯನ್ನು ಬಲಿಗೊಟ್ಟು ಯಾವುದೇ ಸಂದರ್ಭದಲ್ಲೂ ರಾಜಿ

ಮಾಡಿಕೊಂಡವರಲ್ಲ. ಆಗಿನ ಪರಿಷದಧ್ಯಕ್ಷರಾಗಿದ್ದ ಹಂಪನಾ ಅವರು ಸಂಬಂಧಿಗಳೇ ಆಗಿದ್ದರೂ ತಮ್ಮ ನಿಲುವನ್ನು ಎಂದು ಬದಲಾಯಿಸಿಕೊಂಡವರಲ್ಲ. ಎಂಥದೇ ಸ್ಥಿತಿಯಲ್ಲೂ ರಾಜಿ ಮಾಡಿಕೊಂಡವರಲ್ಲ. ಇದಕ್ಕೆ ಆಗ ಬಂದ ಕೆಲವೇ ಸಂಪಾದಕೀಯಗಳಲ್ಲಿ ಈ ಒಂದೆರಡನ್ನು ಗಮನಿಸಿದರೆ ಅವರ ನಿಲುವು ಧೋರಣೆ ಅರ್ಥವಾಗುತ್ತದೆ.

ಒಟ್ಟಿನಲ್ಲಿ ರಾಮಣ್ಣ ಅವರು ಪತ್ರಿಕೋದ್ಯಮದಲ್ಲಿಯ ತಮ್ಮ ಆಳವಾದ ಅನುಭವವನ್ನು ಬಳಸಿ, 'ಕನ್ನಡ ನುಡಿ'ಯನ್ನು ನಾಡು-ನುಡಿ-ನಾಡಿಗಳ, ಭಾಷೆ, ಮುಂತಾದ ವಿಷಗಳ ಬಗೆಗೆ ನಡೆದ ಕಾರ್ಯಕ್ರಮಗಳ ವರದಿ ಲೇಖನಗಳನ್ನು ಕ್ರಮವಾಗಿ ಜೋಡಿಸಿ ಮುಖಪುಟದಲ್ಲಿ ಸಾಂದರ್ಭಿಕವಾಗಿ ಸಾಂಸ್ಕೃತಿಕವಾಗಿ ಐತಿಹಾಸಿಕವಾಗಿ ಪ್ರಮುಖವಾದ ಭಾವಚಿತ್ರಗಳ ಸಹಿತ ಪ್ರಕಟಿಸಿ, ಒಂದು ವಿಶೇಷ ರೂಪವನ್ನು ತಂದುಕೊಟ್ಟಿರುವುದು ಕಾಣುತ್ತದೆ. ಹೀಗಾಗಿ ಇವರು ಈ ಹಿಂದಿನ ಹಿರಿಯರ ಸಾಲಿಗೆ ಸೇರುತ್ತಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ

ಕನ್ನಡ ಸಂಘರ್ಷ ಸಮಿತಿಯ ಬೆನ್ನೆಲುಬು

ಕೋ.ವೆಂ. ರಾಮಕೃಷ್ಣೇಗೌಡ

'ಕನ್ನಡ' ಪದದಲ್ಲಿ ನಮ್ಮ ನಾಡಿನ ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಕನ್ನಡಿಗರ ಬದುಕು ಅಂತರ್ಗತವಾಗಿದೆ. ಆದುದರಿಂದಲೇ ಕನ್ನಡದ ಉಳಿವಿಗಾಗಿ ಹೋರಾಟ-ಚಳವಳಿಗಳು ನಡೆಯುತ್ತಾ ಬಂದಿರುವುದು. ಕರ್ನಾಟಕದಲ್ಲಿ ಹೋರಾಟಗಳು ಇಂದು ನಿನ್ನೆಯವಲ್ಲ. ಸಂಸ್ಕೃತ ಭಾಷೆಯ ಹಿಡಿತದಿಂದ ಬಿಡುಗಡೆ ಪಡೆಯುವ ಕಾರಣದಿಂದ ವಚನಗಳು ಹುಟ್ಟಿಕೊಂಡವು.. ಆಂಡಯ್ಯ, ಮಹಾಲಿಂಗರಂಗರಂಥ ಕವಿಗಳು ಕನ್ನಡದ ಪರವಾಗಿ ದನಿ ಎತ್ತಿದರು. ಇವರೂ ಸಹ ಒಂದು ಅರ್ಥದಲ್ಲಿ ಕನ್ನಡ ಹೋರಾಟಗಾರರೇ. ಸ್ವಾಭಿಮಾನಿ ಕನ್ನಡಿಗರು ಎಲ್ಲ ಕಾಲ ಘಟ್ಟಗಳಲ್ಲಿಯೂ ತಮ್ಮ ಇತಿಮಿತಗಳ ನೆಲೆಯಲ್ಲಿ ನಾಡು, ನುಡಿಯ ರಕ್ಷಣೆಗೆ ಶ್ರಮಿಸಿದ್ದಾರೆ.

ಕರ್ನಾಟಕ ಏಕೀಕರಣ ಚಳವಳಿ ಭಾಷಾವಾರು ರಾಜ್ಯಗಳ ರಚನೆಯ ಬೆನ್ನೆಲ್ಲೇ ತಣ್ಣಗಾದರೂ ನಾಡು, ನುಡಿ, ನಾಡಿಗರ ಅಭ್ಯುದಯದ ಬಗೆಗೆ ಚಿಂತಿಸುವ ಮನಸ್ಸುಗಳು ಅಲ್ಲಲ್ಲಿ ಕ್ರಿಯಾಶೀಲವಾಗಿಯೇ ಇದ್ದವು. ಅಂತಹ ಮನಸ್ಸುಗಳು ಸಂಕಲನಗೊಂಡು ಸಂಘಟನೆಗಳ ರೂಪವನ್ನು ಪಡೆದು ಕೊಂಡವು. ಕನ್ನಡ ಸಂಘರ್ಷ ಸಮಿತಿ ರೂಪುಗೊಂಡಿದ್ದೂ ಹೀಗೆಯೇ. ನಿರುದ್ಯೋಗ ಕನ್ನಡ ಪದವೀಧರರ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ಮಾಡುವ ಉದ್ದೇಶದಿಂದ ೧೯೭೭ರಲ್ಲಿ ಸಮಿತಿಯನ್ನು ಸ್ಥಾಪಿಸಿ ಕನ್ನಡಪರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿಯೇ ನಡೆಸಿಕೊಂಡು ಬರುತ್ತಿದ್ದರು. ಪದಾಧಿಕಾರಿಗಳಿಗೆ ಉದ್ಯೋಗ ದೊರೆತಂತೆ ಸಮಿತಿಯ ಚಟುವಟಿಕೆಗಳು ಕಡಿಮೆಯಾಗಿ ಕೊನೆಗೊಂದು ದಿನ ನಿಷ್ಕ್ರಿಯಗೊಂಡಿತು. ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿದ್ದ ದಿವಂಗತ ರಹಮಾನ್‌ಖಾನ್ ಹಾಗೂ ರಾಮಣ್ಣ ಕೋಡಿಹೊಸಹಳ್ಳಿ ಅವರು ಆಸಕ್ತಿ ವಹಿಸಿ ೧೯೮೨ರ ನವಂಬರ್

೧ ರಾಜ್ಯೋತ್ಸವ ದಿನದಂದು 'ಕರಾಳ ದಿನ'ವಾಗಿ ಆಚರಿಸುವ ಮೂಲಕ ಸಮಿತಿಯನ್ನು ಪುನಶ್ಚೇತನಗೊಳಿಸಿದರು. ರಾಮಣ್ಣ, ಖಾನ್ ಜೊತೆಗೂಡಿ ಸಮಿತಿಯ ನೊಗವನ್ನೂ ಹೊತ್ತು ಮುನ್ನಡೆಸುತ್ತಿದ್ದರು. ಖಾನ್ ಅವರ ಅಕಾಲಿಕ ದುರ್ಮರಣದ ನಂತರ ರಾಮಣ್ಣ ಸಮಿತಿಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಸಮರ್ಥವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಕನ್ನಡ ಸಂಘರ್ಷ ಸಮಿತಿಗೆ ರಾಜ್ಯದಲ್ಲಿ ಮಹತ್ವದ ಸ್ಥಾನವಿದೆ. ಇತರ ಕನ್ನಡಪರ ಸಂಘಟನೆಗಳಿಗಿಂತ ಭಿನ್ನ ಸಿದ್ಧಾಂತಗಳ ಚೌಕಟ್ಟನ್ನು ಹೊಂದಿರುವ ಸಮಿತಿ. ನಾಡು ನುಡಿಗೆ ಗಂಡಾಂತರ ಒದಗಿದಾಗ ಚಳವಳಿ ಮಾಡುವುದು, ಸಾಹಿತ್ಯಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಕನ್ನಡ ಪುಸ್ತಕಗಳನ್ನು ಪ್ರಕಟಿಸುವುದು - ಹೀಗೆ ವೈಶಿಷ್ಟ್ಯ ಪೂರ್ಣ ಕಾರ್ಯಗಳನ್ನು ಸದ್ದುಗದ್ದಲವಿಲ್ಲದೆ, ಪ್ರಚಾರದ ಅಬ್ಬರವಿಲ್ಲದೆ ನಡೆಸಿಕೊಂಡು ಬರುತ್ತಿದೆ. ಇಷ್ಟೆಲ್ಲಾ ಕಾರ್ಯಗಳ ಹಿಂದೆ ರಾಮಣ್ಣನವರ ಅವಿರತ ಪರಿಶ್ರಮ ಇದೆ ಎಂದು ಅವರನ್ನು ಹತ್ತಿರದಿಂದ ಬಲ್ಲವರಿಗೆ ತಿಳಿದೇ ಇದೆ.ಇವರು ಸಮಿತಿಯ ಆಧಾರಸ್ತಂಭ, ಬೆನ್ನೆಲುಬು. ಮೊದಲಿಗೆ ಸಮಿತಿಗೆ ಆಜೀವ ಸದಸ್ಯರೇ ಇರಲಿಲ್ಲ. ಬ್ಯಾಂಕಿನಲ್ಲಿ ಖಾತೆಯನ್ನು ತೆರೆದಿರಲಿಲ್ಲ. ಅಧ್ಯಕ್ಷರಾದ ಮೇಲೆ ರಾಮಣ್ಣ ಅವನ್ನು ಅನುಷ್ಠಾನಗೊಳಿಸಲು ಶ್ರಮಿಸಿದರು. ಈಗ ಸಮಿತಿ ೫೦೦ಕ್ಕೂ ಹೆಚ್ಚು ವಿವಿಧ ವರ್ಗಗಳ ಸದಸ್ಯರನ್ನು ಹೊಂದಿದೆ. ಆರ್ಥಿಕವಾಗಿ ಬಲಗೊಂಡಿದೆ. ಕನ್ನಡಪರ ಹೋರಾಟದ ಸಂಘಟನೆಯೊಂದು ಈ ರೀತಿ ಆರ್ಥಿಕ ಸ್ವಾವಲಂಬನೆ ಸಾಧಿಸಿರುವುದಕ್ಕೆ ರಾಮಣ್ಣ ಅವರ ಶುದ್ಧಹಸ್ತ, ಅನವಶ್ಯಕ ವೆಚ್ಚಕ್ಕೆ ಕಡಿವಾಣ, ಲೆಕ್ಕಾಚಾರದಲ್ಲಿ ಯಾರ ಮುಲಾಜನ್ನೂ ನೋಡದಿರುವುದು ಕಾರಣ.

ಸಮಿತಿಯ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ನಿಗದಿತವಾಗಿ ನಡೆಯುವಂತೆ ಅವರು ಎಚ್ಚರ ವಹಿಸುತ್ತಾರೆ.ಯಾರಿಗಾದರೂ ಒಂದು ಕೆಲಸವನ್ನು ಒಪ್ಪಿಸಿದರೆ ಆ ಕೆಲಸವನ್ನು ಅವರು ಮಾಡುವವವರೆಗೂ ಅದರ ಬಗೆಗೆ ವಿಚಾರಿಸುತ್ತಿರುತ್ತಾರೆ. ಪ್ರತಿವರ್ಷ ಕುವೆಂಪು ,ಗೋವಿಂದ ಪೈ, ಅನುಪಮಾ ನಿರಂಜನ ಮತ್ತು ಬಸವರಾಜ ಕಟ್ಟೀಮನಿ ಅವರ ಹುಟ್ಟುಹಬ್ಬ ಕಾರ್ಯಕ್ರಮಗಳು ಯೋಜಿತ ರೀತಿಯಲ್ಲಿ ನಡೆದುಕೊಂಡು ಬರುತ್ತಿವೆ. ಆ ಸಂದರ್ಭದಲ್ಲಿ ನಾಡಿನ ಉದಯೋನ್ಮುಖ ಪ್ರತಿಭೆಗಳನ್ನು ಬೆಳಕಿಗೆ ತರುವ ಉದ್ದೇಶದಿಂದ ಪ್ರಬಂಧ, ಕವನ ಮತ್ತು ಕಥಾ ಸ್ಪರ್ಧೆಗಳು, ಕುವೆಂಪು ಗೀತೆಗಳ ಗಾಯನ ಸ್ಪರ್ಧೆಯನ್ನು ನಡೆಸುತ್ತಿದೆ. ಕನ್ನಡಪರ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸುವ ಕನ್ನಡ ಕಾರ್ಯಕರ್ತರನ್ನು ಗುರುತಿಸಿ 'ಕನ್ನಡ ಕಟ್ಟಾಳು' ಬಿರುದನ್ನು ಪ್ರತಿವರ್ಷ ನೀಡುವ ಮೂಲಕ ಅವರಲ್ಲಿ ಕನ್ನಡ ಸೇವೆಮಾಡುವ ಉತ್ಸಾಹವನ್ನು ಜೀವಂತವಾಗಿರುವಂತೆ ಮಾಡುತ್ತಿದೆ.

ಪುಸ್ತಕ ಪ್ರಕಟಣೆಗೂ ಸಮಿತಿ ಮುಂದಾಗಿದ್ದು ಇಲ್ಲಿಯತನಕ 'ಕುವೆಂಪು ಸಾಹಿತ್ಯದಲ್ಲಿ ಕನ್ನಡ ನಾಡುನುಡಿಗಳ ಪ್ರಜ್ಞೆ', 'ಕುವೆಂಪು ವಿಚಾರ ದರ್ಶನ', 'ಕನ್ನಡದ ಧೀಮಂತ ಹೋರಾಟಗಾರ ರಹಮಾನ್‌ಖಾನ್', 'ಕನ್ನಡ ಜನ ಕನ್ನಡ ಮನ', 'ವಿಕಸಿತೆ' ಕೃತಿಗಳನ್ನು ಸಮಿತಿ ಪ್ರಕಟಿಸಿದ ಜೊತೆಗೆ ಕುವೆಂಪು, ಗೋವಿಂದಪೈ ಅನುಪಮಾ ನಿರಂಜನ ಹುಟ್ಟು ಹಬ್ಬದ ಸಂದರ್ಭಗಳಲ್ಲಿ

ಪ್ರತಿವರ್ಷ ನೆನಪಿನ ಸಂಚಿಕೆಗಳನ್ನು ನಿಗದಿತ ದಿನಾಂಕದಂದು ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡುವುದಲ್ಲದೆ ಕಾರ್ಯಕ್ರಮಕ್ಕೆ ಆಗಮಿಸುವ ಎಲ್ಲರಿಗೂ ಉಚಿತವಾಗಿ ನೀಡುತ್ತಾ ಬಂದಿದೆ. ಇದು ನಿಜಕ್ಕೂ ಶ್ಲಾಘನೀಯ ಕಾರ್ಯ. ಮುದ್ರಣ ಕಾರ್ಯ ನಡೆಯುವಾಗ ರಾಮಣ್ಣ ಅವರು ಮುದ್ರಣಾಲಯ ಬಿಟ್ಟು ಕದಲುವುದಿಲ್ಲ. ಕರಡು ತಿದ್ದುವುದು, ಜಾಹೀರಾತು ಸಂಗ್ರಹಕ್ಕೆ ಓಡಾಟ, ಆಹ್ವಾನ ಪತ್ರಿಕೆ ಸಿದ್ಧಪಡಿಸುವುದು, ಬಹುಮಾನಗಳು, ನೆನಪಿನ ಕಾಣಿಕೆ ತರುವುದು, ಅತಿಥಿಗಳನ್ನು ಗೊತ್ತುಮಾಡುವುದು. ಇತ್ಯಾದಿ ಕಾರ್ಯಗಳನ್ನು ಮಾಡಿಕೊಂಡು ಮತ್ತೆ ಅಲ್ಲಿಗೇ ಬರುವರು. ಪುಸ್ತಕ ಮುಗಿಯುವವರೆಗೆ ಊಟ ನಿದ್ದೆಗಳು ಅವರಿಗೆ ಸರಿಯಾಗಿರುವುದಿಲ್ಲ.

ಸಮಾಜವಾದದಲ್ಲಿ ನಂಬಿಕೆ ಇಟ್ಟಿರುವ ಜಾತ್ಯಾತೀತ ಮನೋಭಾವದ ರಾಮಣ್ಣ ಕನ್ನಡ ಸಂಘರ್ಷ ಸಮಿತಿ, ಕನ್ನಡಪರ ಹಾಗೂ ಜನಪರ ಹೋರಾಟಗಳಲ್ಲಿ ತೊಡಗಿಕೊಳ್ಳುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಕನ್ನಡ ನಾಡು-ನುಡಿಯ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ, ಕೇಂದ್ರ ಸರ್ಕಾರಗಳ ಮೇಲೆ ಒತ್ತಾಯ ತರಲು ಹಾಗೂ ಕನ್ನಡಿಗರಲ್ಲಿ ಜಾಗೃತ ಮೂಡಿಸುವ ಉದ್ದೇಶದಿಂದ ಸಮಿತಿ ಪ್ರತಿವರ್ಷ ನವೆಂಬರ್ ೧ ರಾಜ್ಯೋತ್ಸವದ ದಿನದಂದು ಸಾಂಕೇತಿಕ ಧರಣಿಯನ್ನು ವ್ಯವಸ್ಥೆ ಮಾಡುತ್ತಾ ಬಂದಿದೆ.

ರಾಮಣ್ಣ ಎಂದರೆ ಕನ್ನಡ ಸಂಘರ್ಷ ಸಮಿತಿ; ಸಮಿತಿ ಎಂದರೆ ರಾಮಣ್ಣ ಎಂಬುದು ಈಗ ಚಿರಪರಿಚಿತ-ನಿಸ್ವಾರ್ಥವಾಗಿ ಕನ್ನಡ ಸೇವೆಯನ್ನು ಮಾಡುತ್ತಾ ಬರುತ್ತಿರುವ ಬಗೆಗೆ ಯಾರಾದರೂ ಉದಾಸೀನ ತೋರಿದರೆ, ಕೇವಲವಾಗಿ ಮಾತಾಡಿದರೆ ರಾಮಣ್ಣ ಮೌನವಹಿಸುವುದಿಲ್ಲ. ಅದಕ್ಕೆ ಪ್ರತಿಕ್ರಿಯೆ ಅವರಲ್ಲಿ ಸಿದ್ಧವಾಗಿರುತ್ತದೆ. ಗೋಕಾಕ ಚಳವಳಿಯ ಸಂದರ್ಭದಲ್ಲಿ ಸಾಹಿತಿ ಕಲಾವಿದರ ಬಳಗದಲ್ಲಿದ್ದ ಡಾ॥ ಪಿ.ವಿ. ನಾರಾಯಣ ಅವರು ಲಂಕೇಶ್ ಪತ್ರಿಕೆಯಲ್ಲಿ 'ಕನ್ನಡ ಗುಡಿಸಲಿನಲ್ಲಿ ೪೯ ದಿನಗಳ ಹೋರಾಟ' ಎಂಬ ಶೀರ್ಷಿಕೆಯ ಲೇಖನ ಬರೆಯುತ್ತಾ 'ಬಳಗ ಬೇರೊಂದು ಸಂಘಟನೆಯೊಡನೆ ಜೊತೆಗೂಡಿ ಕಾರ್ಯಕ್ರಮ ರೂಪಿಸಿತ್ತು' ಎಂದು ದಾಖಲಿಸಿದ್ದರು. ಅದನ್ನು ಗಮನಿಸಿದ ರಾಮಣ್ಣ ಪತ್ರಿಕೆಯ ಸಂಪಾದಕರಿಗೆ ಸ್ಪಷ್ಟೀಕರಣ ಕೊಟ್ಟು ಪ್ರತಿಕ್ರಿಯೆಯನ್ನು ಲೇಖನ ರೂಪದಲ್ಲಿ ಕಳುಹಿಸಿದರು. ದಿನಾಂಕ ೨೮-೩-೮೩ ರಂದು ನಗರದ ಮೈಸೂರು ಬ್ಯಾಂಕು ವೃತ್ತದಿಂದ ಕಬ್ಬನ್ ಉದ್ಯಾನದವರೆಗೆ ಮೆರವಣಿಗೆ ಸಂಘಟಿಸುವಲ್ಲಿ ಕನ್ನಡ ಸಂಘರ್ಷ ಸಮಿತಿ ಪ್ರಧಾನ ಪಾತ್ರ ವಹಿಸಿತ್ತು. ಹೀಗಿದ್ದರೂ ಲೇಖಕರು ಸಮಿತಿಯ ಹೆಸರನ್ನು ಉಲ್ಲೇಖಿಸದೆ 'ಮತ್ತೊಂದು ಸಂಘಟನೆ' ಎಂದು ಬರೆದು ಅಪಚಾರವೆಸಗಿದ್ದಾರೆ ಎಂದು ತೀಕ್ಷ್ಣವಾಗಿಯೇ ಬರೆದರು. ಆದರೆ ಪ್ರತಿಕ್ರಿಯೆ ಪ್ರಕಟವಾಗಲಿಲ್ಲ.

ರಾಮಣ್ಣ ಛಲವಾದಿ. ಹಿಡಿದ ಕಾರ್ಯವನ್ನು ಯಾವುದೇ ಅಡ್ಡಿ ಆತಂಕಗಳು ಎದುರಾದರೂ ಬಿಡದೆ ಸಾಧಿಸಿಯೇ ತೀರುತ್ತಾರೆ. ಅವರಲ್ಲಿ ಆತ್ಮಸ್ಥೈರ್ಯ, ಬತ್ತದ ಉತ್ಸಾಹಗಳಿವೆ. ಕುವೆಂಪು ಹುಟ್ಟುಹಬ್ಬ ಕಾರ್ಯಕ್ರಮಕ್ಕೆ ಸಿದ್ಧತೆಗಳು ನಡೆಯುತ್ತಿದ್ದವು. ಕಾವೇರಿ ಜಲವಿವಾದದ ಹಿನ್ನೆಲೆಯಲ್ಲಿ ಕನ್ನಡಪರ ಸಂಘಟನೆಗಳು 'ಬೆಂಗಳೂರು ಬಂದ್'ಗೆ ಕರೆಕೊಟ್ಟವು. ಕನ್ನಡ ಸಂಘರ್ಷ ಸಮಿತಿ ಆಗ ಪ್ರಮುಖ ಪಾತ್ರ ವಹಿಸಿತ್ತು. ರಾಜ್ಯ ಸರ್ಕಾರ ಬಂದನ್ನು ವಿಫಲಗೊಳಿಸಲು ಚಳವಳಿಯ ಮುಖಂಡರನ್ನು ಬಂಧಿಸಲು ಸೂಚಿಸಿತು. ಪೋಲೀಸರು ಆ ವೇಳೆಗೆ ಜಾಣಗೆರೆ ವೆಂಕಟರಾಮಯ್ಯ

ಮುಂತಾದವರನ್ನು ಬಂಧಿಸಿತ್ತು. ರಾಮಣ್ಣ ಅವರನ್ನೂ ಹುಡುಕಿತು. ಅವರ ಮನೆಯಿಂದ ಮುದ್ರಣಾಲಯಕ್ಕೆ ದೂರವಾಣಿ ಕರೆ ಬಂತು. ಪೋಲೀಸರು ಬಂದಿದ್ದರು ಎಂದು ಸುದ್ದಿ ತಿಳಿಯಿತು. ಮುದ್ರಣಾಲಯಕ್ಕೆ ಪೋಲೀಸರು ಬಂದರೆ ಮರುದಿನ ಬಿಡುಗಡೆಯಾಗಬೇಕಿರುವ ಕುವೆಂಪು ನೆನಪಿನ ಸಂಚಿಕೆಯ ಕಾರ್ಯ ಸ್ಥಗಿತಗೊಳ್ಳುವುದೆಂದು, ಶೌಚಾಲಯದಲ್ಲಿ ಬಚ್ಚಿಟ್ಟುಕೊಂಡು ರಾತ್ರಿ ಬಹಳ ಹೊತ್ತಿನವರೆಗೂ ಅಲ್ಲೇ ಇದ್ದು ಮುದ್ರಣ ಕಾರ್ಯ ಪೂರ್ಣಗೊಳಿಸಿ, ಸ್ನೇಹಿತರ ಮನೆಯಲ್ಲಿ ಮಲಗಿದ್ದು ಮುದ್ರಣಾಲಯದಿಂದ ಬೆಳಗ್ಗೆ ಕುವೆಂಪು ಹುಟ್ಟುಹಬ್ಬ ಕಾರ್ಯಕ್ರಮಕ್ಕೆ ಆಗಮಿಸಿದರು. ಪೋಲೀಸರು ಬಂದು ಒಂದು ವೇಳೆ ಬಂಧಿಸಿದರೂ ಕಾರ್ಯಕ್ರಮ ನಿಲ್ಲಬಾರದು ಎಂಬ ಉದ್ದೇಶದಿಂದ ಆಗ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ ನನಗೆ ಜವಾಬ್ದಾರಿಯನ್ನು ವಹಿಸಿದ್ದರು. ಆದರೆ ಅಲ್ಲಿಗೆ ಬಂದ ಪೋಲೀಸರು ಇವರನ್ನು ಬಂಧಿಸುವ ಸಾಹಸ ಮಾಡಲಿಲ್ಲ. ರಾಮಣ್ಣನವರು ತಮ್ಮ ತಂದೆ, ತಾಯಿ ನಿಧನರಾದಾಗ, ಸ್ವತಃ ಖಾಯಿಲೆಯಿಂದ ಬಳಲುತ್ತಿದ್ದಾಗಲೂ ಸಮಿತಿಯ ಚಟುವಟಿಕೆಗಳು ನಿಲ್ಲದಂತೆ ನಡೆಸುತ್ತಿದ್ದಾರೆ. ತಮ್ಮ ಮನೆ ಮಂದಿಯನ್ನೆಲ್ಲ ಕನ್ನಡ ಕಾರ್ಯದಲ್ಲಿ ತೊಡಗಿಸಿದ್ದಾರೆ.

ಸಮಿತಿ ದಿಢೀರ್ ಚಳವಳಿ, ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಸ್ವತಃ ಅವರೇ ಪತ್ರಿಕೆಗಳಿಗೆ ವಿಷಯ ಮುಟ್ಟಿಸಿ, ಅತಿಥಿಗಳನ್ನು ಗೊತ್ತುಪಡಿಸಿ, ಪದಾಧಿಕಾರಿಗಳಿಗೆ ಸುದ್ದಿ ಮುಟ್ಟಿಸುವ ಎಲ್ಲಾ ಕಾರ್ಯಗಳನ್ನು ಯಾವುದೇ ಮುಜುಗರವಿಲ್ಲದೆ ಮಾಡುತ್ತಾರೆ. ಸಾಮಾನ್ಯಕಾರ್ಯಕರ್ತನ ಕಛೇರಿಗೂ ಹೋಗಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ತಲುಪಿಸುತ್ತಾರೆ. ತಾವು ನಾಯಕ, ಉಳಿದವರು ತನ್ನ ಅನುಯಾಯಿಗಳು ಎಂದು ರಾಮಣ್ಣ ಎಂದೂ ಭಾವಿಸಿದವರಲ್ಲ. ಕಾರ್ಯಕರ್ತರನ್ನು ಗೆಳೆಯರಂತೆ ಕಾಣುವ ಹೃದಯವಂತಿಕೆ ಅವರಲ್ಲಿದೆ. ಸದಾ ಹಸನ್ಮುಖವಾಗಿ ಕಂಡರೂ ಮಾತು ಸ್ವಲ್ಪ ಒರಟು. ಆದರೆ ಮನಸ್ಸಿನಲ್ಲಿ ಕಲ್ಮಷವಿರುವುದಿಲ್ಲ. ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ಮುಕ್ತವಾಗಿ ಚರ್ಚಿಸುವ ಅವಕಾಶವನ್ನು ನೀಡುತ್ತಾರೆ. ಹಾಗೆಯೇ ಯಾರಿಗೆ ಎಷ್ಟು ಜವಾಬ್ದಾರಿ ಇರುತ್ತದೆ ಎಂಬುದನ್ನು ನೆನಪು ಮಾಡಿಸುತ್ತಾರೆ. 'ನಿಮ್ಮಲ್ಲಿ ಇಂತಹ ದೋಷವಿದೆ ರಾಮಣ್ಣ' ಎಂದರೆ ಅದನ್ನು ಸ್ವೀಕರಿಸಿ ತಿದ್ದಿಕೊಳ್ಳುವ ದೊಡ್ಡಗುಣ ರಾಮಣ್ಣ ಅವರದು. ತಾವು ನಂಬಿರುವ ಮೌಲ್ಯ, ಸಿದ್ಧಾಂತ, ಧೋರಣೆಗಳಿಗೆ ಅನುಗುಣವಾಗಿ ಕೆಲವೊಮ್ಮೆ ಅವರು ವಾದಕ್ಕಿಳಿಯುತ್ತಾರೆ. ಯಾರಲ್ಲೂ ವೈಯಕ್ತಿಕವಾಗಿ ದ್ವೇಷ ಬಯಸುವವರಲ್ಲ; ಇದು ಅವರ ಸ್ವಭಾವ.

ಹಣಕಾಸಿನ ವಿಚಾರದಲ್ಲಿ ತುಂಬಾ ಕಟ್ಟುನಿಟ್ಟು. ಯಾರೇ ಆಗಿದ್ದರೂ ಲೆಕ್ಕಾಚಾರದಲ್ಲಿ ಮುಲಾಜು ತೋರುವುದಿಲ್ಲ. ನಾನು ಸಮಿತಿಯ ಕಾರ್ಯದರ್ಶಿಯಾಗಿದ್ದ ದಿನಗಳಲ್ಲಿ ಆ ವೇಳೆಗೆ ಸಮಿತಿಯ ವತಿಯಿಂದ ಪ್ರಕಟವಾಗಿದ್ದ 'ಕುವೆಂಪು ವಿಚಾರ ದರ್ಶನ'ದ ಪ್ರತಿಯೊಂದು ಬೇಕು ಎಂದು ಕೇಳಿದೆ. ತಕ್ಷಣ ಪುಸ್ತಕವನ್ನು ನನ್ನ ಕೈಗಿತ್ತು ಹನ್ನೆರಡು ರೂಪಾಯಿ ಕೊಡು ಎಂದರು ನಾನು ಹಣ ಕೊಟ್ಟು ಪುಸ್ತಕ ಪಡೆದೆ. ಸಮಿತಿಯ ಒಂದು ರೂಪಾಯಿ ಕೂಡ ಅಪವ್ಯಯ ಆಗಬಾರದೆಂಬ ಕಾಳಜಿ ಅವರಿಗಿರುವುದು ಇಲ್ಲಿ ತಿಳಿಯುತ್ತದೆ.

ನಗರ ಜಿಲ್ಲಾ ಕಸಾಪ ಅಧ್ಯಕ್ಷರಾಗಿ

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಭಾರೀ ಬಹುಮತದಿಂದ ಗೆದ್ದ ರಾಮಣ್ಣ ಹೆಚ್ಚು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಧ್ಯಕ್ಷರಾದ ಆರಂಭದಲ್ಲಿ ಅವರು ಮಾಡಿದ ಮೊದಲ ಕೆಲಸ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ೧೬ ವಿಧಾನಸಭಾ ಕ್ಷೇತ್ರಗಳಲ್ಲೂ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕಗಳನ್ನು ಅಸ್ತಿತ್ವಕ್ಕೆ ತಂದರು. ಮೊದಲ ವರ್ಷ ಸಂಪೂರ್ಣ ಆ ಕಡೆಗೇ ಹೆಚ್ಚು ಗಮನವನ್ನು ಹರಿಸಿ ನಗರದ ಎಲ್ಲಾ ಬಡಾವಣೆಗಳಲ್ಲೂ ಕನ್ನಡದ ಕಹಳೆ ಮೊಳಗುವಂತೆ ಮಾಡಿದರು. ಅಲಸೂರಿನಲ್ಲಿರುವ ತಮಿಳು ಸಂಘದಲ್ಲಿ ಭಾರತಿ ನಗರ ಕ್ಷೇತ್ರ ಕಸಾಪ ಘಟಕದ ಉದ್ಘಾಟನಾ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿ ಪ್ರಶಂಸೆಗೊಳಗಾದರು. ಕನ್ನಡಪರ ಚಳವಳಿಗಾರರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಹತ್ತಿರಕ್ಕೆ ತಂದರು. ಅಷ್ಟೇ ಅಲ್ಲದೆ ಕೆಲವರನ್ನು ಕ್ಷೇತ್ರ ಘಟಕಗಳ ಅಧ್ಯಕ್ಷರನ್ನಾಗಿಯೂ ನೇಮಿಸಿದರು. ಕನ್ನಡ ಕಾರ್ಯಕರ್ತರು ಅಧ್ಯಕ್ಷರಾಗಿರುವ ಘಟಕಗಳೇ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಮಾಡುತ್ತಿರುವುದು. ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲೇ ಮೊದಲ ಬಾರಿಗೆ ಗೌರವ ಕಾರ್ಯದರ್ಶಿಯಾಗಿ ಮಹಿಳೆಯನ್ನು ನೇಮಕ ಮಾಡಿದ ಕೀರ್ತಿ ರಾಮಣ್ಣ ಕೋಡಿಹೊಸಹಳ್ಳಿ ಅವರಿಗೆ ಸಲ್ಲುತ್ತದೆ. ಎಲ್ಲಾ ಘಟಕಗಳು ತಿಂಗಳಿಗೆ ಕನಿಷ್ಟ ಒಂದಾದರೂ ಕಾರ್ಯಕ್ರಮವನ್ನು ಮಾಡಲೇಬೇಕೆಂದು ಕಡ್ಡಾಯಗೊಳಿಸಿ, ಪತ್ರಬರೆಯುವುದಲ್ಲದೆ ದೂರವಾಣಿ ಮೂಲಕ ಸಂಪರ್ಕಿಸಿ ಎಚ್ಚರಿಸುತ್ತಾರೆ. ಎಲ್ಲ ಘಟಕಗಳೂ ಜಾಗೃತಾವಸ್ಥೆಯಲ್ಲಿರುವಂತೆ ಮಾಡಿರುವುದು ಅವರ ಕಾರ್ಯವೈಖರಿಗೆ ಹಿಡಿದ ಕನ್ನಡಿಯಾಗಿದೆ.

ನಗರ ಜಿಲ್ಲೆ ತಿಂಗಳಿಗೆ ಸರಾಸರಿ ಮೂರು-ನಾಲ್ಕು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ರಾಮಣ್ಣ ಅವರ 'ಕನ್ನಡ ಜೋಳಿಗೆ'ಯಲ್ಲಿ ಸದಾ ಯಾವುದಾದರೂ ಆಹ್ವಾನ ಪತ್ರಿಕೆ ಇದ್ದೇ ಇರುತ್ತದೆ. 'ಕೇಂದ್ರ ಪರಿಷತ್ತಿಗಿಂತ ನಗರ ಜಿಲ್ಲಾ ಕಸಾಪ ಚೆನ್ನಾಗಿ ಕಾರ್ಯಕ್ರಮಗಳನ್ನು ಮಾಡುತ್ತಿದೆ' ಎಂದು ಕಸಾಪ ಮಾಜಿ ಅಧ್ಯಕ್ಷರಾದ ಜಿ.ನಾರಾಯಣ, ಗೊ.ರು. ಚನ್ನಬಸಪ್ಪ ಡಾ. ಹಂಪ ನಾಗರಾಜಯ್ಯ ಅವರುಗಳು ಸಮಾರಂಭಗಳಲ್ಲೇ ಹೇಳಿದ್ದಾರೆ.

ನಗರ ಜಿಲ್ಲಾ ಕಸಾಪ ಈಗ ಕೇಂದ್ರ ಪರಿಷತ್ತು ನಡೆಸುತ್ತಿದ್ದಂತೆ 'ಕಾವ್ಯಕಾವೇರಿ' ಕಾರ್ಯಕ್ರಮವನ್ನು ಪ್ರತಿ ತಿಂಗಳ ಮೊದಲನೆಯ ಶನಿವಾರದಂದು ನಡೆಸುತ್ತಿದೆ. ಇದೇ ರೀತಿಯ ಕಾರ್ಯಕ್ರಮವನ್ನು 'ಕಾವ್ಯಗಂಗಾ' ಸುಮಾರು ಒಂದು ವರ್ಷ ಪ್ರತಿ ತಿಂಗಳು ನಡೆಸಲಾಯಿತು. 'ಸಂಕ್ರಾಂತಿ ಸಾಹಿತ್ಯೋತ್ಸವ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ರಾಮಣ್ಣ ಅವರು ಪ್ರತಿವರ್ಷ ರೂಪಿಸಿ ನಡೆಸುತ್ತಿದ್ದಾರೆ. ಉದಯೋನ್ಮುಖ ಕವಿ, ಕವಿಯತ್ರಿಯರಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ವ್ಯವಸ್ಥೆಗೊಳಿಸುವ ಕವಿಗೋಷ್ಠಿಗಳಲ್ಲಿ ಅವಕಾಶಗಳನ್ನೂ ಕಲ್ಪಿಸಿಕೊಡುತ್ತಾ ಬಂದಿದ್ದಾರೆ. ಕುವೆಂಪು, ಬೇಂದ್ರೆ ಸ್ಮರಣೆ ಕಾರ್ಯಕ್ರಮ ನಿಗಧಿತವಾಗಿ ನಡೆಯುತ್ತಿವೆ. ಇತ್ತೀಚೆಗೆ ನಿಧನರಾದ ನಾಡಿನ ಹಿರಿಯ ಸಾಹಿತಿ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ॥ ಕೋಟ ಶಿವರಾಮ ಕಾರಂತ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮವನ್ನು ಕೇವಲ ಒಂದೇ ದಿನದಲ್ಲಿ ವ್ಯವಸ್ಥೆಗೊಳಿಸಿ ಎಲ್ಲರ ಮೆಚ್ಚುಗೆಯನ್ನು ರಾಮಣ್ಣ ಕೋಡಿಹೊಸಹಳ್ಳಿ ಅವರು ಪಡೆದರು.

ನಗರ ಜಿಲ್ಲಾ ಕಸಾಪಗೆ ಎರಡು ಕೊಠಡಿಗಳ ಹೊಸ ಕಛೇರಿಯನ್ನು ಪಡೆಯುವಲ್ಲಿ ರಾಮಣ್ಣ ಅವರ ಅವಿರತ ಹೋರಾಟವಿದೆ. ಕಛೇರಿಗೆ ಕನ್ನಡ ಬೆರಳಚ್ಚು ಯಂತ್ರ ಬಂದಿದೆ. ಸ್ನೇಹಿತರಿಂದ ಕಬ್ಬಿಣದ ಬೀರು, ಗ್ಯಾಸ್‌ಲೈಟುಗಳು ಕೊಡುಗೆ ರೂಪದಿಂದ ಬಂದಿವೆ. ಕಛೇರಿಯೊಂದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳು ಈಗ ನಗರ ಜಿಲ್ಲಾ ಕಸಾಪಗೆ ಲಭ್ಯವಾಗಿವೆ.

ರಾಮಣ್ಣ ಕೋಡಿಹೊಸಹಳ್ಳಿ ಅವರಲ್ಲಿ ಕನ್ನಡದ ಬದ್ಧತೆ ಇದೆ. ಮಹಾಕವಿ ಕುವೆಂಪು ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಅದನ್ನು ತಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಂಡು ಕನ್ನಡಮ್ಮನ ಸೇವೆಗೈಯ್ಯುತ್ತಿದ್ದಾರೆ. ಕಾರ್ಯಕರ್ತರೊಡನೆ ಕಾರ್ಯಕರ್ತರಾಗಿ ನಾಯಕರೊಡನೆ ನಾಯಕರಾಗಿ ಸದಾ ಹಸನ್ಮುಖರಾಗಿ ನಿರಂತರವಾಗಿ ನಾಡು ನುಡಿಗೆ ಕೈಂಕಾರ್ಯ ಸಲ್ಲಿಸುತ್ತಿದ್ದಾರೆ. 'ರಾಮಣ್ಣ ಮುಖಕ್ಕೆ ಹೊಡೆದಂತೆ ಮಾತನಾಡಿ' ವೈಯಕ್ತಿಕ ಟೀಕೆಗಳನ್ನು ಮಾಡುತ್ತಾರೆ. ಎಲ್ಲರನ್ನೂ ಎದುರುಹಾಕಿಕೊಳ್ಳುತ್ತಾರೆ' ಎಂಬ ಆರೋಪ ಇದೆ. ಈ ಹೇಳಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಸತ್ಯಾಂಶವಿದ್ದರೂ ಅದೇ ರಾಮಣ್ಣ ಅವರ ವ್ಯಕ್ತಿತ್ವದ ವೈಶಿಷ್ಟ್ಯವೂ ಆಗಿದೆ.

ಕನ್ನಡ ಸಂಘರ್ಷ ಸಮಿತಿ ಹಾಗೂ ಬೆಂಗಳೂರು ನಗರ ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಎರಡೂ ಸಂಸ್ಥೆಗಳ ನೊಗವನ್ನು ಏಕಕಾಲಕ್ಕೆ ಹೊತ್ತು ಕನ್ನಡ ತೇರನ್ನೆಳೆಯುತ್ತಿರುವ ರಾಮಣ್ಣ 'ಕನ್ನಡ ಕಾಯಕದಲ್ಲಿಲ್ಲ ಕಮ್ಮಿ ಜಾಸ್ತಿ' ಎಂಬ ಬೇಂದ್ರೆಯವರ ಮಾತನ್ನು ಮೈಗೂಡಿಸಿ ಕೊಂಡಿದ್ದಾರೆ. ಯಾವುದೇ ಜವಾಬ್ದಾರಿಯನ್ನಾದರೂ ಸಮರ್ಥವಾಗಿ ನಿರ್ವಹಿಸಬಲ್ಲ ಸಾಮರ್ಥ್ಯ ಅವರಲ್ಲಿದೆ. ಇವರಿಂದ ಕನ್ನಡ ನಾಡು, ನುಡಿಗೆ ಹೊಸ ಆಯಾಮ ಲಭ್ಯವಾಗುತ್ತಿದೆ. ಇನ್ನೂ ಹೆಚ್ಚು ಹೆಚ್ಚು ಕಾರ್ಯಗಳನ್ನು ಮಾಡುವ ಅವಕಾಶಗಳು ಅವರಿಗೆ ಲಭ್ಯವಾಗಲಿ ಎಂದು ಆಶಿಸುತ್ತೇನೆ.

*

ನೆನಪಿನ ಬುತ್ತಿ ಬಿಚ್ಚಿದಾಗ

ರಾಮಣ್ಣ ಕೋಡಿಹೊಸಹಳ್ಳಿ

ನನಗೆ ಐವತ್ತು ವರ್ಷ ತುಂಬಿದ ನೆನಪಿಗಾಗಿ ಆತ್ಮೀಯ ಮಿತ್ರರು ಅಭಿನಂದನ ಗ್ರಂಥವೊಂದನ್ನು ಸಮರ್ಪಿಸುವ ಸಾಹಸ ಮಾಡಿದ್ದಾರೆ. ಅವರ ದೈನಂದಿನ ಬದುಕು, ಕೆಲಸ-ಕಾರ್ಯಗಳ ಜೊತೆಗೆ ಸಮಯ ಮಾಡಿಕೊಂಡು ಈ ಕೆಲಸ ಮಾಡಬೇಕಾಗಿರುವುದರಿಂದ ಐವತ್ತು ತುಂಬಿದಾಗ ಚಿಗುರಿದ ಆಲೋಚನೆ ಐವತ್ತೊಂದು ತುಂಬಿದ ಬಳಿಕವಾದರೂ ಕಾರ್ಯರೂಪಕ್ಕೆ ಬರುತ್ತಿರುವುದು ಸಂತಸದ ಸಂಗತಿ. ನಾನಾದರೋ ರಾಜಕಾರಣಿಯಲ್ಲ; ಅಧಿಕಾರಸ್ಥ ರಾಜಕಾರಣಿಗಳ ಹಾಗೂ ಅಧಿಕಾರಿಗಳ ಬಳಿ ಹೊಕ್ಕು-ಬಳಕೆ ಇಟ್ಟುಕೊಂಡವನೂ ಅಲ್ಲ. ಕಳೆದ ಮೂವತ್ತೈದು ವರ್ಷಗಳಿಂದ ಕನ್ನಡ ನಾಡು-ನುಡಿ-ನಾಡಿಗರ ಹತ್ತು ಹಲವು ಸಮಸ್ಯೆಗಳಿಗೆ ಹತ್ತಿರದ ಸ್ನೇಹಿತರನ್ನು ಕೂಡಿಕೊಂಡು ಕೈಗೆಟುಕುವಷ್ಟು ಕೆಲಸ-ಕಾರ್ಯಗಳನ್ನು ನಿಷ್ಠೆ-ಪ್ರಾಮಾಣಿಕತೆಯಿಂದ ಮಾಡಿಕೊಂಡು ಬಂದವನು. ಸ್ವಂತ ಬದುಕಿಗಾಗಿ ಪತ್ರಿಕಾವೃತ್ತಿಯನ್ನು ಆಯ್ಕೆಮಾಡಿಕೊಂಡರೂ ಅದನ್ನು ಸ್ವಾರ್ಥ ಮಹತ್ವಾಕಾಂಕ್ಷೆಯ ಸಾಧನವನ್ನಾಗಿ ಮಾಡಿಕೊಳ್ಳಲಿಲ್ಲ. ಬದಲಿಗೆ ಕನ್ನಡ ಪರ-ಜನಪರ ಕಾಳಜಿಗಾಗಿ, ದೀನ-ದಲಿತರು, ಹಿಂದುಳಿದವರು, ರೈತರು, ಕೂಲಿಕಾರರು, ಮಹಿಳೆಯರೇ ಮೊದಲಾದ ಶೋಷಣೆಗೀಡಾದ ಬಹುಜನ ಸಮುದಾಯದ ಹಿತಚಿಂತನೆಗಾಗಿ ಬಳಸಿಕೊಂಡವನು.

ವೃತ್ತಿ ಹಾಗೂ ಬದುಕಿನಲ್ಲಿ ಯಾರನ್ನೂ ಅಂಧಾನುಕರಣೆ ಮಾಡದ ನಾನು ಆತ್ಮಸಾಕ್ಷಿಗನುಗುಣವಾಗಿ ನನಗೆ ಸರಿಕಂಡ ವಿಚಾರಗಳ ಬಗೆಗೆ ನ್ಯಾಯ-ನಿಷ್ಠುರವಾಗಿ ನಡೆದುಕೊಂಡು ಬಂದವನು. ವ್ಯಾಸಂಗ, ವೃತ್ತಿ, ಸಾರ್ವಜನಿಕ ಚಟುವಟಿಕೆಗಳಲ್ಲಿ ಗುರು ಸಮಾನರೆಂದು ಗೌರವಿಸುವ ವರೊಡನೆ ಸಹ ಅವರ ಆಚಾರ-ವಿಚಾರಗಳು ನನಗೆ ಸರಿಕಾಣದೆ ಹೋದಾಗ ನೇರವಾಗಿ ಟೀಕಿಸುವಲ್ಲಿ ಯಾವ ಹಿಂಜರಿಕೆಯನ್ನೂ

ತೋರದವನು. ಅಧಿಕಾರಸ್ಥ ರಾಜಕಾರಣಿಗಳು, ಅವರು ಎಷ್ಟೇ ಹತ್ತಿರದವರಿರಲಿ, ಅವರ ತಪ್ಪು ತಡೆಗಳನ್ನು ನಿರ್ದಾಕ್ಷಿಣ್ಯವಾಗಿ ಜನರೆದುರಿಟ್ಟು ಛೀಮಾರಿ ಹಾಕಿದವನು. ಇಂತಹ ನನಗೆ ಅಭಿನಂದನ ಕಾರ್ಯಕ್ರಮ ಹಮ್ಮಿಕೊಂಡಾಗ ಸಹಜವಾಗಿಯೇ ಇದಕ್ಕೆ ಸ್ಪಂದಿಸುವವರು ವಿರಳ. ಆದರೂ ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ಗೆಳೆಯರು ಪಟ್ಟುಬಿಡದೆ ಇದನ್ನು ಆಗುಮಾಡುತ್ತಿರುವ ಸಾಹಸ ಮೆಚ್ಚತಕ್ಕ ಸಾಧನೆಯೆಂದೇ ಹೇಳಬೇಕು.

ನಾನು ವಿದ್ಯಾರ್ಥಿಯಾದಾಗಿನಿಂದಲೂ ಕಾಲೇಜಿರಬಹುದು, ಹೊರಗಿರಬಹುದು ಹಲವಾರು ಸಂಘ-ಸಂಸ್ಥೆಗಳಲ್ಲಿ ದುಡಿಯುತ್ತಾ ಬಂದಿರುವೆ. ಅವುಗಳಲ್ಲೆಲ್ಲಾ ನನ್ನ ಜೊತೆ ಕೆಲಸಮಾಡಿದ ಅನೇಕ ಗೆಳೆಯರು ನನ್ನ ಶಿಸ್ತು-ಸಿಡುಕುತನಗಳ ಬಗೆಗೆ ಬೇಸರಗೊಂಡಿರುವುದುಂಟು. ಕನ್ನಡ ಸಂಘರ್ಷ ಸಮಿತಿ ಹೊಣೆಗಾರಿಕೆಯನ್ನು ಹೊತ್ತುಕೊಂಡ ಮೇಲೆ ಇಲ್ಲಿನ ಜೊತೆಗಾರರಿಗೂ ಸಹ ಶಿಸ್ತು-ಸಮಯಪಾಲನೆ-ಅಚ್ಚುಕಟ್ಟುತನಗಳಿಗಾಗಿ ಆಗಾಗ ಬಿರುನುಡಿಗಳನ್ನಾಡಿದ್ದೇನೆ. ನನ್ನ ಈ ಟೀಕೆ-ವರ್ತನೆಯು ವ್ಯಕ್ತಿಗತವಾಗಿರದೆ ವಿಷಯಾಧಾರಿತವೆಂಬುದನ್ನು ಮನಗಂಡಿರುವ ಕೆಲ ಜೊತೆಗಾರರು ನನ್ನಿಂದ ದೂರಸರಿಯದೆ ಅದೇ ಪ್ರೀತಿ-ವಿಶ್ವಾಸಗಳಿಂದ ಜೊತೆಗೂಡಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲೇ ಕೆಲವರು ಮುಂದೆ ನಿಂತು ಈ ಅಭಿನಂದನ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ನನ್ನ ಕನ್ನಡದ ಕಾಯಕ ನಿಷ್ಠೆಗೆ ಗೌರವ ತೋರಿ ನಡೆಸಲಾಗುತ್ತಿರುವ ಈ ಕಾರ್ಯಕ್ರಮಕ್ಕೆ ನಾನೆಷ್ಟು ಅರ್ಹ ಎಂಬುದನ್ನು ನನ್ನನ್ನು ಬಹುಕಾಲದಿಂದ ಬಲ್ಲವರು ಹೇಳಬೇಕು.ಆದರೆ ಇಷ್ಟಂತೂ ನಿಜ. ನಾನು ಎಂದೂ ಯಾವುದೇ ಸ್ವಾರ್ಥ ಮಹತ್ವಾಕಾಂಕ್ಷೆ ಇಟ್ಟುಕೊಂಡು ಕನ್ನಡ ಉಳಿಸುವ-ಬೆಳೆಸುವ ಕೆಲಸದಲ್ಲಿ ತೊಡಗಲಿಲ್ಲ. ಈ ನಾಡಿನಲ್ಲಿ ಹುಟ್ಟಿದ ನಾನು ಈ ನಾಡಿಗಾಗಿ ನನ್ನ ಕೈಲಾದ ಒಳ್ಳೆ ಕೆಲಸವನ್ನು ಮಾಡಬೇಕೆಂಬ ಕರ್ತವ್ಯ ಪ್ರಜ್ಞೆಯಿಂದ ಕಾರ್ಯಮಗ್ನನಾಗಿದ್ದೇನೆ. ಅಭಿನಂದನ ಕಾರ್ಯಕ್ರಮದ ಅಂಗವಾಗಿ ಹೊರತರುತ್ತಿರುವ ಅಭಿನಂದನ ಗ್ರಂಥಕ್ಕೆ ನಾನು ಬೆಳೆದು ಬಂದ ವಿಚಾರವಾಗಿ ಲೇಖನವೊಂದನ್ನು ಸಂಪಾದಕ ಮಿತ್ರರು ಕೇಳಿದ್ದಾರೆ. ಇಂತಹ ಪರಿಸ್ಥಿತಿ ಬರುತ್ತದೆ ಎಂದು ನಾನು ಯಾವತ್ತೂ ನಿರೀಕ್ಷಿಸಿರಲಿಲ್ಲ. ದಿನಚರಿಯನ್ನು ಬರೆದಿಟ್ಟವನು ನಾನಲ್ಲ. ಹೀಗಾಗಿ ಕೇವಲ ನೆನಪಿನ ಬುತ್ತಿಯನ್ನು ಬಿಚ್ಚಿ, ಅದರಲ್ಲಿ ಗೋಚರಿಸಿದಷ್ಟನ್ನು ಮಾತ್ರ ಇಲ್ಲಿ ನಿಮ್ಮ ಮುಂದೆ ಇಡಬಯಸುತ್ತೇನೆ.

ಬಾಲ್ಯ

ನನ್ನ ಹೆಸರಿನೊಡನೆ ಅಂಟಿಕೊಂಡಿರುವ ಕೋಡಿಹೊಸಹಳ್ಳಿ ನನ್ನ ಹುಟ್ಟೂರು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಒಂದು ಕುಗ್ರಾಮ. ನಾನು ಚಿಕ್ಕವನಾಗಿದ್ದಾಗ ೫೦-೬೦ ಮನೆಗಳಿದ್ದುದು ಈಗ ನೂರಿದ್ದರೆ ಹೆಚ್ಚು. ಜನ ಸಂಖ್ಯೆಯೂ ಸಹ ೫೦೦-೬೦೦ ಇದ್ದಿರಬಹುದು ಅಷ್ಟೆ. ಹೆಸರಿಗೆ ಪ್ರಾಥಮಿಕ ಶಾಲೆ ಇತ್ತು. ಶಿಕ್ಷಕರು ಬಂದಾಗ ಯಾರದೋ ಪಡಸಾಲೆ ಮೇಲೆ ಪಾಠ ಹೇಳಿಕೊಡುತ್ತಿದ್ದರು. ಆಶ್ಚರ್ಯದ ಹಾಗೂ ಅಪರೂಪದ ಸಂಗತಿಯೆಂದರೆ ನಮ್ಮೂರಿನಲ್ಲಿ ಒಂದೇ ಒಂದು ದೇವಸ್ಥಾನವೂ ಇರಲಿಲ್ಲ. ಈಗಲೂ ಇಲ್ಲ. ಇದರ ಪರಿಣಾಮವೋ ಏನೋ ನಮ್ಮೂರಿನಲ್ಲಿ ಬ್ರಾಹ್ಮಣರ ಹಾಗೂ ಲಿಂಗಾಯಿತರ ಒಂದು ಕುಟುಂಬವೂ ಸಹ ಇಲ್ಲ.

ನಮ್ಮ ತಂದೆ ದಿ॥ ಹುಚ್ಚೇಗೌಡರು ಶಾಲೆಯಲ್ಲಿ ಕಲಿತವರಲ್ಲ. ಕೂಲಿಮಠದಲ್ಲಿ ಕನ್ನಡವನ್ನು ಚನ್ನಾಗಿ ಕಲಿತು ವ್ಯವಹಾರ ಜ್ಞಾನಗಳಿಸಿಕೊಂಡಿದ್ದರು. ತಾಯಿ ನಿಂಗಮ್ಮ ನಿರಕ್ಷರ ಕುಕ್ಷಿ.ಈ ದಂಪತಿಗಳಿಗೆ ಅಳಿದುಳಿದ .ನಾಲ್ಕು ಮಕ್ಕಳಲ್ಲಿ ಕೊನೆಯವನು ನಾನು. ಮೊದಲ ಮೂವರು ಹೆಣ್ಣುಮಕ್ಕಳು. ನನ್ನ ದೊಡ್ಡಕ್ಕ ಶ್ರೀಮತಿ ಸಾವಿತ್ರಮ್ಮ ಒಬ್ಬರೇ ಮಾಧ್ಯಮಿಕ ಶಾಲೆಮಟ್ಟಿಲು ಹತ್ತಿದ್ದವರು. ಕೊನೆಯವರಾದ ಶ್ರೀಮತಿ ಕೆಂಪಮ್ಮ ನನ್ನೊಟ್ಟಿಗೇ ೪ ನೇ ತರಗತಿ ವರೆಗೆ ಕಲಿತವರು. ಮಧ್ಯದವರಾದ ಶ್ರೀಮತಿ ಜಯಮ್ಮ ೨ನೇ ತರಗತಿಗೇ ಶಾಲೆಗೆ ಬೆನ್ನುತೋರಿದ್ದರು. ಒಬ್ಬನೇ ಮಗನೆಂದು ನನ್ನನ್ನು ಅಕ್ಕರೆಯಿಂದ ಬೆಳೆಸಿದರು. ನಮ್ಮ ತಾತ (ತಂದೆಯವರ ತಂದೆ) ದಿ॥ ರಾಮೇಗೌಡರು ಮತ್ತು ಅಜ್ಜಿ ದಿ॥ ಕೆಂಪಮ್ಮ ಇವರಿಗೂ ನಾನು ಪ್ರೀತಿಪಾತ್ರ ಮೊಮ್ಮಗ. ಕಾರಣ ನನ್ನ ಮೂವರು ಚಿಕ್ಕಪ್ಪಂದಿರಿಗೂ (ದಿ॥ ವೆಂಕಟೇಗೌಡ, ದಿ॥ಕಳಸೇಗೌಡ ಮತ್ತು ವೆಂಕಟಗಿರಿಗೌಡ) ಮೊದಲಿನವರೆಲ್ಲಾ ಹೆಣ್ಣು ಮಕ್ಕಳೇ ಆಗಿದ್ದುದರಿಂದ, ಇಡೀ ಹಟ್ಟಿಯಲ್ಲಿ ಹಾಗೂ ಅಕ್ಕ ಪಕ್ಕದ ಮರಾಠಿಗರ ಮನೆಗಳಲ್ಲಿ ನಾನೇ ಮುದ್ದಿನ ಮಗುವಾಗಿದ್ದೆ. ನಮ್ಮ ತಂದೆ ನನ್ನನ್ನು ರೈತಾಪಿ ಕೆಲಸಕ್ಕೆ ತೊಡಗಿಸಿಕೊಂಡರೆ ಓದಿನಲ್ಲಿ ಆಸಕ್ತಿ ಕಡಿಮೆಯಾಗಿ ಬಿಡಬಹುದೆಂದು ಅವೆಲ್ಲವುಗಳಿಂದ ದೂರವೇ ಇಟ್ಟಿದ್ದರು. ಆಸ್ತಿ ಭಾಗವಾಗಿ ಬೇರೆ ಇದ್ದ ಅವರು ಕೃಷಿ ಕೆಲಸಗಳಲ್ಲಿ ತಮಗೆ ಸಹಾಯ ಮಾಡಲು ಆಳನ್ನು ಇಟ್ಟುಕೊಂಡಿದ್ದರು. ನನ್ನ ಪ್ರಾಥಮಿಕ ವಿದ್ಯಾಭ್ಯಾಸ ನಮ್ಮೂರಲ್ಲೇ ನಡೆಯಿತು. ನಮ್ಮೂರಿಗೆ ಶಿಕ್ಷಕರು ಬಾರದಿದ್ದಾಗ ನನ್ನ ತಾಯಿ ಊರಾದ ಉಜ್ಜನಹಳ್ಳಿಯಲ್ಲಿ ಆಗಾಗ ನಡೆದದ್ದುಂಟು.

ಪ್ರಾಥಮಿಕ ನಾಲ್ಕನೆಯ ತರಗತಿ ಪರೀಕ್ಷೆ ಮುಗಿಯುತ್ತಿದ್ದಂತೆ ನಾನು ವಿಷಮಶೀತ ಜ್ವರ ಪೀಡಿತನಾಗಿದ್ದೆ. ನಮ್ಮ ಪಕ್ಕದ ಭೂಹಳ್ಳಿಯ ಮರಾಠಿ ನಾಟಿ ವೈದ್ಯರೊಬ್ಬರು ಚಿಕಿತ್ಸೆ ನೀಡಿ ಆರೋಗ್ಯ ಸುಧಾರಿಸಿದ್ದಿತು. ತಿಂಗಳಾನುಗಟ್ಟಲೆ ಜ್ವರವಿದ್ದುದರಿಂದ ಬಾಯಿಕೆಟ್ಟಿದೆ ಎಂದು ಹೇಳಿ ನಮ್ಮ ಅಜ್ಜಿ ಬಹುಪ್ರೀತಿಯಿಂದ ಮೊಲದ ಮಾಂಸದ ಸಾರಿನಲ್ಲಿ ಅನ್ನ ತಿನ್ನುಸಿದ್ದರು. ವೈದ್ಯರು ಪಥ್ಯೆ ಹೇಳಿದ್ದುದು ನಮ್ಮ ತಂದೆಗೆ ಮಾತ್ರಗೊತ್ತಿತ್ತು. ಮೊಮ್ಮಗನಿಗೆ ಬಡಿಸಿದ ಪ್ರೀತಿಯ ಭಕ್ಷ್ಯ ಅವನ ಆರೋಗ್ಯಕ್ಕೆ ಮುಳುವಾಗುವುದೆಂದು ಅಜ್ಜಿಗೆ ಗೊತ್ತಿದ್ದರೆ ತಾನೆ. ಬಹಳ ದಿವಸದಿಂದ ನಾಟೀ ವೈದ್ಯರ ಔಷಧ ಸೇವಿಸಿ ಬಾಯಿಯೆಲ್ಲಾ ಕಹಿಯಾಗಿದ್ದರಿಂದ ನಾನು ಚಪ್ಪರಿಸಿ ಮೊಲದ ಮಾಂಸ ಸೇವಿಸಿದ್ದೆ. ಇದರ ಪರಿಣಾಮ ವಿಷಮಸೀತಜ್ವರ ಮತ್ತೆ ಮರುಕಳಿಸಿತು. ಅದೇ ನಾಟಿ ವೈದ್ಯರ ಔಷಧ ಯಾವ ಪರಿಣಾಮವನ್ನು ಉಂಟುಮಾಡಲಿಲ್ಲ. ದಿನೇ ದಿನೇ ಕೃಶವಾಗಿ ಬದುಕುವುದೇ ಕಷ್ಟ ಎಂಬ ಪರಿಸ್ಥಿತಿ ಕಂಡಾಗ ನಮ್ಮ ದೊಡ್ಡ ಸೋದರ ಮಾವ ದಿ॥ಬಾಲೇಗೌಡರ ಸಲಹೆಮೇರೆಗೆ ಅವರು ಶಿಕ್ಷಕರಾಗಿ ವಾಸವಾಗಿದ್ದ ಕಾನಕಾನಹಳ್ಳಿಗೆ (ಕನಕಪುರ) ಕಾಗಡಿಯಲ್ಲಿ ಮಲಗಿಸಿ ತಂದೆಯವರು ಹೊತ್ತಿಸಿಕೊಂಡು ಕಾಲದಾರಿಯಲ್ಲಿ ನಡೆದೇ ಕರೆದೊಯ್ದರಂತೆ. ಕಾರಣ ಬಸ್ಸಿನಲ್ಲಿ ನೂಕು ನುಗ್ಗಲು ಹಾಗು ಕುಲುಕಾಟದಲ್ಲಿ ಎಲ್ಲಿ ಉಸಿರು ನಿಂತು ಹೋಗಿ ಬಿಡುವುದೋ ಎಂಬ ಭಯ. ಕನಕಪುರದಲ್ಲಿ ಡಾ॥ ಸೀತಾರಾಮಯ್ಯ ಎಂಬ ವೈದ್ಯರು ನನಗೆ ಸೂಕ್ತ ಚಿಕಿತ್ಸೆ ಒದಗಿಸಿ ಒಂದು-ಒಂದೂವರೆ ತಿಂಗಳ ಸತತ ಪ್ರಯತ್ನದೊಂದಿಗೆ ನನ್ನನ್ನು ಉಳಿಸಿದರೆಂದು ತಂದೆ ಹೇಳುತ್ತಿದ್ದರು. ಆಗ ತಂದೆಯವರು ಎಲ್ಲ ಕೃಷಿ ಕೆಲಸ ಬಿಟ್ಟು ಕನಕಪುರದಲ್ಲೇ ಬಾಲೇಗೌಡರ ಮನೆಯಲ್ಲಿ ಉಳಿದು ನನ್ನನ್ನು ನೋಡಿಕೊಂಡರು. ಆಗಿನ್ನೂ ವಿದ್ಯಾರ್ಥಿಯಾಗಿದ್ದ ನನ್ನ

ಇಂಜನಿಯರ್ ಸೋದರಮಾವ ಕಾಲೇಜಿಗೆ ರಜೆ ಇದ್ದ ಕಾರಣ ತಂದೆಯವರಿಗೆ ಸಹಾಯಮಾಡಿಕೊಂಡಿದ್ದರಂತೆ. ಕನಕಪುರದಿಂದ ಊರಿಗೆ ಮರಳಿದ ಬಳಿಕವೂ ಎರಡು ಮೂರು ತಿಂಗಳು ಬಹಳ ಪಥ್ಯವಿರಬೇಕಾಯಿತು. ಆದರೆ ಈ ಅವಧಿಯಲ್ಲಿ ನಾನೇ ಬಾಯಿರುಚಿಯ ತಿನಿಸುಗಳಿಗೆ ಆಸೆಪಡಲಿಲ್ಲ. ಬಹಳ ಕಟ್ಟುನಿಟ್ಟಿನಿಂದ ಪಥ್ಯವಿದ್ದೆ. ಆಗ ನನಗೆ ಸೂಕ್ತ ಚಿಕಿತ್ಸೆ ನೀಡಿದ ವೈದ್ಯರು ಹಾಗೂ ನನ್ನನ್ನು ಬದುಕಿಸಿಕೊಳ್ಳಲು ಶತಪ್ರಯತ್ನಪಟ್ಟ ತಂದೆ, ತಾಯಿ, ಬಂಧು-ಬಳಗಕ್ಕೆ ನಾನು ಅತ್ಯಂತ ಕೃತಜ್ಞನು.

ಬೆಂಗಳೂರಿಗೆ ಆಗಮನ

ನನ್ನ ದೊಡ್ಡಕ್ಕನ ಮದುವೆ ಬೆಂಗಳೂರಿನಲ್ಲಿ ಮನೆಕಟ್ಟಿಸುವ ಸಣ್ಣ-ಪುಟ್ಟ ಗುತ್ತಿಗೆ ಕೆಲಸದಲ್ಲಿ ತೊಡಗಿದ್ದ ನನ್ನ ಇನೆಯ ಸೋದರಮಾವ ದಿ॥ ಕಾಡಯ್ಯನವರೊಡನೆ ಜರುಗಿತು. ಇವರು ೧೯೫೫ರ ಸುಮಾರಿಗೆ ಬೆಂಗಳೂರಿನಲ್ಲಿ ಹೊಸ ಸಂಸಾರ ಹೂಡಿದಾಗ ಅಕ್ಕನ ಜೊತೆ ನಾನೂ ಬಂದೆ. ಆ ವೇಳೆಗೆ ೪ನೆಯ ತರಗತಿ ಮುಗಿಸಿದ್ದ ನಾನು ಗಾಂಧಿನಗರ ಆರ್ಯ ವಿದ್ಯಾಶಾಲೆಯಲ್ಲಿ ೫ನೆಯ ತರಗತಿ ಪರೀಕ್ಷೆ ಮುಗಿಸಿ, ೬ರಿಂದ ೮ರವರೆಗಿನ ಶಿಕ್ಷಣವನ್ನು ಅದೇ ಶಾಲೆಯ ಶೇಷಾದ್ರಿಪುರ ಶಾಖೆಯಲ್ಲಿ ಪಡೆದೆ. ಈ ಶಾಲೆಯಲ್ಲಿದ್ದಾಗಲೇ ಧೀಮಂತ ಸ್ವಾತಂತ್ರ್ಯ ಸೇನಾನಿ ದಿ॥ನಾ.ಸು. ಹರ್ಡೀಕರ ಅವರಿಂದ ಸ್ಥಾಪಿತವಾದ 'ಭಾರತ ಸೇವಾ ದಳ'ದ ಸ್ವಯಂ ಸೇವಕನಾಗಿ ದೀಕ್ಷೆ ಪಡೆದೆ. ಮುಂದೆ ಶೇಷಾದ್ರಿಪುರ ಪ್ರೌಢಶಾಲೆಗೆ ಸೇರಿದಾಗ ಆ ಶಾಲೆಯ 'ಭಾರತ ಸೇವಾದಳ' ಘಟಕದ ನಾಯಕನನ್ನಾಗಿ ಅಲ್ಲಿ ಅದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಶಾಲೆಯ ವ್ಯಾಯಾಮ ಶಿಕ್ಷಕರಾಗಿದ್ದ ಶ್ರೀ ಕೆ.ನಾರಾಯಣಮೂರ್ತಿಯವರು ನೇಮಕಮಾಡಿದರು. ಸುಭಾಷ್‌ಚಂದ್ರ ಬೋಸ್ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಕಾದಾಡಲು ಸ್ಥಾಪಿಸಿದ್ದ 'ಆಜಾದ್ ಹಿಂದ್ ಫೌಜ್'ನಲ್ಲಿ ಸಕ್ರಿಯ ಸಿಪಾಯಿಯಾಗಿದ್ದ ಶ್ರೀ ಐ.ಎನ್.ಎ. ರಾಮರಾವ್ ಅವರು ಆಗಾಗ ಬಂದು ಕವಾಯತು ಮಾಡಿಸಿ, ಸ್ವಾತಂತ್ರ್ಯ ಹೋರಾಟದ ಸಾಹಸದ ಘಟನೆಗಳ ಬಗೆಗೆ ತಿಳಿಸಿ ನಮ್ಮ ಎಳೆಯ ಮನಸ್ಸಿನಲ್ಲಿ ರಾಷ್ಟ್ರದ ಬಗೆಗೆ ಅಭಿಮಾನ ಮೂಡುವಂತೆ ಮಾಡಿದರು. ಆಗಲೇ ನನ್ನಲ್ಲಿ ಶಿಸ್ತು, ಕಾರ್ಯಕ್ಷಮತೆ, ಸಮಯಪಾಲನೆ, ನ್ಯಾಯಪರತೆ ಇವೇ ಮೊದಲಾದವುಗಳ ಬಗೆಗೆ ತರಬೇತು ಸಿಕ್ಕಿತೆನ್ನಬಹುದು. ಪ್ರಾಥಮಿಕ ೮ನೆಯ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತಿದ್ದ ಹಳ್ಳಿ ಮೂಲದ ನನ್ನನ್ನು ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಿದ್ದರೂ. ಪಟ್ಟಣದಲ್ಲೇ ವಿದ್ಯಾಭ್ಯಾಸಮಾಡಿ ಬಂದ ಯಾವ ಮಕ್ಕಳಿಗೂ ಕಡಿಮೆ ಇಲ್ಲದಂತೆ ಉತ್ತಮ ಅಂಕಗಳನ್ನು ಪಡೆದು ಎಸ್ಸೆಸ್ಸೆಲ್ಸಿಯಲ್ಲಿ ತೇರ್ಗಡೆ ಹೊಂದಿದ್ದೆ.

ವಿಜ್ಞಾನ ವಿಷಯಗಳೊಡನೆ ಪಿ.ಯು.ಸಿ ಕಲಿಯಲು ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜಿಗೆ ೧೯೬೨ರಲ್ಲಿ ನನ್ನನ್ನು ಸೇರಿಸಲಾಯಿತು. ಈಗ ಅದು ಕೇವಲ ಸರ್ಕಾರೀ ಕಲಾ ಕಾಲೇಜು ಮಾತ್ರ ಆಗಿದೆ. ನಾನು ಸೇರುವ ಕಾಲಕ್ಕೆ ಅದು 'ಇಂಟರ್‌ಮೀಡಿಯಟ್ ಕಾಲೇಜು' ಎಂದು ಹೆಸರುವಾಸಿಯಾಗಿತ್ತು. ನಗರದಲ್ಲಿ ಕನ್ನಡ ಚಳವಳಿ ಆರಂಭಗೊಂಡಿದ್ದ ದಿನಗಳವು. ಶಾಲಾಪಠ್ಯಗಳಲ್ಲಿದ್ದ ಕುವೆಂಪು, ಗೋವಿಂದ ಪೈ ಮೊದಲಾದ ಕವಿಗಳ ಕನ್ನಡ ಪ್ರೇಮಮೂಡಿಸುವ ಪದ್ಯಗಳಿಂದ ಕನ್ನಡ ನಾಡು-ನುಡಿಗಳ ಬಗೆಗೆ ಅಭಿಮಾನ ಬೆಳೆಸಿಕೊಂಡಿದ್ದ ನನಗೆ ಅ.ನ.ಕೃ.

ಅವರ ಭಾಷಣಗಳು ಕನ್ನಡಪರವಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದವು. ಆಗ ಆರಂಭವಾದ ನನ್ನ ಕನ್ನಡ ಪರವಾದ ಚಟುವಟಿಕೆ ಈ ೫೧ರ ವಯೋಮಾನದಲ್ಲಿಯೂ ನಿರಾತಂಕವಾಗಿ ಸಾಗಿದೆ. ಅ.ನ.ಕೃ. ನೇತೃತ್ವದಲ್ಲಿ, ನಾಡಿನ ವಿಶೇಷವಾಗಿ ಬೆಂಗಳೂರಿನ ಕನ್ನಡ ಸಂಘ-ಸಂಸ್ಥೆಗಳನ್ನೊಳಗೊಂಡ ಒಕ್ಕೂಟದ ರೂಪದಲ್ಲಿ, 'ಕರ್ನಾಟಕ ಸಂಯುಕ್ತ ರಂಗ' ಆಗತಾನೆ ಅಸ್ತಿತ್ವಕ್ಕೆ ಬಂದಿತ್ತು. ಇದರ ಮೂಲಕ ಸ್ಥಳೀಯ ಕನ್ನಡ ಪರ ಸಂಘಟನೆಗಳ ನೆರವಿನಿಂದ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಸಭೆ-ಮೆರವಣಿಗೆ ಮೊದಲಾದ ಕಾರ್ಯಕ್ರಮಗಳು ಅಲ್ಲಲ್ಲಿ ಜರುಗುತ್ತಿದ್ದವು. ನಾನು ಅವುಗಳಲ್ಲಿ ಮೊದಮೊದಲು ಪ್ರೇಕ್ಷಕನಾಗಿ ಭಾಗವಹಿಸುತ್ತಿದ್ದವನು ತರುವಾಯ ಕಾರ್ಯಕರ್ತನಾಗಿಯೂ ದುಡಿಯಲಾರಂಭಿಸಿದೆ. ಇದರಿಂದ ಓದಿನ ಕಡೆ ಗಮನ ಸ್ವಲ್ಪ ಕಡಿಮೆಯಾಯಿತು.

ನನಗೆ ವ್ಯಾಸಂಗದಲ್ಲಿ ನಿರಾಸಕ್ತಿ ಉಂಟಾಗಲು ಇನ್ನೂ ಒಂದು ಕಾರಣವಿತ್ತು. ಎಸ್ಸೆಸ್ಸೆಲ್ಸಿ ಬಳಿಕ 'ಸಿನಿಮಾಫೋಟೋಗ್ರಫಿ' ಅಥವಾ 'ರೇಡಿಯೋ ಇಂಜನಿಯರಿಂಗ್'ನಲ್ಲಿ ಡಿಪ್ಲೊಮಾ ಮಾಡಬೇಕೆಂಬುದು ನನ್ನ ಬಯಕೆಯಾಗಿತ್ತು. ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿತು ರೇಡಿಯೋ ಇಂಜಿನಿಯರಿಂಗ್‌ಗೆ ಅವಕಾಶವೂ ಸಹ ಸಿಕ್ಕಿದ್ದಿತು.ನನ್ನ ವ್ಯಾಸಂಗದ ಉಸ್ತುವಾರಿಗೆ ನನ್ನ ತಂದೆಯಿಂದ ನಿಯೋಜಿತವಾಗಿದ್ದ ನನ್ನ ಳನೇ ಸೋದರಮಾವ ಸಿವಿಲ್ ಇಂಜನಿಯರ್ ಶ್ರೀ ಯು.ಎಂ. ಮಲ್ಲಿಕಾರ್ಜುನಗೌಡರು ನನ್ನನ್ನು ಅವರಂತೆ ಇಂಜಿನಿಯರ್ ಮಾಡಬೇಕೆಂದು ಪಿ.ಯು.ಸಿ.ಗೆ ಸೇರಿಸಿದ್ದರು. ಇದರಿಂದ ಪಿ.ಯು.ಸಿ.ಯಲ್ಲಿ ನನಗೆ ಕಡಿಮೆಯಾದ ಆಸಕ್ತಿ ಕನ್ನಡ ಚಳವಳಿಯಲ್ಲಿ ಹೆಚ್ಚಾಗತೊಡಗಿತು.

ಮನೆಯಲ್ಲೂ ಚಳವಳಿ

ಆ ಅವಧಿಯಲ್ಲಿ ಹೊರಗಷ್ಟೇ ಅಲ್ಲದೆ ನನ್ನ ಕನ್ನಡ ಚಳವಳಿ ಮನೆಯಲ್ಲೂ-ನೆಂಟರಿಷ್ಟರ ಮನೆ-ಸಮಾರಂಭಗಳಲ್ಲಿಯೂ ನಡೆಯತೊಡಗಿತು. ನನ್ನ ಭಾವ ಮನೆ ಕಟ್ಟಿಸುವ ಕೆಲಸದ ಗುತ್ತಿಗೆದಾರರಾಗಿ, ಅವರ ಬಳಿ ಕೆಲಸಮಾಡುತ್ತಿದ್ದವರೆಲ್ಲರೂ ತಮಿಳು ಕೂಲಿಗಳೇ ಆಗಿದ್ದರಿಂದ, ಅವರೆಲ್ಲ ಮನೆಗೆ ಬಂದಾಗ ತಮಿಳಿನಲ್ಲೇ ಮಾತನಾಡಿಸುತ್ತಿದ್ದರು. ನಮ್ಮೊಡನೆ ಕನ್ನಡದಲ್ಲಿ ಮಾತನಾಡದಿದ್ದರೆ ಮನೆಯ ಆವರಣದೊಳಕ್ಕೆ ಪ್ರವೇಶಿಸಬೇಡಿ ಎಂದು ಬೆದರಿಸಿ ಬೈಯ್ಯುತ್ತಿದ್ದೆ. ಆಗ ನನ್ನ ಭಾವ- ನನ್ನ ನಡುವೆ ಸ್ವಲ್ಪ ವಾಗ್ವಾದವೂ ನಡೆಯುತ್ತಿತ್ತು. 'ಅವರೆಲ್ಲ ಕೆಲಸಕ್ಕೆ ಬರದಿದ್ದರೆ ನನ್ನ ಕೆಲಸ ನಿಲ್ಲುತ್ತೆ. ಆಗ ಆದಾಯ ನಿಂತು ನಿಮ್ಮ ಹೊಟ್ಟೆಗೆ ಸಂಚಕಾರ ಬರುತ್ತೆ. ಇಷ್ಟೆಲ್ಲಾ ಕನ್ನಡ-ಕನ್ನಡ ಎನ್ನುವ ನೀನು ಮನೆಗೆಲಸದ ಕೂಲಿಗೆ ಒಂದಷ್ಟು ಜನ ಕನ್ನಡಿಗರನ್ನು ಕರೆದುಕೊಂಡು ಬಾ ನೋಡೋಣ' ಎಂದೆಲ್ಲಾ ವಾದಿಸುತ್ತಿದ್ದರು. ಅವರ ಮಾತಿನಲ್ಲಿಯೂ ಸತ್ಯ ಇತ್ತು. ಆದರೆ ನಾನು ಅಂತಹ ಸಂದರ್ಭದಲ್ಲಿ ''ಅವರವರೇ ಬೇಕಾದರೆ ತಮಿಳು ಮಾತನಾಡಿಕೊಳ್ಳಲಿ. ನಮ್ಮೊಡನೆ ಮಾತನಾಡುವಾಗ ಕನ್ನಡದಲ್ಲಿ ಮಾತನಾಡಲಿ, ನೀವು ಕನ್ನಡದಲ್ಲೇ ಮಾತನಾಡಿದರೆ ಅವರು ಅದನ್ನು ಅನುಸರಿಸುತ್ತಾರೆ. ಅದು ಬಿಟ್ಟು ನೀವೇ ಮುಂದಾಗಿ ತಮಿಳು ಮಾತನಾಡಿದರೆ ಅವರಿಗೆ ಕನ್ನಡ ಕಲಿಯಬೇಕಾದ ಪ್ರಮೇಯವೇ ಬರದು'' ಎಂದೆಲ್ಲಿ ವಾದಿಸುತ್ತಿದ್ದೆ.ಆಗೆಲ್ಲಾ ಬೆಂಗಳೂರಿನಲ್ಲಿ ಹೆಚ್ಚಾಗಿ ಪ್ರದರ್ಶನುಗೊಳ್ಳುತ್ತಿದ್ದುದು ತಮಿಳು-

ತೆಲುಗು ಚಿತ್ರಗಳೇ. ನಮ್ಮ ಭಾವನವರಂತೂ ಅವರ ತಮಿಳು ಕೆಲಸದವರ ಒಡನಾಟದಲ್ಲಿ ಹೊರಗೆಲ್ಲಾ ತಮಿಳರೇ ಆಗಿ ಬಿಟ್ಟಿದ್ದರು. ತಮಿಳು ಸಿನಿಮಾಗಳನ್ನೇ ಹೆಚ್ಚು ನೋಡುತ್ತಿದ್ದರು. ಇವರ ಪ್ರಭಾವದಿಂದ ನಮ್ಮ ಅಕ್ಕನೂ ಆಗೊಮ್ಮೆ ತಮಿಳು ಸಿನಿಮಾಕ್ಕೆ ಹೋಗಿ ಬಂದದ್ದನ್ನು ಕಂಡು ನಾನು ಕೆಂಡಮಂಡಲವಾಗಿ ತೀಕ್ಷ್ಣನುಡಿಗಳಿಂದ ಛೇಡಿಸಿದ್ದ ನೆನಪು..

ಇದೇ ಸುಮಾರಿಗೆ ನಮ್ಮ ದೊಡ್ಡ ಸೋದರಮಾವ ದಿ॥ ಬಾಲೇಗೌಡರು ತಮ್ಮ ಎರಡನೆಯ ಮಗಳ ಮದುವೆಯನ್ನು ಕನಕಪುರ ತಾಲ್ಲೂಕು ಸಾತನೂರು ಸಮೀಪದ ತೋಟಹಳ್ಳಿಯಲ್ಲಿ ಇಟ್ಟುಕೊಂಡಿದ್ದರು. ಬೆಂಗಳೂರಿನಿಂದ ನಾವೆಲ್ಲಾ ಹಿಂದಿನ ದಿನವೇ ಹೋಗಿದ್ದೆವು. ಊರಿನಿಂದ ನನ್ನ ತಾಯಿ ಹಾಗೂ ಸೋದರಿಯರು ಬಂದಿದ್ದರು.ತಂದೆ ರೇಷ್ಮೆ ಹುಳು ಸಾಕಿದ್ದ ಕಾರಣ ಅವುಗಳನ್ನು ನೋಡಿಕೊಳ್ಳುವ ಸಲುವಾಗಿ ಬಂದಿರಲಿಲ್ಲ. ಆ ಮದುವೆಯಲ್ಲಿ ಧ್ವನಿವರ್ಧಕ ವ್ಯವಸ್ಥೆಯವನು ತಮಿಳು ಸಿನಿಮಾ ಗೀತೆಗಳ ರೆಕಾರ್ಡುಗಳನ್ನೇ ಹಾಕುತ್ತಿದ್ದನು. ನಾನು ಅದನ್ನು ಪ್ರತಿಭಟಿಸಿ ಕನ್ನಡ ಚಿತ್ರಗೀತೆ ಮಾತ್ರ ಹಾಕಲು ಒತ್ತಾಯಿಸಿದೆ. ಅದಕ್ಕೆ ಆತ ತನ್ನಲ್ಲಿ ಹೆಚ್ಚು ಕನ್ನಡ ರೆಕಾರ್ಡುಗಳು ಇಲ್ಲವೆಂದು ವಾದಿಸಿದ್ದ. ಹಾಗಾದರೆ ನೀನು ರೆಕಾರ್ಡ್ ಹಾಕುವುದೇ ಬೇಡ ಎಂದು ಹೇಳಿ ಗಲಾಟೆಮಾಡಿ ನಿಲ್ಲಿಸಿದ್ದೆ. ಆ ವೇಳೆಗೆ ನಮ್ಮ ದೊಡ್ಡಮಾವ ಬಾಲೇಗೌಡರು ಅಲ್ಲಿಗೆ ಬಂದು ವಿಷಯ ತಿಳಿದು ನನಗೇ ಉಪದೇಶಿಸತೊಡಗಿದರು. ''ನಿನ್ನ ಕನ್ನಡ ಚಳವಳಿ ಬೆಂಗಳೂರಿನಲ್ಲೇ ಇಟ್ಟುಕೋ, ಇಲ್ಲೆಲ್ಲಾ ಬೇಡ. ಮದುವೆ ಮನೆ ಆಕರ್ಷಣೆಗೆ ಯಾವುದೋ ಹಾಕಿಕೊಳ್ಳಲಿ'' ಎಂಬುದು ಅವರ ಮಾತಿನ ಸಾರಾಂಶವಾಗಿತ್ತು. ಜೊತೆಗೆ ಅವರ ಧ್ವನಿಯಲ್ಲಿ ನನ್ನ ವರ್ತನೆಯ ಬಗೆಗೆ ಸಿಟ್ಟು ಕಾಣುತ್ತಿತ್ತು. ಆಗಿನ್ನೂ ಬೆಳಿಗ್ಗೆ ಏಳೂವರೆ-ಎಂಟು ಘಂಟೆ. ಇನ್ನೂ ಉಪಹಾರ ನಡೆದಿರಲಿಲ್ಲ. ನಾನು ಮದುವೆ ಮಾಡುತ್ತಿದ್ದ ಸೋದರಮಾವನ ಧೋರಣೆ ಪ್ರತಿಭಟಿಸಿ ಮದುವೆಗೆ ಬಹಿಷ್ಕಾರ ಹಾಕಿ ನನ್ನ ಬಟ್ಟೆಗಳಿದ್ದ ಬ್ಯಾಗು ತೆಗೆದುಕೊಂಡು ಅಲ್ಲಿಂದ ಸುಮಾರು ೧೫ ಕಿಲೋಮೀಟರು ದೂರದ ಕೋಡಿಹೊಸಳ್ಳಿಗೆ ಹೊರಟೆ. ತಾಯಿ, ಅಕ್ಕಂದಿರು, ಚಿಕ್ಕಮ್ಮ ಇತರ ಸೋದರ ಮಾವಂದಿರು ಯಾರು ಹೇಳಿದರೂ ಅಲ್ಲಿ ನಿಲ್ಲಲಿಲ್ಲ. ಊರಿಂದ ಒಂದು ಕಿಲೋಮೀಟರು ದೂರವಿದ್ದ ಬಸ್ಸು ಬರುವ ಸ್ಥಳಕ್ಕೆ ಬಿರುಬಿರನೆ ನಡೆದೆ. ಬಾಲೇಗೌಡರ ದೊಡ್ಡ ಅಳಿಯ ಸಂತೆಕೋಡಿಹಳ್ಳಿ ಶ್ರೀ ಪುಟ್ಟಸ್ವಾಮಿ ಗೌಡರು ನನ್ನ ಮನವೊಲಿಸಿ ವಾಪಸು ಕರೆದೊಯ್ಯಲು ಹಿಂಬಾಲಿಸಿದರು. ಆದರೆ ನಾನು ಪಟ್ಟು ಬಿಡಲಿಲ್ಲ. ಅಷ್ಟರಲ್ಲಿ ನಮ್ಮೂರ ಕಡಗೆ ಹೋಗುವ ಬಸ್ಸು ಬಂದ ಕಾರಣ ನಾನು ಅದರಲ್ಲಿ ಕೋಡಿಹೊಸಹಳ್ಳಿಗೆ ಪ್ರಯಾಣ ಬೆಳೆಸಿದೆ. ಊರಿಗೆ ಹೋದಾಗ ಸುಮಾರು ೯ ಘಂಟೆ. ತಾವೊಬ್ಬರೇ ಇದ್ದ ಕಾರಣ ಉಪಹಾರಕ್ಕೆ ತಂದೆಯವರು ಸಹ ಏನೂ ಮಾಡಿರಲಿಲ್ಲ. ನಾನು ಮದುವೆಗೆ ಬಹಿಷ್ಕಾರ ಹಾಕಿ ಬಂದ ವಿಷಯ ತಿಳಿದು ಅವರಿಂದ ಬೈಸಿಕೊಂಡೆ. ಆಗ ರೇಷ್ಮೆ ಹುಳುವಿಗೆ ಹಿಪ್ಪನೇರಳೆ ಸೊಪ್ಪುಹಾಕುತ್ತಿದ್ದ ತಂದೆ ಆನಂತರ ಎದ್ದು ಅನ್ನಮಾಡಿ, ರಾತ್ರಿ ಇದ್ದ ಸಾರಿನಲ್ಲೇ ತಿನ್ನಲು ಹೇಳಿ ಮತ್ತೆ ಸೊಪ್ಪು ಕೀಳುವ ಸಲುವಾಗಿ ತೋಟದ ಕಡೆ ಹೋದರು. ಹೀಗೆ ಮದುವೆ ಮನೆಯ ಭೂರಿ ಭೋಜನದ ಬದಲಿಗೆ ಅಂದು ನಾನು ತಂಗಳು ಸಾರಿನಲ್ಲಿ ಊಟ ಮಾಡಬೇಕಾದ ಪರಿಸ್ಥಿತಿ ಒದಗಿತ್ತು.

ಕನ್ನಡ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಬಳಿಕ ಕನ್ನಡ ಭಾಷೆ, ಸಾಹಿತ್ಯ, ಇತಿಹಾಸ ಕುರಿತು ಅನೇಕ ನಾಡ ಪ್ರೇಮಿ ಹಿರಿಯರು ಬರೆದಿದ್ದ ಪುಸ್ತಕಗಳನ್ನು ಕಾಲೇಜು ಗ್ರಂಥಾಲಯದಿಂದ ತಂದು ಓದಲಾರಂಭಿಸಿದೆ. ಇದರಿಂದಾಗಿ ಆಗಿನ ಒಂದು ವರ್ಷದ ಪಿ.ಯು.ಸಿಯನ್ನು ಪಾಸುಮಾಡಲು ಎರಡು ವರ್ಷ ತೆಗೆದುಕೊಂಡೆ . ವಿದ್ಯಾರ್ಥಿ ಜೀವನದಲ್ಲಿ ಅದೇ ಮೊದಲ ಸಲ ನಾನು ಫೇಲಾಗಿದ್ದೆ. ತಂದೆಯವರು ಬಹಳ ನೊಂದುಕೊಂಡಿದ್ದರು. ಅವರಿಗೆ ಸಮಜಾಯಿಷಿ ಹೇಳಿ ಮರುವರ್ಷ ಪಾಸುಮಾಡಿಕೊಂಡೆ. ಪಿ.ಯು.ಸಿ. ಪಾಸಾದ ಮೇಲೆ ಅದೇ ಇಂಜಿನಿಯರ್ ಸೋದರಮಾವ ನನ್ನನ್ನು ಬಿ.ಎಸ್ಸಿ.ಗೆ ಸೇರುವಂತೆ ಮಾಡಿದರು. ಆದರೆ ನನಗಾಗ ಕನ್ನಡ ಐಚ್ಛಿಕ ವಿಷಯ ತೆಗೆದುಕೊಂಡು ಬಿ.ಎ. ಮಾಡಬೇಕೆಂಬ ಹಂಬಲವಿತ್ತು. ಆದರೆ ನನಗೆ ಬೇಕಾದುದನ್ನು ಓದುವ ಸ್ವಾತಂತ್ರ್ಯವಿರಲಿಲ್ಲ. ಪಿ.ಯು.ಸಿ ಕಲಿತು ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜಿನಲ್ಲೇ ನನ್ನ ಬಿ.ಎಸ್ಸಿ. ಪದವಿ ವ್ಯಾಸಂಗವೂ ನಡೆಯಿತು. ೧೯೬೪-೬೭ರ ಈ ಅವಧಿಯಲ್ಲೇ ನಾನು ಕಾಲೇಜಿನ ಎಲ್ಲ ಚಟುವಟಿಕೆಗಳಲ್ಲೂ ಸಕ್ರಿಯನಾದೆ. ಪಿ.ಯು.ಸಿ.ಯಲ್ಲಿದ್ದಾಗಲೇ ಎನ್.ಸಿ.ಸಿ. ಯಲ್ಲಿ ತರಬೇತಾಗಿದ್ದ ನಾನು ಪದವಿಯಲ್ಲಿ ೧೨ನೇ ಎನ್.ಸಿ.ಸಿ. ಬೆಟಾಲಿಯನ್ನಿನ ೨ನೇ ಕಂಪನಿಗೆ 'ಸಾರ್ಜೆಂಟ್' ಆದೆ. ಕಾಲೇಜು ವಿದ್ಯಾರ್ಥಿ ಸಂಘ ಹಾಗೂ ಕರ್ನಾಟಕ ಸಂಘಗಳೆರಡರಲ್ಲಿಯೂ ಮೂರು ವರ್ಷ ಪ್ರತಿನಿಧಿಯಾಗಿ-ಕಾರ್ಯಕಾರೀ ಸಮಿತಿ ಸದಸ್ಯನಾಗಿ, ಲಲಿತಕಲಾ ಕಾರ್ಯದರ್ಶಿಯಾಗಿ ಕೆಲಸಮಾಡಿ ಅನುಭವ ಪಡೆದೆ. ಕಾಲೇಜಿನ ಹೊರಗೆ ಕನ್ನಡ ಪರ ಹಾಗೂ ಜನಪರವಾದ ಎಲ್ಲ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸತೊಡಗಿದೆ.

ಶ್ರೀ ಕಲ್ಲೇಯವರ ಪರಿಚಯ

೧೯೬೩ರ ಸುಮಾರಿಗೆ ಕೆಲವು ಸಮಾನ ಮನಸ್ಕ ಯುವಕರನ್ನು ಸೇರಿಸಿಕೊಂಡು ಮಲ್ಲೇಶ್ವರದಲ್ಲಿ 'ಕನ್ನಡ ವಿದ್ಯಾರ್ಥಿ ಬಳಗ', 'ಕನ್ನಡ ಗೆಳೆಯರ ಗುಂಪು' ಎಂಬ ಸಣ್ಣ ಸಂಸ್ಥೆಗಳನ್ನು ರಚಿಸಿಕೊಂಡು ಚಟುವಟಿಕೆ ನಡೆಸಿದೆ. ಮುಂದೆ ಕನ್ನಡ ಪರ ಹಾಗೂ ಹವ್ಯಾಸಿ ರಂಗಭೂಮಿ ಚಟುವಟಿಕೆಯಲ್ಲಿ ತೊಡಗಿದ್ದ 'ಕನ್ನಡ ಸಾಹಿತ್ಯ ಕಲಾ ಸಂಘ'ವನ್ನು ಸೇರಿ ಅದರ ಖಜಾಂಚಿಯಾಗಿಯೂ ಕಾರ್ಯನಿರ್ವಹಿಸಿ ತನ್ಮೂಲಕ, ಕರ್ನಾಟಕ ಸಂಯುಕ್ತ ರಂಗ'ದ ಚಟುವಟಿಕೆಗಳಲ್ಲಿ ಸಕ್ರಿಯನಾದೆ. ಕನ್ನಡ ಅಂಕಿಯಲ್ಲಿ ನಿತ್ಯ ಹಾಳೆ ಹರಿಯುವ ಪುರಂದರ ದಾಸ, ವಿಜಯನಗರದ ಕೃಷ್ಣದೇವರಾಯ ಮೊದಲಾದ ಐತಿಹಾಸಿಕ ವ್ಯಕ್ತಿಗಳ ಚಿತ್ರವನ್ನೊಳಗೊಂಡ, ಕನ್ನಡ ದಿನಚರಿಯನ್ನು ಈ ಸಂಘ ಒಂದೆರೆಡು ವರ್ಷ ವ್ಯವಸ್ಥಿತವಾಗಿ ತಂದಿದ್ದಿತು. ಈಗ ವಾರ್ತಾ ಇಲಾಖೆಯಲ್ಲಿ ನಾಟಕ ವಿಭಾಗದ ಮುಖ್ಯಸ್ಥರಾಗಿರುವ ರಾ.ನಾಗೇಶ ಅದರ ಪ್ರಧಾನ ಕಾರ್ಯದರ್ಶಿಯಾಗಿದ್ದರು. ನಗರಪಾಲಿಕೆಯಲ್ಲಿ ನೌಕರರಾಗಿದ್ದ ಸೋಮಶೇಖರ ಅಧ್ಯಕ್ಷ ರಾಗಿದ್ದರು.ಹೀಗೆ ಕಾಲೇಜಿನಲ್ಲಿ ಹಾಗೂ ಹೊರಗೆ ವಿದ್ಯಾರ್ಥಿ-ಯುವಕರನ್ನು ಸಂಘಟಿಸಿ ಚಟುವಟಿಕೆಯಲ್ಲಿ ತೊಡಗಿದ್ದ ನನಗೆ, ಕಾಲೇಜು ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ, ಸಮಾಜವಾದಿ ಯುವಜನ ಸಭಾದ ಸಕ್ರಿಯ ಕಾರ್ಯಕರ್ತರಾಗಿದ್ದ ಶ್ರೀ ಸಿ. ಪುಟ್ಟಸ್ವಾಮಿ ಎಂಬ ಮಿತ್ರರ ಮೂಲಕ, ಆಗ 'ಪ್ರಜಾವಾಣಿ' ದಿನ ಪತ್ರಿಕೆಯ ಸಹಾಯಕ ಸಂಪಾದಕರಾಗಿ ಸಂಪಾದಕೀಯ ಪುಟದ ಲೇಖನಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದ ಶ್ರೀ ಕಲ್ಲೆ ಶಿವೋತ್ತಮರಾಯರ ಪರಿಚಯವಾಯಿತು.

ಶ್ರೀ ಕಲ್ಲೆಯವರು ಇತರ ಅನೇಕ ಪತ್ರಕರ್ತರಂತೆ ಕೇವಲ ಉದರನಿಮಿತ್ತ ಈ ಕ್ಷೇತ್ರ ಆರಿಸಿಕೊಂಡಿದ್ದವರಲ್ಲ. ಎಡಪಂಥೀಯ ವಿಚಾರಧಾರೆಯವರಾಗಿದ್ದ ಅವರು ಪುರೋಹಿತಶಾಹಿ ಹಾಗೂ ಪಟ್ಟಭದ್ರಹಿತಾಸಕ್ತಿಗಳ ಶೋಷಣೆ-ದಬ್ಬಾಳಿಕೆಗಳಿಂದ ತುಳಿತಕ್ಕೊಳಗಾಗಿದ್ದ ದೇಶದ ಬಹುಜನ ಸಮುದಾಯವಾದ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಕಾರ್ಮಿಕರೇ ಮೊದಲಾದವರ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ ಅವರ ತಂದೆ ದಿ॥ಕಲ್ಲೆ ನಾರಾಯಣರಾವ್ ಅವರಂತೆ ಈ ಪತ್ರಿಕಾ ಕ್ಷೇತ್ರದಲ್ಲಿ ದುಡಿಯಲು ಬಂದವರು. ೬೦-೭೦ರ ದಶಕದಲ್ಲಿ ನಡೆದ ಕನ್ನಡ ಪರ-ಜನಪರ ಆಂದೋಳನಗಳಲ್ಲಿ ಶ್ರೀ ಕಲ್ಲೆ ಶಿವೋತ್ತಮರಾಯರ ಪ್ರತ್ಯಕ್ಷ-ಪರೋಕ್ಷ ಪ್ರಭಾವ ಇದ್ದೇ ಇದ್ದಿತು. ಕಲ್ಲೆಯವರ ಪರಿಚಯವಾದ ಮೇಲೆ ಅದುವರೆಗೆ ಕೇವಲ ಕನ್ನಡ ನಾಡು-ನುಡಿಗಳಿಗೆ ಮಾತ್ರ ಸೀಮಿತವಾಗಿದ್ದ ನನ್ನ ಚಟುವಟಿಕೆಯ ಕಾರ್ಯಕ್ಷೇತ್ರ ವಿಸ್ತಾರಗೊಂಡಿತು. ದೇವರು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ-ಅನ್ಯಾಯ, ಇದರ ಪರಿಣಾಮವಾಗಿ ಜಾತೀಯತೆಯ ಮೇಲು-ಕೀಳುತನವೇ ಮೊದಲಾದ ಸಾಮಾಜಿಕ ಅನಿಷ್ಟಗಳು ಸರಕಾರದ ದಬ್ಬಾಳಿಕೆ-ಜನವಿರೋಧಿ ನೀತಿಗಳ ವಿರುದ್ಧ ಯುವಕರನ್ನು ಕೂಡಿಕೊಂಡು ಹೋರಾಟದಲ್ಲಿ ತೊಡಗಿಸಿಕೊಂಡೆ.

ವೈಚಾರಿಕ ಅರಿವು

ಈ ಅವಧಿಯಲ್ಲಿ ಶ್ರೀ ಕಲ್ಲೆಯವರಿಂದ ನಾನು ಅನೇಕ ವಿಚಾರಗಳ ಬಗೆಗೆ ಅರಿವು ಮೂಡಿಸಿಕೊಂಡೆ. ಒಟ್ಟಾರೆ ಹೇಳುವುದಾದರೆ ತಮ್ಮ ಅನುಭವ ಜ್ಞಾನವನ್ನು ನನಗೆ ಧಾರೆ ಎರೆದರೆನ್ನಬಹುದು. ಗಾಂಧಿ, ಲೋಹಿಯ , ಅಂಬೇಡ್ಕರ್, ಪೆರಿಯಾರ್, ಸುಭಾಷ್ ಮೊದಲಾದ ಮಹಾನ್ ನಾಯಕರ ಬಗೆಗಿನ ಸಾಹಿತ್ಯ ಓದಲು ಕೊಟ್ಟು ನನ್ನಲ್ಲಿ ವೈಚಾರಿಕತೆ ಬೆಳೆಯಲು ಕಾರಣರಾದರು. ಸಾರ್ವಜನಿಕ ಜೀವನದಲ್ಲಿ ನನ್ನನ್ನು ಮುಂದೆ ತರಬೇಕೆಂಬ ಹಂಬಲವನ್ನು ಅವರು ಹೊಂದಿದ್ದರು. ೧೯೬೯ರಲ್ಲಿ ಕಾಂಗ್ರೆಸ್ ವಿಭಜನೆಗೊಂಡು, ಇಂದಿರಾ ಗಾಂಧಿಯವರ ನೇತೃತ್ವದ ಬಣದ ಹೊಣೆಗಾರಿಕೆಯನ್ನು ರಾಜ್ಯದಲ್ಲಿ ದಿ॥ ದೇವರಾಜ ಅರಸು ಹೊತ್ತಿದ್ದರು. ಅವರಿಗೆ ಬಹಳ ಹತ್ತಿರದವರಾಗಿದ್ದ ಶ್ರೀ ಕಲ್ಲೆಯವರು ಯುವ ಕಾಂಗ್ರೆಸ್ಸಿನ ನಗರ ಘಟಕದ ಅಧ್ಯಕ್ಷನನ್ನಾಗಿ ನನ್ನನ್ನು ನೇಮಕ ಮಾಡಿಸುವ ಬಗೆಗೆ ಪ್ರಸ್ತಾಪಿಸಿದ್ದರು. ಆದರೆ ಆಗ ತಾನೆ 'ಸಂಯುಕ್ತ ಕರ್ನಾಟಕ'ದಲ್ಲಿ ಉಪಸಂಪಾದಕನಾಗಿ ಸೇರಿ ಒಂದಿಷ್ಟು ಸಂಬಳ ಪಡೆದು, ಊರಿಗಷ್ಟು ಕಳುಹಿಸಿ, ಇಲ್ಲಿ ಅಕ್ಕನ ಮನೆಗೆ ಸ್ವಲ್ಪ ಕೊಡಲಾರಂಭಿಸಿದ್ದ ನಾನು ಹಿಂಜರಿದೆ. ಈ ಆರ್ಥಿಕ ಕಾರಣವಷ್ಟೇ ಅಲ್ಲದೆ ರಾಜಕಾರಣಕ್ಕೆ ಹೊಕ್ಕಿದ ಮೇಲೆ ಪ್ರಾಮಾಣಿಕವಾಗಿ ಬದುಕುವುದಸಾಧ್ಯ. ಅಲ್ಲಿ ಒಂದು ವೇಳೆ ಪ್ರಾಮಾಣಿಕವಾಗಿ ಮುಂದುವರೆದರೆ ನಿಷ್ಪ್ರಯೋಜಕನೆಂಬ ಹಣೆಪಟ್ಟಿ ಹೊತ್ತು ಮೂಲೆಗೊತ್ತಿಸಿಕೊಳ್ಳುವುದು ಶತಃಸಿದ್ಧ ಎಂಬ ಅರಿವಿನಿಂದ ರಾಜಕೀಯದಿಂದ ದೂರವೇ ಉಳಿದೆ. ಆದರೆ ನನ್ನೊಟ್ಟಿಗೆ ಇದ್ದವರನೇಕರು ರಾಜಕೀಯಕ್ಕೆ ಹೋಗಿ ಸಚಿವೋಪಸಚಿವರಾಗಿ ಬೇಕು-ಬೇಡಾದ್ದನ್ನೆಲ್ಲಾ ಮಾಡಿಕೊಂಡರು.

ಹೀಗೆ ಕಲ್ಲೆಯವರಿಂದ ನಾನು ಸಾರ್ವಜನಿಕ ಚಟುವಟಿಕೆಗಳಲ್ಲಿ ವ್ಯಾಪಕ ಕಾರ್ಯಕ್ಷೇತ್ರದಲ್ಲಿ

ತೊಡಗಿಸಿಕೊಂಡೆ. ವೃತ್ತಿ ಸಂಘಟನೆಗಳ ಚಟುವಟಿಕೆಗಳಲ್ಲಿ ತೊಡಗಲೂ ಅವರದೇ ಪ್ರೇರಣೆ. ಪ್ರರ್ತಕರ್ತರ ಸಹಕಾರ ಸಂಘ, ಕಾರ್ಯನಿರತ ಪತ್ರಕರ್ತರ ಸಂಘಗಳಲ್ಲಿ ಮೊದಲಿಗೆ ಖಜಾಂಚಿಯಾಗಿ ಸ್ಪರ್ಧೆಗಿಳಿದಾಗ ಪ್ರಜಾವಾಣಿ ಮೊದಲಾದ ಪತ್ರಿಕೆಗಳ ಪತ್ರಕರ್ತರನ್ನು ಪರಿಚಯಿಸಿ ನನಗೆ ಮತ ದೊರಕಿಸಿದವರು ಅವರೇ. ಅವರು ದಿ॥ಬಿ.ಎನ್. ಗುಪ್ತ ಅವರಿಂದ 'ಜನಪ್ರಗತಿ' ವಾರಪತ್ರಿಕೆಯ ಹೊಣೆಗಾರಿಕೆಯನ್ನು ೧೯೬೯ರಲ್ಲಿ ವಹಿಸಿಕೊಂಡಾಗ, ನಾನು ಸಂಬಳಕ್ಕೆ ದುಡಿಯುತ್ತಿದ್ದ 'ಸಂಯುಕ್ತ ಕರ್ನಾಟಕ'ಕ್ಕಿಂತ 'ಜನಪ್ರಗತಿ'ಗೆ ಹೆಚ್ಚು ಕಾಲ, ಬರವಣಿಗೆಯಿಂದ ಹಿಡಿದು ಪತ್ರಿಕೆಗಳನ್ನು ಹೊರ ಊರಿಗೆ ರವಾನಿಸುವುದರವರೆಗೆ, ಎಲ್ಲ ಕೆಲಸವನ್ನು ಮಾಡತೊಡಗಿದ್ದೆ. ಇದು ಕೇವಲ ಸ್ನೇಹದಿಂದಲೇ ಹೊರತು ಗಳಿಕೆಗಾಗಿ ಆಗಿರಲಿಲ್ಲ. ಆದರೆ ನನ್ನ ಈ ಸೇವೆಗಾಗಿ ಅವರು ೧೯೭೫ರಲ್ಲಿ ಬಿ.ಡಿ.ಎ. ಯಿಂದ ನನಗೆ ಜೆ.ಪಿ. ನಗರದಲ್ಲಿ ನಿವೇಶನ ದೊರಕಿದಾಗ, ಅದರ ಪ್ರಾರಂಭಿಕ ಹಣಕಟ್ಟಲು ೧,೦೦೦ರೂ.ಗಳನ್ನು ನೆರವಿನ ರೂಪದಲ್ಲಿ ಕೊಟ್ಟು ನಿವೇಶನದ ಉಳಿದ ಹಣಕ್ಕೆ ಬರೋಡ ಬ್ಯಾಂಕಿನಲ್ಲಿ ತಮ್ಮ ಜಾಮೀನಿನ ಮೇಲೆ ಸಾಲಕೊಡಿಸಿದ್ದರು. ಈ ನಿವೇಶನವನ್ನು 'ಸಂಯುಕ್ತ ಕರ್ನಾಟಕ' ೧೧ ತಿಂಗಳು ಮುಚ್ಚಿದ್ದಾಗ ಹಾಗೂ ಆನಂತರ 'ಮುಂಗಾರು' ಸೇರಿದ ಮೇಲೆ ಸಂಬಳ ಸರಿಯಾಗಿ ಕೊಡದೆ ಜೀವನ ನಿರ್ವಹಣೆಗೆ ಸಾಲ ಮಾಡುವುದು ಅನಿವಾರ್ಯವಾದ ಕಾರಣ ಮುಂದೆ ಅದನ್ನು ಮಾರಿಕೊಳ್ಳಬೇಕಾಯಿತು.

೧೯೬೫ ರಿಂದ ೮೧ ರವರೆಗೆ ೧೬ ವರ್ಷಗಳ ಕಾಲ ಸಾಗಿದ್ದ ನನ್ನ ಕಲ್ಲೆಯವರ ಸ್ನೇಹದಲ್ಲಿ ಅವರು ನಾನು ೧೯೭೮ರಲ್ಲಿ ಗಾಯತ್ರಿಯನ್ನು ರಿಜಿಸ್ಟರ್ ಮದುವೆ ಮಾಡಿಕೊಂಡಾಗ ನನ್ನ ಪರವಾಗಿ ತಂದೆಯ ಸ್ಥಾನದಲ್ಲಿ ನಿಂತು ನೋಂದಣಿ ಪುಸ್ತಕಕ್ಕೆ ಸಹಿಮಾಡಿದ್ದರು. ಶಾಂತವೇರಿ ಗೋಪಾಲಗೌಡ, ದೇವರಾಜ ಅರಸು, ಜಯಪ್ರಕಾಶ ನಾರಾಯಣ, ಕಡಿದಾಳ ಮಂಜಪ್ಪ, ಸಿದ್ಧವನಹಳ್ಳಿ ನಿಜಲಿಂಗಪ್ಪ ಕೆಂಗಲ್ ಹನುಮಂತಯ್ಯ, ಹಳ್ಳಿಕೇರಿ ಹೀಗೆ ಅನೇಕ ಹಿರಿಯ ಸಾರ್ವಜನಿಕ ಮುಖಂಡರನ್ನು ಭೇಟಿಮಾಡಿಸಿ ಪರಿಚಿಯಿಸಿದ್ದರು. ಅದೇ ರೀತಿ ಪಂಡಿತರತ್ನ ಬಿ.ಶಿವಮೂರ್ತಿಶಾಸ್ತ್ರಿ, ಮಂಗಳವೇಢೆ ಶ್ರೀನಿವಾಸರಾವ್, ವಸುದೇವ ಭೂಪಾಲಂ, ಆ.ನೇ. ಉಪಾಧ್ಯೆ ಇತ್ಯಾದಿ ಹಿರಿಯ ಲೇಖಕರು-ಬುದ್ಧಿಜೀವಿಗಳನ್ನು ಪರಿಚಯಿಸಿದ್ದರು. ಇದರಿಂದ ನಾನು ದೊಡ್ಡವರೊಡನೆ ಬೆರೆತು ಅವರ ಸಹವಾಸದಿಂದ ಸಾಕಷ್ಟು ತಿಳುವಳಿಕೆ ಬೆಳೆಸಿಕೊಳ್ಳಲು ಸಹಾಯವಾಯಿತು.

ಅನುಮಾನದ ಸ್ವಭಾವ

ಇಷ್ಟೆಲ್ಲಾ ಆದರೂ ಕಲ್ಲೆಯವರ 'ಅನುಮಾನದ ಸ್ವಭಾವ'ದಿಂದ ನಮ್ಮಿಬ್ಬರ ನಡುವೆ ಆಗಾಗ ಮನಸ್ತಾಪ ಉಂಟಾಗಿ ೧೦-೧೫ ದಿನಗಳವರೆಗೆ, ಒಮ್ಮೊಮ್ಮೆ ತಿಂಗಳುಗಟ್ಟಲೆ ಭೇಟಿಯಾಗದೇ ಇದ್ದ ದಿನಗಳು ಇವೆ. ಆದರೆ ೧೯೮೧ರಲ್ಲಿ ಗೋಕಾಕ ಸಮಿತಿಯ ವರದಿ ಪ್ರಜಾವಾಣಿಯಲ್ಲಿ ಬಹಿರಂಗಗೊಂಡಾಗ, ಆ ಸಂದರ್ಭ 'ಕನ್ನಡ ನುಡಿ' ಸಂಪಾದಕನಾಗಿದ್ದ ನಾನು ಅದನ್ನು ಸ್ವಾಗತಿಸಿ ಸಂಪಾದಕೀಯ ಬರೆದದ್ದು, ಅದರ ಸದಸ್ಯರಾಗಿದ್ದ ಶ್ರೀ ಜಿ.ನಾರಾಯಣರ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಮಾಡಿ ಬಂದಿದ್ದ ಪತ್ರವನ್ನು 'ನಿಮ್ಮನುಡಿ' ಶೀರ್ಷಿಕೆಯಡಿ

ಪ್ರಕಟಿಸಿದಾಗ ನನ್ನ ಜೊತೆ ತಂಟೆ ತೆಗೆದ ಶ್ರೀ ಕಲ್ಲೆಯವರು ಜಿ. ನಾರಾಯಣರು ಒಕ್ಕಲಿಗರಾಗಿದ್ದರಿಂದ ಈ ರೀತಿ ಅವರನ್ನು ಪ್ರಶಂಶಿಸಲು 'ಕನ್ನಡ ನುಡಿ' ಬಳಸಿಕೊಂಡ ಎಂಬುದಾಗಿ ಟೀಕಿಸಿದ್ದರು. ನಾರಾಯಣರು ಅಧ್ಯಕ್ಷರಾದ ಮೇಲೆ ಸಾಹಿತ್ಯಕ್ಷೇತ್ರದ ಪಟ್ಟಭದ್ರ ಜನಗಳಿಗಳಿಗೇ ಹೆಚ್ಚಿನ ಮಣೆಹಾಕಿದರೆಂಬ ಕಾರಣದಿಂದ ಬಿಸಿರಕ್ತದ ನಾನು ಅವರನ್ನು ಆಕ್ಷೇಪಿಸಿ ಕಿಡಿ ನುಡಿಗಳನ್ನಾಡಿ ಅವರು ಅಧ್ಯಕ್ಷರಾಗಿರುವ ತನಕ ಸದಸ್ಯತ್ವ ನವೀಕರಿಸಿರಲಿಲ್ಲವೆಂಬುದು ಕಲ್ಲೆಯವರಿಗೆ ಚನ್ನಾಗಿಗೊತ್ತಿತ್ತು. ಇದಕ್ಕೆ ಮುನ್ನ ಪತ್ರಕರ್ತರ ಸಂಘದ ಚಟುವಟಿಕೆಗಳಲ್ಲಿ ನಾನು ವಡ್ಡರ್ಸೆ ರಘುರಾಮಶೆಟ್ಟರ ಜೊತೆ ಒಡನಾಟವಿಟ್ಟುಕೊಂಡಿದ್ದರಿಂದ ದಕ್ಷಿಣ ಕನ್ನಡದ ಭಂಟರು ಹಳೇ ಮೈಸೂರಿನ ಒಕ್ಕಲಿಗರು ಒಂದೇ ಜನಾಂಗಕ್ಕೆ ಸೇರಿದರೆಂಬ ಕಾರಣ ನಾನು ಈ ರೀತಿ ಮಾಡುತ್ತಿರುವೆನೆಂದು ತಂಟೆ ತೆಗೆದಿದ್ದುದುಂಟು.'ಜನಪ್ರಗತಿ'ಗೆ ನಾನು ಬರೆಯುತ್ತಿದ್ದಾಗ ಶ್ರೀ ಜಾಣಗೆರೆ ವೆಂಕಟರಾಮಯ್ಯನವರ ಚೊಚ್ಚಲ ಕಥಾಸಂಕಲನ 'ಪ್ರಪಾತ'ದ ಬಗೆಗೆ ಕೆಲ ಮೆಚ್ಚುಗೆಯ ಮಾತುಗಳನ್ನು ಬರೆದಿದ್ದೆ. ಆ ವೇಳೆಗೆ ಜಾಣಗೆರೆ ಜೊತೆ ಯಾವುದೋ ವಿಷಯಕ್ಕೆ ಮನಸ್ತಾಪ ಹೊಂದಿದ್ದ ಶ್ರೀ ಕಲ್ಲೆಯವರು ಇಂತಹದೇ ಬಿರುನುಡಿಗಳನ್ನಾಡಿದ್ದರು. ಜಾಣಗೆರೆಯವರು ಕುಂಚುಟಿಗರಾಗಿದ್ದು ಒಕ್ಕಲಿಗರ ಒಂದು ಉಪಜಾತಿ ಎಂಬುದೇ ಕಲ್ಲೆಯವರು ಈ ಬಿರಿನುಡಿಗಳಿಗೆ ಕಾರಣವಾಗಿತ್ತು. ಆದರೆ ನನಗಂತೂ ಅದುವರೆಗೆ ಜಾಣಗೆರೆ ಯಾವ ಜಾತಿ ಎಂಬುದು ಖಂಡಿತಾ ತಿಳಿದಿರಲಿಲ್ಲ. ಓರ್ವ ಕಂಪೋಜಿಟರ್ ಆಗಿ, ಸಂಜೆ ಕಾಲೇಜಿನಲ್ಲಿ ವ್ಯಾಸಾಂಗ ಮಾಡಿಕೊಂಡು ಪದವಿ ಮುಗಿಸಿ, ಸಾಹಿತ್ಯ ಕೃಷಿಯಲ್ಲಿ ತೊಡಗಿದ ಸಾಹಸಿಯಾದ ಬಗೆಗಷ್ಟೆ ಅವರ ಬಗ್ಗೆ ನಾನು ಮೆಚ್ಚುಗೆಯ ನುಡಿಗಳನ್ನು ಬರೆದದ್ದು. ಅಲ್ಲದೆ ಆಗ ಮುಖ್ಯಮಂತ್ರಿಯಾಗಿದ್ದ ದಿ॥ಆರ್. ಗುಂಡುರಾಯರು 'ಕಾಸರಗೋಡು ಕರ್ನಾಟಕದ್ದು, ಮಣ್ಣಿನ ಮಕ್ಕಳಿಗೆ ಕೆಲಸ' ಎಂದು ಹೇಳಿಕೆ ನೀಡಿದ ಬಗ್ಗೆ ಅವರು ತಿರುವನಂತಪುರಕ್ಕೆ ಭೇಟಿಕೊಟ್ಟಿದ್ದಾಗ ಅಲ್ಲಿಯ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ, ''ಕಾಸರಗೋಡು ಮುಗಿದ ಕಥೆ ಮಣ್ಣಿನ ಮಕ್ಕಳಿಗೆ ಕೆಲಸ ಎಂದು ಸಾಂದರ್ಭಿಕವಾಗಿ ಹೇಳುವ ಮಾತಿಗೆ ಹೆಚ್ಚು ಮಹತ್ವ ಕೊಡುವುದು ಬೇಡ'' ಎಂದು ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವ ಮಾತುಗಳನ್ನಾಡಿದ್ದಾಗ 'ಕನ್ನಡ ನುಡಿ'ಯಲ್ಲಿ ನಾನು ಟೀಕಿಸಿ ಬರೆದಿದ್ದೆ. ರಾಜ್ಯೋತ್ಸವ ವಿಶೇಷಾಂಕದಲ್ಲಿ ನಾನು ಬರೆದಿದ್ದ ಲೇಖನದಲ್ಲಿ ಕನ್ನಡ ಚಳವಳಿ ನಾಯಕರೊಬ್ಬರ ಬಗ್ಗೆ ಪರೋಕ್ಷವಾಗಿ ಬರೆದಿದ್ದ ಬಗೆಗೂ ಜಗಳ ತೆಗೆದಿದ್ದರು. ಇಷ್ಟಾದರೂ ನಾನು ಅವರೊಡನೆ ಮಾತನಾಡುವುದುನ್ನು ಬಿಟ್ಟಿರಲಿಲ್ಲ.

ಮಾತುಕತೆಗೆ ಕೊನೆ

ಚಿಕ್ಕಮಗಳೂರಿನಲ್ಲಿ ೧೯೮೧ರಲ್ಲಿ ಸಾಹಿತ್ಯ ಸಮ್ಮೇಳನ ಜರುಗಿದ ಬಳಿಕ ಒಮ್ಮೆ 'ಪ್ರಕಾಶ ಕೆಫೆ'ಯಲ್ಲಿ ಕಾಫಿ ಕುಡಿಯುತ್ತಿದ್ದಾಗ ಯಾವುದೋ ಮಾತಿಗೆ ಈ ಮೇಲೆ ತಿಳಿಸಿದ ಹಳೆಯದನ್ನೆಲ್ಲಾ ಪುನರಾವರ್ತನೆ ಮಾಡಿ ನನ್ನನ್ನು ಕುರಿತು 'ನಿಮ್ಮ ಅಂತರಾಳದಲ್ಲಿ ಒಕ್ಕಲಿಗ ಮನೋಭಾವವಿದೆ'. (You have got Vokkaliga feeling in your sub consious mind) ಎಂದು ಇಂಗ್ಲೀಷ್‌ನಲ್ಲಿ ಆರೋಪಿಸಿದಾಗ, ಅವರಿಗೆ ತಕ್ಕರೀತಿಯಲ್ಲಿ ಪ್ರತಿಕ್ರಿಯಿಸುತ್ತಾ ನಾನು ಅವರ ಕೆಲವು ದ್ವಂದ್ವ ನಡುವಳಿಕೆಗಳನ್ನು ಬಯಲುಮಾಡಿ ಬಾಯಿಮುಚ್ಚಿಸಿದ್ದೆ.ಅಷ್ಟೇ ಅಲ್ಲ ಇದುವರೆಗೆ ನಾನು

ಒಕ್ಕಲಿಗ ಮಿತ್ರರ ಒಡನಾಟದಿಂದ ದೂರವೇ ಇರುತ್ತಿದ್ದೆ. ಆದರೆ ಇನ್ನು ಮುಂದೆ ನಾನು ಅವರೊಢನೆ ಬೆರೆತು ಚಟುವಟಿಕೆ ನಡೆಸುವೆ ಎಂದೂ ಸಹ ಹೇಳಿದ್ದೆ ಪ್ರಾಮಾಣಿಕವಾಗಿ ಜ್ಯಾತ್ಯಾತೀತ ಹಾದಿ ತುಳಿದು ಬದುಕುತ್ತಾ ತತ್ಸಂಬಧ ಹಲವಾರು ತೊಂದರೆಗಳನ್ನು ಎದುರಿಸುತ್ತಿದ್ದುದನ್ನು ಸ್ವತಃ ಕಂಡಿದ್ದ ಶ್ರೀ ಕಲ್ಲೆಯರ ಈ ಮಾತುಗಳು ನನಗೆ ತಡೆದುಕೊಳ್ಳ ಲಾರದಷ್ಟು ಕೋಪ ಬರಿಸಿತ್ತು. ನನ್ನಂತಹ ಪ್ರಾಮಾಣಿಕನನ್ನೇ ಅನುಮಾನಿಸುವಾಗ ಅಂತಹವರ ಸ್ನೇಹ-ಸಹವಾಸ ಮುಂದುವರಿಸುವುದು ಅನುಚಿತ ಎಂಬ ನಿರ್ಧಾರಕ್ಕೆ ಬಂದೆ. ಆಗ ''ಇಲ್ಲಿಗೇ ಕೊನೆ ಇನ್ನು ಮುಂದೆ ಮಾತನಾಡಿಸಿಕೊಂಡು ಬಂದರೆ ಪರಿಣಾಮ ನೆಟ್ಟಗಿರುವುದಿಲ್ಲ' ಎಂದು ಎಚ್ಚರಿಸಿ ಬೀಳ್ಕೊಟ್ಟವನು ಇದುವರೆಗೆ ಮಾತನಾಡಿಲ್ಲ. ಕೆಲವಾರು ಸಂದರ್ಭಗಳಲ್ಲಿ ಮುಖಾ-ಮುಖಿ ಭೇಟಿಯ ಅವಕಾಶ ಒದಗಿದರೂ ನನ್ನ ಸ್ವಭಾವದ ಬಗೆಗೆ ಚೆನ್ನಾಗಿ ಅರಿತಿದ್ದ ಅವರು ನನ್ನ ಕೋಪದ ಮಾತಿಗೆ ಗೌರವಕೊಟ್ಟು ನಡೆದುಕೊಂಡಿದ್ದಾರೆ.ಇಷ್ಟೆಲ್ಲಾ ಆದ ಮೇಲೆ ಶ್ರೀ ಹಂಪನಾ ಅವರಿಗೆ ಪಟ್ಟು ಹಿಡಿದು ನನ್ನನ್ನು 'ಕನ್ನಡನುಡಿ'ಯಿಂದ ಬಿಡುಗಡೆಗೊಳಿಸಿದ್ದರು. ಮುಂದೆ ನನ್ನ ಅವರ ನಡುವೆ ಲೇಖನ ಕಾವ್ಯರೂಪದಲ್ಲಿ ತಂಟೆ ನಡೆದದ್ದಿದೆ. ಇದಕ್ಕೆ ಅವರು ತಮ್ಮ 'ಜನಪ್ರಗತಿ' ಬಳಸಿಕೊಂಡರೆ ನಾನು ನನ್ನ ತಾಲ್ಲೂಕಿನ 'ಬಯಲು ಸೀಮೆ' ಪತ್ರಿಕೆ ಬಳಸಿಕೊಂಡಿದ್ದೆ.

ಮುಂದೆ ನಾನು ಶ್ರೀ ವಡ್ಡರ್ಸೆಯವರ ಆಹ್ವಾನದ ಮೇರೆಗೆ, ಅವರು ಮಂಗಳೂರಿನಲ್ಲಿ ಸ್ಥಾಪಿಸಿದ್ದ 'ಮುಂಗಾರು'ವಿಗೆ ಬೆಂಗಳೂರಿನಿಂದ ಮುಖ್ಯವರದಿಗಾರನಾಗಿ ಕೆಲಸ, ಮಾಡ ತೊಡಗಿದಾಗ, ಅದುವರೆಗೆ 'ಸಂಯುಕ್ತ ಕರ್ನಾಟಕ'ದಲ್ಲಿ ಮೇಜಿಗೆ ಅಂಟಿಕೊಂಡು ಕೆಲಸಮಾಡುತ್ತಿದ್ದ ನಾನು ರಾಜಕಾರಣಿಗಳ-ಅಧಿಕಾರಿಗಳ ನೇರ ಸಂಪರ್ಕಕ್ಕೆ ಒಡ್ಡಿಕೊಂಡು ವಿಧಾನಸೌಧ, ಮಹಾನಗರ ಪಾಲಿಕೆ ಹೀಗೆ ಜನಪ್ರತಿನಿಧಿಗಳು ಕೆಲಮಾಡುವ ಕಡೆ ಹೊಕ್ಕಾಡ ಬೇಕಾಯಿತು. ವರದಿಗಾರರಲ್ಲಿ ವಿಶೇಷವಾಗಿ ಮುಖ್ಯ ವರದಿಗಾರರಲ್ಲಿ ಕೆಲವರು ತಮ್ಮ ಸ್ವಾಭಿಮಾನವನ್ನು ಹರಾಜಿಗಿಟ್ಟು, ರಾಜಕಾರಣಿಗಳು-ಅಧಿಕಾರಿಗಳೇ ಮೊದಲಾದವರಿಂದ ಹಣಮಾಡುವ ದಂಧೆಯಲ್ಲಿ ತೊಡಗಿರುವರೆಂಬ ಆರೋಪಗಳಿವೆ. ಆ ರೀತಿ ನಾನು ಮಾಡುತ್ತಿರಬಹುದೆಂಬ ಮಾತುಗಳನ್ನು ನನಗೂ ಅವರಿಗೂ ಮಿತ್ರರಾಗಿದ್ದ ಕೆಲವರು ಸಿಕ್ಕಿದಾಗ ಹೇಳಿದ್ದರಂತೆ. ಬಾಯಿಂದ ಬಾಯಿಗೆ ಮಾತುಗಳು ಹೋದಾಗ, ಸಿಹಿ-ಉಪ್ಪು-ಖಾರ ಬೆರೆಯುವ ಸಂಭವವಿರುವುದರಿಂದ ಅಂತಹುಗಳನ್ನು ನಾನು ಕಿವಿಗೆ ಹಾಕಿಕೊಳ್ಳಲಿಲ್ಲ. ಅವರು ಬಂದು ನನ್ನೊಡನೆ ನೇರವಾಗಿ ಕೇಳಲಿ ಆಗ ನಾನು ಸೂಕ್ತವಾಗಿ ಉತ್ತರಿಸುತ್ತೇನೆ ಎಂದಷ್ಟೆ ಹೇಳುತ್ತಿದ್ದೆ.

ಪತ್ರಿಕಾ ಹಾದರ ಮಾಡಿಲ್ಲ

ನನ್ನ ಹಾಗೂ ಕಲ್ಲೆಯವರ ನಡುವಿನ ಸ್ನೇಹದ ಕಂದರ ಹೆಚ್ಚಾದರೂ ಅವರು ಪತ್ರಿಕಾ ಕ್ಷೇತ್ರಕ್ಕೆ ಸಲ್ಲಿಸಿರುವ ಕೊಡುಗೆ ಹಾಗೂ ಅವರ ಪಾಂಡಿತ್ಯ-ವೈಚಾರಿಕತೆಯ ಬಗೆಗೆ ನನಗೆ ಈಗಲೂ ಗೌರವ ಭಾವನೆ ಇದೆ.ಆದುದರಿಂದಲೇ ನಾನು ಪತ್ರಿಕಾ ಅಕಾಡಮಿಯ ಸದಸ್ಯನಾಗಿ ಅವರಿಗೆ ೧೯೯೫ರಲ್ಲಿ 'ಪತ್ರಿಕಾ ಅಕಾಡಮಿ ವಾರ್ಷಿಕ ಪ್ರಶಸ್ತಿ' ದೊರಕಿಸಲು ಪ್ರಯತ್ನಿಸಿದೆ. ಆದರೆ ಅವರು ಅದಕ್ಕೆ ನಾನು ಕಾರಣನೆಂದು ಸ್ವೀಕರಿಸಲಿಲ್ಲ. ೧೯೯೬ರಲ್ಲಿ 'ಕರ್ನಾಟಕ ಕಾರ್ಯನಿರತ

ಪತ್ರಕರ್ತರ ಸಂಘ' ಹಿರಿಯ ಪತ್ರಕರ್ತರಿಗೆ ಗೌರವ ಸದಸ್ಯತ್ವ ನೀಡಲು ಮುಂದಾದಾಗ ಗೌರವ ಸದಸ್ಯರ ಪಟ್ಟಿಯಲ್ಲಿ ಅವರ ಹೆಸರು ಸೇರ್ಪಡೆಯಾಗುವುದಕ್ಕೆ ನಾನೇ ಕಾರಣ ಎಂಬುದು ಅವರಿಗೆ ತಿಳಿಯದೆಯೇ ಸಂತೋಷದಿಂದ ಬಂದು ಸ್ವೀಕರಿಸಿರುವುದನ್ನು ಕಂಡು ನಾನು ಸಂತೋಷಗೊಂಡೆ. ಶ್ರೀ ಕಲ್ಲೆಯವರ ಬಗ್ಗೆ ಇಷ್ಟೆಲ್ಲಾ ಬರೆಯಬೇಕಾಗಿ ಬಂದದ್ದು ನನ್ನ ಸಾರ್ವಜನಿಕ ಬದುಕನ್ನು ರೂಪಿಸಿದ ರೂವಾರಿ ಅವರಾಗಿರುವುದರಿಂದ. 'ಮುಂಗಾರು' ವರದಿಗಾರನಾಗಿ ನಾನು ಪಟ್ಟಬವಣೆ ನನ್ನನ್ನು 'ಮುಂಗಾರು'ಗೆ ಕರೆದುಕೊಂಡ ವಡ್ಡರ್ಸೆ ರಘುರಾಮಶೆಟ್ಟರಿಗೇ ಗೊತ್ತು. ನಾನು ನನ್ನ ಪತ್ರಿಕಾವೃತ್ತಿಯಲ್ಲಿ ಇತರ ಕೆಲವರಂತೆ 'ಹಾದರ' ಮಾಡಿ, ರಾಜಕಾರಣಿಗಳಿಂದ ಆಗಲಿ-ಅಧಿಕಾರಿಗಳಿಂದ ಆಗಲಿ ಹಣ ಪಡೆದಿರುವುದನ್ನು ಯಾರಾದರೂ ತೋರಿಸಿಕೊಟ್ಟರೆ, ಸಾರ್ವಜನಿಕವಾಗಿ ಯಾವುದೇ ಶಿಕ್ಷೆ ಅನುಭವಿಸಲು ಸಿದ್ಧ.

ಕನ್ನಡ ಸಂಘರ್ಷ ಸಮಿತಿ

ನಾನು ಪತ್ರಕರ್ತನಾಗಿ ಗಳಿಸಿಕೊಂಡ ಸ್ನೇಹ ಹಾಗೂ ಪ್ರಭಾವವನ್ನು ನಾನು ಅಧ್ಯಕ್ಷನಾಗಿರುವ 'ಕನ್ನಡ ಸಂಘರ್ಷ ಸಮಿತಿ'ಗೆ ಬಳಸಿದ್ದೇನೆ. ನಾನು ಅಧ್ಯಕ್ಷನಾಗುವ ಮುನ್ನ ಶೂನ್ಯದಲ್ಲಿದ್ದ ಅದರ ಬಂಡವಾಳವನ್ನು ಸಂಸ್ಥೆ ಪ್ರಕಟಿಸಿರುವ ಪುಸ್ತಕಗಳ ಮೌಲ್ಯವೂ ಸೇರಿದರೆ ಇಂದು ಒಂದೂವರೆ ಲಕ್ಷದಷ್ಟಾಗಬಹುದು. ಇದು ಕೂಡ ಯಾರಿಗೂ ಬಲವಂತಮಾಡದೆ, ಮನವೊಲಿಸಿ, ಜಾಹೀರಾತು ರೂಪದಲ್ಲಿ ಪಡೆದುದಾಗಿದೆ. ಹೀಗೆ ನಾನಿರುವ ಸಂಘಟನೆಯನ್ನು ಬಹಳ ಆರ್ಥಿಕ ಶಿಸ್ತಿನಿಂದ ಬೆಳೆಸಿದ್ದೇನೆ. ಸಮಿತಿಗೆ ಅಂಗರಚನೆಯೊಂದನ್ನು ಸಿದ್ಧಪಡಿಸಿ, ಅದನ್ನು ನೋಂದಣಿ ಮಾಡಿಸಿ, ಪ್ರತಿವರ್ಷ ಲೆಕ್ಕಪರಿಶೋಧಕರಿಂದ ಪರಿಶೀಲನೆಗೊಳಪಡಿಸಲಾಗುತ್ತಿದೆ. ಸದಸ್ಯತ್ವ ವೆನ್ನುವುದೇ ಇಲ್ಲದಿದ್ದ ಸಂಘಟನೆಯಲ್ಲಿ ಸದಸ್ಯತ್ವ ನೋಂದಣಿ ಆರಂಭಿಸಿ, ಅದರ ಚಟುವಟಿಕೆಗಳ ಮೂಲಕವೇ ಸದಸ್ಯರನ್ನು ಆಕರ್ಷಿಸಿ, ಇದೀಗ ಮಹಾಪೋಷಕರಿಂದ ಹಿಡಿದು ಆಜೀವ ಸದಸ್ಯತ್ವದವರೆಗೆ ಐದುನೂರಕ್ಕೂ ಹೆಚ್ಚು ಸದಸ್ಯ ಬಲವನ್ನು ಸಮಿತಿ ಹೊಂದಿದೆ.

ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕನ್ನಡ ಪರ-ಹೋರಾಟಗಳಲ್ಲಿ ಕ್ರಿಯಾಶೀಲವಾಗಿರುವ 'ಕನ್ನಡ ಸಂಘರ್ಷ ಸಮಿತಿ'ಗೆ 'ಮಹಾನಗರ ಪಾಲಿಕೆ'ಯಿಂದಾಗಲೀ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಾಗಲೀ ನಿಯಮಿತವಾಗಿ ಹಣ ಬರುತ್ತಿಲ್ಲ. ಆದರೂ 'ಕನ್ನಡ ಸಂಘರ್ಷ ಸಮಿತಿ'ಸ್ವಾಭಿಮಾನದಿಂದ ತನ್ನ ಚಟುವಟಿಕೆ ಮುನ್ನಡೆಸುತ್ತ ಅನೇಕ ಗಣ್ಯ ಹಿರಿಯರಿಂದ ಮೆಚ್ಚುಗೆ ಪಡೆದಿದೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ನಾನು ೧೯೯೧ರ ಆಗಸ್ಟ್‌ನಲ್ಲಿ ಅಧಿಕಾರ ವಹಿಸಿಕೊಂಡಾಗ ಹಿಂದಿನವರು ಹೊತ್ತಿದ್ದ ತುಮಕೂರಿನಲ್ಲಿ ಅಖಿಲ ಭಾರತ ಪತ್ರಕರ್ತರ ಒಕ್ಕೂಟದ ಮಹಾಧಿವೇಶನದ ಜವಾಬ್ದಾರಿಯನ್ನು ತಕ್ಷಣವೇ ನಿರ್ವಹಿಸಬೇಕಾಯಿತು. ಆಗ ಅಧ್ಯಕ್ಷರಾಗಿದ್ದ ಶ್ರೀ ನ. ಅರ್ಜುನದೇವ, ಒಕ್ಕೂಟದ ಉಪಾಧ್ಯಕ್ಷ ಶ್ರೀ ಎಸ್.ವಿ. ಜಯಶೀಲರಾವ್, ಒಕ್ಕೂಟದ ಖಜಾಂಚಿಯಾಗಿದ್ದ ಶ್ರೀ ಟಿ. ನಾಗರಾಜು ಇವರೇ ಮೊದಲಾದವರ ಸಕ್ರಿಯ ಸಹಕಾರ-ಬೆಂಬಲದೊಡನೆ ಅದನ್ನು ಯಶಸ್ವಿಯಾಗಿ ನಿರ್ವಹಿಸಿದ್ದೆ.

ಅಧಿಕಾರ ವಹಿಸಿಕೊಂಡಾಗ ಬ್ಯಾಂಕ್‌ನಲ್ಲಿ ಇಟ್ಟಿದ್ದ ೫೦,೦೦೦ರೂ.ಗಳನ್ನು ನಿಶ್ಚಿತ ಠೇವಣಿಯಲ್ಲಿ ಸಾಲ ಪಡೆದು ಕೆಲಸ ಆರಂಭಿಸಿ ಆಗ ಮುಖ್ಯಮಂತ್ರಿಯಾಗಿದ್ದ. ಶ್ರೀ ಎಸ್. ಬಂಗಾರಪ್ಪ ಅವರ ತುಂಬು ಹೃದಯದ ಸಹಕಾರದೊಡನೆ ೫ ಲಕ್ಷರೂ. ಸರ್ಕಾರದ ಸಹಾಯಧನ ಪಡೆದು ಅದರಲ್ಲಿ ೩ಲಕ್ಷದವರೆಗೆ ಸಮ್ಮೇಳನದ ವ್ಯವಸ್ಥೆಗಾಗಿ ತುಮಕೂರು ಘಟಕಕ್ಕೆ ನೀಡಿ ಖರ್ಚೆಲ್ಲಾ ಕಳೆದು ೨ ಲಕ್ಷರೂ.ಗಳನ್ನು ಸಂಘಕ್ಕೆ ಉಳಿಸಿದ್ದೆ. ಆನಂತರ ೧೯೯೩ರಲ್ಲಿ ಸಂಘದ ವಜ್ರಮಹೋತ್ಸವ ಸಂದರ್ಭ ಮುಖ್ಯಮಂತ್ರಿಯಾಗಿದ್ದ ಶ್ರೀ ವೀರಪ್ಪ ಮೊಯಿಲಿ ಅವರ ಸಹಕಾರದೊಂದಿಗೆ ಸರ್ಕಾರದಿಂದ ೨ ಲಕ್ಷರೂ. ನೆರವು ಪಡೆದು ಖರ್ಚೆಲ್ಲಾ ಕಳೆದು ಒಂದು ಲಕ್ಷ ಉಳಿಸಿದ್ದೆ. ಹೀಗೆ ಸಂಘದ ೬೦ ವರ್ಷಗಳ ಇತಿಹಾಸದಲ್ಲಿ ಕೇವಲ ೬೦ ಸಾವಿರ ಮಾತ್ರವೇ ಇದ್ದ ಸಂಘದ ನಿಶ್ಚಿತ ಠೇವಣಿಯ ಮೊತ್ತವನ್ನು ನಾನು ಪ್ರಧಾನ ಕಾರ್ಯದರ್ಶಿಯಾಗಿದ್ದ ಕೇವಲ ೨೦ತಿಂಗಳ ಅವಧಿಯಲ್ಲಿ ಮೂರೂವರೆ ಲಕ್ಷಕ್ಕೇರಿಸಿದ್ದೆ.

ಹಳದಿ ಕನ್ನಡಕಗಳು ಗಮನಿಸಲಿ

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದ ಮೇಲೆ ಹಿಂದಿನ ಅಧ್ಯಕ್ಷರು ವಹಿಸಿಕೊಟ್ಟ ೧೭,೦೦೦ ರೂ.ಗಳ ಜೊತೆಗೆ ಮತ್ತಷ್ಟು ಹಣ ಸೇರಿಸಿ ಈಗ ಅದರ ಎರಡರಷ್ಟು ಹಣ ಬ್ಯಾಂಕು ಖಾತೆಯಲ್ಲಿದೆ. ಆದರೆ ಯಾರಿಂದಲೂ ದೇಣಿಗೆ ಸಂಗ್ರಹಿಸದೆ ಕೇಂದ್ರ ಪರಿಷತ್ತು ನೀಡುವ ಹಣದಲ್ಲಿಯೇ ಹಿತಮಿತವಾಗಿ ಖರ್ಚುಮಾಡಿ ಈ ಹಣ ಉಳಿಸಲಾಗಿದೆ. ಆದರೆ ಘಟಕದ ಚಟುವಟಿಕೆಗಳು ಕೇಂದ್ರ ಪರಿಷತ್ತಿಗಿಂತ ಹೆಚ್ಚು ಕ್ರಿಯಾಶೀಲವಾಗಿ ನಡೆಯುತ್ತಿರುವ ಬಗೆಗೆ ಕ.ಸಾ.ಪ.ದ. ಮಾಜಿ ಅಧ್ಯಕ್ಷರಾದ ಶ್ರೀ ಗೊ.ರು.ಚ., ಶ್ರೀ ಜಿ. ನಾರಾಯಣ, ಡಾ॥ ಹಂಪನಾ ಇತ್ಯಾದಿ ಅನೇಕ ಗಣ್ಯರಿಂದ ಮೆಚ್ಚುಗೆ ನುಡಿಗಳು ಬಂದಿವೆ. ಇದನ್ನು ನನ್ನನ್ನು 'ಹಳದಿ ಕನ್ನಡಕ' ಹಾಕಿಕೊಂಡು ನೋಡುವ ಜನ ಗಮನಿಸಬೇಕು.

ಇನ್ನು ವೈಯಕ್ತಿಕವಾಗಿ ಹೇಳಬೇಕೆಂದರೆ ನನ್ನ ಕುಟುಂಬ ಪ್ರಸ್ತುತ ಸುಮಾರು ಐವತ್ತು ಸಾವಿರಕ್ಕೂ ಹೆಚ್ಚು ಸಾಲದಲ್ಲಿದೆ. 'ಮುಂಗಾರು' ಸೇರಿದ ಬಳಿಕ ನನ್ನ ಆದಾಯ ವ್ಯವಸ್ಥಿತವಾಗಿರದಿದ್ದ ಕಾರಣ ಈ ಪರಿಸ್ಥಿತಿ. ಪಿತ್ರಾರ್ಜಿತ ಆಸ್ತಿಯ ಬೇಸಾಯದಿಂದ ಆಗೊಮ್ಮೆ ಈಗೊಮ್ಮೆ ಬರುವ ಅಷ್ಟಿಷ್ಟು ಹಣದಲ್ಲೇ ನನ್ನ ವೈಯಕ್ತಿಕ ಖರ್ಚು-ವೆಚ್ಚವನ್ನು ತೂಗಿಸಿಕೊಂಡು ಹೋಗುತ್ತಿರುವೆ. ಕುಟುಂಬದ ವೆಚ್ಚವನ್ನು ಸರ್ಕಾರೀ ಶಾಲೆಯಲ್ಲಿ ಶಿಕ್ಷಕಿಯಾಗಿರುವ ಮಡದಿ ಗಾಯತ್ರಿ ಹಾಗೂ ಇದೀಗ ತಾನೆ ಎಚ್.ಎ.ಎಲ್.ನಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ನೇಮಕಗೊಂಡಿರುವ ಮಗ ಸುಜಯ್ ನಿಭಾಯಿಸಿಕೊಂಡು ಹೋಗುತ್ತಿದ್ದಾರೆ. ೧೯೬೮ರಿಂದ 'ಮುಂಗಾರು' ಮುಚ್ಚುವವರೆಗಿನ ೨೮ ವರ್ಷಗಳ ಪತ್ರಕರ್ತನಾಗಿ ನಾನು ಗಳಿಸಿದ್ದ ವರಮಾನ ಹಾಗೂ ೧೯೭೮ರಿಂದ ಮಡದಿ ಗಳಿಸಿದ್ದ ಸಂಬಳದ ಒಟ್ಟು ಆದಾಯದಲ್ಲಿ ಬೆಂಗಳೂರಿನಲ್ಲಿ ನಮ್ಮದೇ ಆದ ಸಣ್ಣ ಗೂಡೊಂದನ್ನು ಕಟ್ಟಿಕೊಳ್ಳಲೂ ನಮ್ಮಿಂದ ಸಾಧ್ಯವಾಗಿಲ್ಲ.

'ಮುಂಗಾರು'ವಿನಿಂದ ಸಂಬಳದ ಬಾಕಿಯಾಗಿ ಸುಮಾರು ೭೫,೦೦೦ ರೂ.ಬರಬೇಕು ಏಕಾಏಕಿ ಪತ್ರಿಕೆಗೆ ಬೀಗಮುದ್ರೆ ಜಡಿದುದರ ಪರಿಹಾರ ಹಾಗೂ ಭವಿಷ್ಯನಿಧಿ ಹಣ ಸಹ

ಬರಬೇಕಿದೆ. ಆ ಸಂಬಂಧದಲ್ಲಿ ಆಡಳಿತ ವರ್ಗದವರಿಗೆ ಬರೆದ ಪತ್ರಗಳಿಗೆ ಯಾವ ಜವಾಬೂ ಇಲ್ಲ, ಆ ಪತ್ರಗಳೂ ಸಹ ಹಿಂತಿರುಗಿ ಬಂದಿಲ್ಲ.

ಪತ್ರಿಕಾಗೋಷ್ಠಿಗಳಲ್ಲಿ ಪತ್ರಕರ್ತರಿಗೆ ಉದ್ಯಮಪತಿಗಳು, ವಾಣಿಜ್ಯ ಪ್ರವರ್ತಕರು, ರಾಜಕಾರಣಿಗಳು ಗುಂಡಿನ ಗಮ್ಮತ್ತು ತೋರಿದರೂ ತಾತ್ವಿಕ ಕಾರಣಗಳಿಗಾಗಿ ಅದನ್ನು ಸೇವಿಸಿಲ್ಲ. ಬೀಡಿ, ಸಿಗರೇಟು ಜರ್ದಾ ಇತ್ಯಾದಿ ಚಟಗಳಾಗಲೀ ರೇಸು, ಇಸ್ಪೀಟು ಇತ್ಯಾದಿ ಹವ್ಯಾಸಗಳಾಗಲೀ ಇಲ್ಲ. ಲಾಟರಿ ಟೀಕೆಟು ಪಡೆದು ದಿಢೀರ್ ಶ್ರೀಮಂತನಾಗಬೇಕೆಂಬ ದುರಾಸೆ ಸಹ ಇಲ್ಲ. ಹಿಂದೆ ದಿ॥ ಕೆ. ಎಂ. ನಾಗಣ್ಣನವರ ನೇತೃತ್ವದಲ್ಲಿ ಲಾಟರಿ ಯೋಜನೆ ವಿರುದ್ಧ ಚಳುವಳಿ ನಡೆದಾಗ ನಾನು ಅದರಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದವನು. ಪತ್ರಕರ್ತನಾಗಿ ಈ ಯಾವುದೇ ಹವ್ಯಾಸಕ್ಕೆ ಬಲಿಯಾಗದ ಬಗೆಗೆ ಕೆಲವರಿಂದ ಅಪಹಾಸ್ಯಕ್ಕೆ ಗುರಿಯಾಗಿರುವುದು ಉಂಟು. ಇದು, ನನ್ನ ಬದುಕಿನ ತೆರೆದಿಟ್ಟ ಅಧ್ಯಾಯ. ಇದರಿಂದ ನಾನು ಯಾವ ರೀತಿ ಬದುಕು ಸಾಗಿಸಿರಬಹುದೆಂಬುದನ್ನು ಯಾರು ಬೇಕಾದರೂ ಊಹಿಸಬಹುದು.

ಇದೀಗ ಕಳೆದ ಎರಡು ವರ್ಷಗಳಿಂದ ನಿರುದ್ಯೋಗಿಯಾಗಿದ್ದು, ಬರೆಯುವ ಅಭ್ಯಾಸವನ್ನು ಮುಂದುವರಿಸುವ ಸಲುವಾಗಿ ನಾನೇ ಒಂದು ಪತ್ರಿಕೆಯನ್ನು ನಡೆಸುವ ಮನಸ್ಸು ಮಾಡಿರುವೆ; ಅದೂ ಕೆಲ ಸ್ನೇಹಿತರ ಒತ್ತಾಯದಿಂದ. ಈಗ ಪತ್ರಿಕೆಗೆ 'ಬಹುಜನ ಕನ್ನಡಿಗರು' ಎಂಬ ಶೀರ್ಷಿಕೆಯೇನೋ ಸಿಕ್ಕಿದೆ. ಪತ್ರ ಬಂದು ಒಂದು ತಿಂಗಳು ಮುಗಿದರೂ ಅದನ್ನು ಹೊರತರುವ ಬಗ್ಗೆ ಯಾವ ಸಿದ್ಧತೆಯೂ ನಡೆದಿಲ್ಲ. ಈ ಪತ್ರಿಕೆಯನ್ನು ನನ್ನ ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳಲು ಹೊರತರುತ್ತಿಲ್ಲ. ನನ್ನ ಬರೆಯುವ ಚಟವನ್ನು ತೀರಿಸಿಕೊಳ್ಳಲು ಮತ್ತು ಬೆಂಗಳೂರಿನ ಕನ್ನಡ ಪರ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ದಾಖಲಿಸಲು ಒಂದೇ ಒಂದು ಪತ್ರಿಕೆಯೂ ಇಲ್ಲದಿರುವ ಕೊರತೆಯನ್ನು ತುಂಬುವ ಹಂಬಲದಿಂದ . ಇದು ನನ್ನ ಮೇಲಿನ ಸ್ವಭಾವದಿಂದ ಎಷ್ಟರ ಮಟ್ಟಿಗೆ ಈಡೇರುವುದೋ ಕಾಣೆ. ಕನ್ನಡ ಸಂಘಟನೆಗಳು ಮತ್ತು ಕಾರ್ಯಕರ್ತರು ಅದನ್ನು ಬರಮಾಡಿ ಕೊಳ್ಳುವುದರ ಮೇಲೆ ಅವಲಂಬಿಸಿದೆ.

ಶ್ರೀ ಕಲ್ಲೆಯವರ ಪ್ರಸ್ತಾಪದಿಂದ ಅವರ ಒಡನಾಟದ ಅನುಭವ ಹಾಗೂ ಅವರೊಡನಿನ ಸರಸ ವಿರಸಗಳನ್ನು ಹಾಗೂ ಅವರ ಆರೋಪಗಳಿಗೆ ಉತ್ತರವನ್ನು ಒಂದೇ ಕಡೆ ದಾಖಲಿಸಿದ್ದೇನೆ. ಅರವತ್ತರ ದಶಕದಲ್ಲಿನಡೆದ ಕನ್ನಡ ಚಳವಳಿಯ ಬಗೆಗೆ ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭ ಹೊರತಂದ 'ರಾಜಧಾನಿ' ಸ್ಮರಣ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಕನ್ನಡ ಚಳವಳಿಯ ಆರಂಭದ ಘಟ್ಟ: ಒಂದು ಅವಲೋಕನ' ಎಂಬ ನನ್ನ ಲೇಖನವನ್ನು ಈ ಪುಸ್ತಕದಲ್ಲಿ ಪುನರ್ ಮುದ್ರಿಸಿರುವುದರಿಂದ ಅದರ ವಿವರಕ್ಕೆ ಇಲ್ಲಿ ಹೋಗುವುದಿಲ್ಲ. ಈ ಅವಧಿಯಲ್ಲಿ 'ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲ' 'ಉತ್ತರ ಬಡಾವಣೆ ಕರ್ನಾಟಕ ರಾಜ್ಯೋತ್ಸವ ಸಮಿತಿ' 'ರಾಜಕುಮಾರ ಕಲಾವಿಲಾಸೀ ಸಂಘ' 'ಜಯ-ಕರ್ನಾಟಕ' ಯುವಕ ಸಂಘ, ಕನ್ನಡ ಅಭಿಮಾನಿರಂಗ, ಇವೇ ಮೊದಲಾದ ಕನ್ನಡ ಸಂಘ-ಸಂಸ್ಥೆಗಳ ಮಂಚೂಣಿಯಲ್ಲಿ ನಾನು ಇದ್ದೆ.

ವಿದ್ಯಾರ್ಥಿ ದಿನದ ಹೋರಾಟ

ಆಗ ಉಪರಾಷ್ಟ್ರಪತಿಯಾಗಿದ್ದ ಡಾ॥ ಜಾಕಿರ್ ಹುಸೇನ್ ರಾಷ್ಟ್ರಪತಿಯಾಗುವುದನ್ನು ತಪ್ಪಿಸಲು ಪುರೋಹಿತಶಾಹಿ ಮೇಲಾಳುತನ ಮುಂದುವರಿಸಿ ಮನುಧರ್ಮ ಶಾಸ್ತ್ರಕ್ಕನುಗುಣವಾಗಿ ಜಾತೀಯ ನೀಚೋಚ್ಛತೆಯನ್ನು ಮುಂದುವರಿಸಬೇಕೆಂದು ಬಯಸಿರುವ ಆರೆಸ್ಸೆಸ್‌ನಂತಹ ಕೋಮುವಾದಿ ಸಂಘಟನೆ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಾಗ, ಅದನ್ನು ಪ್ರತಿಭಟಿಸಿ ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲದ ಮೂಲಕ ಹಲವಾರು ಸಭೆ-ಪ್ರದರ್ಶನಗಳನ್ನು ಜಾಕೀರ ಹುಸೇನ್ ಪರ ಸಂಘಟಿಸಿದ್ದೆ. ದಲಿತರ ಹಿತದೃಷ್ಟಿಯಿಂದ ಗುಲ್ಬರ್ಗಾದಲ್ಲಿ ಡಾ॥ ಅಂಬೇಡ್ಕರ್ ಹೆಸರಿನಲ್ಲಿ 'ಭೀಮಸೇನೆ' ಎಂಬ ಸಂಘಟನೆಯನ್ನು ಖ್ಯಾತ ಅಂಬೇಡ್ಕರ ವಾದಿ ದಿ॥ ಶ್ಯಾಮಸುಂದರ ಅವರು ಸ್ಥಾಪಿಸಿದಾಗ ಅದನ್ನು ಪುರೋಹಿತಶಾಹಿ ಹಿತ ಬಯಸುವ ಪತ್ರಿಕೆಗಳು ಟೀಕಿಸಿ ಬರೆದಾಗ 'ಭೀಮಸೇನೆ' ಸ್ಥಾಪನೆಯನ್ನು ಸಮರ್ಥಿಸಿ ನಾನು ಓದುಗರ ಪತ್ರಗಳನ್ನು ಬರೆದಿದ್ದೆ. ರಾಜಾಜಿ ಕನ್ನಡಕ್ಕೆ ಅವಹೇಳನ ಮಾಡಿದ ಸಂದರ್ಭದಲ್ಲಿ ಬಿ. ಶಿವಮೂರ್ತಿ ಶಾಸ್ತ್ರಿ ಮಂಗಳವೇಢೆ ಶ್ರೀನಿವಾಸರಾವ್, ಬಿ. ಪುಟ್ಟಸ್ವಾಮಯ್ಯ ಇತ್ಯಾದಿ ಮಹನೀಯರ ಮನೆಗಳಿಗೆ ಹೊಕ್ಕಾಡಿ ಅವರಿಂದ ರಾಜಾಜಿ ವಿರುದ್ಧ ಹೇಳಿಕೆ ಕೊಡಿಸಿದ್ದೇ ಅಲ್ಲದೆ ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದ ಹಂಪನಾ, ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕ ವಿ.ಕೋ ಜವಳಿ, ಮಂಗಳವೇಢೆ ಇವರೇ ಮೊದಲಾದವರಿಂದ ಬಹಿರಂಗ ಸಭೆಯಲ್ಲಿ ಮಾತನಾಡಿಸಿರುವುದು ಉಂಟು. ಮಹಾಜನ ಆಯೋಗ ನೇಮಕವಾದಾಗ, ಅದು ಮಹಾರಾಷ್ಟ್ರೀಯರ ಒತ್ತಾಯದಿಂದ ಆದುದಾಗಿದ್ದುದರಿಂದ, ನ್ಯಾಯಮೂರ್ತಿ ಮಹಾಜನ್ ಅವರು ಮರಾಠಿಗರಾಗಿದ್ದುದರಿಂದ ಕರ್ನಾಟಕಕ್ಕೆ ಅನ್ಯಾಯವಾಗಬಹುದೆಂದು ವಿದ್ಯಾರ್ಥಿಗಳನ್ನು ಸಂಘಟಿಸಿ ವಿರೋಧಿಸುವಲ್ಲಿ ಹಾಗೂ ಅದನ್ನು ನೇಮಕಮಾಡಿದ್ದ ಆಗಿನ ಪ್ರಧಾನಿ ಲಾಲ್‌ಬಹದ್ದೂರ ಶಾಸ್ತ್ರಿಯವರು ಬೆಂಗಳೂರಿಗೆ ಭೇಟಿಕೊಟ್ಟದ್ದಾಗ ಅವರ ವಿರುದ್ಧ ಕಪ್ಪುಬಾವುಟ ಪ್ರದರ್ಶನ ಸಂಘಟಿಸುವಲ್ಲಿ ಮುಂಚೂಣಿಯಲ್ಲಿದ್ದೆ. ಇದೇ ರೀತಿ 'ಗೋವಾ' ಪೋರ್ಚಗೀಸರಿಂದ ವಿಮೋಚನೆಗೊಂಡಾಗ ಅದನ್ನು ಮರಾಠಿ ಮುಖಂಡರು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳಲೆತ್ನಿಸಿ ಒತ್ತಡ ಹೇರಲೊರಟಾಗ ಅದರ ವಿರುದ್ಧ ಪ್ರತಿಭಟನಾ ಸಭೆ-ಮೆರವಣಿಗೆಗಳನ್ನು ವ್ಯವಸ್ಥೆ ಗೊಳಿಸುವಲ್ಲಿ ಮಂಚೂಣಿಯಲ್ಲಿದ್ದೆ. ಒಂದೊ ಗೋವಾ ಅದಕ್ಕೆ ಹತ್ತಿ ಹೊಂದಿಕೊಂಡಿರುವ ಕರ್ನಾಟಕದೊಡನೆ ವಿಲೀನಗೊಳ್ಳಬೇಕು, ಇಲ್ಲವೇ ಸ್ವತಂತ್ರ ರಾಜ್ಯವಾಗಿ ಉಳಿಯಬೇಕು ಎಂಬ ವಾದವನ್ನು ಈ ವೇದಿಕೆಗಳಲ್ಲಿ ಮುಂದೊಡ್ಡಿದ್ದೆವು.

ಕರ್ನಾಟಕ ಸಂಯುಕ್ತರಂಗ ಅವಸಾನವಾದ ಮೇಲೆ ವಾಟಾಳ ನಾಗರಾಜ್ ಒಬ್ಬರೇ ತಮ್ಮ ಅನುಯಾಯಿಗಳನ್ನು ಕೂಡಿಕೊಂಡು 'ನೃಪತುಂಗಮಂಟಪ'ದಲ್ಲಿ ರಾಜ್ಯೋತ್ಸವ ಆಚರಿಸುತ್ತಿದ್ದರು. ಆಗ ನಗರಪಾಲಿಕೆಯ ಸದಸ್ಯರಾಗಿದ್ದ ಅವರು ತಮ್ಮ ವೈಯಕ್ತಿಕ ರಾಜಕೀಯ ಮಹತ್ವಾಕಾಂಕ್ಷೆಗೆ ಕನ್ನಡ ಚಳವಳಿಯನ್ನು ಬಳಸಿಕೊಳ್ಳಲೆತ್ನಿಸಿದ ನಾನು ಅವರ ಧೋರಣೆಯನ್ನು ಪ್ರತಿಭಟಿಸಿ ಶೇಷಾದ್ರಿಪುರ, ಶ್ರೀರಾಮಪುರ, ಮಲ್ಲೇಶ್ವರ, ರಾಜಮಹಲ್ ಗುಟ್ಟಳ್ಳಿ, ಯಶವಂತಪುರ ಇವೇ ಮೊದಲಾದ ಬಡಾವಣೆಗಳಲ್ಲಿನ ಕನ್ನಡ ಸಂಘಗಳ ಕಾರ್ಯಕರ್ತರನ್ನು ಸೇರಿಸಿ ಶ್ರೀ ಕೆ.ಜಿ.

ಮಹೇಶ್ವರಪ್ಪನವರ ನೇತೃತ್ವದಲ್ಲಿ, 'ಉತ್ತರ ಬಡಾವಣೆ ರಾಜ್ಯೋತ್ಸವ ಸಮಿತಿ' ಹೆಸರಿನಲ್ಲಿ ಎರಡು ಮೂರು ವರ್ಷಗಳ ಕಾಲ 'ಕರ್ನಾಟಕ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿ, ಕನ್ನಡ ಸಾಹಿತ್ಯ-ಕಲೆ-ಸಂಸ್ಕೃತಿ-ಪರಂಪರೆಗಳ ಬಗೆಗೆ ಕನ್ನಡಿಗರಲ್ಲಿ ತಿಳುವಳಿಕೆ ಮೂಡಿಸಿ ಕನ್ನಡ ಮುನ್ನಡೆಗೆ ನಿರ್ವಹಿಸಬೇಕಾದ ಕರ್ತವ್ಯಗಳ ಬಗೆಗೆ ಎಚ್ಚರಿಸುವ ಪ್ರಯತ್ನ ಮಾಡಿದ್ದೆ. ರಾಜ್ಯೋದಯವಾಗಿ ಸುಮಾರು ಹತ್ತು ವರ್ಷ ಈ ಬಗ್ಗೆ ನಿರ್ಲಕ್ಷ್ಯದಿಂದ ಇದ್ದ ರಾಜ್ಯ ಸರ್ಕಾರ ಮುಂದೆ ತಾನು ಆಚರಿಸಲು ಮುಂದಾಗುವುದರಲ್ಲಿ ನಾನಿದ್ದ ಸಂಘಟನೆಗಳ ಪ್ರಯತ್ನ ಪ್ರಧಾನವಾಗಿದ್ದಿತೆನ್ನಬಹುದು. ಇದರಿಂದ ನಮ್ಮ ರಾಜ್ಯೋತ್ಸವ ಪ್ರಯತ್ನ ಸ್ವಲ್ಪಮಟ್ಟಿಗೆ ಸಾಫಲ್ಯ ಪಡೆದ ನೆಮ್ಮದಿ ಹಾಗೂ ಆ ವೇಳೆಗೆ ರಾಜ್ಯೋತ್ಸವ ಹೆಸರಿನಲ್ಲಿ ಇದಕ್ಕೆಂದೇ ಹುಟ್ಟಿಕೊಂಡ ಕೆಲ ಸಂಘಟನೆಗಳು ವಸೂಲಿ ಕೆಲಸ ಆರಂಭಿಸಿದ ಪರಿಣಾಮವಾಗಿ ನಾವು ಈ ಆಚರಣೆಯನ್ನು ನಿಲ್ಲಿಸಿದೆವು.

ರಾಷ್ಟ್ರಭಾಷೆ ಹೆಸರಿನಲ್ಲಿ ಹಿಂದಿಯನ್ನು ಹಿಂದಿಯೇತರ ಮೇಲೆ ಹೇರತೊಡಗಿದಾಗ, ತಮಿಳುನಾಡಿನಲ್ಲಿ ಇದರ ವಿರುದ್ಧ ಪ್ರಬಲ ಹೋರಾಟ ನಡೆಯಿತು.ಕರ್ನಾಟಕದಲ್ಲಿಯೂ ವಿದ್ಯಾರ್ಥಿಗಳಿಂದ ಪ್ರತಿಭಟನೆಗಳು ನಡೆದವು. ಭಾರತದಂತಹ ಭಾಷಾವಾರು ರಾಜ್ಯಗಳ ಒಕ್ಕೂಟ ವ್ಯವಸ್ಥೆಯ ರಾಷ್ಟ್ರದಲ್ಲಿ ಪ್ರಾದೇಶಿಕ ಭಾಷೆಗಳು ಆಯಾಯ ರಾಜ್ಯಗಳಲ್ಲಿ ಪ್ರಭುತ್ವದ ಭಾಷೆಗಳಾಗಿ ಮೆರೆಯಬೇಕಾದುದು ಅತ್ಯವಶ್ಯಕ. ಅದೇ ಕಾಲಕ್ಕೆ ರಾಷ್ಟ್ರಕ್ಕೊಂದು ಸ್ವಾಭಿಮಾನ ಸಾರುವ ಅಧಿಕೃತ ಭಾಷೆ ಬೇಕೆನ್ನುವಾಗ ದೇಶದ ಎಲ್ಲ ಭಾಷೆಗಳ ಪದಗಳನ್ನು ಒಳಗೊಂಡು ಸಮೃದ್ಧವಾಗಿ ಆಡುಮಾತಿನಲ್ಲಿ ದಕ್ಷಿಣಭಾರತದಲ್ಲೂ ಪ್ರಚಲಿತವಿರುವ 'ಹಿಂದೂಸ್ಥಾನಿ ಆಗಬೇಕೇ ಹೊರತು ಉತ್ತರ ಭಾರತದ ಪಂಡಿತರ ಕರ್ಮಠ ಹಿಂದಿಯಲ್ಲ' ಎಂದು ಸಾರುವ ಅಥವಾ ಎಲ್ಲ ಭಾಷೆಗಳನ್ನೊಳಗೊಂಡ 'ಭಾಷಾ ಭಾರತಿ' ಎಂಬ ಹೊಸಭಾಷೆಯನ್ನು ರೂಪಿಸಿ ಜಾರಿಗೊಳಿಸುವ ಅಭಿಪ್ರಾಯವನ್ನು ವ್ಯಕ್ತಮಾಡಿದ ದಕ್ಷಿಣ ಭಾರತೀಯ ಭಾಷಾ ಸಮ್ಮೇಳನವನ್ನು ಸಂಘಟಿಸಿದ್ದೆ. 'ಅದರಲ್ಲಿ ಭಾರತಕ್ಕೊಂದು ಭಾಷೆ' ಎಂಬ ನನ್ನ ಕಿರುಹೊತ್ತಿಗೆಯನ್ನು ದಿ॥ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಬಿಡುಗಡೆ ಮಾಡಿದ್ದರು.

ರಾಜಕುಮಾರ ಕಲಾವಿಲಾಸಿ ಸಂಘ

ಇದೇ ಸುಮಾರಿಗೆ 'ಕನ್ನಡಕ್ಕೊಬ್ಬನೇ ರಾಜಕುಮಾರ' ಎಂಬುದಾಗಿ ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ಹೆಸರು ಪಡಿದಿದ್ದ ರಾಜ್‌ಕುಮಾರ್ ಬಗ್ಗೆ ಪುರೋಹಿತಶಾಹಿ ಪತ್ರಕರ್ತರು ಹಾಗೂ ಅವರ ಪ್ರಭಾವಕ್ಕೊಳಗಾದ ಕೆಲವು ಕಿಡಿಗೇಡಿಗಳ ಗುಂಪು ರಾಜ್‌ಕುಮಾರ್ ಅವರ ತೇಜೋವಧೆಗೆ ವ್ಯವಸ್ಥಿತವಾಗಿ ಪ್ರಯತ್ನಿಸಿದಾಗ ನಾನು ಪ್ರಧಾನಕಾರ್ಯದರ್ಶಿಯಾಗಿ, ಆಗ ಕನ್ನಡ ಸಾಹಿತ್ಯ ಪರಿಷತ್ತಿಗೆ ಗೌರವ ಕಾರ್ಯದರ್ಶಿಯಾಗಿದ್ದ, ನನಗೆ ಪದವಿ ತರಗತಿಗಳಲ್ಲಿ ಕನ್ನಡದ ಗುರುಗಳಾಗಿದ್ದ ಶ್ರೀ ಹಂಪನಾ ಅವರ ಅಧ್ಯಕ್ಷತೆಯಲ್ಲಿ 'ರಾಜ್‌ಕುಮಾರ ಕಲಾವಿಲಾಸಿ ಸಂಘ' ಎಂಬ ಹೆಸರಿನ ಸಂಘ ರಚಿಸಿ, ರಾಜ್ ವಿರೋಧಿಗಳಿಗೆ ತಕ್ಕ ಉತ್ತರ ನೀಡಿ ಬಾಯಿಮುಚ್ಚಿಸುವ ಕೆಲಸಮಾಡಿದ್ದೆವು.

ಆಗ ಇಂಡಿಯನ್ ಎಕ್ಸ್‌ಪ್ರೆಸ್ ಮುಖ್ಯ ವರದಿಗಾರರೂ, 'ಸ್ಕ್ರೀನ್' ಪತ್ರಿಕೆಯ

ಪ್ರತಿನಿಧಿಯೂ, ಮೇನಕ ಎಂಬ ಸಿನಿಮಾ ಕನ್ನಡ ಪತ್ರಿಕೆಯಲ್ಲಿ 'ವಿಶ್ವಾಮಿತ್ರ' ಎಂಬ ಲೇಖನಾಮದೊಂದಿಗೆ ಬರೆಯುತ್ತಿದ್ದವರೂ ಆದ ಹಿರಿಯ ಪತ್ರಕರ್ತ ಶ್ರೀ ವಿ.ಎನ್. ಸುಬ್ಬರಾವ್, ಅಶ್ವತ್ಥಪ್ರದಕ್ಷಿಣೆ ಎಂಬ ಶೀರ್ಷಿಕೆಯಡಿ ಬರೆಯುತ್ತಿದ್ದ 'ಕನ್ನಡ ಪ್ರಭ'ದ ಹಿರಿಯ ಪತ್ರಕರ್ತ ಟಿ.ಜಿ. ಅಶ್ವತ್ಥ ನಾರಾಯಣ, 'ಕನ್ನಡ ಪ್ರಭ'ದ ಸಾಪ್ತಾಹಿಕ ವಿಭಾಗದ ಮುಖ್ಯಸ್ಥರಾಗಿದ್ದ ದಿ॥ ಕೆ.ಎಸ್. ನಾರಾಯಣಸ್ವಾಮಿ 'ಲಾವಣ್ಯ' ಎಂಬ ಪತ್ರಿಕೆ ನಡೆಸುತ್ತಿದ್ದವರು ಮತ್ತು ಅವರ 'ಲಾವಣ್ಯ ಲೇಖಕರ ಬಳಗ' ರಾಜ್‌ಕುಮಾರ ವಿರೋಧೀ ಬರಹ ಹಾಗೂ ಚಟುವಟಿಕೆಗಳಲ್ಲಿ ತೊಡಗಿದ್ದುದನ್ನು ಎತ್ತಿ ಹೇಳಬಹುದು. ಈ ಸಂದರ್ಭದಲ್ಲಿ ನಾನು 'ಜನಪ್ರಗತಿ' ಹಾಗೂ 'ನಟರಾಜ' ಪತ್ರಿಕೆಗಳಲ್ಲಿ ಇವರ ದುರುದ್ದೇಶಗಳನ್ನು ಟೀಕಿಸಿ ಲೇಖನಗಳನ್ನು ಬರೆದಿದ್ದೆ. ಆದರೆ ಮುಂದೆ ರಾಜ್‌ಕುಮಾರ್ ಅವರಿಗೆ 'ಪದ್ಮಭೂಷಣ' ಪ್ರಶಸ್ತಿ ಬಂದಾಗ, ಸ್ಮರಣ ಸಂಚಿಕೆ ತಂದು ಅಭಿನಂದನಾ ಕಾರ್ಯಕ್ರಮ ನಡೆಸಿದಾಗ ಅವರಿಗೆ ಬಹಳ ಹತ್ತಿರವಾಗಿ ಪರಾಕು ಹಾಕಿದವರು ಈ ಪತ್ರಕರ್ತರು. ಕನ್ನಡ ಚಿತ್ರರಂಗದೊಳಗೆ ಖ್ಯಾತ ನಿರ್ದೇಶಕರಾಗಿದ್ದ ಪುಟ್ಟಣ್ಣ ಕಣಗಾಲ್ ಅವರ ಬಳಗ, ಆರೆನ್ನಾರ್ ಮತ್ತು ಮಕ್ಕಳು ಇವರೇ ಮೊದಲಾದವರೂ ಇದೇ ರೀತಿಯಲ್ಲಿ ರಾಜಕುಮಾರ ಅವರನ್ನು ತುಳಿಯಲು ನಡೆಸಿದ ಪ್ರಯತ್ನಗಳು ಸಫಲವಾಗಲಿಲ್ಲ. ಮಲ್ಲೇಶ್ವರದಲ್ಲಿ ಈ ನನ್ನೆಲ್ಲಾ ಚಟುವಟಿಕೆಗಳಿಗೆ ಮಿತ್ರರಾದ ಶ್ರೀ ಜೀರಿಗೆ ಲೋಕೇಶ ಮತ್ತು ಜಯಂತಿ ಪ್ರಿಂಟರ್ ಮಾಲಿಕರಾದ ಶ್ರೀ ವೈ.ವಿ. ಶಾಂತಮೂರ್ತಿ ಇವರು ಹೆಚ್ಚಿನ ಸಹಕಾರ ನೀಡಿದ್ದಾರೆ. ನನ್ನ ಬೆಳವಣಿಗೆಯಲ್ಲಿ ಇವರ ಪಾತ್ರ ಮರೆಯಲಾಗದು.

ಸಂಯುಕ್ತ ಕರ್ನಾಟಕದಲ್ಲಿ

ಇಷ್ಟೆಲ್ಲಾ ಚಟುವಟಿಕೆಗಳ ನಡುವೆ ನಾನು ಬಿ.ಎಸ್ಸಿ.ಯಲ್ಲಿ ತೇರ್ಗಡೆ ಹೊಂದಲಿಲ್ಲ. ಆದರೆ ನಾನು ನಡೆಸುತ್ತಿದ್ದ ಚಟುವಟಿಕೆಗಳ ವರದಿ ಬರೆಯುತ್ತಿದ್ದು, ಹೇಳಿಕೆ ನೀಡುವುದು, ಪತ್ರಿಕೆಗಳಿಗೆ ಓದುಗರ ಪತ್ರ ಬರೆಯುವುದೇ ಮೊದಲಾದ ಬಗೆಗೆ ಹಾಗೂ ಪ್ರಚಲಿತ ವಿದ್ಯಾಮಾನಗಳ ಬಗೆಗೆ ಶ್ರೀ ಕಲ್ಲೆಯವರಿಂದ ಮಾರ್ಗದರ್ಶನ ಲಭಿಸುತ್ತಿದ್ದುದರಿಂದ ನಾನೊಬ್ಬ ಬರಹಗಾರನಾಗಿ ರೂಪುಗೊಂಡಿದ್ದೆ. 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಆಗ ಹಿರಿಯ ವರದಿಗಾರರಾಗಿ ಕೆಲಸಮಾಡುತ್ತಿದ್ದ ಪ್ರಹ್ಲಾದ ಡಿ. ಕುಳಲಿ ಅವರು ಶ್ರೀ ಕಲ್ಲೆಯವರಿದ್ದ ಮನೆಯ ಮೊದಲನೇ ಮಹಡಿಯಲ್ಲಿ ವಾಸವಾಗಿದ್ದರು. ಅವರ ಮೂಲಕ ನನ್ನನ್ನು 'ಸಂಯುಕ್ತ ಕರ್ನಾಟಕ'ಕ್ಕೆ ಸೇರುವಂತೆ ಮಾಡಿದವರು ಕಲ್ಲೆಯವರೇ. ಆ ಪತ್ರಿಕೆಯಲ್ಲಿ ಮಾಧ್ವ ಮತಾವಲಂಬಿಗಳದೇ ಪ್ರಾಧಾನ್ಯ. ಪತ್ರಿಕೆಯ ಟ್ರಸ್ಟಿ ಹಾಗೂ ಸಂಪಾದಕರಾಗಿದ್ದ ಸ್ವಾಂತತ್ರ್ಯ ಹೋರಾಟಗಾರ ಗಾಂಧೀವಾದಿ ಎಂದು ಹೆಸರಾಗಿದ್ದ ರಂಗನಾಥ ರಾಮಚಂದ್ರ ದಿವಾಕರ, ಬೆಂಗಳೂರು ಆವೃತ್ತಿಯ ಮುಖ್ಯಸ್ಥರಾದ ಶ್ರೀ ಕೆ.ಶಾಮರಾವ್ (ಈಗಿನ ವ್ಯವಸ್ಥಾಪಕ ಸಂಪಾದಕರು)ರಿಂದ ಹಿಡಿದು ಟೈಂ ಕೀಪರ್ ಸೇತುಮಾಧವಾಚಾರ್,ಕಂಪೋಸಿಂಗ್‌ನ ಅಂಬೇಕರ, ಅಟೆಂಡರ್ ರಾಘುವೇಂದ್ರನವರೆಗೆ ಶೇ. ೬೦ರಷ್ಟು ಮಾಧ್ವರೇ ತುಂಬಿದ್ದರು. ಉಳಿದ ಒಟ್ಟು ನೌಕರರಲ್ಲಿ ೨೦ರಷ .ಇತರ ಬ್ರಾಹ್ಮಣ ಸಮುದಾಯದವರಿದ್ದರು. ಇನ್ನೆಲ್ಲಾ ಶೂದ್ರಾತಿ ಶೂದ್ರ ಜಾತಿಯವರು ಶೇ ೨೦ರಷ್ಟು. ಇದರಲ್ಲಿ

ಪತ್ರಕರ್ತರೇ ಹೆಚ್ಚು. ಪ್ರಹ್ಲಾದ ಕುಳಲಿ ಕಟ್ಟಾ ಮಾಧ್ವರಾದರೂ ಇತರರಂತೆ ಸ್ನೇಹದಲ್ಲಿ ಅದನ್ನು ತೋರಿಸಿಕೊಳ್ಳುತ್ತಿರಲಿಲ್ಲ. ವ್ಯಕ್ತಿಗತ ಬದುಕಿಗೆ ಸೀಮಿತಗೊಳಿಸಿದ್ದರು. ಹೀಗಾಗಿ ನನಗೆ ನೆರವಾಗಿದ್ದರು. ರಾಮಣ್ಣ ಕೋಡಿಹೊಸಹಳ್ಳಿ ಎಂದಿದ್ದ ನನ್ನ ಹೆಸರಿನಿಂದ ನನ್ನ ಜಾತಿ ತಿಳಿದುಕೊಳ್ಳಲಾಗದಿದ್ದ ಅಲ್ಲಿನ ಸಂಪಾದಕೀಯ ವಿಭಾಗದ ಕೆಲ ಹಿರಿಯರು 'ನೀವು ಯಾವ ಪೈಕಿ' ಎಂದು ಕೇಳಿದ್ದರು. 'ಪೈಕಿ ಗಿಯ್ಕಿ ಗೊತ್ತಿಲ್ಲ. ನಿಮಗೆ ನಾನು ಯಾವ ಜಾತಿ ಎಂದು ತಿಳಿಯುವ ಕುತೂಹಲವಿದ್ದರೆ ಹೇಳುತ್ತೇನೆ' ಎಂದೆ. ನನ್ನ ಈ ನೇರ ನುಡಿಗಳಿಗೆ ವಿಚಲಿತರಾದ ಅವರು 'ಇಲ್ಲ ಇಲ್ಲ' ಎಂದು ತೆಪ್ಪಗಾಗಿದ್ದರು.

ನಾನು 'ಸಂಯುಕ್ತ ಕರ್ನಾಟಕ' ಸೇರಿದಾಗ ನನ್ನನ್ನು ಕೆಲದಿನಗಳ ಬಳಿಕ ವರಿದಗಾರನನ್ನಾಗಿ ಮಾಡುವುದಾಗಿಯೂ, ಒಂದು ವರ್ಷದೊಳಗೇ 'ಖಾಯಂ'ಗೊಳಿಸುವುದಾಗಿಯೂ ಸಿಕ್ಕಿದ ಆಶ್ವಾಸನೆ ಈಡೇರಲಿಲ್ಲ. ಮೂರು ವರ್ಷಕ್ಕೆ ಖಾಯಂ ಆಗಿ, ಅಲ್ಲಿಂದ ಹೊರಬರುವವರೆಗೆ ಸಂಪಾದಕೀಯ ಮೇಜಿನಲ್ಲೇ ದುಡಿದೆ. ಖಾಯಂ ಆದದ್ದೂ ಸಹ ದಬಾವಣೆಯಿಂದಲೇ ಎಂದು ಹೇಳಬಹುದು. ೧೯೭೧ರ ಆಗಸ್ಟ್‌ನಲ್ಲಿ ರಾತ್ರಿ ಪಾಳಿ ಮುಗಿಸಿ ರಾತ್ರಿ ೩ ಘಂಟೆ ಸುಮಾರಿಗೆ ಮನೆಗೆ ವಾಪಸಾಗುವಾಗ 'ಸಂಯುಕ್ತ ಕರ್ನಾಟಕ'ದ ವ್ಯಾನು ಕಿನೋ ಚಿತ್ರಮಂದಿರದ ಬಳಿಯ ಸೇತುವೆ ಹತ್ತಿರ ತೀವ್ರ ಅಪಘಾತಕ್ಕೀಡಾಗಿ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದ. ಆತನ ಪಕ್ಕದಲ್ಲಿದ್ದ ನಾನು ಹೊರಕ್ಕೆ ಎಸೆಯಲ್ಪಟ್ಟು ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಪ್ರಜ್ಞೆತಪ್ಪಿ ಬಿದ್ದಿದ್ದೆ. ಕಾಲಿನ ಮೂಳೆ ಮುರಿದಿತ್ತು. ತಲೆ-ಗಡ್ಡಕ್ಕೆ ಗಾಜಿನ ಚೂರು ಹೊಕ್ಕಿ ರಕ್ತಸ್ರಾವ ಬಹಳವಾಗಿತ್ತು. ಶೇಷಾದ್ರಿಪುರ ಠಾಣೆಯ ಪೋಲೀಸರು ಸಕಾಲಕ್ಕೆ ಧಾವಿಸಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ಕೊಡಿಸಿ ನೆರವಾಗಿದ್ದರು.ವಿಷಯ ತಿಳಿದು ಮರುದಿನ ಮನೆಗೆ ಬಂದಿದ್ದ ಶ್ರೀ ಶಾಮರಾಯರು ರಜೆ ಮುಗಿಸಿ ಬರುವ ವೇಳೆಗೆ ಖಾಯಂ ಮಾಡುತ್ತೇನೆ ಅಪಘಾತ ಪರಿಹಾರಕ್ಕಾಗಿ ನ್ಯಾಯಾಲದಲ್ಲಿ ತಕರಾರು ಹೂಡಬೇಡ ಎಂದಿದ್ದರು. ಆಗ ನಾನು ನನ್ನೊಬ್ಬನನ್ನೇ ಖಾಯಂ ಮಾಡಿದರೆ ಸರಿ ಹೋಗದು. ನನಗಿಂತ ಎರಡು-ಮೂರು ವರ್ಷ ಹಿಂದಿನಿಂದ ದುಡಿಯುತ್ತಿರುವ ಪ್ರೂಫ್‌ರೀಡರುಗಳು ಉಪ ಸಂಪಾದಕರು ಬಹಳ ಇದ್ದಾರೆ. ಅವರೆಲ್ಲರನ್ನು ಖಾಯಂ ಮಾಡಬೇಕು ಎಂದೆ. ಅದಕೊಪ್ಪಿ ಶ್ರೀ ಶಾಮರಾಯರು ಅಂತೆಯೇ ನಡೆದುಕೊಂಡಿದ್ದರು. ಒಂದು ತಿಂಗಳ ಬಳಿಕ ನಾನು ಕೆಲಸಕ್ಕೆ ಹಾಜರಾದಾಗ ನನಗೂ ಖಾಯಮಾತಿ ಪತ್ರ ನೀಡಿದ್ದರು.

ಇದಕ್ಕೂ ಮೊದಲು ತರಬೇತಿ ಉಪಸಂಪಾದಕರು ಹಾಗೂ ಪ್ರೂಫ್‌ರೀಡರಗಳಿಗೆ ಮನೆಗೆ ಪತ್ರಿಕೆ ಕಳುಹಿಸುತ್ತಿರಲಿಲ್ಲ. ಕೆಲಸ ಮುಗಿಸಿ ಮನೆಗೆ ಹೋಗುವಾಗ 'ಟೈಂ ಆಫೀಸ್'ನಲ್ಲಿ ಒಂದೊಂದು ಪ್ರತಿ ಹಳೆಯ ಪತ್ರಿಕೆ ತೆಗೆದಕೊಂಡು ಹೋಗಬೇಕಾದ ಪರಿಸ್ಥಿತಿ ಇತ್ತು. ಈ ಸಂಬಂಧ ಮನವಿ ಸಲ್ಲಿಸಿ 'ಸಂಯುಕ್ತ ಕರ್ನಾಟಕ' ಮಾರುವ ಹತ್ತಿರದ ಪತ್ರಿಕೆಗಳ ಮಾರಾಟಗಾರರಿಂದ ಮನೆಗೇ ಪತ್ರಿಕೆ ಹಾಕಿಸುವ ವ್ಯವಸ್ಥೆ ಮಾಡಿಸುವಲ್ಲಿ ಸಫಲನಾಗಿದ್ದ ನಾನು ಇವರೆಲ್ಲರಿಗೂ ಖಾಯಂ ಮಾಡಿಸಿದ ಪರಿಣಾಮವಾಗಿ ಸಂಪಾದಕೀಯ ವಿಭಾಗದ ವೃತ್ತಿ ಬಾಂಧವ್ಯರ ಹಿತಕಾಯುವ ನಾಯಕನನ್ನಾಗಿ ನನ್ನನ್ನು ಎಲ್ಲರು ಗುರುತಿಸತೊಡಗಿದರು.

ಈ ಅವಧಿಯಲ್ಲಿ ಒಂದು ಘಟನೆ ನೆನಪಿಗೆ ಬರುತ್ತದೆ. ನಾನು ಸಂಯುಕ್ತ ಕರ್ನಾಟಕ ಸೇರಿದಾಗ ಶ್ರೀ ಮತ್ತೂರು ಕೃಷ್ಣಮೂರ್ತಿ ಎಂಬುದು ಪ್ರಧಾನ ಉಪಸಂಪಾದಕರಾಗಿದ್ದರು. ಅವರು ಪಾಳಿಗೆ ನನ್ನನ್ನು ನೇಮಿಸಲಾಯಿತು. ಶ್ರೀ ಮತ್ತೂರು ಕೃಷ್ಣಮೂರ್ತಿಯವರಿಗೆ ಸಂಯುಕ್ತ ಕರ್ನಾಟಕ ತಮ್ಮ ಇತರ ಸಾಂಸ್ಕೃತಿಕ ಚಟುವಟಿಕೆಗಳ ಸಂಪರ್ಕ ಕೇಂದ್ರವಾಗಿತ್ತು. 'ಸಂಕೇತಿ' ಎಂಬ ಶಿವಮೊಗ್ಗ ಜಿಲ್ಲೆಯಲ್ಲಿನ ಒಂದು ಉಪಜಾತಿಗೆ ಸೇರಿದ ಇವರು ಬ್ರಾಹ್ಮಣ ಜನಾಂಗದಲ್ಲೇ ಕೆಳಸ್ತರದವಾಗಿದ್ದರೂ ಮಹಾಬ್ರಾಹ್ಮಣರಂತೆ ನಡೆದು ಕೊಳ್ಳುತ್ತಿದ್ದರು. ಶೂದ್ರ ಪಕ್ಷಪಾತಿಯಾಗಿದ್ದ ಶ್ರೀ ಕಲ್ಲೆಯವರ ಒಡನಾಡಿ ನಾನು ಎಂಬುದು ಅವರಿಗೆ ಚನ್ನಾಗಿ ಗೊತ್ತಿತ್ತು. ಹೀಗಾಗಿ ನನ್ನ ಬಗ್ಗೆ ಒಂದು ರೀತಿಯಲ್ಲಿ ತಾತ್ಸಾರ. ಆಗಿನ್ನೂ ಅಲ್ಲಿಗೆ ಸೇರಿ ನಾಲ್ಕೈದು ತಿಂಗಳೂ ಸಹ ಆಗಿರಲಿಲ್ಲ . ಒಮ್ಮೆ ಮಧ್ಯಾಹ್ನದ ಪಾಳಿಯಲ್ಲಿದ್ದಾಗ ಇಂಗ್ಲೀಷಿನ ಪಿ.ಟಿ.ಐ. ಸುದ್ದಿಯನ್ನು ಕನ್ನಡಕ್ಕೆ ಸಂಪಾದಿಸುವಾಗ ಸಣ್ಣ ಭಾಷಾಂತರ ದೋಷ ಮಾಡಿದ್ದೆ. ಆಗ ಆತ ಪಾಳಿಯ ಯಜಮಾನತನ ತೋರಿ, ಶ್ರೀ ಕಲ್ಲೆಯವರನ್ನು ಕೆಟ್ಟ ಪದದೊಡನೆ ನಿಂದಿಸಿ, ಅವರ ಜೊತೆ ಕಾಲ ಕಳೆಯುವ ಬದಲಿಗೆ ಪತ್ರಿಕೆ ಓದಿ ಬುದ್ಧಿ ಬೆಳೆಸಿಕೋ ಎಂಬಿತ್ಯಾದಿಯಾಗಿ ಏಕವಚನದಲ್ಲಿ ಬೈಯತೊಡಗಿದರು. ಶ್ರೀ ಮತ್ತೂರು ಕೃಷ್ಣಮೂರ್ತಿ ಭಟ್ಟಂಗಿತನದಲ್ಲಿ ಎಲ್ಲರನ್ನೂ ಮೀರಿಸುತ್ತಾರೆ. ಅದೇ ರೀತಿ ರಂಗನಾಥ ದಿವಾಕರರ ಬಳಿಯೂ ನಡೆದುಕೊಂಡು ಅವರಿಗೆ ಬಹು ಹತ್ತಿರವಾಗಿದ್ದರು. ಆದುದರಿಂದ ಪತ್ರಿಕೆಯಲ್ಲಿದ್ದ ಎಲ್ಲರೂ ಅವರೊಡನೆ ಭಯ-ಭೀತಿಯಿಂದ ನಡೆದು ಕೊಳ್ಳುತ್ತಿದ್ದದ್ದುಂಟು. ಆ ಸಂದರ್ಭದಲ್ಲಿ ''ನಾನು ತರಬೇತಿ ಉಪಸಂಪಾದಕ. ನಿಮ್ಮ ಹಾಗೆ ನುರಿತವನಲ್ಲ. ನನ್ನ ತಪ್ಪನ್ನು ಸರಿಪಡಿಸಿ ತಿದ್ದಿ ಹೇಳಬೇಕಾದ ಹೊಣೆ ನಿಮ್ಮದು. ನಾನು ಮಾಡಿದ್ದು ತಪ್ಪಿದೆ ನನಗೆ ತಿಳುವಳಿಕೆ ಹೇಳಿ ಆದರೆ ನನ್ನ ಮಿತ್ರರಿಗೆ ಬೈಯಲು ನಿಮಗೆ ಯಾವ ಅಧಿಕಾರವೂ ಇಲ್ಲ. ನೀವು ಶ್ರೀ ಕಲ್ಲೆಯವರ ಬಗೆಗೆ ಬಳಸಿದ ಕೆಟ್ಟ ಪದಕ್ಕಾಗಿ ೧೦-೧೫ ನಿಮಿಷಗಳಲ್ಲಿ ವಿಷಾದ ವ್ಯಕ್ತಮಾಡದಿದ್ದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ''ಎಂದು ಕೋಪಗೊಂಡು ಹೇಳಿದ್ದೆ. ಅವರು ಮಲ್ಲೇಶ್ವರದ ನಿವಾಸಿಯಾಗಿ, ಅಲ್ಲಿನ ನನ್ನ ಸಾಮಾಜಿಕ ಚಟುವಟಿಕೆಗಳನ್ನು ಅರಿತಿದ್ದ ಶ್ರೀ ಮತ್ತೂರು ನನ್ನ ಕೋಪದ ತೀಕ್ಷ್ಣತೆಯನ್ನು ಮುಖಭಾವದಿಂದ ಅರಿತು ೧೦-೧೫ ನಿಮಿಷಗಳಿರಲಿ ತಕ್ಷಣವೇ ವಿಷಾದ ವ್ಯಕ್ತಮಾಡಿ 'ನಿಮ್ಮ ಒಳ್ಳೆಯದಕ್ಕೆ ಹೇಳಿದ್ದು. ನೀವಿನ್ನೂ ಯುವಕರು. ಚನ್ನಾಗಿ ಅಭ್ಯಾಸಮಾಡಿ ಮುಂದೆ ಬರಬೇಕು' ಎಂಬಿತ್ಯಾದಿ ಹಿತನುಡಿಗಳನ್ನಾಡಿದರು. ಅಲ್ಲಿಯವರೆಗೆ ನನ್ನ ಬಗ್ಗೆ ಇದ್ದ ತಿರಸ್ಕಾರ ನೋಟ ಬದಲಾಗಿ ಮೇಲುನೋಟಕ್ಕಾದರೂ ವಿಶ್ವಾಸದವರಂತೆ ನಡೆದುಕೊಳ್ಳತೊಡಗಿದರು. ಹಗಲು 'ಭಾಗವತ', ಪುರಾಣ ಪ್ರವಚನ ಇತ್ಯಾದಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡು ನಿದ್ದೆಗೆಟ್ಟು ರಾತ್ರಿ ಪಾಳಿಗೆ ಬರುತ್ತಿದ್ದ ಅವರು ನನಗೆ-ಮತ್ತು ನಮ್ಮ ಪಾಳ್ಯದಲ್ಲಿದ್ದ ಬಿ.ಕೆ. ಗುರುರಾಜರಿಗೆ ಬರೆಯಲುಕೊಟ್ಟು ನಿದ್ದೆ ಮಾಡುತ್ತಿದ್ದರು. ಮುಖ್ಯ ಉಪಸಂಪಾದಕರಾಗಿ ರಾತ್ರಿ ವೇಳೆಗೆ ಮುಖ್ಯ ಪುಟದ ವಿನ್ಯಾಸ ಮಾಡಿಸುವ ಹೊಣೆಹೊತ್ತ ಅವರು ಇದೇ ಪರಿಸ್ಥಿತಿಯಲ್ಲಿ ನಿದ್ದೆಯಿಂದೆದ್ದು ಪುಟ ಮಾಡಿಸುತ್ತಿದ್ದರು. ಅವರೇ ಬರೆದಿದ್ದ ಸುದ್ದಿಯೊಂದಕ್ಕೆ ತಪ್ಪು ಶೀರ್ಷಿಕೆ ಕೊಟ್ಟು 'ಪೇಜು ಪ್ರೂಫ್' ಸಹ ನೋಡಿ ಕಳುಹಿಸಿದ್ದರು. ಆ ಸಮಯದಲ್ಲಿ ಹೊರಗೆ ಹೋಗಿದ್ದ ನಾನು ಆನಂತರ ಪೇಜುಕಟ್ಟುವ ಸ್ಥಳಕ್ಕೆ ಹೋಗಿ ಪ್ರೂಫ್

ನೋಡುತ್ತಿದ್ದೆ. ಸುದ್ದಿಯೇ ಬೇರೆ ಶೀರ್ಷಿಕೆ ಬೇರೆ ಇದ್ದುದ್ದನ್ನು ಮತ್ತೆ ನಿದ್ದೆ ಮಾಡುತ್ತಿದ್ದ ಅವರ ಗಮನಕ್ಕೆ ತಂದೆ. ಆಗ ಬಹಳ ಚುರುಕಾಗಿ ಓಡಾಡಿ ಸರಿಪಡಿಸಿದ್ದರು. ಆಗ ಹೇಳಿದ್ದೆ ತಪ್ಪುಗಳು. ನಿಮ್ಮಂತಹ ನುರಿತವರಿಂದ ಸಹ ಘಟಿಸುತ್ತವೆ. ಅದಕ್ಕೆ ಬೇರೆ ಯಾವುದೋ ಕಾರಣದಿಂದ ರಂಪಮಾಡುವುದು ಸಲ್ಲಕ್ಷಣವಲ್ಲ ಎಂದು. ಇದೇ ಶ್ರೀ ಮತ್ತೂರು ಕೃಷ್ಣಮೂರ್ತಿ ತಮ್ಮ ಪರಾಕು ಪ್ರವೃತ್ತಿಯಿಂದ ಮುಂದೆ ಬೆಂಗಳೂರಿನ ಭಾರತೀಯ ವಿದ್ಯಾಭವನದ ಮುಖ್ಯಸ್ಥರಾಗಿ, ಆನಂತರ ಲಂಡನ್ನಿನ ಶಾಖೆಗೆ ಹೋಗಿ ಅಲ್ಲಿ ಈಗ ತಮ್ಮವರನ್ನೇ ಪ್ರತಿಷ್ಠಾಪಿಸಿ, ಕೊನೆಕಾಲವನ್ನು ಬೆಂಗಳೂರಿನಲ್ಲೇ ಕಳೆಯಲು ಇಲ್ಲಿಯ ಭಾರತೀಯ ವಿದ್ಯಾಭವನಕ್ಕೆ ಹಿಂತಿರುಗಿದ್ದಾರೆ. ಶ್ರೀ ಮತ್ತೂರು ಕೃಷ್ಣಮೂರ್ತಿ ಘಟನೆಯ ಬಳಿಕ ಸಂಯುಕ್ತ ಕರ್ನಾಟಕ ನೌಕರರವರ್ಗದಲ್ಲಿ ನಾನು ಎದ್ದುಕಾಣುವ ವ್ಯಕ್ತಿಯಾದೆ.

ಅಂತರಜಾತಿ ಮದುವೆ

ಕೆಲಸ ಖಾಯಂ ಆದ ಬಳಿಕ ಮದುವೆಗೆ ಕಾಲ ಕೂಡಿತು. ಡಾ॥ ಲೋಹಿಯ ಹಾಗೂ ಗಾಂಧೀಜಿ ವಿಚಾರದಿಂದ ಪ್ರಭಾವಿತನಾಗಿದ್ದ ನಾನು ದೇಶದಲ್ಲಿ ಜಾತೀಯತೆ ತೊಲಗಿಸಿ ಜಾತ್ಯಾತೀತ ಸಮಾಜ ನಿರ್ಮಾಣದ ಆಸೆ ಹೊತ್ತವರ ಜೊತಗೊಡಬೇಕೆಂದು ನಿರ್ಧರಿಸಿದ್ದೆ. ನನ್ನ ನಿರ್ಧಾರಕ್ಕೆ ಸಹಕರಿಸಲು ನನ್ನ ಕೆಲ ವಿಜಾತೀಯ ಗೆಳತಿಯರು ಧೈರ್ಯ ತೋರಲಿಲ್ಲ. ತೋರಿದ್ದ ಒಬ್ಬ ಯುವತಿ ನನಗೆ ಕೆಲಸ ಸಿಕ್ಕುವ ತನಕ ಕಾಯುವ ಪರಿಸ್ಥಿತಿಯಲ್ಲಿರಲಿಲ್ಲ. ನನ್ನನ್ನು ಇಷ್ಟಪಟ್ಟಿದ್ದ ಸಜಾತಿ ಹುಡುಗಿಯನ್ನು ನಾನೇ ನಿರಾಕರಿಸಿದ್ದೆ. ಕಾರಣ ನನ್ನ ಜಾತಿಗಿಂತ ಕೆಳಸ್ತರದವರನ್ನು ಮದುವೆಯಾಗಬೇಕೆಂಬುದು ನನ್ನ ನಿಲುವಾಗಿತ್ತು. ಹೀಗಾಗಿ ನನ್ನನ್ನು ವಿವಾಹವಾಗುವ ಧೈರ್ಯ ತೋರಿದವಳು ಗಾಯತ್ರಿ ಮಾತ್ರ. ಆದರೆ ಇಬ್ಬರ ಮನೆಯಲ್ಲೂ ಪ್ರಬಲ ವಿರೋಧ. ಈ ನಡುವೆ ಗಾಯತ್ರಿಯವರ ತಂದೆ ನನ್ನ ವಿರುದ್ಧ ಪೋಲೀಸು ದೂರು, ರೌಡಿಗಳನ್ನು ಬಿಟ್ಟು ಹೊಡೆಸುವ ಸಂಚು,ಮಾಯ-ಮಾಟಗಳ ವಾಮಚಾರ ಎಲ್ಲವನ್ನು ಮಾಡಿ ವಿಫಲರಾಗಿದ್ದರು. ಜೊತೆಗೆ ನನ್ನ ವ್ಯಕ್ತಿತ್ವ-ಗುಣ-ಸ್ವಭಾವ ನಡುವಳಿಕೆ ಎಲ್ಲ ಅರಿತಿದ್ದ ಹಂಪನಾ-ಕಮಲಾ ಹಂಪನಾ ಅವರಿಂದಲೂ ಶ್ರೀ ಕಲ್ಲೆಯವರ ಮೂಲಕ ನನ್ನ ಮೇಲೆ ಗಾಯತ್ರಿಯನ್ನು ಮರೆಯಲು ಒತ್ತಡ ತರಲಾಯಿತು. ನಮ್ಮ ಹಿರಿಯ ಮಿತ್ರರಾಗಿದ್ದು, ಮುಂದೆ ದೇವರಾಜ ಅರಸು ಅವರ ಕೃಪೆಯಿಂದ ವಿಧಾನ ಪರಿಷತ್ ಸದಸ್ಯರಾಗಿದ್ದ ದಿ॥ ಎನ್.ಎನ್. ಕಲ್ಲಣ್ಣನವರಿಂದ ಹಸ್ತಶಾಸ್ತ್ರ ಹೇಳಿಸಿ ನನಗೆ ಅಂತರಜಾತಿ ವಿವಾಹವಾಗುವ ರೇಖೆಗಳು ಇಲ್ಲವೆಂದು ನನ್ನ ಮನಃ ಪರಿವರ್ತನೆಗೂ ಪ್ರಯತ್ನಿಸಲಾಯಿತು. ಆದರೆ ಇದ್ಯಾವುದಕ್ಕೂ ಸೊಪ್ಪು ಹಾಕದೆ ನಾನು ನನ್ನ ನಿರ್ಧಾರದಂತೆ ನಡೆದುಕೊಂಡು ಮುಂದೆ ಇವರೆಲ್ಲರೂ ಸಹಕರಿಸುವಂತೆ ನೋಡಿಕೊಂಡೆ. ನನ್ನ ಈ ನಿರ್ಧಾರ ನೆರವೇರಲು ಯಾವುದೇ ಒತ್ತಡಕ್ಕೆ ಮಣಿಯದೆ ನನ್ನೊಡನೆ ಅಚಲವಾಗಿ ನಿಂತವಳು ಗಾಯತ್ರಿ. ಮದುವೆಗೆ ಎರಡೂ ಕಡೆಯ ಪ್ರತಿರೋಧ ತಣ್ಣಗಾದ ಮೇಲೆ, ಗಾಯತ್ರಿಯ ಬಂಧುಗಳಿಂದ 'ಆರ್ಯ ಸಮಾಜ'ದಲ್ಲಿ ಮದುವೆಯಾಗುವಂತೆ ಸಲಹೆ ಬಂದಾಗ ಅಲ್ಲಿಯೂ ಪುರೋಹಿತ, ಅಗ್ನಿಸಾಕ್ಷಿ, ಶಾಸ್ತ್ರ, ಸಂಪ್ರದಾಯಗಳು ಇರುವುದರಿಂದ ಪೆರಿಯಾರ್. ಈ ವಿ. ರಾಮಸ್ವಾಮಿ

ನಾಯ್ಕರ್ ಅವರ ವಿಚಾರಧಾರೆಯಂತೆ 'ಸ್ವಾಭಿಮಾನಿ ಮದುವೆ'ಯಾಗಲಿಚ್ಛಿಸಿ ಈ ನೆಲದ ಕಾನೂನಿನನ್ವಯ-ನೋಂದಣಿ ಮದುವೆ ಮಾಡಿಕೊಂಡೆವು. ಈ ಸಂದರ್ಭ ಶ್ರೀ ಶಾಂತಮೂರ್ತಿ, ಹಂದಲಗೆರೆ ಲಿಂಗಪ್ಪ ವಿಜಯಶಂಕರ ಗಾಯಕವಾಡ ಇವರು ಬಹಳ ನೆರವಾದರು. ನಾನು ಈ ರೀತಿ ಮದುವೆಯಾಗಲು ನಿರ್ಧರಿಸಿದಾಗ ನನ್ನ ಆದರ್ಶಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ಧನಾಗಿದ್ದೆ. ಆದರೆ ನನ್ನನ್ನು ಬಹಳ ಅಕ್ಕರೆಯಿಂದ ಬೆಳೆಸಿದ್ದ ತಾಯಿ, ತಂದೆ, ಅಕ್ಕ, ಭಾವ, ಇತರ ಬಂಧು-ಬಳಗ ಎಲ್ಲರೂ ಅದೇ ಪ್ರೀತ್ಯಾದರಗಳನ್ನು ಮುಂದೆಯೂ ತೋರಿದುದರಿಂದ ಅಂತಹ ಯಾವುದೇ ತ್ಯಾಗಕ್ಕೆ ಅವಕಾಶವಾಗಲಿಲ್ಲ.

ನನ್ನ ಮದುವೆ ಹಾಗೂ ಇದಾದ ೧೫ ದಿನಗಳ ಬಳಿಕ ನಮ್ಮ ಚನ್ನಪಟ್ಟಣ ತಾಲ್ಲೂಕಿನ ನಾಗವಾರದಲ್ಲಿ ಆದ ಶ್ರೀ ಕಾಳೇಗೌಡ ನಾಗವಾರ ಮತ್ತು ಶ್ರೀಮತಿ ಕೆಂಪಮ್ಮನವರ ಸರಳ-ಸಂಪ್ರದಾಯ ವಿರೋಧಿ ಸಜಾತಿ ಮದುವೆ ಮುಂದೆ ತಾಲ್ಲೂಕಿನಲ್ಲಿ ಒಂದು ಆಂದೋಳನದ ರೀತಿಯಲ್ಲಿ ಅನೇಕ ಸರಳ ಮದುವೆಗಳಿಗೆ ದಾರಿಮಾಡಿಕೊಟ್ಟಿತು. 'ಜನಪ್ರಗತಿ' ವಾರಪತ್ರಿಕೆಯಲ್ಲಿ ಇವೆರಡರ ವರದಿ ಪ್ರಕಟವಾಗಿ ರಾಜ್ಯದ ಅನೇಕ ವಿಚಾರವಾದಿ ಯುವ ಜನ ಸಮುದಾಯ ಈ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಮಾಡಿತು. ನಾನೇ ಸ್ವತಃ ನಿಂತು ಹತ್ತಿಪ್ಪತ್ತು ಸರಳ ಸಂಪ್ರದಾಯ ವಿರೋಧಿ ಮದುವೆಗಳನ್ನು, ನಾಲ್ಕಾರು ಅಂತರಜಾತಿ ಮದುವೆಗಳನ್ನು ಮಾಡಿಸಿರುವೆ.

ಕನ್ನಡ ಮಾಧ್ಯಮ ಬಿ.ಎ. ತರಗತಿ

ನಾನು ಮದುವೆಯಾದಾಗ 'ಸಂಯುಕ್ತ ಕರ್ನಾಟಕ'ದಲ್ಲಿ ಕೆಲಸಮಾಡುತ್ತಿದ್ದರೂ. ಬಿ.ಎ. ಪದವಿ ತರಗತಿಗೆ ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜಿಗೆ ಸೇರಿದ್ದೆ. ಬಿ.ಎಸ್ಸಿ. ಪಾಸಾಗದೇ ಹೋದ ಬಗ್ಗೆ ತಂದೆಯವರು ಬಹಳ ಬೇಸರಪಟ್ಟುಕೊಂಡಿದ್ದ ಕಾರಣ ಅವರ ಸಮಾಧಾನಕ್ಕಾದರೂ ಪದವೀಧರನಾಗಬೇಕೆಂದು ಮತ್ತೆ ಕಾಲೇಜಿಗೆ ಹೋಗುವ ಮನಸ್ಸು ಮಾಡಬೇಕಾಯಿತು. ಆಗಿನ್ನೂ ಅಲ್ಲಿ ಬಿ.ಎ. ತರಗತಿಗಳನ್ನು ಕನ್ನಡದಲ್ಲಿ ಬೋಧಿಸುತ್ತಿರಲಿಲ್ಲ. ಆಗ ನನ್ನೊಡನೆ ಕಲಿಯುತ್ತಿದ್ದ ಸಂಪಿಗೆ ಶಿವಪ್ರಕಾಶ, ದಿ॥ ರಾಮಕೃಷ್ಣ, ಹೊನ್ನಪ್ಪ ಇವರೇ ಮೊದಲಾದ ಕೆಲವು ಗೆಳೆಯರು "ನಾವೆಲ್ಲಾ ಪಿಯುಸಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತಿರುವುದರಿಂದ ಪದವಿ ತರಗತಿಗಳಲ್ಲಿ ಇಂಗ್ಲೀಷ್‌ನಲ್ಲಿ ಮಾಡುವ ಪಾಠಗಳು ಅರ್ಥವಾಗುವುದಿಲ್ಲ. ಆದ ಕಾರಣ ಈ ತರಗತಿಗಳಲ್ಲಿಯೂ ಕನ್ನಡದಲ್ಲಿ ಪಾಠ ಹೇಳುವ ಹಾಗೆ ಮಾಡಬೇಕು. ಈ ಒಂದು ಪ್ರಯತ್ನದ ನಾಯಕತ್ವ ನೀವು ವಹಿಸಬೇಕು" ಎಂದು ಗಂಟು ಬಿದ್ದರು. ಅವರೆಲ್ಲ ನನ್ನನ್ನೇ ಕೇಳುವುದಕ್ಕೆ ಮುಖ್ಯ ಕರಾಣ ನಾನು ಈ ಮುನ್ನ ಮಾಡಿದ ಕನ್ನಡ ಪರ ಹೋರಾಟದ ಬಗ್ಗೆ ಅರಿತಿದ್ದ ಆಗ ನಮಗೆ ಇತಿಹಾಸ ಪ್ರಾಧ್ಯಾಪಕರಾಗಿದ್ದ, ನಮ್ಮೂರ ಸಮೀಪದ ಸಿಂಗರಾಜಪುರ ಗ್ರಾಮದ ಶ್ರೀ ಎಸ್. ಸತ್ಯನಾರಾಯಣರಾವ್ ಅವರು ಈ ಉದ್ದೇಶಕ್ಕಾಗಿ ಇವರೆಲ್ಲರನ್ನು ನನ್ನ ಬಳಿ ಕಳಿಹಿಸಿದ್ದರು. ನನ್ನ ಕನ್ನಡ ಪರ ಕೆಲಸಕ್ಕೆ ಇದೂ ಒಂದು ಅವಕಾಶವಾಯಿತು. ತಕ್ಷಣವೇ ಕಾರ್ಯಪ್ರವೃತ್ತನಾದ ನಾನು ಕನ್ನಡ ಮಾಧ್ಯಮದಲ್ಲಿ ಕಲಿಯಲಿಚ್ಛಿಸುವವರ ಸಹಿಯನ್ನು ಮನವಿ ಪತ್ರಕ್ಕೆ ಹಾಕಿಸಿ ಅಗ ಕಾಲೇಜು ಶಿಕ್ಷಣ ನಿರ್ದೇಶಕಿಯಾಗಿದ್ದ ಮೈಸೂರು ರಾಜಮನೆತನದವರಾದ ಶ್ರೀಮತಿ

ಜಯಲಕ್ಷಮ್ಮಣ್ಣಿ ಹಾಗೂ ಶಿಕ್ಷಣ ಸಚಿವರಾಗಿದ್ದ ಕನ್ನಡಾಭಿಮಾನಿ ಶ್ರೀ ಕೆ.ವಿ. ಶಂಕರೇಗೌಡರಿಗೆ ಸಲ್ಲಿಸಿದ್ದೆ. ಇವರ ಸಮಯೋಚಿತ ಸಹಕಾರದಿಂದ ೧೫ ದಿನಗಳಷ್ಟರಲ್ಲೇ ನಮ್ಮ ಕಾಲೇಜಿನಲ್ಲಿ ಕನ್ನಡ ಮಾಧ್ಯಮ ತರಗತಿ ಆರಂಭವಾಯಿತು. ಇತಿಹಾಸ, ಅರ್ಥಶಾಸ್ತ್ರ, ಕನ್ನಡ ಮತ್ತು ಇತಿಹಾಸ, ಅರ್ಥಶಾಸ್ತ್ರ, ಭೂಗೋಲಶಾಸ್ತ್ರ ಹೀಗೆ ಎರಡು ಕನ್ನಡ ಮಾಧ್ಯಮ ತರಗತಿಗಳು ಒಮ್ಮೆಲೆ ಆರಂಭಗೊಂಡವು. ಈ ರೀತಿ ಬೆಂಗಳೂರಿನಲ್ಲಿ ಮಹಾರಾಣಿ ಕಾಲೇಜು ಹೊರತು ಕನ್ನಡ ಮಾಧ್ಯಮ ಬಿ.ಎ. ತರಗತಿಗಳು ಮೊಟ್ಟಮೊದಲಿಗೆ ಆರಂಭವಾದುದು ನನ್ನ ನೇತೃತ್ವದಲ್ಲಿ ಎಂದು ಹೇಳಿಕೊಳ್ಳವುದು ಒಂದು ಹೆಮ್ಮೆಯ ಸಂಗತಿಯೇ. ಈಗ ಆ ಕಾಲೇಜಿನಲ್ಲಿ ಹೆಚ್ಚಿನಪಾಲು ಕನ್ನಡ ಮಾಧ್ಯಮ ತರಗತಿಗಳೇ ಇವೆ. ಉಳಿದ ಸರಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿಯೂ ಕನ್ನಡ ಮಾಧ್ಯಮದಲ್ಲಿ ಕಲಿಸುವ ಏರ್ಪಾಡುಗಳು ಈಗ ನಡೆದಿದೆ.

ಹೀಗೆ ಎರಡನೇ ಬಾರಿಗೆ ನಾನು ಪದವಿ ವ್ಯಾಸಾಂಗಕ್ಕೆ ಉದ್ಯೋಗಿಯಾಗಿ ಸೇರಿದಾಗಲೇ ರಾಜ್ಯದಲ್ಲಿ ದಿ॥ ದೇವರಾಜ ಅರಸು ಅವರ ನೇತೃತ್ವದಲ್ಲಿ ಹಿಂದುಳಿದವರ ಪರವಾದ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದಿತು. ದೇವರಾಜ ಅರಸು ಸಂಪುಟದಲ್ಲಿ ಖಂಡಿತವಾದಿ ದಲಿತ ಮುಖಂಡ ದಿ॥ ಬಿ. ಬಸವಲಿಂಗಪ್ಪನವರು ಸಚಿವರಾಗಿದ್ದರು. ಅವರೊಮ್ಮೆ ಯಾವುದೋ ಸಮಾರಂಭದಲ್ಲಿ ಕನ್ನಡ ಸಾಹಿತ್ಯದಲ್ಲಿ 'ಭೂರ್ಜ್ವಾ' ಸಾಹಿತ್ಯ ಹೆಚ್ಚಾಗಿದೆ ಎಂದು ಹೇಳಿದುದನ್ನು ವರದಿಮಾಡಿದ ಪತ್ರಕರ್ತರು 'ಕನ್ನಡ ಸಾಹಿತ್ಯವೆಲ್ಲಾ ಬೂಸಾ' ಎಂದು ಹೀಯಾಳಿಸಿದರು ಎಂದು ಬರೆದಿದ್ದರಿಂದ ರಾಜ್ಯಾದ್ಯಂತ ಪಟ್ಟಭದ್ರ ಹಿತಾಸಕ್ತಿಗಳಿಂದ ದೊಡ್ಡ ಚಳವಳಿಯೇ ನಡೆಯಿತು. ಇದಕ್ಕೆ ವಿದ್ಯಾರ್ಥಿಗಳನ್ನು ಅನೇಕ ಆಸೆ-ಆಮಿಷಗಳನ್ನೊಡ್ಡಿ ಬಳಸಿಕೊಳ್ಳಲಾಯಿತು. ಆಗ ನಮ್ಮ ಗುಂಪು ಬಸವಲಿಂಗಪ್ಪನವರ ಪರ ನಿಂತಿತು. ಕನ್ನಡಿಗರ ಬದುಕು ಹಸನಾಗುವುದಕ್ಕೆ ತಕ್ಕುದಾದ ಸಾಹಿತ್ಯ ನಿರ್ಮಾಣದಲ್ಲಿ ಪರಂಪರಾನುಗತ ಶೋಷಣೆ ನಡೆಸಿಕೊಂಡೇ ಬಂದ ಪಟ್ಟಭದ್ರ ವರ್ಗದಿಂದ ಬಂದ ಲೇಖಕರು ದೀನ-ದಲಿತರ-ಶೋಷಿತರ ದನಿಯಾಗಿ ಬರೆಯಲಿಲ್ಲ ಎಂಬ ನಿಲುವು ನಮ್ಮದಾಗಿದ್ದಿತು. ಈ ಚಳವಳಿಗೆ ಸ್ವತಃ ದೇವರಾಜ ಅರಸು ಅವರೇ ಕುಮ್ಮಕ್ಕು ನೀಡಿದ್ದರಿಂದ ಬಸವಲಿಂಗಪ್ಪನವರನ್ನು ಬಲಿತೆಗೆದುಕೊಳ್ಳುವಲ್ಲಿ ಅದು ಯಶಸ್ವಿಯಾಯಿತು. ಈ ಚಳವಳಿ ಪರಾಕಾಷ್ಠೆ ಮುಟ್ಟಿದಾಗ ನನ್ನ ಮಿತ್ರರಾದ ಶ್ರೀ ಪಿ. ವೇಣುಗೋಪಾಲ ಅವರು ಆಗ ಪ್ರಜಾವಾಣಿ ಸುದ್ದಿ ಸಂಪಾಕರಾಗಿದ್ದ ದಿ॥ ಖಾದ್ರಿ ಶಾಮಣ್ಣ ಮತ್ತು 'ವಿಕ್ರಮ'ದ ಸಂಪಾದಕ ಶ್ರೀ ಬೆ.ಸು.ನ ಮಲ್ಯ ಅವರಿಗೆ ಫೋನು ಮಾಡಿ ಬಸವಲಿಂಗಪ್ಪನವರ ವಿರದ್ಧ ಅಪಪ್ರಚಾರದ ವರದಿ ನಿಲ್ಲಿಸಬೇಕೆಂದು ಬೆದರಿಸಿದ್ದರು. ಅದು ವಿಧಾನಸಭೆಯಲ್ಲಿ ಪ್ರತಿಧ್ವನಿಯಾಗಿ 'ಪತ್ರಕರ್ತ'ರಿಗೆ ಕೊಲೆ ಬೆದರಿಕೆ ಎಂಬ ಶೀರ್ಷಿಕೆಯಲ್ಲಿ ಮರುದಿನದ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಯಿತು. ಈ ಚಳವಳಿಯಲ್ಲಿ ಸಕ್ರಿಯವಾಗಿ ಬಸವಲಿಂಗಪ್ಪನವರ ಪರವಾಗಿದ್ದ ನನಗೆ ಮಧ್ಯಾಹ್ನ ಪಾಳಿ ಮುಗಿಸಿ ಮನೆಗೆ ಹೋಗುವಾಗ ಶ್ರೀ ಕೆ. ಶಾಮರಾಯರು ನನ್ನನ್ನು ಕುರಿತು "ನೀನು ಈ ಚಳುವಳಿ ಅಥವಾ ಸಂಯುಕ್ತ ಕರ್ನಾಟಕದ ಕೆಲಸ ಎರಡರಲ್ಲಿ ಒಂದನ್ನು ಆರಿಸಿಕೋ ಬೇಕು. ನಾಳೆ ಇದೇ ಸಮಯಕ್ಕೆ ನಿನ್ನ ನಿರ್ಧಾರ ತಿಳಿಸಬೇಕು" ಎಂಬ ಎಚ್ಚರಿಕೆಯನ್ನು ಪ್ರತಿಕೆಯ ಬೆಂಗಳೂರು ಆವೃತ್ತಿಯ ಮುಖ್ಯಸ್ಥರಾಗಿ ಕೊಟ್ಟರು. ಮರುದಿನ ನಾನು ಜೊತೆಗಾರ ಮಿತ್ರರಲ್ಲಿ ವಿಶೇಷವಾಗಿ ಶ್ರೀ

ಕಲ್ಲೆಯವರಲ್ಲಿ ಸಮಾಲೋಚಿಸಿದಾಗ ಒಂದು ವೇಳೆ ಕೆಲಸ ಹೋದರೆ 'ಜನಪ್ರಗತಿ'ಯಲ್ಲೇ ಮಾಡುವಿರಂತೆ ಅವರ ಬೆದರಿಕೆಗೆ ಸೊಪ್ಪುಹಾಕಬೇಡಿ ಎಂದು ಹೇಳಿದರು. ಮದುವೆಯಾಗಿ ಒಂದು ಮಗುವಿನ ತಂದೆಯಾಗಿದ್ದ ನನಗೆ ಚಳವಳಿಯ ನಡುವೆ ಬದುಕೂ ಇದೆ ಎಂಬುದು ಆಗ ಅವರಿಗೆ ಬಂದಿದ್ದಿತು. ಆದರೂ ಶ್ರೀ ಕಲ್ಲೆಯವರು ನೀಡಿದ ಧೈರ್ಯದಿಂದ ಮರುದಿನ ಶ್ರೀ ಶಾಮರಾಯರು ಈ ಸಂಬಂಧ ವಿಚಾರಿಸಿದಾಗ "ನಾನು ಇಲ್ಲಿಗೆ ಸೇರುವ ಮುಂಚಿನಿಂದಲೂ ಇಂತಹ ಹೋರಾಟಗಳಲ್ಲಿ ತೊಡಗಿಸಿಕೊಂಡವನು. ಅದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. 'ಸಂಯುಕ್ತ ಕರ್ನಾಟಕ' ಅಥವಾ ಇದನ್ನು ನಡೆಸುವ 'ಲೋಕ ಶಿಕ್ಷಣ ಟ್ರಸ್ಟ್' ವಿರುದ್ಧ ನಾನೇನಾದರೂ ನಡೆದುಕೊಂಡಿದ್ದರೆ ನೀವು ನನ್ನ ವಿರುದ್ಧ ಕ್ರಮಕೈಗೊಳ್ಳಬಹುದು. ನನ್ನ ಹೊರಗಿನ ನ್ಯಾಯಯುತ ಹಕ್ಕುಗಳ ಹೋರಾಟದ ಸಂಬಂಧವಾಗಿ ಏನಾದರೂ ಮಾಡಿದರೆ ನನಗೂ ಕಾನೂನು ಗೊತ್ತಿದೆ. ಹೋರಾಟವೂ ಗೊತ್ತಿದೆ. ಅಂತಹ ಪರಿಸ್ಥಿತಿಯನ್ನು ಎದುರಿಸಲು ಸಿದ್ಧನಾಗಿರುವೆ ಎಂದು ಪ್ರತಿಕ್ರಿಯಿಸಿದ್ದೆ. ಈ ಘಟನೆಯಾದ ಕೆಲ ದಿನಗಳಲ್ಲೇ ಅವರ ಸಂಪಾದಕೀಯ ಮೇಲಾಳುತನ ಹೋಗಿ ಶ್ರೀ ಸುರೇಂದ್ರ ಬಿ. ದಾನಿ ಅವರ ನೇತೃತ್ವ ಬೆಂಗಳೂರು ಆ ವೃತ್ತಿಗೆ ಒದಗಿ ಬಂದಿದ್ದರಿಂದ ಈ ವಿಷಯ ಅಷ್ಟಕ್ಕೇ ತಣ್ಣಗಾಯಿತು.

ಮುಂದೆ ನಾನು ಪತ್ರಕರ್ತರ ಸಹಕಾರ ಸಂಘ, ಕಾರ್‍ಯನಿರತ ಪತ್ರಕರ್ತರ ಸಂಘಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕಾರ್ಯನಿರ್ವಹಿಸಿದ ರೀತಿ-ನೀತಿಗಳ ಬಗೆಗೆ 'ಸಂಯುಕ್ತ ಕರ್ನಾಟಕ' ಮುಚ್ಚಿದಾಗ ಅದರ ಪುನರಾರಂಭಕ್ಕೆ ನಡೆಸಿದ ಹೋರಾಟದಲ್ಲಿನ ನನ್ನ ಪಾತ್ರದ ಬಗೆಗೆ ಈ ಪುಸ್ತಕದಲ್ಲಿ ಹಾಗೂ ಸ್ಮರಣ ಸಂಚಿಕೆಯಲ್ಲಿ ಕೆಲ ಮಿತ್ರರು ಪ್ರಸ್ತಾಪಿಸಿರುವುದರಿಂದ ನಾನು ಇಲ್ಲಿ ಹೆಚ್ಚು ಹೇಳಲು ಹೋಗುವುದಿಲ್ಲ. ಆದರೆ ಪತ್ರಕರ್ತರ ಸಂಘಟನೆಗಳಲ್ಲಿ ವಿಶೇಷವಾಗಿ ಭಾರತೀಯ ಪತ್ರಕರ್ತರ ಒಕ್ಕೂಟದ ನಾಯಕತ್ವದಲ್ಲಿ ಪಟ್ಟಭದ್ರ ಹಿತಾಸಕ್ತಿ ಹೆಚ್ಚಾಗಿ ಕಾರ್ಯನಿರತ ಪತ್ರಕರ್ತರ ಹಿತಾಸಕ್ತಿಯ ಚರ್ಚೆಗಿಂತಲೂ ಮಿಗಿಲಾಗಿ ಪ್ರವಾಸ-ತೀರ್ಥಯಾತ್ರೆಗಳೇ ಹೆಚ್ಚಾಗಿಸುತ್ತಿರುವುದು ಇದೀಗ ಒಕ್ಕೂಟ ವೃತ್ತಿ ಸಂಘಟನೆಯ ದೃಷ್ಟಿಯಿಂದ ಅತ್ಯಂತ ದುರ್ಬಲ ಸ್ಥಿತಿಗೆ ದೂಡಲ್ಪಟ್ಟಿದೆ. ಇದರ ಪರಿಣಾಮವಾಗಿ ನೈಜ ಕಾರ್ಯನಿರತ ಪತ್ರಕರ್ತರನೇಕರು ಸಂಘಟನೆಯಿಂದ ದೂರವಾಗುತ್ತಿದ್ದು, ಪತ್ರಿಕಾ ವೃತ್ತಿಯನ್ನು ತಮ್ಮ ಇತರ ಆದಾಯ ಬರುವ ಚಟುವಟಿಕೆಗಳಿಗೆ ಸಾಧನವಾಗಿ ಬಳಸಿಕೊಳ್ಳುತ್ತಿರುವಂತಹವರದೇ ಪಾರುಪತ್ಯ ಹೆಚ್ಚಾಗುತ್ತಿರುವುದನ್ನು ಕಂಡು ಖೇದವಾಗುತ್ತಿದೆ.

ಕನ್ನಡ ಹೋರಾಟ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಘಟ್ಟವಾದ ಗೋಕಾಕ್ ಭಾಷಾ ಚಳವಳಿಯಲ್ಲಿ ನಾನು ಬೆಂಗಳೂರಿನಲ್ಲಿ ಪರಿಣಾಮಕಾರಿ ಪಾತ್ರ ನಿರ್ವಹಿಸಿದ ಬಗೆಗೆ ಆ ಸಂದರ್ಭದಲ್ಲಿ ಚಳವಳಿಯಲ್ಲಿದ್ದವರಿಗೆಲ್ಲಾ ಚನ್ನಾಗಿ ಗೊತ್ತಿದೆ. ಡಾ॥ರಾಜ್‌ಕುಮಾರವ ಅವರ ಪ್ರವೇಶದಿಂದ ಮಿಂಚಿನಂತೆ ರಾಜ್ಯದಾದ್ಯಂತ ಹಬ್ಬಿದ ಚಳವಳಿಯಿಂದಾಗಿ ಸರ್ಕಾರ 'ಗೋಕಾಕ್ ಭಾಷಾ ಸೂತ್ರ'ವೊಂದನ್ನು ಅಳವಡಿಸಿತಾದರೂ ಸರ್ಕಾರದ ನೇತೃತ್ವ ವಹಿಸಿದವರಿಂದಲೇ ಅದು ನ್ಯಾಯಾಲಯದ ಕಟ್ಟೆ ಹತ್ತುವಂತಾಯಿತು. ಜೊತೆಗೆ ಸರ್ಕಾರವನ್ನು ಮಣಿಸಿದ ಬಗ್ಗೆ ಸಂಭ್ರಮಿಸಲು

ವ್ಯವಸ್ಥೆಗೊಳಿಸಿದ್ದ ಸಮಾರಂಭ ಅಶಿಸ್ತಿನಿಂದಾಗಿ ಹಿಂಸಾಕೃತ್ಯಕೆ ತಿರುಗಿ ಗೋಲಿಬಾರಿನಲ್ಲಿ ಅರಸಪ್ಪನ ಸಾವು ಹಾಗೂ ಅನೇಕ ಕನ್ನಡ ಕಾರ್ಯಕರ್ತರು ಹಾಗೂ ನಾಯಕರು ಗಾಯ-ನೋವು ಅನುಭವಿಸುವುದರೊಂದಿಗೆ ಕೊನೆಗೊಂಡಿದ್ದಿತು. ಈ ಪರಿಸ್ಥಿತಿಯಲ್ಲಿ ಆ ವರ್ಷದ (೧೯೮೨) ರಾಜ್ಯೋತ್ಸವದ ದಿನ ಸಮೀಪಿಸಿತೊಡಗಿತು. ನಗರದಲ್ಲಿ ಗೋಕಾಕ್ ಚಳವಳಿಯ ನೇತೃತ್ವ ವಹಿಸಿದ್ದ 'ಸಾಹಿತಿಗಳ ಮತ್ತು ಕಲಾವಿದರ ಬಳಗ ವಿಷಯ ನ್ಯಾಯಾಲಯದಲ್ಲಿದ್ದುದು ಹಾಗೂ ಗೋಲಿಬಾರ್‌ನಿಂದ ಕಂಗೆಟ್ಟು ಕುಳಿತಿದ್ದಿತು. ಬಳಗದ ಕಾರ್ಯಕಾರಿಣಿಯಲ್ಲಿದ್ದ ನಾನು ಹಾಗೂ ಗೆಳೆಯ ದಿ॥ ರಹಮಾನ್‌ಖಾನ್ ನವಂಬರ್ ೧ರಂದು ಗೋಕಾಕ್ ಭಾಷಾ ಸೂತ್ರದ ಜಾರಿಗೆ ಆಗ್ರಹಿಸಲು ಏನಾದರೂ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದಾಗ ನಾಯಕರು ಕಿವಿಗೊಡಲಿಲ್ಲ.

ಅವರಲ್ಲಿ ಯಾವುದೊ ಭೀತಿ ಆವರಿಸಿತ್ತು. ಇದರಿಂದ ನಾನು ಖಾನ್ ಬೇರೆಯೇ ಆಲೋಚನೆ ಮಾಡಿದೆವು. ನಾವಿಬ್ಬರೂ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದು, ಆಗ ನಿಷ್ಕ್ರಿಯವಾಗಿದ್ದ 'ಕನ್ನಡ ಸಂಘರ್ಷ ಸಮಿತಿ'ಯ ಕಾರ್ಯದರ್ಶಿಯಾಗಿದ್ದ ಶ್ರೀ ಮಹದೇವ ಪ್ರಕಾಶ ಅವರನ್ನು ಒಪ್ಪಿಸಿ ಅದರ ಹೆಸರಿನಲ್ಲಿ ಆ ಸಲದ ರಾಜ್ಯೋತ್ಸವ ದಿನವನ್ನು ಕಾರಳದಿನವನ್ನಾಗಿ ಆಚರಿಸಲು ಮತ್ತು ಭಾಷಾ ಸೂತ್ರದ ಜಾರಿಗೆ ನ್ಯಾಯಾಲಯದಿಂದ ತಡೆಯಾಜ್ಞೆ ತೆರವುಗೊಳಿಸಲು ಸರಕಾರವನ್ನು ಒತ್ತಾಯಿಸಲು ಮೈಸೂರು ಬ್ಯಾಂಕ್ ಚೌಕದಿಂದ ವಿಧಾನಸೌಧದ ಶಾಂತವೇರಿ ಗೋಪಾಲಗೌಡ ವೃತ್ತಕ್ಕೆ ಮೌನಮೆರವಣಿಗೆ ನಡೆಸಲು ನಿರ್ಧರಿಸಿ, ಕನ್ನಡ ಪರ ಸಂಘಟನೆಗಳ ನೆರವು ಪಡೆದೆವು. ನಮ್ಮ ಈ ಪ್ರಯತ್ನದಿಂದ ಸ್ವಲ್ಪ ಧೈರ್ಯತಳೆದ 'ಸಾಹಿತಿಗಳ ಮತ್ತು ಕಲಾವಿದರ ಬಳಗ' ಅಂದು ಗೋಪಾಲಗೌಡ ವೃತ್ತದಲ್ಲಿ ಸಾಂಕೇತಿಕ ಧರಣಿ ಆಚರಿಸುವ ಧೈರ್ಯ ತೋರಿತು. ಈ ಎರಡು ಕಾರ್ಯಕ್ರಮ ಯಶಸ್ವಿಯಾಗಿ ಮುಂದೆ ಭಾಷಾಸೂತ್ರದ ಪರವಾದ ಚಳವಳಿಗೆ ನಾಂದಿಯಾಯಿತು.

೧೯೮೩ರ ಜನವರಿಯಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾದ ಬಳಿಕ ಸಮಿತಿಯಿಂದ ಡಿ. ೨೨, ೧೯೮೨ರಲ್ಲಿ ಆಡಳಿತ ಭಾಷೆಯಾಗಿ ಕನ್ನಡ ಜಾರಿ ಹಾಗೂ ಗೋಕಾಕ್ ಭಾಷಾ ಆಜ್ಞೆಯನ್ನು ನ್ಯಾಯಾಲಯದಿಂದ ಮುಕ್ತಗೊಳಿಸುವ ಬಗೆಗೆ ರಾಜಕೀಯ ನಾಯಕರುಗಳಿಂದ ತಮ್ಮ ನಿಲುವಿನ ಸ್ಪಷ್ಟನೆ ಪಡೆಯಲು ವಿಚಾರ ಸಂಕಿರಣವೊಂದನ್ನು ನಡೆಸಿದೆವು. ರೈತ ಚಳವಳಿ ಹಾಗೂ ಕನ್ನಡ ಚಳವಳಿಯ ಬೆಂಬಲದೊಂದಿಗೆ ೧೯೮೩ರಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷ ಸರ್ಕಾರದ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆಯವರಿಗೆ ಈ ಸಂಬಂಧ ೨೮-೩-೮೩ರಂದು ಮೌನಮೆರವಣಿಗೆ ನಡೆಸಿ, ಕೊನೆಯಲ್ಲಿ ಮನವಿ ಪತ್ರವೊಂದನ್ನು ಸಲ್ಲಿಸಲಾಯಿತು. ಇದನ್ನು ಬಳಗದ ಸಂಯುಕ್ತ ಆಶ್ರಯದಲ್ಲಿ ಸಂಘಟಿಸಲಾಗಿತ್ತಾದರೂ ಸಂಪೂರ್ಣ ಸಿದ್ಧತೆಯನ್ನೆಲ್ಲಾ ಸಮಿತಿಯೆ ಮಾಡಿದ್ದಿತು. ಆದರೆ ಈ ಸಂಬಂಧವಾಗಿ ಬಳಗಕ್ಕೆ ಆಗ ಸಂಚಾಲಕರಲ್ಲೊಬ್ಬರಾಗಿದ್ದ ಡಾ॥ ಪಿ.ವಿ.ನಾ.ಲೇಖನವೊಂದನ್ನು ಬರೆದಾಗ ಸಂಘರ್ಷ ಸಮಿತಿ ಹೆಸರು ಪ್ರಸ್ತಾಪಿಸುವ ಔದಾರ್ಯ ತೋರಲಿಲ್ಲ. ಈ ಬಗ್ಗೆ ಅವರಲ್ಲಿ ಮಾತನಾಡಿದಾಗ ನಾನು ಇತಿಹಾಸ ಬರೆದಿಲ್ಲ ಎಂದು ಹಾರಿಕೆ ಉತ್ತರ ನೀಡಿದ್ದರು. ಆ ಲೇಖನದ ಬಗ್ಗೆ ಪ್ರತಿಕ್ರಿಯೆ ವ್ಯಕ್ತಮಾಡಿ ಗೋಕಾಕ್

ಭಾಷಾಸೂತ್ರದ ಪ್ರೇರಕಶಕ್ತಿಯಾಗಿ ಸಮಿತಿ ನಿರ್ವಹಿಸಿದ ಪಾತ್ರವನ್ನು ವಿವರಿಸಿ ನಾನು ಲಂಕೇಶ ಪತ್ರಿಕೆಗೆ ಬರೆದ ಲೇಖನವನ್ನು ಪ್ರಕಟಿಸುವ ಪತ್ರಿಕಾ ನೀತಿಯನ್ನು ಶ್ರೀ ಲಂಕೇಶ ಮಹಾಶಯರೂ ತೋರಲಿಲ್ಲ. ನಮ್ಮ ಕಣ್ಣ ಮುಂದಿನ ಘಟನೆಗಳನ್ನೇ ತಿರುಚಿ ಬರೆದ ಈ ಒಂದು ಘಟನೆಯಿಂದ ಪಟ್ಟಭದ್ರ ಹಿತಾಸಕ್ತಿಗಳು ಈ ಹಿಂದೆ ಇತಿಹಾಸ ಬರೆಯುವಾಗ ಯಾವ ರೀತಿ ಏಕಪಕ್ಷೀಯವಾಗಿ ಬರೆದಿರಬಹುದು ಎಂದು ಊಹಿಸಿಕೊಳ್ಳಬಹುದು.

ಕನ್ನಡ ಪರಸಂಘಟನೆಗಳನ್ನು ಒಗ್ಗೂಡಿಸಿ 'ಕನ್ನಡ ಶಕ್ತಿ ಕೇಂದ್ರ' ಸ್ಥಾಪಿಸಿದಾಗ ಸಮಿತಿಯ ಪರವಾಗಿ ನನ್ನನ್ನು 'ಕಾರ್ಯದರ್ಶಿ' ಯಾಗಿ ಆಯ್ಕೆಮಾಡಲಾಗಿತ್ತು. ಇದರ ಕೆಲಸ ಕಾರ್ಯಗಳು ಶ್ರೀ ಚಿದಾನಂದ ಮೂರ್ತಿಯವರ ಮೂಗುನೇರಕ್ಕೆ ಮಾತ್ರ ಸೀಮಿತಗೊಂಡು ನನ್ನಂತಹವರ ಅಭಿಪ್ರಾಯಗಳಿಗೆ ಬೆಲೆ ಇಲ್ಲವೆಂಬುದು ಮನಗಂಡಾಗ ನಾನು ಅದರಿಂದ ಮೌನವಾಗಿ ದೂರ ಸರಿಯುವುದು ಅನಿವಾರ್ಯವಾಯಿತು. ರಾಜ್ಯದಲ್ಲಿ ಕನ್ನಡ ಪರವಾದ ಒಕ್ಕೂಟ ಮಾದರಿಯಲ್ಲಿ ಒಂದು ಶಕ್ತಿಯುತ ಸಂಘಟಗೆಯಾಗಿ ಬೆಳೆಯಬೇಕಾಗಿದ್ದ ಈ ಸಂಘಟನೆಯು ಅದರಲ್ಲಿನ ನಾಯಕತ್ವದ ವಿಶಾಲದೃಷ್ಟಿಯ ಕೊರತೆಯಿಂದ ಕೇವಲ ಒಂದು ಸಂಘವಾಗಿ ಮಾತ್ರ ಉಳಿದಿದೆ.

ಕನ್ನಡ ಸಂಘರ್ಷ ಸಮಿತಿಯ ಹೊಣೆ ಹೊತ್ತು ನಾನು ನಿರ್ವಹಿಸಿದ ಪಾತ್ರವನ್ನು ಮೆಚ್ಚಿ ನನ್ನ ಒಡನಾಡಿ ಮಿತ್ರರು, ಹಿತೈಷಿಗಳು ಹಾಗೂ ಇತರ ಸಂಘಟನೆಗಳು ಕನ್ನಡ ಕಾರ್ಯಕರ್ತ ಮಿತ್ರರು ನನ್ನನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ಸ್ಪರ್ಧಿಸುವಂತೆ ಪ್ರೇರೇಪಿಸಿ ಪ್ರಚಂಡ ಬಹುಮತದಿಂದ ಜಯ ದೊರಕಿಸಿಕೊಟ್ಟಿದ್ದಾರೆ. ಈ ಎರಡು ಸಂಸ್ಥೆಗಳ ನನ್ನ ಚಟುವಟಿಕೆಗಳ ಬಗೆಗೆ ಮಿತ್ರರು ಪ್ರತ್ಯೇಕ ಲೇಖನ ಬರೆದಿರುವುದರಿಂದ ಇಲ್ಲಿ ನಾನು ಹೇಳಲು ಹೋಗುವುದಿಲ್ಲ. ಆದರೆ ಪರಿಷತ್ತಿನ ಘನತೆ-ಪ್ರತಿಷ್ಠೆಗಳು ಕುಂಠಿತರಾದಂತೆ ನಡೆದುಕೊಂಡಿದ್ದೇನೆ ಎಂದು ಹೇಳಬಲ್ಲೆ. ನಗರ ಜಿಲ್ಲೆಗೆ ಈ ಹಿಂದೆ ಇದ್ದ ಒಂದು ಕೋಣೆಯನ್ನು ಎರಡು ವರ್ಷಗಳ ಸತತ ಪ್ರಯತ್ನದಿಂದ ಎರಡು ಕೋಣೆಯಿರುವ ಪಕ್ಕದ ಕೋಣೆಗೆ ವರ್ಗಾಯಿಸುವಲ್ಲಿ ಸಫಲನಾಗಿದ್ದೇನೆ. ಒಂದು ಹಂತದಲ್ಲಿ ಕೋಣೆ ಕೊಡಲು ಸಾಧ್ಯವೇ ಇಲ್ಲವೆಂದಿದ್ದ ಕೇಂದ್ರ ಪರಿಷತ್ತಿನ ಅಧ್ಯಕ್ಷ ಡಾ॥ ಸಾ.ಶಿ. ಮರುಳಯ್ಯ ಅವರ ಸಮ್ಮುಖದಲ್ಲೇ ಘಟಕದ ಹೊಸ ಕಾರ್ಯಾಲಯ ಉದ್ಘಾಟಿಸಿದ್ದೇನೆ. ಕಾರ್ಯಕಾರೀ ಸಮಿತಿ ಸಭೆಗಳಲ್ಲಿ ನನ್ನ ಒರಟು ಪ್ರತಿಕ್ರಿಯೆ ಸಹಿಸಿಕೊಂಡು ಘಟಕದ ಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ನೀಡುತ್ತಿರುವರು. ಮೊದ ಮೊದಲು ನನ್ನ ವರ್ತನೆ ಅವರಿಗೆ ಬೇಸರ ತರಿಸಿದ್ದರೂ ಸಹ ತರುವಾಯ ನನ್ನ ಸ್ವಭಾವವನ್ನರಿತುಕೊಂಡು ಸಹಕರಿಸಿರುವುದು ಅವರ ಔದಾರ್ಯವನ್ನು ತೋರಿಸುತ್ತದೆ. ಆದರೆ ಅವರು ಪರಿಷತ್ತಿನ ಆಜೀವ ಹಾಗೂ ವಿಶೇಷ ವರ್ಗದ ಸದಸ್ಯತ್ವ ಹಣದ ಇಡುಗಂಟಿನ ಬಡ್ಡಿಯಿಂದ ಬಹುವ ಹಣದಲ್ಲಿ, ಸಾಮಾನ್ಯ ಸದಸ್ಯತ್ವದ ನಿಯಮದಂತೆ ಮೂರನೇ ಒಂದು ಭಾಗದಷ್ಟನ್ನು ಆಯಾಯ ಜಿಲ್ಲಾ ಘಟಕ್ಕೆ ನೀಡಬೇಕೆಂಬ ನನ್ನ ವಾದಕ್ಕೆ ಮನ್ನಣೆ ನೀಡದೇ ಹೋದುದು ಹೆಚ್ಚು ಸದಸ್ಯರನ್ನು ಹೊಂದಿರುವ ದೊಡ್ಡ ಘಟಕಗಳ ಚಟುವಟಿಕೆಗಳಿಗೆ ಪೂರಕವಾಗಿರುವುದಿಲ್ಲ. ಕಾರ್ಯಕಾರೀ ಸಮಿತಿ ಹಾಗೂ ಸರ್ವಸದಸ್ಯರ ಸಭೆಯಲ್ಲಿ ನನ್ನ ಈ

ವಾದಕ್ಕೆ ಬೆಂಬಲಿಸದೇ ತೆಪ್ಪಗಿದ್ದ ಇತರ ಸದಸ್ಯರಿಗೆ ಮುಂದೆ ಇದರಿಂದಾಗುವ ನಷ್ಟ ಅನುಭವಕ್ಕೆ ಬರುತ್ತದೆ.

''ಜಿಲ್ಲಾ ಘಟಕಗಳಿಗೆ ಕೊಡುತ್ತಿದ್ದ ವಾರ್ಷಿಕ ಅನುದಾನ, ಜಿಲ್ಲಾ-ತಾಲ್ಲೂಕು ಸಮ್ಮೇಳನಗಳೇ ಮೊದಲಾದವುಗಳಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು ಕೊಡಲು ಪರಿಷತ್ತು ಅಶಕ್ತವಾಗಿದೆ. ಘಟಕಗಳು ಚಟುವಟಿಕೆಗಳಿಗೆ ಆರ್ಥಿಕ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕು.'' ಎಂದು ಮರುಳಯ್ಯ ಇತ್ತೀಚಿಗೆ ಸುತ್ತೋಲೆ ಕಳುಹಿಸಿರುವುದು ಈ ದಿಸೆಯಲ್ಲಿ ಮೊದಲ ಅನುಭವ. ಸದಸ್ಯತ್ವಕ್ಕನುಗುಣವಾಗಿ ಘಟಕಗಳಿಗೆ ಹಣ ನೀಡಿದೆ. ಅವು ಸ್ವಂತ ಸಂಪನ್ಮೂಲ ಸಂಗ್ರಹಿಸಿ ಕಾರ್ಯ ನಿರ್ವಹಿಸಿದರೆ ಅವುಗಳ ಮೇಲೆ ಕೇಂದ್ರ ಪರಿಷತ್ತಿಗೆ ಯಾವುದೇ ಹಿಡಿತ ಇಟ್ಟು ಕೊಳ್ಳುವುದು ಸಾಧ್ಯವಾಗದೇನೇ ಈ ಬಗ್ಗೆ ಗಂಭೀರ ಚಿಂತನೆ ಅಗತ್ಯ.

ನೆನಪಿನ ಬುತ್ತಿಯಲ್ಲಿ ಇನ್ನು ಅನೇಕ ಘಟನೆಗಳು ಹೇಳವಂತಹದಿದ್ದರು ಸಮಯ ಹಾಗೂ ನನಗೆ ಇರಿಸಿರುವ ಪುಟಗಳ ಮಿತಿಯ ದೃಷ್ಟಿಯಿಂದ ಇಷ್ಟಕ್ಕೇ ಸೀಮಿತಗೊಳಿಸಿ,, ಬುತ್ತಿಯನ್ನು ಗಂಟುಕಟ್ಟುತ್ತಿದ್ದೇನೆ. ನನಗೆ ಈ ನನ್ನ ಅನುಭವವನ್ನು ಓದುಗರೊಂದಿಗೆ ಹಂಚಿಕೊಳ್ಳಲು ಅವಕಾಶ ಕಲ್ಪಿಸಿದ ಅಭಿನಂದನ ಗ್ರಂಥದ ಸಂಪಾದಕರು ಹಾಗೂ ಅಭಿನಂದನ ಸಮಿತಿಯ ಎಲ್ಲ ಪದಾಧಿಕಾರಿಗಳೂ ಹಾಗೂ ಸದಸ್ಯರಿಗೂ ವಂದಿಸಿ ಲೇಖನ ಮುಗಿಸುತ್ತೇನೆ.

*

ರಾಮಣ್ಣ ಎಚ್. ಕೋಡಿಹೊಸಹಳ್ಳಿ ಜೀವನ ವಿವರ

ಅಂಚೆ ವಿಳಾಸ	:	ನಂ. ಎ-೩೩(೨), ಜೀವನಬಿಮಾನಗರ, ಬೆಂಗಳೂರು-೫೬೦ ೦೭೫
ಖಾಯಂ ವಿಳಾಸ	:	ದಿ॥ ಹುಚ್ಚೇಗೌಡರ ಮಗ, ಕೋಡಿಹೊಸಹಳ್ಳಿ, ಸಿಂಗರಾಜಪುರ ಅಂಚೆ, ಚನ್ನಪಟ್ಟಣ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ತಾಯಿ-ತಂದೆ	:	ಲಿಂಗಮ್ಮ-ಹುಚ್ಚೇಗೌಡ
ಹುಟ್ಟಿದ ದಿನ	:	೧೫-೧೧-೧೯೪೬
ಹುಟ್ಟಿದ ಊರು	:	ಕೋಡಿಹೊಸಹಳ್ಳಿ
ಪ್ರಾಥಮಿಕ ಶಿಕ್ಷಣ	:	(೧೯೫೧-೫೫) ಕೋಡಿಹೊಸಹಳ್ಳಿ - ಉಜ್ಜನ ಹಳ್ಳಿ
ಮಾಧ್ಯಮಿಕ ಶಿಕ್ಷಣ	:	(೧೯೫೫-೫೯) ಆರ್ಯ ವಿದ್ಯಾಶಾಲ, ಗಾಂಧಿನಗರ ಮತ್ತು ಶೇಷಾದ್ರಿಪುರ ಬೆಂಗಳೂರು
ಪ್ರೌಢ ಶಿಕ್ಷಣ	:	(೧೯೫೯-೬೧) ಶೇಷಾದ್ರಿಪುರ ಪ್ರೌಢ ಶಾಲೆ
ಕಾಲೇಜು ಶಿಕ್ಷಣ	:	ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜು, ಬೆಂಗಳೂರು
ಶಿಕ್ಷಣ	:	ಬಿ. ಎ. ಮತ್ತು (ಬಿ. ಎಸ್ಸಿ)
ವೃತ್ತಿ	:	ಪತ್ರಕರ್ತ ಮತ್ತು ಕೃಷಿಕ

ವೃತ್ತಿ ಅನುಭವ :

೧೯೬೮ರ ಮೇ ೧೩ರಂದು 'ಉಪ ಸಂಪಾದಕ' ನಾಗಿ 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಗೆ ಸೇರ್ಪಡೆ. ಅದೇ ಪತ್ರಿಕೆಯಲ್ಲಿ ೧೯೮೨ರಲ್ಲಿ "ಮುಖ್ಯ ಉಪ ಸಂಪಾದಕ" ಸ್ಥಾನಕ್ಕೆ ಬಡ್ತಿ. ೧೯೮೪ರ ಸೆಪ್ಟೆಂಬರ್ ತಿಂಗಳಲ್ಲಿ "ಮುಂಗಾರು" ಸೇರುವವರೆಗೆ ಅದೇ ಹುದ್ದೆಯಲ್ಲಿ ಸೇವೆ. "ಮುಂಗಾರು" ಕನ್ನಡ ದಿನ ಪತ್ರಿಕೆಯ ಬೆಂಗಳೂರಿನ ಮುಖ್ಯ ವರದಿಗಾರನಾಗಿ (೧೨ ವರ್ಷ) ಆದು ಮುಚ್ಚುವವರೆಗೆ ಸೇವೆ.

ಕನ್ನಡ ಸಾಹಿತ್ಯ ಪರಿಷತ್ತಿನ ಮುಖವಾಣಿ" ಕನ್ನಡ ನುಡಿ" ಪಾಕ್ಷಿಕದ ಗೌರವ ಸಂಪಾದಕವಾಗಿ ೧೯೭೮ರಿಂದ ೧೯೮೧ ರವರೆಗೆ ಕಾರ್ಯನಿರ್ವಹಣೆ. ಇದೇ ಅವಧಿಯಲ್ಲಿ ಪರಿಷತ್ತು ಪ್ರಕಟಿಸಿದ "ಸಾಹಿತ್ಯ ಮತ್ತು ಪತ್ರಿಕೆ" ಸ್ಮರಣ ಸಂಚಿಕೆ, "ಜಿ. ಪಿ. ರಾಜರತ್ನಂ ಸ್ಮರಣ ಸಂಚಿಕೆ" ಮತ್ತು ರಾಜ್ಯೋತ್ಸವ ವಿಶೇಷ ಸಂಚಿಕೆಗಳ ಸಂಪಾದನೆ.

'ಜನ ಪ್ರಗತಿ' ಸಾಪ್ತಾಹಿಕದಲ್ಲೂ ಕೆಲ ವರ್ಷ ಗೌರವ ಉಪಸಂಪಾದಕನಾಗಿ ಸೇವೆ.

ವೃತ್ತಿ ಸಂಘಟನೆಗಳಲ್ಲಿ :

೧೯೭೪ರಿಂದ ೧೯೭೯ರ ವರೆಗೆ ೫ ವರ್ಷಗಳ ಕಾಲ ಸತತವಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಖಜಾಂಚಿ. ೧೯೯೧ ರಿಂದ ೯೩. ರವರೆಗೆ ಪ್ರಧಾನ ಕಾರ್ಯದರ್ಶಿ.

೧೯೭೭ ರಿಂದ ೮೦ವರೆಗೆ ಭಾರತ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯ. ೧೯೮೯ರಿಂದ ೯೧ ರ ವರೆಗೆ ಒಕ್ಕೂಟದ ಕಾರ್ಯಕಾರಿ ಸಮಿತಿ ಸದಸ್ಯ.

೧೯೯೧ರ ಡಿಸೆಂಬರ್‌ನಲ್ಲಿ ತುಮಕೂರಿನಲ್ಲಿ ನಡೆದ ಭಾರತೀಯ ಕಾರ್ಯನಿರತ, ಪತ್ರಕರ್ತರ ಒಕ್ಕೂಟದ ಮಹಾಧಿವೇಶನದ ಹೊಣೆಗಾರಿಕೆ ನಿರ್ವಹಣೆ. ೧೯೯೩ರ ಫೆಬ್ರವರಿಯಲ್ಲಿ ನಗರದಲ್ಲಿ ಜರುಗಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಜ್ರಮಹೋತ್ಸವ ಹಾಗೂ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ ಹೊಣೆಗಾರಿಕೆ ಮತ್ತು ''ಪತ್ರಕರ್ತ'' ವಿಶೇಷ ಸಂಚಿಕೆಯ ಯಶಸ್ವಿ ನಿರ್ವಹಣೆ.

ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಖಜಾಂಚಿ (೧೯೭೨-೭೩), ಅಧ್ಯಕ್ಷ (೧೯೮೩-೮೪) ಉಪಾಧ್ಯಕ್ಷ (೧೯೮೪-೮೫) ನಿರ್ದೇಶಕ (೧೯೮೫-೮೬). ಆಂತರಿಕ ಲೆಕ್ಕಪರಿಶೋಧಕ (೧೯೯೫-೯೮).

೧೯೮೬-೮೭ರಲ್ಲಿ ಬೆಂಗಳೂರು ಪ್ರೆಸ್ ಕ್ಲಬ್‌ನ ಉಪಾಧ್ಯಕ್ಷ.

೧೯೯೪-೯೫ರಲ್ಲಿ ಬೆಂಗಳೂರು ವರದಿಗಾರರ ಕೂಟದ ಕಾರ್ಯಕಾರಿ ಸಮಿತಿ ಸದಸ್ಯ.

ಪತ್ರಕರ್ತರ ಸಂಘದ ಪ್ರತಿನಿಧಿಯಾಗಿ :

ಕರ್ನಾಟಕ ವೃತ್ತ ಅಂಚೆ ಸಲಹಾ ಸಮಿತಿ ಸದಸ್ಯ (೧೯೭೮-೭೯)
ಕರ್ನಾಟಕ ರಾಜ್ಯ ಪತ್ರಿಕಾ ಮಾನ್ಯತಾ ಸಮಿತಿ ಸದಸ್ಯ (೧೯೮೪-೮೬)
ಕರ್ನಾಟಕ ಪತ್ರಿಕಾ ಅಕಾಡೆಮಿ ಸದಸ್ಯ (೧೯೯೪-೯೮)

ಸಾಹಿತ್ಯಕ ಮತ್ತು ಸಾರ್ವಜನಿಕ ಚಟುವಟಿಕೆ :

ವಿದ್ಯಾರ್ಥಿ ದೆಸೆಯಲ್ಲಿ ಮತ್ತು ಅನಂತರದ ದಿನಗಳಲ್ಲಿ ಕನ್ನಡ ಪರ ಮತ್ತು ಸಾಮಾಜಿಕ ಹಾಗೂ ಮಾನವೀಯ ಹಕ್ಕುಗಳ ಕುರಿತ ಹಲವು ಹೋರಾಟಗಳಲ್ಲಿ ಸಕ್ರಿಯ ಪಾಲು.

೧೯೬೭ರಲ್ಲಿ 'ಹಿಂದೂಸ್ತಾನಿ' ರಾಷ್ಟ್ರೀಯ ಭಾಷೆಯಾಗಬೇಕೆಂದು ಪ್ರತಿಪಾದಿಸುವ 'ಭಾರತಕ್ಕೊಂದು ಭಾಷೆ' ಕಿರು ಪುಸ್ತಕದ ರಚನೆ. ದಕ್ಷಿಣ ಭಾರತೀಯ ಭಾಷಾ ಸಮಾವೇಶ ದಲ್ಲಿ ದಿವಂಗತ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರಿಂದ ಈ ಪುಸ್ತಕದ ಬಿಡುಗಡೆ.

೧೯೬೮ರಲ್ಲಿ ಪ್ರಕಟವಾದ ಕನ್ನಡದ ಮೂವರು ಕಟ್ಟಾಳುಗಳು ಸಂಕಲನದಲ್ಲಿ ಡಾ॥ರಾಜ್‌ಕುಮಾರ್ ಕುರಿತು ಕನ್ನಡಕೊಬ್ಬನೇ ರಾಜಕುಮಾರ ಕಿರು ಹೊತ್ತಿಗೆ ಪ್ರಕಟಣೆ.

೧೯೬೦ರ ದಶಕದಲ್ಲಿ ಬೆಂಗಳೂರು ನಗರದಲ್ಲಿ ಕನ್ನಡ ಹಾಗೂ ಜನಪರ ಚಟುವಟಿಕೆಗಳಿಗೆ ಪ್ರಖ್ಯಾತವಾಗಿದ್ದ ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲದಿಂದ ಈ ಕೃತಿಗಳ ಪ್ರಕಟಣೆ. ಇದೇ ಅವಧಿಯಲ್ಲಿ ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲದ ಪ್ರಧಾನ ಕಾರ್ಯದರ್ಶಿ. ಈ ಸಂಸ್ಥೆ ಸಂಘಟಿಸಿದ್ದ ಕೆ. ಜಿ. ಮಹೇಶ್ವರಪ್ಪನವರ ಅಧ್ಯಕ್ಷತೆಯಲ್ಲಿ ವ್ಯವಸ್ಥೆಗೊಳಿಸಿದ್ದ ''ವಿದ್ಯಾರ್ಥಿಗಳ ಮತ್ತು ಯುವಕರ ರಾಷ್ಟ್ರೀಯ ಸಮಾವೇಶ'' ದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ. ಜೆ. ಎಚ್. ಪಟೇಲ್ ಅವರು ಅಧ್ಯಕ್ಷತೆ ವಹಿಸಿದ್ದ ಈ ಸಮಾವೇಶದಲ್ಲಿ ಸಮಾಜವಾದಿ ನಾಯಕರಾದ ಆಗಿನ ಲೋಕಸಭಾ ಸದಸ್ಯರಾಗಿದ್ದ ರಜಿರಾಯ್ ಮತ್ತು ನಾಥ್ ಪೈ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

೧೯೬೫ರಿಂದ ೧೯೬೮ರ ವರೆಗೆ ಬೆಂಗಳೂರು ಉತ್ತರ ಬಡಾವಣೆ ರಾಜ್ಯೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ, ಇದೇ ಸುಮಾರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಹಂ. ಪ. ನಾಗರಾಜಯ್ಯ ಅವರು ಅಧ್ಯಕ್ಷರಾಗಿದ್ದ ಆಗಿನ ''ರಾಜ್‌ಕುಮಾರ್ ಕಲಾ ವಿಲಾಸೀ ಸಂಘ'' ದ ಪ್ರಧಾನ ಕಾರ್ಯದರ್ಶಿ. ಈ ಅವಧಿಯಲ್ಲಿ ವಿಮೋಚನೆಗೊಂಡ ಗೋವಾ ಕರ್ನಾಟಕಕ್ಕೆ ಸೇರಬೇಕೆಂಬ ಹೋರಾಟದಲ್ಲಿ ಹಾಗೂ ಕನ್ನಡವನ್ನು ಅವಹೇಳನ ಮಾಡಿದ್ದ ರಾಜಾಜಿ ವಿರುದ್ಧ ರಾಜಧಾನಿಯಲ್ಲಿ ನಡೆದ ಪ್ರಬಲ ಚಳವಳಿಯ ನೇತೃತ್ವ, ಕರ್ನಾಟಕ - ಮಹಾರಾಷ್ಟ್ರ ಗಡಿವಿವಾದದ ಇತ್ಯರ್ಥಕ್ಕೆ ಮಹಾಜನ ಆಯೋಗ ನೇಮಕಗೊಂಡಾಗ ಅದಕ್ಕೆ ರಾಜ್ಯದ ಪರವಾಗಿ ಮಾಹಿತಿ ನೀಡಲು ನಡೆದ ''ಸಂಪೂರ್ಣ ಕರ್ನಾಟಕ ಸರ್ವಪಕ್ಷ ಸಮ್ಮೇಳನ''ದಲ್ಲಿ ಸಕ್ರಿಯ ಪಾಲು.

೧೯೭೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವ್ಯವಸ್ಥೆಗೊಳಿಸಿದ್ದ ''ದಲಿತ ಸಾಹಿತ್ಯ ಮತ್ತು ಹೊಸ ಧೋರಣೆಗಳು'' ವಿಚಾರಸಂಕಿರಣದಲ್ಲಿ ದಲಿತ ಹೋರಾಟದಲ್ಲಿ ''ದಲಿತ ಸಾಹಿತ್ಯದ ಪಾತ್ರ'' ಕುರಿತು ಪ್ರಬಂಧ ಮಂಡನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ಜಿಲ್ಲಾ ಘಟಕವು ೧೯೮೧ ರಲ್ಲಿ ಆನೇಕಲ್‌ನಲ್ಲಿ ನಡೆಸಿದ ''ಬೆಂಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನ''ದಲ್ಲಿ ದಲಿತ ಸಾಹಿತ್ಯ ಗೋಷ್ಠಿಯ ಅಧ್ಯಕ್ಷತೆ.

ಪ್ರಸ್ತುತ ಬೆಂಗಳೂರಿನಲ್ಲಿ ಕನ್ನಡ ಪರ ಹಾಗೂ ಜನಪರ ಚಟುವಟಿಕೆಗಳಲ್ಲಿ ಮುಂಚೂಣಿಯ ಸಂಸ್ಥೆಯಾಗಿರುವ ''ಕನ್ನಡ ಸಂಘರ್ಷ ಸಮಿತಿ''ಗೆ ೧೯೮೬ರಿಂದ ಅಧ್ಯಕ್ಷ. ೧೯೮೮ರಿಂದ ಪ್ರತಿ ವರ್ಷ ಸಮಿತಿಯ ವತಿಯಿಂದ ಪ್ರಕಟವಾಗುತ್ತಿರುವ ಮಹಾಕವಿ ಕುವೆಂಪು ಹುಟ್ಟು ಹಬ್ಬದ ನೆನಪಿನ ಸಂಚಿಕೆಗಳ ಸಂಪಾದನೆ. ಇದೇ

ರೀತಿ ಪ್ರತಿ ವರ್ಷ ದಿ॥ ಮಂಜೇಶ್ವರ ಗೋವಿಂದ ಪೈ ಮತ್ತು ಡಾ॥ ಅನುಪಮ ನಿರಂಜನ ಅವರ ಹುಟ್ಟುಹಬ್ಬದ ನೆನಪಿನ ಸಂಚಿಕೆಗಳ ಸಂಪಾದನೆ.

೧೯೮೭ರಲ್ಲಿ ''ಕುವೆಂಪು ಸಾಹಿತ್ಯದಲ್ಲಿ ಕನ್ನಡ ನಾಡು ನುಡಿಗಳ ಪ್ರಜ್ಞೆ'' ಸಂಪಾದನೆ.

೧೯೮೯ರಲ್ಲಿ ''ಕುವೆಂಪು ವಿಚಾರದರ್ಶನ'' ಪ್ರಬಂಧ ಸಂಕಲನದ ಸಂಪಾದನೆ.''

೧೯೯೫ರಲ್ಲಿ ''ಕನ್ನಡದ ಧೀಮಂತ ಹೋರಾಟಗಾರ ರಹಮಾನ್ ಖಾನ್'' ಪುಸ್ತಕದ ಮತ್ತು ''ಕನ್ನಡಜನ ಕನ್ನಡಮನ'' ಕವನ ಸಂಕಲನದ ಸಂಪಾದನೆ.

೧೯೯೬ರಲ್ಲಿ ''ವಿಕಸಿತೆ'' ಮಹಿಳೆಯರು ರಚಿಸಿದ ಕಥಾ ಸಂಕಲನದ ಸಂಪಾದನೆ

೧೯೯೭ರಲ್ಲಿ ''ಎರಡು ಮುಖದ ಹುಡುಗಿ'' ಮಹಿಳೆಯರ ಕಥಾ ಸಂಕಲನದ ಸಂಪಾದನೆ

೧೯೮೨ಮತ್ತು ೮೩ರಲ್ಲಿ ಗೋಕಾಕ್ ಭಾಷಾ ಚಳವಳಿಯಲ್ಲಿ ಸಕ್ರಿಯ ಪಾತ್ರ.

ಲೋಕ ಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳು ಕನ್ನಡದಲ್ಲೇ ನಡೆಯಬೇಕೆಂಬ ಚಳವಳಿಯಲ್ಲಿ, ಗ್ಯಾಟ್ ಡಂಕಲ್ ಒಪ್ಪಂದ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಆಗಮನದ ವಿರುದ್ಧ ಚಳವಳಿಯಲ್ಲಿ, ಕಾವೇರಿ ಪರವಾದ ಚಳವಳಿಯಲ್ಲಿ ಸಕ್ರಿಯ ಪಾತ್ರ.

ನೈಋತ್ಯ ರೈಲ್ವೆ ವಲಯ ಬೆಂಗಳೂರಿನಲ್ಲಾಗಬೇಕೆಂಬ ಚಳವಳಿಯ ನೇತೃತ್ವ

ಬೆಂಗಳೂರು ಕೇಂದ್ರ ಬಸ್ಸು ನಿಲ್ದಾಣ ಸಮುಚ್ಚಯಕ್ಕೆ ನಗರ ನಿರ್ಮಾಣ ಕೆಂಪೇ ಗೌಡರ ಹೆಸರಿಡುವ ಮತ್ತು ಬಳ್ಳಾರಿ ರಸ್ತೆಯಲ್ಲಿನ ಕೆಂಪೇಗೌಡ ಗೋಪುರದ ಸಂರಕ್ಷಣಾ ಹೋರಾಟದಲ್ಲಿ ಸಕ್ರಿಯಪಾಲು.

೧೯೯೩ರಲ್ಲಿ ಜರುಗಿದ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಉಪಾಧ್ಯಕ್ಷ.

೧೯೯೫ರ ಜೂನ್ ತಿಂಗಳಲ್ಲಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಆಯ್ಕೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ೧೬ ವಿಧಾನ ಸಭಾ ಕ್ಷೇತ್ರಗಳಲ್ಲೂ ಘಟಕಗಳ ಸ್ಥಾಪನೆ.

ವಿದ್ಯಾರ್ಥಿ ದಿನಗಳಲ್ಲಿ :

೧೯೬೪ರಿಂದ ೧೯೬೭ರ ವರೆಗೆ ಬೆಂಗಳೂರು ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಸಂಘದ ಆಡಳಿತ ಮಂಡಳಿ ಸದಸ್ಯ ಮತ್ತು ಕಾಲೇಜು ''ಕರ್ನಾಟಕ ಸಂಘ''ದ ಕಾರ್ಯಕಾರಿ ಸಮಿತಿ ಸದಸ್ಯ.

೧೯೬೫-೬೬ರ ಲ್ಲಿ ಆದೇ ಕಾಲೇಜು ವಿದ್ಯಾರ್ಥಿ ಸಂಘದ ಲಲಿತ ಕಲಾಕಾರ್ಯದರ್ಶಿ.

೧೯೬೫-೬೭ರ ವರೆಗೆ ೧೨ನೆಯ ಮೈಸೂರು ಎನ್. ಸಿ. ಸಿ. ಬೆಟಾಲಿಯನ್ "ಸಾರ್ಜೆಂಟ್."

೧೯೫೮-೬೧ರ ವರೆಗೆ ಬೆಂಗಳೂರು ಶೇಷಾದ್ರಿಪುರ ಪ್ರೌಢಶಾಲೆಯ "ಭಾರತ ಸೇವಾ ದಳ" ಶಾಖೆಯ ತಂಡದ ನಾಯಕ.

೧೯೭೦ ರ ಜುಲೈನಲ್ಲಿ ಬೆಂಗಳೂರು ಸರ್ಕಾರಿ ಕಲಾ ಕಾಲೇಜಿನಲ್ಲಿ ಮೊಟ್ಟಮೊದಲ ಬಾರಿಗೆ ಕನ್ನಡ ಮಾಧ್ಯಮ ಪದವಿ ತರಗತಿಗಳು ಆರಂಭವಾಗುವುದಕ್ಕೆ ಮುಖ್ಯ ಕಾರಣಕರ್ತ.

ಶಾಲಾ-ಕಾಲೇಜು ದಿನಗಳಲ್ಲಿ ಅಂತರ ಕಾಲೇಜು ಕಬಡ್ಡಿ ಮತ್ತು ವಾಲಿಬಾಲ್ ಆಟಗಾರ. ಲೇಖನ, ಭಾಷಣ, ಸಂಗೀತ ಹಾಗೂ ನಾಟಕ ಸ್ಪರ್ಧೆಗಳಲ್ಲಿ ಪಾಲು.

ಜಾತ್ಯಾತೀತ ಧೋರಣೆ :

೧೯೬೭ರಲ್ಲಿ ಡಾ॥ ರಾಮ ಮನೋಹರ ಲೋಹಿಯ ಅವರು ಜಾತಿ ಸೂಚಕ ಹೆಸರುಗಳನ್ನು ಬದಲಾಯಿಸಲು ನೀಡಿದ ಕರೆಗನುಗುಣವಾಗಿ ಜಾತಿ ಸೂಚಕ ಹೆಸರು ಬದಲಾವಣೆ. ಅದೇ ರೀತಿ ಜಾತ್ಯಾತೀತ ರಾಷ್ಟ್ರ ನಿರ್ಮಾಣದ ದೆಸೆಯಲ್ಲಿ ಅಂತರ್ ಜಾತಿ ವಿವಾಹದ ಬಗೆಗೆ ಸಂಕಲ್ಪ.

೧೯೭೨ರಲ್ಲಿ ಅದರ ಪರಿಪಾಲನೆ ಪರಿಶಿಷ್ಟ ಪಂಗಡಕ್ಕೆ ಸೇರಿದ ಎಂ. ವಿ. ಗಾಯತ್ರಿಯವರನ್ನು ೨೫-೫-೧೯೭೨ರಲ್ಲಿ ವಿವಾಹ.

ಕಳೆದ ಒಂದು -ಒಂದೂವರೆ ದಶಕದಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಜರುಗಿದ ಸರಳ - ಸಂಪ್ರದಾಯ ವಿರೋಧಿ ಮದುವೆಗಳ ಆಂಧೋಳನದ ಹಿನ್ನೆಲೆಯ ಪ್ರೇರಕ ಶಕ್ತಿ. ೧೯೯೫-೯೭ರಲ್ಲಿ ಡಾ॥ ಹೆಚ್. ನರಸಿಂಹಯ್ಯ ನವರ ನೇತೃತ್ವದಲ್ಲಿ ರಚಿತವಾಗಿದ್ದ ಕನ್ನಡ ಅಭಿರುದ್ಧಿಪ್ರಾಧಿಕಾರದಲ್ಲಿ ಓರ್ವ ಸದಸ್ಯನಾಗಿ ಸೇವೆ.

೧೯೯೭ರಿಂದ ಚಂಪಾ ನೇತೃತ್ವದಲ್ಲಿ ನ ಕ. ಅ. ಪ್ರಾ. ಆಶ್ರಯದ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ.

ಸನ್ಮಾನ ಅಭಿನಂದನ ಸಮಾರಂಭಗಳು :

೧೯೯೩ರಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಜ್ರಮಹೋತ್ಸವದಲ್ಲಿ.

೧೯೯೫ರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ, ರಹಮಾನ್ ಖಾನ್ ಗೆಳೆಯರ ಬಳಗ, ಜೀವನ ಬಿಮಾನಗರ 'ಬಸವ ಮಂಡಳಿ,' ಬಿನ್ನಿ ಪೇಟೆ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಜೀವನಬೀಮಾನಗರದ ಡಾ॥ ರಾಜ್‌ಕುಮಾರ್ ಅಭಿಮಾನಿಗಳ ಸಂಘ.

೧೯೯೬ರಲ್ಲಿ ಟನ್ ಫ್ಯಾಕ್ಟರಿ ಕಾರ್ಮಿಕರ ಸಂಘ. ಕೆಂಪೇಗೌಡ ಕೇಂದ್ರ ಸಮಿತಿ, ಚನ್ನಪಟ್ಟಣ ತಾಲ್ಲೂಕು ರಾಷ್ಟ್ರೀಯ ಹಬ್ಬಗಳ ಸಮಿತಿ, ಅಖಿಲ ಕರ್ನಾಟಕ ರೈಲ್ವೆ ನೌಕರರ ಕನ್ನಡ ಸಂಘ.

೧೯೯೭ರಲ್ಲಿ ಭಾರತಿನಗರ ಕ್ಷೇತ್ರ ಕ.ಸಾ.ಪ. ಮತ್ತು ಕಲ್ಯಾಣನಗರದ ಸ್ನೇಹ ಸೌರಭ ಮಹಿಳಾ ಸಮಾಜ ಆರ್. ಜಿ. ಎ. ಎನ್. ಎಂ. ಎಸ್. ಪದವಿಪೂರ್ವ ಕಾಲೇಜು ವಿದ್ಯಾರ್ಥಿ ಸಂಘ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕನ್ನಡ ಸಮಿತಿ, ಮಾರೇನ ಹಳ್ಳಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಶ್ರೀ ಜಲಕಂಠೇಶ್ವರ ಕ್ಷೇಮಾಭಿವೃದ್ಧಿ ಸಂಘ, ಮಲ್ಲೇಶಪಾಳ್ಯ ಇತ್ಯಾದಿ ಸಂಘಗಳಿಂದ ರಾಜ್ಯೋತ್ಸವ ಮತ್ತಿತರ ಸಂದರ್ಭಗಳಲ್ಲಿ ಪುರಸ್ಕಾರ.

ಕನ್ನಡ ಪತ್ರಿಕಾ ಕಲಾ ಸಂಸ್ಕೃತಿಯ ವೇದಿಕೆ ಯಿಂದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ 'ಪ್ರತಿಭಾಶ್ರೀ-೯೭' ಅಭಿನಂದನಾ ಪ್ರಶಸ್ತಿ.

ರಾಮಣ್ಣ ಕೋಡಿಹೊಸಹಳ್ಳಿ ಅಭಿನಂದನ ಸಮಿತಿ

ಗೌರವಾಧ್ಯಕ್ಷರು
ಡಾ. ಹಂಪ. ನಾಗರಾಜಯ್ಯ

ಅಧ್ಯಕ್ಷರು
ಬಿ. ಕೃಷ್ಣಪ್ಪ

ಉಪಾಧ್ಯಕ್ಷರು
ಪ್ರೊ. ಎಂ.ಎಚ್. ವಿಜಯೇಂದ್ರ
ಬಿ. ಬೋರೇಗೌಡ

ಪ್ರಧಾನ ಸಂಚಾಲಕರು
ಕೋ.ವೆಂ. ರಾಮಕೃಷ್ಣೇಗೌಡ

ಕೋಶಾಧ್ಯಕ್ಷರು
ಎ.ಎಸ್. ನಾಗರಾಜಸ್ವಾಮಿ

ಸಂಚಾಲಕರು
ಸಾಯಿರಾಂ ಪ್ರಸಾದ್
ಶ್ರ. ದೇ. ಪಾರ್ಶ್ವನಾಥ
ಸಮಿಉಲ್ಲಾಖಾನ್
ಕಾ.ವೆಂ. ಶ್ರೀನಿವಾಸಮೂರ್ತಿ
ಎಂ. ಸಾವಿತ್ರಿ ವಿಜಯೇಂದ್ರ
ನರಸಿಂಹಶೆಟ್ಟಿ
ಸುರೇಂದ್ರಸ್ವಾಮಿ ಗೌಡ

ಸದಸ್ಯರು
ಹಂಸಾ ರಾವ್
ರಂಜಿನಿ ಶೆಟ್ಟಿ
ನೇ.ತಿ. ಸೋಮಶೇಖರ್
ವೆ. ಶ್ರೀನಿವಾಸ್
ಪದ್ಮಾ ನಾರಾಯಣ ಕುಮಾರ್
ಎಂ. ಕೆ. ರಮಾದೇವಿ
ಎಸ್. ಮೋಹನ್ ಕುಮಾರ್

ಮಹಾಪೋಷಕರು
ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮಿಗಳು
ಬಿ. ಕೃಷ್ಣಪ್ಪ
ರಾಜಣ್ಣ
ಎಂ.ವಿ. ರಾಮು
ಎಂ. ಚಂದ್ರಶೇಖರ್
ಎಸ್. ವೆಂಕಟಾಚಲ
ಜಿ. ಗೋವಿಂದರಾಜು
ಬಿ.ಆರ್. ನಂಜುಂಡಪ್ಪ
ಸಿ.ಎಚ್. ಹನುಮಂತರಾಯ
ಬಿ. ಮುನಿಯಪ್ಪ
ಬಿ.ಎಸ್. ವಾಸುದೇವ
ಕೆ.ಲಕ್ಕಣ್ಣ

ಪೋಷಕರು
ರತನ್ ಸಿಂಗ್
ಬಿ. ಪದ್ಮಾವತಿ ವಿಠ್ಠಲರಾವ್
ಆಲ್ಲ ಚಿರಂಜೀವಿ
ಸಿ. ಸೋಮಶೇಖರ್

ಹಿತೈಷಿಗಳು
ವಿ. ಶಿವರಾಜ್
ಎಂ. ವೆಂಕಟರಾಮಯ್ಯ
ವೇಮಣ್ಣ
ಎನ್.ಎ. ಚಿದಂಬರ
ಪಿ. ಶಿವಮೂರ್ತಿ
ಮ. ಸುರೇಂದ್ರಸ್ವಾಮಿಗೌಡ
ಟಿ.ಎಸ್. ಪ್ರಭುದೇವ
ಬಿ. ನಾರಾಯಣಮ್ಮ
ಎಸ್.ಎನ್.ಎಸ್. ರವೀಂದ್ರಕಾಂತ್
ಎಚ್.ಎನ್. ಗೋಪಾಲಯ್ಯ



ಕನ್ನಡಪರ ಹೋರಾಟಗಳಲ್ಲಿ ಗೌರವಾನ್ವಿತ ಹೆಸರಾದ ರಾಮಣ್ಣ ಕೋಡಿಹೊಸಹಳ್ಳಿ ಅವರಿಗೆ ಐವತ್ತು ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಹೊರಬರುತ್ತಿರುವ ಈ ಅಭಿನಂದನ ಗ್ರಂಥವು ಕನ್ನಡಪರವಾದ ಚಿಂತನೆಯ ಸ್ವರೂಪ ಮತ್ತು ಅದಕ್ಕೆ ಹಿನ್ನೆಲೆಯಾದ ಸಮಸ್ಯೆಗಳ ಸ್ವರೂಪದ ಅಧ್ಯಯನಕ್ಕೆ ಒಂದು ಆಕರ ಗ್ರಂಥವಾಗಿದೆ. ಈ ತಾತ್ವಿಕತೆಯೊಂದಿಗೆ ತಳುಕು ಹಾಕಿಕೊಂಡ ರಾಮಣ್ಣ ಅವರ ಬದುಕಿನ ಕೆಲವು ಮಗ್ಗಲುಗಳು ಇಲ್ಲಿ ಅಕ್ಷರಾಭಿವ್ಯಕ್ತಿ ಪಡೆದಿವೆ. ಈ ಹಿನ್ನೆಲೆಯಲ್ಲಿ ಮೂಡಿದ 'ಅಭಿರಾಮ' ನನ್ನು ಕನ್ನಡಿಗರು ತುಂಬು ಹೃದಯದಿಂದ ಸ್ವಾಗತಿಸುವರೆಂಬ ಆಶಯ ನಮ್ಮದು.

–ಸಂಪಾದಕರು